ಕರ್ನಾಟಕ ವಿಧಾನಮಂಡಲ

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)

ಜನವರಿ, ಫೆಬ್ರವರಿ ಮತ್ತು ಮಾರ್ಚ್ – 2022

ಸಂಪುಟ–IV ಸಂಖ್ಯೆ –1

ಪ್ರಕಟಣೆ:

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,

ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ,

ಬೆಂಗಳೂರು – 560 233.

ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

ಸೂಚನೆ:– ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – IV ರ ಒಂದನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2022ನೇ ಸಾಲಿನ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

ಎಂ.ಕೆ.ವಿಶಾಲಾಕ್ಷಿ
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 03–06–2022

ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ (ಪ್ರ)
2. ಶ್ರೀಮತಿ ಬಿ.ಎಸ್. ಮಂಜುಳ : ಜಂಟಿ ನಿರ್ದೇಶಕರು
3. ಶ್ರೀಮತಿ ಜಿ. ಮಮತ : ಸಹಾಯಕ ನಿರ್ದೇಶಕರು

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಅಪರ ಕಾರ್ಯದರ್ಶಿ

ಕರ್ನಾಟಕ ಶಾಸಕಾಂಗ ಪತ್ರಿಕೆ

(ತ್ರೈಮಾಸಿಕ ಪತ್ರಿಕೆ)

ಜನವರಿ, ಫೆಬ್ರವರಿ ಮತ್ತು ಮಾರ್ಚ್ – 2022

ಸಂಪುಟ–IV ಸಂಚಿಕೆ – 1

ಪರಿವಿಡಿ

ಭಾಗ–1

ವಿಧಾನ ಮಂಡಲದ ಸುದ್ದಿಗಳು

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
1.	ಪಿಎಸಿ ಅಧ್ಯಕ್ಷರಾಗಿ ಕೃಷ್ಣ ಬೈರೇಗೌಡ	1
2.	ಪಠ್ಯದಲ್ಲಿ ಭಗವದ್ಗೀತೆ ಸೇರಿಸಲು ಇದು ಸಕಾಲ	1
3.	ಮೇಲ್ಮನೆ : 25 ಮಂದಿ ಇಂದು ನಿವೃತ್ತಿ, 20 ಹೊಸಬರ ಪ್ರವೇಶ	2
4.	ಶಿಫಾರಸ್ಸು ಅನುಷ್ಠಾನ, ವಿಳಂಬಕ್ಕೆ ಆಕ್ಷೇಪ	3
5.	ಗಡಿಯಲ್ಲಿ ಶಾಲೆ ನಿಯಮ ಸಡಿಲಿಸಿ	3
6.	ಪರಿಷತ್ ಮೌಲ್ಯ ಕುಸಿಯದಂತೆ ತಡೆಯಬೇಕಿದೆ	4
7.	ಚುನಾವಣಾ ರಾಜಕೀಯಕ್ಕೆ ಪ್ರತಾಪಚಂದ್ರ ಗುಡ್‌ಬೈ	6
8.	20 ಪರಿಷತ್ ಸದಸ್ಯರಿಂದ ಪ್ರಮಾಣ ಸ್ವೀಕಾರ, ಐವರು ಗೈರು	6–8
9.	ಕಂದಾಯ ಕಾಯ್ದೆ ತಿದ್ದುಪಡಿಗೆ ಅಸ್ತು	8
10.	ಸಚಿವಾಲಯಕ್ಕೆ ಆರ್ಥಿಕ ಸ್ವಾಯತ್ತೆ ನೀಡಿ	9–10
11.	ಮೇಲ್ಮನೆಗೆ ಪ್ರಬುದ್ಧರ ನಿರೀಕ್ಷೆ	11
12.	ಮೇಲ್ಮನೆ ಹೊಸ ಸದಸ್ಯರಿಗೆ ಓರಿಯಂಟೇಶನ್ ಕ್ಲಾಸ್ : ಹೊರಟ್ಟಿ	11
13.	ಯಕ್ಷಗಾನ ಮ್ಯೂಸಿಯಂ ಸ್ಥಾಪನೆ ಯತ್ನ	11
14.	ಶಾಲಾ ಕಾಲೇಜುಗಳನ್ನು ಮುಚ್ಚಬೇಡಿ	12
15.	ವಿಧಾನಸೌಧದಲ್ಲಿ ಕಾರ್ಯಾಂಗ ಠಿಕಾಣಿಗೆ ಹೊರಟ್ಟಿ ಆಕ್ಷೇಪ	13
16.	ಅನಿಲ್‌ಕುಮಾರ್ ಪ್ರಮಾಣ ವಚನ	13
17.	ಕ್ಲಬ್‌ಗಳ ಪರಿಶೀಲನೆಗೆ ಹೊರಟ ಸದನ ಸಮಿತಿ	14

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
18.	ಕ್ರಿಕೆಟ್ ಆಡಿದ ಸ್ಪೀಕರ್ ಕಾಗೇರಿ	14
19.	ಅನುಷ್ಠಾನಕ್ಕೆ ಬಾರದ ಸಮಿತಿ ವರದಿಗಳು	14
20.	ಅಡಕೆ ಕೊನೆ ಹಗ್ಗ ಹಿಡಿದ ಕಾಗೇರಿ	15
21.	ಹರಿಪ್ರಸಾದ್‌ಗೆ ಒಲಿದ ಪರಿಷತ್ ಪ್ರತಿಪಕ್ಷ ನಾಯಕ ಸ್ಥಾನ	15
22.	House Panel begins inspection on elite clubs	16
23.	ಕೆಪಿಎಸ್‌ಸಿ ಕೇಸು ಸದನಕ್ಕೆ ರವಾನೆ	17–18
24.	ಸೂರಜ್ ರೇವಣ್ಣ ಪ್ರಮಾಣ ಸ್ವೀಕಾರ	18
25.	ಚುನಾವಣಾ ಪ್ರಕ್ರಿಯೆ ದೋಷದಿಂದ ಅರಾಜಕತೆ	19
26.	ಗಾಂಧೀಜಿ ಆದರ್ಶ ದೇಶದ ಆಧಾರಸ್ಥಂಭ	20–21
27.	ವಿಧಾನಸಭೆ : ಯು.ಟಿ.ಖಾದರ್ ವಿರೋಧ ಪಕ್ಷದ ಉಪ ನಾಯಕ	22
28.	ಅಧಿವೇಶನಕ್ಕೆ ಅಧಿಸೂಚನೆ	22
29.	ಪರಿಷತ್ ಸದಸ್ಯರಿಗೆ ಶಾಸನಸಭೆಯ ಪಾಠ	22
30.	ಇ–ಸ್ವತ್ತು ಸಮಸ್ಯೆ ಪರಿಹಾರಕ್ಕೆ ಸೂಚನೆ	23
31.	ರಾಜಕಾರಣ ಬಿಟ್ಟು ಸದನದಲ್ಲಿ ಪಾಲ್ಗೊಳ್ಳಬೇಕು	23–26
32.	ಪರಿಷತ್ತಿನ ನೂತನ ಸದಸ್ಯರಿಗೆ ಶಿಬಿರ : ಹೊರಟ್ಟಿಗೆ ಅಭಿನಂದನೆ	27
33.	ಶೈಕ್ಷಣಿಕ ಸಮಸ್ಯೆ – ಬಜೆಟ್ನಲ್ಲಿ ಪರಿಹಾರ ಸೂಚಿಸಲು ಆಗ್ರಹ	27
34.	ಪರಿಣಿತರೊಂದಿಗೆ ಚರ್ಚಿಸಿ ಮನವೊಲಿಸಿ ರಾಜಕೀಯ ಬಿಟ್ಟು ಸಮಸ್ಯೆ ಬಗೆಹರಿಸಿ	27
35.	ನೈತಿಕತೆ ರಾಜಕೀಯಕ್ಕಷ್ಟೇ ಸೀಮಿತವಲ್ಲ : ಕಾಗೇರಿ	28–29
36.	ಜಂಟಿ ಸೆಷನ್ ಚುನಾವಣೆ ಚರ್ಚೆ	30
37.	ಚಿಂತಕರ ಚಾವಡಿಗೆ ಅನುಭವ ಮಂಟಪದ ರೂಪ	30
38.	ಮೇಲ್ಮನೆಯಲ್ಲಿ ಜೆಡಿಎಸ್ ಮುಖಂಡ ಮುಖ್ಯ ಸಚೇತಕರಾಗಿ ಗೋವಿಂದರಾಜು	31
39.	ಕೋಟ ಶ್ರೀನಿವಾಸ ಪೂಜಾರಿ ಸಭಾನಾಯಕ	32
40.	ಚುನಾವಣಾ ಸುಧಾರಣೆ ಕುರಿತು ಅಧಿವೇಶನದಲ್ಲಿ ಚರ್ಚೆ	32
41.	ವಿಧಾನಮಂಡಲ ಅಧಿವೇಶನಕ್ಕೆ ಸಜ್ಜು	33–36
42.	60 ದಿನ ಕಲಾಪ ನಡೆಸಲು ಸರ್ಕಾರಕ್ಕೆ ಹೊರಟ್ಟಿ ಸೂಚನೆ	36

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
43.	ನಾಳೆಯಿಂದ 10 ದಿನ ವಿಧಾನಮಂಡಲ ಕಲಾಪ	36–37
44.	ಆರ್ಥಿಕ ಸಂಪನ್ಮೂಲ ಹೆಚ್ಚಿಸಲು ಗಮನ	38
45.	ಅಧಿವೇಶನದ ಸತ್ಯ – ಮಹತ್ವ	38
46.	ಬಿಪಿಎಲ್ ಕುಟುಂಬಕ್ಕೆ ಸಿಗಲಿದೆ ಹೆಚ್ಚುವರಿ ಅಕ್ಕಿ	39
47.	20 ವರ್ಷದ ಬಳಿಕ ಮೆಟ್ಟಿಲು ಬಳಸಿ ವಿಧಾನಸೌಧಕ್ಕೆ ಬಂದ ರಾಜ್ಯಪಾಲ	40–41
48.	ರೈತರಿಂದ ವಿಧಾನಸೌಧ ಮುತ್ತಿಗೆ ಯತ್ನ	42
49.	ಅಧಿವೇಶನದಲ್ಲೂ ಕೇಸರಿ, ಶಾಲು, ಹಿಜಾಬ್ ಪ್ರತ್ಯಕ್ಷ	43
50.	ಸದನದಲ್ಲಿ ಅಹೋ ರಾತ್ರಿ ಧರಣಿಗೆ ಕಾಂಗ್ರೆಸ್ ನಾಯಕರ ನಿರ್ಧಾರ	43
51.	ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್ ಇಲ್ಲ	44
52.	ಪೀಣ್ಯ ಫ್ಲೈಓವರ್ ಸಂಚಾರಕ್ಕೆ ಸುರಕ್ಷಿತವಲ್ಲ: ಬೊಮ್ಮಾಯಿ	45
53.	ಸದನದಲ್ಲಿ ಮುಂದುವರಿದ ಹಿಜಾಬ್ ಪ್ರತಿಧ್ವನಿ	46
54.	ಸದನದಲ್ಲಿ ಕದನ	46
55.	ಸದನದಲ್ಲಿ ಧ್ವಜ ಕದನ ಏನಿದು ವಿವಾದ	47
56.	ದಿನದ ಕಲಾಪ ನುಂಗಿದ ರಾಷ್ಟ್ರಧ್ವಜ ವಿವಾದ	48
57.	ಸದನದ ಗೌರವ ಎತ್ತಿ ಹಿಡಿಯುವುದು ಎಲ್ಲ ಸದಸ್ಯರ ಕರ್ತವ್ಯ	49
58.	ಸಂಧಾನಕ್ಕೆ ಜಗ್ಗದ ಕಾಂಗ್ರೆಸ್ ನಾಯಕರು	50
59.	ಅರಣ್ಯ ಭೂಮಿ ಹಕ್ಕು ಹೊರಾಟಕ್ಕೆ 30 ವರ್ಷ	51–53
60.	ಪ್ರತಿಭಟನೆ ನಿರತ ಶಾಸಕರ ಸಸ್ಪೆಂಡ್ ಸವಾಲು	53
61.	ಸಚಿವರು ಸದನಕ್ಕೆ ಬರದಿರಬಾರದು	54
62.	ರಾಜಕೀಯ ಶಿವರಾತ್ರಿ ಜಾಗರಣೆ ಧರಣಿ	54
63.	ನಿಮ್ಮ ಪ್ರತಿಭಟನೆ ಸದನದ ಹೊರಗಿರಲಿ	55
64.	3ನೇ ದಿನವೂ ಧ್ವಜ ಗದ್ದಲ, ಕಲಾಪ ಬಲಿ	56
65.	ಕಲಾಪ ವ್ಯರ್ಥ: ಕಾಗೇರಿ ಬೇಸರ	56
66.	ಹರ್ಷ ಕೊಲೆ: ಮೇಲ್ಮನೆಯಲ್ಲಿ ಕೋಲಾಹಲ	57
67.	ವಂದನಾ ನಿರ್ಣಯ ಅಂಗೀಕರಿಸಿ ಮುಕ್ತಾಯ	58

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
68.	ಒಂದು ರಾಷ್ಟ್ರ–ಒಂದು ಚುನಾವಣೆ ಬೇಕು	58–60
69.	ಎರಡೂ ಸದನ 7ನೇ ದಿನಕ್ಕೆ ಬರ್ಖಾಸ್ತು	61
70.	ವಿವಾದಗಳಿಂದ ನಾಯಕತ್ವ ವೃದ್ಧಿ ಸರಿಯಲ್ಲ	62–63
71.	19 ದಿನಗಳ ಕಾಲ ಅಧಿವೇಶನ	63
72.	ಇಂದಿನಿಂದ ಬಜೆಟ್ ಮೇಲಿನ ಚರ್ಚೆ ಆರಂಭ	63–64
73.	ಡ್ರಗ್ಸ್ ಹಾವಳಿ: ಸದನದಲ್ಲಿ ಗಂಭೀರ ಚರ್ಚೆ	65
74.	ಎತ್ತಿನಹೊಳೆ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಬದ್ಧ	66
75.	ವಿಧಾನ ಮಂಡಲ ಅಧಿವೇಶನ ಇಂದು ಪುನಾರಂಭ	67
76.	ಮನಮಿಡಿದು ಮನಿ.....	68
77.	ಬೊಮ್ಮಾಯಿ ತೃಪ್ತಿಕರ ಆಯ–ವ್ಯಯ	69
78.	ಮೌಲ್ಯಗಳ ಕುಸಿತಕ್ಕೆ ರಾಜಕಾರಣಿಗಳಷ್ಟೇ ಕಾರಣರಲ್ಲ: ಕಾಗೇರಿ	71
79.	ಕೃಷಿಗೆ ಅರಣ್ಯ ಭೂಮಿ : ಸಕ್ರಮ	72
80.	ಮುಂದಿನ ವಾರ ಮೇಕೆದಾಟು ಸಭೆ	73
81.	ಸಿಎಂ, ಸಿಎಸ್ ಜೊತೆ ಚರ್ಚಿಸಿ ತೀರ್ಮಾನ	74
82.	ಅರ್ಜಿಗಳ ಸಮಿತಿಯಿಂದ ಸಮಸ್ಯೆಗಳ ಇತ್ಯರ್ಥ	75
83.	ಸದನದಲ್ಲಿ ಕೋಲಾಹಲ ಸೃಷ್ಟಿಸಿದ ಬಿ ಟೀಂ ಪ್ರಸ್ತಾಪ	76
84.	ಗುತ್ತಿಗೆದಾರರ ಜೇಬು ತುಂಬಿಸುತ್ತಿದೆಯೇ ಎತ್ತಿನಹೊಳೆ	77
85.	ಪ್ರತಿಪಕ್ಷ ನಾಯಕರ ಮಧ್ಯೆಯೇ ವಾಕ್ಸಮರ	78
86.	ಎಸಿಬಿ ಪ್ರಕರಣಗಳಲ್ಲಿ ವಿಚಾರಣೆಗೆ ಅನುಮತಿ	79
87.	ಇಡೀ ರಾಜ್ಯಕ್ಕೆ ಗ್ರಾಮ ಒನ್	80
88.	ಏಕಾಂತಯ್ಯಗೆ ಶಾಂತವೇರಿ ಪ್ರಶಸ್ತಿ	81
89.	ಜಾತಿಸೂಚಕ ಗ್ರಾಮಗಳ ಹೆಸರು ಬದಲು	81
90.	ಗೋಪಾಲಗೌಡರ ಹೆಸರಿನಲ್ಲಿ ಕೃಷಿ, ಸಂಸದೀಯಪಟು ಪ್ರಶಸ್ತಿ	82–83
91.	ಆನ್‌ಲೈನ್ ಗೇಮ್ ಸರ್ಕಾರ ಅಸಹಾಯಕ	84
92.	ಕಾಗದಪತ್ರ ಸಮಿತಿ ವರದಿಯಲ್ಲಿ ಸಿಂಧೂರಿ ಈಜುಕೊಳ ಪ್ರಸ್ತಾಪ	84

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
93.	ಹಣಕಾಸು ಇಲಾಖೆಗೆ ಸರ್ಜರಿ ಮಾಡಿ	85–87
94.	ಕೃಷ್ಣ ಯೋಜನೆಗೆ ಕೊಡುಗೆ ಯಾರದ್ದು	87
95.	ನೇರ ನುಡಿಯ ಕೆ. ಎಚ್. ಪಾಟೀಲ್	87–88
96.	ಕೋಮುವಾದದ ವಿಷವನ್ನು ಕುಡಿದವರು ಬದುಕುತ್ತಾರೆಯೇ	89
97.	ಸ್ವತಂತ್ರ ತನಿಖೆಗಿಲ್ಲ ಒಂಬುಡ್ಸ್‌ಮನ್	89–91
98.	ರಾಜ್ಯಕ್ಕೆ ರೂ.12,909 ಕೋಟಿ ಜಿಎಸ್‌ಟಿ ಬಾಕಿ:ಸಿಎಂ	91
99.	ಏಪ್ರಿಲ್ ಅಂತ್ಯದೊಳಗೇ ಬಜೆಟ್ ಜಾರಿ: ಸಿಎಂ	92
100.	ಸರ್ಕಾರಿ ಆಸ್ತಿಗಳ ಮಾರಾಟ ಇಲ್ಲ	93–95
101.	ಹಿಜಾಬ್ ವಿವಾದ:ಮೇಲ್ಮನೆಯಲ್ಲಿ ಗಲಾಟೆ	95
102.	ರಾಜ್ಯದ ಆರ್ಥಿಕ ಸಂಕಷ್ಟ ಬಿಡಿಸಿದ ಕೃಷ್ಣ	96–98
103.	ಬಹಿಷ್ಕರಿಸಿದವರಿಗೆ ಮತ್ತೆ ಪರೀಕ್ಷೆ ಸಾಧ್ಯವೇ ಇಲ್ಲ	98
104.	ಹಣಕಾಸು ಸಂಸ್ಥೆಗಳು ವಿಶ್ವಾಸಾರ್ಹತೆ ಗಳಿಸಿಕೊಳ್ಳುವುದು ಮುಖ್ಯ	99
105.	ಭಗವದ್ಗೀತೆ ಪಠ್ಯ ಪರಿಶೀಲನೆಗೆ ಸಮಿತಿ	100
106.	ವಜಾಗೊಂಡವರು ಪಂಚಾಯಿತಿಗೆ ಅನರ್ಹ	101
107.	ಸಿಡಿದೆದ್ದ ಸದನ	102
108.	ಭಾವನಾತ್ಮಕ ವಿಚಾರಕ್ಕೆ ಯುವಜನರು ಬಲಿಪಶು	103
109.	ನಮ್ಮ ಸಂವಿಧಾನ ನಮ್ಮ ಹೆಮ್ಮೆ ಪುಸ್ತಕ ಬಿಡುಗಡೆ	104–105
110.	ರಸ್ತೆ ಪ್ರಕರಣದಲ್ಲಿ ಸಾವಾದಾಗ ಪರಿಹಾರಕ್ಕೆ ಸೂಕ್ತ ನೀತಿಗೆ ಸ್ಪೀಕರ್ ಸೂಚನೆ	105
111.	ಶೇ. 40 ಲಂಚ: ನಿಲುವಳಿ ಸೂಚನೆಗೆ ಸ್ಪೀಕರ್ ನಕಾರ	106
112.	ಶಿಷ್ಟಾಚಾರ ಸಾಲಿಗೆ ಇನ್ನಷ್ಟು ಗಣ್ಯರು	107
113.	ಇನ್ನಷ್ಟು ಕಡೆ ಮುಸ್ಲಿಂರ ಜಾತ್ರೆ ವ್ಯಾಪಾರ ನಿಷೇಧ	108–109
114.	Ban on Muslim vendors echoes in Council	110
115.	ತಮಿಳ್ನಾಡಿಗೆ ಚಾಟಿ	110
116.	ಮೃತಪಟ್ಟವರ 'ಪರಿಹಾರ' ಸೃಷ್ಟಿಸಿದ ಕೋಲಾಹಲ	111–114
117.	Assembly adopts resolution for fast clearance to Mekedatu	114

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
118.	ಹಿಂದುಳಿದವರ ಶ್ರೇಯೋಭಿವೃದ್ಧಿಗೆ ಬದ್ಧ	115–116
119.	ಭೂ ಒಡೆತನ ಮಾರ್ಗಸೂಚಿ ಬದಲಾವಣೆ	117
120.	ಮೇಕೆದಾಟು : ಪರಿಷತ್ನಲ್ಲೂ ಖಂಡನಾ ನಿರ್ಣಯ ಅಂಗೀಕಾರ	118
121.	ಗರ್ಭಿಣಿಯರ ಮನೆಗೆ ಊಟ ಕೊಡಿ : ಸ್ಪೀಕರ್	118
122.	ಚುನಾವಣೆ ಸುಧಾರಣೆಗೆ ಕರ್ನಾಟಕ ಮೊದಲ ಹೆಜ್ಜೆ	119–132
123.	Speaker pushes debate on electoral reforms	132
124.	Legislature on track to meet 60-day target	133
125.	ಅಸ್ಪೃಶ್ಯತೆ ತಡೆಗೆ ವಿನಯ ಸಾಮರಸ್ಯ ಯೋಜನೆಯ ಅಸ್ತ್ರ	134
126.	ಪ್ರಬಲರ ಕಪಿಮುಷ್ಟಿಯಲ್ಲಿ ಭಾರತದ ಜನತಂತ್ರ	136
127.	19 ಲಕ್ಷ ಇವಿಎಂ ನಾಪತ್ತೆ	137
128.	ಜನನಾಯಕರ ಆತ್ಮಾವಲೋಕನ	138
129.	ಚುನಾವಣೆ ವ್ಯವಸ್ಥೆ ಸುಧಾರಣೆ	139
130.	ಬೊಮ್ಮಾಯಿ ಚೊಚ್ಚಲ ಬಜೆಟ್‌ಗೆ ವಿಧಾನ ಮಂಡಲದ ಅಂಗೀಕಾರ	140
131.	ಕೆಳಮನೆ ಸ್ಪೀಕರ್ ಭಾಷಣಕ್ಕೆ ಮೇಲ್ಮನೆಯಲ್ಲಿ ಆಕ್ಷೇಪ	141
132.	ಈ ಬಾರಿ ಧರಣಿ, ಗದ್ದಲವಿಲ್ಲದೆ ವಿಧಾನಮಂಡಲ ಕಲಾಪ ಅಂತ್ಯ	141
133.	ಹಲವು ವೈಶಿಷ್ಟ್ಯಕ್ಕೆ ಅಧಿವೇಶನ ಸಾಕ್ಷಿ	141
134.	ಆರೋಗ್ಯಕರ ಚುನಾವಣಾ ವ್ಯವಸ್ಥೆಗೆ ಸದನ ಪ್ರತಿಜ್ಞೆ	142
135.	ರಾಜಕೀಯ ಆತ್ಮಾವಲೋಕನ ಅನಿವಾರ್ಯ	143
136.	ಒಂದು ದೇಶ, ಒಂದು ಚುನಾವಣೆ ಅಸಾಧ್ಯ	144
137.	ಎಸ್ಟಿ ಮೀಸಲಿಗೆ ಶೀಘ್ರ ಪರಿಹಾರ	145–146
138.	ಚುನಾವಣಾ ವ್ಯವಸ್ಥೆ ಸುಧಾರಣೆ ಆಗದಿದ್ದರೆ ಪ್ರಜಾತಂತ್ರ ದುರ್ಬಲ	147
139.	ಚುನಾವಣಾ ಅಕ್ರಮಕ್ಕೆ ಜನರೂ ಕಾರಣ	147
140.	ಚುನಾವಣೆ ಸುಧಾರಣೆ : ಮೌಲಿಕ ಚರ್ಚೆ	148
141.	ಸದನದಲ್ಲೂ ಹಲಾಲ್ ಮಾಂಸ ವಿವಾದದ ಗದ್ದಲ	150
142.	Expensive polls keep women away from politics: MLA	151
143.	ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಏರ್ಪಡಿಸಿದ ತರಬೇತಿ ಶಿಬಿರದಲ್ಲಿ "ಸಂವಿಧಾನ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ" ವಿಷಯ ಕುರಿತು ಮಾನ್ಯ ಸಭಾಧ್ಯಕ್ಷರು ನೀಡಿದ ಉಪನ್ಯಾಸದ ಬಗ್ಗೆ	152–162

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
144.	ವಿಧಾನ ಸಭೆಯ 12ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ	163–165
145.	15ನೇ ವಿಧಾನಸಭೆಯ ವಿಧೇಯಕಗಳ ಪಟ್ಟಿ	166–168
146.	ವಿಧಾನಪರಿಷತ್ತಿನ 146ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ	169–171
147.	15ನೇ ವಿಧಾನ ಪರಿಷತ್ತಿನ ವಿಧೇಯಕಗಳ ಪಟ್ಟಿ	172–173
	ಭಾಗ – 2 **ಸಂಸತ್ ಸುದ್ದಿಗಳು**	
1.	House Panel on marriage age has only one woman MP	199
2.	DCW chief writes to Naidu to reconstitute marriage bill panel	200
3.	ಸಂಸತ್ತಿನ 400 ಸಿಬ್ಬಂದಿಗೆ ಕೋವಿಡ್	200
4.	Parl panel invites feedback on bio diversity bill	202
5.	ಸಂಸತ್ತಿನ ಬಜೆಟ್ ಅಧಿವೇಶನಕ್ಕೆ ಈ ಬಾರಿ ಪಾಳಿ ಪದ್ಧತಿ	202
6.	House panel to take up plea to disqualify 2 MPs	203
7.	ಇಂದಿನಿಂದ ಸಂಸತ್ ಬಜೆಟ್ ಅಧಿವೇಶನ	204
8.	ಸಂಘಟಿತ ಯತ್ನದಿಂದ ದೇಶದ ಅಭಿವೃದ್ಧಿ	204
9.	Government rules our discussion on Pegasus in Parl	205
10.	ಕೃಷಿಗೆ ತಂತ್ರಜ್ಞಾನ, ನವೋದ್ಯಮಗಳ ಬಲ	207
11.	ರಾಹುಲ್‌ಗೆ ಹಕ್ಕುಚ್ಯುತಿ ಬಿಸಿ	209
12.	Remove penal clauses from population control Bill:BJP MP	210
13.	Parliament pays rich tributes to Nightingale of India	211
14.	‘Modi diverting attention’: Cong MPs walk out of RS	212
15.	25 ಸಾವಿರ ಜನರ ಆತ್ಮಹತ್ಯೆ	213
16.	Anti-lynching Bills passed by four States hanging fire	214–215
17.	Most state assemblies sit for less than 30 days a year	216
18.	Lok Sabha Panel notice to media houses	217
19.	ರಾಜ್ಯಸಭೆಗೆ ಹೆಚ್ಚುವರಿ 19 ಗಂಟೆ	217

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
20.	ರಾಜ್ಯಸಭೆಯಲ್ಲಿ ಮೇಕೆದಾಟು ಪ್ರಸ್ತಾಪಿಸಿದ ಜಿಸಿಹೆಚ್	218
21.	Farmers' Debt rose 53% in 6 years, Centre tells RS	218
22.	CPI, CPM share Rajya Sabha seats	219
23.	Set up national task force to examine issues in prisons: Parliament panel	220
24.	ST panel in stasis, says report	221
25.	Indianise education:Venkaiah	221
26.	ಸಂಸದ ಸ್ಥಾನ ತ್ಯಜಿಸಿದ ಅಖಿಲೇಶ್ ಯಾದವ್	222
27.	60 ಕಿಮೀ. ಅಂತರಕ್ಕೆ ಒಂದೇ ಟೋಲ್	223
28.	ಐಪಿಸಿ, ಸಿಆರ್‌ಪಿಸಿ ತಿದ್ದುಪಡಿ	224
29.	Union or Centre: Parl panel prefers "Union of India"	225
30.	ರಾಜ್ಯ ಸಭೆ: ಎಎಪಿ ಅಭ್ಯರ್ಥಿಗಳು ಅವಿರೋಧ ಆಯ್ಕೆ	226
31.	Protest in Lok Sabha as Bill envisages lifting biometrics of detainees	226–228
32.	ಆನ್‌ಲೈನ್ ಮತದಾನಕ್ಕೆ ಚಿಂತನೆ	228
33.	Finance Bill passed in Lok Sabha, new tax on crypto	230
34.	Rajya Sabha on the boil over fuel price hike	231
35.	Dehli civic bodies' merger bill in Lok Sabha today	231
	ಭಾಗ – 3 **ಕೇಂದ್ರ ಸರ್ಕಾರದ ಸುದ್ದಿಗಳು**	
1.	5 ಎಕರೆ ಜಮೀನಿದ್ದರೆ ಇಡಬ್ಲ್ಯುಎಸ್ ಮೀಸಲಾತಿ ಇಲ್ಲ: ಕೇಂದ್ರ ಸರ್ಕಾರ	233
2.	ಸುಪ್ರೀಂ ಮೇಟ್ಟಿಲೇರಿದ ಪ್ರಧಾನಿ ಭದ್ರತಾ ಲೋಪ	234
3.	ಸೆಂಟ್ರಲ್ ವಿಸ್ತಾ ಕಟ್ಟಡವೊಂದಕ್ಕೆ ಅನುಭವ ಮಂಟಪ ಹೆಸರು	235
4.	No PM photo in vaccination certificates in poll-bound States	236
5.	ಪ್ರತಿ ಡಿಸೆಂಬರ್ 26 ಇನ್ನು ವೀರ ಬಾಲ ದಿವಸ	236
6.	ಜನವರಿ 31 ರಿಂದ ಅಧಿವೇಶನ: ಫೆ.1ರಂದು ಕೇಂದ್ರ ಬಜೆಟ್	237

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
7.	ಜನವರಿ 23 ರಿಂದಲೇ ಗಣರಾಜ್ಯೋತ್ಸವ	237
8.	ಇಂಡಿಯಾ ಗೇಟ್ ಬಳಿ, ನೇತಾಜಿ ಪ್ರತಿಮೆ	237
9.	ಕೋವಿಡ್ ಯೋಧರು, ಕೇಂದ್ರ, ಸೈನಿಕರ ಸೇವೆಗೆ ರಾಷ್ಟ್ರಪತಿ ಸಲಾಂ	238
10.	ಒಂದು ದೇಶ, ಒಂದು ಎಲೆಕ್ಷನ್ ಪರ ಮತ್ತೆ ಮೋದಿ ಪ್ರತಿಪಾದನೆ	238
11.	ನರೇಗಾ ಅನುದಾನ ಕಡಿತ ಇಲ್ಲ ಎಂದ ಕೇಂದ್ರ	239
12.	ಆಪರೇಷನ್ ಗಂಗಾ ಶುರು	240
13.	ಆಪರೇಷನ್ ಗಂಗಾ ಹೈಸ್ಪೀಡ್ : ರಕ್ಷಣೆಗೆ ರಷ್ಯಾ ನೆರವು	241
14.	ನಾಳೆಯಿಂದ 12–14 ವರ್ಷದವರಿಗೆ ಲಸಿಕೆ	242
15.	President confers Padma Shri award on 3 personalities from Karnataka	242
	ಭಾಗ – 4 **ರಾಜ್ಯ ಸರ್ಕಾರದ ಸುದ್ದಿಗಳು**	
1.	ಗೋಮಾಳ ಸಕ್ರಮಕ್ಕೆ ಕಾನೂನು ತಿದ್ದುಪಡಿ	244
2.	ಗ್ರಾಮಗಳಿಗೆ ಹೋಗಿ ಕೆಲಸ ಮಾಡಿ : ಮುಖ್ಯಮಂತ್ರಿ	245–247
3.	ರಾಜ್ಯದಲ್ಲಿ ಹೆಚ್ಚಿದ ಆತಂಕ –ಕಟ್ಟೆಚ್ಚರ	247
4.	ನಗರದ ಎಲ್ಲಾ ಕಾಮಗಾರಿಗಳಿಗೆ ಡೆಡ್‌ಲೈನ್	248
5.	ಹಲವು ಇಲಾಖೆಗಳ ಸಮನ್ವಯಕ್ಕೆ ಸಮಿತಿ ರಚನೆ	249
6.	ಮೇಕೆದಾಟು : ಲೋಪವಿದ್ದರೆ ದಾಖಲೆ ನೀಡಿ	250
7.	ಉದ್ಯಮಗಳು ಮುಚ್ಚಿದ್ದರೂ ಸಂಬಳ ಪಾವತಿ ನಿರಂತರ	251
8.	ಮತ್ತೆ 50 : 50 ರೂಲ್ಸ್	251–253
9.	ಯಾತ್ರೆ ಸಂಘರ್ಷ ಸ್ವರೂಪ	253
10.	ರಾಜಕಾರಣಕ್ಕಿಳಿದ ಮೇಲೆ ಅರ್ಹತೆ ಗಿಟ್ಟಿಸುವ ಗುಣ ಬೆಳೆಸಿಕೊಳ್ಳಿ : ಸಿಎಂ	254
11.	ಬೆಂಗಳೂರಿಗೆ ಸರ್ಕಾರದ ಮಹಾ ಭರವಸೆ	255–257
12.	1924ರಲ್ಲೇ ಒಪ್ಪಿಗೆ ನೀಡಿದ್ದ ತಮಿಳುನಾಡು	257
13.	ಮೇಕೆದಾಟು ಪಾದಯಾತ್ರೆ : ಭರ್ಜರಿ ಶುರು	258

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
14.	ಮೊದಲ ದಿನ ಕಾಂಗ್ರೆಸ್ ಉತ್ಸಾಹದ ಹೆಜ್ಜೆ	259
15.	ಜನಸ್ನೇಹಿ ಆಡಳಿತ : ಇಲಾಖೆಗಳಿಗೆ ಶ್ರೇಯಾಂಕ	260
16.	ತಿಂಗಳು ಪೂರ್ತಿ ನಿರ್ಬಂಧ	261–262
17.	ಒಂದು ಕೇಸ್‌ಗೂ ಶಾಲೆ ಮುಚ್ಚಿಬಿಡಿ	263
18.	ಪಾದಯಾತ್ರೆಗೆ ತಡೆ	263
19.	ನಬಾರ್ಡ್‌ನಿಂದ ರೂ.3.32 ಲಕ್ಷ ಕೋಟಿ ಸಾಲದ ಗುರಿ	264
20.	ಎರಡೂವರೆ ದಿನಕ್ಕೆ ಕೊರೋನಾ ಪ್ರಕರಣ ದುಪ್ಪಟ್ಟು	265
21.	ಸಂಘರ್ಷದ ಆತಂಕ : ಪೋಲೀಸ್ ಬಂದೋಬಸ್ತ್	266
22.	ಲಾಕ್ ಡೌನ್ ಬೇಡ	267
23.	ನಿವೇಶನ ರಹಿತರ ಸಮೀಕ್ಷೆಗೆ ಒಪ್ಪಿಗೆ	268
24.	ಸಂಪನ್ಮೂಲ ಸಮಾಧಾನ	269
25.	ಆರ್ಥಿಕತೆಗೆ ಗುರುತರ ಕೊಡುಗೆ: ಬೊಮ್ಮಾಯಿ ಆಶಯ	270
26.	ರುಬೆಲ್ಲಾ ಅಡ್ಡ ಪರಿಣಾಮ ಶಂಕೆ, 3 ಕಂದಮ್ಮಗಳ ನಿಗೂಢ ಸಾವು	271
27.	ಆಸ್ತಿ ತೆರಿಗೆ ಸಂಗ್ರಹ ಸೋರಿಕೆ	272
28.	ಗತಿಶಕ್ತಿ ಕಾರ್ಯಕ್ರಮದಿಂದ ಅಭಿವೃದ್ಧಿಯ ನೂತನ ಪರ್ವ	273
29.	ಶಾಲೆ ಕಾಲೇಜುಗಳಲ್ಲಿ ಬೋಸ್ ಜಯಂತಿ	274
30.	ಜಲ ಯೋಜನೆಗೆ ಸಿಎಂ ಚುರುಕು	275
31.	ಕಟ್ಟಡ ಕಾರ್ಮಿಕರ ಮಕ್ಕಳಿಗೆ ಆನ್‌ಲೈನ್‌ನಲ್ಲಿ ಸ್ಕಾಲರ್ ಶಿಪ್	275
32.	ಜಲಯೋಜನೆ : ಫೆಬ್ರವರಿಯಲ್ಲಿ ಸರ್ವಪಕ್ಷ ಸಭೆ ನಡೆಸಿ ರಣತಂತ್ರ	276
33.	ಗ್ರಾಮ ಒನ್ ಕೇಂದ್ರಕ್ಕೆ ಇಂದು ಚಾಲನೆ	277–278
34.	ಬಲಾಢ್ಯ ಭಾರತ ಅನಾವರಣ	279
35.	200 ಕೋಟಿ ಹೆಚ್ಚು ತೆರಿಗೆ ಸಂಗ್ರಹ	279–280
36.	ಗ್ರಾಮಗಳಲ್ಲೇ ಸಿಗಲಿವೆ 100 ಸೇವೆ	281
37.	ಜಿಲ್ಲೆಗಳ ಉಸ್ತುವಾರಿ ಮಂತ್ರಿಗಿರಿಗೆ ಸರ್ಜರಿ	281–283
38.	30.26 ಲಕ್ಷ ರೈತರಿಗೆ ರೂ.19,370 ಕೋಟಿ ಸಾಲ	283

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
39.	ಫೆಬ್ರವರಿ 14–25 ರವರೆಗೆ ಜಂಟಿ ಅಧಿವೇಶನ	284
40.	ಭೂಮಿ ಹಕ್ಕು, ದಾಖಲೆಗೆ ಡ್ರೋನ್ ಸರ್ವೆ	284–286
41.	ಫೆಬ್ರವರಿ 14 ರಿಂದ ಜಂಟಿ ಅಧಿವೇಶನ ಮಾರ್ಚ್ ಮೊದಲ ವಾರ ಬಜೆಟ್	286–288
42.	ಜನಾಶೀರ್ವಾದ ಮುಖ್ಯಮಂತ್ರಿಯವರ ಮುದ	288
43.	ಮಹಾತ್ಮ ಗಾಂಧಿ ವಿಶ್ವದ ನಾಯಕರು	289
44.	ಸಂತ್ರಸ್ತ ಕುಟುಂಬಗಳ ಜೊತೆ ನಾವಿದ್ದೇವೆ	290
45.	ಇನ್ನಷ್ಟು ಕಾಲೇಜುಗಳಿಗೆ ವಿಸ್ತರಿಸಿದ ಹಿಜಾಬ್	291
46.	ಪಂಚ ನದಿಗಳ ಜೋಡಣೆ ಪ್ರಸ್ತಾಪದ ಬಗ್ಗೆ ರಾಜ್ಯದಲ್ಲಿ ಆತಂಕ	292
47.	ಗ್ರಾಮ ಒನ್‌ನಲ್ಲೇ ಪಡಿತರ ಕಾರ್ಡ್ ವಿತರಣೆ	293
48.	ನಿಗದಿತ ಸಮವಸ್ತ್ರ ಕಡ್ಡಾಯ	294
49.	ಕೆಪಿಎಸ್‌ಸಿ: ಅಕ್ರಮ 'ಸಕ್ರಮ' ಕ್ಕೆ ಮಸೂದೆ	295
50.	ರಾಜ್ಯಾದ್ಯಂತ ಹಬ್ಬಿದ ಹಿಜಾಬ್ ಗದ್ದಲ	296
51.	ಕಲ್ಯಾಣ ಕರ್ನಾಟಕಕ್ಕೆ ರೂ.5000 ಕೋಟಿಗೆ ಮೊರೆ	297
52.	ಕೆಪಿಎಸ್ಸಿ 2011 ರ ಬ್ಯಾಚ್‌ಗೆ ಕಾನೂನಿನ ಮುಕ್ತಿ	298
53.	ನಿಷೇಧಾಜ್ಞೆ ನಡುವೆ ಶಾಲೆಗಳಲ್ಲಿ ಪಾಠ	299
54.	ದೇಗುಲದ ಗಂಟೆಗೆ ಸರ್ಕಾರದ ಸೈಲೆನ್ಸರ್	300
55.	8 ಹೊಸ ಕೈಗಾರಿಕಾ ಪ್ರದೇಶಗಳ ನಿರ್ಮಾಣ	301
56.	ಶಾಲೆ ಬಳಿಕ ಕಾಲೇಜಲ್ಲಿ ಹಿಜಾಬ್ ಕಲಹ ತೀವ್ರ	302
57.	ಆಡಳಿತ ಸುಧಾರಣೆಗೆ 1,165 ಶಿಫಾರಸು	303
58.	ಪಾದಯಾತ್ರೆಗೆ ಜನಸಾಗರ	304
59.	ರಷ್ಯಾ ದಾಳಿಗೆ ರಾಜ್ಯದ ವಿದ್ಯಾರ್ಥಿ ಸಾವು	305
60.	ನೀರಿಗಾಗಿ ನಡಿಗೆ ನಿರಂತರ	306
61.	ಶಾಲೆಗಳಿಗೆ ಹೈಟೆಕ್ ಭೋಜನಾಲಯ	307
62.	2000 ಕೋಟಿ ಹೂಡಿಕೆಯ 48 ಯೋಜನೆಗೆ ಆಸ್ತು	308
63.	ಕೃಷಿ ಪಂಪ್‌ಸೆಟ್‌ಗೆ ಸೌರವಿದ್ಯುತ್ : ಸಂಪುಟ ಅಸ್ತು	310

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
64.	ಕಂದಾಯ ಕ್ರಾಂತಿ	311
65.	ಉದ್ಯೋಗದಲ್ಲಿ ಸ್ತ್ರೀ ಶಕ್ತಿ ಹೆಚ್ಚಳದ ಖಾತ್ರಿ	312
66.	ನರೇಗಾ ಅಸ್ತ್ರದಿಂದ ಬಡತನ ನಿರ್ಮೂಲನೆ	313
67.	ಪಿಎಚ್ಡಿಗೆ ಪದವಿ ಸಾಕು	314–316
	ಭಾಗ – 5 **ರಾಜ್ಯ ನೆಲ, ಜಲ, ಭಾಷೆ ಸುದ್ದಿಗಳು**	
1.	ಮೇಕೆದಾಟು ಕೈ ವಿಳಂಬಕ್ಕೆ ದಾಖಲೆ	317
2.	ಮೇಕೆದಾಟು ಯೋಜನೆಗೆ 6000 ಹೆಕ್ಟೇರ್ ಅರಣ್ಯ ಭೂಮಿ	318
3.	Mekedatu project: What is it and where does it stand now?	319
4.	ಎತ್ತಿನ ಹೊಳೆ ಶೀಘ್ರ ಪೂರ್ಣಗೊಳಿಸಿ	320
5.	ಕಾವೇರಿ, ಕೃಷ್ಣಾ ಸೇರಿ 6 ನದಿ ಜೋಡಣೆಗೆ ನೆರವು	321
6.	ನದಿ ಜೋಡಣೆ, ನೆರೆ ರಾಜ್ಯಕ್ಕೆ ಲಾಭ	321
7.	'Dropping farmland from special courts' ambit kills forests'	323
8.	ಮೇಕೆದಾಟು ಮತ್ತೆ ತಮಿಳುನಾಡು ಕ್ಯಾತೆ	324
9.	ಎಲೆರಾಂಪುರ ಗ್ರಾಮ ಪಂಚಾಯಿತಿಗೆ ಜಲ ಪ್ರಶಸ್ತಿ	325–326
	ಭಾಗ – 6 **ನ್ಯಾಯಾಲಯ ಸುದ್ದಿಗಳು**	
1.	ಲೋಪ ತನಿಖೆ : 'ಸುಪ್ರೀಂ' ಸಮಿತ	327
2.	ವಿಧಾನಸಭೆಯಿಂದ ಶಾಸಕರ ಅಮಾನತ್ತು ಆರು ತಿಂಗಳಿಗಿಂತ ಹೆಚ್ಚಿಸಬಾರದು	327
3.	ಸುಪ್ರೀಂ ಕೋರ್ಟ್ ವಕೀಲರಿಗೆ ಬೆದರಿಕೆ ಕರೆ	328
4.	ಧರಣಿ, ರ್‍ಯಾಲಿಗೆ ಇನ್ನು ಅವಕಾಶವಿಲ್ಲ: ಹೈಕೋರ್ಟ್	328
5.	Legislature can't suspend members indefinitely : SC	329–330
6.	Legislator's House conduct draws SC's disapproval	331
7.	ಪರಿಶಿಷ್ಟರ ಬಡ್ತಿ ನಿರ್ಧಾರ ರಾಜ್ಯಗಳದ್ದು	331
8.	Engage in debates in the House, not in ridiculing each other: SC	333

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
9.	ವಿದ್ಯಾರ್ಥಿನಿಯರ ಹಕ್ಕು ಉಲ್ಲಂಘನೆ ಸಲ್ಲ	334
10.	ರಾಜ್ಯ ಹೊತ್ತಿ ಉರಿಯುತ್ತಿದೆ : ಹೈಕೋರ್ಟ್ ಆತಂಕ	335
11.	ಹಿಜಾಬ್ ವಿಸ್ತೃತ ಪೀಠಕ್ಕೆ	336
12.	ಧಾರ್ಮಿಕ ಸಮವಸ್ತ್ರಕ್ಕೆ ಬಿಡುವು	337
13.	ವಸ್ತ್ರ ಸಂಹಿತೆಗೆ ವಿದ್ಯಾರ್ಥಿಗಳು ಬದ್ಧರಾಗಲಿ	339
14.	ಸಮವಸ್ತ್ರ ಇರುವಲ್ಲಿ ಮಾತ್ರ ಧರ್ಮವಸ್ತ್ರ ನಿಷಿದ್ಧ	340
15.	Top court declines to hear plea on hijab row	341
16.	ಹಿಜಾಬ್ ಧರಿಸುವುದು ಸಾಂವಿಧಾನಿಕ ಹಕ್ಕೇ	342–343
17.	ಎಲ್ಲ ಬಗೆಯ ಆನ್ಲೈನ್ ಬೆಟ್ಟಿಂಗ್ ಓಕೆ	344
18.	ಫ್ರೀಡಂಪಾರ್ಕ್ ಬಿಟ್ಟು ಎಲ್ಲೂ ಪ್ರತಿಭಟನೆ ಬೇಡ	345
19.	Advocates must be 35yrs to sit for district judge recruitment test: SC	346–347
	ಭಾಗ – 7 **ಹೊರ ರಾಜ್ಯಗಳ ಸುದ್ದಿಗಳು**	
01.	Goa govt confers lifelong cabinet status to veteran Congress MLA	348
02.	Respect laws passed by Assembly	348
03.	3rd backward caste minister quits Yogi Cabinet in 3 days	349
04.	Goa House at 3/4th Strength as 1/4th MLAs resign	350
05.	Third wave: lockdown total in Kerala	351
06.	ಮಹಾರಾಷ್ಟ್ರ ಬಿಜೆಪಿ ಶಾಸಕರ ಅಮಾನತ್ತು ಆದೇಶ ರದ್ದು	352
07.	Haryana Cabinet nod for anti-conversion Bill	352
08.	T.N.Assmbly re-adopts NEET Bill	354
09.	Raj Assembly: Four BJP MLAs suspended	355
10.	CPI, CPM share Rajya Sabha seats	355
11.	Haryana Assembly passes anti-conversion bill	356

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
12.	Judiciary crossed its limits, legislature too supreme: Jagan	357
13.	U'khand govt to set up panel on Uniform Civil Code	358
14.	HC notice to Dy.Speaker of Gujarat Assembly	358
15.	ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಮರಾಠಿ ಕಡ್ಡಾಯ ಮಸ್ಸೂದೆಗೆ ಅಸ್ತು	358
16.	Farm income fell in four States: panel	359
17.	India looking at options to continue trade with Russia	360
18.	Maha Council passes resolution condemning Bommai's Statements on border dispute	361
19.	Uproar in Bihar House as Oppn. protests delay in caste census	361
20.	ಮಾಜಿ ಶಾಸಕರಿಗೆ ಒಂದು ಅವಧಿಯ ಪಿಂಚಣಿ	362
21.	5 BJP MLAs suspended after fisticuffs in Assembly	362
22.	Sawant sworn in as Goa CM; 8 BJP MLAs take oath as ministers	363
23.	In a first, Goa Assembly elects ST member as Speaker	363
24.	CM: Speaker's selection has strengthened democracy	364
25.	Maha Guv leaves stormy House session	364
26.	Houses of disorder: Budget session drama in 3 Assemblies	365
27.	15 ವರ್ಷಗಳಲ್ಲೇ ಸಿಎಂ ಆಗುತ್ತಿರುವ ಮೊದಲ ಶಾಸಕ	366
28.	ಮಣಿಪುರ ವಿಧಾನಸಭೆಗೆ ಐವರು ಶಾಸಕಿಯರು	366
29.	Nitish, Speaker spar over probe into arrests	366
30.	Ruckus in Bihar Assembly, Oppn seeks Nitish's apology for 'insulting' Speaker	367
31.	New Goa MLAs take oath; Government formation after Holi	368
32.	Rucks continues over Nitish-Speaker spat	369
33.	ಮುಖ್ಯಮಂತ್ರಿಯಾಗಿ ಮಾನ್ ಪ್ರಮಾಣ	370
34.	Gujarat govt inroduces 'Gita' in schools	371

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
35.	'No mobiles, recorders in A.P.Assembly'	371
36.	T.N.Assembly adopts anti-dam resolution	372
37	AP House panel to probe Pegasus charge: Speaker	373
	ಭಾಗ – 8 **ಶ್ರದ್ಧಾಂಜಲಿ**	
01.	ಬಸ್ತಿ ವಾಮನ ಶೆಣೈ, ಕೊಂಕಣಿ ಸಾಹಿತಿ	374
02.	ಸಿಂಧು ತಾಯಿ ಸಪ್ಕಾಲ್, ಪದ್ಮಶ್ರೀ ಪುರಸ್ಕೃತೆ	374
03.	ಬಸವಲಿಂಗಯ್ಯ ಹಿರೇಮಠ, ಜಾನಪದ ಕಲಾವಿದ	375
04.	ಎನ್.ಎಸ್. ದೇವಿಪ್ರಸಾದ್, ಸಾಹಿತ್ಯ ಅಕಾಡೆಮಿಯ ಪ್ರಥಮ ಅಧ್ಯಕ್ಷ	375
05.	ಪ್ರೊ: ಚಂಪಾ, ಖ್ಯಾತ ಸಾಹಿತಿ	375
06.	ಜೆ. ಅಲೆಗ್ಸಾಂಡರ್, ಮಾಜಿ ಸಚಿವ	376
07.	ಬಿರ್ಜು ಮಹಾರಾಜ್, ಖ್ಯಾತ ನೃತ್ಯಪಟು	376
08.	ಟಿ.ವಿ. ಮಾರುತಿ, ಕಾಂಗ್ರೆಸ್ ಹಿರಿಯ ನಾಯಕ	377
09.	Padma Shri Sudha Reddy, Ex-MP	377
10.	ಕೆ.ಎಲ್. ಮಂಜುನಾಥ್, ಖ್ಯಾತ ನ್ಯಾಯಮೂರ್ತಿ	377
11.	ಮುತಾಲಿಕ ದೇಸಾಯಿ, ಹಿರಿಯ ಪತ್ರಕರ್ತ	378
12.	ಎಂ.ಎಂ. ಸಜ್ಜನ, ಮಾಜಿ ಶಾಸಕ	378
13.	ಎಚ್. ಬಿ. ಪಾಟೀಲ, ಮಾಜಿ ಶಾಸಕ	378
14.	Karnataka's Kabir Ibrahim Sutar passes away	379
15.	ಲತಾ ದೀದಿ, ನಾದ ಕೋಗಿಲೆ	379
16.	ರಾಹುಲ್ ಬಜಾಜ್, ಉದ್ಯಮಿ	379
17.	ಭಾರ್ಗವಿ ನಾರಾಯಣ್, ಖ್ಯಾತ ಹಿರಿಯ ರಂಗಭೂಮಿ ಕಲಾವಿದೆ	380
18.	ಡಾ: ಹೆಚ್. ಡಿ ಚೌಡಯ್ಯ, ಮಾಜಿ ಶಾಸಕ	380
19.	ಬಪ್ಪಿ ಲಹರಿ, ಖ್ಯಾತ ಗಾಯಕ	380
20.	ಡಾ:ಚನ್ನವೀರಕಣವಿ, ಖ್ಯಾತ ಸಮನ್ವಯ ಕವಿ	381

ಕ್ರಮ ಸಂಖ್ಯೆ	ವಿಷಯ	ಪುಟ ಸಂಖ್ಯೆ
21.	ಗೂಳಪ್ಪ ವೆಂಕಪ್ಪ ಮಂಟೂರ, ಮಾಜಿ ಶಾಸಕರು	381
22.	ರಾಜೇಶ್, ಖ್ಯಾತ ಹಿರಿಯ ನಟ	382
	ಭಾಗ – 9 **ಪ್ರಮುಖ ಲೇಖನಗಳು**	
01.	ವಿವಾದ ದಾಟಿದರೆ ಉಭಯತ್ರರಿಗೂ ಲಾಭ	383–385
02.	Assemblies had fewer sittings than Parliament	385–388
03.	Legislature can't suspend members indefinitely: SC	388–389
04.	Egyptian mummy showcases keep our Constitution safe	389–390
05.	ನದಿ ಜೋಡಣೆ ಹಲವು ಅಡಚಣೆ	390–393
06.	ಕಾಗೇರಿ ಪ್ರತಿಪಾದನೆಯ ರಾಜಕೀಯ ಸ್ವಚ್ಛತೆ ಅಗತ್ಯ	393–396
07.	ಸಮರ ಅಲ್ಲ ಸದರ	396–399
08.	ಹಿಜಾಬ್ ಅತ್ಯಗತ್ಯವಲ್ಲ, ಯಾಕೆಂದರೆ...	399–403
09.	ಪುರುಷನಿಗೆ ಮಹಿಳೆಯೇ ಆತ್ಮವಿಶ್ವಾಸದ ಮೂಲ	403–405
10.	ಸಾಂವಿಧಾನಿಕ ಹಕ್ಕುಗಳಿಗಾಗಿ ಸಂವಿಧಾನದ ವಿರುದ್ಧವೇ ಹೋದರೆ ಹೇಗೆ	405–410
11.	ಮಾತಿನ ಮಂಥನದ ಮನೆಯಲ್ಲಿ ಶಾಸಕರ ನಿರಾಸಕ್ತಿ	410–413
12.	ನಾಕಕಿಂತ ಸುಂದರವಾದ ಕಾಶ್ಮೀರದ ನೆನಪುಗಳು	413–415
13.	ಹಿಂದುಗಳೇ ಅಲ್ಪಸಂಖ್ಯಾತರು	416–418
14.	ಚುನಾವಣಾ ಸುಧಾರಣಾ ಚರ್ಚೆ: ಹೊಸ ಹೊಳಪು ಮೂಡಲಿ	418–419

ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.
ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

ಭಾಗ–1

ವಿಧಾನಮಂಡಲದ ಸುದ್ದಿಗಳು

1. ಪಿಎಸಿ ಅಧ್ಯಕ್ಷರಾಗಿ ಕೃಷ್ಣ ಬೈರೇಗೌಡ

ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ (ಪಿಎಸಿ) ಅಧ್ಯಕ್ಷರನ್ನಾಗಿ ಶಾಸಕ ಕೃಷ್ಣ ಬೈರೇಗೌಡ ಅವರನ್ನು ನೇಮಿಸಿ ವಿಧಾನ ಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಅವರನ್ನು ಪಿಎಸಿ ಅಧ್ಯಕ್ಷರನ್ನಾಗಿ ನೇಮಿಸಿ ಡಿಸೆಂಬರ್ 27ರಂದು ಆದೇಶ ಹೊರಡಿಸಲಾಗಿತ್ತು. ಆದರೆ, ಪಿಎಸಿ ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಳ್ಳಲು ನಿರಾಕರಿಸಿದ್ದ ಅವರು, ಬೇರೊಬ್ಬರನ್ನು ನೇಮಿಸುವಂತೆ ಕಾಗೇರಿ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ಕೃಷ್ಣ ಬೈರೇಗೌಡ ಅವರನ್ನು ಪಿಎಸಿಯ ನೂತನ ಅಧ್ಯಕ್ಷರನ್ನಾಗಿ ನೇಮಿಸುವಂತೆ ಸಿದ್ದರಾಮಯ್ಯ ಪತ್ರ ಬರೆದಿದ್ದರು. ಬಳಿಕ ವಿಧಾನಸಭೆಯ ಅಧ್ಯಕ್ಷರು ಪರಿಷ್ಕೃತ ಆದೇಶ ಹೊರಡಿಸಿದ್ದಾರೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಸೇರಿದ 20 ಸದಸ್ಯರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯರಾಗಿದ್ದಾರೆ. ವಿಧಾನಸಭೆಯ 16 ಮತ್ತು ವಿಧಾನ ಪರಿಷತ್‌ನ ನಾಲ್ವರು ಸದಸ್ಯರು ಸಮಿತಿಯಲ್ಲಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ: 02.01.2022

2. ಪಠ್ಯದಲ್ಲಿ ಭಗವದ್ಗೀತೆ ಸೇರಿಸಲು ಇದು ಸಕಾಲ

ಶಿಕ್ಷಣದ ಬಗ್ಗೆ ದೇಶದಲ್ಲಿ ಹೊಸ ಚಿಂತನೆ ಪ್ರಾರಂಭವಾಗಿದೆ. ಭಗವದ್ಗೀತೆಯನ್ನು ಶಾಲಾ ಪಠ್ಯಪುಸ್ತಕದಲ್ಲಿ ಸೇರಿಸುವ ಕೆಲಸವಾಗಬೇಕು ಎಂದು ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಹೇಳಿದರು.

ತಾಲೂಕಿನ ಹೆಗ್ಗರಣೆ ಶ್ರೀ ವಿವೇಕಾನಂದ ಪ್ರೌಢಶಾಲೆಯಲ್ಲಿ ನಾಗರಕಟ್ಟೆ ಸಹೋದರರು ನೂತನವಾಗಿ ನಿರ್ಮಿಸಿದ ಅನ್ನಪೂರ್ಣ ಸಭಾಭವನವನ್ನು ಲೋಕಾರ್ಪಣಗೊಳಿಸಿ ಅವರು ಮಾತನಾಡಿದರು.

ಇಂದು ಯುವ ಜನಾಂಗ ವಾತಾವರಣದ ಕಾರಣದಿಂದಲೋ ಅಥವಾ ಆಧುನಿಕತೆಯ ಕಾರಣದಿಂದಲೋ ನಮ್ಮ ಸಂಸ್ಕೃತಿಯಿಂದ ದೂರವಾಗುತ್ತಿದ್ದಾರೆ. ಮಕ್ಕಳಲ್ಲಿ ನಮ್ಮ ಸಂಸ್ಕೃತಿಯ ಅರಿವು ಮೂಡಿಸುವ ಕೆಲಸವಾಗಬೇಕು. ಭಗವದ್ಗೀತೆ ಇಂತಹ ಸಂಸ್ಕಾರವನ್ನು ಕಲಿಸುತ್ತದೆ. ಆದ್ದರಿಂದ ಕೂಡಲೇ ಪಠ್ಯದಲ್ಲಿ ಭಗವದ್ಗೀತೆ ಸೇರಿಸುವಂತೆ ಸರಕಾರವನ್ನು ಆಗ್ರಹಿಸುತ್ತಿದ್ದೇನೆ. ಇಂದು ನಮಗೆ ಅನುಕೂಲಕರವಾದ ವಾತಾವರಣವಿದೆ. ಕೇಂದ್ರ, ರಾಜ್ಯದಲ್ಲಿ ಸಮಾನಮನಸ್ಕರ ಸರಕಾರವಿದೆ. ಹೀಗಾಗಿ ಕೂಡಲೇ ಈ ಮಹತ್ಕಾರ್ಯವನ್ನು ಕೈಗೂಡಿಸಬೇಕು" ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಮಾತನಾಡಿ, "ಇಂತಹ ಸಭಾಭವನ ಮಲೆನಾಡಿನ ಪ್ರದೇಶದಲ್ಲಿ ಅವಶ್ಯವಾಗಿದೆ. ಇದು ಕೇವಲ ಮನರಂಜನೆಯ ಉದ್ದೇಶಕ್ಕೆ ಮಾತ್ರ ಬಳಕೆಯಾಗಬಾರದು. ಇಲ್ಲಿ ವೈಚಾರಿಕತೆ, ರಾಷ್ಟ್ರೀಯತೆಯನ್ನು ಉದ್ದೀಪನಗೊಳಿಸುವ ಕಾರ್ಯಕ್ರಮಗಳು

ನಡೆಯಬೇಕು" ಎಂದು ಹೇಳಿದರು. ಸಭೆಯಲ್ಲಿ ಭಾಗವಹಿಸಿದ್ದ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ ಮಾತನಾಡಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 04.01.2022

3. ಮೇಲ್ಮನೆ : 25 ಮಂದಿ ಇಂದು ನಿವೃತ್ತಿ, 20 ಹೊಸಬರ ಪ್ರವೇಶ

ವಿಧಾನ ಪರಿಷತ್ ಸದಸ್ಯರಾಗಿ, ಪ್ರತಿಪಕ್ಷದ ನಾಯಕರಾಗಿದ್ದ ಎಸ್.ಆರ್.ಪಾಟೀಲ್, ಎರಡು ಅವಧಿಗೆ ಸದಸ್ಯರಾಗಿದ್ದರು ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ, ಪ್ರತಿಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣ ಸ್ವಾಮಿ, ಶಾಸಕರಾಗಿ, 'ಪರಿಷತ್ ಸದಸ್ಯರಾಗಿ, ಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದ ಕಾಂಗ್ರೆಸ್ ಪಕ್ಷದ ಕೆ. ಪ್ರತಾಪಚಂದ್ರ ಶೆಟ್ಟಿ, ಹಿರಿಯ ಸದಸ್ಯ ಕೆ.ಸಿ. ಕೊಂಡಯ್ಯ, ಕೃಷಿ ಕುರಿತು ಪ್ರಭಾವಶಾಲಿಯಾಗಿ ಚರ್ಚೆ ಮಾಡುತ್ತಿದ್ದ ಬಸವರಾಜ ಪಾಟೀಲ್ ಇಟಗಿ, ಹಿಂದುಳಿದ ವರ್ಗದ ಸಮಸ್ಯೆಗಳನ್ನು ಸರ್ಕಾರದ ಗಮನ ಸೆಳೆಯುತ್ತಿದ್ದ ಶ್ರೀಕಾಂತ್' ಘೋಟ್ನೇಕರ್, ಆರ್. ಧರ್ಮಸೇನ, ಶಿಕ್ಷಣದ ಕುರಿತು ಗಮನ ಸೆಳೆಯುತ್ತಿದ್ದ ಜೆಡಿಎಸ್ ಸದಸ್ಯ ಎನ್. ಅಪ್ಪಾಜಿಗೌಡ ಸೇರಿದಂತೆ 25 ಸದಸ್ಯರು ಜನವರಿ 5ರಂದು ನಿವೃತ್ತಿಯಾಗಲಿದ್ದಾರೆ.

ಉಳಿದಂತೆ ವಿಜಯಸಿಂಗ್, ಜಿ. ರಘು ಆಚಾರ್, ಆರ್. ಪ್ರಸನ್ನಕುಮಾರ್, ಎಂ.ಎ.ಗೋಪಾಲಸ್ವಾಮಿ, ಕಾಂತರಾಜ್, ಸಿ.ಆರ್. ಮನೋಹರ್, ಎಂ.ಪಿ.ಸುನೀಲ್ ಸುಬ್ರಮಣಿ, ಎಸ್. ನಾಗರಾಜ್ (ಸಂದೇಶ್ ನಾಗರಾಜ್) ಅವರು ನಿವೃತ್ತರಾಗಲಿದ್ದಾರೆ. ಕಾಂಗ್ರೆಸ್ ಸದಸ್ಯರಾಗಿದ್ದ ಶ್ರೀನಿವಾಸ ಮಾನೆ, ಹಾನಗಲ್ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಆಯ್ಕೆಯಾದ ನಂತರ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಐವರು ಮರು ಆಯ್ಕೆ: ನಿವೃತ್ತರಾಗುತ್ತಿರುವವರ ಪೈಕಿ ಐವರು ಮಾತ್ರ ಮರು ಆಯ್ಕೆಯಾಗಿದ್ದಾರೆ. ಪರಿಷತ್ ಉಪ ಸಭಾಪತಿಯಾಗಿರುವ ಎಂ.ಕೆ. ಪ್ರಾಣೇಶ್, ಹಾಲಿ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿ, ಬಿಜೆಪಿಯ ಪ್ರದೀಪ್ ಶೆಟ್ಟರ್, ಕಾಂಗ್ರೆಸ್‌ನ ಬಿ.ಜಿ. ಪಾಟೀಲ್, ಎಸ್. ರವಿ ಹಾಗೂ ಸುನೀಲ್ ಗೌಡ ಪಾಟೀಲ್ ಮರು ಆಯ್ಕೆಯಾಗಿದ್ದಾರೆ.

ಹೊಸ ಮುಖಗಳು: 20 ಸದಸ್ಯರು ಮೊದಲ ಬಾರಿಗೆ ವಿಧಾನ ಪರಿಷತ್ ಮೆಟ್ಟಿಲು ಹತ್ತುತ್ತಿರುವುದು ವಿಶೇಷವಾಗಿದೆ. ಈ ಪೈಕಿ ಅನೇಕರು ವಿವಿಧ ಪಕ್ಷಗಳಲ್ಲಿ ಇರುವ ಪ್ರಭಾವಿ ಮುಖಂಡರ ಸಂಬಂಧಿಗಳೇ ಆಗಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಮೊಮ್ಮಗ ಸೂರಜ್ ರೇವಣ್ಣ, ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಸೋದರ ಚೆನ್ನರಾಜ್ ಹಟ್ಟಿಹೊಳಿ, ಮಾಜಿ ಶಾಸಕ ಕೆ.ಎನ್. ರಾಜಣ್ಣ ಅವರ ಪುತ್ರ ಎಸ್.ಆರ್. ರಾಜೇಂದ್ರ, ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ಸೋದರ ಸುಜಾ ಕುಶಾಲಪ್ಪ, ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ ಅವರ ಪುತ್ರ ಡಿ.ಎಸ್.ಅರುಣ್‌ಕುಮಾರ್ ಹಾಗೂ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಸೋದರ ಲಖನ್ ಜಾರಕಿಹೊಳಿ ಪ್ರಮುಖರಾಗಿದ್ದಾರೆ.

ಉಳಿದಂತೆ ಕಾಂಗ್ರೆಸ್ ಪಕ್ಷದ ಸಲೀಂ ಅಹಮದ್, ದಿನೇಶ್, ಜಿ.ಗೂಳಿಗೌಡ, ಡಾ.ತಿಮ್ಮಯ್ಯ, ಮಂಜುನಾಥ್ ಭಂಡಾರಿ, ಅನಿಲ್ ಕುಮಾರ್, ಶರಣಗೌಡ ಬೈಯಾಪುರ, ಬಿಜೆಪಿಯ ಗೋಪಿನಾಥ್ ರೆಡ್ಡಿ, ಗಣಪತಿ ಉಲ್ಲೇಕರ್, ವೈ.ಎಂ. ಸತೀಶ್, ಕೆ.ಎಸ್. ನವೀನ್, ಭೀಮರಾವ್ ಪಾಟೀಲ್, ಪಿ.ಎಚ್. ಪೂಜಾರ್ ಮೊದಲ ಬಾರಿಗೆ ಹಿರಿಯರ ಮನೆ ಪ್ರವೇಶಿಸಿದ್ದಾರೆ.

ಬೀಳ್ಕೊಡುಗೆ: ನಿವೃತ್ತಿಯಾಗಲಿರುವ 25 ಸದಸ್ಯರಿಗೆ ಬೀಳ್ಕೊಡುಗೆ ಸಮಾರಂಭ ಜನವರಿ 5 ರಂದು ಬೆಳಗ್ಗೆ 11 ಗಂಟೆಗೆ ವಿಕಾಸಸೌಧದಲ್ಲಿ ನಡೆಯಲಿದೆ. ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಅನೇಕ ಸಚಿವರು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ: 05.01.2022

4. ಶಿಫಾರಸ್ಸು ಅನುಷ್ಠಾನ, ವಿಳಂಬಕ್ಕೆ ಆಕ್ಷೇಪ

ಅವ್ಯವಹಾರ, ಅಧಿಕಾರ ದುರ್ಬಳಕೆ, ಗಂಭೀರ ಸ್ವರೂಪದ ಲೋಪ–ದೋಷಗಳನ್ನು ಪತ್ತೆ ಹಚ್ಚಿ ಕ್ರಮಕ್ಕೆ ಶಿಫಾರಸ್ಸು ಮಾಡಿದ ಅನೇಕ ಪ್ರಕರಣಗಳು ವರ್ಷಗಟ್ಟಲೇ ನನೆಗುದಿಗೆ ಬಿದ್ದಿವೆ ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ (ಪಿಎಸಿ) ಅಸಮಾಧಾನ ವ್ಯಕ್ತಪಡಿಸಿದೆ. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಪಿಎಸಿ ಅಧ್ಯಕ್ಷ ಕೃಷ್ಣ ಬೈರೇಗೌಡ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಪ್ರಾರಂಭಿಕ ಸಭೆಯು ಅನೇಕ ವರ್ಷಗಳಿಂದ ಇತ್ಯರ್ಥ ಕಾಣದ ಪ್ರಕರಣಗಳತ್ತ ಅಧಿಕಾರಿಗಳ ಗಮನ ಸೆಳೆಯಿತು. ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿಯಲ್ಲಿ ಸ್ಪಷ್ಟ ಉಲ್ಲೇಖ, ಶಿಫಾರಸ್ಸುಗಳ ಜೊತೆಗೆ ಸಾರ್ವಜನಿಕರ ಲೆಕ್ಕಪತ್ರಗಳ ಸಮಿತಿ ಕೈಗೊಂಡ ಕ್ರಮಗಳ ಪರಿಶೀಲಿಸಿದೆ. ಸಿಎಜಿ ಜೊತೆಗೆ ಪಿಎಸಿ ಕೂಡ ಕಾಲ ಕಾಲಕ್ಕೆ ಅನೇಕ ಪ್ರಕರಣಗಳನ್ನು ಪಟ್ಟಿ ಮಾಡಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿದರೆ, ಕೆಲವು ಇಲಾಖೆಗಳ ಹಿರಿಯ ಅಧಿಕಾರಿಗಳು ತಕ್ಷಣ ಸ್ಪಂದಿಸಿ ನಿರ್ದಾಕ್ಷಿಣ್ಯ ಕ್ರಮವಹಿಸುವ ಮೂಲಕ ಕಾಳಜಿ ಮೆರೆದಿದ್ದಾರೆ. ಆದರೆ ಹಲವು ಇಲಾಖೆ ಅಧಿಕಾರಿಗಳು ಕ್ರಮಕೈಗೊಳ್ಳಲು ವಿಳಂಬ ಮಾಡುವ ಜೊತೆಗೆ ಸಂಬಂಧಿಸಿದ ಅಧೀನ ಅಧಿಕಾರಿ ಮತ್ತು ಸಿಬ್ಬಂದಿಯನ್ನು ರಕ್ಷಿಸಲು ಪ್ರಯತ್ನಿಸಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದೆ.

ಉದ್ದೇಶದ ಸಾರ್ಥಕತೆ ಮುಖ್ಯ: ಸಾರ್ವಜನಿಕ ಹಿತದೃಷ್ಟಿಯಿಂದ ಸಿಎಜಿ ಅಥವಾ ಪಿಎಸಿ ನೀಡುವ ವರದಿ ಮತ್ತು ಶಿಫಾರಸುಗಳನ್ನು ಚಾಚೂ ತಪ್ಪದೇ ಅನುಷ್ಠಾನಕ್ಕೆ ತಂದು, ಉದ್ದೇಶ ಸಾರ್ಥಕಗೊಳಿಸುವುದು ಮುಖ್ಯವಾಗಿದೆ. ಪಾರದರ್ಶಕತೆ, ಉತ್ತರದಾಯಿತ್ವ ಬಾಯಿ ಮಾತಿನಲ್ಲಿ ಹೇಳಿದರೆ ಸಾಲದು. ಕೃತಿಗೆ ಇಳಿಸಬೇಕಿದ್ದು, ಯಾವುದೇ ಕ್ರಮಗಳಾಗಿಲ್ಲವೆಂದು ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ ಎಂದು ಸಮಿತಿ ಎಚ್ಚರಿಸಿದೆ.

ಪ್ರಕರಣಗಳ ವಿಲೇವಾರಿಗೆ ಸಮಿತಿ: ಸಮಿತಿ ಕೂಲಂಕಷವಾಗಿ ಚರ್ಚಿಸಿ ಕ್ರಮವಹಿಸಲು ಸೂಚಿಸಿದ ಅನೇಕ ಪ್ರಕರಣಗಳು 10–15 ವರ್ಷಗಳಿಂದ ಬಾಕಿ ಇವೆ. ಈ ಪೈಕಿ ಅವ್ಯವಹಾರದಂತಹ ಗಂಭೀರ ಸ್ವರೂಪದವನ್ನು ಹೊರತುಪಡಿಸಿ, ಕಾರ್ಯವಿಧಾನ ಲೋಪ ಇತ್ಯಾದಿ ಸಣ್ಣ–ಪುಟ್ಟ ಪ್ರಕರಣಗಳನ್ನು ಪರಿಶೀಲಿಸಿ ವಿಲೇವಾರಿಗಾಗಿ ಸಮಿತಿ ರಚಿಸಲು ಸಮಿತಿ ಸಭೆ ನಿರ್ಧರಿಸಿತು. ಪಿಎಸಿ ಅಧ್ಯಕ್ಷ ಕೃಷ್ಣ ಬೈರೇಗೌಡ ಈ ಸಮಿತಿಗೆ ಅಧ್ಯಕ್ಷರಾಗಿದ್ದು, ಹಲವು ಸದಸ್ಯರು ಮತ್ತು ಅಧಿಕಾರಿಗಳನ್ನು ಒಳಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಆಧಾರ: ವಿಜಯವಾಣಿ, ದಿನಾಂಕ: 05.01.2022

5. ಗಡಿಯಲ್ಲಿ ಶಾಲೆ ನಿಯಮ ಸಡಿಲಿಸಿ

ಗಡಿಭಾಗದಲ್ಲಿ ಕನ್ನಡ ಮಾಧ್ಯಮ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಸರಕಾರ ನಿಯಮಗಳನ್ನು ಸಡಿಲಗೊಳಿಸಬೇಕು. ಗಡಿಭಾಗದ ಮಕ್ಕಳು ಕನ್ನಡ ಕಲಿಕೆಯಿಂದ ವಂಚಿತರಾದರೆ, ಆ ಭಾಗದಲ್ಲಿ ಕನ್ನಡ ನಶಿಸುತ್ತದೆ. ಇದಕ್ಕೆ ಸರಕಾರವೇ ಕಾರಣವಾದಂತಾಗುತ್ತದೆ. ಶಾಲೆ ಆರಂಭಿಸಲು 70 ವಿದ್ಯಾರ್ಥಿಗಳಿರಬೇಕು

ಹಾಗೂ ಕಿ.ಮೀ ವ್ಯಾಪ್ತಿಯಲ್ಲಿ ಬೇರೆ ಪ್ರೌಢಶಾಲೆ ಇರಬಾರದು ಎಂಬ ನಿಯಮವಿದೆ. ಈ ನಿಯಮಗಳನ್ನು ಸಡಿಲಗೊಳಿಸಬೇಕು ಎಂದು ಸಭಾಪತಿಯವರಾದ ಬಸವರಾಜ ಹೊರಟ್ಟಿ ಸಿಎಂಗೆ ಪತ್ರ ಬರೆದಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ: 05.01.2022

6. ಪರಿಷತ್ ಮೌಲ್ಯ ಕುಸಿಯದಂತೆ ತಡೆಯಬೇಕಿದೆ

ವಿಧಾನ ಪರಿಷತ್ ಅಗತ್ಯವಿದೆಯೆ ಎಂಬ ಪ್ರಶ್ನೆ ಆಗಾಗ ಕೇಳಿ ಬರುತ್ತಿದೆ. ಈ ಬಗ್ಗೆ ಆತ್ಮಾವಲೋಕನ ಮಾಡಿಕೊಂಡು ಪರಿಷತ್‌ನ ಮೌಲ್ಯ ಕುಸಿಯದಂತೆ ತಡೆಯುವ ಕೆಲಸ ಮಾಡಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಿವೃತ್ತರಾದ ವಿಧಾನ ಪರಿಷತ್ ಸದಸ್ಯರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ವಿಧಾನ ಪರಿಷತ್‌ನ ಇತಿಹಾಸ, ಪರಂಪರೆ ಮತ್ತು ಮಹತ್ವವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ, ಇತ್ತೀಚಿನ ಪರಿಸ್ಥಿತಿ ಮತ್ತು ಸಂದರ್ಭಗಳನ್ನು ಆಧರಿಸಿ ಪರಿಷತ್‌ನ ಅಗತ್ಯದ ಕುರಿತು ಪ್ರಶ್ನೆ ಎದ್ದಿದೆ' ಎಂದರು.

"ನಾನು ಕೂಡ ವಿಧಾನ ಪರಿಷತ್ ಸದಸ್ಯನಾಗಿಯೇ ರಾಜಕೀಯ ಜೀವನ ಆರಂಭಿಸಿದವನು. ಪರಿಷತ್ನ ಇತಿಹಾಸ ಮತ್ತು ಪರಂಪರೆಯನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಗಂಭೀರವಾದ ಚಿಂತನೆ ಅಗತ್ಯ. ಎಲ್ಲರೂ ಈ ಕುರಿತು ಆತ್ಮಾವಲೋಕನ ಮಾಡಿಕೊಂಡು ಕೆಲಸ ಮಾಡಬೇಕಿದೆ. ವಿಧಾನ ಪರಿಷತ್‌ನ ಮೌಲ್ಯ ಹೆಚ್ಚಿಸುವುದಕ್ಕೆ ಪೂರಕವಾಗಿ ಯೋಚಿಸಬೇಕಿದೆ' ಎಂದು ಹೇಳಿದರು.

ರಾಜಕಾರಣಗಳಿಗೆ ನಿವೃತ್ತಿ ಇಲ್ಲ: ರಾಜಕಾರಣದಲ್ಲಿ ಇರುವವರಿಗೆ ಯಾವತ್ತೂ ನಿವೃತ್ತಿಯ ಪ್ರಶ್ನೆ ಎದುರಾಗುವುದಿಲ್ಲ. ರಾಜಕಾರಣ ಅರ್ಹತೆ ಮತ್ತು ನಿವೃತ್ತಿ ಇಲ್ಲದ ಕ್ಷೇತ್ರ, ಪ್ರಸ್ತುತತೆ ಕಳೆದುಕೊಂಡರೆ ರಾಜಕಾರಣದಲ್ಲಿ ಉಳಿಯುವುದು ಅಸಾಧ್ಯ. ಕ್ರಿಯಾ ಶೀಲವಾಗಿ ಇರುವವರು ಮಾತ್ರ ಪ್ರಸ್ತುತತೆ ಉಳಿಸಿಕೊಳ್ಳಲು ಸಾಧ್ಯ ಎಂದರು.

ಚಿಕಿತ್ಸೆ ಅಗತ್ಯ: ವಿಧಾನ ಪರಿಷತ್‌ನ ಸಭಾ ನಾಯಕರೂ ಆಗಿರುವ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, 'ವ್ಯವಸ್ಥೆಯನ್ನು ವಿಮರ್ಶೆ ಮಾಡುವ ವಿಷಯದಲ್ಲಿ ವಿಧಾನ ಪರಿಷತ್ ಎತ್ತರದ ಸ್ಥಾನದಲ್ಲಿದೆ. ಅದು ಶಕ್ತಿ ಕಳೆದುಕೊಂಡಿಲ್ಲ. ಈ ಬಾರಿಯ ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಹಣದ ವೆಚ್ಚದ ವಿಚಾರದಲ್ಲಿ ಚಿಕಿತ್ಸೆಯ ಅಗತ್ಯವಿದೆ' ಎಂದು ಹೇಳಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ಡಾ.ಬಿ.ಎಲ್. ಶಂಕರ್ ಮಾತನಾಡಿ, 'ಉತ್ತರ ಪ್ರದೇಶ, ಬಿಹಾರ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ವಿಧಾನ ಪರಿಷತ್ ಸದಸ್ಯರೇ ಮುಖ್ಯಮಂತ್ರಿಗಳಾಗಿದ್ದಾರೆ. ರಾಜ್ಯದಲ್ಲಿ ವಿಧಾನ ಪರಿಷತ್ ಬೇಡ ಎಂದು ವಾದಿಸುವವರು ಇದನ್ನು ಅರಿಯಬೇಕು. ವಿಧಾನ ಪರಿಷತ್ ಅಗತ್ಯವಿದಯೇ ಎಂಬ ಪ್ರಶ್ನೆಯನ್ನು ವಿಧಾನಸಭೆಯ ವಿವೇಚನೆಗೆ ಬಿಡುವುದು ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ ಉಪಸ್ಥಿತರಿದ್ದರು.

ಆಧಾರ: ಪ್ರಜಾವಾಣಿ, ದಿನಾಂಕ: 06.01.2022

ದಿನಾಂಕ: **05.01.2022** ರಂದು ವಿಕಾಸಸೌಧದಲ್ಲಿ ಆಯೋಜಿಸಿದ್ದ, ವಿಧಾನಪರಿಷತ್ತಿನ ಸದಸ್ಯತ್ವದ ಅವಧಿ ಮುಕ್ತಾಯವಾಗುತ್ತಿರುವ ಶಾಸಕರುಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಭಾಗವಹಿಸಿದ್ದರು. ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ರವರು, ಸಭಾನಾಯಕ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಮತ್ತು ವಿಧಾನಪರಿಷತ್ತಿನ ಹಲವು ಸದಸ್ಯರುಗಳು ಉಪಸ್ಥಿತರಿದ್ದರು.

7. ಚುನಾವಣಾ ರಾಜಕೀಯಕ್ಕೆ ಪ್ರತಾಪಚಂದ್ರ ಗುಡ್‌ಬೈ

ವಿಧಾನ ಪರಿಷತ್ ಸದಸ್ಯ ಪ್ರತಾಪಚಂದ್ರ ಶೆಟ್ಟಿ ಚುನಾವಣಾ ರಾಜಕೀಯಕ್ಕೆ ಗುಡ್‌ಬೈ ಹೇಳಿದ್ದಾರೆ. 'ವಿಜಯವಾಣಿ' ಜೊತೆ ಮಾತನಾಡಿದ ಅವರು, ನಾವೇ ಹಲವು ವರ್ಷ ರಾಜಕೀಯ ಕ್ಷೇತ್ರದಲ್ಲಿದ್ದರೆ ಸೆಕೆಂಡ್ ಜನರೇಶನ್ ನಾಯಕರು ಅವಕಾಶ ವಂಚಿತರಾಗುತ್ತಾರೆ. ಮುಂದಿನ ತಲೆಮಾರಿನ ನಾಯಕರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದೇನೆ ಎಂದರು. ಕಾಂಗ್ರೆಸ್ ಬಯಸಿದರೆ ಪಕ್ಷದಲ್ಲಿ ಕೆಲಸ ಮಾಡುತ್ತೇನೆ. ಉಡುಪಿ ಜಿಲ್ಲಾ ರೈತ ಸಂಘದ ಮೂಲಕ ಮತ್ತಷ್ಟು ಸಾಮಾಜಿಕ ಹಾಗೂ ರೈತರ ಪರ ಕೆಲಸ ಮಾಡುವ ಚಿಂತನೆಯಿದೆ ಎಂದರು.

ಸಚಿವರಾಗಲೇ ಇಲ್ಲ: ಶೆಟ್ಟರು ವಿಧಾನಸಭಾ ಚುನಾವಣೆಯಲ್ಲಿ ಒಮ್ಮೆ ಸೋತರೂ, ನಂತರ ನಾಲ್ಕು ಬಾರಿ ಶಾಸಕರಾದವರು. ಪರಿಷತ್‌ಗೆ ಹ್ಯಾಟ್ರಿಕ್ ಪ್ರವೇಶ ಪಡೆದರೂ ಸಚಿವ ಸ್ಥಾನ ಒಲಿಯಲಿಲ್ಲ. ಪರಿಷತ್ ಮಾಜಿ ಸಭಾಪತಿಯೂ ಆಗಿದ್ದ ಅವರ ಸದಸ್ಯತ್ವ ಅವಧಿ ಮುಕ್ತಾಯಗೊಳ್ಳಲಿದೆ. ಪರಿಷತ್ ಸಭಾಪತಿ ಸ್ಥಾನಕ್ಕೇರಿದ ದ.ಕ., ಉಡುಪಿ ಜಿಲ್ಲೆಯ ಮೊದಲ ಶಾಸಕ ಎನ್ನುವ ಖ್ಯಾತಿ ಅವರದು. ಯಡಿಯೂರಪ್ಪ, ಸಿದ್ದರಾಮಯ್ಯ ಜೊತೆ 1983ರಲ್ಲಿ ವಿಧಾನಸಭೆ ಪ್ರವೇಶಿಸಿದ್ದ ಅವರು, ವಾರಾಹಿ ಎತ ನೀರಾವರಿ ಯೋಜನೆ ವಿರುದ್ಧ ಧರಣಿ ಮೂಲಕ ರಾಜ್ಯದ ಗಮನ ಸೆಳೆದವರು. 1999ರಲ್ಲಿ ಹಾಲಾಡಿ ಶ್ರೀನಿವಾಸ ಶೆಟ್ಟಿ ವಿರುದ್ಧ 1,140 ಮತಗಳ ಅಂತರದಲ್ಲಿ ಪರಾಭವಗೊಂಡ ನಂತರ 2004ರಲ್ಲಿ ಪರಿಷತ್‌ಗೆ ಆಯ್ಕೆ ಆಗಿದ್ದರು. 2010ರಲ್ಲಿ ಪರಿಷತ್‌ಗೆ ಅವಿರೋಧ ಆಯ್ಕೆಯಾಗಿ ಅರ್ಜಿ ಸಮಿತಿ ಸದಸ್ಯರಾದರು. 2016ರಲ್ಲಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದಾಗ, ಕಾರ್ಯಕರ್ತರು ಧರಣಿ ಕುಳಿತು ನಿರ್ಧಾರ ಬದಲಿಸುವಂತೆ ಒತ್ತಡ ಹೇರಿದ್ದರು. ಪಕ್ಷ ಮುಖಂಡರ ಒತ್ತಾಯಕ್ಕೂ ಅವರು ಹಿಂದೆ ಸರಿಯಲಿಲ್ಲ.

ಆಧಾರ: ವಿಜಯವಾಣಿ, ದಿನಾಂಕ: 06.01.2022

8. 20 ಪರಿಷತ್ ಸದಸ್ಯರಿಂದ ಪ್ರಮಾಣ ಸ್ವೀಕಾರ, ಐವರು ಗೈರು

ವಿಧಾನಪರಿಷತ್ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ 25 ಸದಸ್ಯರ ಪೈಕಿ 20 ಮಂದಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಭಾಪತಿ ಸಮ್ಮುಖ ನಡೆದ ಕಾರ್ಯಕ್ರಮದಲ್ಲಿ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿ ಹಲವು ನಾಯಕರು ಪಾಲ್ಗೊಂಡು ನೂತನ ಸದಸ್ಯರಿಗೆ ಶುಭಕೋರಿದರು.

ನೂತನ ಸದಸ್ಯರಾದ ಬಿ.ಜಿ.ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಲಖನ್ ಜಾರಕಿಹೊಳಿ, ಗಣಪತಿ ಉಳ್ವೇಕರ್, ಎಂ.ಕೆ.ಪ್ರಾಣೇಶ್ ದೇವರ ಹೆಸರಿನಲ್ಲಿ, ಪ್ರದೀಪ್ ಶೆಟ್ಟರ್, ಕೆ.ಎಸ್.ನವೀನ್, ಡಿ.ಎಸ್.ಅರುಣ್, ದಿನೇಶ್ ಗೂಳಿಗೌಡ, ಎಚ್.ಎಸ್.ಗೋಪಿನಾಥ್, ಮಂಜುನಾಥ ಭಂಡಾರಿ ಹಾಗೂ ಡಾ.ಡಿ.ತಿಮ್ಮಯ್ಯ ಭಗವಂತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಚನ್ನರಾಜ ಹಟ್ಟಿಹೊಳಿ ಅವರು ವೀರಭದ್ರೇಶ್ವರ ಮತ್ತು ಬಸವೇಶ್ವರ, ಶರಣಗೌಡ ಪಾಟೀಲ ಬಯ್ಯಾಪುರ ಭಗವಂತ ಮತ್ತು ತಂದೆ–ತಾಯಿ, ರಾಘವೇಂದ್ರ ರಾಜಣ್ಣ ಭಗವಂತ ಮತ್ತು ರೈತರು ಹಾಗೂ ಸಿ.ಎನ್.ಮಂಜೇಗೌಡ ಚಾಮುಂಡೇಶ್ವರಿ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದು ವಿಶೇಷವಾಗಿತ್ತು. ಸಚಿವ ಕೋಟ ಶ್ರೀನಿವಾಸ ಪೂಜಾರಿ ತಮ್ಮ ರಾಜಕೀಯ ಗುರು ವಿ.ಎಸ್.ಆಚಾರ್ಯರನ್ನು ಪ್ರಮಾಣ ವಚನದ ವೇಳೆ ಸ್ಮರಿಸಿದ್ದು ಗಮನಾರ್ಹ ಸಂಗತಿಯಾಗಿತ್ತು. ಕೊಡಗು ಸುಜಾ ಕುಶಾಲಪ್ಪ ಕೊಡಗು ಧಿರಿಸಿನಲ್ಲಿ ಆಗಮಿಸಿದ್ದು,

ಮೇಕೆದಾಟು ಜಟಾಪಟಿ ಸಂದರ್ಭದಲ್ಲಿಯೇ ಬಸವರಾಜ ಬೊಮ್ಮಾಯಿ ಹಾಗೂ ಡಿ.ಕೆ. ಶಿವಕುಮಾರ್ ಹಸ್ತಲಾಘವ ಮಾಡಿದ್ದು, ರಾಮನಗರ ಪ್ರಕರಣದಲ್ಲಿ ಎದೆಯುಬ್ಬಿಸಿ ನುಗ್ಗಿದ್ದ ಪರಿಷತ್ ನೂತನ ಸದಸ್ಯ ರವಿಯನ್ನು ಕಂಡು ಸಿಎಂ ಕಿಚಾಯಿಸಿದ್ದು ವಿಶೇಷ ಸಂದರ್ಭವಾಗಿ ಕಾಣಿಸಿತು.

ರೇವಣ್ಣ ಸೂಚನೆ ಬಾರದ ಸೂರಜ್: ವಿವಿಧ ಕಾರಣಗಳಿಂದಾಗಿ ಐವರು ವಿಧಾನ ಪರಿಷತ್ ಸದಸ್ಯರು ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಗೈರಾಗಿದ್ದರು. ಪ್ರಮುಖವಾಗಿ ಮಾಜಿ ಸಚಿವ ಎಚ್.ಡಿ. ರೇವಣ್ಣ ಸೂಚನೆ ಮೇರೆಗೆ ಅವರ ಪುತ್ರ ಸೂರಜ್ ರೇವಣ್ಣ ಪ್ರಮಾಣ ವಚನ ಕಾರ್ಯಕ್ರಮದಿಂದ ದೂರ ಉಳಿದರೆಂದು ತಿಳಿದು ಬಂದಿದೆ. ಒಳ್ಳೆಯ ದಿನ ಪ್ರಮಾಣ ವಚನ ಸ್ವೀಕರಿಸಬೇಕೆಂಬ ಸಲಹೆ ಅನುಸಾರ ಮುಂದಿನ ವಾರ ಅವರು ಪ್ರಮಾಣವಚನ ಸ್ವೀಕರಿಸುವರು ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಆಧಾರ: ವಿಜಯವಾಣಿ, ದಿನಾಂಕ: 07.01.2022

ದಿನಾಂಕ: 06.01.2022 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಆಯೋಜಿಸಿದ್ದ ನೂತನ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಪ್ರಮಾಣ ವಚನ ಬೋಧನೆ ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಪಾಲ್ಗೊಂಡು ಪ್ರಮಾಣವಚನ ಭೋಧಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ರವರು, ಸಭಾನಾಯಕ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಮತ್ತು ವಿಧಾನಪರಿಷತ್ತಿನ ನೂತನ ಸದಸ್ಯರುಗಳು ಪಾಲ್ಗೊಂಡಿದ್ದರು.

9. ಕಂದಾಯ ಕಾಯ್ದೆ ತಿದ್ದುಪಡಿಗೆ ಅಸ್ತು

ಪರವಾನಗಿ ಹೊಂದಿದ ಭೂಮಾಪಕರ ಜೊತೆಗೆ ನೇಮಿಸಲಾದ ಭೂಮಾಪಕರು ಇಲಾಖೆಯ ಕೆಲವು ಜವಾಬ್ದಾರಿ ನಿರ್ವಹಿಸಲು ಸರ್ಕಾರ ಅವಕಾಶ ಕಲ್ಪಿಸಿದೆ. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ– 2021ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದು, ರಾಜ್ಯ ಪತ್ರದಲ್ಲಿ ಪ್ರಕಟಣೆಯೊಂದಿಗೆ ಈ ಕಾಯ್ದೆ ಜಾರಿಗೆ ಬಂದಿದೆ. ಮೂಲ ನಿಯಮದಲ್ಲಿದ್ದ ಉದ್ದೇಶಗಳಿಗಾಗಿ ಪದದ ಜೊತೆಗೆ ಮತ್ತು ಇತರ ಅಂತಹ ಉದ್ದೇಶಗಳಿಗಾಗಿ ಎಂಬ ಪದ ಸೇರಿಸಲಾಗಿದೆ. ಲೈಸನ್ಸ್ ಹೊಂದಿದ ನೋಂದಣಿದಾರನಿಂದ ಎಂಬ ಪದಗಳ ಬಳಿಕ ಅಥವಾ ನಿಯಮಿಸಲಾದಂತೆ ಎಂಬ ಪದ ಸೇರಿಸಲಾಗಿದೆ.

ಬಿಬಿಎಂಪಿಗೆ ಕಾಯ್ದೆ ಬಲ: ತನಗಿಲ್ಲದ ಅಧಿಕಾರ ಬಳಸಿ ಪರವಾನಗಿ, ಪ್ರಾರಂಭ ಪ್ರಮಾಣಪತ್ರ, ಅಧಿಭೋಗ ಪ್ರಮಾಣಪತ್ರ ಶುಲ್ಕಗಳು ಹಾಗೂ ಮಂಜೂರಾದ ನಕ್ಷೆಯ ಸಂಬಂಧ ನಿರ್ಮಾಣದಲ್ಲಿ ಉಲ್ಲಂಘನೆ ಅಥವಾ ಬದಲಾವಣೆಗೆ ಶೇ.5 ದಂಡ ವಸೂಲಿ ಮಾಡಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕಾಯ್ದೆ ಬಲ ಲಭಿಸಿದೆ. ವಿಧಾನಮಂಡಲ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಅಂಗೀಕರಿಸಿ, ಶಿಫಾರಸ್ಸು ಮಾಡಿದ್ದ "ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನು ಅಧಿನಿಯಮಕ್ಕೂ ರಾಜ್ಯಪಾಲರು ಅಸ್ತು ಎಂದಿದ್ದು, ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ.

ಕೈಗಾರಿಕೆ ಪದ ಸೇರ್ಪಡೆ: ನಗರ–ಪಟ್ಟಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಗೆ ವಿಧಿಸುವ ತೆರಿಗೆ ಸಂದರ್ಭದಲ್ಲಿ ವಿಭಿನ್ನ ಮಾನದಂಡ ಅನುಸರಿಸುತ್ತಿವೆ. ವಾಣಿಜ್ಯ ಕಟ್ಟಡಗಳಿಗೆ ವಿಧಿಸುವ ತೆರಿಗೆ ಮಾನದಂಡವನ್ನು ಕೈಗಾರಿಕೆ ಕಟ್ಟಡಗಳಿಗೂ ಅನ್ವಯವಾಗಲಿದೆ. ವಾಣಿಜ್ಯ ಎಂಬ ಪದದ ತರುವಾಯ ಅಥವಾ ಕೈಗಾರಿಕೆ ಎಂಬ ಪದವನ್ನು ಸೇರಿಸಿದ ನಗರ ಪಾಲಿಕೆಗಳ, ಕೆಲವು ಇತರ ಕಾನೂನು – ಅಧಿನಿಯಮಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದು, ರಾಜ್ಯ ಪತ್ರ ಪ್ರಕಟಿಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ: 14.01.2022

10. ಸಚಿವಾಲಯಕ್ಕೆ ಆರ್ಥಿಕ ಸ್ವಾಯತ್ತೆ ನೀಡಿ

ವಿಧಾನ ಪರಿಷತ್ ಸಚಿವಾಲಯಕ್ಕೆ ಆರ್ಥಿಕ ಸ್ವಾಯತ್ತತೆ ನೀಡಲು ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಬಸವರಾಜ ಹೊರಟ್ಟಿ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿಧಾನ ಪರಿಷತ್ ಕಾರ್ಯಾಲಯದಲ್ಲಿ ಅಗತ್ಯ ಮೂಲ ಸೌಕರ್ಯ ಕೊರತೆ, ಹುದ್ದೆಗಳ ಭರ್ತಿ ಮುಂತಾದ ಹಲವು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಪ್ರತಿಯೊಂದಕ್ಕೂ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕಳುಹಿಸಿ, ಇಲಾಖೆಯ ತೀರ್ಮಾನವನ್ನು ಅವಲಂಬಿಸಬೇಕಾಗಿದೆ. ಅದರ ಬದಲಾಗಿ ಇತ್ತೀಚೆಗೆ ಸಿಮ್ಲಾದಲ್ಲಿ ನಡೆದಿದ್ದ ಅಖಿಲ ಭಾರತೀಯ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಮೇಲ್ಮನೆಗೆ ಆರ್ಥಿಕ ಸ್ವಾಯತ್ತತೆ ನೀಡುವ ಬೇಡಿಕೆ ಮಂಡಿಸಿದ್ದು, ಇದನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ಪರಿಷತ್ತಿನ ಶಾಖೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲಿ ಸ್ಥಳದ ಕೊರತೆಯಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ಉಸಿರುಗಟ್ಟುವ ವಾತಾವರಣದಲ್ಲಿ ಕೆಲಸ ಮಾಡುತ್ತಿರುವುದು ಕಂಡುಬಂತು. ಅದೇ ರೀತಿ ಸಚಿವಾಲಯದಲ್ಲಿ 71 ಹುದ್ದೆಗಳು ಖಾಲಿ ಇರುವುದರಿಂದ ಇತರರಿಗೆ ಕೆಲಸದ ಒತ್ತಡ ಹೆಚ್ಚಾಗಿರುವುದು ತಿಳಿದು ಬಂತು. ಈ ಸಮಸ್ಯೆ ಬಗೆಹರಿಸಲು ಸರಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ವಿಧಾನಸೌಧದ ನೆಲಮಹಡಿಯಲ್ಲಿರುವ ಮೇಲ್ಮನೆಯ ವರದಿಗಾರರ ಶಾಖೆಯಲ್ಲಿ 36 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದು, ಇಕ್ಕಟ್ಟಿನ ಜಾಗದಲ್ಲಿ ಕೆಲಸ ಮಾಡುವಂತಾಗಿದೆ. ಕಡತಗಳನ್ನು ಇಟ್ಟುಕೊಳ್ಳಲೂ ಜಾಗವಿಲ್ಲ. ಅಟ್ಟಣಿಗೆಯ ರೀತಿಯ ಜಾಗದಲ್ಲಿ ಕುಳಿತು ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಅಂತರವಿಲ್ಲದೆ ಕರ್ತವ್ಯ ನಿರ್ವಹಿಸುತ್ತಿದ್ದು, ಶುದ್ಧ ಗಾಳಿ, ಬೆಳಕಿನ ವ್ಯವಸ್ಥೆಯೂ ಇಲ್ಲ. ಕೆಲವೆಡೆ ಹಳೆಯ ವಿದ್ಯುತ್ ಸಂಪರ್ಕದಿಂದಾಗಿ ಆಗಾಗ ಶಾಕ್ ಹೊಡೆದಂತೆಯೂ ಆಗುತ್ತಿರುವುದು ಗಮನಕ್ಕೆ ಬಂದಿದೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಅಪಾಯವಿದೆ. ಎಲ್ಲ ಕಾರಣದಿಂದ ಹೆಚ್ಚುವರಿ ಕೊಠಡಿಗಳನ್ನು ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಾಲಯದಲ್ಲಿ 365 ಹುದ್ದೆಗಳಿದ್ದು, 294 ಹುದ್ದೆಗಳು ಭರ್ತಿಯಾಗಿವೆ. ಇನ್ನೂ 71 ಹುದ್ದೆಗಳು ಖಾಲಿ ಇವೆ. ಸಿಬ್ಬಂದಿ, ನೌಕರರ ನೇಮಕಕ್ಕೆ ಸ್ವಾಯತ್ತತೆ ಇದೆಯಾದರೂ ಇದಕ್ಕೆ ಅಗತ್ಯ ಹಣಕಾಸಿನ ಅನುಮೋದನೆ ಪಡೆಯಲು ಪ್ರತಿಯೊಂದಕ್ಕೂ ಆರ್ಥಿಕ ಇಲಾಖೆ ಮೇಲೆ ಅವಲಂಬಿತರಾಗಬೇಕಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಂಚೆ ಚೀಟಿ ಬಿಡುಗಡೆಯ ಅಪೇಕ್ಷೆ: ವಿಧಾನ ಪರಿಷತ್ತಿಗೆ 115 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಪರಿಷತ್ತಿನ ಗೌರವಾರ್ಥ ಅಂಚೆಚೀಟಿ ಹೊರತರಬೇಕು ಎಂಬ ಅಪೇಕ್ಷೆ ಹೊಂದಿರುವುದಾಗಿ ಹೊರಟ್ಟಿ ಹೇಳಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ: 14.01.2022

ದಿನಾಂಕ: **13.01.2022** ರಂದು ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ವಿಧಾನಪರಿಷತ್ತಿನ ಸಚಿವಾಲಯದ ಕಚೇರಿಗಳಿಗೆ ಭೇಟಿ ನೀಡಿ ಸಿಬ್ಬಂದಿಗಳ ಮೂಲ ಸೌಕರ್ಯಗಳ ಬಗ್ಗೆ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಒಳಾಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ರಜನೀಶ್ ಗೋಯಲ್ ರವರು ವಿಧಾನ ಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಕೆ.ಆರ್. ಮಹಾಲಕ್ಷ್ಮೀ, ಸಭಾಪತಿಯವರ ಆಪ್ತ ಕಾರ್ಯದರ್ಶಿ ಡಾ. ಜಿ. ವಿಶ್ವನಾಥ್, ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ ವಾಳ್ವೇಕರ್ ಮತ್ತು ಸಚಿವಾಲಯದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

11. ಮೇಲ್ಮನೆಗೆ ಪ್ರಬುದ್ಧರ ನಿರೀಕ್ಷೆ

ಇತ್ತೀಚೆಗೆ ಪರಿಷತ್ತಿಗೆ ನಾನಾ ಕ್ಷೇತ್ರಗಳಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದವರು ಪರಿಷತ್ತಿಗೆ ಬರುವುದು ತೀರ ಕಡಿಮೆಯಾಗಿದ್ದು, ಇದರಿಂದ ಪರಿಷತ್ತಿನ ಘನತೆಗೆ ಕುಂದು ಉಂಟಾಗುತ್ತಿರುವುದನ್ನು ತಪ್ಪಿಸಲು ರಾಜಕೀಯ ಪಕ್ಷಗಳು ಪ್ರಬುದ್ಧರು ಮತ್ತು ಸಾಮಾಜಿಕ ಬದ್ಧತೆಯುಳ್ಳವರನ್ನು ನಾಮಕರಣ ಮಾಡಬೇಕು ಎಂದು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಿವಿ ಮಾತು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಷತ್ ಸಮಾಜದ ಆಗುಹೋಗುಗಳ ಮೇಲೆ ಬೌದ್ಧಿಕವಾಗಿ ಬೆಳಕು ಚೆಲ್ಲುವ ಮೂಲಕ ಕಲೆ, ವಿಜ್ಞಾನ, ಸಾಹಿತ್ಯ, ಸಂಗೀತ, ಪತ್ರಿಕೋದ್ಯಮ, ನಾಟಕ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ನಾಮಕರಣ ಮಾಡಿದರೆ ಗೌರವ ಹೆಚ್ಚುತ್ತದೆ. ಇಲ್ಲದಿದ್ದರ ಪರಿಷತ್ತು ರಾಜಕೀಯ ವ್ಯಕ್ತಿಗಳ ಪುನರ್ವಸತಿ ಕೇಂದ್ರ ಎಂಬ ಹಣೆಪಟ್ಟಿ ಮುಂದುವರಿಯುತ್ತದೆ ಎಂದು ವಿಷಾದಿಸಿದರು.

ಉತ್ತಮರು ಬಾರದಿದ್ದರೇ ಚಿಂತಕರ ಚಾವಡಿ ಎಂಬ ಹೆಸರಿಗೂ ಧಕ್ಕೆ ಆಗುತ್ತದೆ. ಈಗ ಪರಿಷತ್ತಿನಿಂದ ನಿರ್ಗಮಿಸಿದ 19 ಸದಸ್ಯರ ಪೈಕಿ 11 ಮಂದಿ ಮತ್ತೆ ಸ್ಥಳೀಯ ಸಂಸ್ಥೆ, ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ಹೇಳಿದರು. ಇದಕ್ಕೆ ಕಾರಣ ಚುನಾವಣೆಗಳು ದುಬಾರಿ ಆಗಿರುವುದು. ಜನರು ಕೂಡ ಉತ್ತಮರನ್ನು ಆಯ್ಕೆ ಮಾಡಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಪರಿಷತ್ತಿನಲ್ಲಿ 365 ಅಧಿಕಾರಿಗಳು, ನೌಕರರು ಇದ್ದು, ಅವರಿಗೆ ಕೆಲಸ ಮಾಡಲು ಸ್ಥಳಾವಕಾಶದ ಕೊರತೆ ಇದೆ. ಇನ್ನು 5 ಕೊಠಡಿಗಳ ಅವಶ್ಯಕತೆ ಇದೆ. ಇಕ್ಕಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಪರಿಷತ್ತಿನ ಸಚಿವಾಲಯದಲ್ಲಿ ಒಟ್ಟು 294 ನೌಕರರು ಇರಬೇಕು. ಈಗ 165 ಮಂದಿ ಇದ್ದಾರೆ. ಇನ್ನೂ 56 ನೌಕರರ ಕೊರತೆ ಇದೆ. ಇದನ್ನು ಕೂಡಲೇ ನೇಮಕಾತಿ ಮಾಡಲು ಹಣಕಾಸು ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 14.01.2022

12. ಮೇಲ್ಮನೆ ಹೊಸ ಸದಸ್ಯರಿಗೆ ಓರಿಯಂಟೇಶನ್ ಕ್ಲಾಸ್ : ಹೊರಟ್ಟಿ

ವಿಧಾನ ಪರಿಷತ್ತಿನ ನೂತನ ಸದಸ್ಯರಿಗೆ 2 ದಿನ 'ಓರಿಯಂಟೇಶನ್' ಶಿಬಿರ ನಡೆಸಲು ಚಿಂತನೆ ನಡೆಸಲಾಗುತ್ತಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ಚಿಂತಕರ ಚಾವಡಿ ಎನಿಸಿರುವ ಪರಿಷತ್ ಘನತೆ, ಗೌರವ ಹೆಚ್ಚಿಸಬೇಕಾಗಿದೆ. ಚುನಾವಣೆಯಲ್ಲಿ ಸೋತವರಿಗೆ ಪರಿಷತ್ ಆಶ್ರಯ ತಾಣವಾಗಬಾರದು. ಪರಿಷತ್‌ಗೆ ಪ್ರಬುದ್ಧರ ಕಳಿಸಲು ಎಲ್ಲ ರಾಜಕೀಯ ಪಕ್ಷಗಳು ಮುಂದಾಗಬೇಕು ಎಂದರು. ತಾವು ಸಭಾಪತಿಯಾದ ನಂತರ ಅಧಿವೇಶನದಲ್ಲಿ ಅಜೆಂಡಾ ಪ್ರಕಾರ ಎಲ್ಲ ಕಲಾಪ ಪೂರ್ಣವಾಗಿ ನಡೆಸಿದ್ದೇನೆ ಎಂದರು. ಶಾಸಕರ ಭವನದಲ್ಲಿ ಪಂಚಕರ್ಮ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಕಾಯಂ ವೈದ್ಯರು, ಸಿಬ್ಬಂದಿ ಇಲ್ಲ, ಪರಿಷತ್ತಿನಿಂದಲೇ 2 ವೈದ್ಯರು, 3 ಫಿಜಿಯೋಥೆರಪಿಸ್ಟ್ ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ: 14.01.2022

13. ಯಕ್ಷಗಾನ ಮ್ಯೂಸಿಯಂ ಸ್ಥಾಪನೆ ಯತ್ನ

ಯಕ್ಷಗಾನದ ವಿಶ್ವಕೋಶ ರಚನೆ, ಉತ್ತಮ ಲೈಬ್ರರಿ ಮತ್ತು ಮ್ಯೂಸಿಯಂ ಸ್ಥಾಪನೆಗೆ ಪ್ರಯತ್ನ ನಡೆಸುವುದಾಗಿ ಯಕ್ಷಗಾನ ಅಕಾಡೆಮಿ ನೂತನ ಅಧ್ಯಕ್ಷ ಡಾ.ಜಿ.ಎಲ್.ಹೆಗಡೆ ಕುಮಟಾ ಹೇಳಿದ್ದಾರೆ.

ಜನವರಿ 14 ರಂದು ಅಧ್ಯಕ್ಷರಾಗಿ ಬೆಂಗಳೂರಿನಲ್ಲಿ ಅಧಿಕಾರ ವಹಿಸಿಕೊಳ್ಳಲಿರುವ ಅವರು ನಗರದಲ್ಲಿ ಗುರುವಾರ ವಿಧಾನಸಭಾಧ್ಯಕ್ಷರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಯಕ್ಷಗಾನಕ್ಕೆ ಸಂಬಂಧಿಸಿದ ಒಳ್ಳೆಯ ಲೈಬ್ರರಿ ಅಗತ್ಯವಿದೆ. ಹಾಗೇ ಬೆಂಗಳೂರಿನಂತಹ ನಗರದಲ್ಲಿ ಮ್ಯೂಸಿಯಂ ಆಗಬೇಕು ಎಂದು ಅವರು ಹೇಳಿದರು. ಈ ನಿಟ್ಟಿನಲ್ಲಿ ಹಿಂದಿನ ಅಧ್ಯಕ್ಷರಾಗಿದ್ದ ಪ್ರೊ. ಎಂ.ಎಂ.ಹೆಗಡೆ ಅವರು ಆರಂಭಿಸಿದ ಕೆಲಸವನ್ನು ಮುಂದುವರಿಸುವುದಾಗಿ ಹೇಳಿದರು. ಯಕ್ಷಗಾನ ಅಕಾಡೆಮಿಯ ಮೂಲಕ ಹಲವಾರು ಕೆಲಸಗಳು ಆಗಬೇಕಾಗಿದೆ. ಯಕ್ಷಗಾನದ ನಿರಂತರ ಪ್ರದರ್ಶನ, ಹೊಸ ಪ್ರದೇಶಕ್ಕೆ ವಿಸ್ತರಣೆಯ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದರು.

"ಕೊರೊನಾದಂತಹ ಸಂದಿಗ್ಧ ಸಂದರ್ಭದಲ್ಲಿ ನಿರಂತರ ಪ್ರದರ್ಶನವಾದರೆ ಕಲಾವಿದರ ಬದುಕಿಗೆ ಆಸರೆಯಾಗಲಿದೆ. ಹಲವಾರು ಮೇಳಗಳು ಸಾವಿರಾರು ಕಲಾವಿದರಿಗೆ ಕೆಲಸ ಕೊಟ್ಟಿದೆ. ಎಲ್ಲ ಕಲಾವಿದರಿಗೆ ಅನುಕೂಲವಾಗುವ ವ್ಯವಸ್ಥೆ ಆಗಬೇಕಿದೆ. ಈ ಬಗ್ಗೆ ಸರಕಾರದಲ್ಲಿ ಪ್ರಸ್ತಾಪ ಮಾಡುತ್ತೇನೆ," ಎಂದರು.

ನೂತನ ಅಧ್ಯಕ್ಷರನ್ನು ಗೌರವಿಸಿದ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಮಾತನಾಡಿ, 'ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಯಕ್ಷಗಾನ ಅಕಾಡೆಮಿಯನ್ನು ಪ್ರತ್ಯೇಕವಾಗಿ ರೂಪಿಸಲಾಯಿತು. ಹಿಂದಿನ ಅಧ್ಯಕ್ಷರಾದ ಪ್ರೊ.ಎಂ.ಎ.ಹೆಗಡೆ ಅವರು ಉತ್ತಮ ಕೆಲಸ ಮಾಡಿದ್ದರು. ಇದೀಗ ಕವಿ, ಸಂಶೋಧಕ, ಕಲಾವಿದ, ವಿದ್ವಾನ್ ಆಗಿರುವ ಡಾ.ಜಿ.ಎಲ್.ಹೆಗಡೆ ಕುಮಟಾ ಅವರು ಅಧ್ಯಕ್ಷರಾಗಿರುವುದು ಖುಷಿ ತಂದಿದೆ. ಅಕಾಡೆಮಿ ನಡೆಸುವ ಒಳ್ಳೆಯ ಕೆಲಸಕ್ಕೆ ಜೊತೆಯಲ್ಲಿ ಇರುತ್ತೇನೆ. ಕನ್ನಡ ಸಂಸ್ಕೃತಿ ಇಲಾಖೆಯನ್ನು ಸಂಪರ್ಕಿಸಿ ಎಲ್ಲ ಸಹಕಾರ ಕೊಡಿಸುತ್ತೇನೆ," ಎಂದು ಭರವಸೆ ನೀಡಿದರು.

ಆಧಾರ: ವಿಜಯಕರ್ನಾಟಕ, ದಿನಾಂಕ: 14.01.2022

14. ಶಾಲಾ ಕಾಲೇಜುಗಳನ್ನು ಮುಚ್ಚಬೇಡಿ

ಕಳೆದ ಒಂದು ಮತ್ತು ಎರಡನೇ ಅಲೆಯಲ್ಲಿ 3 ಕೋವಿಡ್ ಅಬ್ಬರ ಹೆಚ್ಚಳವಾಗಿತ್ತು. ಈಗ ಸೋಂಕು ಅಷ್ಟು ಆತಂಕಕಾರಿಯಾಗಿಲ್ಲ. ಇದರಿಂದ ಶಾಲಾ – ಕಾಲೇಜು ಮುಚ್ಚಬೇಡಿ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಶಾಲೆಗಳಿಗೆ ಬಿಡುವು ಕೊಡುವುದು ಬೇಡ. ಬಿಡುವು ಕೊಟ್ಟರೆ ಮಕ್ಕಳ ಶೈಕ್ಷಣಿಕ ಜೀವನ ಹಾಳಾಗುತ್ತದೆ. ಅಂತರವನ್ನು ಕಾಪಾಡಿಕೊಂಡು ಶಾಲೆ ನಡೆಸಿ, ನಿಯಮ ಪಾಲಿಸಿ ಮಕ್ಕಳಿಗೆ ಪಾಠ ಮಾಡುವುದು ಉತ್ತಮ ಎಂದರು.

ಇದೇ ರೀತಿ ಶಾಲೆಗೆ ರಜೆ ಕೊಟ್ಟರೆ ಮುಂದೆ ಕಷ್ಟವಾಗುತ್ತದೆ. ಮಕ್ಕಳು ಮತ್ತಷ್ಟು ಹಾಳಾಗುತ್ತಾರೆ. 1 ರಿಂದ 5ರವರೆಗೆ ಶಾಲೆ ಬಂದ್ ಮಾಡಿ. 6 ರಿಂದ ಕಾಲೇಜು ಹಂತದ ಎಲ್ಲಾ ತರಗತಿಗಳನ್ನು ನಡೆಸುವಂತೆ ಅವರು ಒತ್ತಾಯಿಸಿದ್ದಾರೆ.

ಮಕ್ಕಳು ಶಾಲೆಗೆ ಹೋಗದಿದ್ದರೆ ಸಮಸ್ಯೆ ಆಗಲಿದೆ. ಮಕ್ಕಳು ಕಲಿಕೆಯಿಂದ ಹಿಂದೆ ಬೀಳಲಿದ್ದಾರೆ. ಪೋಷಕರು, ಶಾಲೆಗಳು ಕಾಳಜಿ ಮಾಡಬೇಕು. ಮಕ್ಕಳಿಗೆ ಶಿಕ್ಷಣ ಮುಂದುವರಿಸಬೇಕು ಎಂದರು. ಶಾಲೆಗಳ ವಿಚಾರದಲ್ಲಿ ಸ್ಪಷ್ಟ ಸರ್ಕಾರವೇ ನಿರ್ಧಾರ ತೆಗೆದುಕೊಳ್ಳಬೇಕು. ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುವುದು ಸರಿಯಲ್ಲ. ಒಂದೊಂದು ಜಿಲ್ಲೆಗೆ ಒಂದು ರೀತಿ ಬೇಡ, ತೆಗೆದುಕೊಂಡರೆ ಒಂದೇ ತೀರ್ಮಾನ ಇರಬೇಕು. ಗುಡಿಯಲ್ಲಿ ಮರದ ಕೆಳಗೆ ಶಿಕ್ಷಣ ನೀಡುವುದು ಸರಿಯಲ್ಲ ಎಂದರು. ಆನ್‌ಲೈನ್ ಶಿಕ್ಷಣ ನಗರ ಪ್ರದೇಶಕ್ಕೆ ಮಾತ್ರ ಅನ್ವಯ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸಾಧ್ಯವಾಗುತ್ತಿಲ್ಲ. ನೆಟ್‌ವರ್ಕ್, ವಿದ್ಯುತ್ ಸಮಸ್ಯೆ ಜೊತೆಗೆ ಕೆಲವರಲ್ಲಿ ಮೊಬೈಲ್ ಇರಲ್ಲ. ಅಂತಹ ಮಕ್ಕಳಿಗೆ ಶಿಕ್ಷಣ ನೀಡುವುದು

ಕಷ್ಟವಾಗುತ್ತದೆ. ಶ್ರೀಮಂತರ ಮಕ್ಕಳು ಕಲಿಯುತ್ತಾರೆ. ಬಡಮಕ್ಕಳು ಶಿಕ್ಷಣದಿಂದ ಹಿಂದೆ ಬೀಳುತ್ತಾರೆ ಎಂದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 16.01.2022

15.ವಿಧಾನಸೌಧದಲ್ಲಿ ಕಾರ್ಯಾಂಗ ಠಿಕಾಣಿಗೆ ಹೊರಟ್ಟಿ ಆಕ್ಷೇಪ

ಶಾಸಕಾಂಗಕ್ಕಾಗಿ ಕಟ್ಟಲಾಗಿರುವ ವಿಧಾನಸೌಧದಲ್ಲಿ ಕಾರ್ಯಾಂಗ 'ಠಿಕಾಣಿ' ಹೂಡಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ವಿಧಾನಸೌಧ ಇರುವುದೇ ಶಾಸಕಾಂಗಕ್ಕಾಗಿ. ಆದರೆ, ಅಲ್ಲಿ ಕೊಠಡಿ ಕೊಡಿ ಎಂದು ಕೇಳುವ ಪರಿಸ್ಥಿತಿ ಬಂದಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿಧಾನಸೌಧ ಕಟ್ಟಿರುವುದೇ ಶಾಸಕಾಂಗಕ್ಕೆ ವಿಧಾನಸೌಧದಲ್ಲಿ ಕೊಠಡಿ ಕೊಡಿ ಎಂದು ನಾವು ಆರ್ಡರ್ ಮಾಡಬೇಕು. ಆದರೆ, ನಮಗೆ ಕೊಠಡಿ ಕೊಡಿ ಅಂತ ಕೇಳುವ ಪರಿಸ್ಥಿತಿ ಇದೆ, ಮನವಿ ಮಾಡುವ ಪರಿಸ್ಥಿತಿ ಬಂದಿದೆ. ಆರ್ಡರ್ ಮಾಡಬೇಕಾದ ನಾವು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಬೇಡುವ ಪರಿಸ್ಥಿತಿ ಬಂದಿದೆ ಎಂದರು. ಚಿಕ್ಕ ಕೊಠಡಿಯಲ್ಲಿ 30 ಜನ ಸಿಬ್ಬಂದಿ ಕೂರಬೇಕಾಗಿದೆ. ಕೋವಿಡ್‌ನಂತಹ ಈ ಸಂದರ್ಭದಲ್ಲಿ ಅದು ಕಷ್ಟ ಮತ್ತು ಅಪಾಯ. ಕೊಠಡಿ ಕೊಡುವಂತೆ ಡಿಪಿಎಆರ್ ಕಾರ್ಯದರ್ಶಿಗೆ ಪತ್ರ ಬರೆದಿದ್ದೇನೆ. ಏನು ಮಾಡುತ್ತಾರೆ ನೋಡೋಣ ಎಂದು ಹೇಳಿದರು.

ಶಾಲೆ ಮುಚ್ಚಬೇಡಿ: ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಶಾಲೆ ನಡೆಸುವ ಮತ್ತು ಮಕ್ಕಳ ಕಲಿಕೆ ಮುಂದುವರಿಸುವ ವಿಚಾರದಲ್ಲಿ ಪೋಷಕರು ಹಾಗೂ ಮಕ್ಕಳಲ್ಲಿನ ಆತಂಕ–ಗೊಂದಲಗಳನ್ನು ದೂರ ಮಾಡಿ ಇಡೀ ರಾಜ್ಯದಲ್ಲಿ ಶಾಲೆಗಳನ್ನು ನಡೆಸುವ ಬಗ್ಗೆ ನಿರ್ಧಾರ ಕೈಗೊಳ್ಳುವಂತೆ ಬಸವರಾಜ ಹೊರಟ್ಟಿ ಸರ್ಕಾರವನ್ನು ಆಗ್ರಹಿಸಿದ್ದಾರೆ. ಶಾಲೆಗಳ ವಿಚಾರದಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿರುವುದು ಸರಿಯಲ್ಲ. ಒಂದು ಜಿಲ್ಲೆಯಲ್ಲಿ ಶಾಲೆಗಳು ನಡೆಸುವುದು, ಮತ್ತೊಂದು ಜಿಲ್ಲೆಯಲ್ಲಿ ಶಾಲೆ ಮುಚ್ಚುವುದು ಮಾಡಿದರೆ ಗೊಂದಲ ಆಗುತ್ತದೆ. ಆದ್ದರಿಂದ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಎಂದರು.

ಆಧಾರ: ವಿಜಯವಾಣಿ, ದಿನಾಂಕ: 16.01.2022

16.ಅನಿಲ್‌ಕುಮಾರ್ ಪ್ರಮಾಣ ವಚನ

ರಾಜ್ಯ ವಿಧಾನಪರಿಷತ್‌ಗೆ ಕೋಲಾರ, ಚಿಕ್ಕಬಳ್ಳಾಪುರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿದ್ದ ಕಾಂಗ್ರೆಸ್ಸಿನ ಅನಿಲ್ ಕುಮಾರ್ ಪ್ರಮಾಣ ವಚನ ಸ್ವೀಕರಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಶುಭಕೋರಿದರು. ಮಾಜಿ ಸ್ಪೀಕರ್ ರಮೇಶ್ ಕುಮಾರ್, ಮಾಜಿ ಸಚಿವ ಶ್ರೀನಿವಾಸಗೌಡ, ಶಾಸಕ ನಂಜೇಗೌಡ ಸೇರಿ ಎರಡೂ ಜಿಲ್ಲೆಗಳ ಕಾಂಗ್ರೆಸ್ ಪಕ್ಷದ ಮುಖಂಡರು ಈ ಸಂದರ್ಭದಲ್ಲಿ ಶುಭ ಹಾರೈಸಿದರು. ಪರಿಷತ್‌ಗೆ ನೂತನವಾಗಿ ಆಯ್ಕೆಯಾಗಿದ್ದ ಸದಸ್ಯರು ವಿಧಾನಸೌಧ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಇತ್ತೀಚೆಗೆ ಪ್ರಮಾಣ ವಚನ ಸ್ವೀಕರಿಸಿದ್ದರು. ಆಗ, ಅನಿಲ್‌ಕುಮಾರ್ ಅವರು ವೈಯಕ್ತಿಕ ಕಾರಣದಿಂದ ಬಂದಿರಲಿಲ್ಲ,

ಆಧಾರ: ಉದಯವಾಣಿ, ದಿನಾಂಕ: 18.01.2022

17.ಕ್ಲಬ್‌ಗಳ ಪರಿಶೀಲನೆಗೆ ಹೊರಟ ಸದನ ಸಮಿತಿ

ಮೈಮರೆತ ಕ್ಲಬ್‌ಗಳ ಚಳಿ ಬಿಡಿಸಲು ಜನಪ್ರತಿನಿಧಿಗಳ ಶಾಸನಬದ್ಧ ಸಮಿತಿ ರಾಜ್ಯ ಪ್ರವಾಸ ಆರಂಭಿಸುತ್ತಿದೆ. ರಾಜ್ಯದಲ್ಲಿರುವ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿನ ಕ್ಲಬ್‌ಗಳ ಕಾರ್ಯವೈಖರಿ ಚಟುವಟಿಕೆಗೆ ರಚಿಸಲಾಗಿರುವ ವಿಶೇಷ ಸದನ ಸಮಿತಿ ಎನ್. ರವಿಕುಮಾರ್ ನೇತೃತ್ವದಲ್ಲಿ ರಚನೆಗೊಂಡಿದ್ದು, ಚಟುವಟಿಕೆ ಆರಂಭಿಸಿದೆ. 24ರ ಬಳಿಕ ವಾರದಲ್ಲಿ ಮೂರು ಕ್ಲಬ್‌ಗಳಿಗೆ ವಿಶೇಷ ಸಮಿತಿ ಭೇಟಿ ಕೊಟ್ಟು ಪರಿಶೀಲನೆ ನಡೆಸಲಿದೆ. ಬಳಿಕ ಸರ್ಕಾರಕ್ಕೆ ಕ್ರಮಕೈಗೊಳ್ಳಲು ಶಿಫಾರಸ್ಸು ವರದಿ ಸಲ್ಲಿಸಲಿದೆ. ಕ್ಲಬ್‌ಗಳ ಬಗ್ಗೆ ಸಾಕಷ್ಟು ದೂರುಗಳಿವೆ. ಬೈಲಾದಲ್ಲಿ ಇರುವಂತೆ ಅವು ನಡೆಯುತ್ತಿಲ್ಲ. ಉದ್ದೇಶವೇ ಬೇರೆ, ಅಲ್ಲಿ ನಡೆಯುತ್ತಿರುವ ಚಟುವಟಿಕೆಗಳೇ ಬೇರೆಯಾಗಿದೆ. ಹೀಗಾಗಿ ಪರಿಶೀಲನೆ ನಡೆಸಲು ಉದ್ದೇಶಿಸಲಾಗಿದೆ ಎಂದು ರವಿಕುಮಾರ್ ವಿಜಯವಾಣಿಗೆ ತಿಳಿಸಿದರು. ರಾಜ್ಯದಲ್ಲಿ 800 ಕ್ಕೂ ಹೆಚ್ಚು ಕ್ಲಬ್‌ಗಳಿವೆ. ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಮಂಗಳೂರು, ಕಲಬುರಗಿ, ರಾಯಚೂರು ಸೇರಿ ಕ್ಲಬ್ ಹೆಚ್ಚಿರುವ ಕಡೆ, ದೂರು ಬಂದಿರುವ ಕಡೆ ಸಮಿತಿ ಪ್ರವಾಸ ಮಾಡಿ ಪರಿಶೀಲನೆ ನಡೆಸಲಿದೆ ಎಂದು ಹೇಳಿದರು. ಪರಿಷತ್ ಸದಸ್ಯರಾದ ತೇಜಸ್ವಿನಿ ಗೌಡ, ಕೆ.ವಿ.ನಾರಾಯಣಸ್ವಾಮಿ, ಕೆ.ಗೋವಿಂದರಾಜು, ಪ್ರಕಾಶ್ ರಾಥೋಡ್, ಎಸ್.ಎಲ್. ಭೋಜೇಗೌಡ, ಕೆ.ಪಿ.ನಂಜುಂಡಿ, ಯು.ಬಿ. ವೆಂಕಟೇಶ್, ದಿನೇಶ್ ಗೂಳಿಗೌಡ ಸಮಿತಿ ಸದಸ್ಯರಾಗಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ: 19.01.2022

18.ಕ್ರಿಕೆಟ್ ಆಡಿದ ಸ್ಪೀಕರ್ ಕಾಗೇರಿ

ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ತಮ್ಮ ಊರು ಕುಳವೆಯಲ್ಲಿ ಗ್ರಾಮಸ್ಥರೊಂದಿಗೆ ಕ್ರಿಕೆಟ್ ಆಡಿದ್ದಾರೆ. ಯುವಕರೊಂದಿಗೆ ಬೆರೆತು ಸ್ಪೀಕರ್ ಕ್ರಿಕೆಟ್ ಆಟ ಆಡಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕಳೆದ ಕೆಲ ದಿನಗಳಿಂದ ಶಿರಸಿ ತಾಲೂಕಿನ ಕಾಗೇರಿಯಲ್ಲೇ ಇರುವ ಸ್ಪೀಕರ್ ಇತ್ತೀಚೆಗಷ್ಟೇ ಬರೂರು ಗ್ರಾಮದ ಲಕ್ಷ್ಮೀ ನರಸಿಂಹ ದೇವಸ್ಥಾನದ ಪ್ರತಿಷ್ಠಾಪನಾ ಮಹೋತ್ಸವದ ಪೂರ್ವ ತಯಾರಿಯ ಶ್ರಮದಾನದಲ್ಲೂ ಭಾಗಿಯಾಗಿದ್ದರು.

ಆಧಾರ: ಕನ್ನಡಪ್ರಭ, ದಿನಾಂಕ: 19.01.2022

19.ಅನುಷ್ಠಾನಕ್ಕೆ ಬಾರದ ಸಮಿತಿ ವರದಿಗಳು

ಸಾರ್ವಜನಿಕರ ಪ್ರಯೋಜನಕ್ಕಿರುವ ಸರ್ಕಾರ, ವಿಚಾರಣೆ, ವಿಧಾನಮಂಡಲದ ಸಮಿತಿಗಳು ಒಳಗೊಂಡು ವ್ಯವಸ್ಥೆಯೇ ಅರ್ಥ ಕಳೆದುಕೊಂಡಿದೆ ಎಂದು ಬಿಜೆಪಿ ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಬೇಸರ ವ್ಯಕ್ತಪಡಿಸಿದ್ದಾರೆ.

ಅವ್ಯವಹಾರ, ಅಧಿಕಾರ ದುರ್ಬಳಕೆಯನ್ನು ವಿಧಾನ ಮಂಡಲದ ವಿವಿಧ ಸಮಿತಿಗಳ ಸಭೆಯಲ್ಲಿ ಪತ್ತೆ ಹಚ್ಚಿ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುತ್ತದೆ. ಆದರೆ ಯಾವುದೇ ಸಮಿತಿ ವರದಿಯನ್ನೂ ಅಧಿಕಾರಿಗಳು ಅನುಷ್ಠಾನಕ್ಕೆ ತರುವುದಿಲ್ಲ. ಭಾಗಿಯಾದ ಐಎಎಸ್, ಐಎಫ್‌ಎಸ್ ಹಾಗೂ ಐಪಿಎಸ್ ಅಧಿಕಾರಿಗಳ ವಿರುದ್ಧ ಕ್ರಮಕೈಗೊಂಡ ನಿದರ್ಶನಗಳಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜನರ ಜೀವ–ಜೀವನ ರಕ್ಷಣೆ, ಕರೊನಾ ಸೋಂಕು ನಿಯಂತ್ರಣಕ್ಕಾಗಿ ಜಾರಿಗೆ ತಂದ ಕಟ್ಟುನಿಟ್ಟಿನ ನಿಯಮಗಳು ಹಾಗೂ ಮಾರ್ಗಸೂಚಿಯನ್ನು ಜನಪ್ರತಿನಿಧಿಗಳೇ ಉಲ್ಲಂಘಿಸುತ್ತಿದ್ದಾರೆ ಎಂದು ದೂರಿದ್ದಾರೆ. ಸರ್ಕಾರ ತೆಗೆದುಕೊಂಡ ನಿರ್ಧಾರಗಳ ಅನುಷ್ಠಾನಕ್ಕೆ ಸಹಕರಿಸಬೇಕಾದವರೇ ಕಡೆಗಣಿಸಿದರೆ, ಈ ನಿಯಮ ಪಾಲಿಸಿ ಎಂದು ಜನಸಾಮಾನ್ಯರಿಗೆ ಹೇಳುವುದು ಹೇಗೆ? ನಿಯಮಗಳ ಪಾಲನೆಯಲ್ಲಿ

ಜನಪ್ರತಿನಿಧಿಗಳು ಮೇಲ್ಪಂಕ್ತಿ ಹಾಕಿಕೊಟ್ಟು, ಸರ್ಕಾರದ ಉದ್ದೇಶ ಫಲಪ್ರದಗೊಳಿಸಬೇಕು ಎಂದು ವಿಶ್ವನಾಥ್ ಸಲಹೆ ನೀಡಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ: 20.01.2022

20. ಅಡಕೆ ಕೊನೆ ಹಗ್ಗ ಹಿಡಿದ ಕಾಗೇರಿ

ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ಕ್ಷೇತ್ರದಲ್ಲಿ ತಮ್ಮ ಸರಳತೆ ಮೂಲಕ ಈಗಾಗಲೇ ಪ್ರಸಿದ್ಧಿ ಪಡೆದಿದ್ದು ಈಗ ಮನೆಯ ಅಡಕೆ ತೋಟದಲ್ಲಿ ಕೊನೆ ಕೊಯ್ಲು ಕೆಲಸದಲ್ಲೂ ಭಾಗಿಯಾಗಿದ್ದಾರೆ. ಕೊನೆ ಕೊಯ್ಲು ವೇಳೆ ಹಗ್ಗ ಹಿಡಿದು ಕೆಲಸ ಮಾಡಿ ಗಮನ ಸೆಳೆದಿದ್ದಾರೆ. ಕಳೆದ ವಾರ ಸ್ವಗ್ರಾಮದ ದೇವಸ್ಥಾನವೊಂದರಲ್ಲಿ ಗ್ರಾಮಸ್ಥರೊಂದಿಗೆ ಶ್ರಮದಾನ, ಯುವಕರ ಜೊತೆಯೂ ಲುಂಗಿ ಧರಿಸಿ ಕ್ರಿಕೆಟ್ ಆಟದಲ್ಲಿ ಪಾಲ್ಗೊಂಡಿದ್ದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

ಆಧಾರ: ವಿಜಯಕರ್ನಾಟಕ, ದಿನಾಂಕ: 24.01.2022

21. ಹರಿಪ್ರಸಾದ್‌ಗೆ ಒಲಿದ ಪರಿಷತ್ ಪ್ರತಿಪಕ್ಷ ನಾಯಕ ಸ್ಥಾನ

ವಿಧಾನಪರಿಷತ್ ವಿರೋಧ ಪಕ್ಷದ ನಾಯಕನ ಸ್ಥಾನ ಕಾಂಗ್ರೆಸ್ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ್ ಅವರಿಗೆ ಒಲಿದುಬಂದಿದೆ. ಎಐಸಿಸಿ ಈ ಘೋಷಣೆ ಮಾಡಿದ್ದು, ಇವರೊಂದಿಗೆ ಪ್ರಕಾಶ್ ರಾಥೋಡ್ ಅವರಿಗೆ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಕೆ.ಗೋವಿಂದರಾಜ್‌ಗೆ ವಿಧಾನ ಪರಿಷತ್ ನಲ್ಲಿ ಪಕ್ಷದ ಉಪ ನಾಯಕನನ್ನಾಗಿ ನೇಮಕ ಮಾಡಿದೆ. ರಾಥೋಡ್ ಹಾಗೂ ಗೋವಿಂದರಾಜ್ ಇಬ್ಬರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರಾಗಿದ್ದಾರೆ. ಅವರ ಇನ್ನೊಬ್ಬ ಆಪ್ತ ಎಂ.ಬಿ.ಪಾಟೀಲ್ ಎರಡು ದಿನಗಳ ಹಿಂದಷ್ಟೇ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಕವಾಗಿದ್ದರು.

ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಪತನವಾದ ಬಳಿಕ ಎಸ್. ಆರ್. ಪಾಟೀಲ್ ವಿರೋಧ ಪಕ್ಷದ ನಾಯಕನ ಸ್ಥಾನ ಒಲಿದಿತ್ತು. ಜನವರಿ 5ರಂದು ಅವರ ಪರಿಷತ್ ಸದಸ್ಯತ್ವದ ಅವಧಿ ಮುಕ್ತಾಯವಾಗಿತ್ತು. ಈ ಮುನ್ನ ನಡೆದಿದ್ದ ಚುನಾವಣೆಯಲ್ಲಿ ಮರುಸ್ಪರ್ಧೆಗೆ ಪಕ್ಷ ಅವಕಾಶ ಕೊಟ್ಟಿರಲಿಲ್ಲ. ಈ ಮೂಲಕ ಹೊಸ ಪ್ರತಿಪಕ್ಷ ನಾಯಕನನ್ನು ಆಯ್ಕೆ ಮಾಡಬೇಕಾಗಿತ್ತು. 67ರ ಹರೆಯದ ಬಿ.ಕೆ.ಹರಿಪ್ರಸಾದ್ ಬಿಕಾಂ ಪದವೀಧರರಾಗಿದ್ದಾರೆ. ಎನ್‌ಎಸ್‌ಯುಐ ಸೇವಾದಳ, ಯುವ ಕಾಂಗ್ರೆಸ್, ಮೂಲಕ ಪಕ್ಷದಲ್ಲಿ ತೊಡಗಿಕೊಂಡು ರಾಜ್ಯಸಭಾ ಸದಸ್ಯರೂ ಆಗಿದ್ದರು. ಹೈಕಮಾಂಡ್ ಜೊತೆ ನಿಕಟ ಸಂಪರ್ಕಹೊಂದಿ ದೀರ್ಘಕಾಲ ದೆಹಲಿ ಮಟ್ಟದಲ್ಲಿ ಪ್ರಭಾವಿ ಎನಿಸಿಕೊಂಡಿದ್ದರು. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋಲುಂಡಿದ್ದರು. ಈ ನಡುವೆ ಪಕ್ಷ ಇವರನ್ನು ಪರಿಷತ್ತ್ ಸದಸ್ಯರನ್ನಾಗಿ ಆಯ್ಕೆ ಮಾಡಿ ನೆಲೆ ಕಲ್ಪಿಸಿತು. ಇದೀಗ ವಿರೋಧ ಪಕ್ಷದ ನಾಯಕ ಸ್ಥಾನ ಒಲಿದುಬಂದಿದೆ.

ಇಬ್ರಾಹಿಂಗೆ ನಿರಾಸೆ : ವಿಧಾನಪರಿಷತ್ ಪ್ರತಿಪಕ್ಷ ಸ್ಥಾನದ ಮೇಲೆ ಕೆ.ಸಿ.ಕೊಂಡಯ್ಯ ಕಣ್ಣಿಟ್ಟಿದ್ದರಾದರೂ, ಪರಿಷತ್ ಚುನಾವಣೆಯಲ್ಲಿ ಸೋಲುಂಡ ಹಿನ್ನೆಲೆಯಲ್ಲಿ ಹರಿಪ್ರಸಾದ್ ದಾರಿ ಸಲೀಸಾಗಿತ್ತು. ಸಿ.ಎಂ.ಇಬ್ರಾಹಿಂ ಪ್ರಬಲ ಪೈಪೋಟಿ ನೀಡಿದ್ದರು. ಈ ಸ್ಥಾನ ಸಿಕ್ಕರಷ್ಟೇ ಕಾಂಗ್ರೆಸ್ನಲ್ಲಿ ಮುಂದುವರಿಯುವುದಾಗಿ ಹೇಳಿಕೊಂಡು ಜೆಡಿಎಸ್ ಸಂಪರ್ಕವನ್ನೂ ಸಾಧಿಸಿದ್ದರು. ಕಾಂಗ್ರೆಸ್‌ನಲ್ಲಿ ಸಿ.ಎಂ.ಇಬ್ರಾಹಿಂಗೆ ಪ್ರತಿಪಕ್ಷ ನಾಯಕ ಸ್ಥಾನ ಕೊಡುವ ವಿಷಯದಲ್ಲಿ ಒಮ್ಮತ ಕಾಣಿಸಲಿಲ್ಲ. ಒಂದು ಬಣ ದೆಹಲಿಗೆ ತೆರಳಿ ಲಾಬಿ ಮಾಡಿತ್ತು. ಆದರೂ ಹೈಕಮಾಂಡ್ ಹರಿಪ್ರಸಾದ್ ಅವಕಾಶ ಮಾಡಿಕೊಟ್ಟಿದೆ. ಸಹಜವಾಗಿ ಸಿ.ಎಂ.ಇಬ್ರಾಹಿಂಗೆ ನಿರಾಸೆಯಾಗಿದೆ.

ಆಧಾರ: ವಿಜಯವಾಣಿ, ದಿನಾಂಕ: 27.01.2022

22. House Panel begins inspection on elite clubs

A House Panel constituted by the Legislative Council, which seeks to look into discrepancies in the functioning of the elite clubs in the state, has begun inspections of these clubs.

According to the committee chairperson and BJP MLC Ravikumar, the members visited two clubs in Bengaluru this week and more visits will follow each week, with the next visit scheduled for January 31.

The panel, which has nine MLCs in all, was constituted last year. However, owing to the pandemic, it had not begun visits until now. Speaking to DH, Ravi Kumar said the primary aspect the committee probing was how these clubs were functioning on government lands leased out for nominal amount.

"The government is giving them electricity and water supply. However, the clubs take exorbitant membership fee and have also become commercial," Kumar explained, adding that there was a need for the government to revise the lease amount for these clubs.

The second issue the panel will look into is that of exclusive practices such as the dress code. In many clubs, to this day, people wearing slippers are not allowed inside, reflecting colonial practices, the MLC said.

Congress MLC UB Venkatesh, who is among the members of the committee, added that some legislators themselves were shunned on some occasions by these clubs for not meeting their dress code. With the membership fee running into tens of lakhs of rupees, it's beyond the affordability of common people. “They must show social accountability by adopting a few government schools, for instance," he said, adding that there were also allegations of financial misappropriation in some clubs.

There have been three house committees in the past and the clubs have always obliged and provided all the necessary documents, said Shrikanth H S, President of the Federation of Clubs, Karnataka, and the secretary of Bowring Institute. The Federation has 68 registered clubs across the state.

"Last year, we were invited for meetings in the Legislators' Home in this regard. The committee visited Bowring Institute this week along with government officials and we have provided all the details sought from us. As for the dress code, senior citizens, women and girls are exempted from it. There is no regulation against Indian attire for anyone," he explained.

The committee will submit a set of recommendations to the government in six months from now, according to the members.

Courtesy: Deccan Herald – dt:- 27.01.2022

23. ಕೆಪಿಎಸ್‌ಸಿ ಕೇಸು ಸದನಕ್ಕೆ ರವಾನೆ

2011 ರಿಂದಲೂ ಕಗ್ಗಂಟಾಗಿರುವ 362 ಕೆಎಎಸ್ ಅಧಿಕಾರಿಗಳ ನೇಮಕ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಹಾಡಲು ಮುಂದಾಗಿರುವ ರಾಜ್ಯ ಸರ್ಕಾರ, 'ವಿಧಾನ ಸಭೆಯ ಒಪ್ಪಿಗೆಯ ಹಾದಿ ಹಿಡಿದಿದೆ.

ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಅಧಿಕಾರಿಗಳ ನೇಮಕ ರದ್ದುಗೊಂಡಿದ್ದು, ಈ ಬಗ್ಗೆ ನಡೆದ ರಾಜ್ಯ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ಈ ವಿಚಾರವನ್ನು ವಿಧಾನಸಭೆಯ ಮುಂದೆ ತರಲು ನಿರ್ಧರಿಸಲಾಗಿದೆ. ಇಲ್ಲಿ ಆಗುವ ನಿರ್ಧಾರದಂತೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವ ಸಾಧ್ಯತೆಗಳು ದಟ್ಟವಾಗಿವೆ. ಒಂದು ವೇಳೆ ವಿಧಾನಸಭೆ ಈ ನೇಮಕಗಳಿಗೆ ಒಪ್ಪಿಗೆ ನೀಡಿದರೂ, ಕೋರ್ಟ್ ಮತ್ತೊಮ್ಮೆ ಪರಿಶೀಲನೆಗೆ ಒಳಪಡಿಸುವ ಸಾಧ್ಯತೆ ಇದ್ದು, ಅಭ್ಯರ್ಥಿಗಳ ಭವಿಷ್ಯ ಅತಂತ್ರವಾಗಬಹುದೇ ಎಂಬ ಆತಂಕಗಳೂ ಇವೆ.

ಸಂಪುಟ ಸಭೆ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ. ಮಾಧುಸ್ವಾಮಿ, '2011ನೇ ಸಾಲಿನ ಪಟ್ಟಿ ಒಪ್ಪಿಕೊಳ್ಳುವುದಾಗಿ ಸದನದಲ್ಲಿ ಕೊಟ್ಟ ಮಾತಿನಂತೆ ಮುಂದೆ ಕ್ರಮ ಕೈಗೊಳ್ಳಬೇಕಾಗಿದೆ. ಕಾನೂನು ರೀತಿಯಲ್ಲಿ ಈ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚಿಸಲು ಈ ವಿಚಾರವನ್ನು ವಿಧಾನಸಭೆ ಮುಂದೆ ತಂದು ನೋಡಬೇಕಾಗಿದೆ' ಎಂದರು.

ಹೋರಾಟ, ರಾಜಕೀಯ ರಂಪಾಟ, ಕಾನೂನು ಹೋರಾಟಗಳ ಮೂಲಕ ಸಾಗಿ ಬಂದಿರುವ 2011ನೇ ಸಾಲಿನ ಕೆಎಎಸ್ ನೇಮಕ ವಿಚಾರ ಸರ್ಕಾರದ ಪಾಲಿಗೆ 3–4 ವರ್ಷಗಳಿಂದ 'ನುಂಗಲಾರದ ಬಿಸಿ ತುಪ್ಪವಾಗಿದೆ. ಹಲವು ಬಾರಿ ಸಚಿವ ಸಂಪುಟದಲ್ಲಿ ಈ ವಿಚಾರ ಚರ್ಚಿಸಲಾಗಿದೆ. ಕಾನೂನು ಸಚಿವ ಮಾಧುಸ್ವಾಮಿ, ನೇತೃತ್ವದಲ್ಲೇ ಸಚಿವ ಸಂಪುಟದ ಉಪ ಸಮಿತಿಯೂ ರಚಿಸಲಾಗಿತ್ತು. ಅಲ್ಲೂ ಪರಿಹಾರ ಸಿಕ್ಕಿಲ್ಲ. ಅನೇಕ ಬಾರಿ ಸದನದಲ್ಲೂ ಪ್ರಸ್ತಾಪವಾಗಿದೆ. ಆದರೆ, ಅಂತಿಮ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಈ ಮಧ್ಯೆ, ಹೈಕೋರ್ಟ್, ಸುಪ್ರೀಂ ಕೋರ್ಟ್ ತೀರ್ಪು ಜಾರಿಗೊಳಿಸುವ ಕಾನೂನಿನ – ಇಕ್ಕಟ್ಟು ಸಹ ಸರ್ಕಾರದ ಮುಂದಿದೆ.

ಸರ್ಕಾರದ ಕಸರತ್ತು ಯಾಕೆ : ಆಯ್ಕೆಯಾದ 362 ಅಭ್ಯರ್ಥಿಗಳಿಗೆ ನ್ಯಾಯ ಕೊಡಿಸಬೇಕು ಎಂಬ ಉದ್ದೇಶ ಸರ್ಕಾರದ್ದಾಗಿತ್ತು. ಆದ್ದರಿಂದ ಸರ್ಕಾರ ಕಳೆದ ಮೂರು ವರ್ಷಗಳಿಂದ ನಾನಾ ಕಸರತ್ತುಗಳನ್ನು ನಡೆಸುತ್ತಿದೆ. ಇದರ ಭಾಗವಾಗಿ, ಪಟ್ಟಿಯನ್ನು ಒಪ್ಪಿಕೊಳ್ಳುವ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನಿಸಿತು. ಇದು ಸದನದ ಮುಂದೆ ಬರಬೇಕಾಗಿತ್ತು. ಅನೇಕ ಬಾರಿ ಸದನದಲ್ಲೂ ಚರ್ಚೆ ನಡೆಸಿತ್ತು. ಆದರೆ, ಅಂತಿಮ ತೀರ್ಮಾನ ಆಗಿರಲಿಲ್ಲ. ಕೆಲವು ಪ್ರಭಾವಿಗಳ ಮಕ್ಕಳು ಅಭ್ಯರ್ಥಿಗಳಾಗಿರುವುದರಿಂದ ಸರ್ಕಾರ ಒತ್ತಡದಲ್ಲಿದೆ. ಜೊತೆಗೆ ಮತ್ತೊಂದೆಡೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ತೀರ್ಪು ಜಾರಿಗೊಳಿಸಲು ಬಿಜೆಪಿ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಪ್ರಧಾನಿ ಸೇರಿದಂತೆ ಕೇಂದ್ರದ ಬಿಜೆಪಿ ನಾಯಕರಿಗೆ ಮನವಿ ಕೂಡ ಸಲ್ಲಿಕೆಯಾಗಿದೆ. ಕೆಲವು ಪ್ರಭಾವಿ ಮಠಾಧೀಶರು ಸಹ ಸರ್ಕಾರಕ್ಕೆ ಪತ್ರ ಬರೆದು ಒತ್ತಡ ತಂದಿದ್ದಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ಸರ್ಕಾರ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ.

ಈ ಹಿಂದೆ ಏನಾಗಿತ್ತು:– 2011ರ ಕೆಎಎಸ್ ನೇಮಕಾತಿಯಲ್ಲಿ ಅಕ್ರಮ ನಡೆದ ಆರೋಪದ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿತ್ತು. ಸಿಐಡಿ ವರದಿ ಆಧರಿಸಿ ಸರ್ಕಾರ ನೇಮಕಾತಿ ಪಟ್ಟಿಯನ್ನು ವಾಪಸ್ ಪಡೆದುಕೊಂಡಿತ್ತು. ಅಭ್ಯರ್ಥಿಗಳು ಕೆಎಟಿ ಮೆಟ್ಟಿಲೇರಿದರು. ಸರ್ಕಾರದ ಆದೇಶವನ್ನು ಕೆಎಟಿ ರದ್ದುಪಡಿಸಿತು. ಕೆಎಟಿ ಆದೇಶ ಪ್ರಶ್ನಿಸಿ ಸರ್ಕಾರ ಹೈಕೋರ್ಟ್ಗೆ ಅರ್ಜಿ ಸಲ್ಲಿಸಿತು. ಹೈಕೋರ್ಟ್ ನೇಮಕಾತಿ ಪಟ್ಟಿಯನ್ನು ರದ್ದುಪಡಿಸಿತು. ಪ್ರಕರಣ ಸುಪ್ರೀಂಕೋರ್ಟ್ ಅಂಗಳ ತಲುಪಿತು. ಸುಪ್ರೀಂಕೋರ್ಟ್ ಸಹ ಹೈಕೋರ್ಟ್ ತೀರ್ಪು ಎತ್ತಿಹಿಡಿಯಿತು. ಈ ಮಧ್ಯೆ ರಾಜ್ಯ ಸರ್ಕಾರ ಸುಪ್ರಿಂಕೋರ್ಟ್ ವಿಶೇಷ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿತು. ಅರ್ಜಿ ವಿಚಾರಣೆಗೆ ಪರಿಗಣಿಸಲು ನಿರಾಕರಿಸಿದ ಸುಪ್ರಿಂಕೋರ್ಟ್ ಪ್ರಕರಣವನ್ನು ಹೈಕೋರ್ಟ್ನಲ್ಲೇ ಇತ್ಯರ್ಥಪಡಿಸಿಕೊಳ್ಳುವಂತೆ ಹೇಳಿತು.

ಪ್ರಕರಣ ಸಾಗಿ ಬಂದ ಹಾದಿ :

- 2011 ನವೆಂಬರ್ 3: 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಕ್ಕೆ ಅರ್ಜಿ ಆಹ್ವಾನ.
- 2014ರ ಮಾರ್ಚ್ 22: ಸಂಭಾವ್ಯ ಪಟ್ಟಿ ಪ್ರಕಟ.
- 2014ರ ಮಾರ್ಚ್ 26: ಕೆಪಿಎಸ್ಸಿನೇಮಕದಲ್ಲಿ ಅವ್ಯವಹಾರ ಆರೋಪ.
- 2014ರ ಜೂನ್ 27: ಸಿಐಡಿ ತನಿಖೆಗೆ ಆದೇಶ.
- 2014ರ ಆಗಸ್ಟ್ 8: 362 ಹುದ್ದೆಗಳ ಆಯ್ಕೆಪಟ್ಟಿ ಹಿಂಪಡೆದ ರಾಜ್ಯ ಸರ್ಕಾರ.
- 2016ರ ಅಕ್ಟೋಬರ್ 19: ಕೆಎಟಿಯಿಂದ ಸರ್ಕಾರದ ಆದೇಶ ರದ್ದು, ನೇಮಕಕ್ಕೆ ಆದೇಶ.
- 2017ರ ಮಾರ್ಚ್ 9: ಹೈಕೋರ್ಟ್ನಿಂದ ಕೆಎಟಿ ಆದೇಶ ರದ್ದು, ಹೊಸದಾಗಿ ನೇಮಕ ಪ್ರಕ್ರಿಯೆ ನಡೆಸಲು ಆದೇಶ.
- 2018 ಏಪ್ರಿಲ್ 4: ಹೈಕೋರ್ಟ್ ಆದೇಶ ಊರ್ಜಿತಗೊಳಿಸಿದ ಸುಪ್ರೀಂಕೋರ್ಟ್, ಪರೀಕ್ಷೆಯ ಅಕ್ರಮ ಪರಿಶೀಲಿಸಲು ಸೂಚನೆ.
- 2018 ಜುಲೈ 13: ಲಿಖಿತ ಪರೀಕ್ಷೆಯಲ್ಲೂ ಅಕ್ರಮ ಸಾಬೀತು. ಇದರಿಂದಾಗಿ 362 ಹುದ್ದೆಗಳಿಗೆ ಮಾಡಲಾಗಿದ್ದ ನೇಮಕ ರದ್ದು ಮಾಡುವ ಬಗ್ಗೆ ಹೈಕೋರ್ಟ್ ಹೇಳಿಕೆ.
- 2019: ಸುಪ್ರಿಂಕೋರ್ಟ್ ನಿಂದ ರಾಜ್ಯ ಸರ್ಕಾರ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿ ವಜಾಗೊಳಿಸಿ ಆದೇಶ.

ಆಧಾರ: ಉದಯವಾಣಿ, ದಿನಾಂಕ: 28.01.2022

24. ಸೂರಜ್ ರೇವಣ್ಣ ಪ್ರಮಾಣ ಸ್ವೀಕಾರ

ಹಾಸನ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ಗೆ ಆಯ್ಕೆಯಾಗಿದ್ದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮೊಮ್ಮಗ ಸೂರಜ್ ರೇವಣ್ಣ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಮ್ಮುಖದಲ್ಲಿ ಸೂರಜ್ ರೇವಣ್ಣ ಭಗವಂತನ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು. ಮಾಜಿ ಸಚಿವ ಎಚ್.ಡಿ.ರೇವಣ್ಣ, ಭವಾನಿ ರೇವಣ್ಣ ಜೆಡಿಎಸ್

ರಾಜ್ಯಾಧ್ಯಕ್ಷ ಎಚ್.ಕೆ.ಕುಮಾರಸ್ವಾಮಿ, ಶಾಸಕ ಶಿವಲಿಂಗೇಗೌಡ, ಪರಿಷತ್ತಿನ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಹಾಗೂ ವಿಧಾನ ಪರಿಷತ್ ಶಾಸಕರು ಮತ್ತು ಗಣ್ಯರು ಉಪಸ್ಥಿತರಿದ್ದರು

ಶುಭ ಸಮಯ ನಿಗದಿ: ಶುಕ್ರವಾರ 10.30 ರಿಂದ 12 ಗಂಟೆವರೆಗೆ ರಾಹುಕಾಲ ಹಿನ್ನೆಲೆಯಲ್ಲಿ 10.15 ರೊಳಗೆ ಪ್ರಮಾಣ ಸ್ವೀಕರಿಸಲು ಸೂರಜ್ ತಂದೆ ಎಚ್.ಡಿ. ರೇವಣ್ಣ ಶುಭ ಸಮಯ ನಿಗದಿ ಮಾಡಿದ್ದರು. ಅದಕ್ಕೂ ಮುನ್ನ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮನೆಯಿಂದ ಹೊರಟು ವಿಧಾನಸೌಧ ತಲುಪಿ ಭವಾನಿ ರೇವಣ್ಣ ಅವರಿಗೆ ನಮಸ್ಕರಿಸಿದರು. 10.15 ರೊಳಗೆ ಪ್ರಮಾಣ ಸ್ವೀಕರಿಸಿದರು.

ಆಧಾರ: ಉದಯವಾಣಿ, ದಿನಾಂಕ: 29.01.2022

25. ಚುನಾವಣಾ ಪ್ರಕ್ರಿಯೆ ದೋಷದಿಂದ ಅರಾಜಕತೆ

ಜಾತಿ, ಹಣ, ತೋಳ್ಬಲ ಹಾಗೂ ಪಕ್ಷಾಂತರ ಬಲಗಳಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಕುಸಿಯುವುದನ್ನು ತಡೆಯಲು ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ಅಗತ್ಯ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿಪ್ರಾಯಪಟ್ಟರು.

ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, "ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ನೈತಿಕ ಅಧಃಪತನ ಕುರಿತು ರಾಜಕಾರಣಿಗಳ ವಿರುದ್ಧ ಬೊಟ್ಟು ಮಾಡುವ ಸಂಸ್ಕೃತಿ ದೂರವಾಗಬೇಕು. ಚುನಾವಣೆ ಸುಧಾರಣೆ ಚರ್ಚೆ ಎಲ್ಲಿಂದ ಆರಂಭವಾದರೂ ಸ್ವಾಗತ. ವಿಧಾನಮಂಡಲದಲ್ಲೂ ಚರ್ಚೆ ಆರಂಭಿಸುವಂತೆ ಎಲ್ಲ ಶಾಸಕರಿಗೆ ಸಲಹೆ ನೀಡುತ್ತೇನೆ," ಎಂದು ಹೇಳಿದರು.

"ಚುನಾವಣಾ ವ್ಯವಸ್ಥೆಯಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಕಾಯ್ದುಕೊಳ್ಳಲು ಮಾರ್ಗದರ್ಶನ, ಸಲಹೆ ನೀಡಲು ಎಲ್ಲ ರಂಗದವರೂ ನೈತಿಕ ಹೊಣೆಗಾರರಾಗಿ ಮುಂದಾಗಬೇಕು. ಎಲ್ಲೆಡೆ ವ್ಯಾಪಕ ಸಮಾಲೋಚನಾ ಸಭೆ, ಚರ್ಚೆಗಳು ಶುರುವಾಗಬೇಕು, ತುರ್ತು ಪರಿಸ್ಥಿತಿ ವಿರುದ್ಧ ಇಡೀ ದೇಶ ಒಂದಾಗಿ ಹೋರಾಡಿತ್ತು. ಈಗ ಸೃಷ್ಟಿಯಾಗಿರುವ ಕಲುಷಿತ ರಾಜಕೀಯ ವಾತಾವರಣಕ್ಕೆ ಅಂತ್ಯವೂ ನಡೆಯಬೇಕಿದೆ," ಎಂದು ತಿಳಿಸಿದರು.

"ಚುನಾವಣಾ ಪ್ರಕ್ರಿಯೆಗಳಲ್ಲಿನ ಲೋಪದೋಷಗಳು ಅರಾಜಕತೆಗೆ ಕಾರಣವಾಗುತ್ತವೆ. ಇದರ ವಿರುದ್ಧ ಜನಾಭಿಪ್ರಾಯ ರೂಪಿಸುವುದು, ಅದರಲ್ಲಿ ಪಾಲ್ಗೊಳ್ಳುವುದು ಯುವಜನರ ಕರ್ತವ್ಯ. ಯುವ ಪೀಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಕಾವಲುಗಾರರಾಗದಿದ್ದರೆ ಇಡೀ ವ್ಯವಸ್ಥೆಯೇ ಕುಸಿತಕ್ಕೆ ಒಳಗಾಗುವ ಎಲ್ಲಾ ಸಾಧ್ಯತೆಗಳಿವೆ," ಎಂದು ಆತಂಕ ವ್ಯಕ್ತಪಡಿಸಿದರು.

"ಮತ ಚಲಾಯಿಸದೆ ಅಥವಾ ಯಾವುದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡದಿದ್ದರೆ ಅದು ಮತದಾರರ ಕರ್ತವ್ಯ ಲೋಪವೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಕಾಲ ಸಮೀಪಿಸುತ್ತಿದೆ. ಸದನದ ಒಳಗೆ ಹಾಗೂ ಹೊರಗೆ ಎಲ್ಲಾ ಹಂತಗಳಲ್ಲೂ ಇಂತಹ ವಿಷಯಗಳ ಕುರಿತು ಸುದೀರ್ಘ ಚರ್ಚೆಗಳಾಗಬೇಕು. ಆಗ ಮಾತ್ರ ಸಮಾಜದಲ್ಲಿ ಪರಿವರ್ತನೆ ತರಲು ಸಾಧ್ಯ," ಎಂದು ತಿಳಿಸಿದರು. ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಉಪಸ್ಥಿತರಿದ್ದರು.

ಆಧಾರ: ವಿಜಯಕರ್ನಾಟಕ, ದಿನಾಂಕ: 30.01.2022

26. ಗಾಂಧೀಜಿ ಆದರ್ಶ ದೇಶದ ಆಧಾರಸ್ಥಂಭ

ಮಹಾತ್ಮ ಗಾಂಧೀಜಿಯವರ ಆದರ್ಶಗಳು ಸ್ವತಂತ್ರ ಹಾಗೂ ಗಣತಂತ್ರ ಭಾರತದ ಆಧಾರಸ್ಥಂಭಗಳಾಗಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಹುತಾತ್ಮರ ದಿನಾಚರಣೆಯ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸುತ್ತೇವೆ. ಗಾಂಧೀಜಿ ವಿಶ್ವದ ನಾಯಕರು, ಸತ್ಯ ಮತ್ತು ಅಹಿಂಸೆಯ ಪ್ರತಿಪಾದಕರು, ಸತ್ಯ, ಅಹಿಂಸೆ ಮತ್ತು ಶಾಂತಿಯಿಂದಲೇ ಸ್ವತಂತ್ರ ಪಡೆಯುವ ಚಲವನ್ನು ತೊಟ್ಟವರು. ಜೈಲುವಾಸ, ಲಾಠಿ ಏಟು ಮುಂತಾದ ಹಲವಾರು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿಯೂ ತಮ್ಮ ಸತ್ಯ, ಅಹಿಂಸೆಯ ಸಿದ್ಧಾಂತವನ್ನು ಎಂದೂ ಬಿಟ್ಟುಕೊಡಲಿಲ್ಲ ಎಂದರು.

ನನ್ನ ಜೀವನವೇ ಒಂದು ಸಂದೇಶ ಎಂದ ಅವರು, ತಮ್ಮ ಆತ್ಮ ಚರಿತ್ರೆ ಸತ್ಯಾನ್ವೇಷಣೆಯ ಮಾತನ್ನು ಹೇಳಲು ನೈತಿಕವಾಗಿ ಬಹಳ ದೊಡ್ಡ ಶಕ್ತಿ ಇರಬೇಕು. ಅಂತಹ ವ್ಯಕ್ತಿಗಳು ಮಾತ್ರ ಇದನ್ನು ಹೇಳಲು ಸಾಧ್ಯ. ಅವರ ಜೀವನ ಅತ್ಯಂತ ಪರಿಶುದ್ಧ ಹಾಗೂ ಸತ್ಯದಿಂದ ಕೂಡಿರುವಂಥದ್ದು. ರಾಷ್ಟ್ರಪಿತ ಮಹಾತ್ಮಾ ಗಾಂಧಿ ಹೀಗಾಗಿಯೇ ಅತ್ಯಂತ ಆದರ್ಶಪ್ರಾಯವಾಗಿದ್ದಾರೆ. ಅವರ ಬದುಕು ಮತ್ತು ವಿಚಾರಗಳು ನಮಗೆ ಸದಾ ದಾರಿದೀಪವಾಗಿದೆ. ಇಂದು ಅವರ ಜೊತೆಗೆ ಸಾವಿರಾರು ಜನ ಹುತಾತ್ಮರಾಗಿದ್ದಾರೆ. ಸುಭಾಷ್‌ಚಂದ್ರ ಬೋಸ್, ಭಗತ್ ಸಿಂಗ್, ಲಾಲಾ ಲಜಪತ್ ರಾಯ್ ಪ್ರಮುಖರು. ಇವರೆಲ್ಲರೂ ಸ್ವತಂತ್ರ ಪೂರ್ವದಲ್ಲಿ ಬಲಿದಾನ ಮಾಡಿದವರು. ಅದರ ಜೊತೆಗೆ ಪ್ರತಿ ರಾಜ್ಯದಲ್ಲಿ ಆಯಾ ಪ್ರಾಂತ್ಯಗಳ ಪ್ರಮುಖರು, ಸಾಮಾನ್ಯ ಜನರು ಪ್ರಾಣ ಬಲಿದಾನ, ಆಸ್ತಿ ಅಂತಸ್ತು ನೀಡಿ ತ್ಯಾಗ ಮಾಡಿದ್ದಾರೆ. ಪೂಜ್ಯ ಮಹಾತ್ಮ ಗಾಂಧೀಜಿಯವರಿಗೆ ಹಾಗೂ ವಿಶೇಷವಾಗಿ ಅನಾಮಧೇಯ ಸ್ವತಂತ್ರ ಯೋಧರಿಗೆ ನಮನ ಸಲಿಸುವೆ ಎಂದರು.

ದೇಶಕ್ಕೆ ಸ್ವಾತಂತ್ರ್ಯ ಸುಲಭವಾಗಿ ಬಂದಿಲ್ಲ ಎನ್ನುವುದನ್ನು ಅರ್ಥಮಾಡಿಕೊಂಡು, ಸ್ವಾತಂತ್ರ್ಯ ನಂತರದ ದಿನಗಳನ್ನು ಅವಲೋಕಿಸಿದರೆ, 75 ವರ್ಷಗಳಲ್ಲಿ ಹಲವಾರು ರಂಗದಲ್ಲಿ ಸಾಧನೆ ಮಾಡಿದ್ದೇವೆ. ಆದರೆ ಸಾಮಾನ್ಯ ಜನರ ಬದುಕನ್ನು, ಜೀವನದ ಗುಣಮಟ್ಟವನ್ನು ಹೆಚ್ಚಿಸಲು ಕೆಲಸ ಮಾಡಬೇಕಿದೆ. 75 ವರ್ಷಗಳಲ್ಲಿ ನಾವು ಇನ್ನಷ್ಟು ಕೆಲಸಗಳನ್ನು ಮಾಡಬಹುದಾಗಿತ್ತು ಎನ್ನುವುದು ನಾವು ಆತ್ಮಾವಲೋಕನ ಮಾಡಿಕೊಂಡಾಗ ತಿಳಿಯುತ್ತದೆ. ಅದಕ್ಕಾಗಿ ಪ್ರಧಾನ ಮಂತ್ರಿಗಳು ಆತ್ಮನಿರ್ಭರ್ ಭಾರತ, ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಧ್ಯೇಯವನ್ನಿಟ್ಟುಕೊಂಡು ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಇಂಧನ, ಶಿಕ್ಷಣ ಆರೋಗ್ಯ ಮುಂತಾದ ಹಲವಾರು ರಂಗಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿದ್ದಾರೆ. ಅವರ ಮಾರ್ಗದರ್ಶನದಲ್ಲಿ ರಾಜ್ಯವನ್ನು ಸಂಪದ್ಭರಿತವಾಗಿಸಲು ಹಾಗೂ ಅಭಿವೃದ್ಧಿಯ ಕಡೆಗೆ ಕೊಂಡೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡಲು ಸಂಕಲ್ಪ ಮಾಡುವ ದಿನ ಇದು ಎಂದು ಸಿಎಂ ಬೊಮ್ಮಾಯಿ ತಿಳಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 31.01.2022

ದಿನಾಂಕ: 30.01.2022 ರಂದು ಸನ್ಮಾನ್ಯ ಸಭಾಧ್ಯಕ್ಷರವರು, ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಸವರಾಜ ಬೋಮ್ಮಾಯಿ ರವರು ಹಾಗೂ ಕಂದಾಯ ಸಚಿವರಾದ ಶ್ರೀ ಆರ್. ಅಶೋಕ್ ರವರು "ಹುತಾತ್ಮರ ದಿನಾಚರಣೆ" ಅಂಗವಾಗಿ ವಿಧಾನಸೌಧದಲ್ಲಿ ಮಹಾತ್ಮಾ ಗಾಂಧಿಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ವಂದನೆ ಸಲ್ಲಿಸುತ್ತಿರುವ ಸಂದರ್ಭ;

2.

27. ವಿಧಾನಸಭೆ : ಯು.ಟಿ.ಖಾದರ್ ವಿರೋಧ ಪಕ್ಷದ ಉಪ ನಾಯಕ

ವಿಧಾನಸಭೆಯಲ್ಲಿ ವಿರೋಧ ಪಕ್ಷದ ಉಪ ನಾಯಕನ ಸ್ಥಾನಕ್ಕೆ ಮಂಗಳೂರು (ಉಳ್ಳಾಲ) ಕ್ಷೇತ್ರದ ಶಾಸಕ ಯು.ಟಿ. ಖಾದರ್ ಅವರನ್ನು ನೇಮಿಸಿ ಅದೇಶ ಹೊರಡಿಸಲಾಗಿದೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಖಾದರ್ ಅವರನ್ನು ವಿಧಾನಸಭೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಉಪ ನಾಯಕನನ್ನಾಗಿ ನೇಮಕ ಮಾಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಬಿ.ಕೆ. ಹರಿಪ್ರಸಾದ್, ಉಪ ನಾಯಕ ಸ್ಥಾನಕ್ಕೆ ಕೆ. ಗೋವಿಂದರಾಜು ಮತ್ತು ಮುಖ್ಯ ಸಚೇತಕ ಸ್ಥಾನಕ್ಕೆ ಪ್ರಕಾಶ್ ರಾಥೋಡ್ ಅವರನ್ನು ನೇಮಿಸಿ ಇದೇ 26ರಂದು ಅದೇಶ ಹೊರಡಿಸಲಾಗಿತ್ತು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕನ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಸಿ.ಎಂ. ಇಬ್ರಾಹಿಂ ಇದರಿಂದ ಕೆರಳಿದ್ದರು. ಪಕ್ಷ ತೊರೆಯುವ ನಿರ್ಧಾರ ಪ್ರಕಟಿಸಿದ್ದ ಅವರು, ಮುಸ್ಲಿಂ ಶಾಸಕರಿಗೆ ಸ್ಥಾನ ಮಾನ ನೀಡಿಲ್ಲ ಎಂಬ ವಿಚಾರವನ್ನು ಚರ್ಚೆಯ ಮುನ್ನೆಲೆಗೆ ತಂದಿದ್ದರು.

ಮುಸ್ಲಿಮರಿಗೆ ಸ್ಥಾನಮಾನ ನೀಡುವ ವಿಷಯದ ಕುರಿತು ಪಕ್ಷದಲ್ಲೂ ತೀವ್ರವಾದ ಚರ್ಚೆ ಆರಂಭವಾಗಿತ್ತು. ಚುನಾವಣೆ ಸಂದರ್ಭದಲ್ಲಿ ಇದರಿಂದ ಪಕ್ಷಕ್ಕೆ ಹಾನಿಯಾಗಬಹುದು ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್‌ಗೆ ಮನವರಿಕೆ ಮಾಡಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಖಾದರ್ ಅವರನ್ನು ಉಪ ನಾಯಕನ ಸ್ಥಾನಕ್ಕೆ ನೇಮಿಸುವಂತೆ ಶಿಫಾರಸ್ಸು ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಆಧಾರ: ಪ್ರಜಾವಾಣಿ, ದಿನಾಂಕ: 31.01.2022

28. ಅಧಿವೇಶನಕ್ಕೆ ಅಧಿಸೂಚನೆ

ಇದೇ ತಿಂಗಳ 14 ರಿಂದ ವಿಧಾನಮಂಡಲದ ಅಧಿವೇಶನ ನಡೆಸುವ ಕುರಿತು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅಧಿಸೂಚನೆ ಹೊರಡಿಸಿದ್ದಾರೆ. 2022ನೇ ಸಾಲಿನ ಅಧಿವೇಶನವನ್ನು ಫೆಬ್ರವರಿ 14ರಂದು ವಿಧಾನ ಮಂಡಲದ ಜಂಟಿ ಅಧಿವೇಶನದ ಮೂಲಕ ಆರಂಭಿಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಿದ್ದ ಸರಕಾರ, ಈ ಕುರಿತು. ರಾಜ್ಯಪಾಲರಿಗೆ ಪ್ರಸ್ತಾವನೆ ಸಲ್ಲಿಸಿತ್ತು. ಅದರಂತೆ ಫೆಬ್ರವರಿ 14ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ವಿಧಾನಸಭೆಯನ್ನು ಸಮಾವೇಶಗೊಳಿಸುವಂತೆ ಅಧಿಸೂಚನೆ ಹೊರಡಿಸಿದ್ದಾರೆ. ಇದರ ಬೆನ್ನಲ್ಲೇ 15ನೇ ವಿಧಾನಸಭೆಯ 12ನೇ ಅಧಿವೇಶನವನ್ನು ಕರೆಯುವ ಬಗ್ಗೆ ವಿಧಾನಸಭೆ ಕಾರ್ಯದರ್ಶಿಯವರು ಆದೇಶ ಹೊರಡಿಸಿದ್ದಾರೆ. ಫೆಬ್ರವರಿ 14 ರಂದು ಜಂಟಿ ಅಧಿವೇಶನ ನಡೆಯಲಿದೆ.

ಆಧಾರ: ವಿಶ್ವವಾಣಿ, ದಿನಾಂಕ: 01.02.2022

29. ಪರಿಷತ್ ಸದಸ್ಯರಿಗೆ ಶಾಸನಸಭೆಯ ಪಾಠ

ವಿಧಾನ ಪರಿಷತ್‌ಗೆ ಹಾಗೂ ವಿಧಾನ ಸಭೆಗೆ ಆಯ್ಕೆಯಾಗಿರುವ ನೂತನ ಶಾಸಕರಿಗೆ ಶಾಸನ ಸಭೆಯ ನಡವಳಿಕೆ ಕುರಿತಂತೆ ಮುಂದಿನ ಎರಡು ದಿನಗಳ ಕಾಲ ಪಾಠ ಮಾಡಲು ತೀರ್ಮಾನಿಸಲಾಗಿದೆ. ಶಾಸಕಾಂಗದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ತರಬೇತಿ ಶಿಬಿರ ಆಯೋಜಿಸಲಾಗಿದೆ. ವಿಕಾಸಸೌಧದ ಕೊಠಡಿ ಸಂಖ್ಯೆ 419ರಲ್ಲಿ ತರಬೇತಿ ಶಿಬಿರ ಆಯೋಜಿಸಲಾಗಿದೆ. ಸದಸ್ಯರು ಶಿಬಿರಕ್ಕೆ

ಹಾಜರಾಗುವ ಮೂಲಕ ಶಿಬಿರದ ಸದುಪಯೋಗಪಡಿಸಿಕೊಳ್ಳುವಂತೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮನವಿ ಮಾಡಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ: 03.02.2022

30. ಇ–ಸ್ವತ್ತು ಸಮಸ್ಯೆ ಪರಿಹಾರಕ್ಕೆ ಸೂಚನೆ

ಗ್ರಾಮೀಣ ಪ್ರದೇಶದ ಇ–ಸ್ವತ್ತು ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿವೇಶನದಲ್ಲಿ ಸೂಚನೆ ನೀಡಲಾಗುವುದು ಎಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಭರವಸೆಯಿತ್ತರು. ತಾಲ್ಲೂಕಿನ ಮಂಜುಗುಣಿ ಗ್ರಾಮ ಪಂಚಾಯಿತಿಯಲ್ಲಿ ನಾನಾ ಕಾಮಗಾರಿಗೆ ಚಾಲನೆ ನೀಡಿ, "ಇ–ಸ್ವತ್ತು ಸಮಸ್ಯೆ ಪರಿಹಾರಕ್ಕೆ ರಚಿತವಾದ ಸಂಪುಟ ಉಪಸಮಿತಿ ವರದಿ ನೀಡುವಂತೆ ತಿಳಿಸಲಾಗುವುದು" ಎಂದರು. "ಸಣ್ಣ ವಿಷಯಗಳಿಗೂ ಸ್ಥಳೀಯ ಅಧಿಕಾರಿಗಳು ಮಂತ್ರಿಗಳವರೆಗೂ ಫೈಲ್ ಕಳುಹಿಸುವ ವ್ಯವಸ್ಥೆಯಿದೆ. ಸ್ಥಳೀಯವಾಗಿ ಬಗೆಹರಿಸಲು ಅವಕಾಶಗಳಿದ್ದರೂ ಮಾಡುವುದಿಲ್ಲ" ಎಂದು ಬೇಸರ ವ್ಯಕ್ತಪಡಿಸಿದರು. "ಮಲೆನಾಡಿನಲ್ಲಿ ರಸ್ತೆ ನಿರ್ವಹಣೆ ಸಮಸ್ಯೆಯಿಂದಾಗಿ ಕಾಂಕ್ರಿಟ್ ರಸ್ತೆಗೆ ಸಾರ್ವಜನಿಕರಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಇದರ ವೆಚ್ಚ ಹೆಚ್ಚಾದರೂ ಆದ್ಯತೆ ಮೇರೆಗೆ ನಿರ್ಮಿಸುತ್ತೇವೆ" ಎಂದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 03.02.2022

31. ರಾಜಕಾರಣ ಬಿಟ್ಟು ಸದನದಲ್ಲಿ ಪಾಲ್ಗೊಳ್ಳಬೇಕು

ಶಾಸನಸಭೆಗೆ ಆಯ್ಕೆಯಾದವರು ಪಕ್ಷ, ರಾಜಕಾರಣವನ್ನು ಹೊರಗಿಟ್ಟು ವಿಧಾನಮಂಡಲದೊಳಗೆ ಪ್ರವೇಶಿಸಿ ರಾಜ್ಯದ ಹಿತರಕ್ಷಣೆಗೆ ಕೆಲಸ ಮಾಡಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದ್ದಾರೆ.

ವಿಧಾನ ಪರಿಷತ್ ನೂತನ ಸದಸ್ಯರಿಗೆ ವಿಕಾಸ ಸೌಧದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿ, ಜನಪ್ರತಿನಿಧಿಗಳಿಗೆ ಜನರ ಸೇವೆ ಮಾಡಲು ಒಂದು ಸದಾವಕಾಶ ಸಿಕ್ಕಿದೆ. ಇದನ್ನು ಹೆಚ್ಚು ಜವಾಬ್ದಾರಿಯಿಂದ ನಿರ್ವಹಿಸಿ ಜನರ ನಿರೀಕ್ಷೆ ತಲುಪಬೇಕು. ಅಧಿವೇಶನದಲ್ಲಿ ನಡೆಯುವ ಚರ್ಚೆ, ವಾದಗಳನ್ನು ಸ್ವೀಕರಿಸಿ, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ನಿರ್ವಹಿಸಬೇಕು ಎಂದರು.

ಶಾಸನಸಭೆ ಪ್ರತಿನಿಧಿಗಳು ನಿಖರ ವಿಷಯ ಹಾಗೂ ಮಾಹಿತಿಯೊಂದಿಗೆ ಸದನಕ್ಕೆ ಆಗಮಿಸಿ ವಿಷಯ ಮಂಡನೆ ಮಾಡಬೇಕು. ವಿಧಾನಸಭೆ ಇರಲಿ, ವಿಧಾನ ಪರಿಷತ್ ಇರಲಿ, ಇಬ್ಬರಿಗೂ ಸಮಾನ ಅವಕಾಶ ಮತ್ತು ಜವಾಬ್ದಾರಿ ಇದೆ. ಹೀಗಾಗಿ ಸದನದ ಘನತೆಯನ್ನು ಉಭಯ ಸದನಗಳ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ನಾಯಕತ್ವ ಟೊಳ್ಳಾದರೆ ಇಡೀ ವ್ಯವಸ್ಥೆ ಟೊಳ್ಳಾದಂತೆ. ಹೀಗಾಗಿ ಶಾಸನ ರಚನೆಯನ್ನು ವಿವೇಚನೆಯಿಂದ ಮತ್ತು ಅಭಿವೃದ್ಧಿಗೆ ಪೂರಕವಾಗಿ ಮಾಡಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆ ಹಾಗೂ ವಿಧಾನ ಪರಿಷತ್‌ಗೆ ಆಯ್ಕೆಯಾದ ಪ್ರತಿಯೊಬ್ಬ ಸದಸ್ಯ ಕಲಾಪಗಳಲ್ಲಿ ತಪ್ಪದೇ ಭಾಗವಹಿಸಬೇಕು. ಅಧಿವೇಶನದಲ್ಲಿ ಇರಬೇಕಾದ ನಡವಳಿಕೆಯನ್ನು ಮೈಗೂಡಿಸಿಕೊಳ್ಳಬೇಕು. ಲೆಕ್ಕಪತ್ರಗಳು, ಬಜೆಟ್ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಜ್ಞಾನ ಹೊಂದಿದ್ದರೆ ಉತ್ತಮ ಆಡಳಿತ ನಡೆಸಲು ಸಾಧ್ಯ ಎಂದು ಹೇಳಿದರು.

ತೆರಿಗೆ ಭಾರ ತಪ್ಪಿಸಲು ಚಿಂತನೆ ಅಗತ್ಯ: ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಜನಸಾಮಾನ್ಯರ ಮೇಲಿನ ತೆರಿಗೆಯ ಭಾರ ಹೆಚ್ಚುತ್ತಿರುವ ಬಗ್ಗೆ ಗಂಭೀರ ಚಿಂತನೆ ಅಗತ್ಯ ಎಂದು ಹೇಳಿದ್ದಾರೆ.

ವಿಧಾನ ಪರಿಷತ್ತಿನ ಸದಸ್ಯರಿಗಾಗಿ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ವಿತ್ತೀಯ ಕಲಾಪ, ವಿಧೇಯಕಗಳು, ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಅಭಿವೃದ್ಧಿಯ ಪಾಲುದಾರಿಕೆ' ವಿಷಯದ ಕುರಿತು ಮಾತನಾಡಿ, ಶ್ರೀಮಂತರಿಂದ ತೆರಿಗೆ ವಸೂಲು ಮಾಡಿ ಅದನ್ನು ಬಡವರ ಕಲ್ಯಾಣಕ್ಕೆ ವಿನಿಯೋಗಿಸಬೇಕು ಎಂಬುದು ಅಂಬೇಡ್ಕರ್ ನಿಲುವಾಗಿತ್ತು. ಇದು ಕಲ್ಯಾಣ ರಾಷ್ಟ್ರದ ಮೂಲ ತತ್ವವೂ ಆಗಿತ್ತು ಎಂದರು.

ದುಂಬಿ ಮಕರಂದವನ್ನು ಹೀರಿದಂತೆ, ಹಾಲು ಕರೆಯುವಾಗ ಕರುವಿಗೂ ಸ್ವಲ್ಪ ಮೀಸಲಿಡುವಂತೆ ತೆರಿಗೆ ವಿಧಿಸಬೇಕು. ಇದರ ಅರ್ಥ ಬಡವರ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ತೆರಿಗೆ ವಿಧಿಸಬೇಕು ಎಂಬುದಾಗಿತ್ತು. ಆದರೆ, ಇತ್ತೀಚೆಗೆ ಶ್ರೀಮಂತರ ಮೇಲೆ – ವಿಧಿಸುವ ತೆರಿಗೆ ಪ್ರಮಾಣ ಕಡಿಮೆಯಾಗುತ್ತಿದೆ. ಬಡವರ ಮೇಲಿನ ತೆರಿಗೆಯ ಹೊರೆ ಹೆಚ್ಚಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಜೆಟ್ ಅತ್ಯಂತ ಪ್ರಮುಖವಾದದ್ದು. ಕಾಯಕ ಮತ್ತು ದಾಸೋಹ ಇದರ ಅರ್ಥ. ಅಂದರೆ, ಉತ್ಪಾದನೆ ಮತ್ತು ಹಂಚಿಕೆ. ಬಜೆಟ್‌ನಲ್ಲಿನ ಅಂಕಿ–ಅಂಶಗಳು ಅಲಂಕಾರಿಕ ಹಾಗೂ ಪದಗಳ ಪ್ರಯೋಗ ಆಕರ್ಷವಾಗಿದ್ದರೆ ಸಾಲದು. ಮುಂಗಡ ಪತ್ರ ವಾಸ್ತವಿಕತೆಯ ಆಧಾರದ ಮೇಲೆ ರೂಪುಗೊಳ್ಳಬೇಕು ಎಂದರು.

ವಿಧೇಯಕಗಳ ಮಹತ್ವದ ಕುರಿತು ಮಾತನಾಡಿದ ಸಿದ್ದರಾಮಯ್ಯ ಅವರು, ಸಾಮಾಜಿಕ ನ್ಯಾಯ ಹಾಗೂ ಅಶಕ್ತರ ಕಲ್ಯಾಣಕ್ಕಾಗಿ ವಿಧೇಯಕಗಳನ್ನು ರೂಪಿಸಬೇಕು. ಶಾಸಕರು ಅದರಲ್ಲಿ ತಪ್ಪದೇ ಭಾಗಿಯಾಗಬೇಕು. ಮೊದಲ ಬಾರಿ ಶಾಸಕರಾದವರು ನಾವು ಒಂದು ಬಾರಿ ವಿಧಾನಸೌಧದ ಮೆಟ್ಟಿಲು ಹತ್ತಿದರೆ ಸಾಕು ಎನ್ನುತ್ತಾರೆ. ಒಂದು ಬಾರಿ ವಿಧಾನಸೌಧ ಪ್ರವೇಶಿಸಿದ ಬಳಿಕ ಅತ್ತ ಸುಳಿಯುವುದಿಲ್ಲ. ವಿಧಾನ ಮಂಡಲದ ಕಾರ್ಯ ಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಿಲ್ಲ ಎಂದು ಹೇಳಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಭಾಪತಿಗಳಾದ ಡಿ.ಎಚ್.ಶಂಕರಮೂರ್ತಿ, ಬಿ.ಎಲ್ ಶಂಕರ್, ಶಾಸಕರಾದ ಕೆ.ಆರ್.ರಮೇಶ್ ಕುಮಾರ್, ಬಿ.ಕೆ.ಹರಿಪ್ರಸಾದ್, ಕೆ.ಟಿ.ಶ್ರೀಕಂಠೇಗೌಡ, ಮಾಜಿ ಶಾಸಕ ಗೋ. ಮಧುಸೂದನ್ ಉಪಸ್ಥಿತರಿದ್ದರು.

ಆಧಾರ: ವಿಶ್ವವಾಣಿ, ದಿನಾಂಕ: 04.02.2022

ದಿನಾಂಕ: 03.02.2022 ರಂದು ವಿಕಾಸಸೌಧದಲ್ಲಿ ಆಯೋಜಿಸಿದ್ದ, ಶಾಸಕರ ತರಬೇತಿ ಕಾರ್ಯಕ್ರಮಕ್ಕೆ ಶಾಸಕರುಗಳಿಗೆ ಉಪನ್ಯಾಸ ನೀಡಲು ಆಗಮಿಸಿದ್ದ, ಮಾಜಿ ವಿಧಾನಸಭಾಧ್ಯಕ್ಷರು ಮತ್ತು ಶಾಸಕರಾದ ಶ್ರೀ ಕೆ.ಆರ್ ರಮೇಶ್ ಕುಮಾರ್ ಹಾಗೂ ವಿಧಾನಪರಿಷತ್ತಿನ ಮಾಜಿ ಸಭಾಪತಿ ಶ್ರೀ ಬಿ.ಎಲ್ ಶಂಕರ್ ರವರಿಗೆ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ನೆನಪಿನ ಸ್ಮರಣಿಕೆಯನ್ನು ನೀಡಿ ಗೌರವಿಸುತ್ತಿರುವುದು.

ದಿನಾಂಕ: 04.02.2022 ರಂದು ವಿಕಾಸಸೌಧದಲ್ಲಿ ಆಯೋಜಿಸಿದ್ದ, ಶಾಸಕರ ತರಬೇತಿ ಕಾರ್ಯಕ್ರಮಕ್ಕೆ ಶಾಸಕರುಗಳಿಗೆ ಉಪನ್ಯಾಸ ನೀಡಲು ಆಗಮಿಸಿದ್ದ, ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ರವರಿಗೂ ಹಾಗೂ ವಿಧಾನಪರಿಷತ್ತಿನ ಮಾಜಿ ಸಭಾಪತಿ ಶ್ರೀ ಡಿ.ಹೆಚ್ ಶಂಕರಮೂರ್ತಿ ರವರಿಗೆ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ನೆನಪಿನ ಸ್ಮರಣಿಕೆಯನ್ನು ನೀಡಿ ಗೌರವಿಸುತ್ತಿರುವುದು.

32. ಪರಿಷತ್ತಿನ ನೂತನ ಸದಸ್ಯರಿಗೆ ಶಿಬಿರ : ಹೊರಟ್ಟಿಗೆ ಅಭಿನಂದನೆ

ವಿಧಾನ ಪರಿಷತ್ ಸದಸ್ಯರಿಗೆ ಶಾಸಕಾಂಗದ ಕಾರ್ಯ ಚಟುವಟಿಕೆ, ಕಾರ್ಯವಿಧಾನಗಳು ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಎರಡು ದಿನಗಳ ಕಾಲ ತರಬೇತಿ ಶಿಬಿರ ಆಯೋಜಿಸಿರುವ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಪರಿಷತ್ತಿನ ನೂತನ ಸದಸ್ಯ ದಿನೇಶ್ ಗೂಳಿಗೌಡ ಅಭಿನಂದನೆ ಸಲ್ಲಿಸಿದ್ದಾರೆ.

ಈ ಶಿಬಿರದ ಮೂಲಕ ಹೊಸ ಸದಸ್ಯರು ವಿಧೇಯಕಗಳು, ಕಲಾಪಗಳು, ಲೆಕ್ಕಪತ್ರ ಸಮಿತಿಯ ಪಾತ್ರ, ಸ್ಥಾಯಿ ಸಮಿತಿಗಳು, ಅವುಗಳ ಕಾರ್ಯನಿರ್ವಹಣೆ, ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಮಹತ್ತರ ವಿಷಯಗಳ ಬಗ್ಗೆ ಉಪಯುಕ್ತ ಮಾಹಿತಿ ಪಡೆದು ಕೊಳ್ಳುವಂತಾಯಿತು ಎಂದು ತಿಳಿಸಿದ್ದಾರೆ. 13 ಬಾರಿ ರಾಜ್ಯ ಬಜೆಟ್ ಮಂಡಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾನೂನು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನ ಸಭೆ ಮಾಜಿ ಸಭಾಧ್ಯಕ್ಷರಾದ ಕೆ.ಆರ್.ರಮೇಶ್ ಕುಮಾರ್, ಮಾಜಿ ಸಭಾಪತಿಗಳಾದ ಬಿ.ಎಲ್.ಶಂಕರ್ ಅವರು ಉಪಯುಕ್ತ ಮಾಹಿತಿ ನೀಡಿದರು ಎಂದು ಹೇಳಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ: 04.02.2022

33. ಶೈಕ್ಷಣಿಕ ಸಮಸ್ಯೆ – ಬಜೆಟ್ನಲ್ಲಿ ಪರಿಹಾರ ಸೂಚಿಸಲು ಆಗ್ರಹ

ಮುಖ್ಯಮಂತ್ರಿ ಮಂಡಿಸಲಿರುವ 2022–23ನೇ ಸಾಲಿನ ಆಯವ್ಯಯದಲ್ಲಿ ಹಲವಾರು ದಿನಗಳಿಂದ ನೆನೆಗುದಿಗೆ ಬಿದ್ದಿರುವ ಶಿಕ್ಷಣ ರಂಗದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು ಅವಶ್ಯಕ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.

1994–95ರ ನಂತರ ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸುವುದು, 2021ರ ಡಿಸೆಂಬರ್ 31ರವರೆಗೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಂಡು ಸೂಕ್ತ ಅನುದಾನ ಒದಗಿಸುವುದು, ಕಾಲ್ಪನಿಕ ವೇತನ ವರದಿಯನ್ನು ಜಾರಿಗೊಳಿಸಲು 382 ಕೋಟಿ ಅನುದಾನ, 2006ರ ಏಪ್ರಿಲ್ 1ರ ನಂತರ ನೇಮಕಗೊಂಡ ಶಿಕ್ಷಣ ಇಲಾಖೆ ಸಿಬ್ಬಂದಿಯ ಪಿಂಚಣಿಯ ವಂತಿಗೆಯನ್ನು ಸರ್ಕಾರವೇ ತುಂಬಲು ರೂ.132 ಕೋಟಿ ಒದಗಿಸುವುದು. 1994–95ಕ್ಕಿಂತ ಮೊದಲು ಪ್ರಾರಂಭಿಸಿದ ಖಾಸಗಿ ಪದವಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸೂಕ್ತ ಅನುದಾನ ಒದಗಿಸುವುದು.

ಖಾಸಗಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡುವುದರೊಂದಿಗೆ ಅನುದಾನ ಒದಗಿಸುವುದು, 1985 ರಿಂದ 1987 ರವರೆಗೆ ಪ್ರಾರಂಭಿಸಿದ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಿದ್ದು ಇನ್ನಾದರೂ ಅನುದಾನ ಒದಗಿಸುವುದು, ಖಾಸಗಿ ಐ.ಟಿ.ಐ. ಕಾಲೇಜುಗಳನ್ನು ವೇತನಾನುದಾನ ನೀಡುವುದು, ರಾಜ್ಯದ ಸುಮಾರು 2 ಲಕ್ಷಕ್ಕೂ ಅಧಿಕ ಸರ್ಕಾರಿ ನೌಕರರ ಹುದ್ದೆಗಳು ಖಾಲಿ ಇದ್ದು, ಭರ್ತಿ ಮಾಡಲು ಅನುಮೋದನೆ ನೀಡಲು ಕ್ರಮ ಜರುಗಿಸಬೇಕು ಎಂದು ಅವರು ತಿಳಿಸಿದ್ದಾರೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 04.02.2022

34. ಪರಿಣಿತರೊಂದಿಗೆ ಚರ್ಚಿಸಿ ಮನವೊಲಿಸಿ ರಾಜಕೀಯ ಬಿಟ್ಟು ಸಮಸ್ಯೆ ಬಗೆಹರಿಸಿ

ರಾಜ್ಯದಲ್ಲಿ ಹಿಜಾಬ್–ಕೇಸರಿ ಶಾಲು ಪ್ರಕರಣದ ಪರಿಸ್ಥಿತಿ ಹೀಗೆ ಮುಂದುವರೆದರೆ ಹೆಣ ಬೀಳೋ ಸ್ಥಿತಿ ನಿರ್ಮಾಣವಾಗುತ್ತದೆ. ರಾಜಕೀಯ ಬಿಟ್ಟು ಸರ್ಕಾರ ಸಭೆ ಕರೆದು, ಎಲ್ಲ ಪರಿಣಿತರೊಂದಿಗೆ ಚರ್ಚಿಸಿ

ಎಲ್ಲರ ಮನವೊಲಿಸಿ ಸಮಸ್ಯೆ ಬಗೆಹರಿಸಬೇಕು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ ನೀಡಿದರು.

ನಮಗೆ ರಾಜ್ಯ, ಮಕ್ಕಳು, ನೆಮ್ಮದಿ ಮುಖ್ಯ. ನಾನೀಗ ರಾಜಕೀಯದ ಬಗ್ಗೆ ಮಾತಾಡಲು ಬರುವುದಿಲ್ಲ. ಈ ಪ್ರಕರಣದಿಂದ ಯಾರಿಗೆ ಲಾಭ ಹೇಳಿ ಎಂದು ಪ್ರಶ್ನಿಸಿ, ಇದರಿಂದ ಮತ ಬೀಳುತ್ತವೆ ಅನ್ನೋದು ತಪ್ಪು ಎಂದು ವ್ಯಕ್ತಪಡಿಸಿದರು.

ಮುಂದೆ ರಾಷ್ಟ್ರವ್ಯಾಪಿ ಗಲಾಟೆ ಶುರುವಾಗುವ ಸಾಧ್ಯತೆಗಳು ಹೆಚ್ಚು ಇವೆ. ಅದಕ್ಕಾಗಿ ವಿಧಾನಸಭೆ ಅಧಿವೇಶನಕ್ಕಿಂತ ಮುಂಚೆಯೇ ಇದನ್ನು ನಿಲ್ಲಿಸಬೇಕು. ಇದು ಷಡ್ಯಂತ್ರವಲ್ಲ, ಮೂರ್ಖರು ಮಾಡುತ್ತಿರುವ ಕೆಲಸವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಸೂಕ್ತ ಕ್ರಮ ವಹಿಸಬೇಕು ಎಂದರು.

ಮಕ್ಕಳ ಮನಸ್ಸು ಬಹಳ ಮೃದು, ಈಗ ನಡೆದಿರೋ ಪ್ರಕರಣವು ಅವರ ಭವಿಷ್ಯಕ್ಕೆ ಅಪಾಯಕಾರಿಯಾಗಲಿದೆ. ಅಪಾಯಕ್ಕೆ ದಾರಿ ಮಾಡಿಕೊಡುವ ವಾತಾವರಣ ಸೃಷ್ಟಿಯಾಗುತ್ತಿದೆ. ತಂದೆ–ತಾಯಿ ಈ ಬಗ್ಗೆ ವಿಚಾರ ಮಾಡಬೇಕು. ಒಂದು ಕಡೆ ಪಾಕ್ ಜಿಂದಾಬಾದ್, ಅಲ್ಲಾಹೋ ಅಕ್ಬರ್ ಅಂತಾರೆ, ಮತ್ತೊಂದು ಕಡೆಯವರು ಜೈ ಶ್ರೀರಾಮ್ ಅಂತಾರೆ. ಅದಕ್ಕಾಗಿ ಪರಿಸ್ಥಿತಿ ತಿಳಿಗೊಳಿಸುವ ಕೆಲಸವಾಗಬೇಕಾಗಿದೆ ಎಂದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 04.02.2022

35. ನೈತಿಕತೆ ರಾಜಕೀಯಕ್ಕಷ್ಟೇ ಸೀಮಿತವಲ್ಲ : ಕಾಗೇರಿ

ಮೌಲ್ಯಗಳು ಮತ್ತು ನೈತಿಕತೆಯ ಕುಸಿತ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ನ್ಯಾಯಾಂಗ, ಕಾರ್ಯಾಂಗ ಸೇರಿದಂತೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿಕೊಂಡಿದೆ ಎಂದು ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದರು.

ನೂತನವಾಗಿ ಆಯ್ಕೆಯಾಗಿರುವ ಶಾಸಕರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಚುನಾಯಿತ ಪ್ರತಿನಿಧಿಗಳು ಸಮಾಜದಲ್ಲಿ ಅಭಿಪ್ರಾಯ ರೂಪಿಸುವವರು. ನಾವು ಈಗ ಕೈಕಟ್ಟಿ ಕೂರಬಾರದು. ನೈತಿಕ ಮೌಲ್ಯಗಳ ಕುಸಿತ ತಡೆಗೆ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು. ಸದ್ಯದ ರಾಜಕೀಯ ಸನ್ನಿವೇಶ ಮತ್ತು ಚುನಾವಣಾ ಸುಧಾರಣೆಗಳ ಕುರಿತು ಆತ್ಮಾವಲೋಕನ ಅಗತ್ಯವಿದೆ. ಇದೇ 14ರಿಂದ ಆರಂಭವಾಗುವ ವಿಧಾನಮಂಡಲ ಅಧಿವೇಶದಲ್ಲಿ ಈ ಕುರಿತು ಎರಡು ದಿನಗಳ ಕಾಲ ಚರ್ಚೆಗೆ ಅವಕಾಶ ಕಲ್ಪಿಸುವ ಯೋಚನೆ ಇದೆ ಎಂದು ಕಾಗೇರಿ ಹೇಳಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು.

ಮೇಲ್ಪಂಕ್ತಿ ಬೇಕು: ಮೇಲ್ಮನೆಯಲ್ಲಿ ಹೆಚ್ಚು ಚರ್ಚೆ ನಡೆದು ಅದರಿಂದ ಕೆಳಮನೆಗೆ ಮಾರ್ಗದರ್ಶನ ದೊರಕಬೇಕು. ಪರಿಷತ್ನಲ್ಲಿ ಇತ್ತೀಚೆಗೆ ನಡೆದ ಕೆಲ ಘಟನೆಗಳು ಗೌರವ ತರುವಂಥದ್ದಲ್ಲ. ಇದರ ಮಧ್ಯೆ ಪರಿಷತ್ ಇರಬೇಕೊ, ಬೇಡವೊ ಎಂಬ ಚರ್ಚೆಯೂ ನಡೆಯುತ್ತಿದೆ. ಕಾನೂನಿನಿಂದ ಎಲ್ಲವೂ ಬದಲಾವಣೆಯಾಗದು. ಸಂವಿಧಾನದ ಆಶಯದಂತೆ ನಡೆದುಕೊಳ್ಳಬೇಕು," ಎಂದು ಅಪೇಕ್ಷಿಸಿದರು. ಸಭಾಪತಿ ಹೊರಟ್ಟಿ ಪಾಲ್ಗೊಂಡಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 05.02.2022

ದಿನಾಂಕ: 04.02.2022ರಂದು ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಹಾಗೂ ಸನ್ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನ ಮಂಡಲದ ವತಿಯಿಂದ ವಿಕಾಸಸೌಧದಲ್ಲಿ ಆಯೋಜಿಸಿದ್ದ ಮಾನ್ಯ ಶಾಸಕರುಗಳಿಗೆ ತರಬೇತಿ ಶಿಬಿರದಲ್ಲಿ ಭಾಗವಹಿಸಿ "ಸಂವಿಧಾನ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ" ಎಂಬ ವಿಷಯದ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರು ಉಪನ್ಯಾಸ ನೀಡುತ್ತಿರುವ ಸಂದರ್ಭ ಹಾಗೂ ಈ ಕುರಿತು ಸನ್ಮಾನ್ಯ ಸಭಾಧ್ಯಕ್ಷರಿಗೆ ಸನ್ಮಾನ್ಯ ಸಭಾಪತಿರವರಿಂದ ಗೌರವಾರ್ಪಣೆ;

36. ಜಂಟಿ ಸೆಷನ್ ಚುನಾವಣೆ ಚರ್ಚೆ

ಚುನಾವಣೆ ವ್ಯವಸ್ಥೆ ಸುಧಾರಣೆ ಬಗ್ಗೆ ಜಂಟಿ ಅಧಿವೇಶನದಲ್ಲಿ 2 ದಿನ ಚರ್ಚಿಸುವುದು ಸೂಕ್ತ ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿಪ್ರಾಯ ಪಟ್ಟಿದ್ದಾರೆ.

ಪರಿಷತ್ ಸದಸ್ಯರಿಗೆ ಆಯೋಜಿಸಿರುವ ಕಾರ್ಯಾಗಾರದಲ್ಲಿ ಮಾತನಾಡಿ, "ಪರಿಷತ್ನಲ್ಲೂ ಇದಕ್ಕೆ ಅವಕಾಶ ನೀಡಬಹುದು. ಜನಪ್ರತಿನಿಧಿಗಳಲ್ಲಿ ಈಗ ಚರ್ಚೆ ಮಾಡುವ ಮನಸ್ಥಿತಿ ಇಲ್ಲ. ನಾನಾ ವಿಚಾರಗಳ ಬಗ್ಗೆ ವಿಶ್ಲೇಷಿಸುವ ಮನೋಭಾವ ಇರಬೇಕು," ಎಂದರು.

37. ಚಿಂತಕರ ಚಾವಡಿಗೆ ಅನುಭವ ಮಂಟಪದ ರೂಪ

ವಿಧಾನ ಪರಿಷತ್ತು ಹಾಗೂ ಈ ಸದನದ ಕಲಾಪಗಳಿಗೆ ಅನುಭವ ಮಂಟಪದ ರೀತಿಯ ಔನತ್ಯಪೂರ್ಣ ಸ್ಪರ್ಶವನ್ನು ನೀಡಲಾಗುವುದು. ಮೇಲ್ಮನೆಯ ಕಲಾಪಗಳನ್ನು ರಾಜ್ಯ ಸಭಾ ಮಾದರಿಯಲ್ಲಿ ನಡೆಸಲಾಗುವುದು.

ಸಭಾಪತಿಯಾಗಿ ಫೆಬ್ರವರಿ 9ಕ್ಕೆ ಒಂದು ವರ್ಷ ಪೂರೈಸುತ್ತಿರುವ ಬಸವರಾಜ ಹೊರಟ್ಟಿಯವರ ಮನದಾಳದ ಮಾತುಗಳಿವು, ಸಂಯುಕ್ತ ಕರ್ನಾಟಕಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಹೊರಟ್ಟಿ ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಂಡರು.

ಮೇಲ್ಮನೆಯ ಅಸ್ತಿತ್ವ ಮತ್ತು ಘನತೆಯ ಕುರಿತು ತಮ್ಮ ಅನಿಸಿಕೆ ಏನು?

ಮೇಲ್ಮನೆಗೆ ಅತ್ಯಂತ ಘನತೆಯಿದೆ. ಇದರ ಘನತೆ ಕಡಿಮೆಯಾಗಿದೆ ಎಂಬ ಮಾತುಗಳು ಈಚೇಗೆ ಕೇಳಿ ಬರುತ್ತಿವೆ. ಇದರಿಂದ ನನಗೆ ಅತೀವ ನೋವಾಗಿದೆ. ಇಂತಹ ಮಾತುಗಳು ಕೇಳಿ ಬರುತ್ತಿರುವುದಕ್ಕೆ ಕಾರಣವೇನು ಹೇಳಿ? ನಮ್ಮೆಲ್ಲರ ನಡವಳಿಕೆಯೇ, ಮೇಲ್ಮನೆಯ ಘನತೆಯನ್ನು ಹಾಳು ಮಾಡಿದವರು ನಾವೇ. ಇನ್ನಾದರೂ ಈ ಭಾವನೆ ಹೋಗುವಂತೆ ನೋಡಿಕೊಳ್ಳಬೇಕಾಗಿದೆ.

ಸದ್ಯ ನಡೆಯುತ್ತಿರುವ ಕಲಾಪಗಳಗುಣಮಟ್ಟ ತಮಗೆ ತೃಪ್ತಿದಾಯಕವೇ?

ಈಗೀಗ ಪರಿಷತ್ತು ಮುನ್ಸಿಪಾಲಿಟಿಯಂತೆ ಕಾಣುತ್ತಿದೆ ಎಂಬ ಕೆಲವರ ಟೀಕೆಗಳು ಅಲ್ಲಲ್ಲಿ ಕೇಳಿಬರುತ್ತಿವೆ. ಇದರಿಂದ ನನಗೆ ಅತೀವ ನೋವಾಗಿದೆ. ಹೀಗಾಗುವುದನ್ನು ನಾವೆಲ್ಲ ಸೇರಿ ತಡೆಯಬೇಕಿದೆ.

ವಿಧಾನ ಪರಿಷತ್ತಿಗೆ ಚಿಂತಕರ ಚಾವಡಿ ಎನ್ನುವ ಹೆಸರನ್ನು ಮರಳಿ ತರಲು ತಮ್ಮ ಯತ್ನ...

ಇಂತಹ ಯತ್ನವನ್ನು ಮಾಡಲೇಬೇಕಾಗಿದೆ. ಮಾಡುವೆ.

ತಾವು ಕಂಡುಕೊಳ್ಳಬಹುದಾದ ಪರಿಹಾರ?

ನಾನು ಮತ್ತು ವಿಧಾನಸಭೆಯ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ಬಜೆಟ್ ಅಧಿವೇಶನ ಮುಗಿಯುತ್ತಿದ್ದಂತೆ ಇದೇ ವಿಷಯವಾಗಿ ಒಂದು ವಿಚಾರ ಸಂಕೀರಣವನ್ನು ಏರ್ಪಡಿಸುವ ಆಲೋಚನೆ ಮಾಡಿದ್ದೇವೆ. ಅಂದಿನ ರಾಜಕಾರಣ ಮತ್ತು ಅಂದಿನ ಚುನಾವಣೆ. ಇಂದಿನ ರಾಜಕಾರಣ ಮತ್ತು ಇಂದಿನ ಚುನಾವಣೆ ಎಂಬುದು ಸಂಕೀರಣದ ವಿಷಯ. ಪರಿಷತ್ತಿನ ಗತವೈಭವವನ್ನು ಮರಳಿ ತರಲು, ಸಮಾಜದ ವಿವಿಧ ಕ್ಷೇತ್ರಗಳ ಜನರನ್ನು ಇಲ್ಲಿಗೆ ಕರೆತರಲು ಏನೇನು ಮಾಡಬೇಕು ಎಂಬ ಚಿಂತನೆ ನಡೆಯಲಿದೆ.

ಒಂದು ವರ್ಷದ ಅವಧಿಯಲ್ಲಿ ಬೇಸರ, ಖುಷಿ ಕೊಟ್ಟ ವಿಷಯಗಳು ಯಾವುವು?

ಸದನದ ಬಾವಿಗಿಳಿದು ಗದ್ದಲ ಮಾಡಿದ್ದು, ಕರಪತ್ರ – ಪ್ಲೆಕಾರ್ಡ್ ಪ್ರದರ್ಶನ ಮಾಡಿದ್ದು ಹಾಗೂ ಸಭಾಪತಿ ಪೀಠದಿಂದ ಎದ್ದು ನಿಂತು ಕೂತುಕೊಳ್ಳುವಂತೆ ಕೋರಿದರೂ ಗದ್ದಲವನ್ನು ಮುಂದುವರಿಸಿದ್ದು (ಇತ್ತೀಚಿಗಿನ ಬೆಳಗಾವಿ ಅಧಿವೇಶನ) ಬೇಸರ ತರಿಸಿದ ಸಂಗತಿ. ಆದರೆ ಬೆಳಗಾವಿಯ ಅಧಿವೇಶನದಲ್ಲಿ ದಕ್ಷಿಣ ಭಾಗದ ಸದಸ್ಯರೂ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಮಾತನಾಡಿ ಇಲ್ಲಿನ ಸಮಸ್ಯೆಗೆ ಸಕ್ರಿಯವಾಗಿ ಸ್ಪಂದಿಸಿ, ಇವು ಪರಿಹಾರವಾಗಬೇಕೆಂದು ಕಳಕಳಿಯಿಂದ ಹೇಳಿದ್ದು ಸಂತೋಷ ತಂದ ವಿಷಯ.

ಸಾಮಾಜಿಕ ಕಳಕಳಿ, ಬದ್ಧತೆ

ಇಪತ್ತು ಮತ್ತು ಇಪತ್ತೊಂದು ಈ ಎರಡೂ ಶತಮಾನಗಳ ಸಾಮಾಜಿಕ ಮತ್ತು ರಾಜಕೀಯ ತಲ್ಲಣಗಳನ್ನು ಸಮಾಧಾನಗಳನ್ನು ಹಾಗೆಯೇ ಮೌಲ್ಯಗಳ ಪತನವನ್ನು ಕಂಡ ಅಪರೂಪದ ಹಿರಿಯರು ಬಸವರಾಜ ಹೊರಟ್ಟಿ.

ಸತತ ಏಳು ಬಾರಿ ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ಮೇಲ್ಮನೆಗೆ ಆಯ್ಕೆಯಾಗಿರುವ ಬಸವರಾಜ ಹೊರಟ್ಟಿ ಸಭಾಪತಿಗಳಾಗುವಾಗ ಅವರಿಗೆ ಪಕ್ಷಾತೀತ ಬೆಂಬಲ ದೊರಕಿತ್ತು. ಕೇವಲ 11 ಸದಸ್ಯರಿದ್ದ ಜೆಡಿಎಸ್‌ನ ಈ ಹಿರಿಯರಿಗೆ ಬಿಜೆಪಿ ತಾತ್ವಿಕವಾಗಿ ಬೆಂಬಲಿಸಿದ್ದರಿಂದ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸದೇ ಹೊರಟ್ಟಿಯವರನ್ನು ಬೆಂಬಲಿಸಿತ್ತು. ಇದಕ್ಕೆ ಕಾರಣ ಹೊರಟ್ಟಿಯವರಿಗೆ ಇರುವ ಪ್ರಬುದ್ಧತೆ ಮತ್ತು ಮಾಗಿದ ವ್ಯಕ್ತಿತ್ವ. ಎರಡೂ ಸದನಗಳ ಅತೀ ಹಿರಿಯ ಸದಸ್ಯರಾಗಿರುವ ಬಸವರಾಜ ಹೊರಟ್ಟಿಯವರನ್ನು ಸಭಾಪತಿಗಳಾಗಿ ಅವಿರೋಧ ಆಯ್ಕೆ ಮಾಡುವುದಕ್ಕೆ ಮುಖ್ಯ ಕಾರಣ ಅವರ ಈ ಘನ ವ್ಯಕ್ತಿತ್ವವೇ. ಈ ಒಂದು ವರ್ಷದ ಅವಧಿಯಲ್ಲಿ ಹಾಗೂ ಇದಕ್ಕೂ ಮೊದಲೊಮ್ಮೆ ಹಂಗಾಮಿ ಸಭಾಪತಿಗಳಾಗಿದ್ದಾಗ ಹೊರಟ್ಟಿ ಮೇಲ್ಮನೆಯ ಹಿರಿಮೆಯನ್ನು ಹೆಸರಿಗೆ ತಕ್ಕಂತೆ ಇನ್ನಷ್ಟು ಹೆಚ್ಚಿಸಿದರು. ಸದನವನ್ನು ಅತ್ಯಂತ ಶಿಸ್ತುಬದ್ಧವಾಗಿ ನಡೆಸುವ ಹಾಗೂ ಸದಸ್ಯರಿಗೆ ಮಾರ್ಗದರ್ಶನ ಮಾಡುವ ಹೊರಟ್ಟಿಯವರು ಪಕ್ಷಾತೀತವಾಗಿ ಗೌರವಕ್ಕೆ ಪಾತ್ರರಾಗಿರುವ ಸಭಾಪತಿ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 09.02.2022

38. ಮೇಲ್ಮನೆಯಲ್ಲಿ ಜೆಡಿಎಸ್ ಮುಖಂಡ ಮುಖ್ಯ ಸಚೇತಕರಾಗಿ ಗೋವಿಂದರಾಜು

ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ಅವರನ್ನು ಪರಿಷತ್‌ನಲ್ಲಿ ಜೆಡಿಎಸ್ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲು ನಡೆದ ಜೆಡಿಎಸ್ ಕೋರ್ ಕಮಿಟಿ ಸಭೆ ನಿರ್ಧರಿಸಿದೆ. ಕೋಲಾರದ ಜೆಡಿಎಸ್ ಮುಖಂಡ ಗೋವಿಂದರಾಜು ಅವರು ವಿಧಾನಸಭೆಯಿಂದ ಪರಿಷತ್‌ಗೆ ಚುನಾಯಿತರಾಗಿದ್ದರು. ಇದೀಗ ಅವರನ್ನು ಮೇಲ್ಮನೆಯಲ್ಲಿ ಪಕ್ಷದ ಮುಖ್ಯ ಸಚೇತಕರನ್ನಾಗಿ ಮಾಡಲು ಪಕ್ಷದ ನಾಯಕರು ತೀರ್ಮಾನಿಸಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ: 12.02.2022

39. ಕೋಟ ಶ್ರೀನಿವಾಸ ಪೂಜಾರಿ ಸಭಾನಾಯಕ

ವಿಧಾನ ಪರಿಷತ್ತಿನ ಸಭಾ ನಾಯಕರಾಗಿ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ನೇಮಕ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭಾಪತಿ ಬಸರಾಜ ಹೊರಟ್ಟಿ ಅವರಿಗೆ ಪತ್ರ ಬರೆದಿದ್ದಾರೆ. ಸಚಿವ ಕೋಟ ಶ್ರೀನಿವಾಸ ಪೂಜಾರಿ ಮೇಲ್ಮನೆ ಸಭಾ ನಾಯಕರಾಗಿದ್ದರು. ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕೋಟ ಶ್ರೀನಿವಾಸ ಪೂಜಾರಿ ಮರು ಆಯ್ಕೆಯಾಗಿದ್ದರಿಂದ ಅವರನ್ನೇ ಮತ್ತೆ ಸಭಾ ನಾಯಕರಾಗಿ ಆಯ್ಕೆ ಮಾಡುವಂತೆ ಸಿಎಂ ಸಭಾಪತಿಗೆ ಪತ್ರದ ಮೂಲಕ ನಿರ್ದೇಶಿಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ: 12.02.2022

40. ಚುನಾವಣಾ ಸುಧಾರಣೆ ಕುರಿತು ಅಧಿವೇಶನದಲ್ಲಿ ಚರ್ಚೆ

ರಾಜ್ಯ ವಿಧಾನಮಂಡಲ ಅಧಿವೇಶನ ಫೆಬ್ರವರಿ 25ರವರೆಗೆ ನಡೆಯಲಿದ್ದು, ಈ ಅಧಿವೇಶನದಲ್ಲಿ ಎರಡು ದಿನ ಚುನಾವಣಾ ವ್ಯವಸ್ಥೆ ಸುಧಾರಣೆ ಕುರಿತು ಚರ್ಚೆ ನಡೆಯಲಿದೆ ಎಂದು ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದ್ದಾರೆ.

ಅಲ್ಲದೆ, ಈ ಬಾರಿಯ ಕಲಾಪದಲ್ಲಿ ಕಾಗದ ರಹಿತ ಕಲಾಪ ಕಲ್ಪನೆಗೆ ಚಾಲನೆ ನೀಡಲಾಗುವುದು. ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಸೇರಿದಂತೆ ವಿವಿಧ ಸೂಚನೆಗಳಿಗೆ ಸರ್ಕಾರ ಒದಗಿಸುವ ಲಿಖಿತ ಉತ್ತರಗಳನ್ನು ಸದನದಲ್ಲಿ ಮಂಡಿಸಿದ ತರುವಾಯ ಸದಸ್ಯರು ಹಾಗೂ ಮಾಧ್ಯಮದವರಿಗೆ ಮಿಂಚಂಚೆ ಮೂಲಕ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ವಿಧಾನ ಸಭಾ ಸಚಿವಾಲಯದ ಅಂತರ್ಜಾಲ ತಾಣದಲ್ಲಿಯೂ ಈ ಮಾಹಿತಿ ಲಭ್ಯವಾಗಲಿದೆ ಎಂದು ತಿಳಿಸಿದರು.

ಅಧಿವೇಶನ ಸಿದ್ಧತೆಗಳ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಪ್ರಮುಖ ಪಾತ್ರ ವಹಿಸಲಿರುವ ಚುನಾವಣಾ ವ್ಯವಸ್ಥೆಯ ಸುಧಾರಣೆಗಳ ಕುರಿತು ವಿಧಾನ ಮಂಡಲದ ಉಭಯ ಸದನಗಳಲ್ಲಿ ಎರಡು ದಿನಗಳ ಕಾಲ ಚರ್ಚಿಸಲಾಗುವುದು, ಈ ಕುರಿತು ಕಲಾಪ ಸಲಹಾ ಸಮಿತಿಯಲ್ಲಿ ಸಮಾಲೋಚಿಸಿ ವಿಸ್ತೃತ ಚರ್ಚೆಗೆ ದಿನಾಂಕ ಮತ್ತು ಸಮಯ ನಿಗದಿಪಡಿಸಲಾಗುವುದು ಎಂದರು.

ಭಾವುಕರಾದ ಸ್ಪೀಕರ್: ಇಂತಹುದೇ ವಿಷಯಗಳ ಮೇಲೆ ಈ ಹಿಂದೆ ನಡೆದ ಚರ್ಚೆಗಳು ಫಲಪ್ರದವಾಗಿಲ್ಲ. ಹೀಗಾಗಿ ಈ ಚರ್ಚೆಯಿಂದ ಸದನದ ಸಮಯ ವ್ಯರ್ಥವಾಗುವುದಿಲ್ಲವೇ ಎಂಬ ಸುದ್ದಿಗಾರರ ಪ್ರಶ್ನೆಗೆ, ಭಾರತಕ್ಕೆ ಒಂದು ಸಂವಿಧಾನ ಅಗತ್ಯವಿದೆ ಎಂದು ಮೋತಿಲಾಲ್ ನೆಹರೂ ಅಧ್ಯಕ್ಷತೆಯಲ್ಲಿ 1927ರಲ್ಲಿ ನಡೆದ ಅಂದಿನ ಕಾಂಗ್ರೆಸ್ ಅಧಿವೇಶನದಲ್ಲಿ ಚಿಗುರೊಡೆದ ಆಶಯ ಸಾಕಾರಗೊಂಡಿದ್ದು 1950ರಲ್ಲಿ, ಯಾವುದೇ ವಿಷಯವು ಚರ್ಚೆಯೇ ಆಗದಿದ್ದಲ್ಲಿ ಬೆಳಕು ಕಾಣುವುದು ಹೇಗೆ ಎಂದು ಮರುಪ್ರಶ್ನೆ ಹಾಕಿ ಕೆಲಕಾಲ ಭಾವುಕರಾದರು.

ಕರೋನಾ ಸಾಂಕ್ರಾಮಿಕದ ಬಳಿಕ ವಿಧಾನಸಭೆ ಕಲಾಪವನ್ನು ಸಾರ್ವಜನಿಕರ ವೀಕ್ಷಣೆಗೆ ನಿರ್ಬಂಧಿಸಲಾಗಿತ್ತು. ಇದೀಗ ಸೋಂಕು ನಿಯಂತ್ರಣಕ್ಕೆ ಬಂದಿರುವುದರಿಂದ ಆರಂಭವಾಗುವ ಕಲಾಪಗಳನ್ನು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದು ಎಂದರು.

ವಿಧಾನಸಭೆಗೆ ಸಂಬಂಧಿಸಿದಂತೆ ಈವರೆಗೆ 2062 ಪ್ರಶ್ನೆಗಳು, 81 ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 351 ಅಡಿಯಲ್ಲಿ 31 ಸೂಚನೆಗಳು ಸ್ವೀಕೃತವಾಗಿವೆ. ಕರ್ನಾಟಕ ಮುದ್ರಾಂಕ (ಎರಡನೇ ತಿದ್ದುಪಡಿ) ವಿಧೇಯಕ 2021 ಹಾಗೂ ದಂಡ ಪ್ರಕ್ರಿಯಾ ಕಾನೂನು ತಿದ್ದುಪಡಿ ಅಧ್ಯಾದೇಶ 1994 (ಕರ್ನಾಟಕ ತಿದ್ದುಪಡಿ) ವಿಧೇಯಕ 2021 ಗಳನ್ನು ಮಂಡಿಸಲಾಗುವುದು ಎಂದು ಹೇಳಿದರು.

ರಾಜ್ಯ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಸೇರಿದಂತೆ ವಿಧಾನಸಭಾ ಸಚಿವಾಲಯದ ಹಿರಿಯ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಆಧಾರ: ವಿಶ್ವವಾಣಿ, ದಿನಾಂಕ: 13.02.2022

41. ವಿಧಾನಮಂಡಲ ಅಧಿವೇಶನಕ್ಕೆ ಸಜ್ಜು

ರಾಜ್ಯದಲ್ಲಿ ವಿಧಾನಸಭೆಯ 12 ನೇ ಅಧಿವೇಶನ ಫೆಬ್ರವರಿ 14 ರಿಂದ 25 ರವರೆಗೆ ನಡೆಯಲಿದ್ದು, ಸಚಿವಾಲಯ ಸಿಬ್ಬಂದಿ, ಅಧಿಕಾರಿಗಳು ಸುಗಮ ಕಲಾಪಕ್ಕೆ ಸಕಲ ಸಿದ್ಧತೆ ನಡೆಸಿದ್ದಾರೆ.

ಸಂಪ್ರದಾಯದಂತೆ ವರ್ಷದ ಮೊದಲ ಅಧಿವೇಶನದಲ್ಲಿ ರಾಜ್ಯಪಾಲರು ವಿಧಾನಸಭೆ ಹಾಗೂ ವಿಧಾನ ಪರಿಷತ್ ಸದಸ್ಯರನ್ನು "ಉದ್ದೇಶಿಸಿ ಭಾಷಣ ಮಾಡಲಿದ್ದು, ವಿಧಾನಸಭೆ ಸಭಾಧ್ಯಕ್ಷ ಹಾಗೂ ವಿಧಾನಪರಿಷತ್ ಸಭಾಪತಿ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ಚಂದ್ ಗೆಹಲೋತ್ ಅವರಿಗೆ ಆಹ್ವಾನ ನೀಡಿದರು. ಈ ವೇಳೆ ಎರಡೂ ಸದನಗಳ ಕಾರ್ಯದರ್ಶಿ ಹಾಜರಿದ್ದರು. ಇತ್ತ ವಿಧಾನಸಭೆ ಮತ್ತು ವಿಧಾನಪರಿಷತ್ ಸಭಾಂಗಣದಲ್ಲಿ ಸ್ವಚ್ಛತೆ, ಕಾರಿಡಾರ್ ಶುಭ್ರಗೊಳಿಸುವ ಕೆಲಸ ಭರದಿಂದ ನಡೆದಿತ್ತು. ರಾಜ್ಯಪಾಲರ ಆಗಮನದಲ್ಲಿ ಅನುಸರಿಸಬೇಕಾದ ಸಿದ್ಧತೆಗಳ ಬಗ್ಗೆ ಪೊಲೀಸ್ ಅಧಿಕಾರಿಗಳು ತಮ್ಮ ತಂಡದೊಂದಿಗೆ ತಾಲೀಮು ನಡೆಸಿದರು.

ಇನ್ನು ಸ್ಪೀಕರ್ ಎಲ್ಲ ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿ, ಅಧಿವೇಶನ ಪೂರ್ವಸಿದ್ಧತೆ ಕುರಿತು ವಿವರಣೆ ನೀಡಿದರು. ರಾಜ್ಯಪಾಲರ ಭಾಷಣದ ಬಳಿಕ ಮತ್ತೆ ಸದನ ಸಮಾವೇಶಗೊಂಡು ಕಳೆದ ಅಧಿವೇಶನದ ನಂತರ ಹಾಗೂ ಪ್ರಸಕ್ತ ಅಧಿವೇಶನದ ಅವಧಿಯಲ್ಲಿ ಮೃತರಾದ ಸದನದ ಸದಸ್ಯರು ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ಗಣ್ಯರಿಗೆ ಸಂತಾಪ ಸೂಚಿಸಲಿದೆ. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಸಂಬಂಧಿಸಿದಂತೆ ಚರ್ಚೆ ಸರ್ಕಾರದ ಉತ್ತರ ಮತ್ತು ವಂದನಾ ನಿರ್ಣಯದ ಅಂಗೀಕಾರ ಮತ್ತು ಉಳಿದ ಕಲಾಪಗಳು ನಡೆಯಲಿವೆ ಎಂದು ವಿವರಿಸಿದರು.

ಪ್ರಜಾಪ್ರಭುತ್ವದಲ್ಲಿ ಪ್ರಮುಖ ಪಾತ್ರ ವಹಿಸಲಿರುವ ಚುನಾವಣಾ ವ್ಯವಸ್ಥೆಯ ಸುಧಾರಣೆಗಳ ಕುರಿತು ಸದನ ಕಾರ್ಯಕಲಾಪ ಸಮಿತಿಯಲ್ಲಿ ಚರ್ಚಿಸಿ, ಸದನದಲ್ಲಿ ವಿಸ್ತೃತ ಚರ್ಚೆಗೆ ಕಾಲಾವಕಾಶ ಸೂಕ್ತ ದಿನಾಂಕ ಮತ್ತು ಸಮಯವನ್ನು ನಿಷ್ಕರ್ಷೆ ಎಂದು ಸ್ಪೀಕರ್ ತಿಳಿಸಿದರು.

ಇಂತಹುದೇ ವಿಷಯಗಳ ಮೇಲೆ ಈ ಹಿಂದೆ ನಡೆದ ಚರ್ಚೆಗಳು ಫಲಪ್ರದವಾಗಿಲ್ಲ. ಆದಕಾರಣ ಇಂತಹ ಚರ್ಚೆಗಳು ಸಾರ್ವಜನಿಕ ಸಮಯವನ್ನು ಕಬಳಿಸುತ್ತದೆ ಅಲ್ಲವೇ? ಎಂದು ಪತ್ರಕರ್ತರೊಬ್ಬರು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿ, ಯಾವುದೇ ವಿಷಯವು ಚರ್ಚೆಯೇ ಆಗದಿದ್ದಲ್ಲಿ ಬೆಳಕು ಕಾಣುವುದು ಹೇಗೆ ಎಂದು ಪ್ರಶ್ನಿಸಿದ ಸಭಾಧ್ಯಕ್ಷರು ಕೆಲಕಾಲ ಭಾವುಕರಾದರು. ಒಂದು ದೇಶ ಒಂದು

ಚುನಾವಣೆಗೆ ವಿರೋಧ, ಲೋಕಸಭೆ ಸ್ಪೀಕರ್ ಕಾರ್ಯಕ್ರಮಕ್ಕೆ ಬಹಿಷ್ಕಾರದಂತಹ ಪ್ರತಿಪಕ್ಷದ ನಡವಳಿಕೆ ಅವರಲ್ಲಿ ಬೇಸರ ತರಿಸಿದಂತಿತ್ತು.

ರಾಜ್ಯಸಭೆ ಮಾದರಿ ಅನುಸರಣೆ

ಇನ್ನು ಮುಂದೆ ರಾಜ್ಯಸಭೆಯಲ್ಲಿ ನಡೆಯುವ ಮಾದರಿಯಲ್ಲಿಯೇ ವಿಧಾನಪರಿಷತ್ತಿನ ಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ರಾಜ್ಯಸಭೆಯಲ್ಲಿ ಅನುಸರಿಸುವ ನಿಯಮಗಳು, ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಮುಂದಾಗಿದ್ದೇವೆ. ಈ ಸಂಬಂಧ ರಾಜ್ಯಸಭೆ ಅಧಿವೇಶನ ನಡೆಯುವ ವೇಳೆ ನವದೆಹಲಿಗೆ ತೆರಳಿ ಅಲ್ಲಿನ ಕಾರ್ಯಕಲಾಪಗಳನ್ನು ವೀಕ್ಷಿಸಿ ಆ ಪದ್ದತಿಯನ್ನು ಅಳವಡಿಸಿಕೊಳ್ಳಬೇಕು ಎಂದುಕೊಂಡಿದ್ದೇವೆ' ಎಂದು ಪರಿಷತ್ ಸಭಾಪತಿ ಕಲಾಪದ ಬಗ್ಗೆ ಮಾಹಿತಿ ನೀಡಿದರು.

2017 ರಲ್ಲಿ 40 ದಿನ, 2018ರಲ್ಲಿ 28 ದಿನ, 2019ರಲ್ಲಿ 20 ದಿನ 2020ರಲ್ಲಿ 33 ದಿನ ಹಾಗೂ 2021ರಲ್ಲಿ 41 ದಿನ ಸದನ ನಡೆದಿದೆ. ಅದಕ್ಕೆ ಅವಕಾಶ ಕೊಡದೆ ಮುಂದಿನ ದಿನಗಳಲ್ಲಿ 60 ದಿನಗಳು ಕಲಾಪಗಳನ್ನು ನಡೆಸಲು ಅವಕಾಶ ಒದಗಿಸುವಂತೆ ಸರ್ಕಾರಕ್ಕೆ ತಿಳಿಸಲಾಗುವುದು ಎಂದು ಸಭಾಪತಿ ತಿಳಿಸಿದರು.

ಶಾಸಕರಿಗೆ ತಮ್ಮದೇ ಆದ ಇತಿ ಮಿತಿಗಳು, ಜವಾಬ್ದಾರಿಗಳು ಇರುತ್ತವೆ. ಅದನ್ನು ಅರಿತು ಕಲಾಪದ ವೇಳೆ ನಡೆದುಕೊಳ್ಳಬೇಕು, ಧರಣಿ ನಡೆಸುವುದನ್ನು ಕೈಬಿಡಬೇಕು, ಧರಣಿ ನಡೆಸುವ ಸಮಯದಲ್ಲಿ ಬಿತ್ತಿ ಪತ್ರಗಳನ್ನು ಹಂಚಬಾರದು, ಸದನದ ನಿಯಮಗಳನ್ನು ಮೀರಬಾರದು. ಸದನದಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಸಚಿವರು ಸೀಮಿತ ಉತ್ತರ ಮಾತ್ರ ನೀಡಬೇಕು. ಅನಧಿಕೃತ ಚರ್ಚೆಗೆ ತೊಡಕು ಉಂಟುಮಾಡಬಾರದು' ಎಂದು ಸಭಾಪತಿ ಸಲಹೆ ನೀಡಿದರು.

ಅಧಿವೇಶನದಲ್ಲಿ ಸಕ್ರಿಯವಾಗಿರಿ – ಶಾಸಕರಿಗೆ ದೇವೇಗೌಡ ತಾಕೀತು

ಅಧಿವೇಶನದಲ್ಲಿ ಜೆಡಿಎಸ್ ಶಾಸಕರು ಸಕ್ರಿಯವಾಗಿದ್ದು, ಪೂರ್ಣ ಪ್ರಮಾಣದಲ್ಲಿ ಪಾಲ್ಗೊಳ್ಳಬೇಕು ಎಂದು ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡರು ತಾಕೀತು ಮಾಡಿದ್ದಾರೆ. ಚುನಾವಣೆಗೆ ಇನ್ನೊಂದು ವರ್ಷ ಬಾಕಿ ಇರುವ ಹೊತ್ತಿನಲ್ಲಿಯೂ ಶಾಸಕರು ಸಕ್ರಿಯವಾಗಿ ಅಧಿವೇಶನದ ಕಲಾಪಗಳಲ್ಲಿ ಭಾಗವಹಿಸುವುದಿಲ್ಲ ಎನ್ನುವುದಾದರೆ, ಏನು ಪ್ರಯೋಜನ? ಜನರು ಪಕ್ಷದ ಬಗ್ಗೆ ಏನು ಮಾತನಾಡಿ ಕೊಳ್ಳುತ್ತಾರೆ? ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದಿರುವುದು ಪಕ್ಷದೊಳಗೆ ಚರ್ಚೆಯ ಸಂಗತಿ. ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೂ ಇದೇ ಮಾತನ್ನು ಹೇಳಿರುವ ಅವರು, ಅಧಿವೇಶನಕ್ಕೆ ಸರಿಯಾಗಿ ಸಿದ್ಧತೆ ಮಾಡಿಕೊಂಡು ಹೋಗಿ ಮಾತನಾಡಬೇಕು ಎನ್ನುವ ಸಲಹೆ ನೀಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಶಾಸಕರು ಕೇವಲ ಪ್ರಶ್ನೆ ಕೇಳುವುದಕ್ಕೆ ಮಾತ್ರವೇ ಸೀಮಿತವಾಗಬಾರದು. ಚರ್ಚೆಯಲ್ಲಿ ಭಾಗವಹಿಸುವ ಮೂಲಕ ಅಧಿವೇಶನದಲ್ಲಿ ತಮ್ಮ ಇರುವಿಕೆಯನ್ನು ಸಾಬೀತುಪಡಿಸಬೇಕು. ಅಧ್ಯಯನ ಮಾಡಿಕೊಂಡು ಬಂದು ಸದನದಲ್ಲಿ ಮಾತನಾಡಬೇಕು ಎಂದು ಗೌಡರು ಸಲಹೆ ನೀಡಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ: 13.02.2022

ದಿನಾಂಕ: 12.02.2022ರಂದು, ದಿನಾಂಕ: 14.02.2022 ರಂದು ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡಲು ಗೌರವಾನ್ವಿತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರಚಂದ್ ಗೆಹ್ಲೋಟ್ ರವರನ್ನು ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಹಾಗೂ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ ರವರು ರಾಜಭವನದಲ್ಲಿ ಭೇಟಿ ಮಾಡಿ ಆಮಂತ್ರಿಸುತ್ತಿರುವ ಸಂದರ್ಭ;

42. 60 ದಿನ ಕಲಾಪ ನಡೆಸಲು ಸರ್ಕಾರಕ್ಕೆ ಹೊರಟ್ಟಿ ಸೂಚನೆ

ಇತ್ತೀಚಿನ ವರ್ಷಗಳಲ್ಲಿ ಕಲಾಪಗಳು 60 ದಿನ ನಡೆಯದೆ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಇನ್ನು ಇದಕ್ಕೆ ಅವಕಾಶ ನೀಡದೆ ವಾರ್ಷಿಕ 60 ದಿನ ಕಲಾಪ ನಡೆಸುವಂತೆ ಸರ್ಕಾರಕ್ಕೆ ತಿಳಿಸಲಾಗುವುದು ಎಂದು ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2017ರಲ್ಲಿ 40 ದಿನ, 2018ರಲ್ಲಿ 28 ದಿನ, 2019ರಲ್ಲಿ 20 ದಿನ, 2020ರಲ್ಲಿ 33 ದಿನ ಮತ್ತು 2021ರಲ್ಲಿ 41 ಸದನ ನಡೆದಿದೆ. ಹೀಗಾಗಿ, ಇನ್ನು ಮುಂದೆ ಈ ರೀತಿ ಆಗದಂತೆ ಸರ್ಕಾರಕ್ಕೆ ತಿಳಿಸಲಾಗುವುದು ಎಂದರು. ಶಾಸಕರು ತಮ್ಮ ಇತಿಮಿತಿ, ಜವಾಬ್ದಾರಿ ಅರಿತು ಕಲಾಪದಲ್ಲಿ ನಡೆದುಕೊಳ್ಳಬೇಕು. ಧರಣಿ ವೇಳೆ ಭಿತ್ತಿ ಪತ್ರ ಹಂಚಬಾರದು, ಸದನದ ನಿಯಮಗಳನ್ನು ಮೀರಬಾರದು. ನಿಯಮ ಮೀರಿ ಪ್ರತಿಭಟಿಸಿದರೆ ಕ್ರಮ ಕೈಗೊಳ್ಳುವುದಿಲ್ಲ. ಆದರೆ, ಪ್ಲೇಕಾರ್ಡ್ ಸದನದೊಳಗೆ ತರುವುದನ್ನು ತಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಆಯ್ಕೆ ಪ್ರಕ್ರಿಯೆಗೆ ಬೇಸರ: ಬುದ್ದಿವಂತರ ಸದನವೆಂದೇ ಕರೆಯುವ ವಿಧಾನಪರಿಷತ್‌ಗೆ ಈ ಹಿಂದೆ ಗೌರವಾನ್ವಿತ ಸದಸ್ಯರು ಆಯ್ಕೆಯಾಗಿ ಬರುತ್ತಿದ್ದರು. ಆದರೆ, ಈಗ ಆಯ್ಕೆ ಪ್ರಕ್ರಿಯೆ ನೋಡಿದರೆ ಅತ್ಯಂತ ಬೇಸರವಾಗುತ್ತದೆ ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ: 13.02.2022

43. ನಾಳೆಯಿಂದ 10 ದಿನ ವಿಧಾನಮಂಡಲ ಕಲಾಪ

ಸೋಮವಾರದಿಂದ 10 ದಿನಗಳ ಕಾಲ ನಡೆಯಲಿರುವ ವಿಧಾನ ಮಂಡಲದ ಅಧಿವೇಶನ ಸಂಬಂಧ ಸದಸ್ಯರಿಂದ ಈವರೆಗೆ 2062 ಪ್ರಶ್ನೆಗಳು ಹಾಗೂ ಸರ್ಕಾರದಿಂದ ಎರಡು ವಿಧೇಯಕಗಳು ಸ್ವೀಕಾರವಾಗಿವೆ ಎಂದು ವಿಧಾನಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಪ್ರದಾಯದಂತೆ ವರ್ಷದ ಮೊದಲ ಅಧಿವೇಶನದ ವೇಳೆ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಲಿದ್ದಾರೆ. ಫೆ.14 ರಿಂದ 25 ರವರೆಗೆ ಅಧಿವೇಶನ ನಡೆಯಲಿದೆ. ಈವರೆಗೆ 2062 ಪ್ರಶ್ನೆಗಳು 81 ಗಮನ ಸೆಳೆಯುವ ಸೂಚನೆಗಳು ಸ್ವೀಕಾರಗೊಂಡಿವೆ. ಸದನದಲ್ಲಿ ಕರ್ನಾಟಕ ಮುದ್ರಾಂಕ (2ನೇ ತಿದ್ದುಪಡಿ) ವಿಧೇಯಕ ಮತ್ತು ದಂಡ ಪ್ರಕ್ರಿಯಾ ಕಾನೂನು ತಿದ್ದುಪಡಿ ಅಧ್ಯಾದೇಶ ವಿಧೇಯಕ ಮಂಡನೆಯಾಗಲಿದೆ ಎಂದು ಮಾಹಿತಿ ನೀಡಿದರು.

ರಾಜ್ಯಪಾಲರ ಭಾಷಣದ ಬಳಿಕ ಪುನಃ ಸದನ ಸಮಾವೇಶಗೊಂಡು ಕಳೆದ ಅಧಿವೇಶನದ ನಂತರದ ಅವಧಿಯಲ್ಲಿ ಮೃತರಾದ ಸದನದ ಸದಸ್ಯರು ಮತ್ತು ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ಗಣ್ಯರಿಗೆ ಸಂತಾಪಸೂಚಿಸಲಾಗುವುದು. ಫೆಬ್ರವರಿ 15 ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಸಂಬಂಧಿಸಿದಂತೆ ಚರ್ಚೆ, ಸರ್ಕಾರದ ಉತ್ತರ ಮತ್ತು ವಂದನಾ ನಿರ್ಣಯದ ಅಂಗೀಕಾರ, ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳು, ಶೂನ್ಯವೇಳೆ, ನಿಲುವಳಿ ಸೂಚನೆ ಸೇರಿದಂತೆ ಇತರೆ ಪ್ರಮುಖ ವಿಷಯಗಳ ಚರ್ಚೆಗೆ ಅವಕಾಶ ಇರುತ್ತದೆ.

ಕಲಾಪದಲ್ಲಿ ಮುಖ್ಯಮಂತ್ರಿ ಸೇರಿದಂತೆ ಎಲ್ಲ ಸಚಿವರು, ಆಡಳಿತ ಮತ್ತು ಪ್ರತಿಪಕ್ಷದ ಎಲ್ಲಾ ನಾಯಕರು ಮುಖಗವಸು ಧರಿಸುವುದು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಕೋವಿಡ್ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸಬೇಕು. ಅಧಿಕಾರಿಗಳು, ಸಿಬ್ಬಂದಿ ಮತ್ತು ಮಾಧ್ಯಮದವರು ಸಹ ಕೋವಿಡ್ ಮಾರ್ಗಸೂಚಿಗಳನ್ನು ಪಾಲನೆ ಮಾಡಬೇಕು ಎಂದು ಕಾಗೇರಿ ಮನವಿ ಮಾಡಿದರು.

ಆಧಾರ: ಕನ್ನಡಪ್ರಭ, ದಿನಾಂಕ: 13.02.2022

ದಿನಾಂಕ: 13.02.2022ರಂದು ಸನ್ಮಾನ್ಯ ಸಭಾಧ್ಯಕ್ಷರು ಫೆಬ್ರವರಿ 14 ರಿಂದ ನಡೆಯಲಿರುವ ವಿಧಾನ ಮಂಡಲದ ಜಂಟಿ ಅಧಿವೇಶನ ಹಾಗೂ ವಿಧಾನ ಸಭೆ ಅಧಿವೇಶನದ ಕುರಿತು ವಿಧಾನ ಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಿರುವ ಸಂದರ್ಭ;

44. ಆರ್ಥಿಕ ಸಂಪನ್ಮೂಲ ಹೆಚ್ಚಿಸಲು ಗಮನ

ಬಜೆಟ್ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ವಿವಿಧ ಇಲಾಖೆಗಳ ಜೊತೆ ಸಭೆ ನಡೆಸಲಾಗಿದೆ. ಮುಖ್ಯವಾಗಿ ರಾಜ್ಯದ ಆರ್ಥಿಕ ಸಂಪನ್ಮೂಲ ಹೆಚ್ಚಿಸುವ ಕುರಿತು ವಿಶೇಷ ಗಮನ ಹರಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸೋಮವಾರದಿಂದ ಅಧಿವೇಶನ ನಡೆಯಲಿದೆ. ಸೋಮವಾರ ಮತ್ತು ಮಂಗಳವಾರ ಇನ್ನೂ ಹಲವು ಇಲಾಖೆಗಳ ಸಭೆ ನಡೆಸಿ ಮಾಹಿತಿ ಪಡೆಯಲಾಗುವುದು ಎಂದರು.

ಎಲ್ಲ ಇಲಾಖೆಗಳ ಸಭೆ ಮುಗಿದ ಮೇಲೆ ಫೆ.25ರ ನಂತರ ಎಲ್ಲ ಇಲಾಖೆಗಳ ಬೇಡಿಕೆಗಳು ಹಾಗೂ ಕೇಂದ್ರ–ರಾಜ್ಯ ಸರಕಾರದ ಯೋಜನೆಗಳನ್ನು ಗಮನಿಸಿ ಅಂತಿಮವಾಗಿ ಬಜೆಟ್ ಸಿದ್ಧಪಡಿಸಲಾಗುವುದು. ಈ ಸಂದರ್ಭ ಆರ್ಥಿಕ ಸಂಪನ್ಮೂಲ ಹೆಚ್ಚಿಸಲು ವಿಶೇಷ ಗಮನ ಹರಿಸಲಾಗುವುದು ಎಂದು ಹೇಳಿದರು. ಹಿಜಾಬ್ ಪ್ರಕರಣ ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ರಾಜ್ಯದಲ್ಲಿ ಶಾಂತಿ ನೆಲೆಸಬೇಕು. ಮಕ್ಕಳಲ್ಲಿ ಯಾವುದೇ ಭಿನ್ನಾಭಿಪ್ರಾಯ ಮೂಡಬಾರದು. ಎಲ್ಲರೂ ಸಮಾನರು ಎನ್ನುವ ಭಾವನೆ ಬರಬೇಕು. ಶಾಲಾ–ಕಾಲೇಜುಗಳು ಆರಂಭವಾಗಬೇಕು ಎಂಬುದು ಸರ್ಕಾರದ ಉದ್ದೇಶ. ಇದಕ್ಕಾಗಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಬೆಳಗಾವಿ ಹೊರವಲಯದಲ್ಲಿ ಸೇನಾ ವಶದಲ್ಲಿರುವ 754 ಎಕರೆ ಭೂಮಿಯನ್ನು ಮರಳಿ ರಾಜ್ಯ ಸರ್ಕಾರಕ್ಕೆ ಕೊಡುವಂತೆ ದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ಸಚಿವರು ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಇದಲ್ಲದೆ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯನ್ನು ರಕ್ಷಣಾ ಇಲಾಖೆಯೇ ವಹಿಸಿಕೊಳ್ಳಬೇಕೆಂದು ಸಹ ಮನವಿ ಮಾಡಿದ್ದೇವೆ. ಅದರ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು.

ಆಧಾರ: ಉದಯವಾಣಿ, ದಿನಾಂಕ: 13.02.2022

45. ಅಧಿವೇಶನದ ಸತ್ಯ – ಮಹತ್ವ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಧ್ಯೆಯೋದ್ದೇಶಗಳನ್ನು ಈಡೇರಿಸಲು ಮತ್ತು ಕಾಲ ಕಾಲಕ್ಕೆ ಎದುರಾಗುವ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ವಿಧಾನಮಂಡಲದ ಉಭಯ ಸದನಗಳ ಅಧಿವೇಶನವನ್ನು ಕರೆಯಲಾಗುತ್ತದೆ. ಆದರೆ ಇವತ್ತು ಅಧಿವೇಶನಗಳು ತಮ್ಮ ಧ್ಯೇಯಗಳಿಗೆ ಅನುಗುಣವಾಗಿ ನಡೆಯುತ್ತಿವೆಯೇ? ಎಂಬ ಬಗ್ಗೆ ಚರ್ಚೆ ಆಗುತ್ತಿದೆ. ಅಧಿವೇಶನಗಳಿಗೆ ಸಾರ್ವಜನಿಕರ ಕೋಟ್ಯಂತರ ರೂ.ಗಳನ್ನು ವೆಚ್ಚ ಮಾಡಲಾಗುತ್ತದೆ. ಇದು ಸಾರ್ಥಕವಾಗಬೇಕಾದರೆ ವಿಧಾನಸಭೆಯ ಉಭಯ ಸದನಗಳಲ್ಲೂ ಜನ ಹಿತವೇ ಮುಖ್ಯವಾಗಿ ಗುಣಾತ್ಮಕ ನೆಲೆಗಟ್ಟಿನ ಚರ್ಚೆ ಆಗಬೇಕು. ಆಗ ಮಾತ್ರ ಪ್ರಜಾ ವ್ಯವಸ್ಥೆಯ ಆಶಯಗಳಿಗೆ ಸ್ಪಂದಿಸಿದಂತಾಗುತ್ತದೆ ಎಂದು ಕೂಡ ವಾದಿಸಲಾಗುತ್ತಿದೆ. ಫೆ. 14 ರಿಂದ ರಾಜ್ಯದ 15ನೇ ವಿಧಾನಸಭೆಯ 12ನೇ ಅಧಿವೇಶನ

ಆರಂಭವಾಗುತ್ತಿದೆ. ಈ ಹಿನ್ನೆಲೆಯಲ್ಲಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಮತ್ತು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಅಧಿವೇಶನ ಹೇಗೆ ನಡೆಯಬೇಕು ಎಂಬ ಬಗ್ಗೆ ಸಂಯುಕ್ತ ಕರ್ನಾಟಕದೊಂದಿಗೆ ಮಾತನಾಡಿದ್ದಾರೆ.

ಇತಿಮಿತಿ ಅರಿವಿದ್ದರೆ ಸಾರ್ಥಕ ಕಲಾಪ

ನೋಡಿ ಅಧಿವೇಶನಗಳು – ನಾಡಿನ ಜನರ ಅಪೇಕ್ಷೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಡೆಯಬೇಕು. ನಾಡನ್ನು ಸರಿದಿಕ್ಕಿನಲ್ಲಿ ಕೊಂಡೊಯ್ಯುವ ರೀತಿಯಲ್ಲಿ ಕಲಾಪಗಳು ನಡೆಯಬೇಕು. ಇದಕ್ಕೆ ಎಲ್ಲಾ ಪಕ್ಷಗಳ ಸದಸ್ಯರು ಸಹಕರಿಸಿದರೇ ಕಷ್ಟವಾಗದು. ಜನರ ಆಶೋತ್ತರಗಳಿಗೆ ಸ್ಪಂದಿಸಬೇಕು ಎಂಬುದರಲ್ಲಿ ಮರು ಮಾತಿಲ್ಲ. ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರು ತಾವು ಆಯ್ಕೆ ಆಗಿ ಬಂದ ಉದ್ದೇಶಕ್ಕೆ ತಕ್ಕಂತೆ ಚರ್ಚೆಯಲ್ಲಿ ಭಾಗಿಯಾಗಬೇಕು. ಜನರ ಜ್ವಲಂತ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ವಿಚಾರ ವಿನಿಮಯ ಆಗುವ ಚರ್ಚೆಯಲ್ಲಿ ಸದಸ್ಯರು ಒಳಗೊಳ್ಳುವಂತೆ ಮಾಡುವ ಪ್ರಯತ್ನ ಮಾಡಲಾಗುವುದು ನಿಜ. ಪ್ರಜಾಪ್ರಭುತ ವ್ಯವಸ್ಥೆಯಲ್ಲಿ ಪ್ರಜೆಗಳಿಂದ ಆಯ್ಕೆಯಾದ ಶಾಸಕರ ಭಾವನೆಗಳಿಗೆ ಸ್ಪಂದಿಸಬೇಕಾಗುತ್ತದೆ. ಅದೇ ವೇಳೆ ಸದನದ ಕಾರ್ಯಕಲಾಪಗಳು ನಡೆಯುವುದು ಅತಿ ಮುಖ್ಯ. ಹೀಗಾದರೇ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇತ್ತ ಸದಸ್ಯರು ಗಮನಹರಿಸಿದರೇ ಅಧಿವೇಶನಗಳು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ನಡೆಯಲು ಕಷ್ಟವಾಗದು. ಅಧಿವೇಶನಗಳು ಸಾರ್ವಜನಿಕರ ಪ್ರತಿಬಿಂಬವಾಗಬೇಕು. ಅನಗತ್ಯ ಗೊಂದಲಗಳಿಗೆ ಯಾರು ಅವಕಾಶ ಕೊಡಬಾರದು. ಇಂತಹ ಸಂದರ್ಭ ಬಾರದಂತೆ ಎಚ್ಚರ ವಹಿಸುವುದು ಅಗತ್ಯವಾಗಿದೆ. ನಿಯಮ ಅನುಸಾರ ಚರ್ಚೆ ಆಗಬೇಕು. ಸದಸ್ಯರು ತಮ್ಮ ವಿಚಾರಗಳನ್ನು ಸಮರ್ಥವಾಗಿ ಮಂಡನೆ ಮಾಡುವುದು ಮುಖ್ಯವಾಗುತ್ತದೆ. ಸದಸ್ಯರು ತಮ್ಮ ಇತಿಮಿತಿ ಚೌಕಟ್ಟಿನಲ್ಲಿ ಕಲಾಪದಲ್ಲಿ ಭಾಗವಹಿಸಬೇಕು. ನಿಯಮದ ಪ್ರಕಾರ ವಿಷಯದ ಮಹತ್ವಕ್ಕೆ ತಕ್ಕಂತೆ ಮಾತನಾಡಲು ಅವಕಾಶ ನೀಡಲಾಗುತ್ತದೆ.

ಈ ಬಾರಿ ಎಲ್ಲಾ ಶಾಸಕರನ್ನು ಸಕ್ರಿಯವಾಗಿ ಕಲಾಪದಲ್ಲಿ ಭಾಗವಹಿಸುವಂತೆ ಮಾಡಲಾಗುವುದು. ಎಲ್ಲರು ಶಿಸ್ತು ಮತ್ತು ಗಾಂಭೀರ್ಯದಿಂದ ನಡೆದುಕೊಳ್ಳಬೇಕು. ಆಗ ಗುಣಾತ್ಮಕ ಚರ್ಚೆ ನಡೆಯಲು ಸಾಧ್ಯವಾಗುತ್ತದೆ. ಇದೇ ವೇಳೆ ಎಲ್ಲಾಕ್ಕಿಂತ ಮುಖ್ಯವಾಗಿ ಚುನಾವಣೆ ವ್ಯವಸ್ಥೆ ಸುಧಾರಣೆ ಆಗಲೇಬೇಕು. ಯುವಕರನ್ನು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹೆಚ್ಚು ಭಾಗವಹಿಸುವಂತೆ ಮಾಡಬೇಕಾಗಿದೆ. ಇಂದು ಚುನಾವಣೆ ವ್ಯವಸ್ಥೆ ಸುಧಾರಣೆ ಬಗ್ಗೆ ಸದನದಲ್ಲಿ ಚರ್ಚೆ ಮಾಡಲು ಚಿಂತನೆ ಮಾಡಲಾಗಿದೆ. ಏನೇ ಇರಲಿ.... ಅಧಿವೇಶನವನ್ನು ಅದರ ಉದ್ದೇಶಕ್ಕನುಗುಣವಾಗಿ ನಡೆಸುವ ಪ್ರಯತ್ನ ಮುಂದುವರಿಯುತ್ತದೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 14.02.2022

46. ಬಿಪಿಎಲ್ ಕುಟುಂಬಕ್ಕೆ ಸಿಗಲಿದೆ ಹೆಚ್ಚುವರಿ ಅಕ್ಕಿ

ಬಡ ಕುಟುಂಬಗಳಿಗೆ ಏಪ್ರಿಲ್ ಒಂದರಿಂದ ಒಂದು ಕೆಜಿ ಅಕ್ಕಿ ಹೆಚ್ಚುವರಿಯಾಗಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಘೋಷಿಸಿದ್ದಾರೆ.

ಶುರುವಾದ ಹತ್ತು ದಿನಗಳ ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಪ್ರಸ್ತುತ ಬಿಪಿಎಲ್ ಕಾರ್ಡ್‌ದಾರರಿಗೆ ಐದು ಕೆಜಿ ಅಕ್ಕಿ ನೀಡಲಾಗುತ್ತಿದ್ದು, ಈ ಪ್ರಮಾಣವನ್ನು ಆರು ಕೆಜಿಗೆ ಏರಿಸಲಾಗುವುದು ಎಂದು ಪ್ರಕಟಿಸಿದರು. ಇದರ ಜೊತೆಗೆ ವಿದೇಶದಲ್ಲಿರುವ ಭಾರತೀಯರ ಜ್ಞಾನ ಸ್ವದೇಶದಲ್ಲೇ ಬಳಸಿಕೊಳ್ಳಲು 'ಮರಳಿ ತಾಯ್ನಾಡಿಗೆ' ಯೋಜನೆ ಅನುಷ್ಠಾನಗೊಳಿಸಲು ಸೂಕ್ತ ನೀತಿ ರಚಿಸಲಾಗುವುದು ಎಂದರು.

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸವಿನೆನಪಿಗಾಗಿ ಅಮೃತ ಗ್ರಾಮೀಣ ವಸತಿ ಯೋಜನೆಯಡಿ 750 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ವಸತಿ ರಹಿತರನ್ನು ಗುರುತಿಸಿ ವಸತಿ ಕಲ್ಪಿಸಲು ಸರ್ಕಾರ ಉದ್ದೇಶಿಸಿದೆ ಎಂದು ಹೇಳಿದರು. ಅಮೃತ ಗ್ರಾಮ ಪಂಚಾಯಿತಿ ಯೋಜನೆಯಡಿ 750 ಗ್ರಾಮಗಳನ್ನು ಆಯ್ಕೆ ಮಾಡಿ, ಚಾಲ್ತಿಯಲ್ಲಿರುವ ಯೋಜನೆಗಳ ಅನುದಾನ ಬಳಕೆ ಮಾಡಿಕೊಂಡು ಸಮಗ್ರ ಅಭಿವೃದ್ಧಿ ಮಾಡಿದ ಪ್ರತಿ ಗ್ರಾಮ ಪಂಚಾಯಿತಿಗೆ 25 ಲಕ್ಷ ರೂ. ಪ್ರೋತ್ಸಾಹ ಧನ ನೀಡಲಾಗುವುದು. ರಾಷ್ಟ್ರೀಯ ಶಿಕ್ಷಣನೀತಿ ಅಡಿ ಶೈಕ್ಷಣಿಕ ಮತ್ತು ಆಡಳಿತ ವ್ಯವಸ್ಥೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ಜಾರಿಗೊಳಿಸಲಾಗುವುದು ಎಂದರು.

ಆಧಾರ: ಉದಯವಾಣಿ, ದಿನಾಂಕ: 15.02.2022

47. 20 ವರ್ಷದ ಬಳಿಕ ಮೆಟ್ಟಿಲು ಬಳಸಿ ವಿಧಾನಸೌಧಕ್ಕೆ ಬಂದ ರಾಜ್ಯಪಾಲ

ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲು ರಾಜಭವನದಿಂದ ಅಶ್ವಪಡೆ ಬೆಂಗಾವಲಿನಲ್ಲಿ ಆಗಮಿಸಿದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೂಲಕ ಜಂಟಿ ಅಧಿವೇಶನಕ್ಕೆ ಆಗಮಿಸಿದರು.

ಈ ಮೂಲಕ 20 ವರ್ಷಗಳ ಬಳಿಕ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೂಲಕ ರಾಜ್ಯಪಾಲರೊಬ್ಬರು ಅಧಿವೇಶನಕ್ಕೆ ಆಗಮಿಸಿದಂತಾಗಿದೆ. ವಿಧಾನಸೌಧದ ಪೂರ್ವ ದಿಕ್ಕಿನಲ್ಲಿ 70 ಅಡಿ ಎತ್ತರ ಹಾಗೂ 204 ಅಡಿ ಅಗಲದ ಸ್ಥಳದಲ್ಲಿರುವ 45 ಮೆಟ್ಟಿಲುಗಳಿಗೆ ಭವ್ಯ ಮೆಟ್ಟಿಲು (ಗ್ರಾಂಡ್ ಸ್ಟೆಪ್) ಎಂದೇ ಹೆಸರು. 2002ರವರೆಗೆ ರಾಜ್ಯಪಾಲರಾಗಿದ್ದ ವಿ.ಎಸ್. ರಮಾದೇವಿ ಅವರ ಬಳಿಕ ರಾಜ್ಯಪಾಲರು ಭವ್ಯ ಮೆಟ್ಟಿಲುಗಳ ಮೂಲಕ ಅಧಿವೇಶನಕ್ಕೆ ಬರದೆ ಲಿಫ್ಟ್ ಮೂಲಕ ಬರುತ್ತಿದ್ದರು. ಈಗ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಮನವಿ ಮೇರೆಗೆ ರಾಜ್ಯಪಾಲರು ಭವ್ಯ ಮೆಟ್ಟಿಲುಗಳ ಮೂಲಕ ಆಗಮಿಸಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ: 15.02.2022

ದಿನಾಂಕ: 14.02.2022ರಂದು ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡಲು ಆಗಮಿಸುತ್ತಿರುವ ಗೌರವಾನ್ವಿತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಸನ್ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು, ವಿಧಾನ ಸಭೆ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿರವರು ವಿಧಾನಸೌಧದ ಮುಖ್ಯ ಧ್ವಾರದಲ್ಲಿ ಸ್ವಾಗತಿಸುತ್ತಿರುವ ಸಂದರ್ಭ;

ಗೌರವಾನ್ವಿತ ರಾಜ್ಯಪಾಲರು ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವ ಸಂದರ್ಭ;

48. ರೈತರಿಂದ ವಿಧಾನಸೌಧ ಮುತ್ತಿಗೆ ಯತ್ನ

ಕೇಂದ್ರ ಸರ್ಕಾರ ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತಂದಿರುವ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ಈ ಸಲದ ಅಧಿವೇಶನದಲ್ಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ವಿಧಾನ ಸೌಧ ಮುತ್ತಿಗೆ ಹಾಕಲು ಹೊರಟಿದ್ದ ನೂರಾರು ರೈತರನ್ನು ಪೊಲೀಸರು ಮಾರ್ಗ ಮಧ್ಯೆ ತಡೆಹಿಡಿದು ವಿಧಾನ ಸೌಧ ಮುತ್ತಿಗೆ ಯತ್ನವನ್ನು ವಿಫಲಗೊಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ನಗರದ ಸಿಟಿ ರೈಲ್ವೆ ನಿಲ್ದಾಣದಿಂದ ವಿಧಾನ ಸೌಧದತ್ತ ಮೆರವಣಿಗೆ ಹೊರಟರು. ಈ ವೇಳೆ ಫ್ರೀಡಂ ಪಾರ್ಕ್ ಬಳಿಯ ಶೇಷಾದ್ರಿ ರಸ್ತೆಯ ಮಾರ್ಗ ಮಧ್ಯೆ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಲು ಹೊರಟಿದ್ದ ರೈತರನ್ನು ಪೊಲೀಸರು ತಡೆಹಿಡಿದರು. ಹೀಗಾಗಿ ರಸ್ತೆಯ ಮಧ್ಯೆ ರೈತರು ಧರಣಿ ಕುಳಿತು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾದ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಕೇಂದ್ರ ಸರ್ಕಾರ ಸುಗ್ರೀವಾಜ್ಞೆಗಳ ಮೂಲಕ ತಾನು ತಂದಿದ್ದ ಕೃಷಿ ಮಸೂದೆಗಳನ್ನು ಹಿಂಪಡೆದಿದೆ. ಆದರೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ರೈತವಿರೋಧಿ ಮಸೂದೆಗಳನ್ನು ಹಿಂಪಡೆಯಲು ವಿಳಂಭ ಧೋರಣೆ ಅನುಸರಿಸುತ್ತಿರುವುದು ಸರಿಯಲ್ಲ ಎಂದು ಹೇಳಿದರು.

ಕಾಯ್ದೆಗಳನ್ನು ತರಾತುರಿಯಲ್ಲಿ ಜಾರಿಗೆ: ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೆಚ್ಚಿಸಿಕೊಳ್ಳಲು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬಿಜೆಪಿ ಆಡಳಿತವಿರುವ ಯಾವ ರಾಜ್ಯವು ಕೂಡ ಜಾರಿಗೊಳಿಸದ ರೈತ ವಿರೋಧಿ ಕಾಯ್ದೆಗಳನ್ನು ತರಾತುರಿಯಲ್ಲಿ ಜಾರಿಗೆ ತಂದರು ಎಂದು ದೂರಿದರು.

ಸರ್ಕಾರ ತಲೆ ಕೆಡಿಸಿಕೊಂಡಿಲ್ಲ: ಬೆಳಗಾವಿ ಅಧಿವೇಶನದಲ್ಲೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಈ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಹೇಳಿದ್ದರು. ಆದರೆ ಈಗ ಬೆಳಗಾವಿ ಅಧಿವೇಶನ ಮುಗಿದು ಬೆಂಗಳೂರಿನಲ್ಲಿ ಮತ್ತೊಂದು ಅಧಿವೇಶನ ಆರಂಭವಾದರೂ ಆ ಬಗ್ಗೆ ಸರ್ಕಾರ ತಲೆ ಕೆಡಿಸಿಕೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧರಣಿ ಸ್ಥಳಕ್ಕೆ ಸಚಿವ ಗೋಪಾಲಯ್ಯ ಭೇಟಿ: ರೈತರು ಧರಣಿ ನಡೆಸುತ್ತಿರುವುದನ್ನು ಅರಿತ ಸಿಎಂ. ಬಸವರಾಜ ಬೊಮ್ಮಾಯಿ ಅವರು ರೈತರನ್ನು ಸಮಾಧಾನಗೊಳಿಸಲು ಸಚಿವ ಗೋಪಾಲಯ್ಯ ಅವರನ್ನು ಪ್ರತಿಭಟನಾ ಸ್ಥಳಕ್ಕೆ ಕಳುಹಿಸಿಕೊಟ್ಟರು. ಆ ಹಿನ್ನೆಲೆಯಲ್ಲಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಗೋಪಾಲಯ್ಯ ಅವರು ರೈತರ ಮನವಿ ಸ್ವೀಕರಿಸಿದರು. ಈ ವೇಳೆ ರೈತರು ರಾಗಿ ಖರೀದಿ ಕೇಂದ್ರ ಬಂದ್ ಆಗಿರುವುದು ಸೇರಿದಂತೆ ಹಲವು ಸಮಸ್ಯೆಗಳನ್ನು ಸಚಿವರ ಮುಂದೆ ಹೇಳಿಕೊಂಡರು.

ಈ ವೇಳೆ ಮಾತನಾಡಿದ ಸಚಿವರು, ಕೃಷಿ ಕಾಯ್ದೆ ಸೇರಿದಂತೆ ರೈತರ ಹಲವು ಸಮಸ್ಯೆಗಳ ಕುರಿತು ಚರ್ಚೆ ನಡೆಸಲು ಮೂರ್ನಾಲ್ಕು ದಿನಗಳಲ್ಲಿ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ರೈತ ಮುಖಂಡರ ಸಭೆ ನಡೆಸುವ ಭರವಸೆ ನೀಡಿದರು.

ಈಗಾಗಲೇ ಬೆಳಗಾವಿ ಅಧಿವೇಶನದ ವೇಳೆ ಕೂಡ ಮುಖ್ಯಮಂತ್ರಿಗಳು ರೈತ ಮುಖಂಡರೊಂದಿಗೆ ಸೌಜನ್ಯದಿಂದ ಮಾತನಾಡಿದ್ದಾರೆ. ಹೀಗಾಗಿ ಮಾತುಕತೆ ಮೂಲಕ ರೈತರ ಸಮಸ್ಯೆಗಳನ್ನು ಬಗೆಹರಿಸಲಾಗುವುದು. ಮುಖ್ಯಮಂತ್ರಿಗಳ ಬಳಿ ನಿಮ್ಮೆಲ್ಲ ಸಮಸ್ಯೆಗಳನ್ನು ಹೇಳಿಕೊಳ್ಳಿ ಎಂದರು.

ರಾಜ್ಯದಲ್ಲಿ ಖರೀದಿ ಕೇಂದ್ರಗಳು ಸ್ಥಗಿತವಾಗಿದ್ದು ಆ ಹಿನ್ನೆಲೆಯಲ್ಲಿ ರಾಗಿ, ಭತ್ತ, ಜೋಳ, ಕಡಲೆ, ತೊಗರಿ ಖರೀದಿ ಸಂಪೂರ್ಣ ಬಂದ್ ಆಗಿದೆ. ಕೆಲವು ಕಡೆಗಳಲ್ಲಿ ಹಾಲಿನ ದರ ಕೂಡ ಇಳಿಕೆ ಮಾಡಲಾಗಿ ಈ ಸಂಬಂಧ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ರೈತರು ಸಚಿವರಲ್ಲಿ ಮನವಿ ಮಾಡಿದರು.

ಆಧಾರ:–ಉದಯವಾಣಿ, ದಿನಾಂಕ:15.02.2022

49. ಅಧಿವೇಶನದಲ್ಲೂ ಕೇಸರಿ, ಶಾಲು, ಹಿಜಾಬ್ ಪ್ರತ್ಯಕ್ಷ

ರಾಜ್ಯಾದ್ಯಂತ ವಿವಾದಕ್ಕೆ ಕಾರಣವಾಗಿರುವ ಹಿಜಾಬ್ ಹಾಗೂ ಕೇಸರಿ ಶಾಲು ಸದನದಲ್ಲೂ ಪ್ರತ್ಯಕ್ಷವಾಗಿದೆ. ಜಂಟಿ ಅಧಿವೇಶನದಲ್ಲಿ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಡಿ.ಎಸ್.ಅರುಣ್‌ಕುಮಾರ್ ಕೇಸರಿ ಶಾಲು ಧರಿಸಿ ಬಂದರೆ, ಕಾಂಗ್ರೆಸ್ ಶಾಸಕಿ ಖನಿಜ್ ಫಾತಿಮಾ ಎಂದಿನಂತೆಯೇ ಹಿಜಾಬ್ ಧರಿಸಿಕೊಂಡು ಆಗಮಿಸಿದ್ದರು.

ಹಿಜಾಬ್ ಧರಿಸಿ ಶಾಲೆಗೆ ಆಗಮಿಸಲು ನಿರ್ಬಂಧ ಹೇರಿದಾಗ ಕಲಬುರಗಿ ಉತ್ತರ ಶಾಸಕಿ ಖನಿಜ್ ಫಾತಿಮಾ, ಹಿಜಾಬ್ ಧರಿಸಿಯೇ ಅಧಿವೇಶನಕ್ಕೆ ಹೋಗುತ್ತೇನೆ. ಧೈರ್ಯ ಇದ್ದರೆ ತಡೆಯಲಿ ನೋಡೋಣ ಎಂದು ಸವಾಲು ಹಾಕಿದ್ದರು. ಅದರಂತೆ ಹಿಜಾಬ್ ಧರಿಸಿಯೇ ಜಂಟಿ ಅಧಿವೇಶನದಲ್ಲಿ ಭಾಗವಹಿಸಿದ್ದರು. ಇನ್ನು ಶಿವಮೊಗ್ಗದ ಬಿಜೆಪಿ ಡಿ.ಎಸ್.ಅರುಣ್‌ಕುಮಾರ್ ಕೇಸರಿ ಶಾಲು ಹಾಕಿಕೊಂಡು ಅಧಿವೇಶನಕ್ಕೆ ಆಗಮಿಸಿದ್ದರು. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಮಾಣಪತ್ರ ಸ್ವೀಕರಿಸುವ ಸಮಯದಲ್ಲೂ ನಾನು ಕೇಸರಿ ಶಾಲು ಹಾಕಿದ್ದೆ. ಇಂದು ಅಧಿವೇಶನದ ಮೊದಲ ದಿನವಾದ ಹಿನ್ನೆಲೆಯಲ್ಲಿ ದೇವಸ್ಥಾನಕ್ಕೆ ಹೋಗಿದ್ದೆ. ಹೀಗಾಗಿ ಕೇಸರಿ ಶಾಲು ಹಾಕಿಕೊಂಡು ಆಗಮಿಸಿದ್ದೇನೆ. ಬೇರೆ ಏನೂ ಇಲ್ಲ ಎಂದು ಸ್ಪಷ್ಟನೆ ನೀಡಿದರು.

ಆಧಾರ:–ಕನ್ನಡ ಪ್ರಭ, ದಿನಾಂಕ:15.02.2022

50. ಸದನದಲ್ಲಿ ಅಹೋ ರಾತ್ರಿ ಧರಣಿಗೆ ಕಾಂಗ್ರೆಸ್ ನಾಯಕರ ನಿರ್ಧಾರ

ವಿಧಾನಮಂಡಲ ಅಧಿವೇಶನ ಸಂದರ್ಭದಲ್ಲಿ ಸದನದ ಒಳಗೆ ಮತ್ತು ಹೊರಗೆ ವಿಭಿನ್ನ ಹೋರಾಟ ನಡೆಸುವ ಸಂಬಂಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಿರಿಯ ಶಾಸಕರ ಸಭೆ ನಡೆಸಿ ಚರ್ಚಿಸಿದರು.

ಕೆಪಿಸಿಸಿ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಬಿಟ್ ಕಾಯಿನ್ ಹಗರಣ, ಶೇ.40 ಪರ್ಸೆಂಟ್, ಹಿಜಾಬ್–ಕೇಸರಿ ಶಾಲು ವಿವಾದ ನಿರ್ವಹಣೆಯಲ್ಲಿ ವಿಫಲ, ಶಾಸಕರ ಕ್ಷೇತ್ರಗಳಿಗೆ ಅನುದಾನ ತಾರತಮ್ಯ, ರಾಷ್ಟ್ರಧ್ವಜ ಕುರಿತು ಸಚಿವ ಈಶ್ವರಪ್ಪ ಹೇಳಿಕೆ ವಿಷಯದಲ್ಲಿ ನಿರಂತರ ಹೋರಾಟ ನಡೆಸಲು ಹಿರಿಯರ ಸಲಹೆ ಪಡೆಯಲಾಯಿತು. ಇದೇ ಸಂದರ್ಭದಲ್ಲಿ ರಾಮನಗರದಲ್ಲಿ ತಾತ್ಕಾಲಿಕವಾಗಿ ಸ್ಥಿಗಿತಗೊಳಿಸಲಾಗಿರುವ ಮೇಕೆದಾಟು ಪಾದಯಾತ್ರೆ ಪುನರಾರಂಭದ ಬಗ್ಗೆಯೂ ಪ್ರಸ್ತಾಪವಾಯಿತು. ಅಧಿವೇಶನ ಮುಗಿದ ನಂತರ ದಿನಾಂಕ ನಿಗದಿ ಮಾಡಿದರೆ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ನಿಲುವಳಿ ಮಂಡಿಸುವ ಮೂಲಕ ಉಭಯ ಸದನಗಳಲ್ಲಿ ಚರ್ಚೆಗೆ ಪಟ್ಟು ಹಿಡಿದು ಅವಕಾಶ ಸಿಗದಿದ್ದರೆ ಪ್ರತಿಭಟನೆ, ಅಹೋರಾತ್ರಿ ಧರಣಿ, ಸದನದ ಹೊರಗೂ ಹೋರಾಟ ನಡೆಸುವ ಮೂಲಕ ಸರ್ಕಾರದ ವೈಫಲ್ಯದ ವಿರುದ್ಧ ಪರಿಣಾಮಕಾರಿ ಹೋರಾಟ ಮಾಡೋಣ ಎಂದು ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಹೇಳಿದರು. ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್, ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹಮದ್, ಧ್ರುವನಾರಾಯಣ, ಮಾಜಿ ಮುಖ್ಯಮಂತ್ರಿ

ವೀರಪ್ಪಮೊಯ್ಲಿ, ಕೇಂದ್ರದ ಮಾಜಿ ಸಚಿವ ಕೆ.ಹೆಚ್.ಮುನಿಯಪ್ಪ, ರೆಹಮಾನ್ ಖಾನ್, ಮಾಜಿ ಸಚಿವರಾದ ಹೆಚ್.ಕೆ.ಪಾಟೀಲ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಆಧಾರ:–ಉದಯವಾಣಿ, ದಿನಾಂಕ:16.02.2022

51. ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್ ಇಲ್ಲ

ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯುವ ಪ್ರಸ್ತಾಪ ರಾಜ್ಯ ಸರ್ಕಾರದ ಮುಂದಿಲ್ಲ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮೇಲ್ಮನೆಗೆ ಸ್ಪಷ್ಟಪಡಿಸಿದ್ದಾರೆ. ಎಪಿಎಂಸಿ ಕಾಯ್ದೆ ತಿದ್ದುಪಡಿ ಯಾವಾಗ ಹಿಂಪಡೆಯುತ್ತೀರಿ? ಎಂದು ಕಾಂಗ್ರೆಸ್‌ನ ಕೆ.ಹರೀಶ್‌ಕುಮಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕೇಂದ್ರ ಸರ್ಕಾರ ಎಪಿಎಂಸಿ ಕಾಯ್ದೆಗಳನ್ನು ಹಿಂಪಡೆದಿರಬಹುದು. ಆದರೆ, ರಾಜ್ಯದಲ್ಲಿ ಆ ರೀತಿಯ ತೀರ್ಮಾನ ಮಾಡಿಲ್ಲ ಎಂದರು. ಬೆಳೆ ಬೆಳೆದ ರೈತ ಎಲ್ಲಿ ಬೇಕಾದರೂ ಮಾರಾಟ ಮಾಡಬಹುದೆಂಬ ಕಾಯ್ದೆ ಮಾಡಿದ್ದೇವೆ. ಇದರಿಂದಾಗಿ ರೈತರ ಬೆಳೆಗೆ ಒಳ್ಳೆಯ ದರ ಸಿಗುತ್ತಿದೆ. ಉತ್ತಮ ದರ ಸಿಕ್ಕಿದರೆ ಮುಕ್ತವಾಗಿ ಮಾರಾಟ ಮಾಡುವ ಅವಕಾಶ ಕಲ್ಪಿಸಿರುವುದರಿಂದ ರೈತರಿಗೆ ಅನುಕೂಲವಾಗುತ್ತಿದೆ.

ರೈತರಿಗೆ ಹಿಂದೆ ದಂಡ ಹಾಕುತ್ತಿದ್ದ ವ್ಯವಸ್ಥೆ ಇತ್ತು. ಈಗ ಆ ರೀತಿಯ ಪರಿಸ್ಥಿತಿ ಇಲ್ಲ ಎಂದರು. ಸೆಸ್ ಕಡಿಮೆ ಮಾಡಿರುವುದರಿಂದ ಯಾವ ಎಪಿಎಂಸಿಗಳು ನಷ್ಟದಲ್ಲಿವೆ ಎಂಬ ಮಾಹಿತಿ ನಮಗಿಲ್ಲ. ಮುಂಚೆ ರೂ.1.50 ಸೆಸ್ ಸಂಗ್ರಹ ಆಗ್ತಿತ್ತು. ಈಗ 60 ಪೈಸೆ ಸಂಗ್ರಹ ಮಾಡ್ತಿದ್ದಾರೆ ಎಂದರು. ತಿದ್ದುಪಡಿಯ ಬಗ್ಗೆ ಅನುಕೂಲ, ಅನಾನುಕೂಲಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಡಬಲ್ ಇಂಜಿನ್ ಸರ್ಕಾರ: ಕೇಂದ್ರ ಸರ್ಕಾರ ಎಪಿಎಂಸಿ ಕಾಯ್ದೆ ಹಿಂಪಡೆದಿರುವುದು ತಪ್ಪು ಎನ್ನುತ್ತೀರಾ? ಎಂಬ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಪ್ರಶ್ನೆಗೆ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಚಿವ ಸೋಮಶೇಖರ್ ಮತ್ತು ಹರಿಪ್ರಸಾದ್ ನಡುವೆ ವಾಗ್ವಾದ ನಡೆಯಿತು.

ನಮ್ಮದು ಡಬಲ್ ಇಂಜಿನ್ ಸರ್ಕಾರ ಎನ್ನುತ್ತೀರಿ. ಹಾಗಾದರೆ ಅಲ್ಲಿ ಕಾಯ್ದೆ ವಾಪಸ್ ಪಡೆದು, ಇಲ್ಲಿ ವಾಪಸ್ ಪಡೆಯುವುದಿಲ್ಲ ಎನ್ನುವ ದ್ವಂದ್ವ ನಿಲುವು ಏಕೆ? ಎಂದು ಹರಿಪ್ರಸಾದ್ ಆಕ್ಷೇಪಿಸಿದರು.

39,270 ಸಹಕಾರ ಸಂಘ: ರಾಜ್ಯದಲ್ಲಿ 39,270 ಸಹಕಾರ ಸಂಸ್ಥೆ 3,64,233 ಸಂಘ ಸಂಸ್ಥೆಗಳಿವೆ. 6059 ಕ್ಲಬ್‌ಗಳು, 5160 ಸೌಹಾರ್ದ ಸಂಘಗಳು, 5045 ಲೇವಾದೇವಿದಾರರು, 8635 ಹಣಕಾಸು ಸಂಸ್ಥೆಗಳು, 7851 ಗಿರವಿದಾರರು, 980 ಚೀಟಿ ನಿಧಿ ಸಂಸ್ಥೆಗಳು ಇವೆ ಎಂದು ಸರ್ಕಾರ ತಿಳಿಸಿದೆ.

402 ಲೆಕ್ಕ ಪರಿಶೋಧಕ ಹುದ್ದೆ ಭರ್ತಿ: ಸಹಕಾರ ಇಲಾಖೆಯಲ್ಲಿ ಲೆಕ್ಕ ಪರಿಶೋಧನೆಯನ್ನು ಇಲಾಖೆ ವತಿಯಿಂದ ಕೈಗೊಳ್ಳಲು ಅನುಕೂಲವಾಗುವಂತೆ ಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ಖಾಲಿ ಇರುವ 402 ಲೆಕ್ಕ ಪರಿಶೋಧಕರ ಹುದ್ದೆ ಭರ್ತಿ ಮಾಡಲಾಗುವುದು. ಈಗಾಗಲೇ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಬಿಜೆಪಿಯ ಭಾರತಿ ಶೆಟ್ಟಿ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದರು. ಎಲ್ಲ ಸಂಘಗಳಲ್ಲಿ ಉತ್ತಮ ಲೆಕ್ಕ ಪರಿಶೋಧನೆ ಮಾಡಲು ಮಾರ್ಗಸೂಚಿ ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ. ಇದರಿಂದಾಗಿ ಇಲಾಖಾ ಲೆಕ್ಕ ಪರಿಶೋಧಕರು ಗುಣಮಟ್ಟದ ಆಡಿಟ್ ಮಾಡಿಸಬಹುದು. ಸರಿಯಾಗಿ ಆಡಿಟ್ ಮಾಡಿಸದ ಸುಮಾರು 60 ಸಹಕಾರ ಸಂಘಗಳನ್ನು ರದ್ದು ಮಾಡಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಿಲೀನ ಪ್ರಸ್ತಾಪ ಇಲ್ಲ: ಸರ್ಕಾರ ತಾನೇ ತಾನಾಗಿ ಯಾವ ಎಪಿಎಂಸಿಯನ್ನೂ ವಿಲೀನ ಮಾಡುವುದಿಲ್ಲ. ಎರಡು ಅಥವಾ ಹೆಚ್ಚು ಎಪಿಎಂಸಿಗಳು ವಿಲೀನಗೊಳ್ಳುವುದು ಅವಶ್ಯವೆಂದು ಮನದಟ್ಟಾದರೆ ಮಾತ್ರ ಅಂತಹ ಸಮಿತಿಗಳ ಜೊತೆ ಸಮಾಲೋಚಿಸಿ ವಿಲೀನಗೊಳಿಸುವ ಅಧಿಕಾರ ಹೊಂದಿರುತ್ತದೆ. ಆದರೆ, ಸದ್ಯ ವಿಲೀನಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿಲ್ಲ ಎಂದು ಸಹಕಾರ ಸಚಿವರು ಸ್ಪಷ್ಟಪಡಿಸಿದರು.

ಕಾಯ್ದೆಗೆ ಚಿಂತನೆ: ಸಹಕಾರ ಸಂಘಗಳ ಆಡಿಟ್ ಹೊಣೆಯನ್ನು ಸಿಎಗಳಿಗೆ ವಹಿಸಿದ ಬಳಿಕ ವ್ಯಾಪಕ ಭ್ರಷ್ಟಾಚಾರ, ಅಕ್ರಮ ನಡೆಯುತ್ತಿದೆ ಎನ್ನುವ ದೂರುಗಳನ್ನು ಪರಿಶೀಲನೆ ಮಾಡಲಾಗುವುದು. ಇಲ್ಲಿರುವ ಲೋಪ ಸರಿಪಡಿಸಲು ಮುಂದಿನ ಅಧಿವೇಶನದಲ್ಲಿ ಸಮಗ್ರವಾದ ಕಾಯ್ದೆ ತರುವ ಚಿಂತನೆ ಇದೆ ಎಂದರು.

ಆಧಾರ:–ವಿಜಯವಾಣಿ, ದಿನಾಂಕ:16.02.2022

52. ಪೀಣ್ಯ ಫ್ಲೈಓವರ್ ಸಂಚಾರಕ್ಕೆ ಸುರಕ್ಷಿತವಲ್ಲ: ಬೊಮ್ಮಾಯಿ

ತುಮಕೂರು ರಸ್ತೆ ಮೇಲ್ಸೇತುವೆ ಎರಡು ಪಿಲ್ಲರ್‌ಗಳ ನಡುವಿನ ಕೇಬಲ್ ದುರಸ್ತಿಗೊಂಡಿದೆ. ಆದರೆ ದುರಸ್ತಿ ಕಾಮಗಾರಿ ಮುಗಿದಿದ್ದರೂ ಲೋಡ್ ಪರೀಕ್ಷೆ ವೇಳೆ ವಾಹನ ಸಂಚಾರ ಸುರಕ್ಷಿತವಲ್ಲ ಎಂದು ವರದಿ ಬಂದಿರುವ ಹಿನ್ನೆಲೆಯಲ್ಲಿ ವಾಹನಗಳಿಗೆ ಅವಕಾಶ ನೀಡಿಲ್ಲ. ಯಾವುದಾದರೂ ಅನಾಹುತ ಉಂಟಾದರೆ ಯಾರು ಹೊಣೆ ಎಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಪ್ರಶ್ನಿಸಿದ್ದಾರೆ.

ಕಳಪೆ ಕಾಮಗಾರಿಯಿಂದಲೇ ಎರಡು ಪಿಲ್ಲರ್ ನಡುವಿನ ಭಾಗಕ್ಕೆ ಸಮಸ್ಯೆಯಾಗಿದೆ. ಅದನ್ನು ಹೊಸದಾಗಿಯೇ ಮಾಡಬೇಕು ಎಂದು ಇಂಜಿನಿಯರ್‌ಗಳು ಹೇಳುತ್ತಿದ್ದಾರೆ. ತಾತ್ಕಾಲಿಕವಾಗಿ ಲಘು ವಾಹನಗಳಿಗಾದರೂ ಅವಕಾಶ ನೀಡುವಂತೆ ಕೇಂದ್ರ ಹೆದ್ದಾರಿ ಖಾತೆ ಸಚಿವರಿಗೆ ಪತ್ರ ಬರೆದಿದ್ದೇನೆ. ಎರಡು ದಿನದೊಳಗೆ ಅಂತಿಮ ತೀರ್ಮಾನ ಬರಲಿದೆ ಎಂದು ಹೇಳಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ದಾಸರಹಳ್ಳಿ ಶಾಸಕ ಮಂಜುನಾಥ್, ಕಳೆದ 56 ದಿನಗಳಿಂದ ಪೀಣ್ಯ ಮೇಲ್ಸೇತುವೆ ಸಂಪೂರ್ಣ ಸ್ಥಗಿತಗೊಂಡಿದೆ. ಸುಮಾರು 18 ಜಿಲ್ಲೆಗಳನ್ನು ಬೆಂಗಳೂರಿಗೆ ಸಂಪರ್ಕಿಸುವ ರಸ್ತೆಯಲ್ಲಿ ಸಮಸ್ಯೆ ಕಾಣಿಸಿಕೊಂಡು ಎರಡು ತಿಂಗಳಾದರೂ ದುರಸ್ಥಿ ಮಾಡಿಲ್ಲ. ಕನಿಷ್ಠ ಲಘು ವಾಹನ, ತುರ್ತು ವಾಹನಗಳಿಗೂ ಅವಕಾಶ ನೀಡಿಲ್ಲ. ಗಂಟೆಗಟ್ಟಲೇ ಸಂಚಾರದಟ್ಟಣೆಯಿಂದ ಹಲವರು ಆ್ಯಂಬುಲೆನ್ಸ್‌ನಲ್ಲೇ ಮೃತಪಟ್ಟಿದ್ದಾರೆ. ಕೈಗಾರಿಕಾ ಪ್ರದೇಶಕ್ಕೆ ಬರುವ ಕಾರ್ಮಿಕರೂ ಪರದಾಡುವಂತಾಗಿದೆ ಎಂದು ಹೇಳಿದರು.

ವಿಧಾನಸಭೆ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ, ಇದು ಅತಿ ಗಂಭೀರವಾದ ವಿಷಯ, ಸರ್ಕಾರವು ಕೂಡಲೇ ಇದಕ್ಕೆ ಸ್ಪಂದಿಸಿ ಅಗತ್ಯ ಪರಿಹಾರ ಒದಗಿಸಬೇಕು ಎಂದು ಸೂಚಿಸಿದರು.

ಕಳಪೆ ಕಾಮಗಾರಿಯಿಂದ ಸಮಸ್ಯೆ: ಈ ವೇಳೆ ಪ್ರತಿಕ್ರಿಯಿಸಿದ ಬಸವರಾಜ ಬೊಮ್ಮಾಯಿ, ಈ ರಸ್ತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ. ಕಳಪೆ ಕಾಮಗಾರಿಯಿಂದ ಉಂಟಾಗಿರುವ ಸಮಸ್ಯೆಯಿಂದ ಲಕ್ಷಾಂತರ ಮಂದಿ ನರಳುತ್ತಿದ್ದಾರೆ. ರಿಪೇರಿ ಮುಗಿದ ಮೇಲೆ ಲೋಡ್ ಟೆಸ್ಟಿಂಗ್ ನಡೆಸಿದ್ದು, ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್‌ಗಳು, ಐಐಎಸ್ಸಿ ಎಂಜಿನಿಯರ್‌ಗಳು ಪರೀಕ್ಷೆ ನಡೆಸಿದ್ದಾರೆ. 102–103 ಪಿಲ್ಲರ್ ನಡುವಿನ ಕೇಬಲ್ ಹೆಚ್ಚು ಗಾತ್ರದ ವಾಹನ ಸಂಚರಿಸಿದರೆ ಈಗಲೂ ಬಕಲ್ ಆಗುತ್ತಿದೆ. ಯಾವುದಾರೂ ಅನಾಹುತ ಆದರೆ ಯಾರು ಹೊಣೆ ಎಂಬ ಕಾರಣಕ್ಕೆ ಅನುಮತಿ ನೀಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸಚಿವರಿಗೆ ಮನವಿ: ಆದರೆ ಸ್ಥಳೀಯವಾಗಿ ತುಂಬಾ ಸಮಸ್ಯೆ ಉಂಟಾಗುತ್ತಿದೆ. ಉತ್ತರ ಕರ್ನಾಟಕ, ಉತ್ತರ ಭಾರತದ ಜನರನ್ನು ಬೆಂಗಳೂರಿಗೆ ಸಂಪರ್ಕಿಸುವ ಮುಖ್ಯ ರಸ್ತೆಯಲ್ಲಿ ಸಮಸ್ಯೆ ಉಂಟಾಗಿದೆ. ಹೀಗಾಗಿ ಕೇಂದ್ರ ಹೆದ್ದಾರಿ ಸಚಿವರಿಗೆ ಪತ್ರ ಬರೆದು ಕನಿಷ್ಠ ಲಘು ವಾಹನಗಳಿಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದೇನೆ. ವಾರದಲ್ಲಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರು. ಎರಡು ದಿನಗಳಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ಆಗುತ್ತದೆ ಎಂದರು.

ಆಧಾರ:–ಕನ್ನಡ ಪ್ರಭ, ದಿನಾಂಕ:16.02.2022

53. ಸದನದಲ್ಲಿ ಮುಂದುವರಿದ ಹಿಜಾಬ್ ಪ್ರತಿಧ್ವನಿ

ವಸ್ತ್ರಸಂಹಿತೆ ವಿಚಾರದಲ್ಲಿ ಕಾಲೇಜುಗಳಲ್ಲಿ ನಿಯಮ ಪಾಲಿಸಲು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದ್ದರೂ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲೂ ಒತ್ತಡ ಹಾಕಿ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರಲಾಗುತ್ತಿದೆ ಎಂದು ವಿಧಾನಸಭೆ ಪ್ರತಿಪಕ್ಷ ಉಪನಾಯಕ ಯು.ಟಿ.ಖಾದರ್ ಆರೋಪಿಸಿದ್ದಾರೆ. ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿ, ಇಂದು ಶಾಲೆಗಳಲ್ಲಿ ಮಕ್ಕಳು ನೆಮ್ಮದಿಯಿಂದ ವಿದ್ಯಾಭ್ಯಾಸ ಮಾಡಲು ಆಗದಂತೆ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಈ ವಿಚಾರದಲ್ಲಿ ಸೂಕ್ತ ನಿರ್ಣಯಕ್ಕೆ ಬರಬೇಕು. ನಾವೆಲ್ಲರೂ ಶಾಂತಿ ಕಾಪಾಡುವುದು ಮುಖ್ಯ. ಹೈಕೋರ್ಟ್ ಮಧ್ಯಂತರ ಆದೇಶ ಕಾಲೇಜುಗಳಿಗೆ ಅನ್ವಯ. ಅದರಲ್ಲೂ ಶಾಲಾ ಆಡಳಿತ ಹಾಗೂ ಅಭಿವೃದ್ಧಿ ಮಂಡಳಿಗಳು ತೀರ್ಮಾನ ಮಾಡದ ಕಡೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೂ ಪ್ರಾಥಮಿಕ, ಪ್ರೌಢ ಶಾಲೆ ವಿದ್ಯಾರ್ಥಿಗಳು, ಶಾಲಾ ಸಿಬ್ಬಂದಿ ಮೇಲೂ ಬೇರೆ ಬೇರೆ ರೀತಿಯ ಒತ್ತಡ ಹಾಕಲಾಗುತ್ತಿದೆ. ಇದು ಮತ್ತಷ್ಟು ಗೊಂದಲಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಆಧಾರ:–ಉದಯವಾಣಿ, ದಿನಾಂಕ:16.02.2022

54. ಸದನದಲ್ಲಿ ಕದನ

ಕೆಂಪುಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುವ ಸಂಬಂಧ ಸಚಿವ ಕೆ.ಎಸ್.ಈಶ್ವರಪ್ಪ ಅವರು ನೀಡಿದ್ದ ಹೇಳಿಕೆ ಉಭಯ ಸದನಗಳಲ್ಲಿ ಪ್ರತಿಧ್ವನಿಸಿ ಸಚಿವ ಕೆ.ಎಸ್.ಈಶ್ವರಪ್ಪ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಏಕವಚನದಲ್ಲಿ ಬೈಯ್ದಾಡಿಕೊಂಡು ಕೈ ಕೈ ಮಿಲಾಯಿಸುವ ಮಟ್ಟಕ್ಕೂ ತಲುಪಿ ರಣರಂಗವಾದಂತಾಯಿತು. ಒಂದು ರೀತಿಯಲ್ಲಿ ಘಟನೆಗಳು ವಿಧಾನಮಂಡಲ ಇತಿಹಾಸದಲ್ಲಿ ಕಪ್ಪುಚುಕ್ಕೆಯಾಗಿ ಪರಿಣಮಿಸಿತು.

ಈಶ್ವರಪ್ಪ ದೇಶದ್ರೋಹಿ ಎಂದು ಡಿ.ಕೆ.ಶಿವಕುಮಾರ್ ಆರೋಪಿಸಿದರೆ, ನಾನಲ್ಲ ದೇಶ ದ್ರೋಹಿ, ನೀನು, ನಿಮ್ಮಪ್ಪ, ತುರ್ತು ಪರಿಸ್ಥಿತಿಯಲ್ಲಿ ವಂದೇಮಾತರಂ ಹೇಳಿ ಜೈಲಿಗೆ ಹೋದವ ನಾನು. ಭ್ರಷ್ಟಾಚಾರ ಮಾಡಿ ತಿಹಾರ್ ಜೈಲಿಗೆ ಹೋದವ ನೀನು. ಬೇಲ್ ಮೇಲೆ ಹೊರಗಿದ್ದೀಯಾ ಎಂದು ಈಶ್ವರಪ್ಪ ಪ್ರತಿ ಟೀಕೆ ಮಾಡಿದರು. ಇದಕ್ಕೆ ಪ್ರತಿಯಾಗಿ ನೀನು ಮನೆಯಲ್ಲಿ ನೋಟು ಎಣಿಸುವ ಮಿಷನ್ ಇಟ್ಟುಕೊಂಡು ದೊಡ್ಡ ಭ್ರಷ್ಟ ನನ್ನ ಬಗ್ಗೆ ಮಾತನಾಡುತ್ತೀಯ ಎಂದು ಶಿವಕುಮಾರ್ ಕೆಣಕಿದರು.

ಇದರಿಂದ ಕೆರಳಿದ ಈಶ್ವರಪ್ಪ ಸದನ ನಿಮ್ಮಪ್ಪನ ಆಸ್ತಿಯಾ? ಎಂದು ಎದ್ದು ನಿಂತು ಜೋರು ಧ್ವನಿಯಲ್ಲಿ ಹೇಳಿದರು. ಇದಕ್ಕೆ ಡಿ.ಕೆ.ಶಿವಕುಮಾರ್, ಇಲ್ಲ ನಿಮ್ಮಪ್ಪನ ಮನೆ ಆಸ್ತಿನಾ, ಏನ್ ಹೊಡೀತೀಯಾ ಎಂದು ಗದರಿದರು. ನಂತರ ಆಡಳಿತ ಪಕ್ಷದ ಸಾಲಿನತ್ತ ಬಾ ಹೊಡಿ ನೋಡೋಣ ಎಂದು ಮುನ್ನುಗ್ಗಿದರು. ಈಶ್ವರಪ್ಪ ಅವರು ತಮ್ಮ ಆಸನದಿಂದ ಎದ್ದು ಪ್ರತಿಪಕ್ಷ ಸಾಲಿನತ್ತ ಬರತೊಡಗಿದರು. ಕಾಂಗ್ರೆಸ್ ಶಾಸಕರು ಡಿಕೆಶಿ ಜೊತೆಗೂಡಿದರು. ಆಡಳಿತ ಪಕ್ಷದ ಸದಸ್ಯರು ಈಶ್ವರಪ್ಪ ಬೆನ್ನಿಗೆ ನಿಂತರು.

ಪರಿಸ್ಥಿತಿಯ ಸಂಘರ್ಷದ ಸ್ವರೂಪ ಪಡೆಯುತ್ತಿರುವುದು ಗಮನಿಸಿದ ಸ್ಪೀಕರ್ ಸದನ ಮುಂದೂಡಿ ಮಾರ್ಷಲ್‌ಗಳನ್ನು ಸದನದ ಒಳಗೆ ಕರೆಸಿಕೊಂಡರು.

ಅಹೋರಾತ್ರಿ ಧರಣಿ: ಉಭಯ ಸದನಗಳಲ್ಲಿ ನಿಲುವಳಿ ಸೂಚನೆ ತಿರಸ್ಕರಿಸಲಾಗಿದ್ದು ಚರ್ಚೆಗೆ ಅವಕಾಶ ನೀಡಿಲ್ಲ. ಹೀಗಾಗಿ ಈಶ್ವರಪ್ಪ ರಾಜೀನಾಮೆ ಹಾಗೂ ಅವರ ವಿರುದ್ಧ ದೇಶ ದ್ರೋಹ ಪ್ರಕರಣ ದಾಖಲಿಸಲು ಒತ್ತಾಯಿಸಿ ಅಹೋರಾತ್ರಿ ಧರಣಿಗೂ ಪ್ರತಿಪಕ್ಷ ಕಾಂಗ್ರೆಸ್ ತೀರ್ಮಾನಿಸಿದೆ.

ಮತ್ತೊಂದೆಡೆ ಕಾಂಗ್ರೆಸ್ ಸದಸ್ಯರು ವಿಧಾನ ಸಭೆಯಲ್ಲಿ ಸದನದ ಒಳಗೆ ರಾಷ್ಟ್ರಧ್ವಜ ಹಿಡಿದು ಪ್ರತಿಭಟನೆ ನಡೆಸಿದ್ದು ಬಿಜೆಪಿಯ ಆಕ್ರೋಶಕ್ಕೆ ಕಾರಣವಾಗಿದೆ. ನಿಮ್ಮ ಪ್ರತಿಭಟನೆಗೆ ರಾಷ್ಟ್ರಧ್ವಜ ಬಳಕೆ ಮಾಡಿ ಅಗೌರವ ತೋರಿರುವುದು ಸರಿಯಲ್ಲ ಎಂದು ಸ್ಪೀಕರ್ ನೇರವಾಗಿಯೇ ಅಸಮಾಧಾನ ಹೊರ ಹಾಕಿದರು. ರಾಷ್ಟ್ರಧ್ವಜ ಹಿಡಿದು ಬಂದ ಕಾಂಗ್ರೆಸ್ ಸದಸ್ಯರ ವರ್ತನೆ ಧ್ವಜ ಸಂಹಿತೆ ಉಲ್ಲಂಘನೆ ಎಂದು ಮುಖ್ಯಮಂತ್ರಿಯವರು ಕಿಡಿಕಾರಿದರು.

ಆಧಾರ:–ಉದಯವಾಣಿ, ದಿನಾಂಕ:17.02.2022

55. ಸದನದಲ್ಲಿ ಧ್ವಜ ಕದನ ಏನಿದು ವಿವಾದ:

ರಾಷ್ಟ್ರಧ್ವಜ ಕುರಿತು ವಿವಾದಾತ್ಮಕ ಹೇಳಿಕೆ ನೀಡಿರುವ ಸಚಿವ ಕೆ.ಎಸ್.ಈಶ್ವರಪ್ಪ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕಾಂಗ್ರೆಸ್ ಮಂಡಿಸಿದ ನಿಲುವಳಿ ಸೂಚನೆಯು ಉಭಯ ಸದನಗಳಲ್ಲಿ ಕೋಲಾಹಲ ಸೃಷ್ಟಿಸಿ, ಇಡೀ ದಿನದ ಕಲಾಪವನ್ನು ನುಂಗಿ ಹಾಕಿತು. ವಾಗ್ವಾದದ ಭರದಲ್ಲಿ ಈಶ್ವರಪ್ಪ ಹಾಗೂ ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಪರಸ್ಪರ ಏಕ ವಚನ, ಅವಾಚ್ಯ ಪದ ಬಳಕೆ ಮಾತ್ರವಲ್ಲದೆ ಕೈ–ಕೈ ಮಿಲಾಯಿಸುವ ಮಟ್ಟವನ್ನು ಮುಟ್ಟಿದ್ದರು. ವಿಧಾನಸಭೆಯಲ್ಲಿ ಉಭಯ ಪಕ್ಷಗಳ ಸದಸ್ಯರು ಸದನ ಮುಂದೂಡಿಕೆ ನಂತರವೂ ವಾಗ್ವಾದದಲ್ಲಿ ತೊಡಗಿದ್ದರಿಂದ ಮಾರ್ಷಲ್‌ಗಳು ಸದನ ಪ್ರವೇಶಿಸಿ ಪರಿಸ್ಥಿತಿ ನಿಭಾಯಿಸಬೇಕಾಯಿತು.

ಸದನದಲ್ಲಿ ಈಶ್ವರಪ್ಪ ಹೇಳಿಕೆ ದೇಶದ್ರೋಹದ್ದು ಎಂದು ಕಾಂಗ್ರೆಸ್ ವಾದಿಸಿದರೆ, ರಾಷ್ಟ್ರಧ್ವಜದೊಂದಿಗೆ ಸದನದ ಬಾವಿಗಿಳಿದು ಧರಣಿ ಆರಂಭಿಸಿದ ಕಾಂಗ್ರೆಸ್ ಸದಸ್ಯರ ನಡವಳಿಕೆಯೇ ಧ್ವಜಕ್ಕೆ ಅಗೌರವ ಉಂಟು ಮಾಡುತ್ತಿದೆ ಎಂದು ಬಿಜೆಪಿ ಸದಸ್ಯರು ಹರಿಹಾಯ್ದರು. ಉಭಯ ಸದನಗಳನ್ನು ಮುಂದೂಡಿದ್ದರೂ ಈ ಪ್ರಕೋಪ ಕಡಿಮೆಯಾಗಿರಲಿಲ್ಲ. ಸದನದ ನಂತರ ಸಭೆ ಸೇರಿದ ಕಾಂಗ್ರೆಸ್ ನಾಯಕರು, ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾಗೊಳಿಸಲು ಬೆಳಿಗ್ಗೆ 11ರ ವರೆಗೆ ಗಡುವು ನೀಡಿ ಬೇಡಿಕೆ ಈಡೇರದಿದ್ದರೆ ಸದನದ ಒಳಗೆ ಅಹೋರಾತ್ರಿ ಹಾಗೂ ಹೊರಗೆ ಬೃಹತ್ ಹೋರಾಟ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ಉಭಯ ಸದನದಲ್ಲಿ ಪ್ರಸ್ತಾಪ: ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ತಮ್ಮ ತಮ್ಮ ಸದನದಲ್ಲಿ ಪ್ರತ್ಯೇಕವಾಗಿ ನಿಲುವಳಿ ಸೂಚನೆ ಮಂಡಿಸಿ, ಕೆಂಪುಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುತ್ತೇವೆ ಎಂದ ಈಶ್ವರಪ್ಪ ಹೇಳಿಕೆ ಹಿಂದೆ ರಾಷ್ಟ್ರದ್ರೋಹದ ವಾಸನೆಯಿದೆ. ಕೂಡಲೇ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು. ಜೊತೆಗೆ ದೇಶದ್ರೋಹ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು.

ಆದರೆ, ಸರ್ಕಾರ ಈಶ್ವರಪ್ಪ ಪರ ನಿಂತಿತು. ಇದರ ನಡುವೆಯೂ ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದು ಈಶ್ವರಪ್ಪ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ಈ ವೇಳೆ ಕೀಳು ಮಟ್ಟದ ಪದ ಪ್ರಯೋಗದಿಂದ ಶಿವಕುಮಾರ್ ಹಾಗೂ ಈಶ್ವರಪ್ಪ ಕೈ–ಕೈ ಮಿಲಾಯಿಸುವ ಹಂತವನ್ನು ಮುಟ್ಟಿತ್ತು. ಭೋಜನ ವಿರಾಮದ ಬಳಿಕ ಸದನ ಸಮಾವೇಶಗೊಂಡಾಗ ಕಾಂಗ್ರೆಸ್ ಸದಸ್ಯರು ರಾಷ್ಟ್ರಧ್ವಜ ಹಿಡಿದು

ಬಾವಿಗಿಳಿದು ಪ್ರತಿಭಟನೆ ನಡೆಸಿದರು. 'ದೇಶದ್ರೋಹಿ ಈಶ್ವರಪ್ಪಗೆ ಧಿಕ್ಕಾರ,' ಬೇಕೇ ಬೇಕು ಈಶ್ವರಪ್ಪ ರಾಜೀನಾಮೆ ಬೇಕು ಎಂದು ಘೋಷಣೆ ಕೂಗಿದರು.

ಪ್ರತಿಭಟನೆಗೆ ಕಾಂಗ್ರೆಸ್‌ನವರು ರಾಷ್ಟ್ರಧ್ವಜ ಬಳಸಿಕೊಂಡಿದ್ದಕ್ಕೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಪ್ರತಿಭಟನೆಗೆ ರಾಷ್ಟ್ರ ಧ್ವಜ ಬಳಸುವುದಕ್ಕಿಂತ ದೊಡ್ಡ ದೇಶದ್ರೋಹ ಮತ್ತೊಂದಿಲ್ಲ ಎಂದು ಹೇಳಿದರು. ಇದರ ನಡುವೆಯೇ ಕಾಂಗ್ರೆಸ್ ಸದಸ್ಯರು ಸದನದ ಬಾವಿಯಲ್ಲಿ ಪ್ರತಿಭಟನೆ ಮುಂದುವರೆಸಿದ್ದರು.

ಈ ವೇಳೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ, ಸರ್ಕಾರದ ವಾದ ಕೇಳಿದ ಬಳಿಕ ಇದು ನಿಲುವಳಿ ಪ್ರಸ್ತಾವನೆ ಅಡಿ ಬರುವುದಿಲ್ಲ ನಿಲುವಳಿ ಸೂಚನೆಯನ್ನು ತಿರಸ್ಕರಿಸಲಾಗಿದೆ ಎಂದು ಹೇಳಿದರು. ಇದರ ನಡುವೆಯೂ ಕಾಂಗ್ರೆಸ್ ಧರಣಿ ಭಾರತ್ ಮಾತಾ ಕಿ ಜೈ, ಕೈಗೊಂಬೆ, ಕೈಗೊಂಬೆ ಆರ್‌ಎಸ್‌ಎಸ್ ಕೈಗೊಂಬೆ ಎಂದು ಘೋಷಣೆ ಕೂಗುತ್ತಿದ್ದ ಹಿನ್ನೆಲೆಯಲ್ಲಿ ಸದನವನ್ನು ಮುಂದೂಡಿದರು.

ವಿಧಾನಪರಿಷತ್ ಕಲಾಪವೂ ಬಲಿ: ವಿಧಾನಪರಿಷತ್‌ನಲ್ಲಿ ಬೆಳಿಗ್ಗೆ ಕಲಾಪದ ಆರಂಭದಲ್ಲಿ ಪ್ರಶ್ನೋತ್ತರ ಬದಿಗಿಟ್ಟು ನಿಲುವಳಿ ಸೂಚನೆ ಪ್ರಸ್ತಾಪಕ್ಕೆ ಅವಕಾಶ ನೀಡಬೇಕೆಂಬ ಕಾಂಗ್ರೆಸ್‌ನ ಮನವಿಗೆ ಸಭಾಪತಿಗಳು ಒಪ್ಪಲಿಲ್ಲ. ಇದೇ ವಿಷಯ ಕುರಿತು ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ವಾಗ್ವಾದಗಳು ತೀವ್ರವಾಗಿ ನಡೆದವು. ಹೀಗಾಗಿ ಸಭಾಪತಿಗಳು ಸದನವನ್ನು ಮುಂದೂಡಿ ತಮ್ಮ ಕಛೇರಿಯಲ್ಲಿ ಮುಖಂಡರ ಜೊತೆ ಚರ್ಚಿಸಿದರು.

ನಂತರ ಪುನಃ ಸದನ ಆರಂಭಗೊಂಡು ನಿಲುವಳಿ ಪ್ರಸ್ತಾವನೆಗೆ ಅವಕಾಶ ಕಲ್ಪಿಸಿದರು. ಪ್ರಾಸ್ತವಿಕವಾಗಿ ಮಾತನಾಡುವ ಸಂದರ್ಭದಲ್ಲಿ ಪ್ರತಿಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಆರ್‌ಎಸ್‌ಎಸ್ ಕಚೇರಿ ಇರುವ ನಾಗಪುರವನ್ನು ಹಾವಿನಪುರ ಎಂದು ಕರೆದದ್ದು, ಕಛೇರಿ ಮೇಲೆ ರಾಷ್ಟ್ರಧ್ವಜ ಹಾರಿಸದೇ ಇರುವ ವಿಷಯವನ್ನು ಉಲ್ಲೇಖಿಸಿದ್ದು ತೀವ್ರ ವಾಗ್ವಾದಕ್ಕೆ ಕಾರಣವಾಯಿತು. ಸಭಾಪತಿಗಳು ನಿಲುವಳಿ ತಿರಸ್ಕರಿಸಿ ತೀರ್ಪು ನೀಡಿದ ನಂತರವೂ ಕಾಂಗ್ರೆಸ್ ಸದಸ್ಯರು ಧರಣಿ ಮಾಡಿದಾಗ ಸದನವನ್ನು ಭೋಜನ ವಿರಾಮಕ್ಕೆ ಮುಂದೂಡಿದರು. ಮತ್ತೆ ಸದನ ಸೇರಿದಾಗಲೂ ತಮ್ಮ ಆಗ್ರಹಕ್ಕೆ ಕಟ್ಟುಬಿದ್ದ ಕಾಂಗ್ರೆಸಿಗರು ಸಭಾಪತಿಗಳ ಆಸನದ ಮುಂದೆ ಬಂದು ಧರಣಿ ಆರಂಭಿಸಿದರು. ಧರಣಿ, ಘೋಷಣೆ ನಡುವೆ ಪ್ರಶ್ನೋತ್ತರ ಕಲಾಪ ನಡೆಯಿತು. ನಂತರ ಸದನವನ್ನು ಮುಂದೂಡಲಾಯಿತು.

ಆಧಾರ:–ಕನ್ನಡ ಪ್ರಭ, ದಿನಾಂಕ:17.02.2022

56. ದಿನದ ಕಲಾಪ ನುಂಗಿದ ರಾಷ್ಟ್ರಧ್ವಜ ವಿವಾದ

ತ್ರಿವರ್ಣಧ್ವಜ ಎಂದರೆ ಅದು ದೇಶದ 130 ಕೋಟಿ ಜನತೆಯ ಗೌರವದ ಸಂಕೇತ, ಇದಕ್ಕೆ ಅಗೌರವ ತೋರುವುದು ಅಕ್ಷಮ್ಯ ಅಪರಾಧ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಸಚಿವರೊಬ್ಬರು ನೂರಿನ್ನೂರು ವರ್ಷದ ಬಳಿಕ ರಾಷ್ಟ್ರಧ್ವಜ ಹಾರುವಲ್ಲಿ ಕೇಸರಿಧ್ವಜ ಹಾರಬಹುದು ಎಂಬು ಮಾತು ಇದಕ್ಕೆ ಪ್ರತಿಯಾಗಿ ರಾಷ್ಟ್ರಧ್ವಜವನ್ನೇ ಹಿಡಿದು ವ್ಯಕ್ತಪಡಿಸಿದ ಪ್ರತಿಭಟನೆ ಶಾಸನಸಭೆಯ ಇಡೀ ದಿನದ ಕಲಾಪವನ್ನೇ ಬಲಿತೆಗೆದುಕೊಂಡಿದ್ದು ಮಾತ್ರ ವಿಪರ್ಯಾಸ. ಆದರೆ ಧ್ವಜಸಂಹಿತೆ ಏನು ಹೇಳುತ್ತದೆ ಎಂಬ ಜಿಜ್ಞಾಸೆಗೂ ಘಟನೆ ಕಾರಣವಾಗಿದೆ.

ರಾಷ್ಟ್ರಧ್ವಜದ ಬಳಕೆ ಹೇಗೆಂಬ ಬಗ್ಗೆಯೇ ಧ್ವಜಸಂಹಿತೆ ರೂಪಿತವಾಗಿದೆ. ಯಾವ ಸಂದರ್ಭದಲ್ಲಿ ಹೇಗೆ ಬಳಸಬಹುದು ಎಂಬುದಕ್ಕೂ ರೀತಿರುವಾಜುಗಳಿವೆ. ಆದರೆ ಭವಿಷ್ಯದಲ್ಲಿ ದೆಹಲಿಯ ಕೆಂಪುಕೋಟೆಯಲ್ಲಿ ರಾಷ್ಟ್ರಧ್ವಜ ಹಾರಿಸುವಲ್ಲಿ ಕೇಸರಿ ಧ್ವಜ ಹಾರಬಹುದು ಎಂದು ಸಂವಿಧಾನದ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸುವ ಸಚಿವರೊಬ್ಬರು ಹೇಳುವುದೂ ಕೂಡಾ ಅಕ್ಷಮ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ.

ಹಾಗೆಯೇ ಇದನ್ನು ಪ್ರತಿಪಕ್ಷದ ಸದಸ್ಯರು ಪ್ರತಿಭಟಿಸುವ ಸಂದರ್ಭ ವಿಧಾನಸಭೆಯ ಒಳಗೆ ಅದರಲ್ಲೂ ಸಭಾಧ್ಯಕ್ಷರ ಪೀಠದ ಮುಂಭಾಗ ರಾಷ್ಟ್ರಧ್ವಜವನ್ನು ಪ್ರದರ್ಶಿಸಿದ್ದು ಎಷ್ಟರಮಟ್ಟಿಗೆ ಸಮರ್ಥನೀಯ ಎನ್ನುವುದು ಕೂಡಾ ಪ್ರಶ್ನಾರ್ಹ.

ರಾಷ್ಟ್ರಧ್ವಜ ನಮ್ಮೆಲ್ಲರ ಹೆಮ್ಮೆ ಎಂದು ಕೆಲವೇ ಗಂಟೆಗಳ ಮುನ್ನ ಕಲಾಪದಲ್ಲಿ ಪ್ರಸ್ತಾಪಿಸಿ ಭಾಷಣ ಮಾಡಿದ್ದ ನಾಯಕರಿಂದಲೇ ಇಂತಹ ವರ್ತನೆ ಕಂಡುಬಂದಿರುವುದು ಜನಪ್ರತಿನಿಧಿಗಳ ಜವಾಬ್ದಾರಿಯನ್ನು ಪ್ರಶ್ನಿಸುವಂತಿದೆ ಎನ್ನುವುದರಲ್ಲಿ ಅತಿಶಯೋಕ್ತಿ ಎನಿಸದು. ಈ ಹಿಂದೆ ಹಲವು ಪ್ರತಿಭಟನೆಗಳ ಸಂದರ್ಭಗಳಲ್ಲಿ ರಾಷ್ಟ್ರಧ್ವಜ ಬಳಕೆಯಾಗಿದೆ ಎಂಬ ಸಮರ್ಥನೆ ಶಾಸನಸಭೆಯ ಒಳಗೆ ನಡೆಯುವ ಪ್ರತಿಭಟನೆಗೆ ಅನ್ವಯಿಸುವುದೇ? ಕರ್ನಾಟಕ ವಿಧಾನಸಭೆ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಅಧಿವೇಶನದ ವೇಳೆ ರಾಷ್ಟ್ರಧ್ವಜ ಪ್ರದರ್ಶಿಸಿ ಪ್ರತಿಭಟನೆ ನಡೆದಿರುವುದಕ್ಕೆ ಕಾಂಗ್ರೆಸ್ ಪಕ್ಷ ಸಾಕ್ಷಿಯಾಗಿಸಿದೆ. ಇದನ್ನು ಸ್ವತಃ ಸಭಾಧ್ಯಕ್ಷರೇ ಆಕ್ಷೇಪಿಸಿ ನಿಮ್ಮ ಧರಣಿ, ಪ್ರತಿಭಟನೆಗೆ ರಾಷ್ಟ್ರಧ್ವಜ ಬಳಸಿಕೊಳ್ಳುವುದು ಶುದ್ಧ ತಪ್ಪು ಎಂದು ಆಕ್ರೋಶ ವ್ಯಕ್ತಪಡಿಸಿರುವುದು ವಿಶೇಷವೆನಿಸಿದೆ.

ಆಧಾರ:–ಸಂಯುಕ್ತ ಕರ್ನಾಟಕ, ದಿನಾಂಕ:17.02.2022

57. ಸದನದ ಗೌರವ ಎತ್ತಿ ಹಿಡಿಯುವುದು ಎಲ್ಲ ಸದಸ್ಯರ ಕರ್ತವ್ಯ

ಕೆಂಪುಕೋಟೆ ಮೇಲೆ ಕೇಸರಿ ಧ್ವಜ ಹಾರಾಟ ವಿಚಾರ ವಿಧಾನಮಂಡಲದ ಉಭಯ ಸದನಗಳಲ್ಲೂ ಭಾರೀ ಗದ್ದಲ ಉಂಟು ಮಾಡಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವರು ಮುಂದೊಂದು ದಿನ ಕೆಂಪುಕೋಟೆ ಮೇಲೆ ಕೇಸರಿ ಧ್ವಜ ಹಾರಿಸಬಹುದು ಎಂದು ಹೇಳಿದ್ದಾರೆ ಎನ್ನಲಾದ ಮಾಧ್ಯಮ ಹೇಳಿಕೆಯೇ ಇಷ್ಟೆಲ್ಲಾ ವಿವಾದಕ್ಕೆ ಕಾರಣವಾಗಿದೆ.

ಕೆಂಪುಕೋಟೆ ಮೇಲೆ ಕೇಸರಿ ಧ್ವಜ ಹಾರಿಸುತ್ತೇವೆ ಎಂದಿರುವ ಈಶ್ವರಪ್ಪ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು ಅವರನ್ನು ಸಂಪುಟದಿಂದ ಕೈಬಿಡಬೇಕು ಎಂಬುದು ಕಾಂಗ್ರೆಸ್ ಆಗ್ರಹ, ಆದರೆ ಆಡಳಿತ ಪಕ್ಷ ಬಿಜೆಪಿ, ಈಶ್ವರಪ್ಪ ಮಾಧ್ಯಮಗಳ ಜೊತೆಗಿನ ಮಾತಿನ ಭರದಲ್ಲಿ ಮುಂದೊಂದು ದಿನ ಕೆಂಪುಕೋಟೆ ಮೇಲೆ ಕೇಸರಿ ಧ್ವಜ ಹಾರಿಸಿದರೂ ಹಾರಿಸಬಹುದು ಎಂದಿದ್ದಾರಷ್ಟೇ. ಈಗಲೇ ಹಾರಿಸುತ್ತೇವೆ ಎಂದಿಲ್ಲ. ಹಾಗೆಯೇ ರಾಷ್ಟ್ರಧ್ವಜಕ್ಕೆ ತನ್ನದೇ ಆದ ಗೌರವವಿದೆ. ಇದರ ವಿರುದ್ಧ ಮಾತನಾಡುವುದೂ ತರವಲ್ಲ ಎಂದೂ ಹೇಳಿದ್ದಾರೆ. ಅವರು ದೇಶದ್ರೋಹ ಎಸಗುವಂಥ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಮರ್ಥಿಸಿಕೊಂಡಿದೆ.

ಈ ಎಲ್ಲ ಸಂಗತಿಗಳ ನಡುವೆ ಸದನದ ಗೌರವಕ್ಕೆ ಚ್ಯುತಿಯಾಗುವಂತೆ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರು ನಡೆದುಕೊಂಡಿದ್ದಾರೆ. ಸಚಿವ ಕೆ.ಎಸ್.ಈಶ್ವರಪ್ಪ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಡುವೆ ಏಕವಚನದಲ್ಲೇ ವಾಕ್ಸಮರ ನಡೆದಿದೆ. ಒಂದು ಹಂತದಲ್ಲಿ ಇವರೀರ್ವರ ನಡುವಿನ ಸಮರ ಕೈ ಕೈ ಮಿಲಾಯಿಸುವ ಹಂತಕ್ಕೆ ಮುಟ್ಟಿತ್ತು. ಸಂಸದೀಯ ಭಾಷೆಯಲ್ಲಿ ಸೂಕ್ತವಲ್ಲದ ಪದಗಳ ಬಳಕೆಯಾಗಿರುವುದು ಖಂಡಿತಾ ಅಕ್ಷಮ್ಯ.

ಈಗಾಗಲೇ ಜನ ರಾಜಕಾರಣಿಗಳ ಮೇಲೆ ನಿಧಾನಗತಿಯಲ್ಲಿ ಗೌರವ ಕಳೆದುಕೊಳ್ಳುತ್ತಿದ್ದಾರೆ. ಸದನದಲ್ಲಿನ ಇಂಥ ವರ್ತನೆಗಳಿಂದ ರಾಜಕಾರಣಿಗಳ ಮೇಲಿನ ಅವರ ನಂಬಿಕೆ ಮತಷ್ಟು ಕುಸಿಯಬಹುದು. ಅಲ್ಲದೆ, ವಿಧಾನಸಭೆ ಇರುವುದು ರಾಜ್ಯದ ಅಭಿವೃದ್ಧಿ ಸಮಸ್ಯೆಗಳ ಕುರಿತಂತೆ ಚರ್ಚೆ ನಡೆಸುವುದಕ್ಕೆ ಮಾತ್ರ. ಇಲ್ಲಿ ವೈಯಕ್ತಿಕ ನಿಂದನೆ ಅಸಹನಿಯ, ಅಷ್ಟೇ ಅಲ್ಲ ಏಕವಚನಕ್ಕಿಂತಲೂ ಮೇಲಾಗಿ ಸದನದ ಒಳಗೆ ಕೀಳು ಪದ ಬಳಕೆ ಮಾಡುವುದು ನಾಗರಿಕ ಸಮಯ ಒಪ್ಪುವಂಥದ್ದಲ್ಲ.

ಈಗ ಉದ್ಭವವಾಗಿರುವ ರಾಷ್ಟ್ರಧ್ವಜದ ವಿಚಾರವೂ ಅಷ್ಟೇ. ನಿಜಕ್ಕೂ ಸಚಿವರ ಕಡೆಯಿಂದ ತಪ್ಪಾಗಿದೆ ಎನ್ನುವುದಾದರೆ, ಸದನದಲ್ಲಿ ಈ ಬಗ್ಗೆಯೇ ಗಂಭಿರ ಚರ್ಚೆಯಾಗಲಿ. ಅಲ್ಲದೆ, ಕಾನೂನು ಮಾರ್ಗದಲ್ಲಿ ಮುಂದಿನ ಹೆಜ್ಜೆ ಇಡಲು ಅವಕಾಶ ಇದೆ. ಅದನ್ನು ಬಿಟ್ಟು ಸದನದ ಗೌರವಕ್ಕೆ ಚ್ಯುತಿ ಬರುವಂತೆ ವರ್ತಿಸುವುದು ತರವಲ್ಲ. ಕೆಂಪುಕೋಟೆ ಮೇಲೆ ರಾಷ್ಟ್ರಧ್ವಜವನ್ನು ಹೊರತುಪಡಿಸಿ ಬೇರಾವುದೇ ಧ್ವಜವನ್ನು ಹಾರಿಸುವುದನ್ನು ಯೋಚಿಸುವುದೂ ಕೂಡ ತಪ್ಪಾಗುತ್ತದೆ. ಇಂಥ ಹೇಳಿಕೆಗಳು ಎಲ್ಲಿಂದ ಬಂದರೂ ಅದು ಅಕ್ಷಮ್ಯವೇ. ಹಾಗೆಯೇ ಸದನದಲ್ಲಿ ರಾಷ್ಟ್ರಧ್ವಜ ಇರಿಸಿಕೊಂಡು ಪ್ರತಿಭಟನೆ ನಡೆಸುವ ಕ್ರಮದ ಬಗ್ಗೆಯೂ ಸಾಕಷ್ಟು ತಕರಾರುಗಳಿವೆ. ಜನಪ್ರತಿನಿಧಿಗಳು ತಮ್ಮ ಮೂಲ ಉದ್ದೇಶವನ್ನು ಮರೆತು ಬೀದಿ ನಾಟಕದ ಮಾದರಿಯಲ್ಲಿ ವರ್ತಿಸುವುದನ್ನು ಜನ ಖಂಡಿತ ಕ್ಷಮಿಸಲಾರರು.

ಆಧಾರ:–ಉದಯವಾಣಿ, ದಿನಾಂಕ:17.02.2022

58. ಸಂಧಾನಕ್ಕೆ ಜಗ್ಗದ ಕಾಂಗ್ರೆಸ್ ನಾಯಕರು

ಗ್ರಾಮಿಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ರಾಜೀನಾಮೆ ಹಾಗೂ ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲು ಒತ್ತಾಯಿಸಿ ಪ್ರತಿಪಕ್ಷ ಕಾಂಗ್ರೆಸ್ ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದೆ.

ಸದನದಲ್ಲಿ ಕಾಂಗ್ರೆಸ್ ಶಾಸಕರ ಪ್ರತಿಭಟನೆ ವಿರುದ್ಧ ಬಿಜೆಪಿ ನಾಯಕರು ವಾಕ್ಸಮರ ನಡೆಸಿದ್ದು, ಸದನದ ಹೊರಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹಿತ ಹಲವು ನಾಯಕರು ಕಾಂಗ್ರೆಸ್ ವರ್ತನೆ ಸರಿಯಲ್ಲ ಎಂದು ವಾಗ್ದಾಳಿ ನಡೆಸಿದರು. ಇದರ ನಡುವೆ ಕಲಾಪ ಮುಂದೂಡಿದರೂ ಸದನದಲ್ಲೇ ಉಳಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರು ಡಿ.ಕೆ.ಶಿವಕುಮಾರ್ ಸೇರಿ ಕಾಂಗ್ರೆಸ್ ಶಾಸಕರ ಜೊತೆ ಸಂಧಾನ ಮನವೊಲಿಕೆ ಕಸರತ್ತುಗಳು ನಡೆದವು.

ಮೊಗಸಾಲೆಗೆ ಬಂದ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ, ಸಿದ್ದರಾಮಯ್ಯ ಅವರ ಜೊತೆ ಕುಳಿತು ಮಾತನಾಡಿ ಧರಣಿ ಕೈಬಿಡಲು ಮನವೊಲಿಸಿದರು. ಅದಾದ ನಂತರ ಖುದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಜೊತೆ ಬಂದು ಸದನದಲ್ಲೇ ಕಾಂಗ್ರೆಸ್ ನಾಯಕರ ಜೊತೆ ಕುಳಿತು ಎರಡು ಗಂಟೆ ಸಂಧಾನ ಮಾತುಕತೆ ನಡೆಸಿದರು. ನಕಲಿ ಕಾಂಗ್ರೆಸ್‌ನವರು ಧರಣಿ ಮಾಡಲು ಹಾಸಿಗೆ ದಿಂಬು ಒದಗಿಸುತ್ತೇವೆ ಎಂದು ಸಚಿವ ಅಶೋಕ್, ಹಿಜಾಬ್ ವಿವಾದದಲ್ಲಿ ಕಾಂಗ್ರೆಸ್‌ನವರು ಹೈರಾಣಾಗಿದ್ದಾರೆ ಬಿಡಿ ಏನಾದರೂ ಮಾಡಿಕೊಳ್ಳಲಿ ಎಂದು ಟೀಕಿಸಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರೂ ಪ್ರತಿಪಕ್ಷ ನಾಯಕರನ್ನು ಭೇಟಿ ಮಾಡಿ ಮನವೊಲಿಕೆಗೆ ಯತ್ನಿಸಿದರು.

ಅತ್ತ ವಿಧಾನಪರಿಷತ್‌ನಲ್ಲೂ ಸಭಾಪತಿ ಬಸವರಾಜ ಹೊರಟ್ಟಿಯವರು ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಹಾಗೂ ಕಾಂಗ್ರೆಸ್ ಸದಸ್ಯರ ಜೊತೆ ಮಾತನಾಡಿ ಮನವೊಲಿಕೆ ಪ್ರಯತ್ನ ಮಾಡಿದರು. ಮತ್ತೊಂದೆಡೆ ವಿಧಾನಸಭೆಯ ಸದನದಲ್ಲೇ ಉಳಿದುಕೊಂಡ ಕಾಂಗ್ರೆಸ್ ಸದಸ್ಯರು ದೇಶಭಕ್ತಿ ಗೀತೆ, ಭಾರತ್ ಮಾತಾಕಿ ಜೈ, ವಂದೇ ಮಾತರಂ ಘೋಷಣೆಗಳ ಮೂಲಕ ಗಮನ ಸೆಳೆದರು.

ಯಡಿಯೂರಪ್ಪರಿಂದಲೂ ಕಾಂಗ್ರೆಸ್ ನಾಯಕರ ಮನವೊಲಿಕೆ: ಅಹೋರಾತ್ರಿ ಧರಣಿ ನಿರತ ಕಾಂಗ್ರೆಸ್ ಸದಸ್ಯರನ್ನು ಮಾಜಿ ಸಿ.ಎಂ. ಬಿ.ಎಸ್.ಯಡಿಯೂರಪ್ಪ ಸುಮಾರು ಎರಡು ಗಂಟೆಗಳ ಕಾಲ ಮನವೊಲಿಕೆ ಪ್ರಯತ್ನ ನಡೆಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವರು ಹಾಗೂ ಕಂದಾಯ ಸಚಿವ ಅಶೋಕ್ ಸೇರಿ ಎರಡು ಗಂಟೆಗಳ ಕಾಲ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಮುಖಂಡರಲ್ಲಿ ವಿನಂತಿ ಮಾಡಿದ್ದೇವೆ ಎಂದು ಹೇಳಿದರು.

ರಾತ್ರಿ ಸದನದಲ್ಲಿ ಮಲಗೋದು ಬೇಡ ಇದು ಒಳ್ಳೆಯ ಪದ್ದತಿ ಆಗಲ್ಲ ಎಂದು ಮನವೊಲಿಕೆ ಮಾಡಿದ್ದೇವೆ. ಆದರೆ, ಅವರು ಸದನದಲ್ಲಿಯೇ ಮಲಗಲು ತೀರ್ಮಾನ ಮಾಡಿಯಾಗಿದೆ. ಸ್ಪೀಕರ್ ಕೂಡ ಮನವೊಲಿಕೆ ಮಾಡುವ ಪ್ರಯತ್ನ ನಡೆಸಿದ್ದಾರೆ. ನಮ್ಮ ಪ್ರಯತ್ನ ನಾವು ಮಾಡಿದ್ದೇವೆ, ನಾಳೆ ಮತ್ತೆ ಮಾತನಾಡುತ್ತೇವೆ ಎಂದು ತಿಳಿಸಿದರು.

33 ಸದಸ್ಯರಿಂದ ಅಹೋರಾತ್ರಿ ಧರಣಿ: 71 ಕಾಂಗ್ರೆಸ್ ಶಾಸಕರ ಪೈಕಿ 33 ಶಾಸಕರು ಅಹೋರಾತ್ರಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಡಿಕೆಶಿ ರಾಜೀನಾಮೆ ನೀಡಲಿ: ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಿರುವ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಲಿ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಆಗ್ರಹಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿ, ಯಾರು ರಾಷ್ಟ್ರದ್ರೋಹ ಮಾಡಿದ್ದಾರೋ ಅವರು ರಾಜೀನಾಮೆ ಕೊಡಲಿ. ಶಿವಮೊಗ್ಗದಲ್ಲಿ ಧ್ವಜ ಸ್ತಂಭದಲ್ಲಿ ರಾಷ್ಟ್ರಧ್ವಜ ಇಲ್ಲದೇ ಇರೋದನ್ನ ಇದೆ ಅಂತಾ ಹೇಳಿ ಸಮಸ್ಯೆ ಸೃಷ್ಟಿಸಿದವರು ಡಿ.ಕೆ.ಶಿವಕುಮಾರ್ ಹೀಗಾಗಿ ಅವರೇ ರಾಜೀನಾಮೆ ಕೊಡಲಿ ಎಂದು ಆಗ್ರಹಿಸಿದರು.

ನಾನು ರಾಷ್ಟ್ರಭಕ್ತ ತಿರಂಗ ಯಾತ್ರೆ ಮಾಡಿದವರು. ತುರ್ತು ಪರಿಸ್ಥಿತಿ ವೇಳೆ ಜೈಲಿಗೆ ಹೋಗಿ ಬಂದವನು. ನಾನು ಕೆಂಪುಕೋಟೆಯಲ್ಲಿ ಭಗವಾಧ್ವಜವನ್ನು 300 ರಿಂದ 500 ವರ್ಷದಲ್ಲಿ ಹಾರಿಸಬಹುದು ಅಂತ ಹೇಳಿದ್ದೇನೆ ಎಂದು ಹೇಳಿದರು.

ಆಧಾರ:–ಉದಯವಾಣಿ, ದಿನಾಂಕ:18.02.2022

59. ಅರಣ್ಯ ಭೂಮಿ ಹಕ್ಕು ಹೋರಾಟಕ್ಕೆ 30 ವರ್ಷ

ಜಿಪಿಎಸ್ (ಜಾಗತಿಕ ಸ್ಥಾನೀಕರಣ ವ್ಯವಸ್ಥೆ) ಆದ ಭೂಮಿಯಲ್ಲಿ ವಾಸಿಸುತ್ತಿರುವವರಿಗೆ ಅಧಿಕಾರಿಗಳು ತೊಂದರೆ ಕೊಡಬಾರದು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಎಚ್ಚರಿಕೆ ನೀಡಿದ್ದಾರೆ.

ರವೀಂದ್ರ ನಾಯ್ಕ ಅವರ ನೇತೃತ್ವದಲ್ಲಿ ಶಿರಸಿಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯು ಕಬ್ಬನ್ ಪಾರ್ಕ್ ಆವರಣದ ನೌಕರರ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಾಗೇರಿ ಮಾತನಾಡಿದರು. 30 ವರ್ಷದ ಅರಣ್ಯ ಭೂಮಿ ಹಕ್ಕು ಹೋರಾಟದ ಹಿನ್ನೆಲೆಯಲ್ಲಿ ಸರ್ಕಾರದೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು.

ಈ ಹೋರಾಟದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು ಉತ್ತರ ಕನ್ನಡ, ಶಿವಮೊಗ್ಗ ಸೇರಿದಂತೆ ಹಲವು ಜಿಲ್ಲೆಗಳ ಜನರು ಅರಣ್ಯ ಇಲಾಖೆಯ ತೂಗುಗತ್ತಿ ಭಯದಲ್ಲಿಯೇ ಬದುಕುತ್ತಿದ್ದಾರೆ. ಹೊಸದಾಗಿ ಯಾರೂ ಅರಣ್ಯ ಅತಿಕ್ರಮಣ ಮಾಡಿಲ್ಲ ಅಜ್ಜ–ಮುತ್ತಜ್ಜನ ಕಾಲದಿಂದಲೂ ಸಾಗುವಳಿ ಮಾಡುತ್ತಿದ್ದರೂ ಇದುವರೆಗೂ ಸರ್ಕಾರ ಹಕ್ಕುಪತ್ರ ನೀಡಿಲ್ಲ. ಜನರು ಜೀವನೋಪಾಯಕ್ಕಾಗಿ ಅರಣ್ಯ ಅತಿಕ್ರಮಣ ಮಾಡಿದ್ದಾರೆಯೇ ಹೊರತು, ಯಾವುದೇ ರೆಸಾರ್ಟ್, ಉದ್ಯಮ ಸ್ಥಾಪನೆ ಮಾಡಿ ಐಷಾರಾಮಿ ಜೀವನ ನಡೆಸುತ್ತಿಲ್ಲ ಎಂದರು.

ಕಾಗೋಡು ತಿಮ್ಮಪ್ಪನವರು ಸ್ಪೀಕರ್ ಆಗಿದ್ದ ಸಂದರ್ಭದಿಂದ ಇದುವರೆಗೆ ಮಲೆನಾಡು ಕರಾವಳಿ ಭಾಗದ ಶಾಸಕರು ಅತಿಕ್ರಮಣದಾರರ ಪರವಾಗಿ ಸಾಕಷ್ಟು ಬಾರಿ ಧ್ವನಿ ಎತ್ತಿದ್ದೇವೆ. ಬ್ರಿಟಿಷ್ ಮಾನಸಿಕತೆಯ ಅಧಿಕಾರಿ ವರ್ಗದವರಿಂದ ಯಾವ ಕೆಲಸವೂ ಆಗುತ್ತಿಲ್ಲ. ಆಗುವ ಕೆಲಸವನ್ನು ಆಗದಂತೆ ಮಾಡುವುದೇ ಅಧಿಕಾರಿಗಳ ಕೆಲಸ. ಇದರಿಂದ ಅರಣ್ಯ ಅತಿಕ್ರಮಣದಾರರಿಗೆ ಸಿಗಬೇಕಾದ ನ್ಯಾಯ

ಸಿಗುತ್ತಿಲ್ಲ ಎಂದರು. ಇಂದು ಅರಣ್ಯ ಅತಿಕ್ರಮಣದಾರರಿಂದ ಅರಣ್ಯ ಲೂಟಿಯಾಗಿಲ್ಲ. ಅರಣ್ಯ ಲೂಟಿಕೋರರಿಂದ ಅರಣ್ಯ ನಾಶವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶಾಸಕ ಹಾಗೂ ಮಾಜಿ ಸಚಿವ ಹೆಚ್.ಕೆ.ಪಾಟೀಲ್ ಮಾತನಾಡಿ ಪಾರಂಪರಿಕ ಸಾಗುವಳಿ ಕೃಷಿ ಭೂಮಿ ಹಕ್ಕನ್ನು ರೈತರಿಗೆ ನೀಡುವಂತೆ ಸರ್ಕಾರದ ನೂರಾರು ಕಾನೂನುಗಳು ಹೇಳುತ್ತದೆ. ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಎಕರೆ, ಅರ್ಧ ಎಕರೆ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಇಂತಹವರಿಗೆ ಸಾಗುವಳಿ ಹಕ್ಕು ಕೊಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಮಾಡಿದೆಯಾದರೂ ಫಲಾನುಭವಿಗಳಿಗೆ ನ್ಯಾಯ ಸಿಕ್ಕಿಲ್ಲ. ಅರಣ್ಯ ಇಲಾಖೆ ಅಧಿಕಾರಿಗಳು ಭೂ ಕಬಳಿಕೆ ಆರೋಪದ ಕೇಸು ದಾಖಲಿಸಿ ಆ ಜನರನ್ನು ನ್ಯಾಯಾಲಯಕ್ಕೆ ಅಲೆದಾಡಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ನ್ಯಾಯಮೂರ್ತಿ ಹೆಚ್.ಎನ್.ನಾಗಮೋನದಾಸ್ ಮಾತನಾಡಿ ನಿಮ್ಮ ಹೋರಾಟದ ಭಾಗವಾಗಿ ನಿಮ್ಮ ಜೊತೆ ಇರುತ್ತೇನೆ ಎಂದರು. ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಹಾಜರಿದ್ದರು.

ಆಧಾರ:–ವಿಜಯ ಕರ್ನಾಟಕ, ದಿನಾಂಕ:18.02.2022

ದಿನಾಂಕ: 17.02.2022ರಂದು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ ರವರು, ಬೆಂಗಳೂರಿನ ನೌಕರ ಭವನದಲ್ಲಿ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷರಾದ ಶ್ರೀ ರವೀಂದ್ರ ನಾಯ್ಕ, ಜಸ್ಟೀಸ್ ಶ್ರೀ ನಾಗಮೋಹನದಾಸ್ ಉಪಸ್ಥಿತಿಯಲ್ಲಿ, ಅರಣ್ಯ ಭೂಮಿ ಹಕ್ಕು ಹೋರಾಟದ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಭಾಗವಹಿಸುತ್ತಿರುವ ಸಂದರ್ಭ;

60. ಪ್ರತಿಭಟನೆ ನಿರತ ಶಾಸಕರ ಸಸ್ಪೆಂಡ್ ಸವಾಲು

ಸಚಿವ ಈಶ್ವರಪ್ಪ ರಾಜೀನಾಮೆಗೆ ಒತ್ತಡ ತಂತ್ರ ಮುಂದುವರಿಸಿದ ಕಾಂಗ್ರೆಸ್ ಸದಸ್ಯರು ವಿಧಾನಮಂಡಲದ ಉಭಯ ಸದನಗಳಲ್ಲೂ ಧರಣಿ ಮುಂದುವರಿಸಿದ್ದಾರೆ. ಇದರಿಂದಾಗಿ ಕಲಾಪ ವ್ಯರ್ಥಗೊಂಡಂತಾಗಿದೆ. ಈ ಮಧ್ಯೆ ವಿಧಾನಸಭೆಯಲ್ಲಿ ಸ್ಪೀಕರ್ ಮತ್ತು ಮಾಜಿ ಸ್ಪೀಕರ್ ಮಧ್ಯೆ ಸಸ್ಪೆಂಡ್ ಸವಾಲು ಎದುರಾಯಿತು.

ಪ್ರಶ್ನೋತ್ತರ ಕಲಾಪ ನಡೆಸಿದ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ, ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು. ಆದರೆ, ಸದನದಲ್ಲೇ ಮೊಕ್ಕಾಂ ಹೂಡಿರುವ ಕಾಂಗ್ರೆಸ್ ಸದಸ್ಯರು ಅಹೋರಾತ್ರಿ ಧರಣಿ ಮುಂದುವರಿಸುವ ನಿರ್ಧಾರ ಕೈಗೊಂಡರು.

ಶನಿವಾರ ಮತ್ತು ಭಾನುವಾರ ಕಲಾಪಕ್ಕೆ ವಿರಾಮ, ಹಾಗಾಗಿ ಆಹೋರಾತ್ರಿ ಧರಣಿ ಮುಂದುವರಿಸಲು ರಜಾ ದಿನದಲ್ಲೂ ಕಾಂಗ್ರೆಸ್ ಶಾಸಕರು ಸದನದಲ್ಲೇ ಠಿಕಾಣಿ ಹೂಡಬೇಕಾಗಿದೆ. ಬೆಳಿಗ್ಗೆ ಕಲಾಪ ಪ್ರಾರಂಭವಾದಾಗ ಕಾಂಗ್ರೆಸ್ ಧರಣಿ ಮುಂದುವರಿಯಿತು. ಈ ಮಧ್ಯೆ ಮಾಜಿ ಶಾಸಕ ಜಿ.ವಿ.ಮಂಟೂರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. 2011ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಆಯ್ಕೆ ಸಕ್ರಮದ ವಿಧೇಯಕ ಮಂಡಿಸಲಾಯಿತು.

ಕಾಂಗ್ರೆಸ್ ವರ್ತನೆಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಸಿಎಂ. ಬೊಮ್ಮಾಯಿ ಅವರೂ ಕಾಂಗ್ರೆಸ್‌ನದು ಜನವಿರೋಧಿ ನಡವಳಿಕೆ ಎಂದು ತರಾಟೆಗೆ ತೆಗೆದುಕೊಂಡರು. ಸಚಿವ ಜೆ.ಸಿ.ಮಾಧುಸ್ವಾಮಿ ನೀವು ಹೇಳಿದಂತೆ ಕಲಾಪ ನಡೆಸಬೇಕು ಎನ್ನುವುದು ಸರಿಯಲ್ಲ. ರೂಲಿಂಗ್ ನೀಡಿದರೂ ಒಪ್ಪದೆ ಧರಣಿ ನಡೆಸುವುದು ಪೀಠಕ್ಕೆ ಮಾಡುವ ಅಪಮಾನ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜೀವ ಬೆದರಿಕೆಗೆ ಪ್ರಚೋದನೆ: ಬಿ.ಕೆ.ಹರಿಪ್ರಸಾದ್ ಅವರನ್ನು ಎದುರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಿ ಎಂದು ತಮ್ಮ ಕಾರ್ಯಕರ್ತರು ಶಾಸಕರಿಗೆ ಬಿಜೆಪಿ ಶಾಸಕಾಂಗ ಸಭೆಯಲ್ಲಿ ರಾಜ್ಯಾಧ್ಯಕ್ಷ ಕಟೀಲ್

ಸೂಚಿಸಿದ್ದಾರೆ. ಆ ಮೂಲಕ ಜೀವಕ್ಕೆ ಬೆದರಿಕೆ ಹಾಕುವಂತೆ ಮಾತನಾಡಿದ್ದಾರೆ. ಇಂಥಹದ್ದಕ್ಕೆ ನಾನು ಜಗ್ಗುವುದಿಲ್ಲ. ನಕಲಿ ದೇಶಭಕ್ತರ ಬಗ್ಗೆ ಭಯವೂ ಇಲ್ಲ.

ಆಧಾರ:–ವಿಜಯ ಕರ್ನಾಟಕ, ದಿನಾಂಕ:19.02.2022

61. ಸಚಿವರು ಸದನಕ್ಕೆ ಬರದಿರಬಾರದು

ಸಚಿವರಾದವರು ಸದನಕ್ಕೆ ಬಾರದೇ ಇರುವ ಪರಿಸ್ಥಿತಿ ಬರಬಾರದು ಎಂದು ವಿಧಾನಸಭೆಗೆ ಬಾರದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಖಾತೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಅವರ ಬಗ್ಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ಅಸಮಾಧಾನ ವ್ಯಕ್ತಪಡಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಮೊದಲ ಪ್ರಶ್ನೆಯೇ ಕೋಟ ಶ್ರೀನಿವಾಸ ಪೂಜಾರಿ ಅವರ ಖಾತೆಗೆ ಸಂಬಂಧಿಸಿದ್ದಾಗಿತ್ತು. ಅವರ ಪರವಾಗಿ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಉತ್ತರಿಸಲು ಎದ್ದುನಿಂತಾಗ, ಸಚಿವರು ವಿಧಾನಪರಿಷತ್ತಿನ ಸಭಾನಾಯಕರಿರಬಹುದು, ಆದರೆ, ಪ್ರಶ್ನೋತ್ತರ ಕಲಾಪಕ್ಕಾದರೂ ಬರಬೇಕಲ್ಲವೇ? ಇವತ್ತು ಪರಿಷತ್ತಿನಲ್ಲಿ ನಿಲುವಳಿ ಸೂಚನೆ ಇದೆ. ಬರಲು ಸಾಧ್ಯವಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ. ಸರಿ ಹಿಂದೆಯೂ ಅವರಿಗೆ ಸಾಕಷ್ಟು ಹೇಳಿದ್ದೇನೆ. ಆದರೂ ಬರುತ್ತಿಲ್ಲ. ಸಚಿವರಾದವರು ಸದನಕ್ಕೆ ಬರದೇ ಇರುವ ಸ್ಥಿತಿ ಯಾವತ್ತೂ ಬರಬಾರದು ಎಂದರು.

ಆಧಾರ:–ವಿಶ್ವವಾಣಿ, ದಿನಾಂಕ:19.02.2022

62. ರಾಜಕೀಯ ಶಿವರಾತ್ರಿ ಜಾಗರಣೆ ಧರಣಿ

ದೆಹಲಿಯ ಕೆಂಪುಕೋಟೆಯಲ್ಲಿ ಮುಂದಿನ ನೂರಿನ್ನೂರು ವರ್ಷಗಳಲ್ಲಿ ಕೇಸರಿಧ್ವಜ ಹಾರಿದರೂ ಹಾರಬಹುದು ಎಂಬ ಸಚಿವ ಈಶ್ವರಪ್ಪ ಹೇಳಿಕೆ ಭಾರೀ ವಿವಾದದ ಸ್ವರೂಪ ಪಡೆದಿದೆ. ಪ್ರತಿಪಕ್ಷ ಕಾಂಗ್ರೆಸ್, ಸಚಿವರ ತಲೆದಂಡಕ್ಕೆ ಒತ್ತಾಯಿಸಿ ವಿಧಾನಮಂಡಲದ ಉಭಯ ಸದನಗಳಲ್ಲಿ ಅಹೋರಾತ್ರಿ ಧರಣಿ ಆರಂಭಿಸುವ ಮೂಲಕ ಶಿವರಾತ್ರಿ ಹಬ್ಬಕ್ಕೂ ಮುನ್ನವೇ ಜಾಗರಣೆಗೆ ಚಾಲನೆ ಸಿಕ್ಕಿದೆ. ಸತತ ಪ್ರತಿಭಟನೆಯಿಂದಾಗಿ ಎರಡೂ ಸದನಗಳಲ್ಲಿ ಸುಗಮ ಕಲಾಪ ಸಾಧ್ಯವಾಗಲಿಲ್ಲ. ಕಾಂಗ್ರೆಸ್ ವರ್ತನೆಯನ್ನು ಸಿಎಂ. ಬೊಮ್ಮಾಯಿ ಸೇರಿದಂತೆ ಹಲವು ಸಚಿವರು, ಬಿಜೆಪಿ ಪ್ರಮುಖರು ತೀವ್ರವಾಗಿ ಖಂಡಿಸಿದ್ದಾರೆ. ಸಚಿವ ಈಶ್ವರಪ್ಪ ಅವರ ವಿವಾದಾತ್ಮಕ ಹೇಳಿಕ ರಾಷ್ಟ್ರಧ್ವಜಕ್ಕೆ ಅಗೌರವ ತಂದಿದೆ. ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಬೇಕು. ಕೂಡಲೇ ರಾಜೀನಾಮೆ ನೀಡಬೇಕು. ಇಲ್ಲವೇ ಸಂಪುಟದಿಂದ ವಜಾಗೊಳಿಸಬೇಕೆಂದು ಕಾಂಗ್ರೆಸ್ ಬಿಗಿಪಟ್ಟು ಹಿಡಿದು ವಿಧಾನಸಭೆ ಹಾಗೂ ಮೇಲ್ಮನೆ ಎರಡೂ ಕಡೆ ಬೆಳಿಗ್ಗೆಯಿಂದಲೇ ಸಭಾಧ್ಯಕ್ಷರ ಪೀಠದೆದರಿರುವ ಬಾವಿಗಿಳಿದು ಘೋಷಣೆ ಕೂಗಿ ಪ್ರತಿಭಟನೆ ನಡೆಸಲಾಯಿತು.

ವಿಧಾನಸಭೆಯಲ್ಲಿ ಸಂತಾಪ ಸೂಚನೆ ಮುಗಿದ ಬೆನ್ನಲ್ಲೇ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ಪ್ರಶ್ನೋತ್ತರ ಕೈಗೆತ್ತಿಕೊಂಡಾಗಲೇ ಗದ್ದಲ ಆರಂಭವಾಯಿತು. ಇದರ ನಡುವೆಯೇ ಮುದ್ರಾಂಕ ತಿದ್ದುಪಡಿ ವಿಧೇಯಕ ಅಂಗೀಕರಿಸಲಾಯಿತು. ಬಳಿಕ ಕಾಂಗ್ರೆಸ್ ಸದಸ್ಯರು ಡೌನ್ ಡೌನ್ ಈಶ್ವರಪ್ಪ ಸಚಿವರ ವಜಾಗೊಳಿಸಿ ಎಂದು ಗದ್ದಲವೆಬ್ಬಿಸಿದಾಗ ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಮೇಲ್ಮನೆಯಲ್ಲೂ ಕಲಾಪ ಶುರುವಾಗುತ್ತಲೇ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಸಚೇತಕ ಪ್ರಕಾಶ್ ರಾಥೋಡ್ ನೇತೃತ್ವದಲ್ಲಿ ಧಿಕ್ಕಾರ ಘೋಷಣೆ ಮೊಳಗಿದವು. ಕಲಾಪ ನಿರ್ವಹಣೆ ಅಸಾಧ್ಯವಾದಾಗ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಧ್ಯಾಹ್ನ 3 ಗಂಟೆಗೆ ಮುಂದೂಡಿದರು.

ವಿಧಾನಸಭೆ ಮಧ್ಯಾಹ್ನ ಸಮಾವೇಶಗೊಳ್ಳುತ್ತಿದ್ದಂತೆ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಾರಥ್ಯದಲ್ಲಿ ಕಾಂಗ್ರೆಸ್ ಸದಸ್ಯರು ಮತ್ತೆ ಬಾವಿಗಿಳಿದು ನ್ಯಾಯ ಬೇಕು.

ಈಶ್ವರಪ್ಪ ರಾಜೀನಾಮೆ ನೀಡಲಿ, ಭಂಡ ಸರ್ಕಾರಕ್ಕೆ ಧಿಕ್ಕಾರ ಎಂಬಿತ್ಯಾದಿ ಘೋಷಣೆ ಕೂಗಿ ಪ್ರತಿಭಟನೆ ಆರಂಭಿಸಿದರು. ನೀವು ಹೋರಾಟ ನಡೆಸಲು ಅಡ್ಡಿಯಿಲ್ಲ. ಆದರೆ ಕಲಾಪ ನಡೆಸಲು ಸಹಕರಿಸುವಂತೆ ಕೋರಿದರೂ ಅದಕ್ಕೆ ಮನ್ನಣೆ ಸಿಗದ ಕಾರಣಕ್ಕೆ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕಲಾಪ ಮುಂದೂಡಿದ್ದಾಗಿ ಸ್ಪೀಕರ್ ಪ್ರಕಟಿಸಿದರು. ಆ ಬಳಿಕವೂ ವಿಪಕ್ಷ ಸದಸ್ಯರು ಸದನದೊಳಗೆ ಮಲಗುವ ಮೂಲಕ ಅಹೋರಾತ್ರಿ ಧರಣಿ ನಡೆಸಿದರು. ವಿಧಾನಪರಿಷತ್‌ನ ಸನ್ನಿವೇಶವೂ ಇದಕ್ಕೆ ಹೊರತಾಗಿರಲಿಲ್ಲ. ಕಾಂಗ್ರೆಸ್ ಸದಸ್ಯರ ಧರಣಿ, ಪ್ರತಿಭಟನೆ ಪರಿಣಾಮ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಲಾಪವನ್ನು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಮುಂದೂಡಿದರು. ಆನಂತರ ಇಲ್ಲಿಯೂ ವಿಪಕ್ಷ ಸದಸ್ಯರು ಅಹೋರಾತ್ರಿ ಧರಣಿಗೆ ಮುಂದಾದರು. ಏತನ್ಮಧ್ಯೆ ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ರಾಜ್ಯದ ಹಲವೆಡೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ.

ಆಧಾರ:–ಸಂಯುಕ್ತ ಕರ್ನಾಟಕ, ದಿನಾಂಕ:18.02.2022

63. ನಿಮ್ಮ ಪ್ರತಿಭಟನೆ ಸದನದ ಹೊರಗಿರಲಿ

ಸದನ ಇರುವುದು ನಮ್ಮನ್ನು ಆರಿಸಿ ಕಳುಹಿಸಿದ ಜನರ ಸಮಸ್ಯೆ, ಅಭಿವೃದ್ಧಿ ಕುರಿತು ಚರ್ಚಿಸಲು, ನಿಮ್ಮ ಪ್ರತಿಭಟನೆ ಏನಿದ್ದರೂ ಅದನ್ನು ಸದನದ ಹೊರಗೆ ಇಟ್ಟುಕೊಳ್ಳಿ. ಅದು ಬಿಟ್ಟು ಸದನದ ಪಾವಿತ್ರ್ಯವನ್ನು ಹಾಳು ಮಾಡುವುದು ಸರಿಯಲ್ಲ ಎಂದು ಕಾಂಗ್ರೆಸ್ ಸದಸ್ಯರ ವಿರುದ್ಧ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಕಿಡಿ ಕಾರಿದ್ದಾರೆ.

ಸಚಿವ ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಧರಣಿ ನಡೆಸುತ್ತಿದ್ದ ಕಾಂಗ್ರೆಸ್ ಸದಸ್ಯರು ಜೋರಾಗಿ ಘೋಷಣೆ ಕೂಗುತ್ತಿದ್ದುದರಿಂದ ಆಕ್ರೋಶಗೊಂಡ ಸಭಾಧ್ಯಕ್ಷರು, ಸರ್ಕಾರದ ನಿಲುವು ಖಂಡಿಸಿ ಸದನದ ಹೊರಗೆ ಹೋರಾಟಕ್ಕೆ ಅವಕಾಶವಿದೆ. ಇಲ್ಲಿಗೆ ಬರುವುದು ಚರ್ಚೆ ನಡೆಸಲೇ ಹೊರತು ಪ್ರತಿಭಟನೆಗಲ್ಲ. ಆದ್ದರಿಂದ ಕಲಾಪ ಸುಗಮವಾಗಿ ನಡೆಸಲು ಸಹಕರಿಸಬೇಕು ಎಂದರು.

ನಿಮ್ಮನ್ನು ಜನ ನೋಡುತ್ತಿದ್ದಾರೆ. ಅನೇಕರು ಹಿರಿಯ ಸದಸ್ಯರಿದ್ದೀರಿ ಹೀಗಿದ್ದೂ ಸದನದ ಸಮಯವನ್ನು ಈ ರೀತಿ ವ್ಯರ್ಥಗೊಳಿಸುವ ನಿಮ್ಮ ಪ್ರಯತ್ನ ನನಗೆ ಖೇದ ತಂದಿದೆ. ನಾವೆಲ್ಲರೂ ಜೊತೆ ಸೇರಿ ಈ ಸಂಸದೀಯ ವ್ಯವಸ್ಥೆಗಳ ಮೌಲ್ಯ ಹೆಚ್ಚಿಸಬೇಕೆಂದು ಚರ್ಚೆ ಚಿಂತನೆ ಮಾಡುತ್ತಿದ್ದೇವೆ. ಅಂಥ ಸಂದರ್ಭದಲ್ಲಿ ನೀವು ಸದನ ನಡೆಯದಂತೆ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದರು.

ವಿಧಾನಸಭೆ ಇರುವುದು ಜನರ ಸಮಸ್ಯೆಗಳು, ಅಭಿವೃದ್ಧಿ ವಿಚಾರಗಳ ಕುರಿತು ಚರ್ಚೆ ನಡೆಸಲು. ಇಲ್ಲಿ ಆಡಳಿತ ಪಕ್ಷ ಮತ್ತು ಜೆಡಿಎಸ್‌ನಲ್ಲಿ ಸಾಕಷ್ಟು ಸದಸ್ಯರು ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಅವರಿಗೆ ಅವಕಾಶ ಕಲ್ಪಿಸುವುದು ನನ್ನ ಜವಾಬ್ದಾರಿಯಾಗಿದೆ. ನಿಮ್ಮ ಪ್ರತಿಭಟನೆ ಏನಿದ್ದರೂ ಸದನದ ಹೊರಗೆ ಮಾಡಿ. ಸದನದ ಪಾವಿತ್ರ್ಯವನ್ನು ಹಾಳು ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆ ತರುವುದಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿಮಗೆ ಸರ್ಕಾರದ ಯಾವುದಾದರೂ ನಿಲುವುಗಳ ಬಗ್ಗೆ ಸಹಮತವಿಲ್ಲ ಎಂದರೆ ಸದನದ ಹೊರಗೆ ಯಾವ ರೀತಿಯ ಹೋರಾಟ ಮಾಡುವುದಿದ್ದರೂ ಅದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿದೆ. ನೀವು ಸದನದ ಹೊರಗಡೆಯಲ್ಲಿ ನಿಮ್ಮ ಪ್ರತಿಭಟನೆ ಮಾರ್ಗ ಅನುಸರಿಸಿ. ನಿಮ್ಮ ನಾಯಕರನ್ನೇ (ಸಿದ್ದರಾಮಯ್ಯ) ಮಾತನಾಡಿ ಎಂದು ಎರಡು ದಿನಗಳಿಂದ ಕರೆಯುತ್ತಿದ್ದೇನೆ. ಅವರು ಮಾತನಾಡುತ್ತಿಲ್ಲ. ನೀವು ಅವಕಾಶ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆಧಾರ:–ವಿಶ್ವವಾಣಿ, ದಿನಾಂಕ:19.02.2022

64. 3ನೇ ದಿನವೂ ಧ್ವಜ ಗದ್ದಲ, ಕಲಾಪ ಬಲಿ

ರಾಷ್ಟ್ರಧ್ವಜ ಬಗೆಗಿನ ಹೇಳಿಕೆಗಾಗಿ ಸಚಿವ ಈಶ್ವರಪ್ಪ ತಲೆದಂಡಕ್ಕೆ ಪಟ್ಟು ಹಿಡಿದ ಕಾಂಗ್ರೆಸ್ ಧರಣಿಯಿಂದಾಗಿ ಸತತ ಮೂರನೇ ದಿನವೂ ವಿಧಾನಸಭೆ ಕಲಾಪ ಮೊಟಕುಗೊಂಡಿದೆ. ಈಶ್ವರಪ್ಪ ವಜಾಗೆ ಪಟ್ಟು ಹಿಡಿದ ಕಾಂಗ್ರೆಸ್ ಹಾಗೂ ಸಮರ್ಥಿಸಿಕೊಂಡ ಸರ್ಕಾರದ ನಡುವೆ ತೀವ್ರ ವಾಗ್ವಾದ ಉಂಟಾಗಿ, ಒಂದು ಹಂತದಲ್ಲಿ ಕಾಂಗ್ರೆಸ್ ಸದಸ್ಯರನ್ನು ಸದನದಿಂದ ಅಮಾನತ್ತುಗೊಳಿಸುವ ಬಗ್ಗೆಯೂ ಚರ್ಚೆಯಾಯಿತು. ಈ ಹಿನ್ನೆಲೆಯಲ್ಲಿ ಉಂಟಾದ ಕೋಲಾಹಲದಿಂದಾಗಿ ಭೋಜನ ವಿರಾಮಕ್ಕೂ ಮೊದಲೇ ವಿಧಾನಸಭೆ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಮಧ್ಯಾಹ್ನ 12 ಗಂಟೆಗೆ ಕಲಾಪ ಆರಂಭವಾಗುತ್ತಿದ್ದಂತೆ ಸದನದ ಬಾವಿಗಿಳಿದಿದ್ದ ಕಾಂಗ್ರೆಸ್ ಸದಸ್ಯರು ಈಶ್ವರಪ್ಪ ವಜಾಗೆ ಪಟ್ಟು ಹಿಡಿದು ಘೋಷಣೆ ಕೂಗಿದರು. ತಕ್ಷಣ ಸ್ಪೀಕರ್ ಅವರು ಮಾಜಿ ಶಾಸಕ ಜಿ.ವಿ.ಮಂಟೂರು ಅವರಿಗೆ ಸಂತಾಪ ಸೂಚನೆ ನಿರ್ಣಯ ಕೈಗೆತ್ತಿಕೊಂಡಿದ್ದರಿಂದ ಮೌನಕ್ಕೆ ಶರಣಾದರು.

ಸಂತಾಪ ಸೂಚನೆ ನಿರ್ಣಯ ಮುಗಿಯುತ್ತಿದ್ದಂತೆ ಮತ್ತೆ ಘೋಷಣೆಗಳಿಂದ ಆಡಳಿತ ಪಕ್ಷದವರನ್ನು ಕೆರಳಿಸಿದ ಕಾಂಗ್ರೆಸ್ಸಿಗರು ದೇಶ ದ್ರೋಹ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದರು. ಇದರ ನಡುವೆಯೇ ಪ್ರಶ್ನೋತ್ತರ ಕಲಾಪವನ್ನು ಮುಗಿಸಿದ ಸ್ಪೀಕರ್, ಕರ್ನಾಟಕ ವಿಧಾನಸಭೆಯ ಸ್ಥಳೀಯ ಸಂಸ್ಥೆ ಹಾಗೂ ಪಂಚಾಯತ್ ರಾಜ್ಯಗಳ ಸಮಿತಿ ಅಧ್ಯಕ್ಷರಾದ ಸೋಮಶೇಖರ ರೆಡ್ಡಿ ಅವರಿಗೆ ಸಿಎಜಿ ವಾರ್ಷಿಕ ಪರಿಶೀಲನಾ ವರದಿ ಮಂಡನೆ ಹಾಗೂ ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ ಮಂಡನೆಯಾಯಿತು. ಬಳಿಕ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲು ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಲಾಯಿತು. ಆಹ್ವಾನ ತಿರಸ್ಕರಿಸಿದ ಸಿದ್ದರಾಮಯ್ಯ ಸದನದ ಬಾವಿಯಲ್ಲೇ ಪ್ರತಿಭಟನೆಗೆ ನಿಂತರು. ಆಗ ಸಿಎಂ. ಕಾಂಗ್ರೆಸ್‌ನ್ನು ತರಾಟೆಗೆ ತೆಗೆದುಕೊಂಡರು. ಈ ವೇಳೆ ಗದ್ದಲ ಉಂಟಾಗಿ ಸ್ಪೀಕರ್ ಸದನವನ್ನು ಸೋಮವಾರಕ್ಕೆ ಮುಂದೂಡಿದರು.

ಆಧಾರ:–ಕನ್ನಡ ಪ್ರಭ, ದಿನಾಂಕ:19.02.2022

65. ಕಲಾಪ ವ್ಯರ್ಥ: ಕಾಗೇರಿ ಬೇಸರ

ಸರ್ಕಾರ ಹಾಗೂ ವಿಪಕ್ಷಗಳು ತಮ್ಮ ನಿಲುವಿಗೆ ಬದ್ಧರಾಗಿರುವುದರಿಂದ ನಾನು ನನ್ನ ನಿರ್ಧಾರವನ್ನು ತೆಗೆದುಕೊಳ್ಳುವೆ ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಬೇಸರದಿಂದ ನುಡಿದ ಪ್ರಸಂಗ ನಡೆಯಿತು. ಧರಣಿ ನಿರತ ಕಾಂಗ್ರೆಸ್ ಹಾಗೂ ಆಡಳಿತ ಪಕ್ಷದ ನಡುವೆ ತಮ್ಮ ಕಛೇರಿಯಲ್ಲಿ ನಡೆದ ಸಂಧಾನ ಸಭೆ ಮುರಿದು ಬಿದ್ದ ಹಿನ್ನೆಲೆಯಲ್ಲಿ ಅವರು ಈ ಬೇಸರ ತೋಡಿಕೊಂಡರು.

ನಾನು ಸಂಧಾನಕ್ಕೆ ಕರೆದಾಗಲೂ ಸಮ್ಮತಿಸಿಲ್ಲ. ಈಗ ಸದನ ಸೇರಿದ ಕೂಡಲೇ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ. ದಯವಿಟ್ಟು ಧರಣಿ ನಿಲ್ಲಿಸಿ ಕಲಾಪ ನಡೆಸಲು ಸಹಕರಿಸಿ ಎಂದು ಕಾಗೇರಿ ಕಾಂಗ್ರೆಸ್ ಸದಸ್ಯರನ್ನು ಕೋರಿದರು. ಆದರೆ ಕಾಂಗ್ರೆಸ್ ಸದಸ್ಯರು ಬಾವಿಯಲ್ಲಿ ನಿಂತು ಸಚಿವ ಈಶ್ವರಪ್ಪನವರ ವಿರುದ್ಧ ಘೋಷಣೆಗಳನ್ನು ಮುಂದುವರಿಸಿದರು.

ಹೀಗಾಗಿ ಸ್ಪೀಕರ್ ತಮ್ಮ ನಿರ್ಧಾರದಂತೆ ಪ್ರಶ್ನೋತ್ತರ ಕೈಗೆತ್ತಿಕೊಂಡರು. ಬಿಜೆಪಿ ಸದಸ್ಯರು ಪ್ರಶ್ನೆಗಳನ್ನು ಕೇಳಿದರು. ಜೆಡಿಎಸ್‌ನ ಶಿವಲಿಂಗೇಗೌಡ ಮಾತ್ರ ತಮ್ಮ ಪ್ರಶ್ನೆಗೆ ಸರ್ಕಾರ ನೀಡುವ ಉತ್ತರ ಧರಣಿ ಗದ್ದಲದಲ್ಲಿ ಕೇಳುವುದಿಲ್ಲ ಎಂದು ಆಕ್ಷೇಪ ಎತ್ತಿದರು.

'ಹಾಗಾದರೆ ಮುಂದಿನ ಪ್ರಶ್ನೆಗೆ ಹೋಗುವೆ' ಎಂದು ಸ್ಪೀಕರ್ ಇನ್ನೋರ್ವ ಶಾಸಕರ ಹೆಸರನ್ನು ಕೂಗಿದರು. ಧರಣಿ ನಡುವೆಯೇ ಪ್ರಶ್ನೋತ್ತರ ಕಲಾಪವನ್ನು ಕಳೆದ ವಾರದಿಂದ ಸ್ಪೀಕರ್ ಕೈಗೆತ್ತಿಕೊಳ್ಳುತ್ತಿದ್ದಾರೆ. ಸೋಮವಾರವೂ ಇದರ ಪುನರಾವರ್ತನೆಯಾಯಿತು.

ಗಮನಾರ್ಹ ಅಂಶವೆಂದರೆ, ಪ್ರಶ್ನೆಗಳನ್ನು ಕೇಳಿದ ಸದಸ್ಯರಿಗೆ ಸಂಬಂಧಿಸಿದ ಸಚಿವರು ಸುದೀರ್ಘವಾಗಿ ಉತ್ತರಿಸಿದ್ದು ಹಾಗೂ ಉಪ ಪ್ರಶ್ನೆಗಳನ್ನು ಕೂಡ ಕೇಳಿದ್ದು, ಸಾಮಾನ್ಯವಾಗಿ ಧರಣಿ ನಡುವಿನ ಕಲಾಪಗಳೂ ಔಪಚಾರಿಕವಾಗಿ ಮಾತ್ರ ಸೀಮಿತವಾಗಿರುತ್ತವೆ. ಇಲ್ಲವೇ ಪ್ರಶ್ನೋತ್ತರ, ಸರ್ಕಾರ ಉತ್ತರ ಇಂಥವುಗಳನ್ನು ಟೇಬಲ್ (ಮಂಡಿಸುವುದು) ಮಾಡಿ ಸದನವನ್ನು ಮುಂದೂಡಲಾಗುತ್ತದೆ. ಈ ಸಂಪ್ರದಾಯಕ್ಕೆ ವಿದಾಯ ಹೇಳಿರುವ ಸ್ಪೀಕರ್ ಧರಣಿ ಮಾಡುವವರು ಮಾಡಿ, ಪ್ರಶ್ನೆಗಳನ್ನು ಕೇಳಿದ ಸದಸ್ಯರ ಹಿತ ಕಾಪಾಡುವೆ ಎನ್ನುವ ನಿಲುವು ತಳೆದಿದ್ದಾರೆ.

ಆಧಾರ:–ಸಂಯುಕ್ತ ಕರ್ನಾಟಕ, ದಿನಾಂಕ:22.02.2022

66. ಹರ್ಷ ಕೊಲೆ: ಮೇಲ್ಮನೆಯಲ್ಲಿ ಕೋಲಾಹಲ

ಶಿವಮೊಗ್ಗದಲ್ಲಿ ನಡೆದ ಭಜರಂಗ ದಳ ಕಾರ್ಯಕರ್ತನ ಕೊಲೆ ಹಿಂದೆ ಸಚಿವ ಕೆ.ಎಸ್.ಈಶ್ವರಪ್ಪ ಕೈವಾಡವಿದೆ, ಅವರು ಕೊಲೆಗಡುಕ ಎಂಬ ಪ್ರತಿಪಕ್ಷ ಕಾಂಗ್ರೆಸ್ ಆರೋಪ ವಿಧಾನ ಪರಿಷತ್ತಿನಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮಧ್ಯೆಮಾತಿನ ಚಕಮಕಿಗೆ ಕಾರಣವಾಗಿ ಸದನದಲ್ಲಿ ಕೋಲಾಹಲ ನಿರ್ಮಾಣವಾಯಿತು.

ಅಹೋರಾತ್ರಿ ಧರಣಿ ಮಧ್ಯೆಯೇ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಶಿವಮೊಗ್ಗದಲ್ಲಿ ಹರ್ಷ ಎಂಬ ಯುವಕನ ಕೊಲೆಯಾಗಿದ್ದು, ಇದಕ್ಕೆ ಮುಸ್ಲಿಂ ಗೂಂಡಾಗಳೇ ಕಾರಣ ಎಂದು ಈಶ್ವರಪ್ಪ ದೂರಿದ್ದಾರೆ. ಘಟನೆ ಬಗ್ಗೆ ಎಫ್ಐಆರ್ ದಾಖಲಿಸಿ ತನಿಖೆಯೇ ನಡೆದಿಲ್ಲ. ಹೀಗಿರುವಾಗ ಈಶ್ವರಪ್ಪ, ಮುಸ್ಲಿಂ ಗೂಂಡಾಗಲು ಕಾರಣ ಎಂದು ಹೇಳಿರುವುದನ್ನು ನೋಡಿದರೆ ಕೊಲೆ ಹಿಂದೆ ಅವರ ಕೈವಾಡವಿದೆ ಎಂದು ಗಂಭೀರ ಆರೋಪ ಮಾಡಿದರು.

ಇದಕ್ಕೆ ಆಡಳಿತ ಪಕ್ಷದ ಎಂ.ಕೆ.ಪ್ರಾಣೇಶ್, ತೇಜಸ್ವಿನಿ, ಭಾರತಿಶೆಟ್ಟಿ, ವೈ.ಎ.ನಾರಾಯಣಸ್ವಾಮಿ ಸೇರಿದಂತೆ ಹಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಧರಣಿ ನಿರತ ಕಾಂಗ್ರೆಸ್ ಸದಸ್ಯರು, ಈಶ್ವರಪ್ಪ ಅವರೇ ಕೊಲೆ ಮಾಡಿಸಿದ್ದಾರೆ. ಅವರು ಕೊಲೆಗಡುಕ ಎಂದು ಜೋರು ಧ್ವನಿಯಲ್ಲಿ ಕೂಗಿದಾಗ ಮತ್ತೆ ಗದ್ದಲ ಹೆಚ್ಚಾಯಿತು. ಕೊಲೆಗಡುಕರನ್ನು ಬೆಂಬಲಿಸಿ ಕಾಂಗ್ರೆಸ್‌ನವರು ಈ ಹೇಳಿಕೆ ನೀಡುತ್ತಿದ್ದಾರೆ ಎಂದು ಬಿಜೆಪಿ ಸದಸ್ಯರು ಆರೋಪಿಸಿದರು. ಇದರ ನಡುವೆಯೇ ಮಾತು ಮುಂದುವರಿಸಿದ ಹರಿಪ್ರಸಾದ್, ಕೊಲೆ ಕುರಿತು ಹೈಕೋರ್ಟ್ ಕಣ್ಗಾವಲಿನಲ್ಲಿ ತನಿಖೆಯಾಗಬೇಕು ಎಂದು ಆಗ್ರಹಿಸಿದರು.

ಶಿವಮೊಗ್ಗದಲ್ಲಿ ಕೊಲೆಯಾದ ಹರ್ಷ ಭಜರಂಗದಳದ ಕಾರ್ಯಕರ್ತ ಅಲ್ಲ ಎಂದು ಆತನ ತಾಯಿ ಎರಡು ವರ್ಷ ಹಿಂದೆಯೇ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಆದರೂ ಆತ ನಮ್ಮ ಕಾರ್ಯಕರ್ತ ಎಂದು ಹೇಳಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಶಾಂತಿ ಕದಡುವ ಉದ್ದೇಶದಿಂದ ಕೊಲೆ ಮಾಡಲಾಗಿದೆ ಎಂದು ಆರೋಪಿಸಿದರು. ರಾಷ್ಟ್ರಧ್ವಜ ಕುರಿತಂತೆ ಹಲವು ವಿವಾದಾತ್ಮಕ ಹೇಳಿಕೆ ನೀಡಿ ರಾಜೀನಾಮೆ ನೀಡುವ ಸಂಕಷ್ಟಕ್ಕೆ ಸಿಲುಕಿಸುವ ಈಶ್ವರಪ್ಪ ಅವರು ಅದರಿಂದ ತಪ್ಪಿಸಿಕೊಳ್ಳಲು ಹರ್ಷ ಎಂಬ ಯುವಕನ ಕೊಲೆ ಮಾಡಿಸಿದ್ದಾರೆ. ಈಶ್ವರಪ್ಪ ಕೊಲೆಗಡುಕ ಎಂದು ದೂರಿದರು. ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ, ಗದ್ದಲ, ಕೋಲಾಹಲ ನಡೆದು ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡುವಂತಾಯಿತು.

ಆಧಾರ: ವಿಶ್ವವಾಣಿ, ದಿನಾಂಕ:22.02.2022.

67. ವಂದನಾ ನಿರ್ಣಯ ಅಂಗೀಕರಿಸಿ ಮುಕ್ತಾಯ

ರಾಜ್ಯಪಾಲರ ಭಾಷಣವನ್ನು ಅಂಗೀಕರಿಸುವಂತೆ ಸೂಚಿಸಿ ಅನುಮೋದಿಸಿರುವ ಔಪಚಾರಿಕತೆಯನ್ನು ಹೊರತುಪಡಿಸಿದರೆ ಫೆಬ್ರವರಿ 16ರಿಂದ ಎರಡೂ ಸದನಗಳಲ್ಲಿ ಚರ್ಚೆಯೇ ಆಗಿಲ್ಲ.

ಸಾಂವಿಧಾನಿಕ ವಿಧಿಯನ್ವಯ ರಾಜ್ಯಪಾಲರ ಭಾಷಣದ ಮೇಲೆ ಪರ ವಿರೋಧ ಚರ್ಚೆಗಳು ನಡೆಯಬೇಕು. ಅಂತಿಮವಾಗಿ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ರಾಜ್ಯಪಾಲರ ಭಾಷಣ ಸಮರ್ಥನೆ ಮಾಡಿಕೊಂಡು ಉತ್ತರ ನೀಡಬೇಕು. ಆಮೇಲೆ ಸದನ ಭಾಷಣವನ್ನು ಬಹುಮತದಿಂದ ಅಂಗೀಕರಿಸಬೇಕು. ಇಲ್ಲವಾದಲ್ಲಿ ವೈಜ್ಞಾನಿಕ ಬಿಕ್ಕಟ್ಟು ಎದುರಾಗುತ್ತದೆ.

ಜಂಟಿ ಅಧಿವೇಶನದ ಹತ್ತು ದಿನಗಳು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಪ್ರಾಮುಖ್ಯ. ಪ್ರಾಶಸ್ತ್ಯ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ವೇಳೆ ವಿವಿಧ ಸಮಸ್ಯೆಗಳನ್ನು ಪ್ರಸ್ತಾಪಿಸಲು ವಿಪಕ್ಷಕ್ಕೆ ಅವಕಾಶವಿರುತ್ತದೆ. ಸರ್ಕಾರದ ಸಾಲಿಗೆ ಈ ಭಾಷಣವನ್ನು ಆಧರಿಸಿ ತನ್ನ ಸಾಧನೆಗಳನ್ನು ಹಾಗೂ ಇಡೀ ವರ್ಷದ ಆಡಳಿತ ಕನಸುಗಳನ್ನು ಹೇಳುವ ಸೌಲಭ್ಯವಿರುತ್ತದೆ.

ಆದರೆ ಈ ಬಾರಿ ರಾಜ್ಯ ಪಾಲರ ಭಾಷಣದ ಮೇಲೆ ಇನ್ನೂ ಚರ್ಚೆಗಳೇ ಆರಂಭವಾಗಿಲ್ಲ. ಸದ್ಯದ ಪರಿಸ್ಥಿತಿ ಹಾಗೂ ಎರಡೂ ಪಕ್ಷಗಳು ತಮ್ಮ ನಿಲುವಿಗೆ ಅಂಟಿಕೊಂಡಿರುವುದನ್ನು ಗಮನಿಸಿದಾಗ ಇನ್ನುಳಿದ ನಾಲ್ಕು ದಿನಗಳಲ್ಲಿ(ಸದನ ನಡೆದಲ್ಲಿ) ಚರ್ಚೆಯನ್ನು ನಿರೀಕ್ಷಿಸುವಂತಿಲ್ಲ.

ಕಾಂಗ್ರೆಸ್ ಪ್ರತಿಭಟನೆಯನ್ನು ನಿಲ್ಲಿಸದೆ ಇರುವುದರಿಂದ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸುವ ಸಾಧ್ಯತೆ ಹೆಚ್ಚಾಗಿ ಕಂಡು ಬರುತ್ತಿದೆ. ಇನ್ಯಾವುದಾದರೂ ಮಹತ್ವದ ಮಸೂದೆ ಇದ್ದಲ್ಲಿ ಅಂಗೀಕರಿಸಿಕೊಂಡು ಮುಖ್ಯಮಂತ್ರಿಗಳ ಉತ್ತರವನ್ನು ಟೇಬಲ್ ಮಾಡಿ ಅನಿರ್ಧಿಷ್ಟ ಅವಧಿಗೆ ಮುಂದೂಡಬಹುದಾದ ಸಂಭವ ಕಂಡು ಬರುತ್ತಿದೆ. ಹೀಗಾದಲ್ಲಿ ಯಾವುದೇ ಮಹತ್ವದ ಅಂಶವನ್ನೂ ಚರ್ಚೆ ಮಾಡದೇ ವರ್ಷದ ಮೊದಲ ಅಧಿವೇಶನ ಮುಗಿದಂತಾಗಲಿದೆ. ಮೊದಲ ದಿನ ರಾಜ್ಯಪಾಲರ ಭಾಷಣ ಸುಸೂತ್ರವಾಗಿ ನಡೆದಿತ್ತು. ಅಂದು ಕಾಂಗ್ರೆಸ್ ಕಪ್ಪು ಪಟ್ಟಿ ಧರಿಸಿ ಭಾಷಣದಲ್ಲಿ ಭಾಗಿಯಾಗಿತ್ತು. ಆ ಮೂಲಕ ಮೌನ ಪ್ರತಿಭಟನೆಯನ್ನಷ್ಟೇ ಮಾಡಿತ್ತು. ಎರಡನೇ ದಿನ ಸರ್ಕಾರದ ಪರವಾಗಿ ಭಾಷಣವನ್ನು ಅಂಗೀಕರಿಸಬೇಕೆಂದು ಸೂಚಿಸಿ, ಅನುಮೋದಿಸಲಾಗಿತ್ತು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:22.02.2022.

68. ಒಂದು ರಾಷ್ಟ್ರ–ಒಂದು ಚುನಾವಣೆ ಬೇಕು

ರಾಷ್ಟ್ರದ ಹಿತ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ರಾಜ್ಯಗಳ ಸಹಮತದೊಂದಿಗೆ 'ಒಂದು ರಾಷ್ಟ್ರ–ಒಂದು ಚುನಾವಣೆ' ವ್ಯವಸ್ಥೆಯನ್ನು ಜಾರಿಗೆ ತರುವ ಅಗತ್ಯವಿದೆ ಎಂದು ಜನಪ್ರತಿನಿಧಿಗಳು ಹಾಗೂ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಭಾರತೀಯ ವಿಕಾಸ ವೇದಿಕೆ–ಕರ್ನಾಟಕ' ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಯಿತು." "ಒಂದು ರಾಷ್ಟ್ರ–ಒಂದು ಚುನಾವಣೆ ಎಂಬುದನ್ನು ವ್ಯಕ್ತಿಗತ ಪ್ರತಿಷ್ಠೆಯಾಗಿ ತೆಗೆದುಕೊಳ್ಳದೆ, ಎಲ್ಲಾ ಪ್ರಾದೇಶಿಕ ಪಕ್ಷಗಳನ್ನು ವಿಶ್ವಾಸಕ್ಕೆ ಪಡೆಯಬೇಕು. ಕೇವಲ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗೆ ಮಾತ್ರ ಒಂದು ರಾಷ್ಟ್ರ–ಒಂದು ಚುನಾವಣೆ ವ್ಯವಸ್ಥೆಯನ್ನು ಸೀಮಿತಗೊಳಿಸಬಾರದು. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮಹಾನಗರ ಪಾಲಿಕೆ ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಘಗಳು ಸೇರಿದಂತೆ ಇತರ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಬೇಕು. ಈ

ಬಗ್ಗೆ ವಿಸ್ತೃತವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು," ಎಂದು ಜನಪ್ರತಿನಿಧಿಗಳು ಹಾಗೂ ತಜ್ಞರು ಸಲಹೆ ನೀಡಿದರು.

ದುಂಡು ಮೇಜಿನ ಸಭೆ ಉದ್ಘಾಟಿಸಿ ಮಾತನಾಡಿದ ವಿಧಾನಸಭಾಧ್ಯಕ್ಷರವರು "ಒಂದು ರಾಷ್ಟ್ರ – ಒಂದು ಚುನಾವಣೆ ಎಂಬ ಪರಿಕಲ್ಪನೆ ಹೊಸದೇನೂ ಅಲ್ಲ. ಚುನಾವಣೆ ಸುಧಾರಣೆಗೆ ಸಂಬಂಧಿಸಿದಂತೆ 1983ರಲ್ಲಿ ಕೇಂದ್ರ ಚುನಾವಣಾ ಆಯೋಗ ಈ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಿದೆ. ಆದರೆ, ಇದನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರಸ್ತಾಪಿಸಿದ್ದಾರೆ ಎಂದು ವಿರೋಧ ವ್ಯಕ್ತಪಡಿಸುತ್ತಿರುವುದನ್ನು ಕಾಣುತ್ತಿದ್ದೇವೆ," ಎಂದರು.

ಹಣ, ಸಂಪನ್ಮೂಲ ಉಳಿತಾಯ: "ಸ್ವಾತಂತ್ರ್ಯ ನಂತರ ದೇಶಾದ್ಯಂತ ಮೂರ್ನಾಲ್ಕು ಬಾರಿ ಲೋಕಸಭೆಗೆ ಒಟ್ಟಿಗೆ ಚುನಾವಣೆ ನಡೆಸಲಾಗಿದೆ. 2015ರಲ್ಲಿ ಸಂಸದೀಯ ಸಮಿತಿ ಸಹ ಒಂದು ರಾಷ್ಟ್ರ–ಒಂದು ಚುನಾವಣೆ ಬಗ್ಗೆ ವರದಿ ಸಲ್ಲಿಸಿದೆ. ಲೋಕಸಭಾ ಚುನಾವಣೆಯೊಂದಕ್ಕೆ ಸುಮಾರು ರೂ.60 ಸಾವಿರ ಕೋಟಿ ವೆಚ್ಚವಾಗಲಿದೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ಪ್ರತ್ಯೇಕವಾಗಿ ನಡೆಯುವುದರಿಂದ ಭಾರಿ ಪ್ರಮಾಣದ ಹಣ ಖರ್ಚಾಗುತ್ತದೆ. ಪ್ರತಿ ಚುನಾವಣೆಗೆ ನೀತಿ ಸಂಹಿತೆಯನ್ನು ಜಾರಿಗೆ ತರುವುದರಿಂದ ಕನಿಷ್ಠ ಎರಡರಿಂದ ಮೂರು ತಿಂಗಳ ಕಾಲ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಳ್ಳಲಿವೆ. ಜೊತೆಗೆ, ಅಧಿಕ ಮಾನವ ಸಂಪನ್ಮೂಲ ವ್ಯಯವಾಗುತ್ತದೆ. ಈ ಎಲ್ಲ ಸಂಗತಿಗಳಿಗೆ ಅಂತ್ಯ ಹಾಡಲು ಮತ್ತು ಹಣಬಲ, ಜಾತಿಬಲ, ತೋಳ್ಬಲದ ಪ್ರಭಾವವನ್ನು ಕಡಿಮೆ ಮಾಡಲು ಒಂದು ರಾಷ್ಟ್ರ–ಒಂದು ಚುನಾವಣೆ ವ್ಯವಸ್ಥೆ ಅಗತ್ಯವಿದೆ," ಎಂದು ಸಭಾಧ್ಯಕ್ಷರವರು ಹೇಳಿದರು.

ಭ್ರಷ್ಟಾಚಾರ ನಿಗ್ರಹ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, "ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಸಮಯದಲ್ಲಿ ನಡೆಯುವುದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲಾಗಲಿದೆ. ಸ್ಥಳೀಯ ಸಂಸ್ಥೆಯ ಚುನಾವಣೆಗಳೂ ಸೇರಿದಂತೆ ಇಡೀ ವರ್ಷ ಕನಿಷ್ಠ 6 ರಿಂದ 7 ತಿಂಗಳು ನಾವು ಚುನಾವಣೆಗಳಲ್ಲೇ ಕಳೆಯುತ್ತಿದ್ದೇವೆ. ಈ ಹಿಂದೆ ಚುನಾವಣೆ ವೇಳೆ ಅಭ್ಯರ್ಥಿಗಳಿಗೆ ಜನರು ಹಣ ನೀಡುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದ್ದು, ಹೆಚ್ಚು ಚುನಾವಣೆಗಳು ಬಂದಷ್ಟು ಜನರಿಗೆ ಖುಷಿ. ಗೆದ್ದ ಅಭ್ಯರ್ಥಿಗಳ ಚುನವಣೆಗೆ ಖರ್ಚು ಮಾಡಿದ ಹಣ ವಾಪಸ್ ಪಡೆಯಲು ಭ್ರಷ್ಟಚಾರದಲ್ಲಿ ತೊಡಗುತ್ತಾನೆ. ಆದ್ದರಿಂದ ರಾಜ್ಯ ಮತ್ತು ರಾಷ್ಟ್ರದ ಒಳಿತಿಗೆ ಒಂದು ರಾಷ್ಟ್ರ–ಒಂದು ಚುನಾವಣೆ ಬೇಕು," ಎಂದು ನುಡಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ್ ಮಾತನಾಡಿ, "ಒಂದು ರಾಷ್ಟ್ರ–ಒಂದು ಚುನಾವಣೆ ವಿಷಯವನ್ನು ಕೇವಲ ವಿಧಾನ ಸಭೆ ಮತ್ತು ಲೋಕಸಭೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಚರ್ಚಿಸುತ್ತಿದ್ದೇವೆ. ಆದರೆ, ಪಂಚಾಯಿತಿ ಚುನಾವಣೆಯಿಂದ ಹಿಡಿದು ಪಾರ್ಲಿಮೆಂಟ್‌ವರೆಗೆ ಒಂದೇ ಹಂತದಲ್ಲಿ ಚುನಾವಣೆ ನಡೆಸುವ ಬಗ್ಗೆ ಚರ್ಚೆಯಾಗಬೇಕು. ಎಲ್ಲಾ ಪ್ರಾದೇಶಿಕ ಪಕ್ಷಗಳ ಒಮ್ಮತದ ಅಭಿಪ್ರಾಯದೊಂದಿಗೆ ಈ ವ್ಯವಸ್ಥೆ ಜಾರಿಯಾಗಬೇಕು," ಎಂದು ಹೇಳಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:23.02.2022.

ದಿನಾಂಕ: 22.02.2022ರಂದು ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರು ಬೆಂಗಳೂರಿನ ಭಾರತೀಯ ವಿಕಾಸ ವೇದಿಕೆ ಅವರು ಹಮ್ಮಿಕೊಂಡಿದ್ದ "ಒಂದು ರಾಷ್ಟ್ರ – ಒಂದು ಚುನಾವಣೆ" ಎಂಬ ವಿಷಯದ ಕುರಿತಂತೆ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿ, ರಾಷ್ಟ್ರದ ಅಭಿವೃದ್ಧಿ ದೃಷ್ಟಿಯಿಂದ ಏಕಕಾಲಕ್ಕೆ ಚುನಾವಣೆ ನಡೆಯುವ ಅಗತ್ಯತೆ ಕುರಿತಂತೆ ಮಾತನಾಡಿದರು ಈ ಸಂದರ್ಭದಲ್ಲಿ ಇತರೇ ಪ್ರಮುಖರಾದ ಶ್ರೀ ಅಶೋಕ ಹಾರನಹಳ್ಳಿ, ಡಾ: ಎಂ. ಆರ್. ದೊರೆಸ್ವಾಮಿ ಶ್ರೀ ರವೀಂದ್ರ ಭಟ್, ಡಾ: ಸುಧಾಕರ ಹೊಸಹಳ್ಳಿ, ಶ್ರೀ ಬಿ.ಎಲ್. ಶಂಕರ್, ಶ್ರೀ ಐ.ಎಸ್.ಪ್ರಸಾದ್ ಹಾಗೂ ಡಾ:ಎಂ.ಆರ್. ವೆಂಕಟೇಶ್ ಅವರು ಸಭೆಯಲ್ಲಿ ಉಪಸ್ಥಿತರಿದ್ದು ಮೇಲಿನ ವಿಷಯದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಿರುವ ಸಂದರ್ಭ;

69. ಎರಡೂ ಸದನ 7ನೇ ದಿನಕ್ಕೆ ಬರ್ಖಾಸ್ತು

ಸಚಿವ ಕೆ.ಎಸ್.ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಉಭಯ ಸದನಗಳಲ್ಲಿ ಪ್ರತಿಪಕ್ಷ ಕಾಂಗ್ರೆಸ್‌ನ ಅಹೋರಾತ್ರಿ ಧರಣಿ ಹಾಗೂ ಪ್ರತಿಭಟನೆ ಮುಂದುವರಿದ ಕಾರಣ ಸದನವನ್ನು ಮಾರ್ಚ್ 4ಕ್ಕೆ ಮುಂದೂಡಲಾಯಿತು.

10 ದಿನಗಳಿಗೆ ನಿಗದಿಯಾಗಿದ್ದ ರಾಜ್ಯ ವಿಧಾನ ಮಂಡಲದ ಅಧಿವೇಶನದಲ್ಲಿ 2 ದಿನ ಮಾತ್ರ ಕಲಾಪ ನಡೆದು 5 ದಿನ ಪ್ರತಿಭಟನೆಯಿಂದಾಗಿ ವ್ಯರ್ಥಗೊಂಡು ಏಳನೇ ದಿನಕ್ಕೆ ಬರ್ಕಾಸ್ತುಗೊಂಡಂತಾಗಿದೆ. ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದ್ದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಯಾವುದೇ ಚರ್ಚೆಯಾಗದೆ ಮುಖ್ಯಮಂತ್ರಿಯವರು ಸರ್ಕಾರದ ಪರ ಉತ್ತರ ನೀಡಿದರಾದರೂ ಗದ್ದಲದಿಂದಾಗಿ ಪೂರ್ಣ ಪ್ರಮಾಣದಲ್ಲಿ ಮಾತನಾಡಲು ಆಗದೆ ಸದನದಲ್ಲಿ ಉತ್ತರ ಮಂಡಿಸಿ, ಘೋಷಣೆಗಳ ನಡುವೆಯೇ ಅದಕ್ಕೆ ಅಂಗೀಕರಿಸುವಂತಾಯಿತು.

ಇದರ ನಡುವೆಯೇ ಮುಖ್ಯಮಂತ್ರಿ, ಸ್ಪೀಕರ್, ಸಚಿವರು, ಶಾಸಕರ ವೇತನ, ಭತ್ಯೆ ಪರಿಷ್ಕರಣೆಯಲ್ಲಿ ಎರಡು ವಿಧೇಯಕಗಳನ್ನು ಮಂಡಿಸಿ ಚರ್ಚೆ ಇಲ್ಲದೆ ಅಂಗೀಕಾರ ಪಡೆಯಲಾಯಿತು. ವಿಧೇಯಕದಲ್ಲಿ ಇನ್ನು ಮುಂದೆ ಪ್ರತಿ 5 ವರ್ಷಕೊಮ್ಮೆ ಸಚಿವರು, ಶಾಸಕರ ವೇತನ–ಭತ್ಯೆ ಪರಿಷ್ಕರಣೆಗೂ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.

ವಿಧಾನಸಭೆಯಲ್ಲಿ ಸದನ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಸದನದ ಬಾವಿಗೆ ಇಳಿದು ಘೋಷಣೆ ಮುಂದುವರಿಸಿದರು. ಇದರ ನಡುವೆಯೇ ಸ್ಪೀಕರ್ ಅವರು ಪ್ರಶ್ನೋತ್ತರ ಕಲಾಪ ಮುಗಿಸಿದರು. ನಂತರ ಎರಡು ವಿಧೇಯಕಗಳ ಮಂಡನೆ ಮತ್ತು ಅಂಗೀಕಾರ ಪಡೆಯಲಾಯಿತು. ಮುಖ್ಯಮಂತ್ರಿಯವರು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ನೀಡಲಿದ್ದಾರೆ ಹೋಗಿ ನಿಮ್ಮ ಸ್ಥಾನಗಳಿಗೆ ಕುಳಿತುಕೊಳ್ಳಿ ಎಂದು ಸ್ಪೀಕರ್ ಮನವಿ ಮಾಡಿದರು. ಅದಕ್ಕೆ ಕಾಂಗ್ರೆಸ್‌ನವರು ಕಿವಿಗೊಡಲಿಲ್ಲ. ಇದರ ನಡುವೆಯೇ ಮುಖ್ಯಮಂತ್ರಿ ಭಾಷಣ ಮುಗಿಸಿದರು. ನಂತರ ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ನನಗೆ ಸದನ ನಡೆಸಲು ಸಾಧ್ಯವಾಗುವುದಿಲ್ಲ ಎಂದು ಸದನವನ್ನು ಮಾರ್ಚ್ 4ಕ್ಕೆ ಮುಂದೂಡಿದರು.

ಇತ್ತ ವಿಧಾನ ಪರಿಷತ್‌ನಲ್ಲಿಯೂ ಸದನ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಬಾವಿಗೆ ಇಳಿದು ಪ್ರತಿಭಟನೆ ಆರಂಭಿಸಿದರು. ನಂತರ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಸಿಎಂ ಉತ್ತರ ನೀಡಿದರು. ನಂತರ ಸದನವನ್ನು ಮುಂದೂಡಲಾಯಿತು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಸರ್ಕರದ ಪರವಾಗಿ ಉತ್ತರ ನೀಡುವ ಸಂದರ್ಭದಲ್ಲಿ ಸಿಎಂ ಬೊಮ್ಮಾಯಿ ಕಾಂಗ್ರೆಸ್ ವಿರುದ್ಧ ಹರಿ ಹಾಯ್ದರು. ರಾಜ್ಯದ ವಿಧಾನಮಂಡಲದ ಇತಿಹಾಸದಲ್ಲಿ ಇಂತಹ ವರ್ತನೆ ಎಂದೂ ಆಗಿರಲಿಲ್ಲ ಇದೊಂದು ಕಪ್ಪು ಚುಕ್ಕೆ ಇದಕ್ಕೆ ಕಾಂಗ್ರೆಸ್ ಕಾರಣ ಎಂದರು.

ಕಾಂಗ್ರೆಸ್ ಪ್ರತಿಭಟನೆ ಮುಂದುವರಿದು ಗದ್ದಲದಲ್ಲೇ ಮುಖ್ಯಮಂತ್ರಿ ಭಾಷಣ ಮಾಡುವಂತಾಗಿದ್ದರಿಂದ ಬೇಸರಗೊಂಡ ಸ್ಪೀಕರ್ ಅವರು ಮತ್ತೊಮ್ಮೆ ಎಲ್ಲರಿಗೂ ಮನವಿ ಮಾಡುತ್ತೇನೆ. ಹತ್ತು ದಿನಗಳ ಅಧಿವೇಶನದಲ್ಲಿ ಎರಡು ದಿನ ಮಾತ್ರ ಕಲಾಪ ನಡೆದಿದೆ. ಐದು ದಿನ ವ್ಯರ್ಥವಾಗಿದೆ. ಈ ಪರಿಸ್ಥಿತಿ ಮುಂದುವರಿದರೆ ನಾನು ಸದನ ಮುಂದೂಡಬೇಕಾಗುತ್ತದೆ.” ಎಂದು ಅಸಹಾಯಕತೆ ತೋಡಿಕೊಂಡರು.

ಆಧಾರ: ಉದಯವಾಣಿ, ದಿನಾಂಕ:23.02.2022.

70. ವಿವಾದಗಳಿಂದ ನಾಯಕತ್ವ ವೃದ್ಧಿ ಸರಿಯಲ್ಲ

ವರ್ಷದ ಮೊದಲ ಅಧಿವೇಶನದಲ್ಲಿ ನಡೆದ ಘಟನೆಗಳು, ರಾಜಕೀಯ ನಾಯಕರ ಹೇಳಿಕೆಗಳು, ಅಹೋರಾತ್ರಿ ಧರಣಿಯಿಂದಾಗಿ ಕಲಾಪ ವ್ಯರ್ಥವಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ವಿಧಾನಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ, ವಿವಾದಗಳಿಂದಲೇ ನಾಯಕತ್ವ ವೃದ್ಧಿಸಿಕೊಳ್ಳುವುದು ಸರಿಯಲ್ಲ ಎಂದು ಹೇಳಿದ್ದಾರೆ.

ವಿಧಾನ ಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿವಾದಗಳನ್ನು ಸೃಷ್ಟಿಸಿಕೊಂಡು ನಾಯಕತ್ವ ಬೆಳಸಿಕೊಳ್ಳುವವರ ಸಂಖ್ಯೆ ಹೆಚ್ಚಾಗಿರುವುದು ಸಮಾಜಕ್ಕೆ ಒಳ್ಳೆಯದಲ್ಲ. ವಿವಾದದ ಮಾತುಗಳಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ. ನಮ್ಮ ಮಾತುಗಳು ಪ್ರೀತಿ– ವಿಶ್ವಾಸ ಬೆಸೆಯುವ ರೀತಿಯಲ್ಲಿ ಇರಬೇಕೇ ಹೊರತು, ವಿವಾದ ಸೃಷ್ಟಿಸುವಂತೆ ಇರಬಾರದು ಎಂದರು.

ಸದನದಲ್ಲಿ ನಡೆದ ವೈಯುಕ್ತಿಕ ವಾಗ್ದಾಳಿ, ಹೇಳಿಕೆಗಳನ್ನು ಉಲ್ಲೇಖಿಸದೇ ಪರೋಕ್ಷವಾಗಿ ಮಾತನಾಡಿ, ಮಾತುಗಳು ಸಮಾಜದಲ್ಲಿ ವಿಶ್ವಾಸ ಬೆಸೆಯುವಂತಿರಬೇಕು. ನಮ್ಮ ಮಾತಿನಿಂದ ಸಮಾಜದ ಸಾಮರಸ್ಯ ಹಾಳಾಗಬಾರದು. ಎಲ್ಲರೂ ಪ್ರಭುದ್ಧತೆಯಿಂದ ಸಂಸ್ಕಾರಯುತವಾಗಿ ನಡೆದುಕೊಳ್ಳುವ ಮೂಲಕ ಜನಸಮೂಹದಲ್ಲೂ ಸಂಸ್ಕಾರ–ಸಂಸ್ಕೃತಿ ಬೆಳೆಸಬೇಕಾಗುತ್ತದೆ. ಸಾಮರಸ್ಯ ಹಾಳು ಮಾಡುವ ಮಾತುಗಳನ್ನಾಡಬಾರದು ಎಂದರು.

ಉತ್ತಮ ರೀತಿ ನಡೆಸಲು ಪ್ರಯತ್ನ: ಸದನವನ್ನು ಉತ್ತಮ ರೀತಿಯಲ್ಲಿ ನಡೆಸಲು ಎಲ್ಲ ಪ್ರಯತ್ನ ನಡೆಸಿದೆ. ಪ್ರತಿಪಕ್ಷ ಆಡಳಿತ ಪಕ್ಷ ನಾಯಕರುಗಳನ್ನು ಕರೆದು ಮಾತನಾಡಿದೆ. ಆದರೆ, ನನ್ನ ನಿರಂತರ ಮನವಿಗೆ ಯಶಸ್ಸು ಈ ವಿಷಯದಲ್ಲಿ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ವ್ಯವಸ್ಥೆಯ ಶಿಥಿಲತೆಗೆ ನಾವು ಕಾರಣರಾಗುತ್ತಿದ್ದೇವೆ ಎಂದರು.

ತೀವ್ರತರ ಕ್ರಮಗಳನ್ನು ಕೈಗೊಂಡು ಸದನ ನಡೆಸುವುದಕ್ಕೆ ನಿಯಾಮವಳಿಗಳಲ್ಲಿ ಅವಕಾಶವಿತ್ತು. ಆದರೆ, ಅಂತಹ ದಿನಗಳು ಬರದಿರಲಿ ಎಂದು ಬಯಸುತ್ತೇನೆ. ಮುಂದೆ ಕಾಂಗ್ರೆಸ್ ಕಲಾಪದಲ್ಲಿ ಭಾಗವಹಿಸುವ ಆಶಯ ತಮ್ಮದು ಎಂದರು. ಪ್ರತಿಪಕ್ಷ ಕಾಂಗ್ರೆಸ್ ಧರಣಿಯಲ್ಲಿದ್ದುದರಿಂದ ಯಾವ ಚರ್ಚೆಗೂ ಅವಕಾಶ ಸಿಗದ ಸಂದರ್ಭ ಬಂತು. ಇತಿಮಿತಿಯೊಳಗೆ ವಿರೋಧ ವ್ಯಕ್ತಪಡಿಸುವುದು ಸರಿ. ಆದರೆ, ಕಲಾಪವೇ ನಡೆಯದಂತೆ ಮಾಡುವುದು ಸರಿಯಲ್ಲ. ಗದ್ದಲಗಳ ನಡುವೆ ಕಲಾಪ ನಡೆದಿದೆ ಎಂದು ಹೇಳುವುದಕ್ಕೆ ನನಗೆ ಮನಸ್ಸಿಲ್ಲ 10 ದಿನದ ಅಧಿವೇಶನ 5 ದಿನ ಗೊಂದಲದಲ್ಲೇ ಮುಗಿಯಿತು. ಮೂರು ದಿನ ಕಲಾಪವೇ ನಡೆಯಲಿಲ್ಲ ಎಂದರು.

ಆಧಾರ: ವಿಶ್ವವಾಣಿ, ದಿನಾಂಕ:24.02.2022.

ದಿನಾಂಕ: 23.02.2022ರಂದು ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ: 14.02.2022ರಿಂದ 22.02.2022ರವರೆಗೆ ನಡೆದ ವಿಧಾನ ಸಭೆಯ ಅಧಿವೇಶನ ಕುರಿತಂತೆ ವಿಧಾನಸೌಧದ ಕೊಠಡಿ ಸಂಖ್ಯೆ: 106ರಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಿರುವ ಸಂದರ್ಭ;

71. 19 ದಿನಗಳ ಕಾಲ ಅಧಿವೇಶನ

ಹದಿನೈದನೇ ವಿಧಾನಸಭೆಯ ಹನ್ನೆರಡನೇ ಹಾಗೂ ಮುಂಗಡಪತ್ರ ಅಧಿವೇಶನ ಮಾರ್ಚ್ 4 ರಂದು 2022–23ನೇ ಸಾಲಿನ ಬಜೆಟ್ ಮಂಡನೆಯೊಂದಿಗೆ ಆರಂಭವಾಗಲಿದೆ. ಮಾರ್ಚ್ 30ರವರೆಗೆ ಒಟ್ಟು 19 ದಿನಗಳ ಕಾಲ ನಡೆಯಲಿರುವ ಅಧಿವೇಶನದ ತಾತ್ಕಾಲಿಕ ಕಾರ್ಯಕ್ರಮ ಪಟ್ಟಿಯನ್ನು ಸಭಾಧ್ಯಕ್ಷರ ನಿರ್ದೇಶನದಂತೆ ಸಚಿವಾಲಯ ಪ್ರಕಟಿಸಿದೆ.

ಮಾರ್ಚ್ 4 ರಂದು ಮಧ್ಯಾಹ್ನ 12.30ಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಮೊದಲ ಹಾಗೂ ಹಣಕಾಸು ಸಚಿವರಾಗಿಯೂ ಬೊಮ್ಮಾಯಿ ಅವರು 2022–23ನೇ ಸಾಲಿನ ಚೊಚ್ಚಲ ಮುಂಗಡಪತ್ರ ಮಂಡಿಸಲಿದ್ದಾರೆ. ಕೊರೋನಾ ಹಿನ್ನೆಲೆಯಲ್ಲಿ ಕಳೆದೆರಡು ವರ್ಷಗಳಿಂದ ಅಲ್ಪಾವಧಿ ಅಧಿವೇಶನಕ್ಕೆ ಸೀಮಿತವಾಗುತ್ತಿದ್ದು ಇದೀಗ ಬಹುಸಮಯದ ಬಳಿಕ 27 ದಿನಗಳ ಕಾಲ ಬಜೆಟ್ ಅಧಿವೇಶನ ನಿಗದಿಯಾಗಿದೆ. ಹಾಗಿದ್ದೂ ಸರ್ಕಾರಿ ರಜಾ ದಿನ ಹಾಗೂ ಶನಿವಾರಗಳನ್ನು ಹೊರತುಪಡಿಸಿ ಒಟ್ಟಾರೆ 19 ದಿನಗಳ ಕಾಲ ಕಲಾಪಗಳು ನಡೆಯಲಿವೆ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಪ್ರಕಟಣೆ ಹೊರಡಿಸಿದ್ದಾರೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:24.02.2022.

72. ಇಂದಿನಿಂದ ಬಜೆಟ್ ಮೇಲಿನ ಚರ್ಚೆ ಆರಂಭ

ಬಜೆಟ್ ಅಧಿವೇಶನ ಮುಂದುವರಿಯಲಿದ್ದು, ಆಯ್ಯವ್ಯಯದ ಮೇಲೆ ಚರ್ಚೆ ಆರಂಭವಾಗುತ್ತಿದೆ. ಮತ್ತೊಮ್ಮೆ ಆಡಳಿತ ಮತ್ತು ಪ್ರತಿಪಕ್ಷಗಳು ವಾಗ್ಯುದ್ಧಕ್ಕೆ ಸಿದ್ಧವಾಗಿವೆ. ಫೆಬ್ರವರಿಯಲ್ಲಿ ನಡೆದ ವರ್ಷದ

ಮೊದಲ ಅಧಿವೇಶನದಲ್ಲಿ ರಾಷ್ಟ್ರಧ್ವಜ ಕುರಿತ ಹೇಳಿಕೆ ನೀಡಿದ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಉಭಯ ಸದನಗಳಲ್ಲಿ ಅಹೋರಾತ್ರಿ ಧರಣಿ ನಡೆಸಿ ಎಂಟು ದಿನಗಳ ಕಲಾಪ ವ್ಯರ್ಥ ಮಾಡಿದ್ದ ಕಾಂಗ್ರೆಸ್, ಈ ಬಾರಿ ವಿಷಯಾಧಾರಿತವಾಗಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡಲಿದೆ. ಮತ್ತೊಂದು ಪ್ರತಿಪಕ್ಷ ಜೆಡಿಎಸ್, ಕಳೆದ ಅಧಿವೇಶನವನ್ನು ಹಾಳು ಮಾಡಿದ ಕಾಂಗ್ರೆಸ್ ವಿರುದ್ಧ ಮುಗಿಬೀಳುವುದರೊಂದಿಗೆ, ಬಜೆಟ್ ಮೇಲಿನ ಚರ್ಚೆ ವೇಳೆ ನಾನಾ ವಿಚಾರಗಳನ್ನು ಕೈಗೆತ್ತಿಕೊಂಡು ಆಡಳಿತ ಪಕ್ಷವನ್ನು ಮೊಟಕಲು ಸಿದ್ಧವಾಗಿದೆ.

ಇವೆರಡೂ ಪಕ್ಷಗಳಿಗೆ ತಿರುಗೇಟು ನೀಡಲು ಆಡಳಿತಾ ರೂಢ ಬಿಜೆಪಿಯೂ ಹಲವು ತಂತ್ರಗಾರಿಕೆಗಳನ್ನು ಮಾಡಿದ್ದು, ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ಜನಪ್ರಿಯ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಪ್ರತಿಪಕ್ಷಗಳನ್ನು ತಿವಿಯಲು ಸಜ್ಜಾಗಿದೆ. ಹೀಗಾಗಿ ಬಜೆಟ್ ಮೇಲಿನ ಚರ್ಚೆ ವೇಳೆ ಆಡಳಿತ ಮತ್ತು ಪ್ರತಿಪಕ್ಷಗಳ ಮಧ್ಯೆ ವಾಕ್ಸಮರಕ್ಕೆ ಕಾರಣವಾಗುವುದು ಖಚಿತ.

ನೀರಾವರಿಯೇ ಪ್ರಧಾನ: ಬಜೆಟ್ ಮೇಲಿನ ಚರ್ಚೆಯಲ್ಲಿ ಎಲ್ಲಾ ಇಲಾಖೆಗಳ ಮೇಲೆ ಚರ್ಚೆಗೆ ಅವಕಾಶವಿದೆಯದರೂ ನೀರಾವರಿ ಯೋಜನೆಗಳೇ ಪ್ರಮುಖವಾಗಿ ಚರ್ಚೆಗೆ ಬರುವ ಸಾಧ್ಯತೆಗಳಿವೆ. ಈಗಾಗಲೇ ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ನಡೆಸಿರುವ ಕಾಂಗ್ರೆಸ್, ಮುಂದಿನ ದಿನಗಳಲ್ಲಿ ಮಹದಾಯಿ, ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಆಗ್ರಹಿಸಿ ಹೋರಾಟಕ್ಕೆ ನಿರ್ಧರಿಸಿದೆ. ಮತ್ತೊಂದೆಡೆ ಜೆಡಿಎಸ್ ಕೂಡ ನೀರಾವರಿಗೆ ಸಂಬಂಧಿಸಿದಂತೆ ರಾಜ್ಯದ್ಯಾಂತ ಜಲಧಾರೆ ಕಾರ್ಯಕ್ರಮ ರೂಪಿಸಿದೆ. ಹೀಗಾಗಿ ಎರಡೂ ಪಕ್ಷಗಳು ನೀರಾವರಿಯನ್ನೇ ಪ್ರಮುಖವಾಗಿ ಪ್ರಸ್ತಾಪಿಸುವ ಸಾಧ್ಯತೆಯಿದೆ.

ರೈತರ ಹೋರಾಟಕ್ಕೆ ಮಣಿದು ಕೇಂದ್ರ ಸರ್ಕಾರ ಮೂರು ಕೃಷಿ ಕಾಯಿದೆಗಳನ್ನು ರದ್ದುಗೊಳಿಸಿದ್ದು, ಅದೇ ರೀತಿ ರಾಜ್ಯದಲ್ಲಿ ಕೃಷಿ ಕಾಯಿದೆ ಮತ್ತು ಎಪಿಎಂಸಿ ಕಾಯಿದೆಗಳನ್ನು ರದ್ದುಗೊಳಿಸುವಂತೆ ಕಾಂಗ್ರೆಸ್ ಸದನದಲ್ಲಿ ಪ್ರಸ್ತಾಪಿಸುವ ಸಾಧ್ಯತೆಯಿದೆ.

ಈ ಬಾರಿ ಅಲ್ಪಸಂಖ್ಯಾತರಿಗೆ ಅದರಲ್ಲೂ ಮುಖ್ಯವಾಗಿ ಮುಸ್ಲಿಮ್ ಸಮುದಾಯಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಿಲ್ಲ ಎಂದು ಈಗಾಗಲೇ ಕಾಂಗ್ರೆಸ್ ಕಿಡಿ ಕಾರಿದೆ. ಈ ಅಂಶವನ್ನು ಪ್ರಸ್ತಾಪಿಸಿ, ಬಿಜೆಪಿ ಸರ್ಕಾರ ಮುಸ್ಲಿಂ ವಿರೋಧಿ ಎಂದು ಬಿಂಬಿಸುವ ಬಗ್ಗೆಯೂ ಕಾಂಗ್ರೆಸ್ ಶಾಸಕಾಂಗದ ಪಕ್ಷದ ಸಭೆಯಲ್ಲಿ ಚರ್ಚಿಸಲಾಗಿದೆ.

ಆರ್ಥಿಕ ವ್ಯವಸ್ಥೆ ಬಗ್ಗೆ ಸಿದ್ದರಾಮಯ್ಯ ತರಾಟೆ: ಈ ಬಾರಿ ಬಜೆಟ್‌ನಲ್ಲಿ ಯಾವುದೇ ತೆರಿಗೆಗಳನ್ನು ಹೆಚ್ಚಿಸಿಲ್ಲ. 2021–21ನೇ ಸಾಲಿಗಿಂತ ಹೆಚ್ಚುವರಿಯಾಗಿ ರೂ.8,344 ಕೋಟಿ ತೆರಿಗೆ ಸಂಗ್ರಹಿಸುವ ಗುರಿ ಹಾಕಿಕೊಳ್ಳಲಾಗಿದೆ. ಮತ್ತೊಂದೆಡೆ ಜುಲೈ 1 ರಿಂದ ಕೇಂದ್ರ ಸರ್ಕಾರ ಜಿಎಸ್‌ಟಿ ಪರಿಹಾರ ನೀಡುವುದಿಲ್ಲ. ಇದರಿಂದ ಸರ್ಕಾರದ ಮೇಲೆ 8,000 ಕೋಟಿ ರೂಪಯಿಗೂ ಹೆಚ್ಚು ಹೊರೆ ಬೀಳುತ್ತದೆ. ಇನ್ನು ರೂ.72 ಸಾವಿರ ಕೋಟಿ ಸಾಲ ಮಾಡುವ ಬಗ್ಗೆಯೂ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದು, ರಾಜ್ಯದ ಸಾಲ ರೂ.5 ಲಕ್ಷ ಕೋಟಿ ದಾಟುತ್ತಿದೆ. ಈ ಎಲ್ಲಾ ಅಂಶಗಳ ಬಗ್ಗೆ ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಸ್ತಾಪಿಸಿ, ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವುದು ಮತ್ತು ಇದಕ್ಕೆ ಕೃಷ್ಣ ಬೈರೇಗೌಡ ಕೂಡ ದನಿಗೂಡಿಸುವ ಬಗ್ಗೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿದು ಬಂದಿದೆ. ಅದೇ ರೀತಿ ಮೇಲ್ಮನೆಯಲ್ಲಿ ಬಿ.ಕೆ ಹರಿಪ್ರಸಾದ್, ಸಲೀಂ ಅಹಮದ್, ಪ್ರಕಾಶ್ ರಾಥೋಡ್ ಮತ್ತಿತರರು ಈ ವಿಚಾರವನ್ನು ಪ್ರಸ್ತಾಪಿಸಲಿದ್ದಾರೆ.

ಮುಂದಿನ ವರ್ಷ ವಿಧಾನಸಭೆ ಚುನವಣೆಯಲ್ಲಿ ಜನಪ್ರಿಯ ಬಜೆಟ್ ಮಂಡಿಸಿರುವ ಸರ್ಕಾರ, ಇದರಲ್ಲಿ ಪ್ರಸ್ತಾಪಿಸಿರುವ ಯೋಜನೆಗಳನ್ನೇ ಮುಂದಿಟ್ಟುಕೊಂಡು ಪ್ರತಿಪಕ್ಷಗಳಿಗೆ ತಿರುಗೇಟು ನೀಡಲು

ಆಡಳಿತಾರೂಢ ಬಿಜೆಪಿ ಸಿದ್ಧವಾಗಿದೆ. ಪ್ರತಿಪಕ್ಷಗಳು ಪ್ರಮುಖವಾಗಿ ಪ್ರಸ್ತಾಪಿಸಲಿರುವ ಮೇಕೆದಾಟು ಮತ್ತು ಮಹಾದಾಯಿ ಯೋಜನೆಗಳಿಗೆ ಬಜೆಟ್‌ನಲ್ಲಿ ತಲಾ ರೂ.1,000 ಕೋಟಿ ನಿಗದಿಪಡಿಸಲಾಗಿದೆ. ಮೇಲಾಗಿ ಯೋಜನೆಗಳನ್ನು ಆರಂಭಿಸುವ ಬಗ್ಗೆಯೂ ಹೇಳಿದೆ. ಈ ಎಲ್ಲ ವಿಚಾರಗಳೊಂದಿಗೆ ಪ್ರತಿಪಕ್ಷಗಳ ಏಟಿಗೆ ಪ್ರತಿಯೇಟು ನೀಡಲು ಮುಖ್ಯಮಂತ್ರಿ ಸೇರಿದಂತೆ ಸಂಪುಟ ಸದಸ್ಯರು ಸಿದ್ಧವಾಗಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ:07.03.2022.

73. ಡ್ರಗ್ಸ್ ಹಾವಳಿ: ಸದನದಲ್ಲಿ ಗಂಭೀರ ಚರ್ಚೆ

ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಮಾದಕ ಪದಾರ್ಥಗಳ ಹಾವಳಿ ಹೆಚ್ಚಾಗುತ್ತಿದ್ದು ವಿದ್ಯಾರ್ಥಿಗಳು, ಅಮಾಯಕರು ಬಲಿಯಾಗುತ್ತಿರುವುದರ ಬಗ್ಗೆ ಮೇಲ್ಮನೆಯಲ್ಲಿ ಗಂಭೀರ ಚರ್ಚೆ ನಡೆದು, ಡ್ರಗ್ಸ್ ಜಾಲವನ್ನು ಬೇರುಮಟ್ಟದಿಂದ ಮೂಲೋತ್ಪಾಟನೆ ಮಾಡಬೇಕು ಎಂದು ಪಕ್ಷಾತೀತ ಒಕ್ಕೋರಲ ಆಗ್ರಹ ಕೇಳಿ ಬಂತು.

ವಿದ್ಯಾರ್ಥಿಗಳು ಈ ಜಾಲಕ್ಕೆ ಬಲಿಯಾಗುವುದನ್ನು ತಡೆಯಲು ಪಠ್ಯಕ್ರಮದಲ್ಲಿ ನೈತಿಕ ಶಿಕ್ಷಣ ಅಳವಡಿಸಬೇಕು. ಪೊಲೀಸರಿಗೆ ಮುಕ್ತ ಅಧಿಕಾರ ನೀಡಬೇಕು. ಜನಪ್ರತಿನಿಧಿಗಳು ಬದ್ಧತೆ ತೋರಿಸಬೇಕು ಎಂಬ ಸಲಹೆಗಳ ಜೊತೆಗೆ ಡ್ರಗ್ಸ್ ಮಾಫಿಯಾದಲ್ಲಿ ತೊಡಗಿಸಿಕೊಂಡವರನ್ನು ಎನ್‌ಕೌಂಟರ್ ಮಾಡಬೇಕು ಎಂಬ ಸಲಹೆಯೂ ಕೇಳಿಬಂತು. ನಿಯಮ 330ರಡಿ ಬಿಜೆಪಿಯ ಶಶೀಲ್ ನಮೋಶಿ ಪ್ರಸ್ತಾಪಿಸಿದ ವಿಷಯದ ಮೇಲೆ ಸುಧೀರ್ಘ ಚರ್ಚೆ ನಡೆಯಿತು. ಶಶೀಲ್ ಮಾತು ಆರಂಭಿಸಿ ಪಂಜಾಬ್ ಬಿಟ್ಟರೆ ಬೆಂಗಳೂರು ಕುಖ್ಯಾತಿ ಪಡೆದಿದೆ. ವಿದೇಶಿ ವಿದ್ಯಾರ್ಥಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ದೂರಿದರು.

ಕಾಂಗ್ರೆಸ್ ಸದಸ್ಯ ಎಸ್.ರವಿ ಮಾತನಾಡಿ, "ರಾಷ್ಟ್ರ ಮಟ್ಟದಲ್ಲಿ ಮಾದಕ ವಸ್ತುಗಳ ನಿಯಂತ್ರಣ ಘಟಕ'(ಎನ್‌ಸಿಬಿ) ರೀತಿಯಲ್ಲಿ ರಾಜ್ಯದಲ್ಲೂ ಎಸ್‌ಸಿಬಿ ರಚಿಸಬೇಕು. ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಪಠ್ಯಕ್ರಮ ಮೂಲಕ ತಿಳುವಳಿಕೆ ಮೂಡಿಸಬೇಕು. ಶಿಕ್ಷಣ, ಆರೋಗ್ಯ ಹಾಗೂ ಪೊಲೀಸ್ ಇಲಾಖೆಯ ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ನೈತಿಕ ಶಿಕ್ಷಣ ಕಡ್ಡಾಯ ಮಾಡಿ: ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಮಾದಕ ವಸ್ತುಗಳಿಗೆ ಶಾಲಾ ಮಕ್ಕಳು ಬಲಿಯಾಗುತ್ತಿದ್ದಾರೆ. ಈ ಬಗ್ಗೆ ಪ್ರತಿಬಾರಿ ಪಕ್ಷಾತೀತ ಚರ್ಚೆ ನಡೆಯುತ್ತದೆ. ಸರ್ಕಾರ ಒಂದು ಉತ್ತರ ಬೇಡ, ಪರಿಹಾರ ಬೇಕು. ಶಾಲಾ–ಕಾಲೇಜುಗಳಲ್ಲಿ ನೈತಿಕ ಶಿಕ್ಷಣ ತೆಗೆದುಹಾಕಿದ್ದರಿಂದ ಇಂದು ವಿದ್ಯಾರ್ಥಿಗಳು ಈ ರೀತಿಯ ದುಷ್ಟ ಚಟಗಳಿಗೆ ಬಲಿಯಾಗುತ್ತಿದ್ದಾರೆ.

ಅದಕ್ಕಾಗಿ ಶಾಲಾ–ಕಾಲೇಜುಗಳಲ್ಲಿ ನೈತಿಕ ಶಿಕ್ಷಣ ಕಡ್ಡಾಯಗೊಳಿಸಬೇಕು ಎಂದು ಆಗ್ರಹಿಸಿದರು ಇದಕ್ಕೆ ಕೆಲ ಸದಸ್ಯರು ಧ್ವನಿಗೂಡಿಸಿದರು. ಜ್ಯಾತ್ಯಾತೀತತೆಗೆ ಧಕ್ಕೆ ಬರುತ್ತದೆ ಎಂಬ ಕಾರಣಕ್ಕೆ ನೈತಿಕ ಶಿಕ್ಷಣ ಕೈ ಬಿಡಲಾಯಿತು ಎಂದು ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಬೇಸರ ಹೊರಹಾಕಿದರು.

ವಿದ್ಯಾರ್ಥಿಗಳನ್ನು ಡ್ರಗ್ಸ್ ಜಾಲಕ್ಕೆ ತಳ್ಳಿ ದೇಶದ ಭವಿಷ್ಯದ ಜೊತೆಗೆ ಚೆಲ್ಲಾಟವಾಡುತ್ತಿರುವ ಮಾದಕ ವಸ್ತು ಕಳ್ಳಸಾಗಾಣಿಕೆದಾರರನ್ನು ಗುಂಡಿಕ್ಕಿ ಸಾಯಿಸಬೇಕು. ಅದಕ್ಕಾಗಿ ಪೊಲೀಸ್ ಇಲಾಖೆಯಲ್ಲಿ ಒಂದು ಎನ್‌ಕೌಂಟರ್ ತಂಡ ರಚಿಸಬೇಕು. ಆಗ ಡ್ರೆಗ್ ಪೆಡ್ಲರ್‌ಗಳಿಗೆ ಭಯ ಬರುತ್ತದೆ ಎಂದು ಕಾಂಗ್ರೆಸ್ ಸದಸ್ಯ ಸಲೀಂ ಅಹ್ಮದ್ ಸಲಹೆ ನೀಡಿದರು. ಇದಕ್ಕೆ ತಮ್ಮ ಸಹಮತವಿದೆ ಎಂದು ಬಿಜೆಪಿ ಸದಸ್ಯ ಲೇಹರ್ ಸಿಂಗ್ ಹೇಳಿದರು. ಕಾನೂನಿನಲ್ಲಿ ಇದು ಸಾಧ್ಯವಿಲ್ಲ. ಎನ್‌ಕೌಂಟರ್ ಹೆಸರಲ್ಲಿ ಎಷ್ಟೊಂದು ಅಮಾಯಕರ ಪ್ರಾಣ ಕಳೆದುಕೊಂಡಿರುವುದನ್ನು ನಾವು ನೋಡಿದ್ದೇವೆ ಎಂದು ಪ್ರತಿಪಕ್ಷನಾಯಕ ಬಿ.ಕೆ.ಹರಿಪ್ರಸಾದ್ ಹೇಳಿದರು.

ಬಿಜೆಪಿಯ ಎಸ್.ವಿ.ಸಂಕನೂರು, ಅರುಣಶಹಾಪುರ, ಲೇಹರಸಿಂಗ್, ಆಯನೂರು ಮಂಜುನಾಥ್, ವೈ.ಎ.ನಾರಾಯಣಸ್ವಾಮಿ, ಅ.ದೇವೇಗೌಡ, ಚಿದಾನಂದ ಚರ್ಚೆಯಲ್ಲಿ ಪಾಲ್ಗೊಂಡರು.

ಡ್ರಗ್ಸ್ ವಿಚಾರದಲ್ಲಿ ಯಾರನ್ನು ಬಿಡುವುದಿಲ್ಲ: ಚರ್ಚೆಗೆ ಉತ್ತರಿಸಿದ ಗೃಹ ಸಚಿವ ಅರಗ ಜ್ಞಾನೇಂದ್ರ, ಡ್ರಗ್ಸ್ ಮಾಫಿಯಾ ವಿರುದ್ಧ 'ಶೂನ್ಯ ಸಹನೆ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅದಕ್ಕೆ ಗೃಹ ಇಲಾಖೆ ಬದ್ಧವಾಗಿದ್ದು. ಈ ವಿಚಾರದಲ್ಲಿ ಯಾರನ್ನೂ ಬಿಡುವುದಿಲ್ಲ. ಯಾವುದನ್ನು ಸಹಿಸಿಕೊಳ್ಳುವುದಿಲ್ಲ ಈ ಚರ್ಚೆ ಅರಣ್ಯರೋಧನ ಆಗಬಾರದು. ಇದರ ಮೂಲಕ ಪೊಲೀಸ್ ವ್ಯವಸ್ಥೆ ಹಾಗೂ ಸಮಾಜಕ್ಕೆ ಸದನದ ಮೂಲಕ ಸಂದೇಶ ಹೋಗಬೇಕು. ಹೊಸ ಕಾನೂನು ತರುವ ಬದಲು ಇರುವ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಡ್ರಗ್ಸ್ ಮಾಫಿಯಕ್ಕೆ ಕಡಿವಾಣ ಹಾಕಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ರಾಜೀನಾಮೆ ಕೊಟ್ಟು ಹೋಗುತ್ತೇನೆ: ಮಾದಕ ವಸ್ತುಗಳ ಮಾರಟ ಜಾಲಕ್ಕೆ ಕಡಿವಾಣ ಹಾಕಲು ರಾಜಕೀಯ ನಾಯಕರ ಬಳಿ ಪರಿಹಾರವಿದೆ. ಏನು ನಡೆಯುತ್ತಿದೆ. ಎಲ್ಲಿ ಮತ್ತು ಹೇಗೆ ನಡೆಯುತ್ತಿದೆ. ಯಾರೆಲ್ಲ ಇದ್ದಾರೆ, ಎಲ್ಲಾ ಮಾಹಿತಿ ರಾಜಕೀಯ ನಾಯಕರಿಗೆ ಇರುತ್ತದೆ. ನಮ್ಮ ಕ್ಷೇತ್ರಗಳಲ್ಲಿ ಇದಕ್ಕೆ ಅವಕಾಶ ನೀಡುವುದಿಲ್ಲ ಎಂದು ಮನಸ್ಸು ಮಾಡಿದರೆ ಒಂದು ದಿನದಲ್ಲಿ ಇದಕ್ಕೆ ಕಡಿವಾಣ ಬೀಳಲಿದೆ. ಇಂತಹ ತೀರ್ಮಾನ ನಾವೆಲ್ಲ ರಾಜಕೀಯ ನಾಯಕರು ತೆಗೆದು ಕೊಂಡರೆ ಈ ಡ್ರಗ್ಸ್ ಹಾವಳಿಗೆ ಕೊನೆ ಬೀಳಲಿದೆ. ಹಾಗೆ ಆಗಿಲ್ಲ ಎಂದಾದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರ ನಡೆಯುತ್ತೇನೆ ಎಂದು ಮೇಲ್ಮನೆ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ:08.03.2022.

74. ಎತ್ತಿನಹೊಳೆ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಬದ್ಧ

ಬರಪೀಡಿತ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಸೇರಿ ಏಳು ಜಿಲ್ಲೆಗಳ ಕುಡಿಯುವ ನೀರಿನ ದಾಹ ತಣಿಸಲು ಉದ್ದೇಶಿತ ಎತ್ತಿನಹೊಳೆ ಯೋಜನೆ ಜಾರಿಗೆ ಸರ್ಕಾರ ಬದ್ಧವಾಗಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ವಾಗ್ದಾನವಿತ್ತರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ರಾಜೇಂದ್ರ ರಾಜಣ್ಣ ಈ ವಿಷಯದತ್ತ ಗಮನಸೆಳೆದು, ದಶಕದಿಂದ ಯೋಜನೆ ತೆವಳುತ್ತ ಸಾಗಿದೆ. ಅಂದಾಜಿಸಿದ ಮೊತ್ತ ರೂ.12,912.36 ಕೋಟಿಗಳಿಂದ ರೂ.23,251 ಕೋಟಿ ಗಳಿಗೆ ಏರಿದೆ. ಕಳೆದ 7–8 ತಿಂಗಳಿಂದ ಕಾಮಗಾರಿ ಸ್ಥಗಿತವಾಗಿದೆ ಎಂಬ ಕಳವಳ ತೋಡಿಕೊಂಡರು. ಕಾಂಗ್ರೆಸ್ ಮತ್ತೊಬ್ಬ ಸದಸ್ಯ ಎಸ್.ರವಿ ಮಾತನಾಡಿ, ಸದಾನಂದಗೌಡರ ಕಾಲಕ್ಕೆ ಯೋಜನೆ ಮಂಜೂರಾದರೂ ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ ಹಣ ಬಿಡುಗಡೆಯಾಯಿತು. ಭೂ ಪರಿಹಾರ ಸಮಸ್ಯೆ ಬಗೆಹರಿಸುವಲ್ಲಿ ಸರ್ಕಾರದ ವೈಫಲ್ಯದಿಂದ ಯೋಜನೆ ನೆನೆಗುದಿಗೆ ಬಿದ್ದಿದೆ ಎಂದು ಆರೋಪಿಸಿದರು. ಕಾರಜೋಳ ಪ್ರತಿಕ್ರಯಿಸಿ, ಯೋಜನೆಗೆ ಒಟ್ಟು 12,857 ಎಕರೆ ಜಮೀನು ಅಗತ್ಯವಿದೆ. ಇದರಲ್ಲಿ ಖಾಸಗಿ–11,745, ಅರಣ್ಯ–118 ಮತ್ತು ಸರ್ಕಾರಿ–992 ಎಕರೆ ಸೇರಿದೆ. ಒಟ್ಟು ಸ್ವಾಧೀನ ಉದ್ದೇಶಿತ ಜಮೀನಿನಲ್ಲಿ 5,078 ಎಕರೆ ಭೈರಗೊಂಡ್ಲು ಜಲಾಶಯ ನಿರ್ಮಾಣಕ್ಕೆ ಬೇಕಾಗಿದೆ. ಈಗಾಗಲೇ 1,421 ಎಕರೆ ಸ್ವಾಧೀನಕ್ಕೆ ಆದೇಶ ಹೊರಡಿಸಲಾಗಿದೆ 397 ಎಕರೆ ನೇರವಾಗಿ ಖರೀದಿಸಿ ರೈತರಿಗೆ ರೂ.443 ಕೋಟಿ ಪಾವತಿಸಲಾಗಿದೆ. ಕೊರಟಗೆರೆ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಭೂ ಪರಿಹಾರ ಮೊತ್ತದ ಸಮಸ್ಯೆಯಿಂದ ವಿಳಂಬವಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಡಿಸಿಎಂ ಆಗಿದ್ದ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಬೆಲೆ ನಿಗದಿ ಸಮಿತಿ ರಚಿಸಿದ್ದರು ಬಿಕ್ಕಟ್ಟು ಬಗೆಹರಿಸಲಾಗಲಿಲ್ಲ ಎಂದು ಕಾರಜೋಳ ಕುಟುಕಿದರು. ನಿಯಮಗಳಂತೆ ಪರಿಹಾರ ನೀಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಎಕರೆಗೆ ಒಂದೂವರೆ ಕೋಟಿಯಿದೆ

ಅದೇ ಮೊತ್ತ ಇಡೀ ರಾಜ್ಯಕ್ಕೆ ಅನ್ವಯಿಸಲಾಗದು. ಕೇಂದ್ರದ 2013ರ ಭೂಸ್ವಾಧೀನ ಕಾಯ್ದೆ ಪ್ರಕಾರ, ಪ್ರತಿ ಹಳ್ಳಿಗೆ ನಿಗದಿ ಮಾರ್ಗಸೂಚಿ ಬೆಲೆಯ ನಾಲ್ಕು ಪಟ್ಟು ಪರಿಹಾರ ಪಾವತಿಸಲು ಸರ್ಕಾರ ಸಿದ್ಧವಿದೆ ಎಂದು ಹೇಳಿದರು.

ಕಾರಜೋಳ ಉತ್ತರಿಸುವ ವೇಳೆ ಎಸ್.ರವಿ ಮಧ್ಯೆ ಪ್ರವೇಶಿಸಿ, ಮಹತ್ವ ಯೋಜನೆಯು ನಿರ್ಲಕ್ಷ್ಯಕ್ಕೆ ಒಳಗಾಗಿದೆ, ಸರ್ಕಾರಕ್ಕೆ ಬದ್ಧತೆ ಇಲ್ಲವೆಂದು ತಿವಿದರು. ಈ ಕಾರಣಕ್ಕಾಗಿಯೇ 2022–23ನೇ ಸಾಲಿನ ಬಜೆಟ್‌ನಲ್ಲಿ ರೂ.3,000 ಕೋಟಿ ಮೀಸಲಿಟ್ಟಿದೆ ಎಂದು ಕಾರಜೋಳ ತಿರುಗೇಟು ನೀಡಿದಾಗ ಆಡಳಿತ ಪಕ್ಷದ ಸದಸ್ಯರು ಮೇಜುಕುಟ್ಟಿ ಬೆಂಬಲಿಸಿದರು. ಕಾಮಗಾರಿ ಖುದ್ದು ಪರಿಶೀಲಿಸಿದ್ದು, ಪ್ರಗತಿಗೆ ಎದುರಾಗಿದ್ದ ಅನೇಕ ಅಡಚಣೆಗಳನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಲಾಗಿದೆ. ಏಳು ಜಿಲ್ಲೆಗಳ ಕುಡಿಯುವ ನೀರು ಪೂರೈಸುವ ಯೋಜನೆ ಕಾಮಗಾರಿ ವೇಗ ಹೆಚ್ಚಿಸಲಾಗುವುದು ಎಂದು ರಾಜೇಂದ್ರ ರಾಜಣ್ಣ ಅವರಿಗೆ ಕಾರಜೋಳ ಭರವಸೆ ನೀಡಿದರು. ತಾಂತ್ರಿಕವಾಗಿ ಅಧ್ಯಯನ ನಡೆಸಿದ ಬಳಿಕವೇ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯ ಎರಡು ಟಿಎಂಸಿ ಅಡಿಗೆ ಇಳಿಸಿದ್ದರೂ, ಮೂಲ ಯೋಜನೆ ಪ್ರಕರ 10 ಟಿಎಂಸಿ ಅಡಿ ನೀರು ಪೂರೈಸಲಿದ್ದು, ಆತಂಕ ಬೇಡವೆಂದು ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ, ಗೋವಿಂದರಾಜು ಅವರಿಗೆ ಅಭಯ ನೀಡಿದರು.

ಆಧಾರ: ವಿಜಯವಾಣಿ, ದಿನಾಂಕ:08.03.2022.

75. ವಿಧಾನ ಮಂಡಲ ಅಧಿವೇಶನ ಇಂದು ಪುನಾರಂಭ

ಮುಂದೂಡಿದ ವಿಧಾನಮಂಡಲ ಅಧಿವೇಶನ ಪುನಾರಂಭವಾಗಲಿದ್ದು, ಪ್ರತಿಪಕ್ಷಗಳ ಸಾವಲಿಗೆ ಆಡಳಿತ ಪಕ್ಷ ಜವಾಬು ನೀಡುವ ವೇದಿಕೆ ಸಜ್ಜಾಗಿದೆ. 'ಮೇಕೆದಾಟು ಪಾದಯಾತ್ರೆ' ಯಶಸ್ಸುಗೊಳಿಸಿದ ಹುರುಪಿನೊಂದಿಗೆ ಪ್ರತಿಪಕ್ಷ ಕಾಂಗ್ರೆಸ್ ತೊಡೆ ತಟ್ಟಲು ತಯಾರಾಗಿದ್ದರೆ, ಜೆಡಿಎಸ್ ಕೂಡ ತನ್ನ ಬತ್ತಳಿಕೆಯಲ್ಲಿರುವ ಹಲವು ಅಸ್ತ್ರಗಳನ್ನು ಪ್ರಯೋಗಿಸಲು ತುದಿಗಾಲ ಮೇಲೆ ನಿಂತಿದೆ. ಜನರ ನಿರೀಕ್ಷೆಗಳ ಭಾರ ಹೊತ್ತ ಬಜೆಟ್ ಮಂಡಿಸುವ ಮುಖೇನ ಆಡಳಿತ ರೂಢ ಬಿಜೆಪಿ ತಕ್ಕ ಉತ್ತರ ನೀಡಲು ಸನ್ನದ್ಧವಾಗಿದೆ. ಹೀಗಾಗಿ ಮಾರ್ಚ್ ಅಂತ್ಯದವರೆಗೂ 'ರಾಜಕೀಯ ಶಕ್ತಿ ಸೌಧ" ರಾಜ್ಯದ ಗಮನ ಹಿಡಿದಿಡಲಿವೆ.

ಅಪೇಕ್ಷೆಗೆ ಸ್ಪಂದನೆ: ಮುಂದುವರಿದ ಅಧಿವೇಶನ ಮಾರ್ಚ್ 4 ರಿಂದ 30ರವರೆಗೆ ನಿಗದಿಯಾಗಿದೆ. ಶನಿವಾರ ಮತ್ತು ಭಾನುವಾರದ ರಜಾ ದಿನಗಳನ್ನು ಹೊರತುಪಡಿಸಿದರೆ, 19 ದಿನಗಳ ಕಾಲ ಕಲಾಪ ನಡೆಯಲಿದೆ. ಪ್ರತಿಪಕ್ಷ, ಆಡಳಿತ ಪಕ್ಷಗಳ ಸದಸ್ಯರ ಅಪೇಕ್ಷೆಗೆ ಸರ್ಕಾರ ಸ್ಪಂದಿಸಿ, ಈ ಅವಧಿ ನಿಗದಿಪಡಿಸಿದೆ. ಅದೇ ಕಾಲಕ್ಕೆ 'ವಿವಾದಾತ್ಮಕ ಹೇಳಿಕೆ' ಗೆ ಕಾರ್ಯಕಲಾಪ ಬಲಿಯಾಗದಿರಲೆಂಬ ಕಳಕಳಿಯೂ ವ್ಯಕ್ತವಾಗಿದೆ. ಸತತ ಮೂರು ವರ್ಷಗಳ ಕಾಲ ಕಾಡಿದ ಕರೋನಾ ಪಿಡುಗಿನಿಂದ ಸಂವಿಧಾನಾತ್ಮಕ ಕರ್ತವ್ಯ ನಿಭಾಯಿಸುವುದಕ್ಕೆ ಸೀಮಿತವಾಗಿ ಅಧಿವೇಶನದ ಅವಧಿ ಗೊತ್ತುಪಡಿಸಲಾಗಿತ್ತು. ಪ್ರಶ್ನೋತ್ತರ ಜೊತೆಗೆ ಸಾರ್ವಜನಿಕ ಮಹತ್ವದ ವಿಷಯಗಳ ಚರ್ಚೆಗೆ ಕಾಲಾವಕಾಶ ಸಾಲದು ಎಂಬ ಕೊರಗಿನ ನಡುವೆಯೂ ಸರ್ಕಾರ ಕರೋನಾ ನಿಯಂತ್ರಣಕ್ಕೆ ಕಟ್ಟುಬಿದ್ದಿತ್ತು. ಕನಿಷ್ಠ 20 ದಿನಗಳ ಕಾಲ ಅಧಿವೇಶನ ನಡೆಸಬೇಕು ಎಂದು ಬೆಳಗಾವಿ ಅಧಿವೇಶನದಲ್ಲಿ ಪ್ರತಿಪಕ್ಷಗಳು ಒತ್ತಾಯಿಸಿದರೆ, ಆಡಳಿತ ಪಕ್ಷದವರೂ ಧ್ವನಿಗೂಡಿಸಿದ್ದರು. ಈ ಬೇಡಿಕೆಗೆ ಮುಖ್ಯಮಂತ್ರಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಆದರೆ ಮೂರನೇ ಅಲೆ ವಕ್ಕರಿಸಿದ ಕಾರಣ ಜನವರಿಯಲ್ಲಿ ಜಂಟಿ ಅಧಿವೇಶನ ಸಾಧ್ಯವಾಗಲಿಲ್ಲ. ವರ್ಷಾರಂಭದ ಮೊದಲ ಅಧಿವೇಶನ ಫೆಬ್ರವರಿ 14 ರಿಂದ 21 ರವರೆಗೆ ನಿಗಿದಿಯಾಗಿತ್ತು. ರಾಜ್ಯಪಾಲರ ಭಾಷಣ, ಅಗಲಿದ ಗಣ್ಯರಿಗೆ ಸಂತಾಪ ನಂತರ ಒಂದು ದಿನದ ಮಟ್ಟಿಗೆ ಚರ್ಚೆ ನಡೆಯಿತಷ್ಟೇ. ಸಚಿವ ಕೆ.ಎಸ್.ಈಶ್ವರಪ್ಪ ರಾಜೀನಾಮೆಗೆ ಪಟ್ಟು ಹಿಡಿದು ಪ್ರತಿಪಕ್ಷ ಕಾಂಗ್ರೆಸ್ ಹಗಲಿರುಳು ಧರಣಿ, ರಾಜೀನಾಮೆ

ಪಡೆಯುವ ಪ್ರಶ್ನೆಯೇ ಇಲ್ಲವೆಂಬ ಸರ್ಕಾರದ ಬಿಗಿ ನಿಲುವಿನಿಂದ ಉಳಿದ ದಿನಗಳ ಸದನ 'ಧ್ವಜ' ಕದನಕ್ಕೆ ಆಹುತಿಯಾಯಿತು. ಕಾಂಗ್ರೆಸ್ ಹಾಗೂ ಬಿಜೆಪಿ ತಂತಮ್ಮ ನಿರ್ಧಾರಕ್ಕೆ ಅಂಟಿಕೊಂಡ ಕಾರಣ ರಾಜೀ ಸಂಧಾನದ ಪ್ರಯತ್ನಗಳು ಫಲಿಸಲಿಲ್ಲ, ಫೆಬ್ರವರಿ 14 ರಿಂದ 25 ರವರೆಗೆ ನಿಗಿದಿಯಾಗಿದ್ದ ಅಧಿವೇಶನ ಫೆಬ್ರವರಿ 22ರಂದೇ ಮುಂದೂಡಿಕೆಯಾಯಿತು. ಮಾತಿನ ಚಕಮಕಿ, ಗದ್ದಲ ಮಧ್ಯೆ ನಡೆದ ಐದು ದಿನಗಳ ಅಧಿವೇಶನದಲ್ಲಿ ಮಹತ್ವದ ಮಸೂದೆಗಳು ಯಾವುದೇ ಚರ್ಚೆಯಿಲ್ಲದೆ ಅಂಗೀಕಾರವಾದದ್ದು ಗಮನಾರ್ಹ. ಈ ಪರಿಸ್ಥಿತಿಗೆ ಆಡಳಿತ–ಪ್ರತಿಪಕ್ಷಗಳ ಆರೋಪ–ಪ್ರತ್ಯಾರೋಪಗಳು ಏನೇ ಇರಲಿ. ಸದನದ ಸಮಯ ಹಾಗೂ ಸಾರ್ವಜನಿಕರ ತೆರಿಗೆ ಹಣವಂತೂ ವ್ಯರ್ಥ ಪೋಲಾಯಿತು.

ಆಧಾರ: ವಿಜಯವಾಣಿ, ದಿನಾಂಕ:04.03.2022.

76. ಮನಮಿಡಿದು ಮನಿ.....

ಕಳೆದು ಎರಡು ವರ್ಷಗಳ ಪರಿಸ್ಥಿತಿ ಗಮನಿಸಿದರೆ, ಯಾವುದೇ ತೆರಿಗೆ ವಿಧಿಸದೇ ಬಜೆಟ್ ನಿರ್ವಹಣೆ ಸಾಕಷ್ಟು ಸವಾಲಾಗಿತ್ತು. ಎಲ್ಲ ವಲಯಗಳನ್ನು ಗಮನದಲ್ಲಿಟ್ಟುಕೊಂಡು ಈ ಬಜೆಟ್ ಮಂಡನೆ ಮಾಡಿದ್ದೇನೆ. ಚೊಚ್ಚಲ ಬಜೆಟ್ ಕುರಿತಂತೆ ಮುಖ್ಯಮಂತ್ರಿ ಬೊಮ್ಮಾಯಿ ಅವರ ಅಂತರಾಳದ ಮಾತು.

ಈ ಬಜೆಟ್‌ನ್ನು ನೀವು ಗಮನಿಸಿ, ಇದೊಂದು ಸೂಕ್ಷ್ಮಮತಿಯ ಬಜೆಟ್ ಆಗಿದೆ. ರಾಜ್ಯದಲ್ಲಿ ಅರಣ್ಯ ಮತ್ತು ಪರಿಸರದ ನಾಶದಿಂದ ಆಗುವ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಸಿದ್ದಗೊಳಿಸಲಾಗಿದೆ. ನಾವು ಹೆಚ್ಚಾಗಿ ಈ ಬಜೆಟ್‌ನಲ್ಲಿ ಅತ್ಯಂತ ಸಂಕಷ್ಟದಲ್ಲಿರುವ ವರ್ಗಗಳಿಗೆ ಹೆಚ್ಚಿನ ಪ್ರಾಧ್ಯಾನ್ಯತೆ ನೀಡಿದ್ದೇವೆ. ಎಷ್ಟೋ ಜನರು ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಅವರಿಗೆ ಕಿಮೋ ಥೆರಪಿ ಮಾಡಿಸಿಕೊಳ್ಳುವುದು, ಕಿಡ್ನಿ ಪೇಶೆಂಟ್‌ಗಳಿಗೆ ಡಯಾಲಿಸಿಸ್ ಮಾಡಿಸಿಕೊಳ್ಳುವುದು ಎಷ್ಟು ಕಷ್ಟ ಅಂತ ರೋಗಿಗಳು ಇರುವವರ ಮನೆಯವರಿಗೆ ಗೊತ್ತಿದೆ. 60 ವರ್ಷ ಮೇಲ್ಪಟ್ಟ ವೃದ್ಧರಿಗೆ ಕಣ್ಣು ಕಾಣೋದಿಲ್ಲ, ಮಂಜು ಮಂಜಾಗಿ ಕಂಡರೂ ಕನ್ನಡಕ ತೆಗೆದುಕೊಳ್ಳಲಿಕೆ ಆಗೋದಿಲ್ಲ ಅಂತವರಿಗೆ ಸರ್ಕಾರದಿಂದಲೇ ಕಣ್ಣಿನ ತಪಾಸಣೆ, ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿ, ಕನ್ನಡಕ ನೀಡುವ ಯೋಜನೆ ಹಾಕಿಕೊಂಡಿದ್ದೇವೆ.

ಕೆಲವರು ಹುಟ್ಟುವಾಗಲೇ ಕಿವುಡರಾಗಿರುತ್ತಾರೆ ಅಂತವರಿಗೆ ಕಿವಿ ಕೇಳಿಸಲು ಬಳಸುವ ಮಷಿನ್ ಖರೀದಿ ಮಾಡುವ ಆರ್ಥಿಕ ಶಕ್ತಿ ಇರೋದಿಲ್ಲ. ಅದಕ್ಕೆ ಸುಮಾರು ರೂ.5 ಲಕ್ಷ ವೆಚ್ಚ ಆಗುತ್ತದೆ. ಅಂತಹ ಬಡ ಮಕ್ಕಳಿಗೆ ಪ್ರಾಯೋಗಿಕವಾಗಿ 500 ಕಿವುಡ ಮಕ್ಕಳಿಗೆ ಕಾಂಕ್ಲಿಯರ್ ಮಷಿನ್ ಕೊಡ್ಲಿಕ್ಕೆ ತೀರ್ಮಾನ ಮಾಡಿದ್ದೇವೆ. ಪೌರ ಕಾರ್ಮಿಕರು ಎಷ್ಟು ಕಷ್ಟಪಡುತ್ತಾರೆ ಎನ್ನುವುದು ನಮಗೆ ನಿಮಗೆಲ್ಲ ಗೊತ್ತು. ಅವರ ಸೇವೆಗೆ ಗೌರವ ಕೊಡ್ಲಿಕೆ ಅವರ ಗೌರವ ಧನ ಹೆಚ್ಚಳ ಮಾಡಿದ್ದೇವೆ. ಇನ್ನೂ ಹಳೆಯ ಪೈಲ್ವಾನರಿದ್ದಾರೆ. ಅವರಿಗೆ ಸರ್ಕಾರ ಕೊಡೊ ಸಹಾಯಧನ ಸಾಲ್ತಿಲ್ಲ ಅಂತ ಕೇಳಿಕೊಂಡಿದ್ದರು. ಅಂತ ಪೈಲ್ವಾನರಿಗೆ ಗೌರವ ಧನ ಹೆಚ್ಚಳ ಮಾಡಿದ್ದೇವೆ.

ಟ್ಯಾಕ್ಸಿ ಆಟೋ ಓಡಿಸೋ ಯಲ್ಲೋ ಬೋರ್ಡ್ ಚಾಲಕರದ್ದು ಒಂದು ಬೇಡಿಕೆ ಇತ್ತು. ಅವರಿಗೂ ಒಂದು ವಿಶೇಷ ಯೋಜನೆ ಘೋಷಣೆ ಮಾಡಬೇಕು ಅಂತ ಕೇಳಿಕೊಂಡಿದ್ದರು. ಅವರೂ ಕೂಡ ಸಾಕಷ್ಟು ಸಮಸ್ಯೆಯಲ್ಲಿರುವ ವರ್ಗ, ಅವರಿಗಾಗಿ ಯೋಜನೆಯನ್ನು ಘೋಷಣೆ ಮಾಡಿದ್ದೇವೆ.

ಗ್ರಾಮೀಣ ಪ್ರದೇಶದಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಎಷ್ಟು ಕಷ್ಟ ಪಡುತ್ತಾರೆ ಎನ್ನುವುದು ಗೊತ್ತು. ಗ್ರಾಮ ಸಹಾಯಕರು ಇವರೆಲ್ಲ ಸಂಕಷ್ಟದಲ್ಲಿರುವವರು ಅವರ ಜೀವನ ಮಟ್ಟ ಸುಧಾರಿಸಲಿಕ್ಕೆ ಗೌರವ ಧನ ಹೆಚ್ಚಳ ಮಾಡುವ ಕೆಲಸ ಮಾಡಿದ್ದೇವೆ. ಈ ಬಜೆಟ್‌ನ ತಿರುಳು ಗಮನಿಸಿ ಇದು ಅತ್ಯಂತ ಸೂಕ್ಷ್ಮ ಮತಿಯ ಬಜೆಟ್ ಇದಾಗಿದೆ. ಇದು ಅತ್ಯಂತ ಮಾನವೀಯತೆಯಿಂದ ಕೂಡಿರುವ ಬಜೆಟ್ ಆಗಿದೆ. ಕೋವಿಡ್‌ನಿಂದಾಗಿ ಎರಡು ವರ್ಷ ಆದಾಯದಲ್ಲಿ ಕೊರತೆಯಾಗಿದ್ದರೂ, ನಾವು ಪಾಲನೆ ಮಾಡಿಕೊಂಡು ಬಂದಿರುವ ಆರ್ಥಿಕ ಶಿಸ್ತಿನಿಂದಾಗಿ ಯಾವುದೇ ಟ್ಯಾಕ್ಸ್ ಹೊರೆ ಇಲ್ಲದೆ, ಉತ್ತಮ ಬಜೆಟ್ ಮಂಡಿಸಲು ಸಾಧ್ಯವಾಗಿದೆ.

ನಾವು ಬಜೆಟ್‌ನಲ್ಲಿ ಕೃಷಿ, ಸೇವಾವಲಯ ಮತ್ತು ಕೈಗಾರಿಕಾ ಮೂರು ವರ್ಗಗಳಿಗೂ ಆದ್ಯತೆ ನೀಡಿದ್ದೇವೆ. ಪ್ರಮುಖವಾಗಿ ನಮ್ಮ ರೈತರ ಬಹಳ ದಿನಗಳ ಬೇಡಿಕೆ ಯಶಸ್ವಿನಿ ಯೋಜನೆ ಜಾರಿಗೊಳಿಸಬೇಕೆಂದು ಕೇಳುತ್ತಿದ್ದರು. ನಾವು ಎಲ್ಲಿಗೆ ಹೋದರೂ, ಯಶಸ್ವಿನಿ ಯೋಜನೆ ಜಾರಿಗೊಳಿಸುವಂತೆ ಕೇಳುತ್ತಿದ್ದರು. ಅವರ ಮನವಿ ಪರಿಗಣಿಸಿದ್ದೇವೆ.

ಈ ವರ್ಷ ಮೋಟಾರು ವಾಹನ ತೆರಿಗೆ ಹೊರತು ಪಡಿಸದ್ರೆ ಉಳಿದ ಆದಾಯ ಹೆಚ್ಚಾಗುತ್ತೆ ಸೋರಿಕೆ, ಅಕ್ರಮ ಮದ್ಯ ಸರಬರಾಜು ತಡೆದ್ರೆ ಅಬಕಾರಿ ತೆರಿಗೆ ಹೆಚ್ಚಾಗುತ್ತೆ. ಜೆಎಸ್‌ಟಿ ಈ ವರ್ಷದಿಂದ ಬರುವುದು ಅನುಮಾನ ಇದೆ. ಆದರೂ ಜೂನ್‌ವರೆಗೂ ಟೈಮ್ ಇದೆ ನೋಡೋಣ. ಇನ್ನೊಂದು ಮೂರು ವರ್ಷ ಮುಂದುವರೆಸಿ ಅಂತ ಕೇಂದ್ರ ಸರ್ಕಾರಕ್ಕೆ ಕೇಳಿದ್ದೇವೆ. ಅವರೇನು ಮಾಡ್ತಾರೆ ನೋಡಬೇಕು.

ನನಗೆ ಯಾವ ನೀರಾವರಿ ಯೋಜನೆಯ ಪರಿಸ್ಥಿತಿ ಏನು ಅಂತ ಗೊತ್ತಿದೆ. ಮೇಕೆದಾಟು ಯೋಜನೆಗೆ ಯಾವಾಗ ಅನುಮತಿ ಸಿಗುತ್ತೆ ಅನ್ನೋದು ಗೊತ್ತಿದೆ ಅದೇ ಕಾರಣಕ್ಕೆ ಈಗ 1000 ಕೋಟಿ ಮೀಸಲಿಟ್ಟಿದ್ದೇವೆ. ಕೃಷ್ಣಾ ಮಹಾದಾಯಿ, ಭದ್ರಾ ಮೇಲ್ದಂಡೆ, ತುಂಗಾಭದ್ರಾ ಎಲ್ಲ ಯೋಜನೆಗಳಿಗೂ ಹಣ ಮೀಸಲಿಟ್ಟಿದ್ದೇವೆ.

ಒಟ್ಟಾರೆ ನಮ್ಮದು ಎಲ್ಲ ವರ್ಗ ಮತ್ತು ಎಲ್ಲ ಪ್ರದೇಶಗಳ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಕೋನದಲ್ಲಿಟ್ಟು ಕೊಂಡು ಮಂಡಿಸಿರುವ ಬಜೆಟ್ ಇದಾಗಿದೆ.

2 ಗಂಟೆ 10 ನಿಮಿಷ: ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು 119 ಪುಟಗಳ ಬಜೆಟ್ ಮಂಡಿಸಲು 2 ಗಂಟೆ 10 ನಿಮಿಷ ತಗೆದುಕೊಂಡರು. 12.32 ನಿಮಿಷಕ್ಕೆ ಬಜೆಟ್ ಭಾಷಣ ಆರಂಭಿಸಿದ ಅವರು 2.42 ನಿಮಿಷಕ್ಕೆ ಪೂರ್ಣಗೊಳಿಸಿದರು. ಮುಖ್ಯಮಂತ್ರಿಯವರ ಕುಟುಂಬ ಸದಸ್ಯರು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಬೊಮ್ಮಾಯಿ ಅವರ ಚೊಚ್ಚಲ ಬಜೆಟ್ ಮಂಡನೆ ವೀಕ್ಷಿಸಿದರು.

ಆಧಾರ: ಉದಯವಾಣಿ, ದಿನಾಂಕ:05.03.2022.

77. ಬೊಮ್ಮಾಯಿ ತೃಪ್ತಿಕರ ಆಯ–ವ್ಯಯ

ಆಯವ್ಯಯದಲ್ಲಿ ಯಾವುದೇ ಹೊಸ ತೆರಿಗೆಗಳನ್ನು ಹಾಕದೆ, ಇರುವ ತೆರಿಗೆಗಳನ್ನು ಹೆಚ್ಚಳ ಮಾಡದೆ, ಇದು ಚುನವಣಾ ಬಜೆಟ್ ಎಂಬುದನ್ನು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿಯವರು ಸಾಬೀತುಪಡಿಸಿದ್ದಾರೆ.

ಆದರೆ, ರಾಜಸ್ವ ಸಂಗ್ರಹದಲ್ಲಿ ಕಳೆದ ವರ್ಷಕ್ಕಿಂತ ಸುಮಾರು ರೂ.8,334 ಕೋಟಿ ಹೆಚ್ಚುವರಿ ಸಂಗ್ರಹದ ಗುರಿ ನಿಗದಿಪಡಿಸಿದ್ದಾರೆ. ತೆರಿಗೆ ಸಂಗ್ರಹದಲ್ಲಿ ಸುಧಾರಣೆ ತರಲಾಗುವುದು ಎಂಬ ಹೇಳಿಕೆ ಹೊರತುಪಡಿಸಿ, ಬೇರಾವುದೇ ಕ್ರಮಗಳನ್ನು ಪ್ರಸ್ತಾಪಿಸಿಲ್ಲ. ಜುಲೈನಿಂದ ಸ್ಥಗಿತಗೊಳ್ಳಲಿರುವ ಕೇಂದ್ರದಿಂದ ಬರುವ ಜೆಎಸ್‌ಟಿ ಪರಿಹಾರ ಸ್ಥಗಿತಗೊಂಡ ಬಳಿಕ, ಆ ಮೊತ್ತವನ್ನು ಹೇಗೆ ಸಂಗ್ರಹಿಸಬೇಕು ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ. ಹೀಗಾಗಿ ತೆರಿಗೆ ಸಂಗ್ರಹ ಗುರಿ ಸಾಧಿಸವುದೇ ದೊಡ್ಡ ಸವಾಲು ಎನ್ನುವಂತಾಗಿದೆ.

ವಾಣಿಜ್ಯ ತೆರಿಗೆ ಮೂಲಕ 2021–22ನೇ ಸಾಲಿಗೆ ಜೆಎಸ್‌ಟಿ ಪರಿಹಾರ ಸೇರಿ ರೂ.76,437 ಕೋಟಿ ಗುರಿ ಇದ್ದರೆ, 2022–23ನೇ ಸಾಲಿನಲ್ಲಿ ಇದನ್ನು ರೂ.537 ಕೋಟಿ ನಷ್ಟು ಹೆಚ್ಚಿಸಿ ಒಟ್ಟು ರೂ.77,010 ಕೋಟಿ ಸಂಗ್ರಹಿಸುವ ಗುರಿ ನೀಡಲಾಗಿದೆ. ಮೇಲಾಗಿ ಕೇಂದ್ರದಿಂದ 7 ಸಾವಿರ ಕೋಟಿ ರೂಪಾಯಿಗೂ ಅಧಿಕ ಜೆಎಸ್‌ಟಿ ಪರಿಹಾರ ಸಿಗದೆ ಹೆಚ್ಚುವರಿ ತೆರಿಗೆ ಸಂಗ್ರಹಕ್ಕೆ ಯಾವುದೇ ಹೊಸ ದಾರಿ ಕಂಡುಹಿಡಿದಿಲ್ಲ. ಮತ್ತೊಂದೆಡೆ, ಕಳೆದ ವರ್ಷ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಾದಾಗ ಅದನ್ನು ನಿಯಂತ್ರಿಸಲು ಇವೆರಡರ ಮಾರಾಟ ದರವನ್ನು ರಾಜ್ಯ ಸರ್ಕಾರ ರೂ.7 ರಷ್ಟು ಕಡಿಮೆ ಮಾಡಿತ್ತು. ಅದನ್ನು ಹೆಚ್ಚಿಸುವ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪವಿಲ್ಲ.

ಅದೇ ರೀತಿ ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಮೂಲಕ 2021–22 ಗುರಿ ರೂ.12,105 ಕೋಟಿ ಬದಲಾಗಿ 2022–23ನೇ ಸಾಲಿಗೆ ರೂ.15 ಸಾವಿರ ಕೋಟಿ ಗುರಿ ನಿಗದಿಪಡಿಸಲಾಗಿದೆ. ಈ ಹೆಚ್ಚುವರಿ ರೂ.2,895 ಕೋಟಿ ಸಂಗ್ರಹಕ್ಕೂ ಹೊಸ ಮಾರ್ಗಗಳನ್ನು ತೋರಿಸಿಲ್ಲ.

ಇನ್ನೂ ಪ್ರಮುಖವಾಗಿ ಅಬಕಾರಿ ತೆರಿಗೆಯಲ್ಲಿ ರೂ.4,420 ಕೋಟಿ ಹೆಚ್ಚುವರಿ ಗುರಿ ನಿಗದಿಪಡಿಸಲಾಗಿದೆ. 2021–22ನೇ ಸಾಲಿನಲ್ಲಿ ರೂ.2,580 ಕೋಟಿ ಗುರಿ ಇದ್ದರೆ, 2022–23ನೇ ಸಾಲಿನಲ್ಲಿ ಏಕಾಏಕಿ ರೂ.29 ಸಾವಿರ ಗುರಿ ನಿಗದಿಪಡಿಸಲಾಗಿದೆ. ಪ್ರತಿ ವರ್ಷ ಅಬಕಾರಿ ತೆರಿಗೆ ಹೆಚ್ಚಿಸುತ್ತಾ ಬಂದಿದ್ದ ಸರ್ಕಾರ ಈ ಬಾರಿ ಅದನ್ನು ಕೂಡ ಹೆಚ್ಚು ಮಾಡಿಲ್ಲ. ಹೀಗಾಗಿ ಅಬಕಾರಿ ತೆರಿಗೆ ಗುರಿ ಸಂಗ್ರಹ ದೊಡ್ಡ ಸವಾಲಾಗಿದೆ.

ಉಳಿದಂತೆ ಸಾರಿಗೆ ತೆರಿಗೆಯಲ್ಲಿ 2021–22ನೇ ಸಾಲಿಗೆ ರೂ.7515 ಕೋಟಿ ಸಂಗ್ರಹದ ಗುರಿ ನಿಗದಿಪಡಿಸಲಾಗಿತ್ತು. ಕರೋನಾ ಕಾರಣದಿಂದ ಹಾಗೂ ಕೆಲವು ವಿನಾಯಿತಿಗಳನ್ನು ನೀಡಿದ್ದರಿಂದ 2021–22ನೇ ಸಾಲಿನ ಗುರಿ ತಲುಪಲು ಸಾಧ್ಯವಿಲ್ಲದಂತಾಗಿದೆ. ಹೀಗಿರುವಾಗ 2022–23ನೇ ಸಾಲಿಗೆ ಹೆಚ್ಚುವರಿ ರೂ.492 ಕೋಟಿ ಸಂಗ್ರಹ ಹೇಗೆ ಎಂಬುದಕ್ಕೂ ಬಜೆಟ್‌ನಲ್ಲಿ ಉತ್ತರ ಇಲ್ಲ.

ಯಾವುದರಿಂದ ಎಷ್ಟು ತೆರಿಗೆ ಸಂಗ್ರಹ:

- **ರೂ.77,010 ಕೋಟಿ ವಾಣಿಜ್ಯ ತೆರಿಗೆ.**
- **ರೂ.15,000 ಕೋಟಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ.**
- **ರೂ. 29,000 ಕೋಟಿ ಅಬಕಾರಿ ತೆರಿಗೆ.**
- **ರೂ.8,007 ಕೋಟಿ ಸಾರಿಗೆ ತೆರಿಗೆ.**

ಕೇಂದ್ರದಿಂದ ಅನುದಾನ ನಿರೀಕ್ಷೆ:

- **ರೂ.29,783 ಕೋಟಿ ತೆರಿಗೆ ಪಾಲಿನ ರೂಪದಲ್ಲಿ.**
- **ರೂ.17,281 ಕೋಟಿ ಸಹಾಯಾನುದಾನ.**
- **ಬಜೆಟ್ ಗಾತ್ರ : ರೂ.2,65,720 ಕೋಟಿ**
- **ಒಟ್ಟು ಸ್ವೀಕೃತಿ: ರೂ.2,61,977 ಕೋಟಿ**
- **ರಾಜಸ್ವ ಸ್ವೀಕೃತಿ: ರೂ.1,89,888 ಕೋಟಿ**
- **ಸಾಲ: ರೂ.72,000 ಕೋಟಿ**
- **ಇತರೆ ಸ್ವೀಕೃತಿ: ರೂ.89 ಕೋಟಿ**
- **ಬಜೆಟ್ ವೆಚ್ಚ: ರೂ.2,65,720 ಕೋಟಿ**
- **ರಾಜಸ್ವ ವೆಚ್ಚ: ರೂ.2,04,587 ಕೋಟಿ**
- **ಬಂಡವಾಳ ವೆಚ್ಚ: ರೂ.46,955 ಕೊಟಿ**
- **ಸಾಲ ಮರುಪಾವತಿ: ರೂ.1,179 ಕೋಟಿ**

ಆಧಾರ: ವಿಶ್ವ ವಾಣಿ, ದಿನಾಂಕ:05.03.2022.

78. ಮೌಲ್ಯಗಳ ಕುಸಿತಕ್ಕೆ ರಾಜಕಾರಣಿಗಳಷ್ಟೇ ಕಾರಣರಲ್ಲ: ಕಾಗೇರಿ

ಸಮಾಜದಲ್ಲಿನ ಮೌಲ್ಯಗಳ ಕುಸಿತಕ್ಕೆ ರಾಜಕಾರಣಿಗಳನ್ನು ಮಾತ್ರವೇ ದೂಷಿಸುವುದರಲ್ಲಿ ಅರ್ಥವಿಲ್ಲ. ಎಂದು ವಿಧಾನ ಸಭಾಧ್ಯಕ್ಷರಾಗಿರುವ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು. ಹೈಕೋರ್ಟ್ ಆವರಣದಲ್ಲಿ ವಕೀಲರ ಸಂಘ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಅಪಾಯಕಾರಿ ಪ್ರವೃತ್ತಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ವ್ಯಾಪಿಸಿದೆ. ಬರೀ ರಾಜಕಾರಣಿಗಳನ್ನು ದೂರುವುದು ಸರಿ ಅಲ್ಲ. ವಕೀಲರ ಸಾಮೂಹಿಕ ಧ್ವನಿ ದೃಢವಾಗಿ ಮತ್ತು ಶಕ್ತಿಯುತವಾಗಿದ್ದು, ಅದು ಸಮಾಜದಲ್ಲಿ ಸಕರಾತ್ಮಕ ಪರಿಣಾಮವನ್ನು ಬೀರಬಲ್ಲುದಾಗಿದೆ ಎಂದರು.

ಸಮಾಜದಲ್ಲಿನ ಮೌಲ್ಯಗಳ ಕುಸಿತಕ್ಕೆ ಸಂಬಂಧಿಸಿದಂತೆ ನಿಷ್ಠುರವಾದ ಉದಾಸೀತನತೆಯ ಧೋರಣೆ ನಿವಾರಣೆಯಾಗಬೇಕು ಎಂದ ಅವರು, ಸಮಾಜದಲ್ಲಿ ಮೌಲ್ಯಗಳ ಅಧಃಪತನದಿಂದ ವ್ಯವಸ್ಥೆ ಕುಸಿಯುವ ಅಪಾಯದಲ್ಲಿದ್ದು, ಈ ಪ್ರವೃತ್ತಿಯನ್ನು ತಡೆಯಲು ವಕೀಲರು ಸಕಾರಾತ್ಮಕ ಪಾತ್ರ ನಿರ್ವಹಿಸುವ ಕಾಲ ಕೂಡಿ ಬಂದಿದೆ ಎಂದರು.

ನಾನು 'ಒಂದು ರಾಷ್ಟ್ರ ಒಂದು ಚುನಾವಣೆ' ಮತ್ತು ಚುನಾವಣಾ ಸುಧಾರಣೆಗಳ ಅಗತ್ಯದ ವಿಚಾರದಲ್ಲಿ ಹೋರಾಡುತ್ತಿದ್ದೇನೆ. ನಾನು ಈ ಹೋರಾಟ ಮುಂದುವರಿಸುತ್ತೇನೆ. ಈ ಎರಡು ಪ್ರಮುಖ ವಿಷಯಗಳ ಬಗ್ಗೆ ಶಕ್ತಿಯುತ ಅಭಿಪ್ರಾಯವನ್ನು ರೂಪಿಸಲು ನ್ಯಾಯಾಂಗವು ಕೈಜೊಡಿಸಬೇಕು' ಎಂದು ಮನವಿ ಮಾಡಿದರು.

ಆಧಾರ: ವಿಶ್ವ ವಾಣಿ, ದಿನಾಂಕ:07.03.2022.

ದಿನಾಂಕ: 06.03.2022ರಂದು ಸನ್ಮಾನ್ಯ ಸಭಾಧ್ಯಕ್ಷರು ಬೆಂಗಳೂರಿನ ವಕೀಲರ ಸಂಘದಿಂದ ಆಯೋಜಿಸಲಾಗಿದ್ದ "ಕರ್ನಾಟಕ ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ವಕೀಲರ ಸಂಘಗಳ ಸಮ್ಮೇಳನ"ದ ಸಮಾವೇಶ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಚುನಾಯಿತ ಪದಾಧಿಕಾರಿಳನ್ನು ಉದ್ದೇಶಿಸಿ ಮಾತನಾಡಿ ಶುಭ ಹಾರೈಸಿದ ಸಂದರ್ಭ;

79. ಕೃಷಿಗೆ ಅರಣ್ಯ ಭೂಮಿ : ಸಕ್ರಮ

ಅರಣ್ಯ ಪ್ರದೇಶದಲ್ಲಿ ಕೃಷಿ ಉದ್ದೇಶಕ್ಕಾಗಿ ಒತ್ತುವರಿ ಮಾಡಿದ ಭೂಮಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆಯ 192 (ಎ)ಗೆ ಇದೇ ಅಧಿವೇಶನದಲ್ಲಿ ತಿದ್ದುಪಡಿ ಮಾಡುವುದಾಗಿ ಕಾನೂನು ಮತ್ತು ಸಂಸದಿಯ ಸಚಿವ ಜೆ.ಸಿ. ಮಾಧುಸ್ವಾಮಿ ಪ್ರಕಟಿಸಿದ್ದಾರೆ.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಎಚ್. ಕೆ. ಪಾಟೀಲ ಅವರು ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೇಲೂರಿನಲ್ಲಿ ಪಾರಂಪರಿಕ ಅರಣ್ಯವಾಸಿಗಳ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ದೌರ್ಜನ್ಯ ನಡೆಸಿ. ತೋಟವನ್ನು ನಾಶ ಮಾಡಿದ ಘಟನೆಯನ್ನು ಪ್ರಸ್ತಾಪಿಸಿದರು. ಇದಕ್ಕೆ ಉತ್ತರ ನೀಡಿದ ಮಾಧುಸ್ವಾಮಿ ಕಾಯ್ದೆಯ ಸೆಕ್ಷನ್ 192(ಎ) ಯಿಂದ ಸಮಸ್ಯೆ ಆಗುತ್ತಿದೆ. ಈ ಸಮಸ್ಯೆಯನ್ನು ಶಾಶ್ವತವಾಗಿ ಕೊನೆಗಾಣಿಸಲು ಕಾಯ್ದೆಗೆ ತಿದುಪಡಿ ಮಾಡುತ್ತೇವೆ ಎಂದು ಹೇಳಿದರು.

ಬೆಂಗಳೂರು ಸುತ್ತಮುತ್ತ ಭಾರಿ ಪ್ರಮಾಣದಲ್ಲಿ ಸರ್ಕಾರಿ ಜಮೀನು ಕಬಳಿಕೆ ಆಗಿದ್ದು, ಅವರ ಮೇಲೆ ಕಠಿಣ ಕ್ರಮ ಜರುಗಿಸಲು ಬೆಂಗಳೂರಿನಲ್ಲಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಗಾಗಿ ನಡೆದಿರುವ ಒತ್ತುವರಿ ಪ್ರಕರಣಗಳನ್ನೇ 'ಭೂಕಬಳಿಕೆ' ಎಂದು ವ್ಯಾಖ್ಯಾನಿಸಿ ಈ ನ್ಯಾಯಾಲಯದ ವ್ಯಾಪ್ತಿಗೆ ಎಳೆದು ತರಲಾಗುತ್ತಿದೆ. ಇದರಿಂದ ದೂರದ ಊರುಗಳಿಂದ ರೈತರು ಪ್ರತಿನಿತ್ಯವೂ ನ್ಯಾಯಾಲಯಕ್ಕೆ ಬರಬೇಕಾಗಿದೆ. 8–10 ಬ್ಯಾಚ್‌ಗಳಲ್ಲಿ 300 ರಿಂದ 400 ರೈತರು ಬಂದು ನಿಲ್ಲುವುದನ್ನು ನೋಡಿ ನಾಚಿಕೆ ಆಗುತ್ತದೆ. ಕಾಯ್ದೆಯಲ್ಲಿ ಭೂ ಒತ್ತುವರಿ ಎಂಬುದರ ಬದಲಿಗೆ ಭೂಕಬಳಿಕೆ ಎಂಬ ಪದ ಬಳಸಲಾಗಿದೆ. ಇದರಿಂದ ಸಮಸ್ಯೆ ಸೃಷ್ಟಿಯಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ವಿಷಯ ಪ್ರಸ್ತಾಪಿಸಿದ ಎಚ್.ಕೆ. ಪಾಟೀಲ, ಅರಣ್ಯ ಇಲಾಖೆ ಸಿಬ್ಬಂದಿಯ ಕಿರುಕುಳದಿಂದ ಬೇಸತ್ತು ಇಬ್ಬರು ಮಹಿಳೆಯರು ವಿಷ ಸೇವಿಸಿದ್ದು, ಅದರಲ್ಲಿ ಒಬ್ಬ ಮಹಿಳೆ ಮೃತಪಟ್ಟಿದ್ದಾರೆ. ಇನ್ನೊಬ್ಬ ಮಹಿಳೆಯ ಸ್ಥಿತಿ ಗಂಭೀರವಾಗಿದೆ. ಹತ್ತಾರು ವರ್ಷಗಳಿಂದ ಕಷ್ಟಪಟ್ಟು ಬೆಳೆಸಿದ ತೋಟವನ್ನು ಅರಣ್ಯ ಇಲಾಖೆಯವರು ನಾಶ ಮಾಡಿದ್ದಾರೆ. ಈ ಪ್ರದೇಶದಲ್ಲಿ ರೈತರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನಡೆದಿದೆ. ರೈತರು ಭೂ ಒತ್ತುವರಿ ಮಾಡಿದ್ದಾರೆಯೇ ಹೊರತು ಭೂ ಕಬಳಿಕೆ ಮಾಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸದನ ಸಮಿತಿ ರಚಿಸಬೇಕು ಎಂದು ಅವರು ಒತ್ತಾಯಿಸಿದರು.

ಪಾಟೀಲರ ಮಾತಿಗೆ ಧ್ವನಿಗೂಡಿಸಿದ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಅರಣ್ಯವಾಸಿಗಳಿಗೆ ಆಗುತ್ತಿರುವ ಕಿರುಕುಳಗಳ ವಿಷಯವನ್ನು ಮುಖ್ಯಮಂತ್ರಿಯವರು ಗಂಭೀರವಾಗಿ ಪರಿಗಣಿಸಬೇಕು. ವಿಶೇಷ ಸಭೆ ಮಾಡಿ ಸದನ ಸಮಿತಿ ರಚಿಸಲು ತೀರ್ಮಾನಿಸಬೇಕು ಎಂದರು.

ಅರಣ್ಯ ಇಲಾಖೆ ಅಧಿಕಾರಿಗಳನ್ನು ಹದ್ದು ಬಸ್ತಿನಲ್ಲಿಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್‌ನ ಕೆ. ಆರ್. ರಮೇಶ್ ಕುಮಾರ್ ಅವರು ಒತ್ತಾಯಿಸಿದರು.

192(ಎ) ಪ್ರಕಾರ ಅಪರಾಧವೇನು: ಸರ್ಕಾರದ ಭೂಮಿಯನ್ನು ಕಬಳಿಕೆಯ ಮಾಡುವ ಉದ್ದೇಶದಿಂದ ಯಾವುದೇ ಸರ್ಕಾರಿ ಭೂಮಿಯನ್ನು ಕಾನೂನು ಬಾಹಿರವಾಗಿ ಪ್ರವೇಶಿಸುವುದು ಅಥವಾ ಸ್ವಾಧೀನಪಡಿಸಿಕೊಳ್ಳುವುದು ಅಪರಾಧ. ಹೀಗೆ ಮಾಡಿದವರಿಗೆ ಒಂದು ವರ್ಷ ಜೈಲು ಶಿಕ್ಷೆ ಮತ್ತು ರೂ.50 ಸಾವಿರ ದಂಡ ವಿಧಿಸಬಹುದು (ಆದರೆ, ಕೊಡಗು ಜಿಲ್ಲೆಯಲ್ಲಿ ಜಮ್ಮಾ ಬಾಣೆ ಭೂಮಿಗಳ ಅಥವಾ ಒತ್ತುವರಿ ಮಾಡಿಕೊಂಡಿರುವುದನ್ನು ಸಕ್ರಮಗೊಳಿಸಿರುವ ಅಥವಾ 94ಎ, 94 ಬಿ ಮತ್ತು 94 ಸಿ ಪ್ರಕರಣಗಳ ಮೇರೆಗೆ ರಚಿಸಲಾದ ಸಮಿತಿಗೆ ಅನ್ವಯ ಆಗುವುದಿಲ್ಲ).

ಆಧಾರ: ಪ್ರಜಾವಾಣಿ, ದಿನಾಂಕ:09.03.2022.

80. ಮುಂದಿನ ವಾರ ಮೇಕೆದಾಟು ಸಭೆ

ಮೇಕೆದಾಟು ಯೋಜನೆ ಸಂಬಂಧ ಮುಂದಿನ ವಾರ ಸರ್ವಪಕ್ಷ ಸಭೆ ಕರೆದು ಚರ್ಚಿಸಲಾಗುವುದು. ಸಭೆಯ ನಿರ್ಣಯವನ್ನು ಕೇಂದ್ರಕ್ಕೆ ಕಳುಹಿಸಿ ಕೊಡಲಾಗುವುದು ಎಂದು ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಪ್ರಕಟಿಸಿದರು. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪ್ರಸ್ತಾಪಿಸಿದ ಈ ವಿಚಾರದ ಬಗ್ಗೆ ವಿಸ್ತೃತ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿಯವರು, ಯೋಜನೆಯ ಡಿಪಿಆರ್‌ಗೆ ಅನುಮತಿ ಪಡೆಯುವುದು ಹಾಗೂ ಪರಿಸರ ಇಲಾಖೆ ಅನುಮತಿಗೆ ಪೂರಕವಾದ ಷರತ್ತುಗಳ ವಿವರ ಪಡೆಯುವುದು ಸರ್ಕಾರದ ಅಧ್ಯತೆ ಎಂದರು.

ನಾವೆಲ್ಲ ಸೇರಿ ಮುಂದಿನ ಹೆಜ್ಜೆಯಿಡೋಣ. ಮೇಕೆದಾಟು ಕಾರ್ಯಾರಂಭಕ್ಕೆ ಪ್ರಯತ್ನಿಸಲಾಗುವುದು. ಖುದ್ದಾಗಿ ನಾನೇ ದಿಲ್ಲಿಗೆ ಹೋಗಿ ಕುಳಿತು ಡಿಪಿಆರ್‌ಗೆ ಒಪ್ಪಿಗೆ ಪಡೆಯಲು ಪ್ರಾಮಾಣಿಕ ಯತ್ನ ಮಾಡುತ್ತೇನೆ ಎಂದು ಹೇಳಿದರು.

ಈ ಯೋಜನೆಯ ವಸ್ತುಸ್ಥಿತಿ ಬಗ್ಗೆ ತಿಳಿದಿದೆ. ಅದರ ಪರಿಣಾಮದ ಬಗ್ಗೆ ಕಾನೂನು ತಜ್ಞರೊಂದಿಗೆ ಸಮಾಲೋಚಿಸಬೇಕಿದೆ. 1996ರಲ್ಲೇ ಕೆಪಿಟಿಸಿಎಲ್‌ನಿಂದ ಜಲವಿದ್ಯುತ್ ಉತ್ಪಾದನೆಗಾಗಿ ಡಿಪಿಆರ್ ಸಿದ್ಧವಾಗಿತ್ತು. ಕೇಂದ್ರದ ನಿಗಮದಿಂದ ಕರ್ನಾಟಕ–ತಮಿಳುನಾಡು ಪ್ರದೇಶದಲ್ಲಿ 4 ಯೋಜನೆ ಪ್ರಸ್ತಾಪವಿತ್ತು. ಅದಕ್ಕೆ ಆಸಕ್ತಿ ತೋರದ ತಮಿಳುನಾಡು ಸರ್ಕಾರ ಸಮೀಕ್ಷೆಗೂ ಒಪ್ಪಲಿಲ್ಲ ಎಂದು ಮಾಹಿತಿ ನೀಡಿದರು.

ನಮ್ಮ ನಿಲುವು ಸ್ಪಷ್ಟ: ಮೇಕೆದಾಟು ಅನುಮತಿ ಪಡೆಯಲು ಕಾನೂನು ತಂಡದೊಂದಿಗೆ ಈಗಾಗಲೇ ಎರಡು ಸುತ್ತಿನ ಸಭೆ ನಡೆಸಿದ್ದೇನೆ. ತಮಿಳುನಾಡಿಗೆ ವಾರ್ಷಿಕ 177.75 ಟಿಎಂಸಿ ನೀರು ಹರಿಸುವುದನ್ನು ಹೊರತು ಪಡಿಸಿದರೆ ಬೇರೆ ಯಾವುದೇ ಹೊಣೆಗಾರಿಕೆ ರಾಜ್ಯಕ್ಕಿಲ್ಲ ಎಂಬುದು ನಮ್ಮ ನಿಲುವು. ಕುಡಿಯುವ ನೀರು, ವಿದ್ಯುತ್ ಉತ್ಪಾದನೆ ಸೇರಿದಂತೆ ಯಾವುದೇ ಯೋಜನೆ ಕೈಗೊಂಡರೂ ತಮಿಳುನಾಡು ವಿರೋಧಿಸುತ್ತದೆ. ಹಾಗೆಯೇ ರಾಜ್ಯ ಕೂಡ ತಮಿಳುನಾಡು ಕೈಗೊಳ್ಳವ ಯೋಜನೆಗಳಿಗೆ ಆಕ್ಷೇಪ ತೆಗೆದಿದೆ ಎಂದು ಮುಖ್ಯಮಂತ್ರಿಯವರು ಹೇಳಿದರು. ಇದಕ್ಕೆ ಮುನ್ನ ಮಾತನಾಡಿದ ಸಿದ್ದರಾಮಯ್ಯ ಮೇಕೆದಾಟು ಯೋಜನೆ ಜಾರಿಗಾಗಿ ಪಾದಯಾತ್ರೆ ನಡೆಸಲಾಗಿದೆ. ಯೋಜನೆಗೆ ಸುಪ್ರೀಂಕೋರ್ಟ್‌ನಲ್ಲಿ ಯಾವುದೇ ತಡೆಯಾಜ್ಞೆ ಇಲ್ಲ. ವಿವಾದವೂ ಇಲ್ಲ. ರಾಜಕೀಯ, ಮತಕ್ಕಾಗಿ ತಮಿಳುನಾಡು ಕ್ಯಾತೆ ತೆಗೆದಿದೆ ಎಂದು ಕಿಡಿ ಕಾರಿದರು.

ಆಗ ಮಧ್ಯೆಪ್ರವೇಶಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ವಿಚಾರ ಸುಪ್ರೀಂಕೋರ್ಟ್‌ನಲ್ಲಿದ್ದಾಗ ವಿವಾದವಿಲ್ಲ ಎಂದರೆ ಏನರ್ಥ. ಕರ್ನಾಟಕಕ್ಕೆ ಹಂಚಿಕೆಯಾದ ನೀರಿನ ಪ್ರಮಾಣ ಹೊರತುಪಡಿಸಿ ಉಳಿದ ನೀರು ಬಳಸಬಾರದು ಎಂಬುದೇ ತಮಿಳುನಾಡಿನ ಆಕ್ಷೇಪ. ಹಾಗೇಯೆ ಬೆಂಗಳೂರಿನ ತ್ಯಾಜ್ಯ ನೀರು ತಮಿಳುನಾಡಿಗೆ ಹರಿದು ಹೋಗಬೇಕಿದ್ದು ಅದನ್ನೂ ಕೆಸಿವ್ಯಾಲಿ ಮೂಲಕ ಕೋಲಾರಕ್ಕೆ ಹರಿಸುತ್ತಿರುವ ಬಗ್ಗೆಯೂ ಆಕ್ಷೇಪ ತೆಗೆದಿದೆ ಎಂದು ಗಮನಕ್ಕೆ ತಂದರು.

ಕೇಂದ್ರ ಸಚಿವರ ಹೇಳಿಕೆ ಖಂಡನೀಯ: ಉಭಯ ರಾಜ್ಯಗಳು ವಿವಾದಾತ್ಮಕ ವಿಚಾರವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಿ ಎಂದು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಹೇಳಿರುವುದು ಖಂಡನೀಯ. ಸಭೆಯಲ್ಲೇ ಇದ್ದ ಮುಖ್ಯಮಂತ್ರಿಯವರು ಸುಮ್ಮನಿದ್ದಾರೆ. ಕೇಂದ್ರ ಸಚಿವರ ಹೇಳಿಕೆ ಗಮನಿಸಿದರೆ ಪರಿಸರ ಇಲಾಖೆ ಅನುಮತಿ ನೀಡುವುದಿಲ್ಲ ಎಂಬಂತಿದೆ. ಕೂಡಲೇ ಕೇಂದ್ರ ಸಚಿವರ ಹೇಳಿಕೆಯನ್ನು ಖಂಡಿಸಬೇಕು ನಾವು ಸುಮ್ಮನೆ ಕೂರುವಂತಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್‌ನ ಎಚ್. ಕೆ. ಪಾಟೀಲ್ ವಿವಾದವೇ ಇಲ್ಲ ಎಂದ ಮೇಲೆ ಸಂಧಾನದ ಪ್ರಶ್ನೆಯೇ ಇಲ್ಲ. ಇದರಲ್ಲಿ ರಾಜ್ಯ ಸರ್ಕಾರದ ಹೊಣೆಗಾರಿಕೆ ಇದೆ ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:09.03.2022

81. ಸಿಎಂ, ಸಿಎಸ್ ಜೊತೆ ಚರ್ಚಿಸಿ ತೀರ್ಮಾನ

ಮಲ್ಲೇಶ್ವರದಲ್ಲಿರುವ ಮೈಸೂರು ಲ್ಯಾಂಪ್ಸ್ ವರ್ಕ್ಸ್ ಸಂಸ್ಥೆಯ ಆಸ್ತಿಗಳನ್ನು ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಟ್ರಸ್ಟ್‌ಗೆ ವರ್ಗಾಯಿಸುವ ಕುರಿತಂತೆ ಮುಖ್ಯಮಂತ್ರಿಯವರು ಮುಖ್ಯ ಕಾರ್ಯದರ್ಶಿ ಜೊತೆ ಚರ್ಚಿಸಿದ ಬಳಿಕ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರಗೇಶ್ ನಿರಾಣಿ ತಿಳಿಸಿದರು.

ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಇರುವ ಸ್ಥಳದಲ್ಲಿ "ಎಕ್ಸ್‌ಪೀರಿಯನ್ಸ್ ಬೆಂಗಳೂರು" ಯೋಜನೆ ಅನುಷ್ಠಾನಗೊಳಿಸಲು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಏಳು ಮಂದಿ ಐಎಎಸ್ ಅಧಿಕಾರಿಗಳನ್ನು ಒಳಗೊಂಡ ಟ್ರಸ್ಟ್‌ಗೆ ವರ್ಗಾಯಿಸುವ ಕುರಿತ ವಿಷಯ ವಿಧಾನ ಪರಿಷತ್‌ನಲ್ಲಿ ಬಿಸಿಯೇರಿದ ಚರ್ಚೆಗೆ ವಸ್ತುವಾಯಿತು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಜೆಡಿಎಸ್‌ನ ಶ್ರೀಕಂಠೇಗೌಡ ಮತ್ತು ಭೋಜೇಗೌಡ ಮತ್ತು ಬಿಜೆಪಿಯ ತೇಜಸ್ವಿನಿಗೌಡ, ಮೈಸೂರು ಲ್ಯಾಂಪ್ಸ್ ವರ್ಕ್ಸ್ ಸಂಸ್ಥೆಯ ಆಸ್ತಿಯನ್ನು ಟ್ರಸ್ಟ್‌ಗೆ ನೀಡುವ ಸರ್ಕಾರದ ನಿಲುವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಅದಕ್ಕೆ ನಿರಾಣಿ ಈ ಯೋಜನೆ ಮಾಡುವ ವಿಚಾರದಲ್ಲಿ ನನಗೆ ಸ್ವಾರ್ಥವೂ ಇಲ್ಲ ಪ್ರತಿಷ್ಠೆಯೂ ಇಲ್ಲ ವೀರಾವೇಷದಿಂದ ಭಾವನಾತ್ಮಕವಾಗಿ ಯಾರೂ ಮಾತನಾಡುವ ಅಗತ್ಯವೂ ಇಲ್ಲ ಎಂದರು.

ಎನ್‌ಜಿಎಫ್‌ನಲ್ಲಿರುವ ಸ್ಥಳದಲ್ಲಿ 105 ಎಕರೆ ಜಮೀನಿನಲ್ಲಿ ಸಿಂಗಪುರ ಮಾದರಿಯಲ್ಲಿ ಗ್ರೀನ್ ಎಕ್ಸ್‌ಪೋ ನಿರ್ಮಿಸಲಾಗುವುದು. ಆ ಮೂಲಕ ಪರಿಸರಸ್ನೇಹಿ ತಂತ್ರಜ್ಞಾನ, ಸಾರಿಗೆ ಹಸಿರು ಮೂಲಸೌಕರ್ಯ ಮತ್ತು ಹಸಿರು ನವೋದ್ಯಮಗಳ ಪ್ರಾತ್ಯಕ್ಷಿಕೆ ನೀಡಲು ಬಳಕೆ ಮಾಡಿಕೊಳ್ಳಲಾಗುವುದು ಎಂದು ವಿವರಿಸಿದರು.

ಶ್ರೀಕಂಠೇಗೌಡ ಮಾತನಾಡಿ, ಮೈಸೂರು ಲ್ಯಾಂಪ್ಸ್‌ಗೆ ಸೇರಿದ ಸುಮಾರು ನೂರಾರು ಕೋಟಿ ಮೌಲ್ಯದ 21 ಎಕರೆ ಜಮೀನು ಮತ್ತು ಕಟ್ಟಡಗಳನ್ನು ಎಕ್ಸ್‌ಪೀರಿಯನ್ಸ್ ಬೆಂಗಳೂರು ಯೋಜನೆಗಾಗಿ ಟ್ರಸ್ಟ್‌ಗೆ ನೀಡಲು ಸರ್ಕಾರ ಮುಂದಾಗಿದೆ. ಅಲ್ಲದೆ, ಈ ಆಸ್ತಿಗಳನ್ನು ಅಡವಿಟ್ಟು ಸಾಲ ಪಡೆಯುವುದು, ಮಾರಾಟ ಮಾಡುವುದಕ್ಕೆ ಟ್ರಸ್ಟ್‌ಗೆ ಅವಕಾಶ ನೀಡಲಾಗಿದೆ. ಜೊತೆಗೆ ಟ್ರಸ್ಟ್‌ಗೆ ಮುಖ್ಯ ಕಾರ್ಯದರ್ಶಿ ಸೇರಿದಂತೆ ಏಳು ಮಂದಿ ಐಎಎಸ್ ಅಧಿಕಾರಿಗಳು ಮತ್ತು ಐದು ಮಂದಿ ಖಾಸಗಿ ವ್ಯಕ್ತಿಗಳನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ. ಈ ಅಂಶ ಜಮೀನನ್ನು ಕಬಳಿಸುವ ಹುನ್ನಾರ. ಆದ್ದರಿಂದ ಸರ್ಕಾರದ ಬಳಿಯಲ್ಲೇ ಜಮೀನು ಉಳಿಸಿಕೊಂಡು ವೈದ್ಯಕೀಯ ಕಾಲೇಜು ನಿರ್ಮಿಸಬೇಕು ಎಂದು ಆಗ್ರಹಿಸಿದರು.

ಅದಕ್ಕೆ ಧ್ವನಿಗೂಡಿಸಿದ ಬಿ.ಕೆ. ಹರಿಪ್ರಸಾದ್ ಸರ್ಕಾರದ ಈ ನಿರ್ಧಾರದ ಹಿಂದೆ ದುರುದ್ದೇಶ ಅಡಗಿದೆ. ಮೈಸೂರು ಮಹಾರಾಜರಿಂದ ಬಂದಿರುವ ಈ ಆಸ್ತಿಯನ್ನು ಟ್ರಸ್ಟ್‌ಗೆ ನೀಡುವುದು ಸೂಕ್ತವಲ್ಲ. ಸರ್ಕಾರದಿಂದ ಟ್ರಸ್ಟ್‌ಗಳಿಗೆ ಈಗಾಗಲೇ ಹೋಗಿರುವ ಜಮೀನುಗಳನ್ನು ಮರಳಿ ಪಡೆಯಲು ಸಾಧ್ಯವಾಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಈ ಸ್ಥಳವನ್ನು ಟಾಟಾ ಇನ್‌ಸ್ಟಿಟ್ಯೂಟ್‌ಗೆ ವಹಿಸಬಹುದು ಅಥವಾ ಆ ಸ್ಥಳದಲ್ಲಿ ಏಮ್ಸ್ ಮಾದರಿಯಲ್ಲಿ ಆಸ್ಪತ್ರೆ ನಿರ್ಮಿಸುವುದು ಸೂಕ್ತ ಎಂದು ಸಲಹೆ ನೀಡಿದರು.

ಆಧಾರ: ಪ್ರಜಾವಾಣಿ, ದಿನಾಂಕ:09.03.2022

82. ಅರ್ಜಿಗಳ ಸಮಿತಿಯಿಂದ ಸಮಸ್ಯೆಗಳ ಇತ್ಯರ್ಥ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಜಲಸಂಪನ್ಮೂಲ, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಅರಣ್ಯ ಪರಿಸರ ಮತ್ತು ಭೂ ವಿಜ್ಞಾನ ಇಲಾಖೆಗಳಿಗೆ ಸಂಬಂಧಿಸಿದಂತೆ ವಿಧಾನಸಭೆಯ ಸದಸ್ಯರು ಸಲ್ಲಿಸಿದ ಪ್ರಶ್ನೆಗಳಿಗೆ 15 ಸದಸ್ಯರ ನೇತೃತ್ವದ ಸಮಿತಿ ವರದಿ ನೀಡಿದೆ.

ವಿಧಾನಸಭೆಯ ಅರ್ಜಿಗಳ ಸಮಿತಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಅರ್ಜಿದಾರರಿಂದ ಅರ್ಜಿಗಳು ಸ್ವೀಕೃತವಾಗಿದ್ದು, ಆಯಾ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಸಮಿತಿ ಸಭೆ ನಡೆಸಿ, ಚರ್ಚೆ ಮಾಡಲಾಗಿದೆ. ವಿಷಯಕ್ಕನುಸಾರವಾಗಿ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಪರಿಹಾರ, ಸಲಹೆ ಸೂಚನೆ ನೀಡಿದ ಬಳಿಕ ಅರ್ಜಿಗಳ ವರದಿ ನೀಡಿದೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹೆರಂಗಡಿ ವ್ಯಾಪ್ತಿಯ ಹೈಗುಂದದಲ್ಲಿರುವ ಶ್ರೀ ದುರ್ಗಾಂಬಿಕಾ ದೇವಸ್ಥಾನ ರಸ್ತೆ ನಿರ್ಮಿಸುವ ಕುರಿತು ವಿಧಾನಸಭೆ ಸದಸ್ಯ ಸುನೀಲ್ ಜಿ. ನಾಯ್ಕ ಅವರು ಸಲ್ಲಿಸಿದ ಅರ್ಜಿ ವಿಧಾನಸಭೆ ಅಧಿವೇಶನದಲ್ಲಿ ಮಂಡಿಸಿದ್ದು, ಈ ರಸ್ತೆ ನಿರ್ಮಾಣಕ್ಕೆ ರೂ.50 ಲಕ್ಷ ಅನುದಾನ ಅವಶ್ಯವಿದ್ದು, ಪ್ರಸ್ತಾಪಿತ ಕಾಮಗಾರಿ 2019–20ನೇ ಸಾಲಿನ ನಮ್ಮ ಗ್ರಾಮ ನಮ್ಮ ರಸ್ತೆ ನಬಾರ್ಡ್ ಯೋಜನೆಯಡಿ ಆದ್ಯತೆ ಮೇರೆಗೆ ಕ್ರಿಯಾ ಯೋಜನೆಯಲ್ಲಿ ಸೇರ್ಪಡಿಸಿ ಅಗತ್ಯ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ರಸ್ತೆ ದುರಸ್ತಿಯಿಂದ ಸಣ್ಣ ಪುಟ್ಟ ಕಾಮಗಾರಿ ಪೂರ್ಣಗೊಳಿಸಲು 3 ರಿಂದ 6 ತಿಂಗಳು ಸಮಯ ಬೇಕಾಗುತ್ತದೆ ಎಂದು ಮೊದಲು ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಸೂಚಿಸಿದೆ ಬಳಿಕ ಅರ್ಜಿ ಕಾಯ್ದಿರಿಸಿತ್ತು. 2ನೇ ಸಭೆಯಲ್ಲಿ ಕಾಮಗಾರಿಗೆ 30 ಲಕ್ಷ ಅನುದಾನ ಮಂಜೂರು ಮಾಡಿ, ಕಾಮಗಾರಿ ಪೂರ್ಣ ಮಾಡಿ ವರದಿ ನೀಡಲು ಸೂಚಿಸಲಾಯಿತು. ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ ಕಾಮಗಾರಿ ಪೂರ್ಣಗೊಂಡಿರುವುದರಿಂದ ಅರ್ಜಿಗೆ ಉತ್ತರ ಸಲ್ಲಿಸಿದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೇವಲಾಪುರ ಗ್ರಾಮದ ಜೈನ ಬಸದಿ ಹತ್ತಿರ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಯೋಜನೆಯಡಿ ಕುಡಿಯುವ ನೀರು ಸರಬರಾಜು ಮಾಡುವ ಕುರಿತು ಸದಸ್ಯರಾದ ಮಹಾಂತೇಶ್ ಎಸ್ ಕೌಜಲಗಿ ಅವರ ಅರ್ಜಿಗೆ, ಸಮಿತಿಯು ಉತ್ತರ ನೀಡಿದೆ. ಈ ಪ್ರದೇಶದಲ್ಲಿ ಪ್ರಸ್ತುತ ಇರುವ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಸುಧಾರಣೆಯಾಗಿದ್ದು ಓವರ್ ಹೆಡ್ ಟ್ಯಾಂಕ್‌ಗೆ ಪೈಪ್‌ಲೈನ್ ಅಳವಡಿಸಿ ನೀರು ಪೂರೈಸಲಾಗುತ್ತಿದೆ. ಈ ಕುಲಭೂಷಣ ನಗರದ ಹತ್ತಿರ ಜೈನ ಬಸದಿ ಮತ್ತು ಅಲ್ಲಿನ ಪ್ರೌಢಶಾಲೆಗೆ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದ್ದು, ನೀರಿಗೆ ಯಾವುದೇ ತೊಂದರೆ ಇಲ್ಲ ಎಂದು ಗಾಮೀಣಾಭಿವೃದ್ಧಿ ಇಲಾಖೆ ಅಧಿಕಾರಿಗಳು ಸಮಿತಿಗೆ ಮಾಹಿತಿ ನೀಡಿದ್ದಾರೆ.

ಎರಡು ಅರ್ಜಿಗಳು ಮಾನ್ಯವಿಲ್ಲ: ಸವದತ್ತಿ ಯಡಹಳ್ಳಿ ಗ್ರಾಮದ ಶ್ರೀ ವಿಠ್ಠಲ್ ದುಂಡಪ್ಪ ನಿಗದಿಯವರ ಹೊಲದಿಂದ ಸಂಗ್ರೇಶಕೊಪ್ಪ–ಕರಿಕಟ್ಟಿಗೆ ಕೊಡುವ ರಸ್ತೆ (ಗೊಚ್ಚಿನ ರಸ್ತೆ)ಯನ್ನು ದುರಸ್ತಿ ಮಾಡುವ ಕುರಿತು ಸದಸ್ಯ ಮಹಾಂತೇಶ ಕೌಜಲಗಿ ಅವರು ಅರ್ಜಿ ಸಲ್ಲಿಸಿದ್ದು, ಸಮಿತಿಯು ಉತ್ತರ ನೀಡಿದೆ. ಇಲ್ಲಿನ ರಸ್ತೆಯು ಕಾಲುದಾರಿಯಾಗಿರುತ್ತದೆ. ಇದು ಇಲಾಖೆ ನಕ್ಷೆಯಲ್ಲಿ ಸೇರಿರುವುದಿಲ್ಲ. ಜೊತೆಗೆ ಈ ಕಾಲುದಾರಿಯು ಯಾವುದೇ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವುದಿಲ್ಲ. ಕೇವಲ ಹೊಲಗಳಿಗೆ ಹೋಗಿ ಬರಲು ಮಾತ್ರ ಸೀಮಿತವಾಗಿದೆ. ಈ ಕಾಲುದಾರಿ ಖಾಸಗಿ ಜಮೀನಿನಲ್ಲಿರುವ ಕಾರಣ ರಸ್ತೆಗೆ ಬೇಕಾಗುವ ಜಾಗ ರೈತರು ಬಿಡಲು ನಿರಾಕರಿಸಿದ್ದಾರೆ. ದಾವಣಗೆರೆಯ ಚನ್ನಗಿರಿ ತಾಲ್ಲೂಕಿನ ಶಾಂತಿ ಸಾಗರ ಕೆರೆಯಲ್ಲಿ ಮೆ.ಎರೋಲಿಯನ್ ಎನರ್ಜಿ ಸಲ್ಯೂಷನ್ ಪ್ರೈ.ಲಿ., ಬೆಂಗಳೂರು, ಅವರು ಜಲವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಸಲ್ಲಿಸಿರುವ ಪ್ರಸ್ತಾವನೆ ರದ್ದುಪಡಿಸುವ ಕುರಿತು ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರ

ಅರ್ಜಿ ಸಲ್ಲಿಸಿದ್ದರು. ಈ ಯೋಜನೆ ಜಾರಿತಂದು ವಿದ್ಯುತ್ ಉತ್ಪಾದನೆ ಮಾಡಿ ಬಳಸಿಕೊಳ್ಳುವಂಥ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯವಿಲ್ಲ. ಹೀಗಾಗಿ ಈ ಯೋಜನೆ ಕೈಬಿಡಲು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಆಧಾರ: ಪ್ರಜಾವಾಣಿ, ದಿನಾಂಕ:10.03.2022

83. ಸದನದಲ್ಲಿ ಕೋಲಾಹಲ ಸೃಷ್ಟಿಸಿದ ಬಿ ಟೀಂ ಪ್ರಸ್ತಾಪ

ಜೆಡಿಎಸ್ ಪಕ್ಷ ಬಿಜೆಪಿಯ ಬಿ ಟೀಂ ಎಂಬ ಕಾಂಗ್ರೆಸ್ ಸದಸ್ಯರ ವಾಗ್ದಾಳಿ ವಿಧಾನ ಸಭೆಯಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಯಿತು.

ಬಜೆಟ್ ಮೇಲಿನ ಚರ್ಚೆ ವೇಳೆ ಮಾಜಿ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ ಆಗಾಗ್ಗೆ ಪ್ರತಿಪಕ್ಷ ನಾಯಕರ ಭಾಷಣದ ಪ್ರಸ್ತಾಪಿಸಿದ್ದನ್ನು ಕಾಂಗ್ರೆಸ್ ಸದಸ್ಯರು ಆಕ್ಷೇಪಿಸಿದರು. ಇದನ್ನು ಜೆಡಿಎಸ್ ಸದಸ್ಯರು ಖಂಡಿಸಿದಾಗ ಸದನದಲ್ಲಿ ಕೋಲಾಹಲದ ಸ್ಥಿತಿ ನಿರ್ಮಾಣವಾಯಿತು.

ಕುಮಾರಸ್ವಾಮಿ ತಮ್ಮ ಮಾತಿನುದ್ದಕ್ಕೂ ಸಿದ್ದರಾಮಯ್ಯ ಹೆಸರು ಹೇಳದೆ ಪ್ರಸ್ತಾಪಿಸುತ್ತಿದ್ದರು. ಒಂದು ಹಂತದಲ್ಲಿ ಅದು ರಾಜಕೀಯ ಭಾಷಣ ಎಂದು ವ್ಯಂಗ್ಯವಾಡಿದರು. ಅದಕ್ಕೆ ಕಾಂಗ್ರೆಸ್‌ನ ಯು.ಟಿ. ಖಾದರ್ ಕುಮಾರಸ್ವಾಮಿಯವರ ಚರ್ಚೆ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಬಗ್ಗೆಯೋ ಅಥವಾ ಪ್ರತಿಪಕ್ಷದ ನಾಯಕರ ಬಗ್ಗೆಯೋ ಅರ್ಥವಾಗುತ್ತಿಲ್ಲ ಎಂದು ಕೆಣಕಿದರು. ಇದಕ್ಕೆ ಕಾಂಗ್ರೆಸ್ ಹಲವು ಸದಸ್ಯರು ದನಿಗೂಡಿಸುತ್ತಿದ್ದರೆ ಜೆಡಿಎಸ್ ಸದಸ್ಯರು ಆಕ್ಷೇಪಿಸಿದರು.

ಸಚಿವ ಜೆ.ಸಿ. ಮಾಧುಸ್ವಾಮಿ ಸಿದ್ದರಾಮಯ್ಯ ಸಹ ತಮ್ಮ ಚರ್ಚೆಯಲ್ಲಿ ಮಾತನಾಡಿದ್ದು ಬೊಮ್ಮಾಯಿಯವರ ಬಜೆಟ್ ಬಗ್ಗೆಯೋ, ಸಿದ್ದರಾಮಯ್ಯನವರ ಬಜೆಟ್ ಬಗ್ಗೆಯೋ ಗೊತ್ತಾಗಲಿಲ್ಲ ಎಂದು ಲೇವಡಿ ಮಾಡಿದರು.

ಆಗ ಯು.ಟಿ. ಖಾದರ್ ನೀವು (ಜೆಡಿಎಸ್) ಅವರನ್ನು ಅವರು (ಬಿಜೆಪಿ) ನಿಮ್ಮನ್ನು ಸಮರ್ಥಿಸುತ್ತಿದ್ದೀರಿ. ಅದಕ್ಕೆ ನಿಮ್ಮ ಬಿ ಟೀಂ ಎನ್ನುವುದು ಎಂದಾಗ ಕಾಂಗ್ರೆಸ್ ಸದಸ್ಯರು ದನಿಗೂಡಿಸಿದರು. ಇದಕ್ಕೆ ಕೆಂಡಾಮಂಡಲರಾದ ಕುಮಾರಸ್ವಾಮಿ ನಾನು ಇವರ ಅನುಮತಿ ಪಡೆದು ಮಾತನಾಡಬೇಕೆ, ಕಾಂಗ್ರೆಸ್‌ನವರಿಂದ ಪಾಠ ಕಲಿಯಬೇಕಿಲ್ಲ ಎಂದು ತಿರುಗೇಟು ನೀಡಿದರು.

ಹಾಲಿಗೆ ಪ್ರೋತ್ಸಾಹ ಧನ ಪ್ರಸ್ತಾಪಿಸಿದಾಗ, ಸಿದ್ದರಾಮಯ್ಯನವರು ರೂ.4 ಘೋಷಿಸಿದ್ದರು ಎಂದು ಕಾಂಗ್ರೆಸ್ ಶಾಸಕರು ಕೆಣಕಿದರು. ಅದಕ್ಕೆ ಕುಮಾರಸ್ವಾಮಿ, ಮೊದಲಿಗೆ ರೂ.2 ನೀಡಿದ್ದು, ಯಡಿಯೂರಪ್ಪನವರಲ್ವೇ ಎಂದು ನಯವಾಗಿಯೇ ಟಾಂಗ್ ಕೊಟ್ಟರು.

ಕಾವೇರಿ ವಿಚಾರದಲ್ಲಿ 1964ರಲ್ಲೇ ಎಚ್.ಡಿ.ದೇವೇಗೌಡರು ಖಾಸಗಿ ನಿರ್ಣಯ ಮಂಡಿಸಿದಾಗ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು ಎಲ್ಲರೂ ಸೇರಿ ನಮ್ಮ ಪಾಲಿನ ನೀರು ಪಡೆದು ಬಳಸಲು ಯೋಜನೆ ರೂಪಿಸೋಣ ಎಂದು ಹೇಳಿ ಖಾಸಗಿ ನಿರ್ಣಯ ಹಿಂಪಡೆಯುವಂತೆ ಹೇಳಿದ್ದರು. ಆದರೆ, ಈಗ ಮೇಕೆದಾಟು ಯೋಜನೆ ರೂಪಿಸಿದ್ದು, ನಾವೇ ಎಂದು ಕೆಲವರು ಕ್ರೆಡಿಟ್ ತೆಗೆದುಕೊಳ್ಳಲು ಪಾದಯಾತ್ರೆ ಮಾಡಿದ್ದಾರೆ. ಭದ್ರಕೋಟೆಗೆ ನುಗ್ಗಿದ್ದಾರೆ ಎಂಬ ಮಾತುಗಳನ್ನು ಹೇಳುತ್ತಿದ್ದಾರೆ. ಇಂತಹದ್ದನ್ನೆಲ್ಲಾ ಸಾಕಷ್ಟು ನೋಡಿದ್ದೇನೆ ಎಂದು ಗುಡುಗಿದರು.

ರಾಜ್ಯದಲ್ಲಿನ ಅಣೆಕಟ್ಟುಗಳನ್ನೆಲ್ಲಾ ಕಟ್ಟಿದವರು ಯಾರೂ, ಆ ಬಗ್ಗೆ ಯಾರೋ ಒಬ್ಬರು ಕ್ರೆಡಿಟ್ ತೆಗೆದುಕೊಳ್ಳಲು ಸಾಧ್ಯವಿಲ್ಲ. ಸ್ವಾತಂತ್ರ್ಯಾ ನಂತರ ಆಡಳಿತ ನಡೆಸಿದ ಎಲ್ಲ ಸರ್ಕಾರಗಳಿಗೂ ಕ್ರೆಡಿಟ್ ಕೊಡಬೇಕಾಗುತ್ತದೆ ಎಂದಾಗ ಕಾಂಗ್ರೆಸ್ ಶಾಸಕರು ಇನ್ನಷ್ಟು ಕೆರಳಿದರು.

ಈ ನಡುವೆ ಸಚಿವ ಗೋವಿಂದ ಕಾರಜೋಳ, ಕೊಯ್ನಾ ಜಲಾಶಯ ನಿರ್ಮಾಣ ಸಂದರ್ಭದಲ್ಲಿ ಅಖಂಡ ವಿಜಯಪುರ ಜಿಲ್ಲೆಗೆ ನೀರು ಹರಿಸಲು ಎರಡು ಕೋಟಿ ರೂಪಾಯಿ ನೀಡಬೇಕೆಂಬ ವಿಚಾರಕ್ಕೆ ಕೇಂದ್ರ ಸರ್ಕಾರ ಅಂದಿನ ಮೈಸೂರು ರಾಜ್ಯಕ್ಕೆ ಎರಡು ಬಾರಿ ಪತ್ರ ಬರೆದಿತ್ತು. ಆಗ ಕೇಂದ್ರ, ಮಹಾರಾಷ್ಟ್ರ ಹಾಗೂ ರಾಜ್ಯದಲ್ಲಿ ಅವರದ್ದೇ ಪಕ್ಷದ ತ್ರಿಬಲ್ ಎಂಜಿನ್ ಸರ್ಕಾರವಿತ್ತು. ಅದರೂ ರೂ. 2 ಕೋಟಿ ನೀಡಲು ಮುಂದಾಗಲಿಲ್ಲ ಎಂದು ಟಾಂಗ್ ನೀಡಿದರು.

ಎಚ್. ಡಿ. ದೇವೇಗೌಡರು 1994ರಲ್ಲಿ ಮುಖ್ಯಮಂತ್ರಿಯಾಗಿದ್ದರಿಂದ ನಾರಾಯಣಪುರ ಬಲದಂಡೆ, ಎಡದಂಡೆ ಯೋಜನೆ ಕಾರ್ಯಗತವಾಗಲು ನೆರವಾಯಿತು. 2013ರಲ್ಲಿ ಕಾಂಗ್ರೆಸ್ ನಡಿಗೆ ಕೃಷ್ಣೆ ಕಡೆಗೆ ಎಂಬುದಾಗಿ ಪಾದಯಾತ್ರೆ ನಡೆಸಿ ಕೃಷ್ಣಾ ಯೋಜನೆಗೆ 5 ವರ್ಷದಲ್ಲಿ ರೂ.50,000 ಕೋಟಿ ಕೊಡುವ ಭರವಸೆ ನೀಡಿ ಕೊಟ್ಟಿದ್ದು ರೂ.7728 ಮಾತ್ರ ಎಂದು ದೂರಿದರು. ಇದಕ್ಕೆ ಕೆರಳಿದ ಕಾಂಗ್ರೆಸ್ ಶಾಸಕರು ಬಿಜೆಪಿಯ ಬಿ ಟೀಂ ಎಂಬುದು ಖಾತರಿಯಾಗಿದೆ ಎಂದು ಕೂಗಿದ ಪ್ರಸಂಗ ನಡೆಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯನವರು 13 ಬಾರಿ ಬಜೆಟ್ ಮಂಡಿಸಿದ್ದು, ಅನುಭವಿಗಳು ಅವರು ಪ್ರಸ್ತಾಪಿಸಿದ ವಿಚಾರಗಳಿಗೆ ಉತ್ತರ ನೀಡುತ್ತೇನೆ ಜೆಡಿಎಸ್ ಶಾಸಕಾಂಗ ಪಕ್ಷ ನಾಯಕರಾದ ಕುಮಾರಸ್ವಾಮಿಯವರು ಅದೇ ರೀತಿ ಮಾತನಾಡುತ್ತಿದ್ದಾರೆ. 3–4 ಬಾರಿ ಹೆಚ್ಚಿಗೆ ಪ್ರತಿಪಕ್ಷ ನಾಯಕರ ಹೆಸರೇಳಿರಬಹುದು ಯಾರಿಗೂ ಯಾರೂ ನಿರ್ಬಂಧ ಹಾಕುವುದು ಬೇಡ ಎಂದು ಕಾಂಗ್ರೆಸ್ ಶಾಸಕರಿಗೆ ಪರೋಕ್ಷವಾಗಿ ಚುಚ್ಚಿದರು.

ಆಧಾರ: ವಿಜಯಕರ್ನಾಟಕ, ದಿನಾಂಕ:10.03.2022

84. ಗುತ್ತಿಗೆದಾರರ ಜೇಬು ತುಂಬಿಸುತ್ತಿದೆಯೇ ಎತ್ತಿನಹೊಳೆ

ಎತ್ತಿನಹೊಳೆ ಯೋಜನೆ ಮೂಲಕ ಬರಪೀಡಿತ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಜನರಿಗೆ ನೀರು ಸಿಗುತ್ತದೆಯೋ ಇಲ್ಲವೋ ಆದರೆ, ಗುತ್ತಿದೆದಾರರ ಜೇಬು ತುಂಬಿಸಲಾಗುತ್ತಿದೆಯೇ ಎಂದು ಮಾಜಿ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ ಸಂಶಯ ವ್ಯಕ್ತಪಡಿಸಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡಿದ ಅವರು ಎತ್ತಿನಹೊಳೆ ಯೋಜನೆಗೆ ಈ ಬಜೆಟ್‌ನಲ್ಲಿ ರೂ. 3000 ಕೋಟಿ ಘೋಷಣೆ ಮಾಡಲಾಗಿದೆ. ಹಾಗೆ ನೋಡಿದರೆ ಮೊದಲಿಗೆ ಇವೆರಡೂ ಜಿಲ್ಲೆಗಳಿಗೆ ನೀರು ತರುವ ನಿರ್ಧಾರ ಮಾಡಿದ್ದು 2011–12ರಲ್ಲಿ ಆಗ ಜಲ ಸಂಪನ್ಮೂಲ ಸಚಿವರಾಗಿದ್ದವರು ಬಸವರಾಜ ಬೊಮ್ಮಾಯಿ. ನೇತ್ರಾವತಿ ನದಿಯಿಂದ 3 ಹಂತಗಳಲ್ಲಿ ನೀರನ್ನು ಬರಪೀಡಿತ ಜಿಲ್ಲೆಗಳಿಗೆ 24 ಟಿಎಂಸಿ ಹರಿಸುವ ಈ ಯೋಜನೆಗೆ 2013ರಲ್ಲಿ ರೂ.8,323 ಕೋಟಿ, 2014ರಲ್ಲಿ ರೂ.12,912 ಕೋಟಿಗೆ ಅಂದಾಜು ವೆಚ್ಚ ಹೆಚ್ಚಿಸಲಾಯಿತು. 10 ವರ್ಷ ಆದರೂ ಈ ಯೋಜನೆ ಇನ್ನೂ ಆಗುತ್ತಲೇ ಇದೆ ಎಂದರು.

ಎತ್ತಿನಹೊಳೆ ನೀರಿನ ಮೂಲ ಯಾವುದು, ನೀರಿನ ಲಭ್ಯತೆಯ ಖಾತರಿ ಇಲ್ಲದೆ 2014ರಲ್ಲಿ ಲೋಕಸಭೆ ಚುನಾವಣೆ ಘೋಷಣೆ ಆದಾಗ ಚಿಕ್ಕಬಳ್ಳಾಪುರದಲ್ಲಿ ತರಾತುರಿಯಲ್ಲಿ ಕಾರ್ಯಕ್ರಮ ಮಾಡಿ ಶಂಕುಸ್ಥಾಪನೆ ನೆರವೇರಿಸಲಾಯಿತು. ಆ ಸಂದರ್ಭದಲ್ಲಿ ಒಂದೇ ವರ್ಷದಲ್ಲಿ ನೀರು ಹರಿಸಲಾಗುವುದು ಎಂದು ಹೇಳಿದ್ದರು. ಆಗ ಒಂದೇ ವರ್ಷದಲ್ಲಿ ನೀರು ಕೊಟ್ಟರೆ ತಲೆ ಬೋಳಿಸಿಕೊಳ್ತೀನಿ ಅಂತ ಸವಾಲು ಹಾಕಿದ್ದೆ. ಆಗ ನನಗೆ ಸ್ವಲ್ಪ ಕೂದಲಿತ್ತು. ಹೇ ಅವನಿಗೆ ಕೂದಲೇ ಇಲ್ಲ. ಅವನೆಲ್ಲಿ ತಲೆ ಬೋಳಿಸ್ಕೋತ್ತಾನೆ ಅಂದಿದ್ದು ಇನ್ನೂ ನೆನಪಿದೆ ಇದು ಎತ್ತಿನಹೊಳೆಯ ಹಣೆಬರಹ ಎಂದು ಎಚ್.ಡಿ.ಕೆ. ಸದನದ ಗಮನ ಸೆಳೆದರು.

ನಮ್ಮ ನೀರು ನಮ್ಮ ಹಕ್ಕು: ಮೇಕೆದಾಟು ಯೋಜನೆಗೆ ಸಾವಿರ ಕೋಟಿ ರೂಪಾಯಿ ಇಡಲಾಗಿದೆ. ನಮ್ಮ ಪಾದಯಾತ್ರೆಗೆ ಹೆದರಿ ಹಣ ಇಟ್ಟಿದ್ದಾರೆ. ಅಂತ ಕಾಂಗ್ರೆಸ್ಸಿಗರು ಹೇಳಲು ಶುರುವಿಟ್ಟಿದ್ದಾರೆ. ತಮಿಳುನಾಡಿನಲ್ಲಿ ಈ ಯೋಜನೆಯ ವಿರುದ್ಧ ಕ್ಯಾತೆ ತೆಗೆಯುತ್ತಲೇ ಇದ್ದಾರೆ. ಸರ್ಕಾರ ಹೆಚ್ಚಿನ ಶ್ರಮ ಹಾಕಿದರು ಮೇಕೆದಾಟು ಕೆಲಸ ಸರಾಗವಾಗಿ ನಡೆಯಲಿದೆ ಎಂದು ಕುಮಾರಸ್ವಾಮಿ, ಮಹಾದಾಯಿ ಹೋರಾಟ ವೇಳೆ ಪೊಲೀಸರನ್ನು ಬಿಟ್ಟು ಹೊಡೆಸುವಾಗ ಕಾಂಗ್ರೆಸ್ಸಿಗರಿಗೆ ನಮ್ಮ ನೀರು ನಮ್ಮ ಹಕ್ಕು ನೆನಪಿಗೆ ಬರಲಿಲ್ಲವೇ ಎಂದು ವಾಗ್ದಾಳಿ ನಡೆಸಿದರು. 75 ವರ್ಷದಲ್ಲಿ ಅನೇಕರು ಸರ್ಕಾರ ಮಾಡಿದ್ದಾರೆ. ಸುಮಾರು ಅಣೆಕಟ್ಟುಗಳು ನಿರ್ಮಿಸಲಾಗಿದೆ. ಈ ಬಗ್ಗೆ ಎಲ್ಲರೂ ಕ್ರೆಡಿಟ್ ಪಡೆದುಕೊಂಡಿದ್ದಾರೆ. ಆದರೆ ರಾಜ್ಯದ ನೀರಾವರಿಗೆ ಯಾವುದೇ ಕೊಡುಗೆ ನೀಡದ ಕಾಂಗ್ರೆಸ್ ಮುಖಂಡರು ರಾಜ್ಯದಲ್ಲಿ ನಾವು ಅಣೆಕಟ್ಟೆ, ಬಿಲ್ಡಿಂಗ್‌ಗಳನ್ನು ಕಟ್ಟಿದ್ದು ಅಂತಾರೆ ಎಂದು ಸಿದ್ದರಾಮಯ್ಯ ಹೆಸರು ಪ್ರಸಾಪಿಸದೆ ಛೇಡಿಸಿದರು.

ಮೇಕೆದಾಟು ಯೋಜನೆಯಲ್ಲಿ ತಮಿಳುನಾಡು ಜೊತೆ ರಾಜ್ಯ ಸರ್ಕಾರ ಯಾವುದೇ ಮಾತುಕತೆ ನಡೆಸುವ ಅಗತ್ಯವಿಲ್ಲ. ಈ ಯೋಜನೆ ಅನುಷ್ಠಾನಕ್ಕೆ ಅವರ ಒಪ್ಪಿಗೆಯೂ ಬೇಕಿಲ್ಲ ಹಾಗೆಯೇ ಕೇಂದ್ರ ಸರ್ಕಾರವು ಮಧ್ಯಸ್ಥಿಕೆ ವಹಿಸುವ ಅಗತ್ಯವು ಇಲ್ಲ ಎಂದು ಹೆಚ್.ಡಿ. ಕುಮಾರಸ್ವಾಮಿ ಹೇಳಿದರು. ಕುಡಿಯುವ ನೀರಿನ ಯೋಜನೆಯಾದ ಮೇಕೆದಾಟು ಬಗ್ಗೆ ಕಾನೂನು ಬದ್ಧವಾಗಿ ತಮಿಳುನಾಡು ಯಾವುದೇ ಅಕ್ಷೇಪ ಎತ್ತಲು ಸಾಧ್ಯವಿಲ್ಲ. ಅದಕ್ಕೆ ಅವಕಾಶವಿಲ್ಲ ಈ ಬಗ್ಗೆ ತಮಿಳುನಾಡು ಜೊತೆ ಯಾವುದೇ ಮಾತುಕತೆ ನಡೆಸುವ ಅಗತ್ಯವಿಲ್ಲವೆಂದು ಸುಪ್ರೀಂಕೋರ್ಟ್ ಈಗಾಗಲೇ ಹೇಳಿದೆ ಎಂಬ ಅಂಶವನ್ನು ಸದನದ ಗಮನಕ್ಕೆ ತಂದರು. ಅಲ್ಲದೆ, ತಮಿಳುನಾಡು ವಕೀಲರೇ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿ ಕಾವೇರಿ ನದಿಯಲ್ಲಿ ತನಗೆ ಹಂಚಿಕೆ ಆಗಿರುವ ನೀರನ್ನು ಕರ್ನಾಟಕ ಹೇಗೆ ಬೇಕಾದರೂ ಬಳಕೆ ಮಾಡಿಕೊಳ್ಳಬಹುದು. ಅದಕ್ಕೆ ನಮ್ಮ ತಕರಾರು ಇಲ್ಲವೆಂದು ಸ್ಪಷ್ಟಪಡಿಸಿರುವ ಬಗ್ಗೆಯೂ ಕುಮಾರಸ್ವಾಮಿ ಬೆಳಕು ಚೆಲ್ಲಿದರು. ಈಗ ಸಾಕಷ್ಟು ಗೊಂದಲದಿಂದ ಮೇಕೆದಾಟು ಯೋಜನೆಯನ್ನು ಕಾರ್ಯಗತ ಮಾಡುವುದು ಸುಲಭ ಸಾಧ್ಯವಲ್ಲ. ಇನ್ನು ಅಣೆಕಟ್ಟು ಕಟ್ಟಲು ಯೋಜನೆ ರೂಪಿಸಿದಾಗ ರೂ.9,000 ಕೋಟಿ ಅಂದಾಜು ವೆಚ್ಚ ಆಗಿ, ಈಗ ಅದು ರೂ.12,000 ಕೋಟಿಗಳಿಗೆ ಹೋಗಿದೆ. ದಿನ ಕಳೆದಂತೆ ವೆಚ್ಚ ಇನ್ನೂ ಏರಿಕೆಯಾಗಿದೆ. ಸರ್ಕಾರ ಎಲ್ಲ ಎಡರುತೊಡರುಗಳನ್ನು ಬಗೆಹರಿಸಿಕೊಂಡು ಯೋಜನೆ ಅನುಷ್ಠಾನಕ್ಕೆ ಬದ್ಧತೆ ಪ್ರದರ್ಶಿಸಬೇಕಿದೆ ಎಂದು ಹೆಚ್‌ಡಿಕೆ ಹೇಳಿದರು.

ಆಧಾರ: ವಿಜಯವಾಣಿ, ದಿನಾಂಕ:10.03.2022

85. ಪ್ರತಿಪಕ್ಷ ನಾಯಕರ ಮಧ್ಯೆಯೇ ವಾಕ್ಸಮರ

ಕಲಾಪದಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷದ ಮಧ್ಯೆ ವಾಕ್ಸಮರ ಸಾಮಾನ್ಯ, ವಿದ್ಯಮಾನ ಪ್ರತಿಪಕ್ಷದ ನಾಯಕರಿಬ್ಬರೇ ಸದನದಲ್ಲಿ ಮಾತಿನ ಸಮರಕ್ಕೆ ಮುಂದಾದ ಪ್ರಕರಣಕ್ಕೆ ವಿಧಾನಸಭೆಯ ಕಲಾಪ ಸಾಕ್ಷಿಯಾಯಿತು.

ಬಿಡದಿಯ ಈಗಲ್‌ಟನ್ ರೆಸಾರ್ಟ್‌ಗೆ ದಂಡ ವಿಧಿಸಿರುವ ವಿಚಾರದಲ್ಲಿ ವಿರೋಧ ಪಕ್ಷಗಳ ನಾಯಕರಾದ ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ಏರುಧ್ವನಿಯಲ್ಲಿ ಪರಸ್ಪರ ವಾಗ್ದಾಳಿ ನಡೆಸಿಕೊಂಡರು.

ಸರ್ಕಾರಿ ಜಮೀನು ಕಬಳಿಸಿರುವ ಅರೋಪದ ಮೇಲೆ ರೆಸಾರ್ಟ್‌ನ ಮಾಲೀಕರಿಗೆ ರೂ.982 ಕೋಟಿ ದಂಡ ವಿಧಿಸಿರುವ ಕುರಿತು ಬಜೆಟ್ ಮೇಲಿನ ಚರ್ಚೆಯ ವೇಳೆ ಕುಮಾರಸ್ವಾಮಿ ಪ್ರಸ್ತಾಪಿಸಿದ್ದರು. ಅದೇ ವಿಷಯದ ಕುರಿತು ಚರ್ಚೆ ಮುಂದುವರಿಸಿದ ಅವರು ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಮೊದಲು ಈಗಲ್‌ಟನ್ ಮಾಲೀಕರಿಗೆ ರೂ.12 ಕೋಟಿ ದಂಡ ವಿಧಿಸಲಾತ್ತು. ಅದನು ಅವರು ಪಾವತಿಸಿದ್ದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಡಿ.ಕೆ. ಶಿವಕುಮಾರ್ ಸಂಪುಟ ಉಪ ಸಮಿತಿ ಸದಸ್ಯರಾದ ಬಳಿಕ ದಂಡದ ಮೊತ್ತ ರೂ.982 ಕೋಟಿಗೆ ಹೆಚ್ಚಳವಾಯಿತು. ಈ ತೀರ್ಮಾನ ಕೈಗೊಳ್ಳುವ ಮೊದಲು ರೆಸಾರ್ಟ್ ಮಾಲೀಕರಿಗೆ ದೊಡ್ಡ ಮೊತ್ತದ ಬೇಡಿಕೆ ಇಡಲಾಗಿತ್ತು. ಈ ಪ್ರಕರಣದ ಬಗ್ಗೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದರು.

ರೂ.982 ಕೋಟಿ ದಂಡ ವಿಧಿಸುವ ಮುನ್ನ ಎಷ್ಟು ಪರ್ಸೆಂಟೇಜ್ ಕೇಳಿದ್ದರು ಎಂಬುದು ಹೊರಗೆ ಬರಬೇಕಲ್ಲವೆ, ಕರ್ನಾಟಕ ಗಾಲ್ಫ್ ಅಸೋಸಿಯೇಷನ್, ಕರ್ನಾಟಕ ಗಾಲ್ಫ್ ಕೋರ್ಸ್‌ಗೂ ಸರ್ಕಾರ ಜಮೀನು ನೀಡಿದೆ. ಈಗಲ್‌ಟನ್ ಗಾಲ್ಫ್ ರೆಸಾರ್ಟ್ ವಿರುದ್ಧ ಮಾತ್ರ ಕ್ರಮ ಏಕೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು

2018ರಿಂದ ನೀವೇ ಮುಖ್ಯಮಂತ್ರಿ ಆಗಿದ್ದಿರಿ ಆಗ ಸಮಸ್ಯೆ ಬಗೆಹರಿಸಬಹುದಿತ್ತಲ್ಲವೆ ಎಂದು ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಪ್ರಶ್ನಿಸಿದರು. 14 ತಿಂಗಳು ಮುಖ್ಯಮಂತ್ರಿಯಾಗಿದ್ದ ಈ ವಿಚಾರ ನನ್ನ ಗಮನಕ್ಕೆ ಬಂದಿರಲಿಲ್ಲ. ಗೊತ್ತಾಗಿದ್ದರೆ ಕುರ್ಚಿ ಹೋದರೂ ಹಿಂದೇಟು ಹಾಕದೆ ರೆಸಾರ್ಟ್ ಮಾಲೀಕರಿಗೆ ನ್ಯಾಯ ದೊರಕಿಸುತ್ತಿದ್ದೆ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಸಿಟ್ಟಿನಿಂದ ಎದ್ದುನಿಂತ ಸಿದ್ದರಾಮಯ್ಯ ಈಗಲ್‌ಟನ್ ರೆಸಾರ್ಟ್ ಪರ ವಾದ ಮಾಡುತ್ತಿದ್ದೀರಿ. ನೀವು ಮುಖ್ಯಮಂತ್ರಿ ಆಗಿದ್ದವರು ರಾಮನಗರ ಜಿಲ್ಲೆಯನ್ನೂ ಪ್ರತಿನಿಧಿಸುತ್ತಿರುವವರು ನಿಮ್ಮ ಮುಂದೆ ವಿಷಯ ಬರಬೇಕಿತ್ತೇ ಈಗ ಚುನಾವಣಾ ವರ್ಷ ಎಂದು ರಾಜಕೀಯ ಮಾತನಾಡುತ್ತಿದ್ದೀರಿ. ಸರ್ಕಾರ ಯಾವ ತನಿಖೆ ಬೇಕಾದರೂ ಮಾಡಿಸಲಿ ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಲಿ ಎಂದರು.

2018ರ ವಿಧಾನಸಭಾ ಚುನಾವಣೆ ಫಲಿತಾಂಶದ ಬಳಿಕ ಕಾಂಗ್ರೆಸ್ ಶಾಸಕರನ್ನೂ ಈಗಲ್‌ಟನ್ ರೆಸಾರ್ಟ್‌ಗೆ ಕರೆದುಕೊಂಡು ಹೋಗಿ ಕುರಿಗಳ ರೀತಿ ಕೂಡಿಹಾಕಿದ್ದರು. ಅಲ್ಲಿ ಬಟ್ಟೆ ಶೌಚಾಲಯದ ಸೌಲಭ್ಯವಿಲ್ಲದೆ ಪರದಾಡಿದ್ದೆವು. ಈಗ ಅದೇ ಜಾಗದ ವಿಚಾರ ಬಂದಿದೆ. ಕೆಲವೊಮ್ಮೆ ಗೂಳಿಗಳ ಕಾಳಗದಲ್ಲಿ ಕರುಗಳು ಸಾಯುತ್ತದೆ, ಎಂದು ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಹೇಳಿದರು.

ಆಧಾರ: ಪ್ರಜಾವಾಣಿ, ದಿನಾಂಕ:11.03.2022

86. ಎಸಿಬಿ ಪ್ರಕರಣಗಳಲ್ಲಿ ವಿಚಾರಣೆಗೆ ಅನುಮತಿ

ಇನ್ನು ಮುಂದೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ವಿಚಾರಣೆಗೆ ಅನುಮತಿ ಕೇಳಿದ ಪ್ರಕರಣಗಳಲ್ಲಿ, ಪ್ರಾಥಮಿಕ ತನಿಖೆಯಲ್ಲಿ ಸತ್ಯಾಂಶ ಕಂಡುಬಂದಿದ್ದರೆ ಅನುಮತಿ ನೀಡುವ ವ್ಯವಸ್ಥೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ವಿಚಾರಣೆಗೆ ಅನುಮತಿ ಕೇಳಿದ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತರುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ನಗರಾಭಿವೃದ್ಧಿ ಹಾಗೂ ಇತರ ಹಲವು ಇಲಾಖೆಗಳು ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಉಪಕಾರ್ಯದರ್ಶಿ ಸೇರಿದಂತೆ ತಮ್ಮದೇ ಅಧಿಕಾರಿಗಳ ಆಂತರಿಕ ಸಮಿತಿ ರಚಿಸಿಕೊಂಡು ಎಸಿಬಿ ದಾಳಿಗೆ ಒಳಗಾದ ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದೆ ಕಡತವನ್ನು ತಳ್ಳಿ ಹಾಕುತ್ತಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಿದರು

ಪ್ರಾಥಮಿಕ ತನಿಖೆ ವೇಳೆ ಅಪರಾಧ ಸತ್ಯಾಂಶ ಕಂಡುಬಂದ ಪ್ರಕರಣಗಳಲ್ಲಿ ವಿಚಾರಣೆಗೆ ಅವಕಾಶ ನೀಡದೆ ಭಷ್ಟರನ್ನು ರಕ್ಷಿಸುವುದು ಸರಿಯಲ್ಲ. ಈ ಕಾರಣಕ್ಕೆ ವಿವಿಧ ಇಲಾಖೆಗಳಲ್ಲಿ ಆಂತರಿಕವಾಗಿ ರಚನೆಯಾಗಿರುವ ಎಲ್ಲ ಸಮಿತಿಗಳನ್ನು ರದ್ದು ಮಾಡುವಂತೆ ಆದೇಶಿಸಿದ್ದೇನೆ ಎಂದರು.

ಐದು ವರ್ಷಗಳಲ್ಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) 310 ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸುತ್ತಿದೆ. 371 ನೌಕರರು ಅಧಿಕಾರಿಗಳ ಮನೆ ಮತ್ತು ಕಛೇರಿ ಮೇಲೆ ದಾಳಿ ನಡೆಸಲಾಗಿದೆ. ಆ ಪೈಕಿ 63 ಪ್ರಕರಣಗಳ ತನಿಖೆ ಮುಕ್ತಾಯಗೊಂಡಿದೆ. 223 ಪ್ರಕರಣಗಳಲ್ಲಿ ಆರೋಪಿಗಳ ಮೇಲೆ ಕ್ರಮಕೈಗೊಳ್ಳುವಂತೆ ಎಸಿಬಿ ಶಿಫಾರಸ್ಸು ಮಾಡಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:11.03.2022

87. ಇಡೀ ರಾಜ್ಯಕ್ಕೆ ಗ್ರಾಮ ಒನ್

'ಬೆಂಗಳೂರು ಒನ್' 'ಕರ್ನಾಟಕ ಒನ್' ಮಾದರಿಯಲ್ಲೇ ಸರ್ಕಾರಿ ಸೇವೆಗಳನ್ನು ಗ್ರಾಮಸ್ಥರಿಗೆ ತಲುಪಿಸುವ ಗ್ರಾಮ ಒನ್ ಯೋಜನೆಯನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಜಾರಿಗೊಳಿಸಲು ನಡೆದ ಸಂಪುಟ ಸಭೆ ತೀರ್ಮಾನಿಸಿದೆ.

ಈಗಾಗಲೇ ಮೊದಲ ಹಂತದಲ್ಲಿ 12 ಜಿಲ್ಲೆಗಳಲ್ಲಿ 3,026 ಗ್ರಾಮ ಪಂಚಾಯಿತಿಗಳಲ್ಲಿ ಈ ಯೋಜನೆಗೆ ಜನವರಿಯಲ್ಲಿ ಚಾಲನೆ ನೀಡಲಾಗಿತ್ತು. ಮುಖ್ಯಮಂತ್ರಿಯವರು ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ಈ ಯೋಜನೆ ರಾಜ್ಯ ವ್ಯಾಪಿ ಜಾರಿಗೊಳಿಸುವುದಾಗಿ ಪ್ರಕಟಿಸಿದ್ದರು. ಇದರಿಂದ ಹೊಸದಾಗಿ 2,937 ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆ ಜಾರಿ ಆಗಲಿದೆ. ಒಟ್ಟು 5963 ಗ್ರಾಮ ಪಂಚಾಯಿತಿಗಳು ಈ ಯೋಜನೆ ವ್ಯಾಪ್ತಿಗೆ ಒಳಪಡಲಿವೆ.

ಗ್ರಾಮ ಒನ್ ಸೇವೆಯಲ್ಲಿ ಸೇವಾ ಸಿಂಧುವಿನ ಎಲ್ಲ 750ಕ್ಕೂ ಹೆಚ್ಚು ಸೇವೆಗಳು ಸಿಗುತ್ತವೆ. ಸಕಾಲ ಸೇವೆಗಳು ಆರ್‌ಟಿಐ ಸೇವೆಗಳು ಸಿಎಂಆರ್‌ಎಫ್ ಸೇವೆಗಳು ಮೈಕ್ರೋ ಬ್ಯಾಂಕಿಂಗ್ ಸೇವೆಗಳು (ಅಲ್ಪಾವಧಿ ಠೇವಣಿ ಹಿಂಪಡೆಯುವಿಕೆ, ಬಾಕಿ ವಿಚಾರಣೆ, ಆಧಾರ್ ನವೀಕರಣ ಸೇರಿ ವಿವಿಧ ಬ್ಯಾಂಕಿಂಗ್ ಸೇವೆಗಳು ಲಭ್ಯವಿರುತ್ತವೆ) ಆಯುಷ್ಮಾನ್ ಭಾರತ, ಆರ್‌ಟಿಸಿ, ಸಂಧ್ಯಾ ಸುರಕ್ಷಾ ಕಾರ್ಡ್ ರವಾನಿಸಿ ಪ್ರಮಾಣಪತ್ರ ಮುಂತಾದ ಪ್ರಮಾಣ ಪತ್ರಗಳನ್ನು ಪಡೆಯಬಹುದು.

ಕರ್ನಾಟಕ ವಿದ್ಯುತ್ ನಿಗಮಕ್ಕೆ ರೂ.2,500 ಕೋಟಿ ಬ್ಯಾಂಕ್ ಪಡೆಯಲು ಸರ್ಕಾರದಿಂದ ಖಾತರಿ ನೀಡುವುದಕ್ಕೂ ಸಂಪುಟ ಸಭೆ ಒಪ್ಪಿಗೆ ನೀಡತು.

ವಿತ್ತಿಯ ಹೊಣೆಗಾರಿಕೆ ಮಸೂದೆಗೆ ಅಸ್ತು: ರಾಜ್ಯ ಸರ್ಕಾರ ಜಿಎಸಿಪಿಯ ಮಿತಿ ಶೇ.25 ನ್ನೂ ಮೀರಿ ಹೆಚ್ಚು ಸಾಲವನ್ನು ಪಡೆಯುವ ಉದ್ದೇಶಕ್ಕಾಗಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಮಸೂದೆ–2022ಕ್ಕೆ ಒಪ್ಪಿಗೆ ನೀಡಲಾಯಿತು. ಸದ್ಯಕ್ಕೆ ಆ ಮಿತಿ ಶೇ.27 ಇದೆ. ರಾಜ್ಯ ಸರ್ಕಾರ ಕಳೆದ ವರ್ಷವೂ ಹೆಚ್ಚು ಸಾಲ ಪಡೆಯಲು ಮಸೂದೆಗೆ ತಿದ್ದುಪಡಿ ಮಾಡಿತ್ತು.

ಕೈಗಾರಿಕೆಗೆ ಭೂಮಿ: ಹೆಚ್ಚು ಪರಿಹಾರ: ಕೈಗಾರಿಕಾ ಉದ್ದೇಶಕ್ಕಾಗಿ "ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ" ಭೂಮಿ ಬಿಟ್ಟು ಕೊಡುವವರಿಗೆ ಹೆಚ್ಚಿನ ಪರಿಹಾರ ನೀಡುವ ಉದ್ದೇಶದ ಮಸೂದೆಗೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ಮಸೂದೆ ಇದೇ ಅಧಿವೇಶನದಲ್ಲಿ ಮಂಡಿಸಲಾಗುವುದು ನ್ಯಾಯಯುತ ಪರಿಹಾರ ಹಕ್ಕು ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಕಾಯ್ದೆ 2013 ಅನ್ವಯ ಭೂ ಮಾಲಿಕರಿಗೆ 'ಸೂಕ್ತ ಪರಿಹಾರ' ನೀಡಿದರೆ ಅನಗತ್ಯ ವ್ಯಾಜ್ಯ ತಪ್ಪಿಸಬಹುದು. ಇದರಿಂದ ಮಸೂದೆ ತರಲಾಗಿದೆ ಎಂದು ಮೂಲಗಳು ಹೇಳಿವೆ. ಕಾಯ್ದೆ ಜಾರಿ ಆದಾಗ ಉತ್ತಮ ಪರಿಹಾರ ಸಿಗಲಿದೆ. ಭೂ ಸ್ವಾದೀನ

ಪ್ರಕ್ರಿಯೆಯೂ ಚುರುಕುಗೊಳ್ಳುತ್ತದೆ. ನ್ಯಾಯಾಲಯದ ಮೊರೆ ಹೋಗುವವರ ಸಂಖ್ಯೆಯೂ ಕಡಿಮೆ ಆಗುತ್ತದೆ. 30 ದಿನಗಳಲ್ಲಿ ಭೂ ಸ್ವಾದೀನ ಪೂರ್ಣಗೊಳಿಸಬಹುದು. ಈ ಮೂಲಕ 1 ತಿಂಗಳಲ್ಲಿ ಪರಿಹಾರ ವಿತರಿಸಿ ಸ್ವಾದೀನ ಪ್ರಕ್ರಿಯೆ ಮುಗಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದರಿಂದಾಗಿ ಯೋಜನೆ ಮತ್ತು ಕಾಮಗಾರಿಗಳಿಂದಾಗಿ ಆಗುವ ವಿಳಂಬವನ್ನು ತಡೆಯಬಹುದು. ವೆಚ್ಚವೂ ಹೆಚ್ಚಾಗುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಆಧಾರ: ಪ್ರಜಾವಾಣಿ, ದಿನಾಂಕ:12.03.2022

88. ಏಕಾಂತಯ್ಯಗೆ ಶಾಂತವೇರಿ ಪ್ರಶಸ್ತಿ

ಸಾರ್ವಜನಿಕ ಜೀವನದಲ್ಲಿ ಜಾತಿ ರಾಜಕಾರಣ ಮಿತಿಮೀರಿದ್ದು ಸಮಾಜದ ನೆಮ್ಮದಿಗೆ ಕಂಟಕಪ್ರಾಯವಾಗಿದೆ ಎಂದು ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ ಪಟ್ಟಿದ್ದಾರೆ. ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣ ಪರಿಷನ್ಮಂದಿರದಲ್ಲಿ ಕನ್ನಡ ಜನಶಕ್ತಿ ಕೇಂದ್ರ ಹಮ್ಮಿಕೊಂಡಿದ್ದ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಿ ಅವರು ಮಾತನಾಡಿದರು.

ರಾಜಕಾರಣಿಗಳು ಜಾತಿಯ ಹೆಸರಿನಲ್ಲಿ ಕಾರ್ಯಸಾಧನೆ ಮಾಡಿಕೊಳ್ಳುತ್ತಿದ್ದು ತಮ್ಮ ಸುತ್ತಲೂ ತಮ್ಮ ಜಾತಿಯವರನ್ನೇ ಇಟ್ಟುಕೊಂಡು ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಬಿರುಕುಂಟಾಗಿದ್ದು ಉತ್ತಮ ನಾಯಕನನ್ನು ಅರಿಸಿದಾಗ ಮಾತ್ರ ಇಂತಹವುಕ್ಕೆಲ್ಲಾ ಕಡಿವಾಣ ಸಾಧ್ಯ ಎಂದು ಹೊರಟ್ಟಿ ಹೇಳಿದರು.

ಶಾಂತವೇರಿ ಗೋಪಾಲಗೌಡರು ಮೌಲ್ಯಾಧಾರಿತ ರಾಜಕಾರಣಿಯಾಗಿದ್ದರು. ಅವರಂತಹ ಐವರು ಇಂದು ರಾಜಕಾರಣದಲ್ಲಿದ್ದರೂ ರಾಜ್ಯ ಇನ್ನೂ ಪ್ರಗತಿಯನ್ನು ಕಾಣುತ್ತಿತ್ತು. ರಾಜಕಾರಣ ಮತ್ತು ವೈಯಕ್ತಿಕ ಬದುಕಿನ ಅಂತರ ಅರಿತು ನಡೆಯುತ್ತಿದ್ದ ಆ ರಾಜಕಾರಣಿಗಳಿಗೂ ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರಿ ವರ್ತಿಸುವ ಇಂದಿನ ರಾಜಕಾರಣಿಗಳಿಗೆ ಅಜಗಜಾಂತರ ವ್ಯತ್ಯಾಸವಿದೆ. ಇಂದು ಆಡಳಿತದಲ್ಲಿ ಮೌಲ್ಯಗಳೆ ಇಲ್ಲದಂತಾಗಿದೆ ಎಂದು ಹೊರಟ್ಟಿ ವಿಷಾದ ವ್ಯಕ್ತಪಡಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಿರಿಯ ರಾಜಕಾರಣಿ ಏಕಾಂತಯ್ಯ, ದೇಶದಲ್ಲಿ ಸಂಪತ್ತು ಏಕಮುಖವಾಗಿದೆ. ಬಡವರಿಗೆ ಸಮಪಾಲು ಸಮಬಾಳು ಎಂಬುದು ಕನಸಾಗಿದೆ. ಜನರು ಎಲ್ಲಾ ಶೋಷಣೆಯನ್ನು ತಮ್ಮ ಹಣೆಬರಹವೆಂದು ಪರಿಗಣಿಸಿ ತೆಪ್ಪಗಿದ್ದಾರೆ. ಇದು ಸರಿಯಲ್ಲ ಎಂದರಲ್ಲದೆ, ಚರ್ಚೆ ಮತ್ತು ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಲಕ್ಷಣಗಳು. ಆದರೆ ಇಂದು ಶಾಸನ ಸಭೆಗಳಲ್ಲಾಗಲಿ ಸಾರ್ವಜನಿಕವಾಗಲಿ ಪ್ರಮುಖವೆನಿಸಿದ ವಿಚಾರಗಳು ಚರ್ಚೆಯೆ ಆಗುವುದಿಲ್ಲ. ಅಭಿಪ್ರಾಯವನ್ನು ನೇರವಾಗಿ ಅಭಿವ್ಯಕ್ತಿಸುವ ಕ್ರಮವೇ ಇಲ್ಲದೇ, ಪ್ರತಿರೋಧದ ಶಕ್ತಿ ಕಣ್ಮರೆಯಾಗಿದೆ. ಈ ಪರಿಸ್ಥಿತಿ ಬದಲಾಗಬೇಕು. ಹೊಸ ಸಮಾಜ ನಿರ್ಮಾಣ ಹೋರಾಟದಿಂದಲೇ ರೂಪುಗೊಳ್ಳಬೇಕೆಂದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:13.03.2022

89. ಜಾತಿಸೂಚಕ ಗ್ರಾಮಗಳ ಹೆಸರು ಬದಲು

ರಾಜ್ಯದಲ್ಲಿನ ಜಾತಿ ಸೂಚಕ ಗ್ರಾಮಗಳ ಹೆಸರು ಬದಲಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ್ ವಿಧಾನಸಭೆಗೆ ತಿಳಿಸಿದ್ದಾರೆ.

ತಾಂಡಾಗಳನ್ನು ಕಂದಾಯ ಗ್ರಾಮವಾಗಿಸುವ ಪ್ರಕ್ರಿಯೆ ವಿಳಂಬದ ಬಗ್ಗೆ ಕಾಂಗ್ರೆಸ್‌ನ ಬಸನಗೌಡ ತುರವಿಹಾಳ ಪ್ರಶ್ನೆಗೆ ಸಚಿವರು ಉತ್ತರಿಸುವಾಗ ಮಧ್ಯೆ ಪ್ರವೇಶಿಸಿದ ಮಾಜಿ ಸ್ಪೀಕರ್ ಕೆ. ಆರ್. ರಮೇಶ್ ಕುಮಾರ್ ಈ ವಿಚಾರದಲ್ಲಿ ಆದೇಶ ಹೊರಡಿಸಿದರೆ ಸಾಕು. ಇದಕ್ಕೆ ವೆಚ್ಚವೇನೂ ಆಗುವುದಿಲ್ಲ. ಆದರೆ, ಕೆಲ ಗ್ರಾಮಗಳಿಗೆ ಒಡ್ಡರಪಾಳ್ಯ, ಮಾದಿಗರಹಳ್ಳಿಯೆಂದು ಕರೆಯಲಾಗುತ್ತದೆ. ಇದು ಜಾತಿ ಸೂಚಕ ಮಾನವೀಯ ದೃಷ್ಟಿಯಿಂದ ಇದನ್ನು ಬದಲಿಸಬೇಕು ಎಂದು ಸಲಹೆ ನೀಡಿದರು.

ಸಹಮತ ವ್ಯಕ್ತಪಡಿಸಿದ ಸಚಿವ ಅಶೋಕ್ ಈ ಬಗ್ಗೆ ಕೈ ಕೈಗೊಳ್ಳಲಾಗುವುದು. ಸ್ಮಶಾನಗಳಲ್ಲೂ ಜಾತಿ ಸೂಚಕ ಹೆಸರು ತೆಗೆಯಲು ಈಗಾಗಲೇ ಸೂಚಿಸಲಾಗಿದೆ. ತಾಂಡಾ, ಹಟ್ಟಿಗಳನ್ನು ಕಂದಾಯ ಗ್ರಾಮವಾಗಿಸಲು 7–8 ತಿಂಗಳ ಸಮಯ ಬೇಕಾಗುತ್ತದೆ. ಅದರಂತೆ, ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಎಂದು ಭರವಸೆ ನೀಡಿದರು.

ವ್ಯವಸ್ಥಿತ ನಾಡ ಕಛೇರಿ: ರಾಜ್ಯಾದ್ಯಂತ ತಾಲ್ಲೂಕು ಕಛೇರಿ ಮಾದರಿಯ ಸುಸಜ್ಜಿತ ನಾಡ ಕಚೇರಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಡಿ.ಎಸ್. ಹೊಲಗೇರಿ ಪರವಾಗಿ ಅಮರೇಗೌಡ ಬಯ್ಯಾಪುರ ಕೇಳಿದ ಪ್ರಶ್ನೆಗೆ ಸಚಿವ ಅಶೋಕ್ ಉತ್ತರಿಸಿದರು. ರಾಜ್ಯದಲ್ಲಿ ಅಗತ್ಯವಿರುವ ಕಡೆ ಉಪ ನೋಂದಣಾಧಿಕಾರಿ ಕಚೇರಿ ಪ್ರಾರಂಭಿಸಲು ಸೂಚಿಸಲಾಗಿದೆ ಎಂದು ಶಾಸಕ ಎ ಮಂಜುನಾಥ ಪ್ರಶ್ನೆಗೆ ಸಚಿವ ಅಶೋಕ್ ಉತ್ತರ ಒದಗಿಸಿದರು.

ಜಾತಿಯ ಸಿಂಧುತ್ವ ಷರತ್ತಿನ ಆದೇಶ ವಾಪಸ್‌ಗೆ ಕ್ರಮ: ಜಾತಿ ಸಿಂಧುತ್ವ ಪ್ರಮಾಣ ಪತ್ರಕ್ಕೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ವರದಿ ಪಡೆಯಬೇಕು ಎಂಬ ಆದೇಶ ಹಿಂಪಡೆಯಲು ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಜಾತಿ ಸಿಂಧುತ್ವ ಪ್ರಮಾಣ ಪತ್ರ ಸಿಗದ ಕಾರಣ ಬೀದರ್ ಜಿಲ್ಲೆಯ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಓಂಕಾರ್ ಶೆರಿಕರ್ ಆತ್ಮಹತ್ಯೆಗೆ ಶರಣಾಗಿದ್ದರ ಬಗ್ಗೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಶೂನ್ಯ ವೇಳೆಯಲ್ಲಿ ಗಮನ ಸೆಳೆದರು. ಮೃತರ ಕುಟುಂಬಕ್ಕೆ ರೂ.25 ಲಕ್ಷ ಪರಿಹಾರ ನೀಡುವಂತೆ ಶಾಸಕರಾದ ರಾಜಶೇಖರ ಪಾಟೀಲ್ ಹುಮ್ನಾಬಾದ್, ಈಶ್ವರಖಂಡ್ರೆ ಒತ್ತಾಯಿಸಿದರು.

ಮುಖ್ಯಮಂತ್ರಿಯವರು ಮಹಾರಾಷ್ಟ್ರಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್ ನೀಡಿದ ಆದೇಶ ಆಧರಿಸಿ ಜಾತಿ ಸುಂಧುತ್ವ ಪ್ರಮಾಣ ಪತ್ರಕ್ಕೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ವರದಿ ಪಡೆಯಲು 2021ರ ಜನವರಿಯಲ್ಲಿ ಆದೇಶಿಸಲಾಗಿದೆ. ಇದನ್ನು ವಾಪಸ್ಸು ಪಡೆಯುವ ಬಗ್ಗೆ ಅಡ್ವೋಕೇಟ್ ಜನರಲ್ ಸೇರಿದಂತೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಮೃತ ನೌಕರನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲಾಗುವುದು ಎಂದರು.

ಏನಾದರೂ ಮಾಡಿ ಹಕ್ಕುಪತ್ರ ಕೊಡಿ: ರಾಜ್ಯದಲ್ಲಿನ ಬಡ ಕುಟುಂಬಗಳಿಗೆ 94(ಡಿ) ಪ್ರಕಾರ ಹಕ್ಕುಪತ್ರ ನೀಡದ ಕಾರಣ ಜನ ತೊಂದರೆ ಅನುಭವಿಸುತ್ತಿದ್ದಾರೆ. ಯಾವ ಕ್ರಮ ತೆಗೆದುಕೊಳ್ಳುವುದೋ ಗೊತ್ತಿಲ್ಲ. ಹಕ್ಕುಪತ್ರ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸರ್ಕಾರವನ್ನು ಒತ್ತಾಯಿಸಿದ ಪ್ರಸಂಗ ನಡೆಯಿತು.

ಬಿಜೆಪಿ ಶಾಸಕ ಆಶೋಕ್ ನಾಯಕ್ ಸುಮಾರು 27,380 ಗ್ರಾಮಗಳು ದಾಖಲೆ ರಹಿತವಾಗಿದೆ. ಪಂಚಾಯಿತಿ ಇಲಾಖೆ ಪ್ರಕಾರ 59,567 ಗ್ರಾಮ ಎಂದು ಕಂದಾಯ ಇಲಾಖೆ ಪ್ರಕಾರ 32,373 ಗ್ರಾಮ ಇದೆ ಎಂದು ದಾಖಲೆ ಹೇಳುತ್ತದೆ ಈಗಾಗಲೇ 13 ಆದೇಶ ಮಾಡಿದ್ದರೂ ಕಂದಾಯ ಗ್ರಾಮ ಮಾಡಿಲ್ಲ, ತಕ್ಷಣ ಮಾಡಿ, ವಾಸ ಮತ್ತು ನಿವೇಶನದ ಹಕ್ಕು ನೀಡಬೇಕು ಎಂದು ಆಗ್ರಹಿಸಿದರು.

ಆಧಾರ: ವಿಜಯಕರ್ನಾಟಕ, ದಿನಾಂಕ:15.03.2022

90. ಗೋಪಾಲಗೌಡರ ಹೆಸರಿನಲ್ಲಿ ಕೃಷಿ, ಸಂಸದೀಯಪಟು ಪ್ರಶಸ್ತಿ

ಭೂ ಸುಧಾರಣೆ ಸೇರಿದಂತೆ ಕೃಷಿಕರ ಬಗ್ಗೆ ಅತ್ಯಂತ ಕಾಳಜಿ ಹೊಂದಿದ್ದ ಮತ್ತು ಅತ್ಯಂತ ಉತ್ತಮ ಸಂಸದೀಯಪಟುವಾಗಿದ್ದ ಶಾಂತವೇರಿ ಗೋಪಾಲಗೌಡರ ಹೆಸರಿನಲ್ಲಿ ರಾಜ್ಯ ಸರ್ಕಾರದ ವತಿಯಿಂದ ಶ್ರೇಷ್ಠ ಕೃಷಿಕ ಮತ್ತು ಶ್ರೇಷ್ಠ ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಶಾಸಕ ಎಂಬ ಎಂದು ರಾಜ್ಯಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಮುಖ್ಯಮಂತ್ರಿಯವರು ಘೋಷಿಸಿದರು.

ವಿಧಾನಸೌಧದ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ ಶಾಂತವೇರಿ ಗೋಪಾಲಗೌಡರ ಜನ್ಮಶತಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸದನದಲ್ಲಿ ಅವರ

ವಾಕ್ಚಾತುರ್ಯ, ವಾದ ಮಂಡನೆ ಇಂದಿಗೂ ಅತ್ಯಂತ ಶ್ರೇಷ್ಠ ಸಂಸದೀಯಪಟು ಎಂಬುದನ್ನು ತಿಳಿಸುತ್ತದೆ ಎಂದು ತಿಳಿಸಿದರು.

ತಾವು ವೈಯಕ್ತಿಕವಾಗಿ ಜಮೀನು ಹೊಂದಿಲ್ಲದಿದ್ದರೂ ಗೇಣಿದಾರರಿಗಾಗಿ ಗೌಡರು ಹೋರಾಟ ಮಾಡಿದ್ದರು. ಶಿವಮೊಗ್ಗ ಜಿಲ್ಲೆಯಲ್ಲಿ ಭೂ ಸುದಾರಣೆ ಕಾಯ್ದೆ ಕುರಿತ ಹೋರಾಟವನ್ನು ಸಂಪೂರ್ಣ ಸಂಶೋಧನೆ ನಡೆಸಿ ಸಂಪುಟವನ್ನು ಹೊರ ತರುವಂತೆ ಇದೇ ವೇಳೆ ಸೂಚಿಸಿದರು. ಇದರ ಜೊತೆಗೆ ಗೋಪಾಲಗೌಡರನ್ನು ಕುರಿತ ಪುಸ್ತಕಗಳು ಗಂಥಾಲಯದಲ್ಲಿ ದೊರೆಯುವಂತೆಯೂ ಮಾಡಲಾಗುತ್ತದೆ ಎಂದರು.

ರಾಮ್ ಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ, ಅವರ ಚಿಂತನೆಗಳಿಂದ ಪ್ರೇರಣೆಯಾಗಿದ್ದ ಗೌಡರು, ರಾಜ್ಯದಲ್ಲಿ ಚಳುವಳಿ ರೂಪದ ದೊಡ್ಡ ಕ್ರಾಂತಿಯನ್ನೆ ಮಾಡಿದ್ದರು. ತಮಗಾಗಿ ಏನನ್ನೂ ಸಂಪಾದಿಸಿಕೊಳ್ಳದ ಗೌಡರು ಅವರು ಅಳವಡಿಸಿ ಕೊಂಡಿದ್ದ ಜನಪರ ವೈಚಾರಿಕೆಯೇ ಅವರ ಆಸ್ತಿಯಾಗಿತ್ತು. ಅವರ ವಿಚಾರ, ತತ್ವಗಳು ಮತ್ತು ಆದರ್ಶವಿರುವ ತನಕ ಗೌಡರು ಬದುಕಿರುತ್ತಾರೆ ಎಂದು ಸ್ಮರಿಸಿದರು. ಗೃಹ ಸಚಿವ ಅರಗ ಜ್ಞಾನೇಂದ್ರ ಮಾತನಾಡಿ, ಸಮಾಜವಾದಿ ಕೇವಲ ಭಾಷಣದ ವಸ್ತುವಾಗಿದ್ದ ಕಾಲದಲ್ಲಿ ಸಮಾಜವಾದವನ್ನು ಅಳವಡಿಸಿಕೊಂಡು ಗೋಪಾಲಗೌಡರು ಬದುಕಿದ್ದರು. ರಾಜಕಾರಣ ಕೆಟ್ಟುಹೋಗಿರುವ ಪ್ರಸ್ತುತ ಕಾಲಘಟ್ಟದಲ್ಲಿ ಅವರಂತಹ ನಾಯಕರು ಅವಶ್ಯವಾಗಿದೆ ಎಂದು ತಿಳಿಸಿದರು. ಮುಂದಿನ ಪೀಳಿಗೆಗೆ ಗೋಪಾಲಗೌಡರನ್ನು ತಲುಪಿಸುವ ಉದ್ದೇಶದಿಂದ ಶತಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಮೂಲಕ ಅವರ ಕೊಡುಗೆಗಳನ್ನು ಸ್ಮರಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಹಕಾರ ಸಚಿವ ಎಸ್. ಟಿ. ಸೋಮಶೇಖರ್, ಮಾಜಿ ಶಾಸಕ ಹೇಮಚಂದ್ರ ಸಾಗರ್ ಇತರರಿದ್ದರು.

ಆಧಾರ: ಉದಯವಾಣಿ, ದಿನಾಂಕ:15.03.2022

ದಿನಾಂಕ: 14.03.2022 ರಂದು ವಿಧಾನಸೌಧದ ಆವರಣದಲ್ಲಿರುವ ಶಾಂತವೇರಿ ಗೋಪಾಲಗೌಡರವರ ಪುತ್ಥಳಿಯ ಮುಂದೆ ಆಯೋಜಿಸಿದ್ದ, ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವ ಆಚರಣೆ ಉದ್ಘಾಟನಾ ಸಮಾರಂಭದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಗೋಪಾಲಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಪಾಲ್ಗೊಂಡಿದ್ದರು.

91. ಆನ್‌ಲೈನ್ ಗೇಮ್ ಸರ್ಕಾರ ಅಸಹಾಯಕ

ಐಪಿಎಲ್ ಬೆಟ್ಟಿಂಗ್ ಸೇರಿ ಆನ್‌ಲೈನ್ ಗೇಮ್‌ಗಳಿಗೆ ಕಡಿವಾಣ ಹಾಕಲು ಕಠಿಣ ಕಾಯ್ದೆ ತಂದರೂ ಜಾರಿ ತರುವಲ್ಲಿ ಅಸಹಾಯಕನೆನಿಸಿದ್ದೇನೆ ಎಂದು ಮುಖ್ಯಮಂತ್ರಿಯವರು ಅಳಲು ತೋಡಿಕೊಂಡಿದ್ದಾರೆ. ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ರಮೇಶ್ ಕುಮಾರ್ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಿದ್ದ ವೇಳೆ ಪ್ರತಿಕ್ರಿಯಿಸಿದ ಬೊಮ್ಮಾಯಿ ಈ ಹಿಂದೆ ಐಪಿಎಲ್ ಬೆಟ್ಟಿಂಗ್, ಆನ್‌ಲೈನ್ ಕ್ರೀಡೆಗಳನ್ನು ನಿಯಂತ್ರಿಸಲು ರಾಜ್ಯದಲ್ಲಿ ಬಲಿಷ್ಠ ಕಾನೂನು ಇರಲಿಲ್ಲ. ಕಳೆದ ಅಧಿವೇಶನದಲ್ಲಿ ಕರ್ನಾಟಕ ಪೊಲೀಸ್ ತಿದ್ದುಪಡಿ ಕಾಯ್ದೆ ತರುವ ಮೂಲಕ ಕಾನೂನು ಬಲಪಡಿಸಲಾಯಿತು. ಆದರೆ, ಈಗ ಹೈಕೋರ್ಟ್ ಆನ್‌ಲೈನ್ ಕ್ರೀಡೆಗಳಿಗೆ ಅನುಮತಿ ನೀಡಿರುವುದು ನಿಸ್ಸಾಯಕರನ್ನಾಗಿಸಿದೆ ಎಂದರು.

ಐಪಿಎಲ್, ಆನ್‌ಲೈನ್ ಗೇಮ್‌ಗಳಿಗೆ ನಿಯಂತ್ರಣ ಹೇರಲು ಕಠಿಣ ಕಾನೂನು ಜಾರಿ ತರುವ ಸಂದರ್ಭದಲ್ಲಿ ದೊಡ್ಡಮಟ್ಟದಲ್ಲಿ ಪ್ರಭಾವ ಬೀರಬಲ್ಲ ವ್ಯವಸ್ಥೆ ತಲೆಎತ್ತಿತ್ತು. ಬೇರೆಬೇರೆ ರೂಪದಲ್ಲೇ ನನ್ನ ಮೇಲೆ ಒತ್ತಡ ಹೇರಲಾಯಿತು. ಕೊರೋನಾ ಸಂದರ್ಭದಲ್ಲಿ ನನ್ನ ಕ್ಷೇತ್ರಕ್ಕೆ 1 ಲಕ್ಷ ಲಸಿಕೆ ಡೋಸ್ ನೀಡುವ ಆಮಿಷ ಒಡ್ಡಲಾಗಿತ್ತು. ಇದ್ಯಾವುದೇ ಆಮಿಷ ಪ್ರಭಾವಕ್ಕೆ ಒಳಗಾಗದೇ ಬೆಟ್ಟಿಂಗ್ ದಂದೆಗೆ ಕಡಿವಾಣ ಹಾಕಲು ಕಠಿಣ ಕಾನೂನು ಜಾರಿ ತಂದೆವು ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ಐಪಿಎಲ್‌ನಿಂದ ಸರ್ವನಾಶ: ಹಳ್ಳಿಯಿಂದ ಬೆಂಗಳೂರಿನವರೆಗೆ ಐಪಿಎಲ್ ಬೆಟ್ಟಿಂಗ್ ದಂಧೆ ನಡೆಯಲಿದ್ದು, ಇದರಲ್ಲಿ ಭಾಗಿಯಾಗುವರ ಕುಟುಂಬಗಳು ಸರ್ವನಾಶ ಆಗಲಿವೆ. ಕ್ರಿಕೆಟ್‌ನಂತಹ ಕ್ರೀಡೆಯನ್ನು ರೇಸ್ ತರಾ ಮಾಡಿಕೊಂಡು ಜೂಜು ಕಟ್ಟಲಾಗುತ್ತಿದೆ. ಇನ್ನು ಸಿಎಸ್‌ಆರ್ ನಿಧಿಯಡಿ ಅಭಿವೃದ್ಧಿ ಪಡಿಸುವ ಸರ್ಕಾರಿ ಶಾಲೆ ಅಂಗಳವನ್ನೇ ಕುಡಿತ. ಇಸ್ಟೀಟ್ ಅಡ್ಡೆಗಳನ್ನಾಗಿ ಪರಿವರ್ತಿಸಿಕೊಳ್ಳಲಾಗಿದೆ. ನಮ್ಮ ಸಂಸ್ಕೃತಿ ಎತ್ತಕಡೆ ಸಾಗಿದೆ. ಇದರಲ್ಲಿ ಆ ಪಾರ್ಟಿ ಈ ಪಾರ್ಟಿ ಅಲ್ಲ ಎಲ್ಲ ಪಾರ್ಟಿಯವರು ಇದ್ದಾರೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರಕ್ಕೆ ಶಕ್ತಿ ಇಲ್ಲವೇ ಎಂದು ರಮೇಶ್ ಕುಮಾರ್ ಸಭೆಯಲ್ಲಿ ಸಾತ್ವಿಕ ಆಕ್ರೋಶ ಹೊರಹಾಕಿದರು.

ಆಧಾರ: ವಿಜಯವಾಣಿ, ದಿನಾಂಕ:15.03.2022

92. ಕಾಗದಪತ್ರ ಸಮಿತಿ ವರದಿಯಲ್ಲಿ ಸಿಂಧೂರಿ ಈಜುಕೊಳ ಪ್ರಸ್ತಾಪ

ನಿರ್ಮಿತಿ ಕೇಂದ್ರಗಳು ಈವರೆಗೆ ವಿಧಾನಮಂಡಲಕ್ಕೆ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸದಿರುವ ಬಗ್ಗೆ ಸೆಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯಿಂದ ತೀವ್ರ ಅಕ್ಷೇಪ ವ್ಯಕ್ತವಾಗಿದ್ದು, ಪ್ರತಿ ವರದಿಗಳನ್ನು ವಿಧಾನಮಂಡಲಕ್ಕೆ ಸಲ್ಲಿಸುವಂತೆ ನಿಯಮಗಳಿಗೆ ತಿದ್ದುಪಡಿ ಮಾಡಬೇಕು ಎಂದು ಶಿಫಾರಸ್ಸು ಮಾಡಿ ಸಮಿತಿ ವರದಿ ಸಲ್ಲಿಸಿದೆ. ಸದನದಲ್ಲಿ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ ಅಧ್ಯಕ್ಷ ಸಾ.ರಾ. ಮಹೇಶ್ ಅವರು ವರದಿ ಮಂಡಿಸಿದ್ದಾರೆ.

ಈ ವರದಿಯಲ್ಲಿ ರಾಜ್ಯದಲ್ಲಿ ನಿರ್ಮಿತಿ ಕೇಂದ್ರವು 1988ರಲ್ಲಿ ಸ್ಥಾಪನೆಯಾಗಿದ್ದರೂ ಈವರೆಗೆ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ವಿಧಾನ ಮಂಡಲಕ್ಕೆ ಸಲ್ಲಿಸಿಲ್ಲ. ಸರ್ಕಾರದಿಂದ ಅನುದಾನವನ್ನು ಯಾವುದೇ ಇಲಾಖೆ ಹಾಗೂ ಸಂಸ್ಥೆಗಳು ಪಡೆದಾಗ ಖರ್ಚು ವೆಚ್ಚಗಳನ್ನು ಕೂಲಂಕಶವಾಗಿ ಪರಿಶೀಲಿಸಿ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಕಡ್ಡಾಯವಾಗಿ ವಿಧಾನಮಂಡಲಕ್ಕೆ ಸಲ್ಲಿಸಬೇಕಿದೆ. ಆದರೆ, ಕೆಲವು ನಿರ್ಮಿತಿ ಕೇಂದ್ರಗಳಲ್ಲಿ ಹಣ ದುರುಪಯೋಗ ಆಗಿರುವುದರ ಬಗ್ಗೆ ಮಾಹಿತಿ ಬಂದಿದೆ. ಮೈಸೂರು ಜಿಲ್ಲೆಯಲ್ಲಿ ರೂ.16.35 ಲಕ್ಷ ವೆಚ್ಚದಲ್ಲಿ ಪಾರಂಪರಿಕ ಕಟ್ಟಡದ ನೆಲಹಾಸನ್ನು ತೆಗೆದು ಹಾಕಿರುವುದು ಮತ್ತು ಈಜುಕೊಳಕ್ಕೆ ರೂ.28 ಲಕ್ಷಗಳನ್ನು ಖರ್ಚು ಮಾಡಿರುವುದು ಈ ಕಾಮಗಾರಿಗಳನ್ನು ವರ್ಣಿಸುವ ವೇಳೆ ಅನುಮತಿ ಪಡೆಯದೇ

ಹಾಗೂ ಯಾವುದೇ ಸರ್ಕಾರಿ ನಿಯಮಗಳನ್ನು ಪಾಲಿಸದೇ ನಿರ್ವಹಿಸಲಾಗಿದೆ. ಮುಂದೆ ಈ ರೀತಿ ಆಗಬಾರದು ಎಂಬುದು ಸಮಿತಿ ಉದ್ದೇಶ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:16.03.2022

93. ಹಣಕಾಸು ಇಲಾಖೆಗೆ ಸರ್ಜರಿ ಮಾಡಿ

ಹಣಕಾಸು ಇಲಾಖೆ ಮೇಲೆ ಮುಗಿಬಿದ್ದ ಮೇಲ್ಮನೆ ಸದಸ್ಯರು, ಈ ಇಲಾಖೆಗೆ 'ತುರ್ತು ಚಿಕಿತ್ಸೆ' ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಬಿಜೆಪಿಯ ಎಚ್.ವಿಶ್ವನಾಥ್, 'ಹಣಕಾಸು ಇಲಾಖೆಯಲ್ಲಿ ಹಲವು ವರ್ಷಗಳಿಂದ ಕೆಲವು ಅಧಿಕಾರಿಗಳು ಠಿಕಾಣಿ ಹೂಡಿದ್ದಾರೆ. ಹೀಗೆ ಯಾವೊಬ್ಬ ವ್ಯಕ್ತಿ ಒಂದೇ ಜಾಗದಲ್ಲಿ ಉಳಿದುಕೊಂಡಾಗ, ಅದಕ್ಕೆ ಆ ವ್ಯಕ್ತಿಯೇ ಮಾಲೀಕನಾಗಿ ಬಿಡುವ ಅಪಾಯ ಇರುತ್ತದೆ. ಸಾವಿರಾರು ಕೋಟಿ ಸಾಲ ಇದ್ದು, ಆದಾಯ ಖೋತಾ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಇಡೀ ಇಲಾಖೆಯ ಆಮೂಲಾಗ್ರ ಬದಲಾವಣೆ ಅಗತ್ಯವಿದೆ' ಎಂದು ಹೇಳಿದರು.

ಈ ಹಿಂದೆಲ್ಲ ಹಣಕಾಸು ಇಲಾಖೆಯನ್ನು ಬೇರೊಬ್ಬ ಸಚಿವರಿಗೆ ನೀಡಲಾಗುತ್ತಿತ್ತು. ಬಜೆಟ್ ಮಂಡನೆ ಕೂಡ ಸಚಿವರೇ ಮಾಡುತ್ತಿದ್ದರು. ಕಳೆದೆರಡು ದಶಕಗಳಲ್ಲಿ ಈ ಪದ್ಧತಿ ಬದಲಾಗಿದ್ದು, ಮುಖ್ಯಮಂತ್ರಿಗಳ ಬಳಿಯೇ ಈ ಖಾತೆ ಇರುತ್ತದೆ. ಹಿಂದಿನ ವ್ಯವಸ್ಥೆಯಂತೆಯೇ ಸಚಿವರಿಗೆ ನೀಡಬೇಕು. ಹಾಗಂತ, ಮುಖ್ಯಮಂತ್ರಿಗಳಾದವರಿಗೆ ಇದನ್ನು ನಿಭಾಯಿಸುವ ಸಾಮರ್ಥ್ಯ ಇಲ್ಲ ಎಂದಲ್ಲ ಈಗಾಗಲೇ ಆಗಿ ಹೋದವರೂ ಸೇರಿ ಎಲ್ಲ ಮುಖ್ಯಮಂತ್ರಿಗಳೂ ಸಮರ್ಥರಾಗಿದ್ದಾರೆ. ಆದರೆ, ಅದನ್ನು ನಿಭಾಯಿಸಲು ಅವರಲ್ಲಿ ಸಮಯ ಎಲ್ಲಿದೆ ಎಂದು ಕೇಳಿದರು.

ಈ ನಿಟ್ಟಿನಲ್ಲಿ ಪ್ರಧಾನಿ ಮೋದಿ ಅವರು ಮಾದರಿ ಎಂದ ಅವರು, ಗುಜರಾತ್ ಮುಖ್ಯಮಂತ್ರಿ ಆಗಿದ್ದಾಗಲೂ ಮೋದಿ ಅವರು ಯಾವುದೇ ಖಾತೆ ಹೊಂದಿರಲಿಲ್ಲ. ಅದೇ ರೀತಿ, ಪ್ರಧಾನಿಯಾದ ಮೇಲೂ ಯಾವ ಖಾತೆಯೂ ಅವರ ಬಳಿ ಇಲ್ಲ ಎಂದರು.

ಆಡಳಿತದಲ್ಲಿ ವರ್ಗಾವಣೆ ದಂಧೆ: ಆಡಳಿತದಲ್ಲಿ – ವರ್ಗಾವಣೆ ದಂಧೆ ನಡೆಯುತ್ತಿದೆ, ಎಂದು 2 ಸರ್ಕಾರಕ್ಕೆ ಮತ್ತೆ ಚಾಟಿ ಬೀಸಿದ ಆಡಳಿತ ಪಕ್ಷದ ಎಚ್.ವಿಶ್ವನಾಥ್, ಈ ಹಿನ್ನೆಲೆಯಲ್ಲಿ ಆಡಳಿತಕ್ಕೆ ಸಂಬಂಧಿಸಿದ ಚರ್ಚೆಗಾಗಿಯೇ ಕನಿಷ್ಠ ಒಂದು ವಾರ ವಿಶೇಷ ಅಧಿವೇಶನ ಕರೆಯಬೇಕೆಂದು ಆಗ್ರಹಿಸಿದರು. ಆಡಳಿತವೆಂದರೆ ಅಧಿಕಾರಿಗಳಿಂದ, ಅಧಿಕಾರಿಗಳಿಗಾಗಿ ಮತ್ತು ಅಧಿಕಾರಿಗಳಿಗೋಸ್ಕರ ಎಂಬಂತಾಗಿದೆ. ಶೇ.40 ಅಧಿಕಾರಿಗಳು ಖಾಲಿ ಇದ್ದಾರೆ. ಇನ್ನು ಕೆಲವರು 2–3 ಹುದ್ದೆಗಳನ್ನು ಅನುಭವಿಸುತ್ತಿದ್ದಾರೆ. ಸಾಮಾನ್ಯವಾಗಿ ಆಡಳಿತ ಬಲದ ಮೇಲೆ ಅಭಿವೃದ್ಧಿಯ ಪಥ ಸಾಗುತ್ತದೆ. ಬಲವೇ ಇಲ್ಲವೆಂದಾದರೆ 'ಅಭಿವೃದ್ಧಿ ಹೇಗೆ? ಆದ್ದರಿಂದ ಆಡಳಿತದ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಕರೆಯಬೇಕು. ಅಲ್ಲಿ ಬರುವ ಅಭಿಪ್ರಾಯಗಳನ್ನು ಆಧರಿಸಿ, ಆಡಳಿತವನ್ನು ಬಿಗಿಗೊಳಿಸಬೇಕೆಂದು ಮುಖ್ಯಮಂತ್ರಿಗೆ ಸಲಹೆ ಮಾಡಿದರು.

ಹಣಕಾಸು ಇಲಾಖೆಯೇ ಸಿಎಂ

ಕಾಂಗ್ರೆಸ್‌ನ ಮಂಜುನಾಥ್ ಭಂಡಾರಿ ಮಾತನಾಡಿ, ಹಣಕಾಸು ಇಲಾಖೆಯ ಧೋರಣೆ ನೋಡಿದರೆ, ಈ ಸರ್ಕಾರವನ್ನು ನಡೆಸುತ್ತಿದೆಯೇ ಎಂಬ ಅನುಮಾನ ಬರುತ್ತಿದೆ. ಒಂದು ವೇಳೆ ಹೌದಾದರೆ, ಮುಖ್ಯಮಂತ್ರಿಗಳ್ಯಾಕೆ? ಶಾಸಕರು, ಪರಿಷತ್ತಿನ ಸದಸ್ಯರು ಯಾಕೆ? ಇದು ಜನಪ್ರತಿನಿಧಿಗಳಿಗೆ ಆದ ಅವಮಾನ ಎಂದು ಆಕ್ರೋಶ ವ್ಯಕ್ತಪಡಿಸಿದರು. ಗ್ರಾ.ಪಂ. ಸದಸ್ಯರ ಗೌರವಧನ ಹೆಚ್ಚಳಕ್ಕೆ

ಸಂಬಂಧಿಸಿದಂತೆ ಸ್ವತಃ ಮುಖ್ಯಮಂತ್ರಿಗಳು ಕಳುಹಿಸಿದ ಪ್ರಸ್ತಾವನೆಯನ್ನೇ ಹಣಕಾಸು ಇಲಾಖೆ ತಿರಸ್ಕರಿಸುತ್ತದೆ. ಮುಖ್ಯಮಂತ್ರಿಗಳ ಸೂಚನೆಗೇ ಬೆಲೆ ಇಲ್ಲ. ಅವರನ್ನು ಕೇಳಿಯೇ ಎಲ್ಲವನ್ನೂ ಮಾಡುವುದಾದರೆ ನಾವೇಕೆ? ಹಲವು ವರ್ಷಗಳಿಂದ ಕೆಲವು ಅಧಿಕಾರಿಗಳು ಹಣಕಾಸು ಇಲಾಖೆಯಲ್ಲಿಯೇ ಬೀಡುಬಿಟ್ಟಿದ್ದಾರೆ. ಮುಖ್ಯಮಂತ್ರಿಗಳು ಹಣಕಾಸು ಇಲಾಖೆಯನ್ನು ಅಧಿಕಾರಿಗಳ ಕೈಗಿಟ್ಟು ಕುಳಿತಿದ್ದಾರೆ. ಆದ್ದರಿಂದ ಉತ್ತಮವಾಗಿ ನಿರ್ವಹಣೆ ಮಾಡುವ ಸಾಮರ್ಥ್ಯ ಇರುವ ಮಂತ್ರಿಗಳಿಗೆ ವಹಿಸಬೇಕೆಂದು ಅಭಿಪ್ರಾಯಪಟ್ಟರು.

ಪಂಚಾಯತಿಗೊಂದು ಸಹಕಾರಿ ಸಂಘ

ರಾಜ್ಯದಲ್ಲಿರುವ ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಸಹಕಾರಿ ಸಂಘಗಳನ್ನು ನೀಡಲು ಅವಕಾಶ ಇದ್ದು ಆಯಾ ಪಂಚಾಯ್ತಿ ಸ್ಥಿತಿಗತಿ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಕ್ರಮಕೈಗೊಳ್ಳಲಿದೆ ಎಂದು ಸಹಕಾರ ಸಚಿವ ಸರ್ಕಾರ ಎಂದು ಸೋಮಶೇಖರ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಹನುಮಂತ ನಿರಾಣಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆಗೆ ಈ ಹಿಂದೆ ಪ್ರತಿ ಸಂಘವು ಕನಿಷ್ಠ 5 ಸಾವಿರ ಎಕರೆ ಸಾಗುವಳಿ ಭೂಮಿ ಹಾಗೂ ಕೇಂದ್ರಸ್ಥಾನದಿಂದ 8 ಕಿ.ಮೀ. ಪರಿಧಿ ಹೊಂದಿರಬೇಕಾಗಿತ್ತು, ಈಗ ಆ ನಿಯಮವನ್ನು ಕ್ರಮವಾಗಿ 4 ಸಾವಿರ ಸಾಗುವಳಿ ಭೂಮಿ ಹಾಗೂ 5 ಪರಿಧಿಗೆ ಸೀಮಿತಗೊಳಿಸಲಾಗಿದೆ. ಈಗಾಗಲೇ 4 ಸಾವಿರ ಎಕರೆ ಸಾಗುವಳಿ ಇರುವ ಕೆಲವು ಪಂಚಾಯ್ತಿಗಳಲ್ಲಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ರಾಜ್ಯದಲ್ಲಿ 5,783 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿವೆ. ಇದರಲ್ಲಿ 4,783 ಲಾಭದಲ್ಲಿದ್ದು, ಉಳಿದ ಒಂದು ಸಾವಿರ ನಷ್ಟದಲ್ಲಿವೆ ಎಂದು ಮಾಹಿತಿ ನೀಡಿದ ಎಸ್.ಟಿ. ಸೋಮಶೇಖರ್, ಕನಿಷ್ಠ 600 ರೈತ ಕುಟುಂಬಗಳನ್ನು ಒಳಗೊಂಡಿರಬೇಕು ಹಾಗೂ ಕನಿಷ್ಠ 20 ಲಕ್ಷ ಅಲ್ಪಾವಧಿ ಸಾಲ ನೀಡುವ ಸಾಮರ್ಥ್ಯ ಹೊಂದಿರಬೇಕೆಂದು ಹೇಳಿದರು.

ನಿಗಮಗಳ ವಿಲೀನ: ಸಮಿತಿ ರಚನೆ

ರಾಜ್ಯ ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕಾವೇರಿ ಹ್ಯಾಂಡ್‌ಲೂಮ್ಸ್ ವಿಲೀನಗೊಳಿಸುವ ಸಂಬಂಧ ಸಮಿತಿ ರಚಿಸಿದ್ದು ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಾರ್ವಜನಿಕ ಉದ್ಯಮಗಳ ಸಚಿವ ಎಂಟಿಬಿ ನಾಗರಾಜ್ ತಿಳಿಸಿದರು.

ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಕೆ.ಹರೀಶ್ ಕುಮಾರ್ ಪ್ರಶ್ನೆಗೆ ಉತ್ತಿರಿಸಿದ ಅವರು, ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 60 ಸಾರ್ವಜನಿಕ ವಲಯದ ಉದ್ದಮೆಗಳ ನಿಗಮ, ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ 34 ಲಾಭದಲ್ಲಿವೆ. ಇದರಲ್ಲಿ 21 ಹಾಗೂ 5 ಸೇವಾವಲದಲ್ಲಿರುವ ನಿಗಮ ಮಂಡಳಿಗಳಾಗಿವೆ ಎಂದರು.

ಸಾರ್ವಜನಿಕ ಉದ್ಯಮಗಳ ಸಮಿತಿ ಪ್ರಾರಂಭಿಕ ಸಭೆಯ ಶಿಫಾರಸು ಮೇರೆಗೆ ಕಾವೇರಿ ಹ್ಯಾಂಡ್ ಲೂಮ್ಸ್ ಸೇರಿ ಮೂರು ನಿಗಮಗಳ ವಿಲೀನಗೊಳಿಸುವ ಸಂಬಂಧ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯು ಸಾಧಕ ಬಾಧಕಗಳನ್ನು ಒಳಗೊಂಡ ವರದಿ ಸಲ್ಲಿಸಲಿದ್ದು, ಅದನ್ನು ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

2,280 ಕೋಟಿ ತೆರಿಗೆ ಸಂಗ್ರಹ: ಇದಕ್ಕೂ ಮುನ್ನ ಪ್ರಶ್ನೋತ್ತರ ವೇಳೆ ಸದಸ್ಯ ಡಾ.ಕೆ.ಗೋವಿಂದ್ ರಾಜ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 2018–19 ರಲ್ಲಿ ರೂ. 711.88 ಕೋಟಿ, 2019–20ರಲ್ಲಿ ರೂ. 736.77 ಕೋಟಿ, 2020–21ರಲ್ಲಿ ರೂ. 841.72 ಕೋಟಿ ಸೇರಿದಂತೆ ಒಟ್ಟು ರೂ. 2,289.64 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ ಎಂದು ಮಾಹಿತಿ ನೀಡಿದರು.

ಆಧಾರ: ಉದಯವಾಣಿ, ದಿನಾಂಕ: 16.03.2022

94. ಕೃಷ್ಣ ಯೋಜನೆಗೆ ಕೊಡುಗೆ ಯಾರದ್ದು

ನೀರಾವರಿ ಯೋಜನೆಗೆ ಯಾರು ಎಷ್ಟು ಅನುದಾನ ನೀಡಿದ್ದಾರೆ ಎಂಬ ವಿಷಯವಾಗಿ ಹಾಲಿ, ಮಾಜಿ ನೀರಾವರಿ ಸಚಿವರು ಏಟಿಗೆ ಎದಿರೇಟು ನೀಡಿದ ಪ್ರಸಂಗಕ್ಕೆ ಸದನ ಸಾಕ್ಷಿಯಾಯಿತು.

ಬಜೆಟ್ ಚರ್ಚೆ ವೇಳೆ ಕಾಂಗ್ರೆಸ್ ಭರವಸೆಯಂತೆ ನೀರಾವರಿ ಯೋಜನೆಗೆ 50 ಸಾವಿರ ಕೋಟಿ ಕೊಟ್ಟಿದೆ. 1.50 ಲಕ್ಷ ಕೋಟಿ ವ್ಯಯಿಸುವ ಭರವಸೆ ನೀಡಿದ್ದ ಬಿಜೆಪಿ, ಕೇವಲ ರೂ.60 ಸಾವಿರ ಕೋಟಿ ಖರ್ಚು ಮಾಡಿದೆ. ಭರವಸೆ ಹುಸಿಯಾಗಿದೆ. ಎಂದು ಮಾಜಿ ನೀರಾವರಿ ಸಚಿವ ಎಂ.ಬಿ. ಪಾಟೀಲ್ ಹೇಳುತ್ತಿದ್ದಂತೆ ಆಂಗ್ಲರಿಗಿಂತಲೂ ಕಾಂಗ್ರಸಿಗರು ಮೋಸಗಾರರು ಕೃಷ್ಣ ಯೋಜನೆಗೆ 2013–2018ರ ಅವಧಿಯಲ್ಲಿ ಅನುದಾನವೇ ನೀಡಲಿಲ್ಲ ಎಂದೂ ಸಚಿವ ಗೋವಿಂದ ಕಾರಜೋಳ ಆವೇಶಭರಿತರಾಗಿ ತಿರುಗುಬಾಣ ಬಿಟ್ಟರು.

ಸಿಟ್ಟಿಗೆದ್ದ ಸಿದ್ದರಾಮಯ್ಯ ನಮ್ಮ ಅವಧಿಯಲ್ಲಿ ಕೃಷ್ಣೆಗಷ್ಟೇ ಅನುದಾನ ನೀಡುತ್ತೇನೆ ಅಂತ ಹೇಳಿಲ್ಲ 5 ವರ್ಷದಲ್ಲಿ 50 ಸಾವಿರ ಕೋಟಿ ನೀಡುತ್ತೇನೆ ಎಂದಿದ್ದೆ ಎಂದರು.

ನಾನು ಬರಗಾಲ ಪ್ರದೇಶದಿಂದ ಬಂದವನು ನೀರಿಗಾಗಿ ನೋವು ಗೊತ್ತಿದೆ. ನನ್ನಲ್ಲೂ ದಾಖಲೆ ಇದೆ ಬಿಚ್ಚಿಡುತ್ತೇನೆ ಎಂದು ಕಾರಜೋಳ ಪ್ರತ್ಯುತ್ತರಿಸಿದರು. ಪಾಟೀಲ್‌ರದ್ದು ಸುಖಕಾಲ, ನಮ್ಮದು ಬರಗಾಲ ಎಂದು ಕಾರಜೋಳ ಕಾಲೆಳೆದರು.

ಕೃಷ್ಣೆಯಲ್ಲಿ ಮಿಂದೆದ್ದ ಎಂ.ಬಿ. ಪಾಟೀಲ್ ಮತ್ತು ಕಾರಜೋಳ: ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಸುಜಲಾಂ ಸುಫಲಾಂ ನೀರಾವರಿ ಯೋಜನೆಗೆ ಅನುದಾನ ಮೀಸಲಿಟ್ಟಿಲ್ಲ. ಕೃಷ್ಣೆಗಾಗಿ ಇಂದಿರಾ ಮತ್ತು ನಿಜಲಿಂಗಪ್ಪ ಅವರನ್ನು ಬಿಜಾಪುರ ಮಂದಿ ಬಂಗಾರದಲ್ಲಿ ತೂಗಿದ್ದೇವೆ ಎಂದು ನೀರಾವರಿ ಸಚಿವರೇ ಸದನದಲ್ಲಿ ತಿಳಿಸಿದ್ದಾರೆ. ಕೊಯ್ನಾ ಡ್ಯಾಂ ಮೂಲಕ ನೀರು ಹರಿಸಲು 32 ಕೋಟಿ ಅಗತ್ಯ ಇತ್ತು. ಆದರೆ, ಸ್ವಾತಂತ್ರ್ಯ ಸಿಕ್ಕಿ ಆರಂಭದಲ್ಲಿ ಆಗಿನ ಬಜೆಟ್ ಇದ್ದಿದ್ದೇ ಕೇವಲ ರೂ. 32 ಕೋಟಿ. ನೀರಾವರಿಗೆ ಹಣ ಒದಗಿಸಲು ಸಾಧ್ಯವೇ ಇರಲಿಲ್ಲ ಎಂಬ ಮಾತನ್ನು ಬಿಜೆಪಿ ಹಿರಿಯ ವ್ಯಕ್ತಿಗಳೇ ನನ್ನ ಬಳಿ ಹೇಳಿದರು ಎಂದು ಎಂ.ಬಿ. ಪಾಟೀಲ ಹೇಳುತ್ತಿದ್ದಂತೆ ಸಚಿವ ಗೋವಿಂದ ಖಾರಜೋಳ ಕೆಂಡದಂತ ಕೋಪ ಏಕೆ, ಬಂಗಾರದಲ್ಲಿ ತೂಗಿದ್ದು ನಿಜ. ಆದರೆ ಅದು ರಕ್ಷಣಾ ಇಲಾಖೆಗಾಗಿ ತೂಗಿದ್ದೇವು. ಆದರೆ ಮುಳವಾಡ ಏತ ನೀರಾವರಿ ಕೋಯ್ನಾ ಜಲಾಶಯದ ನೀರನ್ನು ಪಡೆಯಲಿ ಕೇವಲ ರೂ.2 ಕೋಟಿ ಮಾತ್ರ ಅಗತ್ಯ ಇತ್ತು. ಮೈಸೂರು ಪ್ರಾಂತ್ಯದ ಕಾಂಗ್ರೆಸ್ ಸರ್ಕಾರ ಇದಕ್ಕೆ ಅವಕಾಶ ಮಾಡಿಕೊಡಲಿಲ್ಲ ಎಂದು ವಾಗ್ಬಾಣ ಬಿಟ್ಟರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:16.03.2022

95. ನೇರ ನುಡಿಯ ಕೆ. ಎಚ್. ಪಾಟೀಲ್

ಸಹಕಾರಿ ಕ್ಷೇತ್ರದಲ್ಲಿ ಧುರೀಣರೆನ್ನೆನಿಸಿದ್ದ ಕೆ. ಎಚ್. ಪಾಟೀಲ್ ಅವರು ಅಂದಿನ ರಾಜಕಾರಣದಲ್ಲಿ ನೇರವಂತಿಗೆ ಹೆಸರಾಗಿದ್ದರು. ಮೈಸೂರು ಹೆಸರು ಬದಲಾಗಿ ರಾಜ್ಯಕ್ಕೆ ಕರ್ನಾಟಕವೆಂದು ಹೊಸದಾಗಿ

ನಾಮಕರಣ ಮಾಡುವ ಸಂದರ್ಭದಲ್ಲಿ ವಿಧಾನ ಪರಿಷತ್‌ನಲ್ಲಿ ಈ ಪ್ರಸ್ತಾವನೆಯನ್ನು ಸಲ್ಲಿಸಿದವರೇ ಕೆ.ಎಚ್. ಪಾಟೀಲ್ ಎಂದು ವಿಧಾನ ಪರಿಷತ್ ಸಭಾಪತಿ ಹೊರಟ್ಟಿ ಹೇಳಿದರು.

ಕೆ. ಎಚ್. ಪಾಟೀಲ್ ಅವರ 98ನೇ ಜನ್ಮ ದಿನಾಚರಣೆ ಅಂಗವಾಗಿ ಗಾಂಧಿಭವನದಲ್ಲಿ ಕೆ.ಎಚ್. ಪಾಟೀಲ್ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕೆ.ಎಚ್.ಪಾಟೀಲ್ ಅವರು ತಮ್ಮ ನಡುವಿನ ನಿಕಟ ಸಂಬಂಧದ ಬಗ್ಗೆ ನೆನಪು ಮಾಡಿಕೊಂಡರು.

ಮುಖ್ಯಮಂತ್ರಿ ದೇವರಾಜ ಅರಸು ಅವರ ಒಡನಾಡಿಯಾಗಿದ್ದ ಕೆ.ಎಚ್.ಪಾಟೀಲ್ ಅವರು ರಾಜಕಾರಣದಲ್ಲಿ ನಮಗೆಲ್ಲ ಪ್ರೇರಣೆಯಾಗಿದ್ದರು. ಅಂದು ಸೇವಾದಳದ ಅಧ್ಯಕ್ಷರಾಗಿ ಕೆಲಸ ಮಾಡಿದವರು. ಬಳಿಕ ಸೇವಾ ದಳದ ಅಧಿಕಾರವನ್ನು ಅವರು ನನಗೆ ಹಸ್ತಾಂತರಿಸಿದ್ದರು ಎಂದು ಮೇಲ್ಮನೆ ಪ್ರತಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರೆ. ಬಿ.ಎಲ್ ಶಂಕರ್ ಅವರು ಕೆ. ಎಚ್. ಪಾಟೀಲ್ ಅವರೊಂದಿಗೆ ನಾನು ಧಾರವಾಡದಲ್ಲಿ ಓದುತ್ತಿರುವಾಗ ಅವರನ್ನು ಆಗಾಗ ಕಾಣುತ್ತಿದ್ದೆನು ಎಂದರು. ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಮೇಲ್ಮನೆ ಸದಸ್ಯ ಪ್ರಕಾಶ್ ರಾಥೋಡ್, ಹಿರಿಯ ಚಿಂತಕ ಪ್ರೊ:ಜಿ.ಬಿ ಶಿವರಾಜ್ ಡಾ:ವೋಡೆ ಪಿ. ಕೃಷ್ಣ ಅವರು ಸೇರಿದಂತೆ ಮುಂತಾದ ಗಣ್ಯರು ಕೆ. ಎಚ್. ಪಾಟೀಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಇದಕ್ಕೂ ಮುನ್ನ ಸಭಾಪತಿ ಬಸವರಾಜ ಹೊರಟ್ಟಿಯವರು ಕೆ. ಎಚ್. ಪಾಟೀಲ್ ಅವರ ಭಾವಚಿತ್ರವನ್ನು ಅನಾವರಣಗೊಳಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:17.03.2022

ದಿನಾಂಕ: 16.03.2022 ರಂದು ಬೆಂಗಳೂರಿನ ಗಾಂಧಿಭವನದಲ್ಲಿ ಆಯೋಜಿಸಿದ್ದ, ಸಹಕಾರ ರಂಗದ ಭೀಷ್ಮ ಶ್ರೀ ಕೆ.ಹೆಚ್ ಪಾಟೀಲರ 98ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಪಾಲ್ಗೊಂಡಿದ್ದು, ಶ್ರೀ ಕೆ.ಹೆಚ್ ಪಾಟೀಲರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು

96. ಕೋಮುವಾದದ ವಿಷವನ್ನು ಕುಡಿದವರು ಬದುಕುತ್ತಾರೆಯೇ

ಅಭಿವೃದ್ಧಿ ಹಾಲು ಕುಡಿದವರು ಇಷ್ಟು ದಿನ ಬದುಕಿದ್ದೇವೆ. ಕೋಮುವಾದದ ವಿಷ ಕುಡಿದವರು ಎಷ್ಟು ದಿನ ಬದುಕುತ್ತಾರೆ ನೋಡೋಣ ಎಂದು ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಆರ್.ಬಿ.ತಿಮ್ಮಾಪೂರ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬಜೆಟ್ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, ಒಂದೆಡೆ ಕೋಮುವಾದ ಇನ್ನೊಂದೆಡೆ ಜಾತಿವಾದ ರಾಯಚೂರು, ಕಲಾದಗಿ, ಬಸವನಬಾಗೇವಾಡಿ ಸೇರಿದಂತೆ ಹಲವು ಕಡೆಗಳಲ್ಲಿ ಪರಿಶಿಷ್ಟ ಸಮುದಾಯದವರ ಕೊಲೆಗಳು ನಡೆದು ಹೋಗಿವೆ. ಅವರ ಕುಟುಂಬಕ್ಕೆ ಸಾಂತ್ವನ ಹೇಳುವ ಕೆಲಸವನ್ನೂ ಯಾರೂ ಮಾಡಲಿಲ್ಲ ಎಂದು ಕಟುವಾಗಿ ಟೀಕಿಸಿದರು.

ಅಸ್ಪೃಶ್ಯತೆ ಇನ್ನೂ ಇದೆ. ನಿಮಗೆ ನಾಚಿಕೆಯಾಗಬೇಕು, ಪರಿಶಿಷ್ಟ ಜಾತಿಯವರಿಗೆ ಸಮಾನತೆ ಕೊಡುವುದಾದರೆ ನಮಗೆ ಸ್ವಾಂತಂತ್ರ್ಯವೇ ಬೇಡ ಎಂದು ಆರ್‌ಎಸ್‌ಎಸ್ ನಾಯಕ ಗೋಲ್ವಾಲ್ಕರ್ ಹೇಳಿದ್ದರು. ಈಗಲೂ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಯವರನ್ನು ಅಸಮಾನತೆಯಿಂದ ಕಾಣುತ್ತಿದೆ. ಪರಿಶಿಷ್ಟರ ಯೋಜನೆಗಳಿಗೆ ಅನುದಾನ ಕಡಿಮೆ ಮಾಡಲಾಗಿದೆ ಎಂದು ಪಟ್ಟಿಯನ್ನು ಓದಿದರು.

ತಮ್ಮ ಭಾಷಣದುದ್ದಕ್ಕೂ ಆಡಳಿತ ಪಕ್ಷದವರನ್ನು ಕೆಣಕಿ ಮಾತನಾಡಿದ್ದರಿಂದ ಉಭಯ ಪಕ್ಷಗಳ ಸದಸ್ಯರ ನಡುವೆ ಪದೇ ಪದೇ ಮಾತಿನ ಚಕಮಕಿ ನಡೆಯಿತು. ಸಭಾಪತಿ ಪೀಠದಲ್ಲಿದ್ದ ಶ್ರೀಕಂಠೇಗೌಡ, ಗದ್ದಲವನ್ನು ನಿಭಾಯಿಸಲು ಸತತ ಪ್ರಯತ್ನ ಮಾಡಿದರು.

ಸಭಾನಾಯಕ ಕೋಟಾ ಶ್ರೀನಿವಾಸ್ ಪೂಜಾರಿ ಅವರು ಪ್ರತಿಕ್ರಿಯಿಸಿ, ಅಸ್ಪೃಶ್ಯತೆಯನ್ನು ಅಪರಾಧ ಎಂದು ಪರಿಗಣಿಸದಿದ್ದರೆ ಜಗತ್ತಿನಲ್ಲಿ ಯಾವ ಅಪರಾಧಗಳು ಅಪರಾಧಗಳೇ ಅಲ್ಲ ಎಂದು ಸಂಘ ಪರಿವಾರದವರು ಬಲವಾಗಿ ಪ್ರತಿಪಾದಿಸಿದ್ದರು. ಈಗ ಅದನ್ನು ತಿರುಚಿ ಮಾತನಾಡಲಾಗುತ್ತಿದೆ. ಇಷ್ಟು ದಿನ ಆಡಳಿತ ನಡೆಸಿದವರೇ ನೀವು. ಈಗ ನಮ್ಮ ಬಗ್ಗೆ ಆರೋಪ ಮಾಡುತ್ತೀರಾ ಎಂದು ಪ್ರಶ್ನಿಸಿದರು.

ಆಧಾರ:–ಪ್ರಜಾವಾಣಿ, ದಿನಾಂಕ:17.03.2022

97. ಸ್ವತಂತ್ರ ತನಿಖೆಗಿಲ್ಲ ಒಂಬುಡ್ಸ್‌ಮನ್

ನಗರ, ಪಟ್ಟಣ, ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಭ್ರಷ್ಟಾಚಾರ, ದುರುಪಯೋಗದ ದೂರುಗಳ ಸ್ವತಂತ್ರ ತನಿಖೆಗೆ ಸಾರ್ವಜನಿಕ ತನಿಖಾಧಿಕಾರಿ (ಒಂಬುಡ್ಸ್‌ಮನ್) ನೇಮಕವಾಗಿಲ್ಲ. ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ದಕ್ಷತೆ, ಪಾರದರ್ಶಕತೆ ತರಲೆಂದು 13ನೇ ಹಣಕಾಸು ಆಯೋಗವು ಸಾರ್ವಜನಿಕ ತನಿಖಾಧಿಕಾರಿಗಳ ನೇಮಕಕ್ಕೆ ಶಿಫಾರಸ್ಸು ಮಾಡಿತ್ತು. ಪ್ರಧಾನ ಮಹಾಲೇಖಪಾಲರು (ಲೆಕ್ಕಪರಿಶೋಧನೆ–1) ಸಲ್ಲಿಸಿದ ಪಂಚಾಯತ್‌ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ 2019ರ ಮಾರ್ಚ್‌ನಿಂದ 2020ರ ಮಾರ್ಚ್‌ಗೆ ಕೊನೆಗೊಂಡ ವರ್ಷದ ಸಂಯೋಜಿತ ತಾಂತ್ರಿಕ ಪರಿಶೀಲನಾ ವರದಿಯು ಈ ಅಂಶವನ್ನು ಎತ್ತಿ ತೋರಿಸಿದೆ. ವಿಧಾನ ಪರಿಷತ್‌ನಲ್ಲಿ ಮುಖ್ಯಮಂತ್ರಿ ಪರವಾಗಿ ಸಭಾನಾಯಕ ಕೋಟಾ ಶ್ರೀನಿವಾಸ ಪೂಜಾರಿ ಈ ವರದಿ ಮಂಡಿಸಿದರು.

ನಗರ–ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು, ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಭ್ರಷ್ಟಾಚಾರ ಹಾಗೂ ದುರುಪಯೋಗದ ದೂರುಗಳ ಸ್ವತಂತ್ರ ತನಿಖೆಗೆ ಸಾರ್ವಜನಿಕ ತನಿಖಾಧಿಕಾರಿ ನೇಮಕ ಅಗತ್ಯವಿದೆ. ಒಂಬುಡ್ಸ್‌ಮನ್ ಅಂತಹ ತನಿಖೆಗಳ ವರದಿ ಲೋಕಾಯುಕ್ತರಿಗೆ ಸಲ್ಲಿಸುವರು. ಲೋಕಾಯುಕ್ತರು ತಮ್ಮ ಶಿಫಾರಸ್ಸುಗಳೊಂದಿಗೆ ರಾಜ್ಯಪಾಲರಿಗೆ ವರದಿ ಕಳುಹಿಸುವರು. ಶಿಫಾರಸ್ಸು ಮಾಡಿದ್ದರೂ ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಒಂಬುಡ್ಸ್‌ಮನ್ ನೇಮಿಸಿಲ್ಲವೆಂದು ವರದಿಯಲ್ಲಿ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಲಾಗಿದೆ. 2020ರ ನವೆಂಬರ್ ಅಂತ್ಯದವರೆಗೆ

ಬೆಂಗಳೂರು ನಗರ/ಗ್ರಾಮೀಣ, ಹಾಸನ/ಕೊಡಗು, ಉಡುಪಿ/ದಕ್ಷಿಣ ಕನ್ನಡ ಜಿಲ್ಲೆಗಳಿಗೆ ತಲಾ ಒಬ್ಬರಂತೆ ನೇಮಕವಾಗಿದ್ದು, ಉಳಿದ 5 ಜಿಲ್ಲೆಗಳಲ್ಲಿ ಖಾಲಿಯಿವೆ. ವಸೂಲಿಗೆ ಆದೇಶಿಸಿ ರೂ.24.12 ಕೋಟಿಗಳ ಪೈಕಿ ರೂ. 2.47 ಕೋಟಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳು ವಸೂಲಿ ಮಾಡಿದ್ದು, ರೂ.21.65 ಕೋಟಿ ಬಾಕಿ ಇರುವುದನ್ನು ಪ್ರಧಾನ ಮಹಾಲೇಖಪಾಲರು (ಲೆಕ್ಕಪರಿಶೋಧನೆ–1) ತಮ್ಮ ವರದಿಯಲ್ಲಿ ಅವಲೋಕಿಸಿದ್ದಾರೆ.

ತೆಲಂಗಾಣ ಮಾದರಿಗೆ ಶಿಫಾರಸ್ಸು: ವಿವಿಧ ಇಲಾಖೆಗಳು ಜಾರಿಗೆ ತಂದಿರುವ ಯೋಜನೆಗಳು ಅಥವಾ ಕಾರ್ಯಕ್ರಮಗಳ ಪರಿಣಾಮಕಾರಿ ಸಾಮಾಜಿಕ ಲೆಕ್ಕಪರಿಶೋಧನೆಗೆ ತೆಲಂಗಾಣ ಮಾದರಿಯಲ್ಲಿ "ಸೊಸೈಟಿ ಫಾರ್ ಸೋಷಿಯಲ್ ಆಡಿಟ್, ಅಕೌಂಟಿಬಿಲಿಟಿ ಮತ್ತು ಟ್ರಾನ್ಸ್‌ಫರೆನ್ಸಿಯನ್ನು" ಹಂತ ಹಂತವಾಗಿ ಅಳವಡಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ. ತೆಲಂಗಾಣದಲ್ಲಿ ಈ ಕ್ರಮ ಕೈಗೊಂಡಿದ್ದರಿಂದ ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಜಿಲ್ಲಾ ವಿಜಿಲೆನ್ಸ್ ಅಧಿಕಾರಿಗೆ ಹಸ್ತಾಂತರ ಹಾಗೂ ದುರುಪಯೋಗದ ಮೊತ್ತದಲ್ಲಿ ಶೇ.30 ವಸೂಲಿ ಸಾಧ್ಯವಾಗಿರುವುದನ್ನು ಉಲ್ಲೇಖಿಸಿದೆ.

ಆದಾಯವಾಗಿ ಪರಿಗಣಿಸಲಿಲ್ಲ: ನಿಯಮದ ಪ್ರಕಾರ, ಠೇವಣಿ, ವಾಪಸ್ ಮಾಡಬೇಕಾದ ಮೊತ್ತಕ್ಕೆ ಸತತ ಮೂರು ಹಣಕಾಸು ವರ್ಷ ಕಳೆದರೂ ಕೋರಿಕೆ (ಕ್ಲೇಮು) ಬರದಿದ್ದಲ್ಲಿ ಅಂತಹ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳ ಆದಾಯವೆಂದು ಪರಿಗಣಿಸಲು ಅವಕಾಶವಿದೆ. ಆದರೆ ಗದಗ–ಬೇಟಗೇರಿ, ಅಳ್ನಾವರ್ ಮತ್ತು ಹೊಳಲ್ಕೆರೆ ನಗರ–ಪಟ್ಟಣ ಸ್ಥಳೀಯ ಸಂಸ್ಥೆಗಳು ಕ್ಲೇಮು ಆಗದ ಒಟ್ಟು ರೂ. 108.95 ಲಕ್ಷ ಆದಾಯವೆಂದು ಪರಿಗಣಿಸಿಲ್ಲ. ದಾಖಲೆಗಳನ್ನು ಸರಿಯಾದ ರೀತಿ ಪರೀಕ್ಷಿಸಿ ರದ್ದಾದ ಠೇವಣಿಗಳನ್ನು ಪ್ರಮಾಣೀಕರಿಸಿ ಆದಾಯವೆಂದು ಪರಿಗಣಿಸಿದರೆ ಆದಾಯವೃದ್ಧಿ ಸಾಧ್ಯವಿದೆ ಎಂದು ಪ್ರಧಾನ ಮಹಾಲೇಖಪಾಲರು (ಲೆಕ್ಕ ಪರಿಶೋಧನೆ–1) ವರದಿಯಲ್ಲಿ ಸೂಚಿಸಿದ್ದಾರೆ.

ಗ್ರಾಮ ವಿಕಾಸ ಅಕ್ರಮ: ಗ್ರಾಮ ವಿಕಾಸ ಯೋಜನೆಯಡಿ ದಿಡ್ಡಿಗೆ ಗ್ರಾಮ ಪಂಚಾಯಿತಿ ಅನಗತ್ಯ. ಹೆಸರಾಂತ ಸಿಮೆಂಟ್ ಬ್ರ್ಯಾಂಡ್‌ಗಳ ಮಾರುಕಟ್ಟೆ ದರಕ್ಕಿಂತ ಎರಡುಪಟ್ಟು ಹೆಚ್ಚಿನ ದರಕ್ಕೆ ಸಿಮೆಂಟ್ ಮೂಟೆ ಖರೀದಿಸಿದ್ದು, ರೂ.6.64ಲಕ್ಷ ಪಾವತಿ ಸಂಶಯಾಸ್ಪದವಾಗಿದೆ. ಹಾಗೆಯೇ ಭೌತಿಕ ತಪಾಸಣೆಯಲ್ಲಿ ರೂ. 74.950 ಮೌಲ್ಯದ 10 ಎಲ್‌ಇಡಿ ಬಲ್ಬ್ ಅಳವಡಿಸಿರುವುದು ಕಂಡು ಬಂದಿದ್ದು, ಉಳಿದ 90 ಎಲ್‌ಇಡಿ ಬಲ್ಬ್‌ಗಳು ಪತ್ತೆ ಮಾಡಲಾಗಿಲ್ಲ. ಇದರ ವೆಚ್ಚ ರೂ. 7.47 ಲಕ್ಷ ಸಂಶಯಾಸ್ಪದವಾಗಿದೆ.

ಬಾಡಿಗೆ ಪರಿಷ್ಕರಣೆ ವಿಫಲ: ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಪ್ರಕಾರ ಪ್ರತಿ 3 ವರ್ಷಕ್ಕೊಮ್ಮೆ ಮಳಿಗೆ ಬಾಡಿಗೆ ಶೇ.10 ಹೆಚ್ಚಿಸಲು ಅವಕಾಶವಿದೆ. ಆದರೆ ತುಮಕೂರು ಮಹಾನಗರಪಾಲಿಕೆ ಮೂರು ವರ್ಷಗಳ ನಂತರವೂ ಬಾಡಿಗೆ ಪರಿಷ್ಕರಣೆಯಲ್ಲಿ ವಿಫಲವಾಗಿದ್ದು, ರೂ. 38.35 ಲಕ್ಷ ಆದಾಯ ಕಡಿತವಾಗಿದೆ.

ಎನ್‌ಡಿಆರ್‌ಎಫ್ ಪರಿಷ್ಕರಣೆಗೆ ಆಗ್ರಹ: ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ(ಎನ್‌ಡಿಆರ್‌ಎಫ್) ಹಾಗೂ ಎಸ್‌ಡಿಆರ್‌ಎಫ್ ಮಾರ್ಗಸೂಚಿ ಪರಿಷ್ಕರಿಸಲು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಲಾಗಿದೆ ಎಂದು ವಿಧಾನ ಪರಿಷತ್‌ಗೆ ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು. ಕಾಂಗ್ರೆಸ್‌ನ ಸಲೀಂ ಅಹಮದ್ ಪ್ರಶ್ನೆಗೆ ಉತ್ತರಿಸಿದ ಅವರು, ಈ ಕುರಿತು ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪತ್ರ ಬರೆದಿದ್ದಾರೆ. ಅಲ್ಲದೆ, ನೇರವಾಗಿ ಚರ್ಚಿಸಿ ಪರಿಹಾರ ಮೊತ್ತ ಮೂರು ಪಟ್ಟು ಹೆಚ್ಚಿಸಲು ಮನವಿ ಮಾಡಿದ್ದಾರೆ ಎಂಬ ಮಾಹಿತಿ ನೀಡಿದರು. ಚಾಲ್ತಿ ಮಾರ್ಗಸೂಚಿ ಪ್ರಕಾರ, ಮಳೆಯಾಶ್ರಿತ ಬೆಳೆಗೆ ಹೆಕ್ಟೇರ್‌ಗೆ ರೂ.6,800 ನೀರಾವರಿ ಬೆಳೆಗೆ 13,500 ಹಾಗೂ ಬಹುವಾರ್ಷಿಕ ಬೆಳೆಗೆ ಹೆಕ್ಟೇರ್‌ಗೆ ರೂ.18,000 ದರದಲ್ಲಿ ಪ್ರತಿ ರೈತರಿಗೆ ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತಗೊಳಿಸಿ ಪಾವತಿಸಲಾಗುತ್ತಿದೆ ಎಂದರು.

ತ್ವರಿತ ಜಮೆ: ಬೆಳೆ ಹಾನಿಗೆ ಪರಿಹಾರ ವಿತರಣೆ ವ್ಯವಸ್ಥೆ ಚುರುಕುಗೊಳಿಸಲಾಗಿದೆ. ಆಧುನಿಕ ತಂತ್ರಜ್ಞಾನ ಬಳಸಿ ಮಾಹಿತಿಯು ಕಂಪ್ಯೂಟರ್‌ನಲ್ಲಿ ಅಪ್‌ಲೋಡ್ ಆದ ತಿಂಗಳೊಳಗೆ ಪರಿಹಾರ ಪಾವತಿ ವ್ಯವಸ್ಥೆ ಜಾರಿಗೊಳಿಸಲಾಗಿದೆ ಎಂದ ಆರ್. ಅಶೋಕ್, ಹಿಂದೆಲ್ಲ ಏಳೆಂಟು ತಿಂಗಳ ಕಾಲ ಸಂತ್ರಸ್ತ ರೈತರು ಕಛೇರಿಗೆ ಅಲೆಯುವ ಪರಿಸ್ಥಿತಿ ಇತ್ತು. ತ್ವರಿತ ಜಮೆ ವ್ಯವಸ್ಥೆಯಡಿ ಪ್ರಕೃತಿ ವಿಕೋಪಗಳಿಂದ ಬೆಳೆ ನಷ್ಟದ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಿ, ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. ಕಳೆದ ವರ್ಷ 12 ಲಕ್ಷ ರೈತರಿಗೆ ರೂ.941.78 ಕೋಟಿ ಇನ್ಪುಟ್ ಸಬ್ಸಿಡಿ ಜಮೆಯಾಗಿದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರ ಮತ್ತೊಂದು ಹೆಜ್ಜೆ ಮುಂದಿಟ್ಟು, ಪರಿಹಾರ ಮೊತ್ತ ಮೂರು ಪಟ್ಟು ಹೆಚ್ಚಿಸಲು ಕೇಂದ್ರಕ್ಕೆ ಮೊರೆಯಿಟ್ಟಿದೆ ಎಂದು ವಿವರಿಸಿದರು. ಧಾರವಾಡ ಜಿಲ್ಲೆಯ 1,12,411 ರೈತರಿಗೆ ರೂ.100.44 ಕೋಟಿ, ಗದಗ 1,12,377 ರೈತರಿಗೆ ರೂ.118.25 ಕೋಟಿ, ಹಾವೇರಿ ಜಿಲ್ಲೆಯ 19,928 ರೈತರಿಗೆ ರೂ.10.71 ಕೋಟಿ ಇನ್ಪುಟ್ ಸಬ್ಸಿಡಿ ವಿತರಿಸಲಾಗಿದೆ ಎಂದು ಅಶೋಕ್ ಉತ್ತರಿಸಿದರು.

ಕಾಯ್ದೆ ರೀತ್ಯ ಡ್ರೋನ್ ಸರ್ವೇ: ಡ್ರೋನ್ ಆಧಾರಿತ ಸರ್ವೇಗೆ ತಗಲುವ ವೆಚ್ಚ ರೂ. 287 ಕೋಟಿಗಳಿಗೆ ಅನುಮೋದನೆ ನೀಡಿ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಕೇಂದ್ರ ಸರ್ಕಾರದ ಸಹಭಾಗಿತ್ವ ಹಾಗೂ ಕಾಯ್ದೆ–ಕಟ್ಟಳೆಗಳಡಿ ವೈಜ್ಞಾನಿಕವಾಗಿ ಭೂ ಮರುಮಾಪನ ನಡೆಯಲಿದೆ ಎಂದು ಆರ್.ಅಶೋಕ್ ತಿಳಿಸಿದರು. ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕೇಂದ್ರದ ಭಾರತೀಯ ಸರ್ವೇಕ್ಷಣಾ ಸಂಸ್ಥೆಯು ಸೂಕ್ತ ಸಲಹೆ–ಮಾರ್ಗದರ್ಶನ ನೀಡಲಿದ್ದು, ಈಗಾಗಲೇ ತುಮಕೂರು, ರಾಮನಗರ ಮತ್ತು ಬೆಂಗಳೂರು ನಗರ ಜಿಲ್ಲೆಗಳ 49 ಕೇಂದ್ರಗಳಲ್ಲಿ ಡ್ರೋಣ್ ಆಧಾರಿತ ಭೂ ಮರುಮಾಪನ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಆಧಾರ:–ವಿಜಯವಾಣಿ, ದಿನಾಂಕ:17.03.2022

98. ರಾಜ್ಯಕ್ಕೆ ರೂ.12,909 ಕೋಟಿ ಜಿಎಸ್‌ಟಿ ಬಾಕಿ:ಸಿಎಂ

ಕೇಂದ್ರ ಸರ್ಕಾರ ನೀಡುವ ಜಿಎಸ್‌ಟಿ ಪರಿಹಾರವು ರೂ.12,909 ಕೋಟಿ ಬಾಕಿ ಇದ್ದು, ರಾಜ್ಯಕ್ಕೆ ಮುಂಬರುವ ವರ್ಷದಲ್ಲಿ ಪಾವತಿಸುವ ಕುರಿತು ಕೇಂದ್ರ ತಿಳಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, ಆರ್ಥಿಕ ವರ್ಷ 2017–18ನೇ ಸಾಲಿನಿಂದ ಶೇ.14ರ ಪ್ರಮಾಣದಲ್ಲಿ ರಾಜ್ಯದ ಅಭಿವೃದ್ಧಿ ಇದೆ. ರಾಜ್ಯಕ್ಕೆ ಜಿಎಸ್‌ಟಿ ಪರಿಹಾರವಾಗಿ ರೂ.97,688 ಕೋಟಿ ಬರಬೇಕಾಗಿದ್ದು, ಈವರೆಗೆ ಒಟ್ಟು ರೂ.54,263 ಕೋಟಿ ಬಂದಿದೆ. ರೂ.30,516 ಕೋಟಿ ಸಾಲದ ರೂಪದಲ್ಲಿ ನೀಡಲಾಗಿದೆ. ಇನ್ನು ರೂ.12,909 ಕೋಟಿ ಬಾಕಿ ಇದೆ. ಮುಂಬರುವ ವರ್ಷದಲ್ಲಿ ಕೇಂದ್ರವು ನೀಡುವ ಭರವಸೆ ಇದೆ ಎಂದರು.

ಕೆಲವು ಸಂದರ್ಭದಲ್ಲಿ ಅಭಿವೃದ್ಧಿ ಪ್ರಮಾಣ ಕಡಿಮೆಯೂ ಆಗಿದೆ. ಆದರೂ ರಾಜ್ಯದ ಆರ್ಥಿಕತೆ ಸಮತೋಲನವನ್ನು ಕಾಯ್ದುಕೊಳ್ಳಲಾಗಿದೆ. ಸಂಪೂರ್ಣವಾಗಿ ವಿಶ್ಲೇಷಣೆ ಮಾಡಿದಾಗ ಸತ್ಯಾಂಶ ತಿಳಿಯಲಿದೆ. ಕೋವಿಡ್‌ನಂತಹ ಸಮಯದಲ್ಲಿ ಆರ್ಥಿಕತೆ ಕಡಿಮೆಯಾಗುತ್ತದೆ ಎಂದು ಹೇಳಿದರು.

ಪ್ರತಿಪಕ್ಷದ ನಾಯಕರು ರಾಜ್ಯ ಸರ್ಕಾರವು ಸಾಲದ ಮೊತ್ತ ಹೆಚ್ಚಾಗುತ್ತಿದೆ ಎಂದು ಹೇಳಿದ್ದಾರೆ. ಸಾಲ ಮೊತ್ತ ಹೆಚ್ಚಾಗಲು ಕಾರಣಗಳೇನು ಎಂಬುದನ್ನು ಅವಲೋಕಿಸದೆ ಟೀಕೆ ಮಾಡಬಾರದು. ಎರಡು ವರ್ಷದಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ರೂ.15,645 ಕೋಟಿ ವೆಚ್ಚ ಮಾಡಲಾಗಿದೆ. ಅಲ್ಲದೇ, ಅಬಕಾರಿ ಹೊರತುಪಡಿಸಿದರೆ ಇತರೆ ತೆರಿಗೆಯ ಸ್ವೀಕೃತಿ ಕಡಿಮೆಯಾಗಿದೆ 20–21ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಲ್ಲಿ ರೂ. 636 ಕೋಟಿ ಹೆಚ್ಚಳವಾದರೆ, ಇನ್ನುಳಿದ ತೆರಿಗೆ ಇಲಾಖೆಯಲ್ಲಿ ಕಡಿಮೆಯಾಗಿದೆ. ವಾಣಿಜ್ಯ ತೆರಿಗೆಯಲ್ಲಿ ರೂ.11,404 ಕೋಟಿ, ಮೋಟಾರು ವಾಹನದಲ್ಲಿ ರೂ.2079 ಕೋಟಿ, ನೋಂದಣಿ

ಮತ್ತು ಮುದ್ರಾಂಕದಲ್ಲಿ ರೂ. 1500 ಕೋಟಿ, ಇತರೆ ತೆರಿಗೆಯಲ್ಲಿ ರೂ. 540 ಕೋಟಿ ಕಡಿಮೆಯಾಗಿದೆ. ಕೇಂದ್ರದ ತೆರಿಗೆ ಪಾಲಿನಲ್ಲಿಯೂ ಕಡಿಮೆಯಾಗಿದ್ದು, ರಾಜ್ಯ ಸರ್ಕಾರ ಮಾಡಿದ ಅಂದಾಜಿಗಿಂತ ರೂ. 21,835 ಕೋಟಿ ಕಡಿಮೆಯಾಯಿತು. ಈ ಎಲ್ಲಾ ಕಾರಣಗಳಿಗಾಗಿ ಖರ್ಚು ನಿಭಾಯಿಸಲು ಅನಿವಾರ್ಯವಾಗಿ ಸಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬೇಕಾಗಿದೆ ಎಂದು ಮುಖ್ಯಮಂತ್ರಿಗಳು ಸಮರ್ಥಿಸಿಕೊಂಡರು.

ಇತ್ತೀಚೆಗೆ ಆರ್ಥಿಕ ಚಟುವಟಿಕೆಗಳು ಉತ್ತಮವಾಗಿ ನಡೆಯುತ್ತಿದೆ. ಹೀಗಾಗಿ ಮುಂದಿನ ದಿನದಲ್ಲಿ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಆದಾಯ ಕೊರತೆಯನ್ನು ಕಡಿಮೆ ಮಾಡುತ್ತೇನೆ. ಬದ್ದವೆಚ್ಚಗಳನ್ನು ಶೇ.98 ರಷ್ಟು ಇರುವುದನ್ನು ಶೇ.89ಕ್ಕೆ ಇಳಿಸುವ ಕೆಲಸ ಮಾಡುತ್ತಿದ್ದೇವೆ.

ಇದನ್ನು ಗಮನಿಸಿದಾಗ ರಾಜ್ಯದ ಆರ್ಥಿಕತೆಯನ್ನು ಸಮರ್ಥವಾಗಿ ನಿಭಾಯಿಸುತ್ತೇವೆ ಎಂಬುದನ್ನು ಸ್ಪಷ್ಟವಾಗುತ್ತದೆ ಎಂದು ಹೇಳಿದರು.

ಆಧಾರ:–ಕನ್ನಡ ಪ್ರಭ, ದಿನಾಂಕ:17.03.2022

99. ಏಪ್ರಿಲ್ ಅಂತ್ಯದೊಳಗೇ ಬಜೆಟ್ ಜಾರಿ: ಸಿಎಂ

ಬಜೆಟ್‌ನ ಕಾರ್ಯಕ್ರಮಗಳು ಕೇವಲ ಘೋಷಣೆಗಳಾಗಿ ಉಳಿಯುವುದಿಲ್ಲ. ಈಗಾಗಲೇ ಆಯಾ ಇಲಾಖೆಗಳಿಗೆ ಅನುಷ್ಠಾನ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆ ಪತ್ರ ಬರೆದಿದ್ದು, ಏಪ್ರಿಲ್ ಅಂತ್ಯದೊಳಗೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು, ಬಜೆಟ್‌ನ ಕಾರ್ಯಕ್ರಮಗಳ ಜಾರಿ ಕುರಿತು ಸಂಶಯ ಬೇಡ. ಜಾರಿಗೆ ಏನೆಲ್ಲಾ ಅವಶ್ಯಕತೆ ಇದೆ ಎಂಬುದನ್ನು ತಿಳಿದುಕೊಂಡೇ ಘೋಷಣೆ ಮಾಡಿದ್ದೇವೆ. ಮಾರ್ಚ್ ಅಂತ್ಯದೊಳಗೆ ಇಲಾಖೆಗಳಿಗೆ ಜಾರಿಗೆ ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಗಿದೆ. ಅದಕ್ಕೆ ಬೇಕಾದ ಅನುದಾನದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತಿದೆ. ಏಪ್ರಿಲ್ ಕೊನೆಯ ವಾರದೊಳಗೆ ಎಲ್ಲಾ ಕಾರ್ಯಕ್ರಮಗಳು ಆರಂಭವಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಕೊರೋನಾ ಪೂರ್ವ ಮತ್ತು ಕೊರೋನಾ ನಂತರ ಎಂದು ವಿಂಗಡಿಸಿ ನೋಡಬೇಕು. ಕಳೆದ ಎರಡು ವರ್ಷದಲ್ಲಿ ರಾಜ್ಯದಲ್ಲಿ ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ಕುಗ್ಗಿದೆ. ರೂ.21 ಸಾವಿರ ಕೋಟಿ ತೆರಿಗೆ ಸಂಗ್ರಹ ಕಡಿಮೆಯಾಗಿದೆ. ಜೊತೆಗೆ ಕೊರೋನಾ ನಿರ್ವಹಣೆಗೆ ರೂ.15 ಸಾವಿರ ಕೋಟಿ ಖರ್ಚು ಮಾಡಲಾಗಿದೆ. ಹೀಗಾಗಿ ಕೆಲವು ಕಾರ್ಯಕ್ರಮಗಳನ್ನು ಮೊಟಕುಗೊಳಿಸಬೇಕಾಯಿತು. ಕೊರೋನಾ ಕಾರಣದಿಂದ ಆರ್ಥಿಕ ಖರ್ಚು ಜಾಸ್ತಿ ಆಗಿದೆ. ಆದರೂ, ಸಾಲವನ್ನು ಮಿತಿಯಲ್ಲಿಯೇ ಪಡೆದುಕೊಂಡು ನಿಶ್ಚಿತ ಖರ್ಚುಗಳನ್ನು ಶೇ.97 ರಿಂದ ಶೇ.89ಕ್ಕೆ ಕಡಿಮೆ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು ಮೀಸಲಿಡಲಾಗುತ್ತಿದೆ. ಮೆಗಾ ಪ್ರಾಜೆಕ್ಟ್‌ಗಳಿಗೆ ಅವಕಾಶ ಮಾಡಿಕೊಟ್ಟು ಉದ್ಯೋಗಾವಕಾಶ ಹೆಚ್ಚಿಸಲಾಗಿದೆ. ದುಡಿಯುವ ವರ್ಗ, ಹೆಣ್ಣುಮಕ್ಕಳು, ತುಳಿತಕ್ಕೊಳಗಾದವರಿಗೆ ಆದ್ಯತೆ ನೀಡಲಾಗಿದೆ ಎಂದರು.

ನೆರೆಯ ರಾಜ್ಯಕ್ಕೆ ಹೋಲಿಸಿದರೆ ಆರ್ಥಿಕ ಸ್ಥಿತಿ ಉತ್ತಮ: ನೆರೆಯ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ. ರಾಜ್ಯದ ರಾಜಸ್ವ ಕೊರತೆ ರೂ. 14,699 ಕೋಟಿ ಇದೆ. ಆದರೆ, ಆಂಧ್ರಪ್ರದೇಶ ರೂ. 17 ಸಾವಿರ ಕೋಟಿ, ಕೇರಳ ರೂ.22,968 ಕೋಟಿ, ಮಹಾರಾಷ್ಟ್ರ ರೂ. 24 ಸಾವಿರ ಕೋಟಿ ಹಾಗೂ ರಾಜಸ್ತಾನ ರೂ. 23 ಸಾವಿರ ಕೋಟಿ ರಾಜಸ್ವ ಕೊರತೆಯನ್ನು ಹೊಂದಿವೆ. ಅಲ್ಲದೆ, ಪ್ರಸಕ್ತ ಸಾಲಿನಲ್ಲಿ ರೂ. 67,100 ಕೋಟಿ ಸಾಲ ಪಡೆಯಲು ಅವಕಾಶ ಇತ್ತು. ಆದರೆ, ರೂ.

63,100 ಕೋಟಿ ಸಾಲ ಪಡೆದಿದ್ದೇವೆ. ರಾಜ್ಯವು ಆರ್ಥಿಕ ನಿರ್ವಹಣೆಯಲ್ಲಿ ಸರಿದಾರಿಯಲ್ಲಿದೆ ಎಂದು ಇದೇ ವೇಳೆ ಬೊಮ್ಮಾಯಿ ಪ್ರತಿಪಾದಿಸಿದರು.

ಈ ಮಧ್ಯೆ ಮಾತನಾಡಿದ ವಿರೋಧ ಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ರಾಜ್ಯದ ಆರ್ಥಿಕ ಇಲಾಖೆಯ ಸಮೀಕ್ಷೆಯ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಬಜೆಟ್ ಸಿದ್ಧಪಡಿಸಲಾಗಿದೆ. ಸಮೀಕ್ಷೆಯಲ್ಲಿಯೇ ರಾಜ್ಯಕ್ಕೆ ಅಗತ್ಯವಿದ್ದ ಅಂಶಗಳು ಹೆಚ್ಚಿದ್ದವು ಎಂದು ದೂರಿದರು. ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು ಕೊರೋನಾ ಪೂರ್ವದ ಆರ್ಥಿಕ ಸಮೀಕ್ಷೆಯಾಗಿದ್ದು, ಸದ್ಯ ಪರಿಸ್ಥಿತಿ ಬದಲಾಗಿದೆ. ಆ ನಿಟ್ಟಿನಲ್ಲಿ ಅಗತ್ಯ ಅಂಶಗಳನ್ನು ಮಾತ್ರ ಪರಿಗಣಿಸಲಾಗಿದೆ ಎಂದು ಉತ್ತರಿಸಿದರು.

ಇಂದಿರಾ ಕ್ಯಾಂಟೀನ್‌ಗೆ ಮೂರು ವರ್ಷದಿಂದ ಹಣ ನೀಡದೆ ಮುಚ್ಚಿಸುವ ಪ್ರಯತ್ನ ಮಾಡಲಾಗಿದೆ. ಮನರೇಗಾದಂತಹ ಬಡವರ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಲ್ಲ. ಒಟ್ಟಾರೆ ನಿರಾಶಾದಾಯಕ, ಚುನಾವಣಾ ಪೂರ್ವ ಬಜೆಟ್ ಆಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಯಾವುದೇ ಆಸ್ತಿ ಮಾರಾಟ ಮಾಡುವುದಿಲ್ಲ: ಈ ಹಿಂದೆ ಬಿಜೆಪಿ ಸರ್ಕಾರ ಅಡಮಾನವಿಟ್ಟಿದ್ದ ಆಸ್ತಿಯನ್ನು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಮರಳಿ ಪಡೆದಿದ್ದರು. ಕೇಂದ್ರ ಸರ್ಕಾರದಿಂದ ಜಿಎಸ್‌ಟಿ ಹಣ ಸೂಕ್ತವಾಗಿ ಬರುತ್ತಿಲ್ಲ. ಸದ್ಯ ಆದಾಯ ಕೊರತೆ ಇದೆ ಎಂಬ ಕಾರಣಕ್ಕೆ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಸರ್ಕಾರವು ಆಸ್ತಿ ಮಾರಾಟ, ಅಡಮಾನವಿಡಲು ಮುಂದಾಗಬಾರದು ಎಂದು ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಕಾಂಗ್ರೆಸ್ ನಾಯಕರು ಲೇವಡಿ ಮಾಡಿದರು. ಅವರ ಮಾತಿಗೆ ಉತ್ತರಿಸಿದ ಮುಖ್ಯಮಂತ್ರಿಗಳು ಸರ್ಕಾರದ ಯಾವುದೇ ಆಸ್ತಿಯನ್ನು ಮಾರಾಟ ಮಾಡುವುದಿಲ್ಲ. ಅಡಮಾನಕ್ಕೂ ಮುಂದಾಗುವುದಿಲ್ಲ ಎಂದು ಸ್ಪಷ್ಟನೆ ನೀಡಿದರು.

ಆಧಾರ:–ಕನ್ನಡ ಪ್ರಭ, ದಿನಾಂಕ:18.03.2022

100. ಸರ್ಕಾರಿ ಆಸ್ತಿಗಳ ಮಾರಾಟ ಇಲ್ಲ

ರಾಜ್ಯದಲ್ಲಿನ ಎನ್‌ಜಿಇಎಫ್, ಮೈಸೂರು ಲ್ಯಾಂಪ್ಸ್, ಸೇರಿದಂತೆ ಯಾವುದೇ ಆಸ್ತಿಗಳನ್ನು ಮಾರಾಟ ಮಾಡುವ ಉದ್ದೇಶವೇ ಸರ್ಕಾರಕ್ಕಿಲ್ಲ. ಬದಲಿಗೆ ಅರ್ಥಿಕವಾಗಿ ನಷ್ಟದಲ್ಲಿರುವ ಕೆಎಸ್‌ಆರ್‌ಟಿಸಿ, ಎಸ್ಕಾಂಗಳ ಸುಧಾರಣೆಗೆ ಕ್ರಮ ವಹಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಒಂದು ವಾರಕ್ಕೂ ಹೆಚ್ಚು ಸಮಯ ನಡೆದ 2022–23ನೇ ಸಾಲಿನ ಮುಂಗಡ ಪತ್ರದ ಮೇಲಿನ ಸುದೀರ್ಘ ಚರ್ಚೆಗೆ ಉತ್ತರ ನೀಡಿದ ಮುಖ್ಯಮಂತ್ರಿಗಳು, ಕೃಷಿಗೆ ಎಷ್ಟೇ ಆಧ್ಯತೆ ನೀಡಿದರೂ, ರೈತರ ಸಂಕಷ್ಟ ದೂರ ಆಗಿಲ್ಲ. ಕಿಸಾನ್ ಸಮ್ಮಾನ್ ಯೋಜನೆಯಡಿ 33 ಲಕ್ಷ ರೈತರಿಗೆ ಸಾಲ ನೀಡಲಾಗಿದೆ. ಇದಲ್ಲದೇ ಹೊಸದಾಗಿ 3.50 ಲಕ್ಷ ರೈತರಿಗೆ ಸಾಲ ನೀಡಲು ಉದ್ದೇಶಿಸಲಾಗಿದೆ. ಯಶಸ್ವಿನಿ ಯೋಜನೆಯನ್ನು ಪುನರಾರಂಭಿಸಲಾಗುತ್ತಿದೆ ಎಂದು ಹೇಳಿದರು.

ಇದಕ್ಕೆ ಮೊದಲು ಮಾತನಾಡಿದ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಕಳೆದ ಸಾಲಿನ ಬಜೆಟ್‌ನ ಅನುಪಾಲನಾ ವರದಿಯಂತೆ 20 ಸಾವಿರ ಕೋಟಿಗಳ 32 ಕಾರ್ಯಕ್ರಮ ರದ್ದುಪಡಿಸಲಾಗಿದೆ. ಕೌಶಲ್ಯಾಭಿವೃದ್ಧಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನವನ್ನೇ ಬಿಡುಗಡೆ ಮಾಡಿಲ್ಲ. ನಗರದಲ್ಲಿ 6.15ಲಕ್ಷ ಬಿ ಖಾತಾ ಆಸ್ತಿಗಳಿದ್ದು, ಅಭಿವೃದ್ಧಿ ಶುಲ್ಕ ಪಡೆದು ಎ ಖಾತೆಗಳನ್ನಾಗಿ ಪರಿವರ್ತಿಸಿಕೊಡಬೇಕು. ಯಾವುದೇ ಕಾರಣಕ್ಕೂ ದಂಡ ಶುಲ್ಕ ವಿಧಿಸಬಾರದು. ಬಿಜೆಪಿ ಅವಧಿಯಲ್ಲಿ 12 ಪಾರಂಪರಿಕೆ ಕಟ್ಟಡಗಳನ್ನು ಅಡಮಾನವಿಡಲಾಗಿತ್ತು. ಕಾಂಗ್ರೆಸ್ ಆಡಳಿತಾವಧಿಯಲ್ಲಿ ಎಲ್ಲ ಕಟ್ಟಡಗಳನ್ನು

ಋಣಮುಕ್ತಗೊಳಿಸಲಾಯಿತು. ಹಾಗೇನಾದರೂ ಅಡಮಾನವಿಡಲು ನಿರ್ಧರಿಸಿದರೆ, 100 ವರ್ಷದ ಅವಧಿಗೆ ಗುತ್ತಿಗೆಗೆ ನೀಡಿರುವ ಕಟ್ಟಡಗಳನ್ನು ಅಡವಿಟ್ಟು ಸಾಲ ಪಡೆಯಿರಿ. ನಮ್ಮದೇನೂ ಅಭ್ಯಂತರವಿಲ್ಲ ಎಂದು ಹೇಳಿದರು.

ಬಡವರು, ವಲಸಿಗರು ಹಸಿವು ನೀಗಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಅನುದಾನ ಕೊಡದೆ ಮುಚ್ಚುವ ಷಡ್ಯಂತರ ನಡೆಸಲಾಗುತ್ತಿದೆ. ಕ್ಯಾಂಟೀನ್‌ಗಳಿಗೆ ಬೆಂಸ್ಸ್ ಕಾರಿನಲ್ಲಿ ಬಂದು ತಿಂದು ಹೋಗುತ್ತಿಲ್ಲ. ಅಲ್ಲಿ ಬಡವರು, ಕೂಲಿ ಕಾರ್ಮಿಕರಷ್ಟೇ ಬರುತ್ತಿದ್ದಾರೆ. ಹಾಗಾಗಿ, ಅನುದಾನ ಒದಗಿಸಬೇಕು ಎಂದು ಒತ್ತಾಯಿಸಿದರು.

ಜೆಡಿಎಸ್‌ನ ಕೆ.ಟಿ.ಶ್ರೀಕಂಠೇಗೌಡ, ಈ ಹಿಂದೆ ರಾಜ್ಯದ 18.08 ಲಕ್ಷ ರೈತರ ಸಾಲ ಮನ್ನಾ ಮಾಡುವುದಾಗಿ ಘೋಷಿಸಲಾಯಿತು. ಇದರಲ್ಲಿ ಮಂಡ್ಯ ಜಿಲ್ಲೆಯ 3021 ರೈತರ 15.37 ಕೋಟಿ ಸಾಲ ಮನ್ನಾ ಮಾಡಿಲ್ಲ. ಇದರಿಂದಾಗಿ ಈ ರೈತರು ಮತ್ತೆ ಸಾಲ ಸೌಲಭ್ಯ ಪಡೆಯಲಾಗುತ್ತಿಲ್ಲ. ರಾಜ್ಯಾದ್ಯಂತ ಒಂದು ಲಕ್ಷಕ್ಕಿಂತ ಹೆಚ್ಚು ಮಂದಿ ರೈತರ ಸಾಲ ಮನ್ನಾ ಆಗಿಲ್ಲ. ಈ ಬಗ್ಗೆ ಗಮನ ಹರಿಸಬೇಕು. ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಸಭಾತ್ಯಾಗ: ಮುಖ್ಯಮಂತ್ರಿಗಳ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು, ಇದೊಂದು ರುಚಿ, ಬಣ್ಣ ಇಲ್ಲದ ಜನ ವಿರೋಧಿ ಬಜೆಟ್ ಆಗಿದೆ. ಆಯವ್ಯಯವು ಘೋಷಣೆಗಷ್ಟೇ ಸೀಮಿತವಾಗಿದ್ದು, ಯಾವುದೂ ಅನುಷ್ಠಾನವಾಗುವುದಿಲ್ಲ ಎಂದು ಸಭಾತ್ಯಾಗ ಮಾಡಿದರು.

ಸಿಎಂ ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶೇ.107 ರಷ್ಟು ಸಾಲ ಮಾಡಲಾಗಿತ್ತು. 60 ವರ್ಷಗಳಲ್ಲಿ ಮಾಡಲಾಗದ ಸಾಲದ ಸಾಧನೆಯನ್ನು ಐದು ವರ್ಷಗಳಲ್ಲಿ ಮಾಡಿದರು. ಇವರಿಂದ ಆರ್ಥಿಕತೆ ಮತ್ತು ನೈತಿಕತೆಯ ಪಾಠ ಕಲಿಯಬೇಕಿಲ್ಲ. ಇವರು ಮಾಡಿದ ಸಾಲವನ್ನು ನಾವು ತೀರಿಸುತ್ತಿದ್ದೇವೆ. ವಿತ್ತೀಯ ಕೊರತೆಯನ್ನು ರೂ. 15,134 ಕೋಟಿಯಿಂದ 6 ಸಾವಿರ ಕೋಟಿಗೆ ಇಳಿಸಿದ್ದೇವೆ ಎಂದು ಹರಿಹಾಯ್ದರು.

ಈಗಾಗಲೇ ಎಲ್ಲ ಇಲಾಖೆಗಳಿಗೆ ಪತ್ರ ಬರೆದಿದ್ದು, ಏಪ್ರಿಲ್ ತಿಂಗಳಿನಿಂದಲೇ ಬಜೆಟ್‌ನಲ್ಲಿ ಘೋಷಿಸಿದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ರೈತರ ಸಾಲ ಮನ್ನಾ ಮಾಡುವುದು ಬಾಕಿ ಇದೆ. ಮೂರ್ನಾಲ್ಕು ಸಲ ಅವಕಾಶ ನೀಡಿದ್ದರೂ ಸಮರ್ಪಕ ದಾಖಲೆ ಸಲ್ಲಿಸಿಲ್ಲ. ಆದಾಗ್ಯೂ ಸಹಾನುಭೂತಿಯಿಂದ ಅನುಕೂಲ ಮಾಡಿಕೊಡಲು ಕ್ರಮ ವಹಿಸಲಾಗುವುದು. ಪಿಂಚಣಿ ಯೋಜನೆ ಕುರಿತಂತೆ ಅನ್ಯ ರಾಜ್ಯಗಳಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ, ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು. 2022–23ನೇ ಸಾಲಿನ ಬಜೆಟ್ ರಾಜ್ಯದ ಜನತೆಯ ಬದುಕಿನ ಮತ್ತು ಭರವಸೆ ಆಯವ್ಯಯವಾಗಿದೆ ಎಂದು ಹೇಳಿದರು.

ಬಜೆಟ್‌ನಲ್ಲಿ ಘೋಷಿಸಿದ ಎಲ್ಲ ಕಾರ್ಯಕ್ರಮಗಳ ಜಾರಿ: ಕಳೆದ ಎರಡು ವರ್ಷಗಳಿಂದ ಕೋವಿಡ್‌ನಿಂದಾಗಿ ರಾಜ್ಯದಲ್ಲಿ ನಲುಗಿದ ಆರ್ಥಿಕ ಸ್ಥಿತಿ ಸುಧಾರಿಸುತ್ತಿದ್ದು, ಕೇಂದ್ರದಿಂದ ಹೆಚ್ಚಿನ ನೆರವಿನ ನಿರೀಕ್ಷೆ, ರಾಜ್ಯದ ರಾಜಸ್ವ ಸಂಗ್ರಹ ಹೆಚ್ಚಳ, ಸಾಲಕ್ಕೆ ಕಡಿವಾಣ, ಆರ್ಥಿಕ ಶಿಸ್ತು ಪರಿಪಾಲನೆ ಮೂಲಕ ಬಜೆಟ್‌ನಲ್ಲಿ ಘೋಷಿಸಿದ ಎಲ್ಲ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಲು ಸರ್ಕಾರ ಬದ್ಧತೆಯಿಂದ ಕೆಲಸ ಮಾಡಲಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು. ಇದೊಂದು ನೈಜ, ಆರ್ಥಿಕ ಪ್ರಗತಿಗೆ ಪೂರಕ ಎಲ್ಲ ಜನರ ಕಲ್ಯಾಣ ಬಜೆಟ್. ರಾಜ್ಯ ಸರ್ಕಾರ ಎಷ್ಟು ಉತ್ಸಾಹದಿಂದ ಬಜೆಟ್ ಮಂಡಿಸಿದೆಯೋ ಅಷ್ಟೇ ಉತ್ಸಾಹದಿಂದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಲು ಕಾರ್ಯೋನ್ಮುಖವಾಗಲಿದೆ. ಬಜೆಟ್ ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಳ್ಳುವಂತೆ ಎಲ್ಲ ಇಲಾಖೆಗಳಿಗೆ ಪತ್ರ

ಬರೆದು ಸೂಚಿಸಲಾಗಿದ್ದು, ಏಪ್ರಿಲ್ ಕೊನೇ ವಾರದಿಂದಲೇ ಬಜೆಟ್ ಅನುಷ್ಠಾನ ಶುರುವಾಗಲಿದೆ ಎಂದು ಭರವಸೆ ನೀಡಿದರು.

ರೂ.21,835 ಕೋಟಿ ರಾಜಸ್ವ ಕೊರತೆ: "ಲಾಕ್‌ಡೌನ್ ಹಾಗೂ ಕರ್ಫ್ಯೂನಿಂದಾಗಿ 2020–21ರಲ್ಲಿ ರೂ.21,835 ಕೋಟಿ ರಾಜಸ್ವ ಕೊರತೆ ಎದುರಾಗಿದೆ. 2021–22ರಲ್ಲಿ ಅದು ರೂ.15,645 ಕೋಟಿಗೆ ಇಳಿದರೆ, ಪ್ರಸಕ್ತ ಹಣಕಾಸು ವರ್ಷದ ಫೆಬ್ರವರಿ ಅಂತ್ಯದ ವೇಳೇಗೆ ರಾಜಸ್ವ ಕೊರತೆ ರೂ.6,478 ಕೋಟಿಗಳಿಗೆ ಬಂದು ನಿಂತಿದೆ. ವಾಣಿಜ್ಯ ತೆರಿಗೆ, ಅಬಕಾರಿ ಹಾಗೂ ಮುದ್ರಾಂಕ ಮತ್ತು ನೊಂದಣಿ ಶುಲ್ಕದಲ್ಲಿ ಹೆಚ್ಚುವರಿ ಗುರಿ ಸಾಧನೆಯೊಂದಿಗೆ ಆರ್ಥಿಕತೆ ಚೇತರಿಕೆಗೆ ಕ್ರಮ ಕೈಗೊಳ್ಳಲಾಗಿದೆ" ಎಂದು ಸಿ.ಎಂ ಹೇಳಿದರು.

ಕೇಂದ್ರದ ಪಾಲು ಕಡಿಮೆಯಾಗಿಲ್ಲ, ಶಿಫಾರಸ್ಸಿಗಿಂತ ಹೆಚ್ಚು ಹಂಚಿಕೆ: ಕೇಂದ್ರದಿಂದ ಬರಬೇಕಾದ ಪಾಲು ಕಡಿಮೆ ಬಂದಿದೆ ಎಂದು ಆರೋಪಿಸಲಾಗುತ್ತದೆ. ಆದರೆ, ಇದು ತಪ್ಪು ಕಲ್ಪನೆ, 14ನೇ ಹಣಕಾಸಿನಲ್ಲಿ ಅಂದರೆ 2015–19ರ ಅವಧಿಯಲ್ಲಿ ರೂ.1.66 ಕೋಟಿ ಹಾಗೂ 15ನೇ ಹಣಕಾಸಿನಲ್ಲಿ (ಇನ್ನೂ 2 ವರ್ಷ ಬಾಕಿ ಇದೆ) ರೂ. 2.18 ಲಕ್ಷ ಕೋಟಿ ಬಂದಿದ್ದು, ಹಣಕಾಸು ವರದಿಯ ಶಿಫಾರಸ್ಸಿಗೆ ಅನುಗುಣವಾಗಿ ಬಿಡುಗಡೆಯಾಗಿದೆ. ನೇರವಾಗಿ ಅಲ್ಲದೆ, ಪರೋಕ್ಷವಾಗಿ ಕೂಡ ಹಲವು ಯೋಜನೆಗಳ ಮೂಲಕ ಕೇಂದ್ರದಿಂದ ಅನುದಾನ ಹಂಚಿಕೆ ಆಗುತ್ತಿದ್ದು, ಇದರಲ್ಲಿ ರಾಜ್ಯಗಳಿಗೆ ಶೇ.42 ರಷ್ಟು ನೀಡಲಾಗುತ್ತಿದೆ. ಈ ಮೊದಲು ಇದು ಶೇ.32 ರಷ್ಟಿತ್ತು ಎಂದು ಸಿಎಂ. ಬೊಮ್ಮಾಯಿ ಸ್ಪಷ್ಟಪಡಿಸಿದರು.

ಪ್ರಮುಖ ಘೋಷಣೆಗಳು:

- ಶಿಕ್ಷಣ, ಆರೋಗ್ಯ ಅಪೌಷ್ಟಿಕತೆ ನಿವಾರಣೆಗೆ ಒತ್ತು
- 100 ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೆ
- ಕ್ಯಾನ್ಸರ್ ರೋಗಿಗಳ ನೆರವಿಗೆ 10 ಕಿಮೋಥೆರಪಿ ಕೇಂದ್ರ
- ಹಾಲು ಉತ್ಪಾದಕರ ಅನುಕೂಲಕ್ಕೆ ಕೃಷಿ ಸಮೃದ್ಧಿ ಬ್ಯಾಂಕ್
- 100 ಪಶು ಆಸ್ಪತ್ರೆ ಸ್ಥಾಪನೆ, 400 ಪಶುವೈದ್ಯರ ನೇಮಕ

ಆಧಾರ:–ವಿಜಯ ಕರ್ನಾಟಕ, ದಿನಾಂಕ:18.03.2022

101. ಹಿಜಾಬ್ ವಿವಾದ:ಮೇಲ್ಮನೆಯಲ್ಲಿ ಗಲಾಟೆ

ಹಿಜಾಬ್ ವಿಚಾರ ಮೇಲ್ಮನೆಯಲ್ಲಿಯೂ ಪ್ರಸ್ತಾಪವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಜಟಾಪಟಿ ನಡೆದು ಸದನದಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಯಿತು.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಕಾಂಗ್ರೆಸ್ ಸದಸ್ಯ ಸಲೀಂ ಅಹ್ಮದ್, ಹಿಜಾಬ್ ಬಗ್ಗೆ ಹೈಕೋರ್ಟ್ ತೀರ್ಪು ಕೊಟ್ಟಿದೆ. ಯಾವುದೇ ಸಮಸ್ಯೆ ಇರಲಿಲ್ಲ. ನೂರಾರು ವರ್ಷಗಳಿಂದ ಹಿಜಾಬ್, ಬುರ್ಖಾ, ಪರ್ದಾ ಪದ್ಧತಿ ನಡೆದುಕೊಂಡು ಬಂದಿದೆ. ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲ ಇಂತಹ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಹಿಜಾಬ್ ವಿವಾದಕ್ಕೆ ಬಿಜೆಪಿ ಸರ್ಕಾರ ನೇರ ಹೊಣೆ ಎಂದು ಆರೋಪಿಸಿದರು.

ಇದಕ್ಕೆ ಆಕ್ಷೇಪಿಸಿದ ಸಭಾನಾಯಕ ಕೋಟಾ ಶ್ರೀನಿವಾಸ ಪೂಜಾರಿ, ಧಾರ್ಮಿಕ ಆಚಾರ–ವಿಚಾರಗಳ ಆಚರಣೆಗಳನ್ನು ವೈಯಕ್ತಿಕ ಬದುಕಿನಲ್ಲಿ ಪಾಲಿಸಲು ಯಾವುದೇ ಅಭ್ಯಂತರವಿಲ್ಲ. ಸಮವಸ್ತ್ರದ ವಿಚಾರ ಬಂದಾಗ ಧಾರ್ಮಿಕ ಆಚರಣೆಗಳಿಗೆ ಅವಕಾಶವಿಲ್ಲ ಎಂಬುದು ಸರ್ಕಾರದ ನಿಲುವು ಆಗಿತ್ತು.

ಅದನ್ನು ಹೈಕೋರ್ಟ್ ಒಪ್ಪಿಕೊಂಡಿದೆ. ಹೈಕೋರ್ಟ್ ತೀರ್ಪಿನ ಬಗ್ಗೆ ಮುಸ್ಲಿಂ ನಾಯಕರು ನಿಲವು ಏನೆಂದು ಕೇಳಿದರು.

ಮಧ್ಯಪ್ರವೇಶಿಸಿದ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ನಿಲುವು ಏನೆಂದು ಸುಪ್ರೀಂಕೋರ್ಟ್‌ನಲ್ಲಿ ಹೇಳುತ್ತೇವೆ. ನಿಮ್ಮ ಪ್ರಶ್ನೆಗೆ ಉತ್ತರಿಸಬೇಕೆಂದಿಲ್ಲ ಎಂದರು. ಕೋರ್ಟ್ ತೀರ್ಪು ಒಪ್ಪುತ್ತೇವೆ. ಜೊತೆಗೆ ನಾವು ಸಂವಿಧಾನಕ್ಕೂ ಗೌರವ ಕೊಡುತ್ತೇವೆ ಎಂದು ಸಲೀಂ ಅಹ್ಮದ್ ಹೇಳಿದರು.

ಮಾತು ಮುಂದುವರಿಸಿದ ಸಲೀಂ ಅಹ್ಮದ್, ಹಿಜಾಬ್ ವಿವಾದ ಹೇಗಾಯಿತು. ಸಂಘರ್ಷದ ವಾತಾವರಣ ನಿರ್ಮಾಣವಾಗಲು ಕಾರಣ ಯಾರು. ರಾತ್ರೋರಾತ್ರಿ, ಕೇಸರಿ ಶಾಲುಗಳು ಹೇಗೆ ಬಂದವು. ಶಾಲೆಗಳಿಗೆ ಕೇಸರಿ ಶಾಲು ಧರಿಸಿ ಹೋಗುವ ಪದ್ಧತಿ ಇತ್ತೆ. ಇದೆಲ್ಲದರ ಬಗ್ಗೆ ಚರ್ಚೆ ನಡೆಯಬೇಕಿದೆ. ಅಣ್ಣ–ತಮ್ಮ, ಅಕ್ಕ–ತಂಗಿಯರಂತೆ ಬಾಳುತ್ತಿದ್ದ ಮಕ್ಕಳು, ಇಂದು ಒಬ್ಬರ ಮುಖ ಇನ್ನೊಬ್ಬರು ನೋಡದಂತ ಪರಿಸ್ಥಿತಿ ಇದೆ. ಇದಕ್ಕೆ ಸರ್ಕಾರವೇ ಹೊಣೆ ಎಂದು ಪುನರುಚ್ಚರಿಸಿದರು. ಇದರಿಂದ ಕೋಪಗೊಂಡ ಸಭಾನಾಯಕ ಕೋಟಾ ಶ್ರೀನಿವಾಸ ಪೂಜಾರಿ, ನಿಮ್ಮ ಚಿಂತಾವಣೆಯಿಂದಲೇ ವಿದ್ಯಾರ್ಥಿಗಳು ಹಿಜಾಬ್ ಹಾಕಿ ಕೊಂಡು ಬರಲು ಪ್ರಾರಂಭಿಸಿದ್ದು, ಕೋರ್ಟ್‌ಗೆ ಹೋಗಿದ್ದು ಯಾರು? ಹಿಜಾಬ್ ವಿಷಬೀಜ ಬಿತ್ತಿದವರು ಇವರೇ ಎಂದು ಕಾಂಗ್ರೆಸ್ ವಿರುದ್ಧ ಆರೋಪಿಸಿದರು. ಇದಕ್ಕೆ ಬಿಜೆಪಿ ಸದಸ್ಯರು ಧ್ವನಿಗೂಡಿಸಿದರು. ಘಟನೆ ಹಿಂದೆ ಕಾಣದ ಕೈಗಳ ಕೈವಾಡ ಇದೆ ಎಂದು ಹೇಳಲಾಗಿದೆ. ಹಿಂದೂ–ಮುಸ್ಲಿಂ ಯಾವುದೇ ಸಂಘಟನೆ ಇರಲಿ ನಿಷೇಧ ಮಾಡಿ. ಆದರೆ, ಸರ್ಕಾರಕ್ಕೆ ಆ ಧೈರ್ಯ ಮತ್ತು ಬದ್ಧತೆ ಇಲ್ಲ ಎಂದು ಸಲೀಂ ಅಹ್ಮದ್ ವಾಗ್ದಾಳಿ ನಡೆಸಿದರು.

ಬೊಂಬೆ ಮಿಠಾಯಿ ಬಜೆಟ್: ಬಜೆಟ್ ಕುರಿತು ಮಾತನಾಡಿದ ಸಲೀಂ ಅಹ್ಮದ್ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಅನ್ಯಾಯವಾಗಿದೆ. ಸಿಹಿ ಇಲ್ಲದ, ರುಚಿ ಇಲ್ಲ ಬೊಂಬೆ ಮಿಠಾಯಿ ಬಜೆಟ್ ಇದಾಗಿದೆ. ಮಹಿಳೆಯರು, ಯುವಕರು, ವಿದ್ಯಾರ್ಥಿಗಳು ರೈತರು ಕಾರ್ಮಿಕರಿಗೂ ಸಹ ಈ ಬಜೆಟ್ ಅನ್ಯಾಯ ಮಾಡಿದೆ. 'ಸಭ್ ಕಾ ಸಾಥ್, ಸಬ್ ಕಾ ವಿಕಾಸ್' ಬಜೆಟ್‌ನಲ್ಲಿ ಕಾಣುತ್ತಿಲ್ಲ. ಸಿದ್ಧರಾಮಯ್ಯ ಸರ್ಕಾರ ಅಲ್ಪಸಂಖ್ಯಾತರಿಗೆ ರೂ. 3 ಸಾವಿರ ಕೋಟಿ ಕೊಟ್ಟಿತು. ಈ ಬಜೆಟ್‌ನಲ್ಲಿ ಸಾವಿರ ಕೋಟಿ ಮಾತ್ರ ಇದೆ. ಈ ಅನ್ಯಾಯ ತಾರತಮ್ಯ ಯಾಕೆ ಎಂದು ಪ್ರಶ್ನಿಸಿದರು.

ಆಧಾರ:–ವಿಜಯವಾಣಿ, ದಿನಾಂಕ:18.03.2022

102. ರಾಜ್ಯದ ಆರ್ಥಿಕ ಸಂಕಷ್ಟ ಬಿಡಿಸಿದ ಕೃಷ್ಣ

ಸಾಲದ ಸುಳಿಗೆ ಸಿಲುಕಿರುವ ರಾಜ್ಯದ ಪ್ರಸ್ತುತ ಸ್ಥಿತಿಗತಿ, ಅದರಲ್ಲಿ ಕೇಂದ್ರದ ಪಾಲುದಾರಿಕೆ, ಆ ಸುಳಿಯಿಂದ ಹೊರಬರಲು ಸರ್ಕಾರದ ಮುಂದಿರುವ ಆಯ್ಕೆಗಳು ಸೇರಿ ರಾಜ್ಯದ ಹಣಕಾಸಿನ ವಸ್ತುಸ್ಥಿತಿಯನ್ನು ದಾಖಲೆಗಳ ಸಹಿತ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ವಿವರವಾಗಿ ಬಿಚ್ಚಿಟ್ಟರು. ಈ ಮೂಲಕ ಸದನದ ಮನಗೆದ್ದರು.

ಎರಡೂವರೆ ತಾಸು ನಿರರ್ಗಳವಾಗಿ ಮಾತನಾಡಿದ ಅವರು ಹಿಂದೆ ಪರಿಷತ್ತಿನ ಸದಸ್ಯರೂ ಆಗಿದ್ದ ಅವರು ರಾಜ್ಯದ ಆರ್ಥಿಕ ಸಂಕಷ್ಟದ ಇಡೀ ಅಧ್ಯಾಯವನ್ನು ಸದನಕ್ಕೆ ಒಪ್ಪಿಸಿದರು. ಈ ವೇಳೆ ಕೇಂದ್ರದ ಲೋಪಗಳನ್ನು ಎತ್ತಿ ತೋರಿಸಿದರು. ಸಾಲದ ನಡುವೆಯೂ ಸರ್ಕಾರದ ದುಂದು ವೆಚ್ಚಕ್ಕೆ ಕಿವಿಹಿಂಡಿದರು. ಆಗಾಗ್ಗೆ ಸಲಹೆಗಳನ್ನೂ ನೀಡಿದರು. ಹೀಗೆ ಎಳೆಎಳೆಯಾಗಿ ಬಿಚ್ಚಿಟ್ಟ ಅಂಕಿ–ಅಂಶಗಳಿಗೆ ಸರ್ಕಾರ ಮತ್ತು ಪರೋಕ್ಷವಾಗಿ ಸರ್ಕಾರದ ದನಿಯಾದವರು ಹಾಗೂ ಪ್ರತಿಪಕ್ಷಗಳ ಸದಸ್ಯರು ಒಳಗೊಂಡಂತೆ ಇಡೀ ಸದನ ಕಿವಿಯಾಯಿತು. ಅಷ್ಟೇ ಅಲ್ಲ, ಮಾತು ಮುಂದುವರೆಸುವಂತೆ ಸದಸ್ಯರು ಹುರಿದುಂಬಿಸಿ, ಅವರ ಮಾತಿಗೆ ಆಗಾಗ್ಗೆ ಅಡ್ಡಿಪಡಿಸುವವರನ್ನೂ ತಡೆದರು. ಇದರಿಂದ ಕೃಷ್ಣ ಬೈರೇಗೌಡ ಸದನದ ಕೇಂದ್ರಬಿಂದುವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯವು ಸಾಲದ ಸುಳಿಗೆ ಸಿಲುಕಲು ಕೋವಿಡ್–19 ಹಾವಳಿ ಮಾತ್ರವಲ್ಲ; ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ತೆರಿಗೆ ಪಾಲು ಹಾಗೂ ಅನುದಾನದಲ್ಲಾದ ಗಣನೀಯ ಪ್ರಮಾಣದ ಖೋತಾ ಕೂಡ ಕಾರಣವಾಗಿದೆ. 2020–21ರಲ್ಲೇ ರಾಜ್ಯದ ತೆರಿಗೆ ಪಾಲಿನಲ್ಲಿ ಸುಮಾರು ರೂ. 27 ಸಾವಿರ ಕೋಟಿ ಕುಸಿತ ಕಂಡಿದೆ. ಜೊತೆಗೆ ಅನುದಾನದಲ್ಲೂ ಇದು ಮುಂದುವರಿದಿದೆ. ಆಗ ಅದನ್ನು ಸರಿದೂಗಿಸಲು ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅಕ್ಷರಶಃ ಒದ್ದಾಡಿದ್ದಾರೆ. ವಾಸ್ತವವಾಗಿ ಇಲ್ಲಿಂದ ಆರ್ಥಿಕ ಪತನ ಶುರುವಾಯಿತು ಎಂದು ಹೇಳಿದರು.

ಬಂದಿದ್ದು 1.47 ಲಕ್ಷ ಕೋಟಿ: ಪಿಆರ್‌ಎಸ್ ಸಂಸ್ಥೆ ಸಮೀಕ್ಷೆ ಪ್ರಕಾರ ರಾಜ್ಯಗಳ ಹಣಕಾಸಿನ ಅವಲೋಕನ ವರದಿ ಪ್ರಕಾರ 2010–11 ರಿಂದ 2013–14ರ ಅವಧಿಯಲ್ಲಿ ಕೇಂದ್ರದಿಂದ ರಾಜ್ಯದ ತೆರಿಗೆ ಪಾಲಿನ ನಿರೀಕ್ಷೆ ಇದ್ದದ್ದು ರೂ.45,713 ಕೋಟಿ ಬಂದಿದ್ದು, ರೂ.47,036 ಕೋಟಿ ಅದೇ ರೀತಿ 2014–15 ರಿಂದ 2019–20ರ ವರೆಗೆ ರೂ.2.37 ಲಕ್ಷ ಕೋಟಿ ಕಡಿಮೆ ಬಂದಿದೆ. ಅಂದರೆ 48 ಸಾವಿರ ಕೋಟಿ ಕಡಿಮೆ ಬಂದಿದೆ. ನಿರೀಕ್ಷೆಯಲ್ಲಿ ಕೇವಲ ಶೇ.27 ರಷ್ಟು ಅನುದಾನ ಕೇಂದ್ರದಿಂದ ರಾಜ್ಯಕ್ಕೆ ಲಭಿಸಿದೆ. 2022–23ರಲ್ಲಿ ಇದೇ ಅನುದಾನದ ಪ್ರಮಾಣ ಶೇ.27 ರಿಂದ ಶೇ.18ಕ್ಕೆ ಕುಸಿದಿದೆ. ಕೊನೆಪಕ್ಷ ಶೇ.27ರಷ್ಟು ಬಂದಿದ್ದರೂ ರೂ.71,896 ಕೋಟಿ ಆಗುತ್ತಿತ್ತು. ಈ ರೀತಿಯಾದರೆ ಯಾವ ರಾಜ್ಯಕ್ಕೂ ಆರ್ಥಿಕ ಪರಿಸ್ಥಿತಿಯನ್ನು ತಡೆದುಕೊಳ್ಳಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಿಹಾರ ನಿಂತರೂ ಸೆಸ್ ನಿಲ್ಲದು: ತೆರಿಗೆ ಹೊರೆ ಶ್ರೀಮಂತರ ಮೇಲೆ ಅಲ್ಲ, ಬಡವರ ಮೇಲೆ ಬೀಳುತ್ತಿದೆ. ಸೆಸ್‌ಗಳು ಮೊದಲಿನಿಂದಲೂ ಇವೆ. 2010ರಲ್ಲಿ ಕೇಂದ್ರ ಸರ್ಕಾರ ಎಲ್ಲಾ ಆದಾಯದಲ್ಲಿ ಸೆಸ್ ಪಾಲು ಶೇ.10.4ರಷ್ಟು ಮಾತ್ರ ಇತ್ತು. ಈಗ ಅದು ಶೇ.24ರಷ್ಟು ಆಗಿದೆ. ಅಂದರೆ ರೂ. ನೂರು ಬಂದರೆ ಅದರಲ್ಲಿ ರಾಜ್ಯಕ್ಕೆ ಹಂಚುವುದು ರೂ.76 ಮಾತ್ರ. ಈ ಹಿಂದೆ ರೂ.90 ರಾಜ್ಯಕ್ಕೆ ಹಂಚಿಕೆ ಮಾಡಲಾಗುತ್ತಿತ್ತು ಎಂದು ಮಾಹಿತಿ ನೀಡಿದ ಅವರು, 15ನೇ ಹಣಹಾಸು ಆಯೋಗದ ಪ್ರಕಾರ ಪೆಟ್ರೋಲ್ ಮೇಲಿನ ತೆರಿಗೆಯಲ್ಲಿ ಶೇ.59 ಕೇಂದ್ರ ಪಾಲಾಗಿದ್ದರೆ, ಶೇ.41 ರಾಜ್ಯಗಳಿಗೆ ನೀಡಬೇಕು. ಈಗ ಸೆಸ್ ಹಾಕುವುದರಿಂದ ರಾಜ್ಯಕ್ಕೆ ಶೇ.41ರ ಬದಲಿಗೆ ಕೇವಲ ಶೇ.29 ಆದಾಯ ಬರುತ್ತಿದೆ. ತೆರಿಗೆಯನ್ನು ಸೆಸ್‌ಗೆ ಪರಿವರ್ತಿಸಿ ರಾಜ್ಯಗಳ ಪಾಲಿನ ಆದಾಯ ಕಡಿತವಾಗುತ್ತಿದೆ. ಜಿಎಸ್‌ಟಿ ಪರಿಹಾರ ನಿಂತರೂ ಸೆಸ್ ಮುಂದುವರೆಯುತ್ತದೆ ಎಂದು ಹೇಳಿದರು.

ಕೇಂದ್ರದಿಂದ ರಾಜ್ಯಕ್ಕೆ ತೆರಿಗೆ ಪಾಲು (ಕೋಟಿ ರೂ.ಗಳಲ್ಲಿ)		
ಅವಧಿ	**ನಿರೀಕ್ಷೆ**	**ವಾಸ್ತವವಾಗಿ ಬಂದಿದ್ದು**
2010–11 ರಿಂದ 2013–14	45,713	47,036
2014–15 ರಿಂದ 2019–20	2,37,039	1,47,363

ಕೇಂದ್ರದಿಂದ ರಾಜ್ಯಕ್ಕೆ ಅನುದಾನ		
ವರ್ಷ	**ನಿರೀಕ್ಷೆ**	**ವಾಸ್ತವವಾಗಿ ಬಂದಿದ್ದು**
2020–21 ರಿಂದ 2013–14	ರೂ. 1,41 ಲಕ್ಷ ಕೋಟಿ	ರೂ. 1,41 ಲಕ್ಷ ಕೋಟಿ (ಶೇ.37 ರಷ್ಟು)

ಎಸ್ಟಿ ಮೀಸಲು: ಗದ್ದಲ: ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ಹೆಚ್ಚಿಸುವ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ಜಾರಿಗೆ ಪಟ್ಟುಹಿಡಿದ ಪ್ರತಿಪಕ್ಷ

ಕಾಂಗ್ರೆಸ್ ಸದಸ್ಯರು ಸದನದ ಬಾವಿಗಿಳಿದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಳಮನೆಯಲ್ಲಿ ವಿಷಯ ಪ್ರಸ್ತಾಪಿಸಿದ ರಘುಮೂರ್ತಿ, ತುಕಾರಾಮ್, ಪ್ರಿಯಾಂಕ್ ಖರ್ಗೆ ಮತ್ತು ಕೃಷ್ಣಬೈರೇಗೌಡ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ಪರಿಷ್ಕರಣೆ ಸಂಬಂಧ ಈಗಾಗಲೇ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ ಸಲ್ಲಿಸಿದೆ. ಅದರಂತೆ ಮೀಸಲಾತಿ ಪ್ರಮಾಣವನ್ನು ಶೇ.3 ರಿಂದ 7.5ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಲಾಗಿದೆ. ಆದರೆ, ವರದಿಯನ್ನು ಸರ್ಕಾರ ಇನ್ನೂ ಜಾರಿಗೊಳಿಸಿಲ್ಲ ಎಂದು ಗಮನಸೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಬಿ.ಶ್ರೀರಾಮುಲು, ಈಗಾಗಲೇ ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ನೀಡಿದ್ದಾರೆ. ಬೆನ್ನಲ್ಲೇ ಸುಭಾಷ್ ಅಡಿ ನೇತೃತ್ವದ ತ್ರಿಸದಸ್ಯ ಸಮಿತಿಗೆ ಆದಷ್ಟು ಬೇಗ ವರದಿ ನೀಡುವಂತೆ ಮನವಿ ಮಾಡಲಾಗುವುದು ಎಂದರು. ಇದಕ್ಕೆ ಸಮ್ಮತಿಸಿದ ಪ್ರತಿಪಕ್ಷದ ಸದಸ್ಯರು, ಸದನದ ಬಾವಿಗಿಳಿದು ಧರಣಿ ನಡೆಸಿದರು. ಇದರಿಂದ ಗೊಂದಲದ ವಾತಾವರಣ ನಿರ್ಮಾಣವಾಗಿ ಸಭಾಧ್ಯಕ್ಷರು ಸದನವನ್ನು ಮುಂದೂಡಿದರು.

ಆಧಾರ:–ಉದಯವಾಣಿ, ದಿನಾಂಕ:18.03.2022

103. ಬಹಿಷ್ಕರಿಸಿದವರಿಗೆ ಮತ್ತೆ ಪರೀಕ್ಷೆ ಸಾಧ್ಯವೇ ಇಲ್ಲ

ಹೈಕೋರ್ಟ್ ತೀರ್ಪಿನ ಬಳಿಕವೂ ಹಿಜಾಬ್ ವಿಚಾರ ವಿಧಾನಸಭೆಯಲ್ಲಿ ಮತ್ತೊಮ್ಮೆ ಪ್ರತಿಧ್ವನಿಸಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿಗೆ ಕಾರಣವಾಗಿದೆ.

ಹಿಜಾಬ್ ಸಮವಸ್ತ್ರದ ಭಾಗವಲ್ಲ ಎಂದು ಹೈಕೋರ್ಟ್ ಮಧ್ಯಂತರ ಆದೇಶವನ್ನು ಮೀರಿ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಬಹಿಷ್ಕರಿಸಿದ್ದ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕೇ? ಬೇಡವೇ? ಎಂಬ ವಿಚಾರ ಸದನದಲ್ಲಿ ಪ್ರಸ್ತಾಪವಾಯಿತು. ಪರೀಕ್ಷೆಗೆ ಅವಕಾಶ ನೀಡಲು ಪ್ರತಿಪಕ್ಷದ ಶಾಸಕರಾದ ಕೃಷ್ಣಬೈರೇಗೌಡ ಮತ್ತು ಯುಟಿ.ಖಾದರ್ ಮನವಿ ಮಾಡಿದ್ದಕ್ಕೆ ಉತ್ತರಿಸಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಪ್ರತಿಯೊಬ್ಬರಿಗೂ ಅನುಕೂಲ ಆದಾಗಲೆಲ್ಲ ಪರೀಕ್ಷೆ ಬರೆಯುವುದಕ್ಕೆ ಅವಕಾಶ ನೀಡಲು ಸಾಧ್ಯವೇ? ಎಂದು ತೀರುಗೇಟು ನೀಡಿದರು. ಇದರಿಂದ, ಆಡಳಿತ ಪ್ರತಿಪಕ್ಷಗಳ ನಡುವೆ ಜಟಾಪಟಿ ಉಂಟಾಯಿತು.

ಹಿಜಾಬ್ ಪ್ರಕರಣದಲ್ಲಿ ಹೈಕೋರ್ಟ್ ಮಧ್ಯಂತರ ಆದೇಶದ ನಡುವೆಯೂ ಪೂರ್ವ ಸಿದ್ದತಾ ಪರೀಕ್ಷೆ ಬಹಿಷ್ಕರಿಸಿದ್ದ ವಿದ್ಯಾರ್ಥಿಗಳಿಗೆ ಹಿಜಾಬ್ ತೆಗೆದಿಟ್ಟು ಪರೀಕ್ಷೆ ಬರೆಯಲು ಮತ್ತೊಂದು ಅವಕಾಶ ಕಲ್ಪಿಸಬೇಕು. ಅಂತಿಮ ಆದೇಶದ ನಂತರವೂ ಪ್ರತಿಭಟನೆ ನಡೆಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಶೂನ್ಯ ವೇಳೆಯಲ್ಲಿ ಉಡುಪಿ ಶಾಸಕ ರಘುಪತಿಭಟ್ ಒತ್ತಾಯಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರೂ ಧ್ವನಿಗೂಡಿಸಿದರು.

ಮಾಧುಸ್ವಾಮಿ ಪ್ರತಿಪಾದನೆ: ಪ್ರತ್ಯೇಕವಾಗಿ ಪ್ರತಿಯೊಬ್ಬರಿಗೂ ಪರೀಕ್ಷೆ ನಡೆಸಲು ಸಾಧ್ಯವೇ ಇಲ್ಲ? ಪ್ರತಿಯೊಂದು ಕ್ಲಾಸ್‌ಗೂ ಪ್ರತ್ಯೇಕ ಪ್ರಶ್ನೆಪತ್ರಿಕೆ ಸಿದ್ದಪಡಿಸಲು ಸಾಧ್ಯವಾಗುತ್ತಾ? ಹೀಗಾದ್ರೆ ಆಡಳಿತ ನಡೆಸುವುದಾದರೂ ಏತಕ್ಕೆ? ವ್ಯವಸ್ಥೆ ಉಳಿಯುತ್ತದಾ? ಕೋರ್ಟ್‌ನ ಮಧ್ಯಂತರ ಆದೇಶದ ನಂತರವೂ ವಿವಾದವನ್ನೇ ಬೆಳೆಸಿಕೊಂಡ ಹೋದವರಿಗೆಲ್ಲ ಅವಕಾಶ ಕೊಟ್ಟರೆ ಮುಂದೆ ಎಲ್ಲರೂ ತಮಗಿಷ್ಟದಂತೆ ಪರೀಕ್ಷೆ ಬರೆಯಲು ಸಮಯ ಕೇಳುತ್ತಾರೆ. ಪರೀಕ್ಷೆ ಬರೆಯಲು ಅವಕಾಶ ಕೊಡಿ ಅಂತ ಕೋರ್ಟ್ ಹೇಳಿಲ್ಲ. ಹೈಕೋರ್ಟ್ ಮಧ್ಯಂತರ ಆದೇಶವನ್ನೂ ಮೀರಿ ಹಿಜಾಬ್ ವಿಚಾರವಾಗಿ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದ್ದರ ಪರಿಣಾಮ ಇದು ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಪ್ರತಿಪಾದಿಸಿದರು. ಕೋರ್ಟ್ ಸೂಚಿಸಿದ ಹೊರತು ಮರು ಪರೀಕ್ಷೆ ಸಾಧ್ಯವೇ ಇಲ್ಲ ಎಂದರು.

ಕಾವೇರಿ ಪ್ರಕರಣ ಮತ್ತು ಡಾ:ರಾಜಕುಮಾರ್ ಅಪಹರಣ ಪ್ರಕರಣದಲ್ಲೂ ಹೀಗೆ ಆಗಿತ್ತು. ಪ್ರತಿಭಟನೆ ತೀವ್ರಗೊಂಡಾಗ ರಾಜ್‌ಕುಮಾರ್ ಬಿಡುಗಡೆ ಪರ್ಯಾಯವಾಗಿ ಖೈದಿಗಳ ಬಿಡುಗಡೆಗೆ

ಅನುಮತಿ ಕೋರಿ ಸುಪ್ರೀಂಕೋರ್ಟ್‌ನಲ್ಲಿ ಮನವಿ ಮಾಡಿದಾಗ, ಹೈಕೋರ್ಟ್ ಆದೇಶ ಪಾಲಿಸಿ ಅಥವಾ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದು ಎಚ್ಚರಿಕೆ ನೀಡಿತ್ತು. ಹಾಗಾಗಿ ಹೈಕೋರ್ಟ್ ಆದೇಶ ಪಾಲನೆ ಸರ್ಕಾರದ ಕರ್ತವ್ಯ. ಈಗ ಪ್ರತಿಭಟನೆ ನಡೆಸುವುದು ನ್ಯಾಯಾಂಗ ನಿಂದನೆಯೂ ಹೌದು ಎಂದು ಸ್ಪಷ್ಟಪಡಿಸಿದರು. ಪರಿಷತ್ತಿನಲ್ಲೂ ಹಿಜಾಬ್ ವಿಷಯದ ಬಗ್ಗೆ ಬಿರುಸಿನ ಚರ್ಚೆ ನಡೆಯಿತು.

ವ್ಯಾಪಾರ ಬಂದ್‌ಗೆ ಪರ ವಿರೋಧ: ಮುಸ್ಲಿಂ ಸಂಘಟನೆಗಳ ಒಕ್ಕೂಟವು ವ್ಯಾಪಾರ ಬಂದ್‌ಗೆ ಕರೆ ನೀಡಿದ್ದ ಬಗ್ಗೆಯೂ ಸದನದಲ್ಲಿ ಚರ್ಚೆ ನಡೆಯಿತು. ಹೈಕೋರ್ಟ್ ತೀರ್ಪನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲು ಕಾನೂನಿನಲ್ಲಿ ಅವಕಾಶ ಇದ್ದರೂ ಪ್ರತಿಭಟನೆ ನಡೆಸುತ್ತಾರೆ. ಬಂದ್‌ಗೆ ಕರೆ ನೀಡುತ್ತಾರೆ ಅಂದರೆ ಅರ್ಥವೇನು? ಇದು ನ್ಯಾಯಾಂಗ ನಿಂದನೆ, ಇದನ್ನು ಯಾರೂ ಬೆಂಬಲಿಸಬಾರದು. ಸರ್ಕಾರದ ವಿರುದ್ಧ ಪ್ರತಿಭಟಿಸಲಿ. ಆದರೆ, ಹೈಕೋರ್ಟ್ ತೀರ್ಪನ್ನೇ ಉಲ್ಲಂಘಿಸಿ ಪ್ರತಿಭಟಿಸುವುದು ಕಾನೂನಿಗೆ ಬೆಲೆ ನೀಡುತ್ತಿಲ್ಲ ಎಂಬುದೇ ಅರ್ಥ. ವಕೀಲರಾದ ಸಿದ್ದರಾಮಯ್ಯ ಅವರಿಗೂ ಗೊತ್ತು ಎಂದು ಮಾಜಿ ಸಿ.ಎಂ. ಜಗದೀಶ ಶೆಟ್ಟರ್ ಆಗ್ರಹಿಸಿದರು.

ಸಿದ್ದರಾಮಯ್ಯ ಸಮರ್ಥನೆ: ಕೋರ್ಟ್ ಆದೇಶ ಒಪ್ಪಿಕೊಳ್ಳಲೇಬೇಕು. ಆದೇಶದಿಂದ ಅಸಮಾಧಾನ ಆಗಿದೆ. ಅದಕ್ಕಾಗಿ ಪ್ರತಿಭಟನೆ ಮತ್ತು ಶಾಂತಿಯುತ ಬಂದ್‌ಗೆ ಕರೆ ನೀಡಿದ್ದಾರೆ. ಅದು ಅವರ ಹಕ್ಕು ಅದನ್ನು ಸರ್ಕಾರ ತಡೆಯೋಕೆ ಆಗಲ್ಲ. ಬಂದ್ ಮಾಡಿಕೊಳ್ಳಲಿ ಬಿಡಿ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಆಕ್ಷೇಪಿಸಿದ ಶೆಟ್ಟರ್, ಹೈಕೋರ್ಟ್ ಆದೇಶ ಉಲ್ಲಂಘಿಸಿ ಬಂದ್ ಮಾಡ್ತೇವೆ ಅಂದ್ರೆ ಹೇಗೆ? ವಕೀಲರಾಗಿ ನೀವೇ ಹೀಗೆ ಉತ್ತರಿಸಿದ್ರೆ ಹೇಗೆ? ಕಾನೂನು ನಿಂದನೆ ಪ್ರಕರಣ ಆಗುತ್ತದೆ ಎಂದು ತಿರುಗೇಟು ಕೊಟ್ಟರು.

ವೋಟ್ ಬ್ಯಾಂಕ್ ರಾಜಕಾರಣ ಪಾಪ: ನಾನು ವಕೀಲ ಅಲ್ಲ. ಸಿದ್ದರಾಮಯ್ಯ ವಕೀಲರು ಮತ್ತು ಅನುಭವಿಗಳು. ಸಾರ್ವಜನಿಕ ಅಭಿಪ್ರಾಯ ರೂಪಿಸುವುದಕ್ಕೆ ಸ್ವಾತಂತ್ರ್ಯ ಇದೆಯೆಂದು ಕೋರ್ಟ್ ವಿರುದ್ಧ ಪ್ರತಿಭಟಿಸಿ ಸಾರ್ವಜನಿಕವಾಗಿ ವಾತಾವರಣ ಹಾಳು ಮಾಡಿ ಬೆದರಿಕೆ ಹಾಕಲು ಅವಕಾಶ ಇದೆಯಾ? ಯಾರೇ ಆಗಲಿ, ವೋಟ್ ಬ್ಯಾಂಕ್ ರಾಜಕಾರಣ ಮಾಡೋದು ಮಹಾಪಾಪದ ಕೆಲಸ, ಎಂದು ಬಿಜೆಪಿಯ ಸಿ.ಟಿ.ರವಿ ಗುಡುಗಿದರು.

ಹಿಜಾಬ್ ಪರ ವಹಿಸಿದರೆ ಕಾನೂನು ಕ್ರಮ:ಹೈಕೋರ್ಟ್ ತೀರ್ಪಿನ ಬಿಳಿಕವೂ ಹಿಜಾಬ್ ಪರ ಚಟುವಟಿಕೆ ನಡೆಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಅರಗ ಜ್ಞಾನೇಂದ್ರ ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕ ಬಂದ್ ಸಂಬಂಧ ವಿಧಾನಸೌಧದಲ್ಲಿ ಪ್ರತಿಕ್ರಿಯಿಸಿದ ಅವರು ಕೋರ್ಟ್ ಆದೇಶ ಪಾಲಿಸಬೇಕು. ದೇಶದ ಕಾನೂನು ತಮಗೆ ಅನ್ವಯವಾಗಲ್ಲ ಎಂದರೆ ಹೇಗೆ? ಎಂದು ಪ್ರಶ್ನಿಸಿದರು

ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಹೋಗಿದ್ದಾರೆ. ಅದರಿಂದ ತೊಂದರೆಯಿಲ್ಲ. ಆದರೆ ಕಾನೂನು ಸುವ್ಯವಸ್ಥೆಗೆ ಭಂಗ ತರಬಾರದು. ಮಕ್ಕಳ ಮನಸ್ಸಿನಲ್ಲಿ ಮತಾಂಧತೆಯ ಬೀಜ ಬಿತ್ತಬಾರದು. ದ್ವೇಷ ಹುಟ್ಟಿಸುವವರ ವಿರುದ್ಧ ಕ್ರಮ ಜರುಗಿಸುತ್ತೇವೆ ಎಂದರು.

ಆಧಾರ:–ವಿಜಯ ಕರ್ನಾಟಕ, ದಿನಾಂಕ:18.03.2022

104. ಹಣಕಾಸು ಸಂಸ್ಥೆಗಳು ವಿಶ್ವಾಸಾರ್ಹತೆ ಗಳಿಸಿಕೊಳ್ಳುವುದು ಮುಖ್ಯ

ಇಂದಿನ ಕಾಲದಲ್ಲಿ ಹಣಕಾಸು ಸಂಸ್ಥೆಗಳು ವಿಶ್ವಾಸಾರ್ಹತೆಯನ್ನು ಗಳಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿಪ್ರಾಯಪಟ್ಟರು.

ಜಯನಗರದಲ್ಲಿರುವ ಶ್ರೀಚರಣ್ ಬ್ಯಾಂಕ್ ಶಾಖೆಯ ನೂತನ ಕಟ್ಟಡವನ್ನು ಉದ್ಘಾಟಿಸಿ ಅವರು ಮಾತನಾಡಿ, "ಈ ನಿಟ್ಟಿನಲ್ಲಿ ಚರಣ್ ಬ್ಯಾಂಕ್ ಕಳೆದ 25 ವರ್ಷಗಳಲ್ಲಿ ಬಹಳಷ್ಟನ್ನು ಸಾಧಿಸಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುಮಾರು ಐದು ದಶಕಗಳ ಅನುಭವವನ್ನು ಹೊಂದಿರುವಂತಹ ದ್ವಾರಕಾನಾಥ್ ನೇತೃತ್ವದ ಚರಣ್ ಬ್ಯಾಂಕ್ ಜನರಲ್ಲಿ ವಿಶ್ವಾಸಾರ್ಹತೆಯನ್ನು ಗಳಿಸಿಕೊಂಡಿದೆ" ಎಂದರು.

ಜನರನ್ನು ಆರ್ಥಿಕವಾಗಿ ಮೇಲೆತ್ತುವ ಶಕ್ತಿ ಹಣಕಾಸು ಸಂಸ್ಥೆಗಳಿವೆ. ನಿಯಮದಂತೆ ನಡೆದರೆ ಜನರಿಗೆ ಹಾಗೂ ಸಂಸ್ಥೆಗೂ ಲಾಭ ಇದೆ. ಕೇವಲ ಸಾಲ ನೀಡುವುದೊಂದೇ ಗುರಿಯಾಗಬಾರದು. ಹಣಕಾಸಿನ ನಿರ್ವಹಣೆಯ ಮೇಲಿನ ನಿಗಾವೂ ಮುಖ್ಯವಾಗುತ್ತದೆ ಎಂದರು.

ಪಠ್ಯಪುಸ್ತಕಗಳಲ್ಲಿ ಭಗವದ್ಗೀತೆಯನ್ನು ಅಳವಡಿಸಬೇಕು ಎನ್ನುವಂತಹ ವಿಷಯದ ಬಗ್ಗೆ ಬಹಳಷ್ಟು ಚರ್ಚೆ ನಡೆಯುತ್ತಿದೆ. ಭಗವದ್ಗೀತೆ ಶಿಕ್ಷಣದ ಭಾಗ ಆಗಬೇಕು. ಏಕೆಂದರೆ ಅದರಲ್ಲಿ ಯಾವ ಭೇದಭಾವವೂ ಇಲ್ಲ. ಸೃಷ್ಟಿಯ ಸತ್ಯ ಏನಿದೆಯೋ ಅದನ್ನು ಭಗವದ್ಗೀತೆಯಲ್ಲಿ ತಿಳಿಸಲಾಗಿದೆ. ಗೀತೆಯು ನಮ್ಮ ಜೀವನದ ದೃಷ್ಟಿಕೋನವನ್ನು ಸ್ಪಷ್ಟಗೊಳಿಸುತ್ತದೆ. ಹಣಗಳಿಸುವ ಶಿಕ್ಷಣ ವ್ಯವಸ್ಥೆಯಿಂದ ಜೀವನ ಸಾರ್ಥಕಗೊಳಿಸುವ ಶಿಕ್ಷಣ ವ್ಯವಸ್ಥೆಯ ಕಡೆಗೆ ಹೋಗಲು ಭಗವದ್ಗೀತೆಯಂತಹ ಶಿಕ್ಷಣ ಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಶ್ರೀ ಚರಣ್ ಸೌಹಾರ್ದ ಕೋಆಪರೇಟೀವ್ ಬ್ಯಾಂಕ್ ಲಿಮಿಟೆಡ್‌ನ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಬಿ.ವಿ.ದ್ವಾರಕಾನಾಥ್, ಉಪಾಧ್ಯಕ್ಷರಾದ ಶುಭಪ್ರದ ಇಟಗಿ ಉಪಸ್ಥಿತರಿದ್ದರು.

ಆಧಾರ:–ಉದಯವಾಣಿ, ದಿನಾಂಕ:22.03.2022

105. ಭಗವದ್ಗೀತೆ ಪಠ್ಯ ಪರಿಶೀಲನೆಗೆ ಸಮಿತಿ

ಗುಜರಾತ್ ಮಾದರಿಯಲ್ಲಿ ರಾಜ್ಯದಲ್ಲೂ 6 ರಿಂದ 12 ನೇ ತರಗತಿಯವರೆಗಿನ ಪಠ್ಯದಲ್ಲಿ ಭಗವದ್ಗೀತೆ ಸೇರ್ಪಡೆಗೊಳಿಸುವುದಕ್ಕೆ ತಜ್ಞರ ಸಮಿತಿ ರಚಿಸಿ, ವರದಿ ಆಧಾರದಲ್ಲಿ ಕ್ರಮ ಕೈಗೊಳ್ಳಲಾಗವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಶೂನ್ಯವೇಳೆಯಲ್ಲಿ ಬಿಜೆಪಿ ಸದಸ್ಯ ಎಂ.ಕೆ.ಪ್ರಾಣೇಶ್ ಪ್ರಸ್ತಾಪಕ್ಕೆ ಉತ್ತರಿಸಿ, ಶಾಲಾ ಪಠ್ಯದಲ್ಲಿ ಭಗವದ್ಗೀತೆ ಸೇರಿಸುವ ಚರ್ಚೆ ನಡೆದಿದೆ. ಸಮಾಜಕ್ಕೂ ಅದರ ಅವಶ್ಯಕತೆ ಇರುವುದರಿಂದ ತಜ್ಞರ ಸಮಿತಿಯನ್ನು ರಚನೆ ಮಾಡಲಾಗುವುದು ಎಂದರು.

ಕಳೆದ ವಾರವಷ್ಟೇ ಪರಿಷತ್ತಿನಲ್ಲಿಯೇ ಹಲವು ಸದಸ್ಯರು ಶಾಲಾ ಪಠ್ಯದಲ್ಲಿ ನೈತಿಕ ಶಿಕ್ಷಣ ಅಳವಡಿಕೆ ಅತ್ಯಗತ್ಯವೆಂದು ಪಕ್ಷಬೇಧ ಮರೆತು ಒತ್ತಾಯಿಸಿದ್ದರು. ಜೊತೆಗೆ ಪೋಷಕರೂ ಸಹ ಹಲವು ವರ್ಷಗಳಿಂದ ನೈತಿಕ ಶಿಕ್ಷಣದ ಅಗತ್ಯತೆಯನ್ನು ಪ್ರತಿಪಾದಿಸುತ್ತಿದ್ದಾರೆ. ಇದೀಗ ಗುಜರಾತ್ 2022–23ನೇ ಸಾಲಿನಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಭಗವದ್ಗೀತೆಯನ್ನು ಪಠ್ಯಕ್ರಮ ಭಾಗವನ್ನಾಗಿ ಮಾಡಲು ನಿರ್ಧರಿಸಿದೆ, ಎಂದು ವಿವರಿಸಿದರು.

ಮಕ್ಕಳಲ್ಲಿ ನೈತಿಕ ಪ್ರಜ್ಞೆ ಮೂಡಿಸಲು ಅರ್ಜುನನ ಮನಸಿನಲ್ಲಿದ್ದ ದ್ವಂದ್ವಗಳನ್ನು ನಿವಾರಿಸಲು ಕೃಷ್ಣನು ಮಾಡಿದ ಬೋಧನೆಯ ಸಾರವೇ ಭಗವದ್ಗೀತೆ. ಇಂದಿನ ಮಕ್ಕಳಲ್ಲಿ ಅಂತಹ ಜ್ಞಾನ ನೀಡುವುದು ತುಂಬಾ ಅವಶ್ಯಕತೆ ಇದೆ ಎಂಬುದು ಸರ್ಕಾರಕ್ಕೂ ಮನದಟ್ಟಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ಸದಸ್ಯ ಎಂ.ಕೆ.ಪ್ರಾಣೇಶ್ ಭಗವದ್ಗೀತೆಯಲ್ಲಿರುವ ಮೌಲ್ಯಗಳು ಮತ್ತು ತತ್ವಗಳನ್ನು ಶಾಲಾ ಪಠ್ಯಕ್ರಮದಲ್ಲಿ ಪರಿಚಯಿಸುವ ಉದ್ದೇಶದಿಂದ ಗುಜರಾತ್ ಸರ್ಕಾರ ನಿರ್ಣಯ ಕೈಗೊಂಡಿದೆ. ಇದು ಆಧುನಿಕ ಮತ್ತು ಪ್ರಾಚೀನ ಸಂಸ್ಕೃತಿ, ಸಂಪ್ರದಾಯಗಳನ್ನು

ಜ್ಞಾನ ವ್ಯವಸ್ಥೆಗಳ ಪರಿಚಯವನ್ನು ಶಿಫಾರಸ್ಸು ಮಾಡುವ ಕೇಂದ್ರದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿದೆ ಎಂದರು.

ಸೃಷ್ಟಿಯ ಸತ್ಯ ಅರಿವಿಗೆ ಭಗವದ್ಗೀತೆ ಪಠ್ಯ ಅಗತ್ಯ: ಹಣಗಳಿಸುವ ಉದ್ದೇಶವನ್ನು ಕಲಿಸುವ ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯ ಹೊರತಾಗಿ ನಮ್ಮ ಜೀವನದ ದೃಷ್ಟಿಕೋನವನ್ನು ಸ್ಪಷ್ಟಗೊಳಿಸುವ ಜೀವನಕ್ಕೆ ಸಾರ್ಥಕತೆಯನ್ನು ನೀಡುವ ಶಕ್ತಿ ಭಗವದ್ಗೀತೆಗಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು. ಬೆಂಗಳೂರಿನ ಜಯನಗರದಲ್ಲಿ ಶ್ರೀ ಚರಣ್ ಬ್ಯಾಂಕ್ ಶಾಖೆ ಉದ್ಘಾಟಿಸಿ, ಸೃಷ್ಟಿಯ ಸತ್ಯ ಏನಿದೆಯೋ ಅದು ಭಗವದ್ಗೀತೆಯ ಶಿಕ್ಷಣವನ್ನು ನಾವು ಕಲಿಸಿದರೆ ತಪ್ಪಾಗಲಾರದು ಎನ್ನುವುದು ನನ್ನ ನಂಬಿಕೆ ಹಾಗೂ ಅದನ್ನು ಕಲಿಸಬೇಕೆಂಬ ಆಗ್ರಹ ನನ್ನದಾಗಿದೆ. ಶಿಕ್ಷಣ ಮಂತ್ರಿಯಾಗಿದ್ದಾಗ ಭಗವದ್ಗೀತಾ ಅಭಿಯಾನ ನಡೆಯಿತು. ಸ್ವರ್ಣವಲ್ಲಿ ಸ್ವಾಮೀಜೀಗಳ ನೇತೃತ್ವದಲ್ಲಿ ರಾಜ್ಯದ 20 ಲಕ್ಷ ವಿದ್ಯಾರ್ಥಿಗಳು ಭಗವದ್ಗೀತೆ ಕಲಿಯುವ ಅವಕಾಶ ಪಡೆದರು ಎಂದು ತಿಳಿಸಿದರು.

ಆಧಾರ:–ವಿಜಯಕರ್ನಾಟಕ, ದಿನಾಂಕ:22.03.2022

106. ವಜಾಗೊಂಡವರು ಪಂಚಾಯಿತಿಗೆ ಅನರ್ಹ

ಕೇಂದ್ರ, ರಾಜ್ಯ ಸಹಕಾರ ಸಂಘ ಸಂಸ್ಥೆಯ ಸೇವೆಯಿಂದ ಕಡ್ಡಾಯ ನಿವೃತ್ತಿ ತೆಗೆದುಹಾಕುವುದು ಹಾಗೂ ವಜಾ ಶಿಕ್ಷೆಗೆ ಒಳಪಟ್ಟಿರುವ ವ್ಯಕ್ತಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಸದಸ್ಯನಾಗುವುದರಿಂದ ಅನರ್ಹಗೊಳಿಸುವ ಸಂಬಂಧ ಕಾಯ್ದೆ ತರಲು ಸರ್ಕಾರ ಮುಂದಾಗಿದೆ. ಈ ಕುರಿತು ವಿಧಾನಸಭೆಯಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಮಂಡಿಸಿದರು.

ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಜನಸಂಖ್ಯೆ ಮಿತಿ ನಿಗದಿ ಮಾಡುವ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರಾಗಲು ಅರ್ಹತೆಗಳನ್ನು ಬಿಗಿಗೊಳಿಸುವ ಅತ್ಯಂತ ಮಹತ್ವದ ತಿದ್ದುಪಡಿಯನ್ನು ಪಂಚಾಯಿತಿ ಕಾಯ್ದೆಗೆ ತರಲು ಉದ್ದೇಶಿಸಲಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಜನಸಂಖ್ಯೆಯನ್ನು ನಿಗದಿ ಮಾಡಲಾಗುತ್ತದೆ. ಅಲ್ಲದೇ ಜನಸಂಖ್ಯೆಯ ಅನುಪಾತದ ಉದ್ದೇಶಕ್ಕಾಗಿ ಮಲೆನಾಡು ಪ್ರದೇಶದಿಂದ ತರೀಕೆರೆ, ಕಡೂರು ಮತ್ತು ಅಜ್ಜಂಪುರ ತಾಲ್ಲೂಕುಗಳಿಗೆ ವಿನಾಯಿತಿ ನೀಡುವ ಪ್ರಸ್ತಾಪವೂ ಈ ವಿಧೇಯಕದಲ್ಲಿದೆ.

ಕೇಂದ್ರ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಒಳಗಾದವರು ಅಥವಾ ವಜಾಗೊಂಡಿರುವ ವ್ಯಕ್ತಿ, ಸಹಕಾರ ಸಂಘ ಮತ್ತು ಸಂಸ್ಥೆಗಳ ಸೇವೆಯಿಂದ ನಿವೃತ್ತರಾಗಿರುವವರು ಅಥವಾ ವಜಾಗೊಂಡವರು, ಸಹಕಾರ ಸಂಘ ಅಥವಾ ಸಂಸ್ಥೆಯ ಅಧ್ಯಕ್ಷ, ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲಾಗಿರುವ ವ್ಯಕ್ತಿಗಳು, ಪಂಚಾಯಿತಿ ವ್ಯವಸ್ಥೆಯ ಮೂರೂ ಹಂತದ ಸದಸ್ಯನಾಗಲು ಅನರ್ಹ. ಇವು ವಿಧೇಯಕದ ಪ್ರಮುಖ ತಿದ್ದುಪಡಿಗಳಾಗಿವೆ. ಅಲ್ಲದೆ, ಜಿಲ್ಲಾ ಯೋಜನಾ ಸಮಿತಿ ಅಧ್ಯಕ್ಷರಾಗಿ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡುವುದು, ಸಂಬಂಧಪಟ್ಟ ನಗರಸಭೆ, ಪಾಲಿಕೆ ಅಥವಾ ಆಯಾ ಜಿಲ್ಲಾ ಕೇಂದ್ರದ ಪೌರಾಡಳಿತದ ಮೇಯರ್/ಅಧ್ಯಕ್ಷರು ಜಿಲ್ಲಾ ಯೋಜನಾ ಸಮಿತಿಯ ಉಪಾಧ್ಯಕ್ಷರಾಗಿರಲಿದ್ದಾರೆ. ಕರ್ನಾಟಕ ವಿಕೇಂದ್ರೀಕೃತ ಯೋಜನಾ ಮತ್ತು ಅಭಿವೃದ್ಧಿ ಸಮಿತಿಯ ವಿಶೇಷ ಆಹ್ವಾನಿತರನ್ನಾಗಿ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರನ್ನು ನಿಯುಕ್ತಿಗೊಳಿಸುವುದಾಗಿ ತಿದ್ದುಪಡಿ ವಿಧೇಯಕದಲ್ಲಿ ವಿವರಿಸಲಾಗಿದೆ.

ಬಂದೀಖಾನೆ ವಿಧೇಯಕಕ್ಕೆ ಅನುಮೋದನೆ: ಬಂದಿಗಳೊಂದಿಗೆ ಸಂವಹನ, ಪೆರೋಲ್ ಉಲ್ಲಂಘನೆ, ನಿಷೇಧಿತ ವಸ್ತುಗಳನ್ನು ಬಂದೀಖಾನೆಯೊಳಗೆ ತರುವುದು ಅಥವಾ ಹೊರಗೆ ತೆಗೆದುಕೊಂಡು ಹೋಗುವ ಅಪಾಯ ನಿವಾರಿಸುವ ಉದ್ದೇಶದಿಂದ ಕರ್ನಾಟಕ ಬಂದೀಖಾನೆಗಳ ತಿದ್ದುಪಡಿ ವಿಧೇಯಕ

2022ಕ್ಕೆ ವಿಧಾನಸಭೆಯಲ್ಲಿ ಅನುಮೋದಿಸಲಾಯಿತು. ಗೃಹ ಸಚಿವ ಆರಗ ಜ್ಞಾನೇಂದ್ರ ಪರವಾಗಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ವಿಧೇಯಕ ಮಂಡಿಸಿದರು.

ಕೈಗಾರಿಕಾ ಪ್ರದೇಶಾಭಿವೃದ್ಧಿ ತಿದ್ದುಪಡಿ ಅಂಗೀಕಾರ: ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯೋಚಿತ ಪರಿಹಾರ ನೀಡುವ ಹಿನ್ನೆಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ 2022 ಅನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು. ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಈ ವಿಧೇಯಕ ಮಂಡಿಸಿದರು. ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ನ್ಯಾಯೋಚಿತ ಪರಿಹಾರ ನೀಡುವುದು ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮಕ್ಕೆ ಉಪಬಂಧ ಕಲ್ಪಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ, ಅಧಿನಿಯಮ 1966ಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ ಎಂದು ಸದನದ ಗಮನಕ್ಕೆ ತಂದರು. ಉಪಸಭಾಪತಿ ಆನಂದ ಮಾಮನಿ ವಿಧೇಯಕವನ್ನು ಧ್ವನಿಮತಕ್ಕೆ ಹಾಕಿದರು. ಯಾವುದೇ ಆಕ್ಷೇಪವಿಲ್ಲದೆ ವಿಧೇಯಕಕ್ಕೆ ಅನುಮೋದನೆ ದೊರೆಯಿತು.

ಆಧಾರ:–ವಿಜಯವಾಣಿ, ದಿನಾಂಕ:22.03.2022

107. ಸಿಡಿದೆದ್ದ ಸದನ

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಕೈಗೊಂಡ ನಿರ್ಣಯಕ್ಕೆ ರಾಜ್ಯ ವಿಧಾನಸಭೆಯಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಅಲ್ಲಿನ ಸರ್ಕಾರದ ನಡೆ ಸಂವಿಧಾನವಿರೋಧಿ ಹಾಗೂ ಒಕ್ಕೂಟ ವ್ಯವಸ್ಥೆಗೆ ಅಪಾಯಕಾರಿ ಎಂದು ಸದನ ಒಕ್ಕೊರಲ ಅಭಿಪ್ರಾಯ ವ್ಯಕ್ತಪಡಿಸಿದೆ.

ತಮಿಳುನಾಡಿನ ನಿರ್ಣಯ ಖಂಡಿಸಿ ರಾಜ್ಯ ವಿಧಾನಮಂಡಲದ ಉಭಯ ಸದನಗಳಲ್ಲೂ ನಿರ್ಣಯ ಕೈಗೊಳ್ಳಬೇಕು. ಅದನ್ನು ಕೇಂದ್ರ ಸರ್ಕಾರಕ್ಕೂ ಕಳುಹಿಸಿ ಮೇಕೆದಾಟು ಯೋಜನೆಗೆ ಅಗತ್ಯವಿರುವ ಅರಣ್ಯ ಇಲಾಖೆಯ ಅನುಮತಿ ಪಡೆಯಲು ಕ್ರಮಕೈಗೊಳ್ಳಬೇಕು ಎಂಬ ಆಗ್ರಹವೂ ಕೇಳಿ ಬಂತು. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಸ್ಪಂದಿಸಿ, ನಮ್ಮ ಪಾಲಿನ ಹಕ್ಕು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಮೇಕೆದಾಟು ಯೋಜನೆ ಮಾಡಿಯೇ ತೀರುತ್ತೇವೆ. ಆ ನಿಟ್ಟಿನಲ್ಲಿ ಬೇಕಾದ ಅನುಮತಿ ಪಡೆಯಲು ಕಾರಜೋಳ ಅವರು ಸದ್ಯದಲ್ಲೇ ದೆಹಲಿಗೆ ಹೋಗಿ ಚರ್ಚಿಸಲಿದ್ದಾರೆ. ನಂತರ ಅಗತ್ಯವಾದರೆ ಸರ್ವಪಕ್ಷ ನಿಯೋಗ ಕೊಂಡೊಯ್ಯಲಾಗುವುದು ಎಂದರು. ಸದನದಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳುವ ಬಗ್ಗೆ ತೀರ್ಮಾನಕ್ಕೆ ಬರಲಾಗುವುದು ಎಂದು ಘೋಷಿಸಿದರು. ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಎಚ್.ಕೆ.ಪಾಟೀಲ್ ಅವರು ವಿಷಯ ಪ್ರಸ್ತಾಪಿಸಿ, ನಮ್ಮ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ತಮಿಳುನಾಡು ಸರ್ಕಾರ ಕ್ಯಾತೆ ತೆಗೆಯುತ್ತಿರುವುದು ಸರಿಯಲ್ಲ ಎಂದರು.

ಕಾನೂನುಬಾಹಿರ: ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಇಂಥ ನಿರ್ಣಯ ಕೈಗೊಳ್ಳಲು ತಮಿಳುನಾಡಿಗೆ ಯಾವುದೇ ಕಾನೂನಾತ್ಮಕ ಹಕ್ಕಿಲ್ಲ. ನಾವು ಮೇಕೆದಾಟು ಯೋಜನೆ ಮಾಡುತ್ತಿರೋದು ಸಂವಿಧಾನ ಬದ್ಧವಾಗಿ ನಮ್ಮ ಪಾಲಿನ ಹೆಚ್ಚುವರಿ ನೀರನ್ನು ಬಳಕೆ ಮಾಡಿಕೊಳ್ಳಲು. ತಮಿಳುನಾಡಿನ ನಿರ್ಣಯ ಖಂಡಿಸಿ ನಾವೂ ಖಂಡನಾ ನಿರ್ಣಯ ಮಾಡಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕೋಣ ಎಂದು ಸಲಹೆ ನೀಡಿದರು.

ಇದೇ ವೇಳೆ, ತಮಿಳುನಾಡು ನಮ್ಮ ಯೋಜನೆಗಳ ಬಗ್ಗೆ ಕ್ಯಾತೆ ತೆಗೆಯುವುದು ಸಾಮಾನ್ಯ ಆಗಿದೆ. ಅದಕ್ಕೆ ತಲೆಕೆಡಿಸಿಕೊಳ್ಳದೆ ನಾವು ನಮ್ಮ ಕೆಲಸ ಮಾಡೋಣ ಎಂದು ಮಾಜಿ ಸಿಎಂ ಬಿಎಸ್‌ವೈ ಸಲಹೆ ನೀಡಿದರು.

ಕಿಮ್ಮತ್ತು ಇಲ್ಲ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರೂ, ತಮಿಳುನಾಡಿನ ನಿರ್ಣಯಕ್ಕೆ ಯಾವುದೇ ಕಿಮ್ಮತ್ತು ಇಲ್ಲ ರಾಜ್ಯ ಸರ್ಕಾರ ಮೊದಲು ಪ್ರಧಾನಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಮನವೊಲಿಸಬೇಕು ಎಂದರು. ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಎಜಿ ಹಾಗೂ ಕಾನೂನು ತಜ್ಞರ ಸಲಹೆ ಪಡೆದು ಕ್ರಮ ಕೈಗೊಳ್ಳೋಣ ಎಂದರು.

ಆಧಾರ: ಉದಯವಾಣಿ, ದಿನಾಂಕ: 23.03.2022

108. ಭಾವನಾತ್ಮಕ ವಿಚಾರಕ್ಕೆ ಯುವಜನರು ಬಲಿಪಶು

'ಬಲಪಂಥೀಯರು ಭಾವನಾತ್ಮಕ ವಿಚಾರಗಳನ್ನು ಜನರ ಮುಂದಿಟ್ಟು, ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ಅನೇಕ ಯುವಕರು ಸಮಾಜದಲ್ಲಿ ಬಲಿಪಶು ಆಗುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಭಾರತ ಯಾತ್ರಾ ಕೇಂದ್ರ, ಲೋಕನಾಯಕ ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಹಾಗೂ ಡಾ. ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಡಾ. ರಾಮಮನೋಹರ ಲೋಹಿಯಾ ಪ್ರಶಸ್ತಿ' ಸ್ವೀಕರಿಸಿದರು. ಈ ಪ್ರಶಸ್ತಿ ರೂ. 25 ಸಾವಿರ ನಗದು ಒಳಗೊಂಡಿದೆ.

'ಸಂವಿಧಾನದ ಬಗ್ಗೆ ಗೌರವ ಇಲ್ಲದವರ ಕೈಗೆ ದೇಶ ಸಿಲುಕಿಕೊಂಡಿದೆ. ದೇಶದ ಯುವಶಕ್ತಿಯನ್ನು ಬಿಜೆಪಿ ಹಾಳು ಮಾಡುತ್ತಿದೆ. ಅವರಿಗೆ ವೈಚಾರಿಕತೆ, ತತ್ವ–ಸಿದ್ಧಾಂತ ಇಲ್ಲವಾಗಿದೆ. ಭಾವನಾತ್ವಕ ರಾಜಕಾರಣದ ಮೂಲಕ ನೈಜ ಸಮಸ್ಯೆಗಳನ್ನು ಮೂಲೆಗುಂಪು ಮಾಡುತ್ತಿದ್ದಾರೆ. ಈ ಸಮಾಜ ದಾರಿ ತಪ್ಪುತ್ತಿರುವಂತೆ ಭಾಸವಾಗುತ್ತಿದೆ' ಎಂದು ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

'ಕಾನೂನು ಕಾಲೇಜಿನಲ್ಲಿ ಓದುತ್ತಿರುವಾಗ ಪ್ರಾಧ್ಯಾಪಕ ಪ್ರೊ.ನಂಜುಂಡಸ್ವಾಮಿ ನೀಡಿದ ಪ್ರೇರಣೆಯಿಂದ ಅನೇಕ ಹೋರಾಟಗಳಲ್ಲಿ ತೊಡಗಿ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪೊಲೀಸ್ ಠಾಣೆಗೂ ಹೋಗಬೇಕಾಯಿತು. ಈ ಮೊದಲು ಜನತಾ ಪರಿವಾರದಲ್ಲಿದ್ದ ನನಗೆ, ರಾಜಕೀಯದಲ್ಲಿ ನಿರೀಕ್ಷೆಗೂ ಮೀರಿ ಅವಕಾಶಗಳು ಸಿಕ್ಕಿತು. ಪ್ರಶಸ್ತಿ ಮೊತ್ತವನ್ನು ಗಾಂಧಿ ಭವನಕ್ಕೆ ನೀಡುತ್ತೇನೆ' ಎಂದು ಹೇಳಿದರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, 'ಹಳ್ಳಿಯಿಂದ ಬಂದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಜನರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಹೀಗಾಗಿ, ಅವರು ಇರುವಲ್ಲಿ ಈಗಲೂ ಜನ ಸೇರುತ್ತಾರೆ. ಕರ್ನಾಟಕ ಕಂಡಂತಹ ಅತ್ಯಂತ ಶ್ರೇಷ್ಠ ರಾಜಕಾರಣಿ ಅವರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್, 'ಮಹಿಳೆಯರಿಗೆ ಸಮಾನ ಅವಕಾಶ ಸಿಗಲು ಲೋಹಿಯಾ ಕಾರಣ, ಈ ಪ್ರಪಂಚದ ಮೂಲ ತತ್ವ, ಸಿದ್ಧಾಂತ ನೀಡಿದವರಲ್ಲಿ ಲೋಹಿಯಾ ಅವರೂ ಒಬ್ಬರಾಗಿದ್ದಾರೆ' ಎಂದು ಅವರು ಹೇಳಿದರು.

ಆಧಾರ: ಪ್ರಜಾವಾಣಿ, ದಿನಾಂಕ: 24.03.2022

109. ನಮ್ಮ ಸಂವಿಧಾನ ನಮ್ಮ ಹೆಮ್ಮೆ ಪುಸ್ತಕ ಬಿಡುಗಡೆ

ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವವಾಗಿರುವ ನಮ್ಮ ದೇಶದ ಅತಿ ದೊಡ್ಡ ಶಕ್ತಿ ನಮ್ಮ ಸಂವಿಧಾನವಾಗಿದೆ. ಸಂವಿಧಾನ ಕುರಿತು ಸದನದಲ್ಲಿ ವಿಶೇಷ ಚರ್ಚೆ ಹಮ್ಮಿಕೊಳ್ಳುವ ಮೂಲಕ ಕರ್ನಾಟಕ ದೇಶದಲ್ಲಿಯೇ ವಿಶೇಷ ಮನ್ನಣೆ ಪಡೆದಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ಸಂತಸ ವ್ಯಕ್ತಪಡಿಸಿದರು.

'ನಮ್ಮ ಸಂವಿಧಾನ–ನಮ್ಮ ಹೆಮ್ಮೆ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 125ನೇ ಜನ್ಮದಿನೋತ್ಸವ ಹಾಗೂ ದೇಶದ 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಈ ವೇಳೆ 03.03.2020 ರಿಂದ 16.03.2020 ರವರೆಗೆ 8 ದಿನಗಳ ಕಾಲ ವಿಧಾನಸಭೆಯಲ್ಲಿ ಸಂವಿಧಾನದ ಕುರಿತು ನಡೆದ ವಿಶೇಷ ಚರ್ಚೆಯ ಅಕ್ಷರಶಃ ನಡವಳಿಯನ್ನೊಳಗೊಂಡ ಈ ಪುಸ್ತಕ ಸಾರ್ವಜನಿಕರಿಗೆ ಹಾಗೂ ಯುವ ಪೀಳಿಗೆಗೆ ಉಪಯುಕ್ತವಾಗಲಿದೆ ಎಂದು ತಿಳಿಸಿದರು.

ಸದೃಢ ದೇಶ ಕಟ್ಟುವಲ್ಲಿ ಸಂವಿಧಾನದ ಆಶಯಗಳೇ ನಮ್ಮ ಆದರ್ಶಗಳು, ಸಂವಿಧಾನದ ತಿರುಳೇ ನಮ್ಮ ಮಂತ್ರ, ಸಂವಿಧಾನದ ವಿಧಿಗಳೇ ನಮ್ಮ ಮಾರ್ಗಸೂಚಿಗಳಾಗಿವೆ. ಇಂತಹ ಸಂವಿಧಾನ ಕುರಿತು ಇಡೀ ದೇಶದಲ್ಲಿಯೇ ಪ್ರಥಮ ಬಾರಿಗೆ ರಾಜ್ಯವೊಂದು ಸದನದಲ್ಲಿ ಚರ್ಚೆಯನ್ನು ಹಮ್ಮಿಕೊಳ್ಳುವ ಮೂಲಕ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರಲ್ಲಿ ಸಂವಿಧಾನ ಕುರಿತು ಜಾಗೃತಿ ಮೂಡಿಸಲು ಮುನ್ನುಡಿ ಬರೆದಿದೆ ಎಂದರು. ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ರಾಜ್ಯದ ವಿಧಾನಸಭೆಯ ಅತಿಥಿಗಳಾಗಿ ಭಾಗವಹಿಸಿ 'ನಮ್ಮ ಸಂವಿಧಾನ–ನಮ್ಮ ಹೆಮ್ಮೆ' ಕುರಿತು ಮಾತನಾಡಿದ್ದರು. ವಿಧಾನಸಭೆಯ ಚರ್ಚೆಗಳನ್ನು ಇನ್ನಷ್ಟು ಕ್ರಿಯಾಶೀಲವಾಗಿ ನಡೆಸಲು ಬದ್ಧರಾಗಿದ್ದೇವೆ, ಈ ಪುಸ್ತಕದ ಸದುಪಯೋಗವನ್ನು ನಾಡಿನ ಜನತೆ ಪಡೆದುಕೊಳ್ಳಬೇಕು ಎಂದು ಹೇಳಿದರು. ಕರ್ನಾಟಕ ವಿಧಾನಸಭೆಯ ಉಪ ಸಭಾಧ್ಯಕ್ಷ ಆನಂದ ಮಾಮನಿ, ಕಾರ್ಯದರ್ಶಿಗಳಾದ ವಿಶಾಲಾಕ್ಷಿ ಮತ್ತಿತರರಿದ್ದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 24.03.2022

ದಿನಾಂಕ: 23.03.2022ರಂದು ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ: 03.03.2020 ರಿಂದ 16.03.2020ರವರೆಗೆ ವಿಧಾನ ಸಭೆಯಲ್ಲಿ "ನಮ್ಮ ಸಂವಿಧಾನ–ನಮ್ಮ ಹೆಮ್ಮೆ" – ಸಂವಿಧಾನದ ಕುರಿತು ನಡೆದ ವಿಶೇಷ ಚರ್ಚೆಯ ನಡವಳಿಯ ಪುಸ್ತಕವನ್ನು ವಿಧಾನಸೌಧದ ಕೊಠಡಿ ಸಂಖ್ಯೆ: 106ರಲ್ಲಿ ಸನ್ಮಾನ್ಯ ಉಪ ಸಭಾಧ್ಯಕ್ಷರಾದ ಶ್ರೀ ಆನಂದ ಮಾಮನಿರವರ ಉಪಸ್ಥಿತಿಯಲ್ಲಿ ಬಿಡುಗಡೆಗೊಳಿಸುತ್ತಿರುವ ಸಂದರ್ಭ;

110. ರಸ್ತೆ ಪ್ರಕರಣದಲ್ಲಿ ಸಾವಾದಾಗ ಪರಿಹಾರಕ್ಕೆ ಸೂಕ್ತ ನೀತಿಗೆ ಸ್ಪೀಕರ್ ಸೂಚನೆ

ರಾಜ್ಯದಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡುವ ವಿಚಾರದಲ್ಲಿ ಸ್ಪಷ್ಟ ನೀತಿ ರೂಪಿಸುವಂತೆ ಸರಕಾರಕ್ಕೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಸಲಹೆ ನೀಡಿದರು.

ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ಗೆ ಶಿವಾನಂದ ಪಾಟೀಲ್, ಪಾವಗಡದ ರಸ್ತೆ ದುರಂತದಲ್ಲಿ ಮೃತರ ಕುಟುಂಬಕ್ಕೆ 5 ಲಕ್ಷ ಪರಿಹಾರ ಕೊಟ್ಟಿದ್ದಾರೆ. ಅದೇ ರೀತಿ ಹೊಸಪೇಟೆ ಚಿತ್ರದುರ್ಗ ಹೆದ್ದಾರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ನನ್ನ ಕ್ಷೇತ್ರದ ಐದು ಮಂದಿ ಕುಟುಂಬಕ್ಕೂ ಪರಿಹಾರ ನೀಡಬೇಕು," ಎಂದರೆ, ಜೆಡಿಎಸ್‌ನ ಕೆ.ಎಸ್.ಲಿಂಗೇಶ್, "ಬೇಲೂರು ಘಟನೆಯಲ್ಲೂ ಮೃತರಾದ ಐದು ಮಂದಿಯ ಕುಟುಂಬಕ್ಕೂ ನೀಡಬೇಕು," ಎಂದು ಒತ್ತಾಯಿಸಿದರು. ಸಾರಿಗೆ ಸಚಿವ ಬಿ. ಶ್ರೀರಾಮುಲು, "ಪಾವಗಡ ಅಪಘಾತ ಪ್ರಕರಣದಲ್ಲಿ ವಿಮೆ ಮೊತ್ತದಲ್ಲಿ ಪರಿಹಾರ ವಿತರಿಸಲಾಗಿದೆ," ಎಂದು ಹೇಳಿದರು. ಇದಕ್ಕೆ ಶಿವಾನಂದ ಪಾಟೀಲ್ ಅತೃಪ್ತಿ ಹೊರಹಾಕಿದರು. ಸಚಿವ ಜೆ.ಸಿ. ಮಾಧುಸ್ವಾಮಿ, ಹೆಚ್.ಡಿ.ಕುಮಾರಸ್ವಾಮಿ, "ಎಲ್ಲ ಅಪಘಾತ ಪ್ರಕರಣದಲ್ಲೂ ಸರಕಾರ ಪರಿಹಾರ ನೀಡುವಂತಾದರೆ ಕಷ್ಟವಾಗುತ್ತದೆ," ಎಂದರು. ಈ ನಡುವೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, "ರಸ್ತೆ ಅಪಘಾತ, ಬೆಂಕಿ ಅವಘಡ ಸೇರಿದಂತೆ ಪ್ರಕರಣದಲ್ಲಿ ಪರಿಹಾರ ವಿತರಣೆ ಸಂಬಂಧ ನೀತಿ ರೂಪಿಸುವುದು ಸೂಕ್ತ," ಎಂದು ಸಲಹೆ ನೀಡಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 24.03.2022

111. ಶೇ. 40 ಲಂಚ: ನಿಲುವಳಿ ಸೂಚನೆಗೆ ಸ್ಪೀಕರ್ ನಕಾರ

ರಾಜ್ಯ ಸರ್ಕಾರದಲ್ಲಿ ಕಾಮಗಾರಿಗಳಿಗೆ ಅನುಮತಿ ನೀಡಲು ಶೇ.40 ರಷ್ಟು ಲಂಚ ಪಡೆಯಲಾಗುತ್ತಿದೆ ಎಂಬ ವಿಷಯದ ಮೇಲೆ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೊಡುವಂತೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮಾಡಿದ ಮನವಿಯನ್ನು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ತಿರಸ್ಕರಿಸಿದರು.

ಭೋಜನ ವಿರಾಮದ ನಂತರ ಕಲಾಪ ಆರಂಭವಾದ ಕೂಡಲೇ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕಲ್ಪಿಸುವಂತೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮನವಿ ಮಾಡಿದರು. ಆದರೆ, ಈ ವಿಷಯದ ನಿಯಮ 69 ರ ವ್ಯಾಪ್ತಿಗೆ ಬಾರದಿರುವುದರಿಂದ ನಿಲುವಳಿ ಸೂಚನೆ ಮಂಡನೆಗೆ ಅವಕಾಶವಿಲ್ಲ ಎಂದು ಅವರ ಮನವಿ ತಳ್ಳಿಹಾಕಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿದ್ದರಾಮಯ್ಯ, ಈ ವಿಷಯವನ್ನು ಬೆಳಗಾವಿ, ಅಧಿವೇಶನದಲ್ಲಿಯೇ ನಿಲುವಳಿ ಸೂಚನೆಗೆ ಮನವಿ ಮಾಡಿದ್ದೆ. ಆದರೆ, ಆ ಸಂದರ್ಭದಲ್ಲಿ ಬರಲಿಲ್ಲ, ಹೀಗಾಗಿ ಈಗ ಪ್ರಾಥಮಿಕ ಪ್ರಸ್ತಾವನೆ ಸಲ್ಲಿಸಲು ಅವಕಾಶ ನೀಡುವಂತೆ ಮನವಿ ಮಾಡಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ಈ ವಿಷಯ ಇತ್ತೀಚೆಗೆ ನಡೆದ ಪ್ರಕರಣವಲ್ಲ ಇದಕ್ಕೆ ಯಾವುದೇ ಪೂರಕ ದಾಖಲೆಯಿಲ್ಲ. ಈ ರೀತಿಯ ವಿಷಯವನ್ನು ಬೇರೆ ಬೇರೆ ರೂಪದಲ್ಲಿ ಚರ್ಚಿಸಬಹುದು. ಅದನ್ನು ನಿಲುವಳಿ ಸೂಚನೆಯಲ್ಲಿಯೇ ಚರ್ಚಿಸಬೇಕೆಂಬ ಹಠ ಏಕೆ, ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಸಿದ್ದರಾಮಯ್ಯ ಮಾತನಾಡಿ, ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ಆಗಿದೆ ಎಂದು ಇತಿಹಾಸದಲ್ಲಿ ಯಾರೂ ಪ್ರಧಾನಿಗೆ ಪತ್ರ ಬರೆದಿಲ್ಲ. ಸಾರ್ವಜನಿಕರ ದೊಡ್ಡ ಮಟ್ಟದ ಹಣ ಶೇ. 40 ರಷ್ಟು ಲಂಚಕ್ಕೆ ಹೋದರೆ, ಉಳಿದ ಹಣದಲ್ಲಿ ಜಿಎಸ್‌ಟಿ ತೆಗೆದರೆ ಅಭಿವೃದ್ಧಿ ಮಾಡುವುದು ಹೇಗೆ? ರಾಜ್ಯದ ಜನರ ಪರವಾಗಿ ನಾನು ಈ ವಿಷಯ ಪ್ರಸ್ತಾಪ ಮಾಡಲು ಅವಕಾಶ ಕೊಡಿ ಎಂದು ಮನವಿ ಮಾಡಿದರು.

ಸ್ಪೀಕರ್ ಕಾಗೇರಿ, ಇದು ನಿಲುವಳಿ ಸೂಚನೆ ಮೇಲೆ ಬರುವುದಿಲ್ಲ, ನಾನು ಸಭಾಧ್ಯಕ್ಷನಾಗಿ ಎಲ್ಲ ಸದಸ್ಯರು ಹಕ್ಕು ರಕ್ಷಿಸಬೇಕು. ಎಲ್ಲರಿಗೂ ಮಾತನಾಡಲು ಅವಕಾಶ ಕಲ್ಪಿಸುತ್ತೇನೆ. ಬೇಡಿಕೆಗಳ ಮೇಲೆಯೇ ಚರ್ಚಿಸುವಾಗಲೇ ಚರ್ಚಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಸಿಎಂ ಬಸವರಾಜ ಬೊಮ್ಮಾಯಿ, ಶೇ. 40 ಭ್ರಷ್ಟಾಚಾರ ವಿಚಾರದಲ್ಲಿ ಚರ್ಚೆ ಮಾಡಲು ನಾವು ಸಿದ್ಧರಿದ್ದೇವೆ. ಯಾರ ಕಾಲದಲ್ಲಿ ಏನೇನು ಆಗಿದೆ ಎನ್ನುವುದನ್ನು ನಾವೂ ಮುಕ್ತವಾಗಿ ಚರ್ಚಿಸಲು ಸಿದ್ಧರಿದ್ದೇವೆ. ಈ ನಿಯಮದಲ್ಲಿ ಚರ್ಚಿಸಲು ಅವಕಾಶವಿಲ್ಲ. ಬೇರೆ ನಿಯಮದಲ್ಲಿಯೇ ಚರ್ಚಿಸಿದರೆ ನಾವೂ ಮಾತನಾಡಲು ಸಿದ್ಧರಾಗಿದ್ದೇವೆ. ಯಾವುದೇ ವಿಷಯವನ್ನು ಚರ್ಚಿಸುವುದು ಮುಖ್ಯ, ಯಾವ ನಿಯಮದಲ್ಲಿ ಚರ್ಚಿಸಬೇಕು ಅನ್ನೋದಕ್ಕೆ ಯಾಕೆ ಇಷ್ಟೊಂದು ಹಠ ಎಂದರು. ಅದಕ್ಕೆ ಸಿದ್ದರಾಮಯ್ಯ ಬೇರೆ ಯಾವ ರೂಪದಲ್ಲಿ ಚರ್ಚಿಸಬೇಕು. ನನ್ನ ವಾದ ಕೇಳದೇ ತೀರ್ಮಾನ ಮಾಡುವುದೇಕೆ ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ಮಾಜಿ ಸಿಎಂ ಯಡಿಯೂರಪ್ಪ, ಸಿದ್ದರಾಮಯ್ಯ ಅವರು ಹಿರಿಯ ಸದಸ್ಯರಾಗಿ ಸಿಎಂ ಆಗಿ, ಪ್ರತಿಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಒಮ್ಮೆ ಸ್ಪೀಕರ್ ನಿಲುವಳಿ ಸೂಚನೆಯನ್ನು ನಿರಾಕರಿಸಿದ ಮೇಲೆ ಮತ್ತೆ ಅದೇ ನಿಯಮದಡಿ ಚರ್ಚೆಗೆ ಅವಕಾಶ ನೀಡುವಂತೆ

ಕೇಳುವುದು ಅಕ್ಷಮ್ಯ ಅಪರಾಧ ಇದು ನಿಮಗೆ ಶೋಭೆ ತರುವುದಿಲ್ಲ. ಬೇರೆ ರೂಪದಲ್ಲಿ ಎಲ್ಲವನ್ನು ಮುಕ್ತವಾಗಿ ಚರ್ಚಿಸಿ ಎಂದರು.

ಮತ್ತೆ ಅವಕಾಶ ನೀಡುವಂತೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರೂ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ನಿಲುವಳಿ ಸೂಚನೆ ಮಂಡನೆಗೆ ಅವಕಾಶವಿಲ್ಲ ಎಂದು ಅವರ ಮನವಿಯನ್ನು ನಿರಾಕರಿಸಿದರು.

ಆಧಾರ: ಉದಯವಾಣಿ, ದಿನಾಂಕ: 24.03.2022

112. ಶಿಷ್ಟಾಚಾರ ಸಾಲಿಗೆ ಇನ್ನಷ್ಟು ಗಣ್ಯರು

ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನ ಮಂತ್ರಿ, ರಾಜ್ಯಪಾಲರು, ಕೇಂದ್ರ ಸಚಿವರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಗಣ್ಯ ವ್ಯಕ್ತಿಗಳು ಪ್ರವಾಸ ಕೈಗೊಂಡಾಗ ಅಧಿಕಾರಿಗಳು ಪಾಲಿಸಬೇಕಾದ ಶಿಷ್ಟಾಚಾರ ಪಟ್ಟಿಗೆ ರಾಜ್ಯ ಸರ್ಕಾರ ಈಗ ವಿಧಾನ ಸಭಾಧ್ಯಕ್ಷರು, ವಿಧಾನ ಪರಿಷತ್ ಸಭಾಪತಿ ಹಾಗೂ ವಿಧಾನ ಮಂಡಲದ ಸಮಿತಿಯವರನ್ನೂ ಸೇರಿಸಿದೆ.

ಈ ಮೊದಲು ಗಣ್ಯರ ಭೇಟಿ ಸಂದರ್ಭ ಪಾಲಿಸಬೇಕಾದ ಶಿಷ್ಟಾಚಾರದ ಪಟ್ಟಿಯಲ್ಲಿ ವಿಧಾನಸಭಾಧ್ಯಕ್ಷರು, ವಿಧಾನ ಪರಿಷತ್ ಸಭಾಪತಿ, ವಿಧಾನ ಮಂಡಲದ ಸಮಿತಿಯವರು ಅಧಿಕೃತವಾಗಿ ಇರಲಿಲ್ಲ. ಇವರು ರಾಜ್ಯದ ವಿವಿದೆಡೆ ಭೇಟಿ ನೀಡಿದಾಗ ಜವಾಬ್ದಾರಿ ಸ್ಥಾನದಲ್ಲಿರುವ ಅಧಿಕಾರಿಗಳು ಸ್ಥಳದಲ್ಲಿ ಇರದೆ, ಅವರಿಗೆ ಇತರೆ ವ್ಯವಸ್ಥೆ ಆಗದೆ ಸಮರ್ಪಕ ಮಾಹಿತಿಯೂ ಸಿಗದೆ ಆಡಳಿತ ವರ್ಗವನ್ನು ದೂಷಿಸುವಂತಾಗಿತ್ತು. ಹೀಗಾಗಿ ರಾಜ್ಯ ಸರ್ಕಾರ ಇವರನ್ನೂ ಸೇರಿಸಿ ಮಾರ್ಚ್ 21ರಂದು ಪರಿಷ್ಕೃತ ಶಿಷ್ಟಾಚಾರ ಸುತ್ತೋಲೆ ಹೊರಡಿಸಿದೆ.

ಪರಿಷ್ಕೃತ ಶಿಷ್ಟಾಚಾರದಲ್ಲೇನಿದೆ: ಪರಿಷ್ಕೃತ ಶಿಷ್ಟಾಚಾರದ ಪ್ರಕಾರ, ಅಧಿಕಾರಿಗಳು ವಿಧಾನಸಭಾಧ್ಯಕ್ಷರು, ವಿಧಾನ ಪರಿಷತ್ ಸಭಾಪತಿ ಹಾಗೂ ವಿಧಾನಮಂಡಲದ ಸಮಿತಿಯವರು ಪ್ರವಾಸ ಕೈಗೊಂಡಾಗ ಜಿಲ್ಲಾಧಿಕಾರಿಯವರಿಂದ ನಿಯೋಜಿಸಲ್ಪಟ್ಟ ಜಿಲ್ಲಾಮಟ್ಟದ ಅಧಿಕಾರಿಗಳು, ಇಲ್ಲವೇ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಅವರನ್ನು ಸ್ವಾಗತಿಸಿ, ಬೀಳ್ಕೊಡಬೇಕು ಹಾಗೂ ಅವರಿಗೆ ವಸತಿ, ಊಟೋಪಚಾರ ವ್ಯವಸ್ಥೆ ಮಾಡಬೇಕು.

ಅಲ್ಲದೇ ಅವರು ಬಂದಾಗ ಜಿಲ್ಲಾಧಿಕಾರಿ, ಜಿಪಂ ಸಿಇಓ ಹಾಗೂ ಎಸ್‌ಪಿ ಕೇಂದ್ರ ಸ್ಥಾನದಲ್ಲಿದ್ದಾಗ ಅವರನ್ನು ಭೇಟಿಯಾಗಬೇಕು. ಜಿಲ್ಲಾ ಕೇಂದ್ರ ಸ್ಥಾನ ಹೊರತುಪಡಿಸಿ ಜಿಲ್ಲೆಯ ಬೇರೆ ಸ್ಥಳಗಳಿಗೆ ಭೇಟಿ ನೀಡಿದಾಗ ಜಿಲ್ಲಾಧಿಕಾರಿ, ಜಿಪಂ ಸಿಇಓ ಹಾಗೂ ಎಸ್‌ಪಿ ವಿಶೇಷ ಪ್ರವಾಸ ಕೈಗೊಂಡು ಗಣ್ಯರನ್ನು ಭೇಟಿ ಮಾಡುವ ಅವಶ್ಯಕತೆ ಇಲ್ಲ. ಇನ್ನು ಆಯಾ ಜಿಲ್ಲೆಯ ಹಿರಿಯ ಅಧಿಕಾರಿಗಳು ಗಣ್ಯರು ಬರುವ ಮೊದಲು ನಿಗದಿಯಾಗಿದ್ದ ಕಾರ್ಯಕ್ರಮ ಮೊಟಕುಗೊಳಿಸಿ ಅವರನ್ನು ಭೇಟಿಯಾಗುವ ಅವಶ್ಯಕತೆಯೂ ಇಲ್ಲ. ಆದರೆ ಪ್ರವಾಸದ ಬಗ್ಗೆ ಸಾಕಷ್ಟು ಮುಂಚಿತವಾಗಿ ತಿಳಿಸಿದಾಗ ಹಾಜರಿರಬೇಕು. ಗಣ್ಯರು ಯಾವುದೇ ಇಲಾಖೆ, ವಿಷಯದ ಬಗ್ಗೆ ಮಾಹಿತಿ ಕೋರಿದಾಗ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಬೇಕು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಗಣ್ಯರಿಗೆ ನೀಡುವ ರಕ್ಷಣೆ ನಿಯಮಾನುಸಾರ ಕೈಗೊಳ್ಳಬೇಕು ಎಂದು ಶಿಷ್ಟಾಚಾರದಲ್ಲಿ ಸೂಚಿಸಲಾಗಿದೆ.

ಅಧಿಕಾರಿಗಳಿಂದಲೇ ಶಿಷ್ಟಾಚಾರ ಉಲ್ಲಂಘನೆ?

ಶಿಷ್ಟಾಚಾರ ಪ್ರಕಾರ ಗಣ್ಯರು ಬಂದಾಗ ಇಲಾಖಾ ಮುಖ್ಯಸ್ಥರು ಇಲ್ಲವೇ ಜಿಲ್ಲಾಮಟ್ಟದ ಇಲಾಖಾಧಿಕಾರಿಗಳು ಅನಗತ್ಯವಾಗಿ ತಮ್ಮ ಅಧೀನ ಅಧಿಕಾರಿ, ಸಿಬ್ಬಂದಿಯನ್ನು ಕರೆದುಕೊಂಡು

ಹೋಗುವಂತಿಲ್ಲ. ವಾಹನಗಳ ಮಿತ ಬಳಕೆ ದೃಷ್ಟಿಯಿಂದ ವಾಹನ ಸಾಮರ್ಥ್ಯಕ್ಕನುಗುಣವಾಗಿ ಐದಾರು ಇಲಾಖೆ ಅಧಿಕಾರಿಗಳು ಒಂದೇ ವಾಹನದಲ್ಲಿ ಪ್ರವಾಸ ಮಾಡಬೇಕು. ಆದರೆ ಗಣ್ಯರು ಬಂದಾಗ ಇಲಾಖಾಧಿಕಾರಿಗಳು ತಮ್ಮ ಅಧೀನ ಅಧಿಕಾರಿ, ಸಿಬ್ಬಂದಿಯನ್ನು ಕರೆದುಕೊಂಡು ಹೋಗುವುದು, ಪ್ರತಿಯೊಬ್ಬ ಅಧಿಕಾರಿ ತಮ್ಮದೇ ಪ್ರತ್ಯೇಕ ವಾಹನದಲ್ಲಿ ಓಡಾಡುವುದು ನಡೆಯುತ್ತಲೇ ಇದೆ. ಇದು ಅಧಿಕಾರಿಗಳಿಂದ ಆಗುತ್ತಿರುವ ಶಿಷ್ಟಾಚಾರ ಉಲ್ಲಂಘನೆಗೆ ನಿದರ್ಶನವಾಗಿದೆ.

ಆಧಾರ: ಉದಯವಾಣಿ, ದಿನಾಂಕ: 24.03.2022

113. ಇನ್ನಷ್ಟು ಕಡೆ ಮುಸ್ಲಿಂರ ಜಾತ್ರೆ ವ್ಯಾಪಾರ ನಿಷೇಧ

ದೇವಸ್ಥಾನದ ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ವ್ಯಾಪಾರ ವಹಿವಾಟಿಗೆ ಅವಕಾಶ ನಿರಾಕರಿಸುತ್ತಿರುವ ಮತ್ತಷ್ಟು ಪ್ರಸಂಗಗಳು ವರದಿಯಾಗಿವೆ. ಕರಾವಳಿ, ಮಲೆನಾಡು ಜಿಲ್ಲೆಗಳಿಗೆ ಕಾಣಿಸಿಕೊಂಡಿದ್ದ ಈ ಬೆಳವಣಿಗೆ ರಾಜಧಾನಿ ಬೆಂಗಳೂರು ಬಳಿಕ ಇದೀಗ ಬಯಲುಸೀಮೆ ಜಿಲ್ಲೆಗಳಾದ ಹಾಸನ, ತುಮಕೂರುಗಳಲ್ಲೂ ಕಂಡುಬಂದಿದೆ. ಹಾಸನದ ಪ್ರಸಿದ್ಧ ಬೇಲೂರು ಚೆನ್ನಕೇಶವ ದೇವಾಲಯ, ತುಮಕೂರು ಜಿಲ್ಲೆಯ ಯಡಿಯೂರು ಸಿದ್ಧಲಿಂಗೇಶ್ವರ ದೇವಾಲಯ, ಶಿವಮೊಗ್ಗ ಜಿಲ್ಲೆಯ ಸಾಗರದ ಮಹಾಗಣಪತಿ ದೇವಸ್ಥಾನದ ಜಾತ್ರೆಗಳಲ್ಲಿ ವ್ಯಾಪಾರ ಮಳಿಗೆಗಳನ್ನು ಹಿಂದೂ ಸಮಾಜದ ವ್ಯಾಪಾರಿಗಳಿಗೆ ಮಾತ್ರ ನೀಡುವಂತೆ ಒತ್ತಾಯಿಸಲಾಗಿದ್ದರೆ, ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಬಳಿಯ ಆದಿ ಸುಬ್ರಹ್ಮಣ್ಯ ದೇವಸ್ಥಾನದ ಜಾತ್ರೆಯಲ್ಲಿ ಹಿಂದೂಯೇತರರಿಗೆ ವ್ಯಾಪಾರ ವಹಿವಾಟು ನಡೆಸಲು ಅವಕಾಶ ನೀಡುವುದಿಲ್ಲ ಎಂಬ ಒಕ್ಕಣೆಯಿರುವ ಬ್ಯಾನರ್ ಅಳವಡಿಸಲಾಗಿದೆ.

ಹಿಜಾಬ್ ತೀರ್ಪಿಗೆ ವಿರುದ್ಧವಾಗಿ ಕೆಲ ಮುಸ್ಲಿಂ ಸಂಘಟನೆಗಳು ಬಂದ್ ಮಾಡಿದ ಬಳಿಕ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿಷೇಧ ಹೇರಲಾಗಿತ್ತು. ಪುತ್ತೂರು ಮಹಾಲಿಂಗೇಶ್ವರ, ಮಂಗಳೂರಿನ ಮಂಗಳಾದೇವಿ, ಮೂಲ್ಕಿಯ ಬಪ್ಪನಾಡು, ಉಡುಪಿ ಜಿಲ್ಲೆಯ ಕಾಪು ಮಾರಿ ಗುಡಿ, ಶಿವಮೊಗ್ಗದ ಕೋಟೆ ಮಾರಿಕಾಂಬಾ ದೇವಸ್ಥಾನದ ಜಾತ್ರೆಗಳಲ್ಲಿ ಹಿಂದೂಯೇತರರಿಗೆ ವ್ಯಾಪಾರ ವಹಿವಾಟು ನಡೆಸಲು ಹಿಂದೂಪರ ಸಂಘಟನೆಗಳು ಬಹಿಷ್ಕಾರ ಹೇರಿದ್ದವು. ಜೊತೆಗೆ ಈ ಬಗ್ಗೆ ಬಹಿರಂಗ ಬ್ಯಾನರ್‌ಗಳನ್ನೂ ಅಳವಡಿಸಲಾಗಿತ್ತು. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಸಮೀಪದ ಅಡ್ಡಗದ್ದೆ, ಕಿಗ್ಗಾ ಜಾತ್ರೆಗಳಲ್ಲೂ ಅವಕಾಶ ನಿರಾಕರಿಸಿ ಮನವಿ ಸಲ್ಲಿಕೆಯಾಗಿದ್ದರೆ, ಬೆಂಗಳೂರಿನ ಉಪ್ಪಾರಪೇಟೆಯಲ್ಲಿ ಪ್ರತಿಭಟನೆಯೂ ನಡೆದಿತ್ತು. ದೇವಸ್ಥಾನಗಳ ಆಸುಪಾಸಿನಲ್ಲಿ ಹಿಂದೂಯೇತರರಿಗೆ ವ್ಯಾಪಾರ ನಡೆಸಲು ಮುಜರಾಯಿ ಇಲಾಖೆ ಕಾನೂನಿನಲ್ಲೇ ಅವಕಾಶವಿಲ್ಲ ಎಂಬುದು ಹಿಂದೂಪರ ಸಂಘಟನೆಗಳ ಮುಖಂಡರು ಇದಕ್ಕೆ ನೀಡುತ್ತಿರುವ ಕಾರಣವಾಗಿದೆ.

ಇದು ವಿವಾದವಾಗುತ್ತಿದ್ದಂತೆ ಮುಸ್ಲಿಮೇತರಿಗೆ ವ್ಯಾಪಾರ ವಹಿವಾಟು ನಡೆಸಲು ಯಾವುದೇ ರೀತಿಯ ನಿರ್ಬಂಧ ಇಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಲಾಗಿರುವ ಬ್ಯಾನರ್‌ಗಳನ್ನು ದೇವಸ್ಥಾನದ ವತಿಯಿಂದ ಹಾಕಲಾಗಿಲ್ಲ ಎಂದು ಮಂಗಳಾದೇವಿ ಮತ್ತು ಬಪ್ಪನಾಡು ದೇವಸ್ಥಾನಗಳ ಆಡಳಿತ ಮಂಡಳಿಗಳು ಸ್ಪಷ್ಟಪಡಿಸಿದ್ದರು. ಆದರೂ ಈ ಎರಡೂ ದೇವಸ್ಥಾನಗಳ ಜಾತ್ರೆಗಳಿಗೆ ಮುಸ್ಲಿಂ ವ್ಯಾಪಾರಿಗಳು ಆಗಮಿಸಿಲ್ಲ.

ಮತ್ತೆ 4 ಕಡೆ ವಿರೋಧ: ಗುರುವಾರ ಮತ್ತೆ ಮೂರು ಕಡೆಗಳಲ್ಲಿ ಹಿಂದೂಯೇತರಿಗೆ ಅವಕಾಶ ಕಲ್ಪಿಸಬಾರದೆಂದು ಹಿಂದೂಪರ ಸಂಘಟನೆಗಳು ಮನವಿ ಸಲ್ಲಿಸಿವೆ. ಏಪ್ರಿಲ್ 13 ಮತ್ತು 14ರಂದು ನಡೆಯಲಿರುವ ವಿಶ್ವಪ್ರಸಿದ್ಧ ಬೇಲೂರು ಚನ್ನಕೇಶವ ದೇವಸ್ಥಾನದ ರಥೋತ್ಸವದಲ್ಲಿ ಹಿಂದೂಯೇತರರು ವ್ಯಾಪಾರ ನಡೆಸುವುದನ್ನು ನಿರ್ಬಂಧಿಸುವಂತೆ ವಿಶ್ವ ಹಿಂದೂ ಪರಿಷತ್‌ನ ಪದಾಧಿಕಾರಿಗಳು ತಹಸೀಲ್ದಾರ್‌ಗೆ

ಮನವಿ ಸಲ್ಲಿದ್ದಾರೆ. ಹಿಜಾಬ್ ತೀರ್ಪಿನ ಹೈಕೋರ್ಟ್ ಆದೇಶವನ್ನು ಧಿಕ್ಕರಿಸಿ ಮುಸ್ಲಿಮರು ಅಂಗಡಿಗಳನ್ನು ಬಂದ್ ಮಾಡಿದ್ದರು. ಆದ್ದರಿಂದ ಹಿಂದೂ ಧಾರ್ಮಿಕ ಸಂಸ್ಥೆಗಳಲ್ಲಿ ಯಾವುದೇ ಜಾತ್ರೆಗಳಲ್ಲಿ ವ್ಯಾಪಾರ ವಹಿವಾಟು ನಡೆಸದಂತೆ ನಿರ್ಬಂಧಿಸಬೇಕು ಎಂದು ಮನವಿ ಮಾಡಿದ್ದಾರೆ.

ಅದೇ ರೀತಿ ಏಪ್ರಿಲ್ 1ರಿಂದ ಪ್ರಾರಂಭವಾಗುವ ಕುಣಿಗಲ್‌ನ ಯಡಿಯೂರು ಸಿದ್ದಲಿಂಗೇಶ್ವರ ಜಾತ್ರೆಯಲ್ಲೂ ಹಿಂದೂಗಳಿಗೆ ಮಾತ್ರ ಅವಕಾಶ ನೀಡಬೇಕು. ಒಂದು ವೇಳೆ ಅನ್ಯ ಕೋಮಿನ ವ್ಯಾಪಾರಿಗಳು, ಅಂಗಡಿಯಿಟ್ಟರೆ ತೆರವುಗೊಳಿಸಬೇಕು ಎಂದು ಬಜರಂಗದಳದ ಪದಾಧಿಕಾರಿಗಳು ವ್ಯವಸ್ಥಾಪಕರಿಗೆ ಮನವಿ ಮಾಡಿದ್ದಾರೆ.

ಏಪ್ರಿಲ್ 5ರಂದು ನಡೆಯಲಿರುವ ಪಟ್ಟಣದ ಇತಿಹಾಸ ಪ್ರಸಿದ್ಧ ಮಹಾಗಣಪತಿ ಜಾತ್ರೆಯಲ್ಲಿ ವ್ಯಾಪಾರ ಮಳಿಗೆಗಳನ್ನು ಹಿಂದೂ ಸಮಾಜದ ವ್ಯಾಪಾರಿಗಳಿಗೆ ಮಾತ್ರ ನೀಡುವಂತೆ ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ ವತಿಯಿಂದ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಇನ್ನು ಮಾರ್ಚ್ 27ರಂದು ನಡೆಯಲಿರುವ ಮೂಡಿಗೆರೆ ಬಳಿಯ ಗೋಣಿಬೀಡು ಗ್ರಾಮದ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಜಾತ್ರೆಯಲ್ಲಿ 'ದೇಶದ ಕಾನೂನನ್ನು ಗೌರವಿಸದ, ನಾವು ಪೂಜಿಸುವ ಗೋವುಗಳನ್ನು ಅಮಾನುಷವಾಗಿ ಕಡಿದು ಕೊಲ್ಲುವ ಈ ದೇಶದ ಅಖಂಡತೆಗೆ ಸವಾಲೊಡ್ಡುವ ಮತಾಂಧರ ಜೊತೆ ವ್ಯಾಪಾರ ವಹಿವಾಟು ನಡೆಸುವುದಿಲ್ಲ. ವ್ಯಾಪಾರಕ್ಕೆ ಅವಕಾಶ ನೀಡುವುದಿಲ್ಲ' ಎಂದು ಬರೆದಿರುವ ಬ್ಯಾನರ್ ಅನ್ನು ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಅಳವಡಿಸಿದ್ದಾರೆ.

ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ: ಸಚಿವ ಮಾಧುಸ್ವಾಮಿ

ಹಿಂದು ದೇವಸ್ಥಾನಕ್ಕೆ ಸೇರಿದ ಸ್ವತ್ತು, ಕಟ್ಟಡ, ಜಾಗವನ್ನು ಹಿಂದುಗಳಲ್ಲದವರಿಗೆ ಗುತ್ತಿಗೆ ನೀಡಬಾರದು ಎಂಬ ನಿಯಮ 2002ರಲ್ಲಿ ಜಾರಿಗೆ ಬಂದಿದ್ದು, ಈ ಕಾನೂನಿನ ಪ್ರಕಾರ ಯಾವುದೇ ದೇವಸ್ಥಾನದ ಆಡಳಿತ ಮಂಡಳಿ ನಡೆದುಕೊಂಡಿದ್ದರೆ ಅಂತಹವುಗಳ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ ಸ್ಪಷ್ಟಪಡಿಸಿದರು. ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಸಿ.ಎಂ.ಇಬ್ರಾಹಿಂ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಅವರು, ಸರ್ಕಾರ ಕಾನೂನು ಪ್ರಕಾರ ಆಡಳಿತ ನಡೆಸಬೇಕಾಗುತ್ತದೆ. ಹೀಗಿರುವಾಗ ಸರ್ಕಾರ ಹಿಂದುಯೇತರರಿಗೂ ಅವಕಾಶನೀಡದಂತೆ ನಿರ್ಬಂಧ ಹೇರಿರುವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವುದು ಕಾನೂನಿಗೆ ವಿರುದ್ಧವಾಗುತ್ತದೆ. ಒಂದು ವೇಳೆ ದೇವಸ್ಥಾನಕ್ಕೆ ಸೇರಿರದ ಜಾಗದಲ್ಲಿ ಈ ರೀತಿ ನಡೆದುಕೊಂಡರೆ ಮಾತ್ರ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಸಿ.ಎಂ.ಇಬ್ರಾಹಿಂ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳಾದೇವಿ ದೇವಸ್ಥಾನ, ಪಡುಬಿದ್ರಿ, ಮಹಾಲಿಂಗೇಶ್ವರ ದೇವಸ್ಥಾನ ಸೇರಿದಂತೆ ಅನೇಕ ಕಡೆಗಳಲ್ಲಿ ಜಾತ್ರೆ, ಉತ್ಸವಗಳ ವೇಳೆ ಮುಸ್ಲಿಂ ವ್ಯಾಪಾರಿಗಳಿಗೆ ವಹಿವಾಟು ನಡೆಸಲು ಅವಕಾಶ ನೀಡುತ್ತಿಲ್ಲ. ಈ ರೀತಿಯ ವಾತಾವರಣದಿಂದ ಮುಸ್ಲಿಂ ಸಮುದಾಯದ ಜೀವನ ಬೀದಿ ಪಾಲಾಗಲಿದೆ. ಕೋಮು ಸಂಘರ್ಷದ ವಾತಾವರಣ ಉಂಟಾಗುತ್ತಿದೆ. ಹಾಗಾಗಿ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಸಲೀಂ ಅಹಮದ್, ನಜೀರ್ ಅಹಮದ್ ಅವರು ಮುಸ್ಲಿಂ ಸಮುದಾಯಕ್ಕೆ ವ್ಯಾಪಾರ ನಿರ್ಬಂಧಿಸಿ ಬ್ಯಾನರ್ ಹಾಕಿದವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ: 25.03.2022

114. Ban on Muslim vendors echoes in Council

The state government reiterated its stand of having little say over ban on Muslim vendors during festivals or fairs around temples.

MLCCM Ibrahim, during the Zero Hour, said that this was the first time Muslim vendors were faced with prohibition. "Vendors from the community are prevented from setting up stalls even at Bappanaadu temple, said to be a constructed by a Muslim," he said.

Law and Parliamentary Affairs minister J C Madhuswamy said that temple authorities were citing rules framed under Religious Endowment Act, 2002, to implement the ban on vendors near temple premises.

"If vendors are prevented from selling their wares beyond the temple premises, then the government can take action," he said.

Courtesy: Deccan Herald, dt: 25.03.2022

115. ತಮಿಳ್ನಾಡಿಗೆ ಚಾಟಿ

'ಕರ್ನಾಟಕದ ಒಪ್ಪಿಗೆ ಇಲ್ಲದೆ ತಮಿಳುನಾಡು ಸರ್ಕಾರದ ನದಿ ಜೋಡಣೆಗೆ ಅನುಮತಿ ಬೇಡವೇ ಬೇಡ, ಮೇಕೆದಾಟು ಯೋಜನೆ ವಿರುದ್ಧದ ನೆರೆಯ ರಾಜ್ಯದ ವಿಧಾನಸಭೆಯ ನಿರ್ಣಯವನ್ನು ಬಲವಾಗಿ ಖಂಡಿಸುತ್ತೇವೆ'

ಹೀಗೆಂದು ರಾಜ್ಯ ವಿಧಾನಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನ ಸಭೆಯಲ್ಲಿ ರಾಜ್ಯದ ನಿರ್ಣಯವನ್ನು ಸ್ವಯಂಪ್ರೇರಿತರಾಗಿ ಮಂಡಿಸಿದರು. ಈ ನಿರ್ಣಯಕ್ಕೆ ಪ್ರತಿಪಕ್ಷಗಳಾದ ಕಾಂಗ್ರೆಸ್ ಹಾಗೂ ಜೆಡಿಎಸ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಧ್ವನಿಮತದ ನಿರ್ಣಯ ಅಂಗೀಕರಿಸುವಂತೆ ಅನುಮೋದನೆ ನೀಡಿದವು. ಪ್ರತಿಪಕ್ಷಗಳ ಬೆಂಬಲದೊಂದಿಗೆ ತಮಿಳುನಾಡು ಮೇಕೆದಾಟು ಯೋಜನೆ ಬಗ್ಗೆ ತೆಗೆದುಕೊಂಡ ನಿಲುವಿನ ವಿರುದ್ಧ ಧ್ವನಿಮತದ ನಿರ್ಣಯವನ್ನು ಇಡೀ ಸದನ ಅಂಗೀಕರಿಸಿತು.

ಸಭ್ಯವಲ್ಲದ ಭಾಷೆಗೆ ಆಕ್ಷೇಪ: ಸದನದ ಮುಂದೆ ನಿರ್ಣಯ ಮಂಡಿಸಿದ ಬಸವರಾಜ ಬೊಮ್ಮಾಯಿ, ಮಾರ್ಚ್ 21ರಂದು ತಮಿಳುನಾಡು ವಿಧಾನ ಸಭೆಯ ನಿರ್ಣಯದಲ್ಲಿ ಬಳಕೆ ಮಾಡಲಾಗಿರುವ ಭಾಷೆ ಸಭ್ಯವಾಗಿಲ್ಲವೆಂದರು. ನಿರ್ಣಯ ಒಕ್ಕೂಟ ವಿರೋಧಿ ಮತ್ತು ಸಮರ್ಥನೀಯಲ್ಲ, ತಮಿಳುನಾಡು ತನ್ನ ಪ್ರಾದೇಶಿಕ ವ್ಯಾಪ್ತಿಯಲ್ಲಿ ಏಕಪಕ್ಷೀಯವಾಗಿ ಯೋಜಿಸಿರುವ ಕಾನೂನುಬಾಹಿರ ಯೋಜನೆಗಳನ್ನೂ ರಾಜ್ಯ ವಿಧಾನಸಭೆ ಗಣನೆಗೆ ತೆಗೆದುಕೊಂಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುಪ್ರೀಂಕೋರ್ಟ್ ಕಾವೇರಿ ಜಲವಿವಾದ ನ್ಯಾಯಾಧಿಕರಣದ ತೀರ್ಪಿನಲ್ಲಿ ಮಾರ್ಪಾಡು ಮಾಡಿ, ಸಾಮಾನ್ಯ ಜಲ ವರ್ಷದಲ್ಲಿ ಬಿಳಿಗುಂಡ್ಲುವಿನಲ್ಲಿ 177.25 ಟಿಎಂಸಿ ನೀರಿನ ಪ್ರಮಾಣವನ್ನು ಖಚಿತಪಡಿಸುವಂತೆ ನಿಗದಿಪಡಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುಪ್ರೀಂಕೋರ್ಟ್ ಹಂಚಿಕೆ ಮಾಡಿರುವಂತೆ ಬೆಂಗಳೂರು ಮೆಟ್ರೋಪಾಲಿಟನ್ ನಗರದ ಕುಡಿಯುವ ನೀರಿನ ಅಗತ್ಯತೆಗೆ 24 ಟಿಎಂಸಿ (4.75 ಕಂಜಪ್ಟಿವ್) ನೀರನ್ನು ಸುಸ್ಥಿರಗೊಳಿಸಲು ಹಾಗೂ

ತತ್ಪರಿಣಾಮವಾಗಿ ಜಲವಿದ್ಯುತ್ ಉತ್ಪಾದನೆಗೆ ಅಂತರ್ ರಾಜ್ಯ ನದಿ ಕಾವೇರಿಗೆ ಅಡ್ಡಲಾಗಿ ಮೇಕೆದಾಟು ಕುಡಿಯುವ ನೀರು ಮತ್ತು ಸಮತೋಲನ ಜಲಾಶಯ ಯೋಜನೆಯನ್ನು ಯೋಜಿಸಲಾಗಿದೆ. ಮೇಕೆದಾಟು ಯೋಜನೆಯಿಂದ ತಮಿಳುನಾಡು ರಾಜ್ಯಕ್ಕೆ ಯಾವುದೇ ಬಾಧಕ ಅಥವಾ ಹಾನಿಯಾಗುವುದಿಲ್ಲ ಎಂದು ಹೇಳಿರುವುದನ್ನು ಮುಖ್ಯಮಂತ್ರಿ ಬೊಮ್ಮಾಯಿ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.

ಮೇಕೆದಾಟು ಕುಡಿಯುವ ನೀರು ಮತ್ತು ಸಮತೋಲನ ಜಲಾಶಯ ಯೋಜನೆಯನ್ನು ನಿರ್ಮಿಸಲು ಕರ್ನಾಟಕ ರಾಜ್ಯವು ತನ್ನ ಸಾಂವಿಧಾನಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ರಾಷ್ಟ್ರೀಯ ಜಲನೀತಿಯೂ ಸಹ ಕುಡಿಯುವ ನೀರಿಗೆ ಪ್ರಥಮ ಆದ್ಯತೆಯನ್ನು ನೀಡುತ್ತದೆ. ಈ ಕುಡಿಯುವ ನೀರಿನ ಯೋಜನೆಯಿಂದ ನ್ಯಾಯಾಧಿಕರಣದ ಆದೇಶವನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸುವುದಿಲ್ಲ.

ಕರ್ನಾಟಕದ ಪ್ರಾದೇಶಿಕ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಾವೇರಿ ಹೆಚ್ಚುವರಿ ನೀರನ್ನು ಬಳಸಿಕೊಳ್ಳುವ ಮೂಲಕ ತಮಿಳುನಾಡು ರಾಜ್ಯವು ಏಕಪಕ್ಷೀಯವಾಗಿ ಹಲವಾರು ಕಾನೂನುಬಾಹಿರ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗಳಲ್ಲಿ ಕುಂದಾ ಪಿಎಸ್ಪಿ, ಸಿಲ್ಲಹಳ್ಳಿ ಪಿಎಸ್ಪಿ, ಹೊಗೇನಕಲ್ ಹಂತ–1, ಕಾವೇರಿ (ಹಟ್ಟಲೆ) ವೈದ್ಯ ಗುಂಡಾರ್ ಜೋಡಣೆ ಯೋಜನೆಗಳು ಒಳಗೊಂಡಿವೆ.

ಪೆನಿನ್ಸುಲರ್ ರಿವಲ್ ಡೆವಲಪ್‌ಮೆಂಟ್ ಯೋಜನೆಯಡಿಯಲ್ಲಿ ಗೋದಾವರಿ ಹೆಚ್ಚುವರಿ ನೀರನ್ನು ಕೃಷ್ಣಾ ನನ್ನಾ–ಕಾವೇರಿ ಮೈಗೆ ಗುಂಡಾರ್ ಯೋಜನೆಗೆ ತಿರುವು ಗೊಳಿಸುವ ವಿಸ್ತೃತ ಯೋಜನಾ ವರದಿಯನ್ನು ಕರ್ನಾಟಕ ರಾಜ್ಯವು ಸೇರಿದಂತೆ ಕಣಿವೆ ರಾಜ್ಯಗಳ ನೀರಿನ ಪಾಲನ್ನು ನಿರ್ಧರಿಸುವವರೆಗೆ ಅನುಮೋದಿಸ ಕೂಡದು ಎಂದು ಮುಖ್ಯಮಂತ್ರಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ತಮಿಳುನಾಡು ರಾಜ್ಯವು, ಕರ್ನಾಟಕ ರಾಜ್ಯದ ಮೇಕೆದಾಟು ಯೋಜನೆಗೆ ತನ್ನ ಒಪ್ಪಿಗೆಯನ್ನು ಪಡೆಯಬೇಕೆಂದು ಕೋರಿದೆ. ಆದರೆ ಅದೇ ಸಮಯದಲ್ಲಿ ತಮಿಳುನಾಡು ರಾಜ್ಯವು ಕರ್ನಾಟಕದ ರಾಜ್ಯದ ಒಪ್ಪಿಗೆಯನ್ನು ಕೋರದೆ ಏಕಪಕ್ಷೀಯವಾಗಿ ಕಾನೂನುಬಾಹಿರ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮೂಲಕ ತನ್ನ ದ್ವಂದ್ವ ನಿಲುವನ್ನು ಪ್ರದರ್ಶಿಸುತ್ತಿದೆ. ತಮಿಳುನಾಡಿನ ಕಾನೂನುಬಾಹಿರ ಯೋಜನೆಗಳನ್ನು ನಾವು ಬಲವಾಗಿ ಖಂಡಿಸುತ್ತಾ, ಎಲ್ಲಾ ವೇದಿಕೆಗಳಲ್ಲಿ ಅವುಗಳನ್ನು ವಿರೋಧಿಸುತ್ತೇವೆ ಎಂದರು ಸಿಎಂ ಬೊಮ್ಮಾಯಿ.

ಕೇಂದ್ರ ಜಲ ಆಯೋಗವು ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಅನುಮೋದಿಸುವಂತೆ ಹಾಗೂ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಯೋಜನೆಗೆ ಪರಿಸರ ಅನುಮತಿಯನ್ನು ಪಡೆಯಲು ಟಿಒಆರ್ ಅನ್ನು ಅನುಮೋದಿಸುವಂತೆ ಈ ಸದನವು ಸರ್ವಾನುಮತದಿಂದ ಒತ್ತಾಯಿಸುತ್ತದೆ ಎಂದು ಹೇಳಿದರು.

ಆಧಾರ: ಉದಯವಾಣಿ, ದಿನಾಂಕ: 25.03.2022

116. ಮೃತಪಟ್ಟವರ 'ಪರಿಹಾರ' ಸೃಷ್ಟಿಸಿದ ಕೋಲಾಹಲ

ಹುತಾತ್ಮ ಸೈನಿಕರು, ಗಲಭೆಯಲ್ಲಿ ಮರಣಹೊಂದಿದವರಿಗೆ ನೀಡುತ್ತಿರುವ ಪರಿಹಾರದ ಪ್ರಸ್ತಾಪ ಸದನದಲ್ಲಿ ಕೋಲಾಹಲ ಸೃಷ್ಟಿಸಿತು. ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ಮಾತಿನ ಸಮರದ ವೇಳೆ ಹಲವು ಕೊಲೆ ಪ್ರಕರಣಗಳು ವಿಧಾನಸಭೆಯಲ್ಲಿ ಪ್ರತಿಧ್ವನಿಸಿದವು. ಜಾತಿ ಮತದ ಹಿನ್ನಲೆ ಆಧರಿಸಿ ಸರಕಾರ ಪರಿಹಾರ ನೀಡುತ್ತಿದೆ ಮತ್ತು ತಾರತಮ್ಯ ಎಸಗುತ್ತಿದೆ ಎಂದು ಪ್ರತಿಪಕ್ಷ ಕಾಂಗ್ರೆಸ್

ಆರೋಪಿಸಿದರೆ, ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ನಡೆದ ಕೊಲೆ ಪ್ರಕರಣಗಳ ಮತ್ತು ತಾರತಮ್ಯಗಳನ್ನು ಆಡಳಿತ ಪಕ್ಷದ ಸದಸ್ಯರು ಪ್ರಸ್ತಾಪಿಸಿ ಕಿಡಿಕಾರಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಅಶಾಂತಿ ಭಂಗ, ವಿಧ್ವಂಸಕ ಕೃತ್ಯ ಎಸಗುವ ಸಂಘಟನೆಗಳ ಮೇಲೆ ಕ್ರಮ ಕೈಗೊಳ್ಳುವುದು, 144 ಸೆಕ್ಷನ್ ಧಿಕ್ಕರಿಸಿ ಮೆರವಣಿಗೆ ನಡೆಸಿದ ಜನಪ್ರತಿನಿಧಿಗಳ ಮೇಲೆ ಪ್ರಕರಣ ದಾಖಲಿಸುವುದು ಸೇರಿದಂತೆ ಹಲವು ಪ್ರಶ್ನೆಗಳನ್ನು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಬಿಜೆಪಿ ಸರಕಾರದ ಮೇಲೆ ದಾಳವಾಗಿ ಉರುಳಿಸಿದರು. ಕಾಂಗ್ರೆಸ್ ಗುರಿಯಾಗಿಸಿ ಆಡಳಿತ ಪಕ್ಷದ ಸದಸ್ಯರು ಕಾಂಗ್ರೆಸ್ ಅವಧಿಯಲ್ಲಿ ಹೊನ್ನಾವರದಲ್ಲಿ ನಡೆದ ಪರೇಶ್ ಮೇಸ್ತಾ ಕೊಲೆ ಪ್ರಕರಣವನ್ನು ಪ್ರಸ್ತಾಪಿಸಿದರು.

ಕಾರವಾರ ಶಾಸಕಿ ರೂಪಾಲಿ ನಾಯಕ್ "ಪರೇಶ್ ಮೇಸ್ತಾ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಪರಿಹಾರ ಕೊಟ್ಟಿಲ್ಲ" ಎಂದು ಆರೋಪಿಸಿದರು. ಪರೇಶ್ ಮೇಸ್ತಾ ಕೊಲೆ ಪ್ರಕರಣ ಕುರಿತು ಮಾತನಾಡಲು ಸ್ಪೀಕರ್ ಬಳಿ ಅವಕಾಶಕ್ಕೆ ದುಂಬಾಲು ಬಿದ್ದರು. ಬಿಜೆಪಿ ಸದಸ್ಯರು ಶಾಸಕಿಗೆ ಧ್ವನಿಯಾದರು. ರೂಪಾಲಿ ಅವರಿಗೆ ಅವಕಾಶ ನೀಡದಂತೆ ಕಾಂಗ್ರೆಸ್ ಒತ್ತಾಯಿಸಿತು. ಈ ವೇಳೆ ಸದನದಲ್ಲಿ ಕೋಲಾಹಲ ಸೃಷ್ಟಿಯಾಯಿತಲ್ಲದೇ ಬಿಜೆಪಿ ಸದಸ್ಯರೆಲ್ಲ ಸದನ ಬಾವಿಯತ್ತ ಧಾವಿಸಿ ಬಂದರು. ಮುಖ್ಯ ಸಚೇತಕ ಸತೀಶ್ ರೆಡ್ಡಿ ಬಿಜೆಪಿ ಸದಸ್ಯರು ತಮ್ಮ ಸ್ಥಳಗಳಿಗೆ ಮರಳುವಂತೆ ಮನವೊಲಿಸಲು ಯಶಸ್ವಿಯಾದರು.

ಸಿದ್ದರಾಮಯ್ಯ ಆರೋಪ ಮತ್ತು ಸಲಹೆ: ನಿಯಮ 69ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ "ಶಿವಮೊಗ್ಗದಲ್ಲಿ ಕೊಲೆಯಾದ ಹರ್ಷ ಕುಟುಂಬಕ್ಕೆ 25 ಲಕ್ಷ ಪರಿಹಾರ ವಿತರಿಸಲಾಗಿದೆ. ಅದರಂತೆಯೇ ಸಾವೀಗಿಡಾದ ನರಗುಂದ ಸಮೀರ್ ಸುಬಾನ್ ಸಾಬ್, ಸಂಶಿರ್ ಪಠಾಣ್, ಸೈನ್ಯದಲ್ಲಿ ಹುತಾತ್ಮರಾದ ಕೊಡಗಿನ ಅಲ್ತಾಫ್ ಅಹಮ್ಮದ್, ದಿನೇಶ್ ಕುಟುಂಬಕ್ಕೂ 25 ಲಕ್ಷ ಪರಿಹಾರ ಒದಗಿಸಬೇಕಿತ್ತು. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಅಂದರೆ ಇದೇನಾ? ಈ ತಾರತಮ್ಯ ಸರಿಯಲ್ಲ, ಕಲಬುರಗಿ ತಾಲೂಕಿನ ಆಳಂದದ ದರ್ಗಾ ಪ್ರಕರಣದಲ್ಲಿ 144 ಸೆಕ್ಷನ್ ಜಾರಿ ಇದ್ದರೂ ಕೇಂದ್ರ ಸಚಿವ ಭಗವಂತ ಖೂಬಾ ಮತ್ತು ಇತರೆ ನಾಯಕರು ಅನಗತ್ಯ ಗಲಭೆ ಸೃಷ್ಟಿಸಲು ಯತ್ನಿಸಿದ್ದಾರೆ. ತಾರತಮ್ಯ, ಕೋಮು ಗಲಭೆ, ಅನಗತ್ಯ ಹೇಳಿಕೆಗಳು ರಾಜ್ಯದ ಅಭಿವೃದ್ಧಿಗೆ ಪೂರಕವಲ್ಲ, ಇದರಿಂದ ಜಿಡಿಪಿ, ಉದ್ಯೋಗ, ಬಂಡವಾಳ ಹೂಡಿಕೆ ಕುಂಠಿತಗೊಳ್ಳುತ್ತದೆ" ಎಂದರು. "ಪರೀಕ್ಷೆಗೆ ಸಮವಸ್ತ್ರ ಬಣ್ಣದ ದುಪಟ್ಟಾ ಹಾಕಲು ಮುಸ್ಲಿಂ ವಿದ್ಯಾರ್ಥಿನಿಯರಿಗೆ ಅವಕಾಶ ಮಾಡಿಕೊಟ್ಟು ಮಹಿಳೆಯರ ಶಿಕ್ಷಣಕ್ಕೆ ಒತ್ತು ನೀಡಬೇಕು" ಎಂದು ಸಲಹೆ ನೀಡಿದರು. "ಹಿಜಾಬ್ ಕುರಿತು ಕೋರ್ಟ್ ಮೆಟ್ಟಿಲೇರಿರುವ 6 ಜನ ವಿದ್ಯಾರ್ಥಿನಿಯರಿಗೆ ನೀವೇ ಕರೆದು ಬುದ್ಧಿ ಹೇಳಿ ಸಾರ್" ಎಂದು ಸಚಿವ ಬಿ.ಸಿ. ನಾಗೇಶ್ ತಿವಿದರು.

ರಾಷ್ಟ್ರೀಯ ಸಂಸ್ಕಾರ ಅಗತ್ಯ ಅರಗ ಜ್ಞಾನೇಂದ್ರ ಉತ್ತರ: "ವರ್ಣರಂಜಿತವಾಗಿ ಸಿದ್ದರಾಮಯ್ಯ ಅವರು ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಪಾಠ ಮಾಡಿದ್ದಾರೆ. ಆದರೆ, ಎರಡೂ ಸಮುದಾಯಕ್ಕೂ ಪಾಠ ಮಾಡಬೇಕು. ನಾನು ಏನು ಮಾಡಿದರೂ ನನ್ನ ರಕ್ಷಣೆಗೆ ವ್ಯವಸ್ಥೆ ಇದೆ ಎಂಬ ಭಾವನೆ ಯಾರಿಗೂ ಬರಬಾರದು. ಒಂದು ಸಮುದಾಯಕ್ಕೆ ಜಾತ್ಯಾತೀತ ಪಾಠ, ಮತ್ತೊಂದು ಸಮುದಾಯಕ್ಕೆ ಕೋಮುವಾದ ಪಾಠ ಮಾಡುವುದು ಬೇಡ. ಸತ್ಯವನ್ನು ಗಟ್ಟಿಯಾಗಿ ಹೇಳಲೂ ಆಗದ ವ್ಯವಸ್ಥೆಯಲ್ಲಿ ಬದುಕಬೇಕಿದೆ. ಕೆಲ ಮೂಲಭೂತ ಶಕ್ತಿಗಳು ಮುಸ್ಲಿಂ ಸಮುದಾಯವನ್ನು ದಾರಿ ತಪ್ಪಿಸುತಿವೆ. ಮಕ್ಕಳನ್ನು ಎತ್ತಿಕಟ್ಟುವ ಕೆಲಸ ನಡೆಯುತ್ತಿದೆ. ಶಿಕ್ಷಣ ಸಂಸ್ಥೆಗಳಲ್ಲಿ ರಾಷ್ಟ್ರೀಯ ಸಂಸ್ಕಾರ ಅಗತ್ಯವಿದೆ. ಕೊಡಗಿನಲ್ಲಿ ಕುಟ್ಟಪ್ಪ ಹತ್ಯೆಯಾಯಿತು. ದಕ್ಷಿಣ ಕನ್ನಡದಲ್ಲಿ ಪ್ರಶಾಂತ್ ಪೂಜಾರಿ, ಶಿವಮೊಗ್ಗದಲ್ಲಿ ವಿಶ್ವನಾಥ್ ಕೊಲೆಯಾಯಿತು. ಕೊಲೆ, ಕೋಮು ಗಲಭೆಗಳನ್ನು ಸಮರ್ಥಿಸಿಕೊಳ್ಳುತ್ತಿಲ್ಲ. ಪಿಎಫ್ಐ ಸಂಘಟನೆ ಯಾರ ಕಾಲದಲ್ಲಿ ನೆಲೆಯೂರಿತು, ಕೊಲೆಗಡುಕರಿಗೆ ಹೆಚ್ಚು ಭದ್ರತೆ ನೀಡಿದ್ದು

ಯಾವ ಸರಕಾರ ಎಂಬುದು ಜನರಿಗೆ ತಿಳಿಯಲಿ, ಹಿಜಾಬ್ ಹಿಂದೆ ಯಾವ ಶಕ್ತಿ ಇದೆ ಎಂದು ಎಲ್ಲರಿಗೂ ಗೊತ್ತಿದೆ. ಸರಕಾರ ಕಠಿಣ ತೀರ್ಮಾನ ತೆಗೆದುಕೊಂಡಿದೆ. ಎಲ್ಲಿರಿಗೂ ನ್ಯಾಯ ಒದಗಿಸುತ್ತೇವೆ," ಎಂದರು.

ಹಳೆ ಕುದುರೆ, ಹೊಸ ಸವಾರ, ಸಿದ್ದು–ಆರಗ ಜುಗಲ್‌ಬಂದಿ :ಒಂದು ಹಂತದಲ್ಲಿ ಆರಗ ಜ್ಞಾನೇಂದ್ರ, "ನಿಮ್ಮ ಕಾಲದಲ್ಲಿ ಎಲ್ಲವೂ ಸರಿ ಇತ್ತೇ. ಹಳೆ ಕುದುರೆ ಹೊಸ ಸವಾರ ಅಷ್ಟೇ. ಈಗ ಅದನ್ನು ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ," ಎಂದು ತಿರುಗೇಟು ನೀಡಿದರು. ಅದಕ್ಕೆ ಸಿದ್ದರಾಮಯ್ಯನವರು ಅಲ್ಲಮಪ್ರಭು ವಚನ "ಕೊಟ್ಟ ಕುದುರೆ ಏರದವನು...' ವಾಚಿಸಿ ಸುಮ್ಮನಿರಿಸಿದರು. ಬಳಿಕ ಅರಗ ಜ್ಞಾನೇಂದ್ರ, "ಕುದುರೆ ಏರಿದ್ದು, ಎಲ್ಲವನ್ನೂ ನಿಭಾಯಿಸುತ್ತಿದ್ದೇವೆ. ನಿಮ್ಮ ಅವಧಿಯಲ್ಲಿ ವಿಧಾನಸೌಧದ ಮೂರನೇ ಮಹಡಿಯಲ್ಲೇ ಏನಾಗಿತ್ತು ಎಂಬುದು ಗೊತ್ತಿಲ್ಲವೇ," ಎಂದು ಕೆಣಕಿದರು. ಅದಕ್ಕೆ ಸಿದ್ದರಾಮಯ್ಯ, ನನಗೆ ಮರೆತು ಹೋಗಿದೆ. ನನ್ನ ಅವಧಿಯಲ್ಲಿ ಒಂದೊಮ್ಮೆ ಆ ರೀತಿ ಏನಾದರೂ ಘಟನೆ ನಡೆದಿದ್ದರೆ ಅದು ಕೂಡ ವೈಫಲ್ಯವೇ. ಅದನ್ನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ನಿಮ್ಮದು ವೈಫಲ್ಯ ಎಂದು ಒಪ್ಪಿಕೊಳ್ಳಿ" ಎಂದು ತಾಕೀತು ಮಾಡಿದರು.

ಕಾನೂನು ಸುವ್ಯವಸ್ಥೆ ಹದಗೆಡುತ್ತಿದೆ ಎಂದ ಸಿದ್ದು :ರಾಜ್ಯದಲ್ಲಿ ಒಂದೆಡೆ ಕಾನೂನು ಮತ್ತು ಸುವ್ಯವಸ್ಥೆ ಕುಸಿಯುತ್ತಿದ್ದರೆ ಇನ್ನೊಂದೆಡೆ ಪದವೀಧರ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆ ದಂಧೆ ಮೇರೆ ಮೀರಿದ್ದು, ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಗುರುವಾರ ನಿಯಮ 69ರಡಿ ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸುತ್ತಿರುವ ವಿದ್ಯಮಾನಗಳಿಂದ ಕುಸಿದು ಬೀಳುತ್ತಿರುವ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುತ್ತಿರುವ ಅಂಶಗಳನ್ನು ಪ್ರಸ್ತಾಪಿಸಿದರು.

"ಬಹುತ್ವವಿರುವ ರಾಷ್ಟ್ರಗಳಲ್ಲಿ ಶಾಂತಿ ಸುವ್ಯವಸ್ಥೆಯಿರುವ ಕಡೆ ಅಭಿವೃದ್ಧಿಯಾಗುತ್ತಿದೆ. ರಾಜಕಾರಣದಲ್ಲಿ ಧರ್ಮ ಬೆರೆಸುವುದರಿಂದ ಕಾನೂನು – ಸುವ್ಯವಸ್ಥೆ ಶಾಂತಿ ಇಲ್ಲದಂತಾಗುತ್ತದೆ ಎಂಬುದನ್ನು ಜಗತ್ತಿನ ನಾನಾ ರಾಷ್ಟ್ರಗಳಲ್ಲಿ ಕಾಣಬಹುದು. ಏಕಧರ್ಮವಿರುವ ಆಫ್ರಿಕಾ, ಪಾಕಿಸ್ತಾನ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಕಾನೂನು–ಸುವ್ಯವಸ್ಥೆ ಇದೆಯೇ," ಎಂದು ಪ್ರಶ್ನಿಸಿದರು.

"ದಕ್ಷಿಣ ಭಾರತ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಹಿಂದುಳಿದಿದೆ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಕಾನೂನು ಸುವ್ಯವಸ್ಥೆ ಕುಸಿದಿದೆ. ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಉನ್ನತ ಶಿಕ್ಷಣ ಸಂಬಂಧ ಸಮಗ್ರ ನೋಂದಣಿ ಅನುಪಾತದಲ್ಲಿ (ಜಿಇಆರ್) ದಕ್ಷಿಣ ಭಾರತದ ರಾಜ್ಯಗಳ ಸರಾಸರಿ ಪ್ರಮಾಣ ಶೇ.35ರಷ್ಟಿದ್ದರೆ ಕರ್ನಾಟಕದ್ದು ಶೇ. 32.2ರಷ್ಟಿದೆ," ಎಂದರು.

ರಾಜ್ಯದಲ್ಲಿ ಕೈಗಾರಿಕೆಗೆ ಪೂರಕ ವಾತಾವರಣವಿಲ್ಲ ಎಂಬ ಕಾರಣಕ್ಕೆ ಟಾಟಾ ಎಲೆಕ್ಟ್ರಿಕಲ್ಸ್, ಓಲಾ ಬೈಕ್ಸ್ ಕಂಪನಿಗಳು ಬೇರೆ ರಾಜ್ಯಕ್ಕೆ ಹೋಗಿದ್ದು, 20,000 ಉದ್ಯೋಗ ಸೃಷ್ಟಿಯಾಗುತ್ತಿವೆ. ರಾಜ್ಯದಲ್ಲಿ ಪದವೀಧರ ನಿರುದ್ಯೋಗಿ ಮಹಿಳೆಯರ ಪ್ರಮಾಣ ಶೇ. 40 ಹಾಗೂ ಪುರುಷರ ಸಂಖ್ಯೆ ಶೇ. 22ರಷ್ಟಿದೆ. ಹೀಗೆ ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತಿದ್ದು, ಯುವಕರು ದಾರಿ ತಪ್ಪುತ್ತಿದ್ದಾರೆ," ಎಂದು ಆತಂಕ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, "ಸರ್ಕಾರ ಪ್ರಶ್ನೆಯೊಂದಕ್ಕೆ ನೀಡಿರುವ ಮಾಹಿತಿಯಂತೆ ರಾಜ್ಯದಲ್ಲಿ ಮೂರು ವರ್ಷದಲ್ಲಿ ಸೃಷ್ಟಿಯಾದ ಉದ್ಯೋಗ ಶೂನ್ಯ. ಆದರೆ ಸರಕಾರ ಮೂರು ವರ್ಷದಲ್ಲಿ ಲಕ್ಷ ಹುದ್ದೆ 4.51 ಸೃಷ್ಟಿಸುವುದಾಗಿ ಹೇಳಿತ್ತು. ಹಾಗೆಯೇ ರಾಜ್ಯದ ಎಂಎಸ್‌ಎಂಇಗಳಲ್ಲಿ, 83,193 ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಕಾರ್ಮಿಕ ಇಲಾಖೆಯೇ ಉತ್ತರ ನೀಡಿದೆ," ಎಂದು ಗಮನ ಸೆಳೆದರು.

ಗೃಹ ಸಚಿವರು ಏಕಾಂಗಿ: ಆರಂಭದಲ್ಲೇ ಸಿದ್ದರಾಮಯ್ಯ, "ಗೃಹ ಸಚಿವರು ಅಟೆಂಟಿವ್ ಆಗಿ ಇರುತ್ತಾರೆ. ಒಮ್ಮೊಮ್ಮೆ ಪೆದ್ದು ಪೆದ್ದಾಗಿ ಮಾತನಾಡುತ್ತಾರೆ," ಎಂದು ವ್ಯಂಗ್ಯವಾಡಿದರು. ಅದಕ್ಕೆ ಆರಗ ಜ್ಞಾನೇಂದ್ರ, "ನಿಮ್ಮ ಮುಂದೆ ಹೇಗೆ ಮಾತನಾಡಬೇಕು ಎಂದು ಅಧ್ಯಯನ ಮಾಡುತ್ತಿದ್ದೇನೆ," ಎಂದು ತಿರುಗೇಟು ನೀಡಿದರು.

"ಪೊಲೀಸರು ಲಂಚ ತಿಂದುಕೊಂಡು ನಾಯಿಗಳಂತೆ ಬಿದ್ದಿರುತ್ತಾರೆ ಎಂದು ಸ್ವತಃ ಗೃಹ ಸಚಿವರೇ ಹೇಳಿದ್ದರು. ಬಳಿಕ ಎಲ್ಲರ ಬಗ್ಗೆ ಹೇಳಿಲ್ಲ ಎಂದು ಸಮರ್ಥನೆ ನೀಡಿದ್ದರು" ಎಂದ ಸಿದ್ದರಾಮಯ್ಯ, "ಹೌದೋ ಅಲ್ಲವೋ," ಎಂದು ಆರಗ ಜ್ಞಾನೇಂದ್ರ ಅವರನ್ನು ಪ್ರಶ್ನಿಸಿದರು.

ಮೈಸೂರಿನ ಅತ್ಯಾಚಾರ ಪ್ರಕರಣ ನಡೆದಾಗ "ಕಾಂಗ್ರೆಸ್‌ನವರೇ ನನ್ನ ಮೇಲೆ ರೇಪ್ ಮಾಡಿದರು ಎಂದಿದ್ದರು. ಬಳಿಕ ರಾತ್ರಿ ಹೊತ್ತಿನಲ್ಲಿ ಯುವತಿ ಅರಣ್ಯ ಪ್ರದೇಶಕ್ಕೆ ಹೋಗಿದ್ದೇಕೆ," ಎಂದು ಪ್ರಶ್ನಿಸಿದ್ದರು. "ಸಚಿವರ ಮಾತುಗಳಿಂದ ಆರೋಪಿಗಳಿಗೆ ಬೆನ್ನು ತಟ್ಟಿದಂತಾಗುವುದಿಲ್ಲವೇ? ನೀವು ಗೃಹ ಸಚಿವರಾಗಿರುವುದು ರಾಜ್ಯದ ಜನರಿಗೆ ರಕ್ಷಣೆ ನೀಡುವುದಕ್ಕಾಗಿ ಅಲ್ಲವೇ? ತಪ್ಪಾಗಿದ್ದರೆ, ನೀವು ಒಪ್ಪಿಕೊಳ್ಳುತ್ತೀರಿ. ಹಾಗಾಗಿ ಒಪ್ಪಿಕೊಳ್ಳಿ" ಎಂದು ಕಿಚಾಯಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 25.03.2022

117. Assembly adopts resolution for fast clearance to Mekedatu

The Karnataka Assembly unanimously adopted a resolution condemning Tamil Nadu's opposition to the Mekedatu project and that pressure should be mounted on the Centre to accord necessary approvals.

The resolution also proclaimed that Karnataka will not give its concurrence to the linking of the Krishna-Pennar-Kaveri-Vaigai-Gundar rivers unless the state's share of water is decided and until all aspects of the detailed project report (DPR) are agreeable.

Chief Minister Basavaraj Bommai piloted the two-page resolution, which counters the Tamil Nadu Assembly's resolution damning Karnataka's Mekedatu project.

According to the resolution, the Mekedatu project will not harm Tamil Nadu.

The project will stabilize the Supreme Court's allocation of 24 tmcft (4.75 tmcft consumptive use) for the Bengaluru metropolitan region and generate hydropower by constructing a balancing reservoir.

"Tamil Nadu wants Karnataka to take its approval for the Mekedatu project. At the same time, without seeking Karnataka's approval, Tamil Nadu is taking up projects illegally and unilaterally, thereby showing its double standards," the resolution said.

Before Speaker Vishweshwar Hegde Kageri could put the resolution for adoption, former water resources minister HK Patil raised an objection to the way the resolution was drafted.

Specifically, he had a problem with the resolution mentioning the peninsular river development (linkage of rivers).

"By stating that the peninsular river development scheme of diverting excess water from Godavari to Krishna-Pennar-Kaveri-Vaigai-Gundar linking project should not be decided until the state's share is finalized, are we in effect giving our approval to the project? Shouldn't we first know what our share will be before adopting a resolution like this? If we accept this, then

we're bound to allow water to go from Almatti to Tungabhadra, which will affect North Karnataka," Patil explained.

He also asked Bommai why the resolution was not confined to Mekedatu.

Siding with Patil, leader of the Opposition Siddaramaiah said Bommai should have drafted the resolution in consultation with other parties.

Allaying Patil's fears, Bommai modified the resolution to say that all aspects of the DPR on linking of rivers should be agreeable to Karnataka.

"We've always been defensive. Now, we're going on the offensive and telling Tamil Nadu that it needs to stop projects that are being taken up without consulting Karnataka," Bommai said.

Courtesy: Deccan Herald, dt: 25.03.2022

118. ಹಿಂದುಳಿದವರ ಶ್ರೇಯೋಭಿವೃದ್ಧಿಗೆ ಬದ್ಧ

ಬಡತನ, ಶಿಕ್ಷಣ, ಅವಕಾಶ ವಂಚಿತ ಸಮುದಾಯಗಳನ್ನು ಒಳಗೊಂಡ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾನ ನೀಡಿದರು.

ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಭಾನುವಾರ ಆಯೋಜಿಸಿದ್ದ ಶ್ರೀ ಯೋಗಿ ನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಿಂದುಳಿದ ವರ್ಗಗಳು ಸಬಲವಾಗಿ ಮುಖ್ಯವಾಹಿನಿಗೆ ಸೇರಿದರೆ, ಸ್ವತಃ ಜೀವನಮಟ್ಟ ಸುಧಾರಿಸುವ ಕೊಳ್ಳುವ ಜತೆಗೆ ದೇಶ ಬಲಿಷ್ಠವಾಗಲು ನೆರವಾಗುತ್ತಾರೆ ಎಂದು ತಿಳಿಸಿದರು.

ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಬಲಿಜ ಸಮುದಾಯದ ಅಪೇಕ್ಷೆಯಂತೆ ಹಿಂದುಳಿದ ವರ್ಗ 2ಎಗೆ ಸೇರಿಸಿದರು. ಬಲಿಜ ಸಮುದಾಯದ ಆಶೋತ್ತರ, ನಿರೀಕ್ಷೆಗಳೇನು ಎನ್ನುವುದು ಗೊತ್ತಿದೆ. ಸರ್ವಾಂಗೀಣ ಅಭಿವೃದ್ಧಿಗೆ ದೃಢಸಂಕಲ್ಪ ಮಾಡಲಾಗಿದ್ದು, ಬಜೆಟ್ ಅಧಿವೇಶನ ನಡೆಯುತ್ತಿರುವ ಕಾರಣ ಹೇಳಲಾಗದು ಎಂದು ಬೊಮ್ಮಾಯಿ ಪರೋಕ್ಷ ಸುಳಿವು ನೀಡಿದರು.

ವೈಚಾರಿಕತೆಯಿಂದ ಸಮಾಜದಲ್ಲಿ ಶಾಂತಿ, ಸಾಮರಸ್ಯ ನೆಲೆಗೊಳಿಸಿ, ಸಮಸ್ಯೆಗಳಿಗೆ ಪರಿಹಾರ ಸಾಧ್ಯವಿದ್ದು, ಅಂತಹ ವೈಚಾರಿಕತೆ ಮಾಡುವುದು ಸರ್ಕಾರದ ವೈಚಾರಿಕತೆ ಪ್ರಚಾರ ಕರ್ತವ್ಯ. ಇದೇ ಕಾರಣಕ್ಕೆ ಕೈವಾರ ತಾತಯ್ಯನವರ ಜಯಂತಿ ಸರ್ಕಾರ ಆಚರಿಸುತ್ತಿದೆ ಎಂದು ಬೊಮ್ಮಾಯಿ ಸಮರ್ಥಿಸಿಕೊಂಡರು. ಬೇರೆ ಬೇರೆ ದೇಶಗಳಲ್ಲಿ ವಿವಿಧ ಕಾರಣಗಳಿಗೆ ಕ್ರಾಂತಿಗಳಾಗಿದ್ದರೆ, ಭಾರತದಲ್ಲಿ ಕಾಲ ಕಾಲಕ್ಕೆ ಭಕ್ತಿ ಕ್ರಾಂತಿಗಳಾಗಿವೆ. ಸಾಂಸ್ಕೃತಿಕವಾಗಿ ಶ್ರೀಮಂತ ರಾಷ್ಟ್ರವಾಗಿದ್ದು, ನಾವು ಅದರ ವಾರಸುದಾರರು. ವಿಶ್ವಮಾನ್ಯವಾದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಉಳಿಸಿ ಬೆಳೆಸಲಾಗದಿದ್ದರೂ ಧಕ್ಕೆ ತರುವ ಕೆಲಸ ಮಾಡಬಾರದು ಎಂದು ಸಲಹೆ ನೀಡಿದರು.

ಮಾಜಿ ಸಿಎಂ ಯಡಿಯೂರಪ್ಪ, ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ, ಸಂಸದ ಮೋಹನ್ ಇತರರಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 25.03.2022

ದಿನಾಂಕ: 27.03.2022ರಂದು ಸನ್ಮಾನ್ಯ ಸಭಾಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಶ್ರೀ ಯೋಗಿ ನಾರಾಯಣ ಯತ್ರೀಂದ್ರ ಕೈವಾರ ತಾತಯ್ಯ ಅವರ ಜಯಂತಿ ಆಚರಣೆ ಕುರಿತು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸಿದ ಸಂದರ್ಭ;

119. ಭೂ ಒಡೆತನ ಮಾರ್ಗಸೂಚಿ ಬದಲಾವಣೆ

ಪರಿಶಿಷ್ಟ ಜಾತಿಯ ಭೂರಹಿತ ಕೃಷಿ ಕಾರ್ಮಿಕರ ಕುಟುಂಬಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಭೂಮಿ ಮಾಲೀಕರನ್ನಾಗಿ ಮಾಡಲು ಉದ್ದೇಶಿತ 'ಭೂ ಒಡೆತನ ಯೋಜನೆ'ಯಡಿ ಅಕ್ರಮ ತಡೆಗೆ ಮಾರ್ಗಸೂಚಿ ಬದಲಾವಣೆ ಮಾಡಲಾಗುವುದು ಎಂದು ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸಪೂಜಾರಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ಕಲಾಪದ ವೇಳೆ ಬಿಜೆಪಿಯ ಡಾ.ವೈ.ಎ.ನಾರಾಯಣಸ್ವಾಮಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಫಲಾನುಭವಿಗಳ ಆಯ್ಕೆ, ಖರೀದಿಸುವ ಜಮೀನು ಗುರುತಿಸುವಿಕೆ, ಮಾಲೀಕತ್ವ ವರ್ಗಾವಣೆ ಸೇರಿ ಪ್ರತಿಯೊಂದು ಹಂತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಮಾರ್ಗಸೂಚಿ ಪರಿಷ್ಕರಿಸಲಾಗುವುದು ಎಂದರು. ಭೂ ಒಡೆತನ ಯೋಜನೆಯಡಿ ಘಟಕ ವೆಚ್ಚವು 15 ರಿಂದ 20 ಲಕ್ಷ ರೂ.ಗಳಿಗೆ ನಿಗದಿಯಾಗಿದ್ದು, ಈ ಮೊತ್ತವನ್ನು 20 ರಿಂದ 25 ಲಕ್ಷ ರೂ.ಗೆ ಹೆಚ್ಚಿಸುವ ಚಿಂತನೆಯಿದೆ. ಕಡು ಬಡವರಿಗೆ ತಲಾ ಎರಡು ಎಕರೆ ಹಂಚಿಕೆ ಇನ್ನಷ್ಟು ಚುರುಕುಗೊಳ್ಳಲಿದೆ ಎಂದರು. ಈ ಯೋಜನೆಯಡಿ ನೀರಾವರಿ, ತರಿ ಭೂಮಿ ಮಾರಾಟಕ್ಕೆ ಮಾಲೀಕರು ಮುಂದೆ ಬರುತ್ತಿದ್ದು, ಅವರಿಗೂ ಅನುಕೂಲ, ಉಪನೋಂದಣಾಧಿಕಾರಿಗಳ ಮಾರ್ಗಸೂಚಿ ಬೆಲೆ ಪರಿಗಣನೆ ಮತ್ತು ಯೋಜನೆ ಉದ್ದೇಶ ಸಫಲಗೊಳಿಸಲೆಂದು ಘಟಕ ವೆಚ್ಚ ಹೆಚ್ಚಿಸಲಾಗುತ್ತಿದೆ ಎಂದು ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಭಾರಿ ಅಕ್ರಮ ಶಂಕೆ: ಈ ಉತ್ತರಕ್ಕೆ ಸಮಾಧಾನ ಪಡೆದ ವೈ.ಎ.ನಾರಾಯಣಸ್ವಾಮಿ, ಯೋಜನೆಯಡಿ ಈವರೆಗೆ ಆಯ್ಕೆಯಾದ ಫಲಾನುಭವಿಗಳ ಪಟ್ಟಿ ಗಮನಿಸಿದರೆ ಅನುಮಾನಗಳಿಗೆ ಪುಷ್ಟಿ ನೀಡುತ್ತದೆ. ಪರಿಶಿಷ್ಟ ಜಾತಿಯಲ್ಲಿ 101 ಸಮುದಾಯಗಳಿದ್ದರೂ ಎರಡು ಸಮುದಾಯಗಳಿಗೆ ಯೋಜನೆ ಸೀಮಿತವಾಗಿದೆ. ಅಷ್ಟೇ ಅಲ್ಲ, ಕೊಪ್ಪಳ, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಯೋಜನೆ ಗಿರಕಿ ಹೊಡೆಯುತ್ತಿದ್ದು, ತಮ್ಮದೇ ನೇತೃತ್ವದ ಸಮಿತಿ ಪರಿಶೀಲನೆಗೆಂದು ತೆರಳಿದಾಗ ಅವ್ಯವಹಾರದ ಕುರಿತು ರಾಯಚೂರು ಜಿಲ್ಲೆಯಲ್ಲಿ ನೂರಾರು ಜನರು ದೂರು ನೀಡಲು ಮುಂದೆ ಬಂದಿದ್ದರು. ಭೂಮಿ ಖರೀದಿಯಿಂದ ಹಿಡಿದು ಆಯಾ ಫಲಾನುಭವಿಗಳ ಹೆಸರಿನಲ್ಲಿ ವರ್ಗಾವಣೆವರೆಗೆ ಶೋಷಿತರ ಹೆಸರಿನಲ್ಲಿ ಅಕ್ರಮಗಳು ನಡೆಯುತ್ತಿದ್ದು, ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ವಿಶೇಷ ಸಭೆ: ಕೋಟ ಶ್ರೀನಿವಾಸ ಪೂಜಾರಿ ಪ್ರತಿಕ್ರಿಯಿಸಿ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಈ ಯೋಜನೆ ಅನುಷ್ಠಾನಕ್ಕೆ ತರುತ್ತಿದ್ದು, ಗ್ರಾ.ಪಂ.ಮಟ್ಟದಲ್ಲಿ ಮಾಹಿತಿ ಸಂಗ್ರಹಿಸಿ ಜಿಲ್ಲಾಧಿಕಾರಿ ಅಧ್ಯಕ್ಷತೆ ಸಮಿತಿ ಹಂಚಿಕೆ ಮಾಡುತ್ತದೆ ಎಂದರು. ಅವ್ಯವಹಾರದ ಬಗ್ಗೆ ಯಾವುದೇ ತನಿಖೆಗೆ ಸರ್ಕಾರ ಸಿದ್ಧವಿದೆ. ದಕ್ಷತೆ, ಪಾರದರ್ಶಕತೆ, ಸದ್ಬಳಕೆಗಾಗಿ ವಿಸ್ತೃತ ಚರ್ಚೆಗೆಂದು ಇಷ್ಟರಲ್ಲೇ ವಿಶೇಷ ಜಂಟಿ ಸಭೆ ಕರೆಯುವೆ ಎಂಬ ಆಶ್ವಾಸನೆ ನೀಡಿದರು.

70599 ಲಕ್ಷ ರೂ.ಗೂ ಅಧಿಕ ವೆಚ್ಚ: ಭೂ ಒಡೆತನ ಯೋಜನೆಯಡಿ ಕಳೆದ ಐದು ವರ್ಷ (2016–17 ರಿಂದ 2020–21) ಗಳಲ್ಲಿ 70599.36 ಲಕ್ಷ ರೂ. ವೆಚ್ಚ ಮಾಡಿ 9106.13 ಎಕರೆ ಖರೀದಿಸಿ 7038 ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. 1990–91ರಿಂದ 2021ರವರೆಗೆ ಒಟ್ಟು 41509 ಫಲಾನುಭವಿಗಳಿಗೆ 68231.14 ಎಕರೆ ಜಮೀನು ಖರೀದಿಸಿ ಹಂಚಿಕೆ ಮಾಡಲಾಗಿದೆ ಎಂದು ಕೋಟ ಶ್ರೀನಿವಾಸ ಪೂಜಾರಿ ಮಾಹಿತಿ ನೀಡಿದರು.

ಆಧಾರ: ವಿಜಯವಾಣಿ, ದಿನಾಂಕ: 26.03.2022

120. ಮೇಕೆದಾಟು : ಪರಿಷತ್‌ನಲ್ಲೂ ಖಂಡನಾ ನಿರ್ಣಯ ಅಂಗೀಕಾರ

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಅಂಗೀಕರಿಸಿದ್ದ ಖಂಡನಾ ನಿರ್ಣಯಕ್ಕೆ ಪ್ರತಿಖಂಡನಾ ನಿರ್ಣಯವನ್ನು ಮೇಲ್ಮನೆಯಲ್ಲೂ ಅಂಗೀಕರಿಸಿದೆ.

ಇದರ ಜೊತೆಗೆ ವಿಧಾನಸಭೆಯಲ್ಲಿ ನದಿ ಜೋಡಣೆಯ ಡಿಪಿಆರ್ (ವಿಸ್ತೃತ ಯೋಜನಾ ವರದಿ) ಅನ್ನು ಕರ್ನಾಟಕ ಸರ್ಕಾರ ಒಪ್ಪುವವರೆಗೆ ಅನುಮೋದಿಸಬಾರದು ಎಂಬ ನಿರ್ಣಯವನ್ನು ತಿದ್ದುಪಡಿಯೊಂದಿಗೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಕಲಾಪ ಪ್ರಾರಂಭ ಆಗುತ್ತಿದ್ದಂತೆ ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸರ್ಕಾರ ತೆಗೆದುಕೊಂಡಿದ್ದ ನಿರ್ಣಯಕ್ಕೆ ಖಂಡನಾ ನಿರ್ಣಯ ಮಂಡಿಸಲಾಯಿತು. ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ನಿರ್ಣಯ ಮಂಡಿಸಿದರು. ಸರಕಾರದ ನಿರ್ಣಯ ಸ್ವಾಗತಿಸಿದ ಪ್ರತಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್, ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ ಪಾದಯಾತ್ರೆ ಮಾಡಿತ್ತು. ಸರಕಾರದ ನಿರ್ಣಯವನ್ನು ಸರ್ವಾನುಮತದಿಂದ ಕಾಂಗ್ರೆಸ್ ಒಪ್ಪಿದೆ ಎಂದರು.

ಮೇಕೆದಾಟು ವಿಚಾರವಾಗಿ ಖಂಡನಾ ನಿರ್ಣಯ ಅಂಗೀಕಾರದ ವೇಳೆ ಮಾತನಾಡಲು ಅವಕಾಶ ಕೊಡುವಂತೆ ಜೆಡಿಎಸ್‌ನ ಮರಿತಿಬ್ಬೇಗೌಡ ಒತ್ತಾಯಿಸಿದರು. ಆದರೆ, ಪ್ರತಿಪಕ್ಷ ನಾಯಕರು ಮಾತಾಡಿದ್ದಾರೆ, ಬೇರೆಯವರಿಗೆ ಅವಕಾಶ ಇಲ್ಲ ಎಂದು ಸಭಾಪತಿ ನಿರಾಕರಿಸಿದರು. ಇದಕ್ಕೆ ಕೋಪಗೊಂಡ ಮರಿತಿಬ್ಬೇಗೌಡ, ಅವರು ಮಾತ್ರ ಮಾತಾಡಬೇಕಾ? ಜೆಡಿಎಸ್‌ನಿಂದ ಮಾತನಾಡುತ್ತೇನೆ ಎಂದರು. ಇದಕ್ಕೆ ಆಕ್ಷೇಪಿಸಿದ ಸಭಾಪತಿ, ಯಾವಾಗಲು ಎಲ್ಲದಕ್ಕೂ ವಿರೋಧ ಮಾಡ್ತೀಯಾ ನೀನು ಎಂದು ಆಕ್ರೋಶ ಹೊರ ಹಾಕಿದರು. ಆಯ್ತು ಬಿಡಿ ನಾನು ಮಾತಾಡೋಲ್ಲ ಎಂದು ಮರಿತಿಬ್ಬೇಗೌಡ, ಸಭಾಪತಿಗಳ ಮೇಲೆ ಸಿಟ್ಟಾಗಿ ಕುಳಿತರು.

ಪ್ರಶ್ನೋತ್ತರ ಅವಧಿ ಮುಗಿದ ಬಳಿಕ ಮರಿತಿಬ್ಬೇಗೌಡ ಅವರಿಗೆ ಖಂಡನಾ ನಿರ್ಣಯದ ಬಗ್ಗೆ ಮಾತಾಡಲು ಸಭಾಪತಿ ಅವಕಾಶ ಕಲ್ಪಿಸಿದರು. ಆದರೆ, ಎಲ್ಲ ಮುಗಿದು ಹೋಗಿದೆ ನಾನು ಮತ್ತೆ ಮಾತನಾಡೋದಿಲ್ಲ ಎಂದು ಕೈ ಮುಗಿದು ಕುಳಿತರು.

ಆಧಾರ: ವಿಶ್ವವಾಣಿ, ದಿನಾಂಕ: 26.03.2022

121. ಗರ್ಭಿಣಿಯರ ಮನೆಗೆ ಊಟ ಕೊಡಿ : ಸ್ಪೀಕರ್

ಮಾತೃಪೂರ್ಣ ಯೋಜನೆಯಡಿ ಗರ್ಭಿಣಿಯರು ಮತ್ತು ಬಾಣಂತಿಯರು ಅಂಗನವಾಡಿ ಕೇಂದ್ರಕ್ಕೆ ತೆರಳಿ ಪೌಷ್ಟಿಕ ಆಹಾರ ಪಡೆದುಕೊಳ್ಳುವ ಆದೇಶಕ್ಕೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಗರಂ ಆಗಿದ್ದು, ನಿಯಮವನ್ನು ಸರಿಪಡಿಸುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಿಗೆ ಸೂಚಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್ ಸದಸ್ಯ ರಾಜೇಗೌಡ, ಸರ್ಕಾರದ ನಿಯಮದಿಂದ ಮಲೆನಾಡು ಭಾಗದಲ್ಲಿ ಗರ್ಭಿಣಿಯರು, ಬಾಣಂತಿಯರು ಊಟಕ್ಕಾಗಿ 2–3 ಕಿ.ಮೀ. ದೂರ ಹೋಗಬೇಕಾಗಿದೆ. ಕಚ್ಚಾರಸ್ತೆಯಲ್ಲಿ ಪ್ರತಿನಿತ್ಯ ಬರಲು ಸಾಧ್ಯವೇ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್, ಈ ಮೊದಲು ಗರ್ಭಿಣಿಯರ, ಬಾಣಂತಿಯರ ಮನೆಗೆ ಪೌಷ್ಟಿಕ ಆಹಾರ ನೀಡಲಾಗುತ್ತಿತ್ತು. ಆದರೆ, ಮನೆಯಲ್ಲಿ ಇತರೆ ಸದಸ್ಯರು ಅದನ್ನು ಸೇವಿಸುತ್ತಾರೆ ಎಂಬ ಕಾರಣಕ್ಕಾಗಿ 2017ರಲ್ಲಿ ನಿಯಮ ಬದಲಾವಣೆ ಮಾಡಲಾಯಿತು. ಅಧಿಕಾರಿಗಳ ವರದಿ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ ಎಂದರು.

ಆಗ ಸಭಾಧ್ಯಕ್ಷರು ಮಧ್ಯಪ್ರವೇಶಿಸಿ, ಗರ್ಭಿಣಿಯರು, ಬಾಣಂತಿಯರು, ಅಂಗನವಾಡಿಗೆ ಹೋಗಿ ಊಟ ಮಾಡಿಕೊಂಡು ಬರಬೇಕು ಎಂದರೆ ಹೇಗೆ? ಅದು ಸಾಧ್ಯವಾಗುತ್ತಾ ಇಲ್ಲವೋ ಎಂಬುದು

ಸಾಮಾನ್ಯ ಜ್ಞಾನ ಇಲ್ಲವೇ? ಕಾಮನ್‌ಸೆನ್ಸ್ ಇರುವವರು ಯಾರೂ ಇಂತಹ ಆದೇಶ ಹೊರಡಿಸುವುದಿಲ್ಲ. ಬಾಣಂತಿಯರು ಹಾಸಿಗೆಯಿಂದ ಏಳಲು ಎಷ್ಟು ಸಮಯ ಬೇಕು ಎಂಬುದು ನಮಗೆಲ್ಲಾ ಗೊತ್ತಿದೆ. ವರದಿಯಲ್ಲಿ ಸ್ವಾರ್ಥ ಇರಬಹುದು. ಒಂದು ವೇಳೆ ಕೇಂದ್ರದ ಮಾರ್ಗಸೂಚಿ ಇದ್ದರೆ ಕೇಂದ್ರಕ್ಕೆ ಪತ್ರ ಬರೆಯಿರಿ. ಕೇಂದ್ರದಲ್ಲಿ ಕುಳಿತುಕೊಂಡವರಿಗೆ ವ್ಯವಹಾರಿಕ ಜ್ಞಾನ ಇರುವುದಿಲ್ಲವೇ? ತಕ್ಷಣ ಆದೇಶವನ್ನು ಬದಲಿಸಬೇಕು ಎಂದು ಸೂಚಿಸಿದರು.

ಕಾಂಗ್ರೆಸ್ ಸದಸ್ಯ ರಮೇಶ್ ಕುಮಾರ್ ಮಾತನಾಡಿ, ನಿಮ್ಮ ನಿಲುವಿಗೆ ಅಭಿನಂದಿಸುತ್ತೇನೆ. ಮಾನವೀಯತೆಯಿಂದ ಅನುಕೂಲ ಮಾಡಿಕೊಡಬೇಕು. ಅಧಿಕಾರಿಗಳು ಕಸಾಯಿಖಾನೆಯಲ್ಲೂ ಇರಲು ನಾಲಾಯಕ್, ಇವರಿಗಿಂತ ಕಸಾಯಿಖಾನೆಯಲ್ಲಿರುವವರೇ ಉತ್ತಮ. ಅವರಿಗೆ ಮಾನವೀಯತೆ ಇರುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ಶಾಸಕಿಯರಾದ ಅಂಜಲಿ ನಿಂಬಾಳ್ಕರ್, ರೂಪಕಲಾ ಅವರು ಗರ್ಭಿಣಿಯರು, ಬಾಣಂತಿಯರಿಗೆ ನೀಡುವ ಪೌಷ್ಟಿಕ ಆಹಾರದ ನ್ಯೂನತೆಗಳನ್ನು ಸರಿಪಡಿಸುವಂತೆ ಒತ್ತಾಯಿಸಿದರು. ಸಭಾಧ್ಯಕ್ಷರ ಮತ್ತು ಶಾಸಕರ ಒತ್ತಾಯಕ್ಕೆ ಮಣಿದ ಸಚಿವರು, ಈ ವ್ಯವಸ್ಥೆಯನ್ನು ಕೊನೆಗಾಣಿಸಿ, ಬದಲಾವಣೆ ಮಾಡಲಾಗುವುದು ಎಂದು ಆಶ್ವಾಸನೆ ನೀಡಿದರು.

ಆಧಾರ: ಕನ್ನಡಪ್ರಭ, ದಿನಾಂಕ: 26.03.2022

122. ಚುನಾವಣೆ ಸುಧಾರಣೆಗೆ ಕರ್ನಾಟಕ ಮೊದಲ ಹೆಜ್ಜೆ

ಚುನಾವಣೆಗಳು 'ಜನಾದೇಶ'ವಾಗುವ ಬದಲು 'ಧನಾದೇಶ' ಆಗುತ್ತಿವೆ. ಚುನಾವಣೆಗಳಲ್ಲಿ ಹಣದ ಪಾತ್ರವು ಇಡೀ ವ್ಯವಸ್ಥೆಗೆ ರೋಗ ತರುತ್ತಿದೆ. ಚುನಾವಣಾ ಅಕ್ರಮಗಳು ಪ್ರಜಾಪ್ರಭುತ್ವಕ್ಕೆ ನಿಧಾನಗತಿಯ ಪಾರ್ಶ್ವವಾಯು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಆತಂಕ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಚುನಾವಣಾ ವ್ಯವಸ್ಥೆ ಸುಧಾರಣೆ ಅಗತ್ಯತೆ ಕುರಿತು ವಿಶೇಷ ಚರ್ಚೆಗೆ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಚುನಾವಣೆಯಲ್ಲಿ ಅಪರಾಧಿಗಳ ಪಾತ್ರ, ಜಾತಿ–ಧರ್ಮ–ಲಿಂಗ ವಿವಿಧ ಪ್ರಭಾವಗಳು ಚುನಾವಣೆಗಳನ್ನು ರೋಗಗ್ರಸ್ತವಾಗಿಸಿವೆ. ಚುನಾವಣೆಯ ಸಂದರ್ಭದಲ್ಲಿ ಮತ ಗಿಟ್ಟಿಸಲು ಕೊಂಡೊಯ್ಯುತ್ತಿದ್ದ ನೂರಾರು ಕೋಟಿ ನಗದು ಹಣ, ಮದ್ಯ, ಆಹಾರ ಪದಾರ್ಥಗಳು, ಮಾದಕ ದ್ರವ್ಯಗಳು, ಮತದಾರರನ್ನು ಆಕರ್ಷಿಸಲು ನೀಡಲಾಗುತ್ತಿರುವ ಉಡುಗೊರೆ, ಇತ್ಯಾದಿಗಳನ್ನು ಆಯೋಗದ ಅಧಿಕಾರಿಗಳು ವಶಪಡಿಸಿ ಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಘಟನೆಗಳು ಹೊಸದಲ್ಲದಿದ್ದರೂ ನ್ಯಾಯಯುಕ್ತತೆಯ ಬಗ್ಗೆ ಆತಂಕವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

ರಾಜಕೀಯದ ಅಧೋಗತಿಯೋ ಭಾರತದ ಚುನಾವಣಾ ವ್ಯವಸ್ಥೆಯ ರೋಗಗ್ರಸ್ಥ ಸ್ಥಿತಿಯೋ ತಿಳಿಯದು ಅಥವಾ ಇವೆರಡೂ ಆಗಿದ್ದರೆ ರೋಗ ಉಲ್ಬಣಿಸುವ ಮೊದಲೇ ಚಿಕಿತ್ಸೆಯನ್ನು ಮಾಡಬೇಕಾದವರು ಶಾಸನ ಸಭೆಯ ಸದಸ್ಯರುಗಳಲ್ಲದೆ ಮತ್ಯಾರು? ನಮ್ಮ ಚುನಾವಣಾ ಪ್ರಕ್ರಿಯೆಯು ನ್ಯಾಯಯುತ ಮತ್ತು ನಿರ್ಭೀತವಾಗಿರುವ ರಾಷ್ಟ್ರವನ್ನು ನಿರ್ಮಿಸುವುದು ನಮ್ಮ ಸದುದ್ದೇಶವಾಗಿದೆ ಎಂದು ಹೇಳಿದರು.

ಚುನಾವಣೆಗಳು ಕಲುಷಿತವಾದರೆ, ಪ್ರಜಾಪ್ರಭುತ್ವವೆಂಬ ವೃಕ್ಷ ಉಳಿಯುವುದಿಲ್ಲ ಹಾಗೂ ಬೆಳೆಯಲಾರದು ಮತ್ತು ಈ ವೃಕ್ಷ ಇನ್ನೂ ಹೆಮ್ಮರವಾಗಿ ಬೆಳೆಯಬೇಕಾದರೆ ಒಳ್ಳೆಯ ನೀರನ್ನು ಉಣಿಸಬೇಕಾದುದು ನಮ್ಮ ಜವಾಬ್ದಾರಿ ಎಂದರು.

ಪ್ರಜಾಪ್ರಭುತ್ವದ ಚುನಾವಣೆಗಳೆಂಬ ಐಕ್ಯಮತದ ಹಬ್ಬಗಳು ಸಂಭ್ರಮ, ಶ್ರದ್ಧೆ ಮತ್ತು ಪರಿಶುದ್ಧವಾಗಿ ನಡೆಯಬೇಕು ಎನ್ನುವುದು ಪ್ರತಿಯೊಬ್ಬರ ಕಳಕಳಿ. ಈ ನಿಟ್ಟಿನಲ್ಲಿ ಕರ್ನಾಟಕವು ಚುನಾವಣಾ ಸುಧಾರಣೆಗೆ ದೇಶದಲ್ಲಿ ಮೊಟ್ಟ ಮೊದಲ ಹೆಜ್ಜೆ ಇಡಲು ಮತ್ತು ಅದಕ್ಕೆ ಎಲ್ಲರೂ ಚರ್ಚೆಯಲ್ಲಿ ಭಾಗಿಯಾಗಿ ಎಂದು ಮನವಿ ಮಾಡಿದರು.

ಚುನಾವಣಾ ಸುಧಾರಣೆಗಳ ಬಗ್ಗೆ ಸ್ಪೀಕರ್ ಸಲಹೆಗಳು

- **ಚುನಾವಣೆಗಳಲ್ಲಿ ದುಂದು ವೆಚ್ಚಕ್ಕೆ ಕಡಿವಾಣ:** ಚುನಾವಣಾ ಪ್ರಚಾರ ಪ್ರಕ್ರಿಯೆಯನ್ನು ರಾಷ್ಟ್ರೀಕರಣ ಮಾಡಿ ಆಯೋಗವೇ ವೆಚ್ಚ ಭರಿಸುವಂತೆ ಮಾಡುವುದು.
- ಸ್ಪರ್ಧಿಸಿರುವ ಅಭ್ಯರ್ಥಿಗಳಿಗಾಗಿ ಪ್ರಚಾರ ಮಾಡಲು ಅವಕಾಶವಿರುವ ಸಾಮಾನ್ಯ ಸಾರ್ವಜನಿಕ ಸಭೆಗಳನ್ನು ಒದಗಿಸುವುದು.
- ಮಾಧ್ಯಮಗಳಲ್ಲಿ ಪ್ರಚಾರಕ್ಕೆ ಸಮಾನ ಅವಕಾಶ ಒದಗಿಸುವುದು.
- ಸಾಮಾಜಿಕ ಜಾಲತಾಣಗಳಲ್ಲೂ ಸೆನ್ಸಾರ್ ಮಾಡಿದ ಸಾಮಗ್ರಿಗಳನ್ನು ಪ್ರಚಾರಕ್ಕೆ ವ್ಯವಸ್ಥೆ ಮಾಡುವುದು.
- ಚುನಾವಣಾ ಕ್ಷೇತ್ರ, ಜಿಲ್ಲೆ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಕೃತ ಚುನಾವಣಾ ಪ್ರಚಾರವನ್ನು ಚುನಾವಣಾ ಆಯೋಗ ನೇಮಿಸುವುದು ಹಾಗೂ ಉಸ್ತುವಾರಿ ಮಾಡುವುದು.
- ವಿಶೇಷ ಚುನಾವಣಾ ಕೋರ್ಟ್‌ಗಳ ರಚನೆ ಮಾಡಿ ಚುನಾವಣೆಗಳಲ್ಲಿ ಕ್ರಿಮಿನಲ್ ಆಪಾದನೆ ಹೊತ್ತ ಶಾಸಕರ ಪ್ರಕರಣಗಳನ್ನು ಆರು ತಿಂಗಳೊಳಗೆ ಪೂರ್ಣಗೊಳಿಸುವುದು.
- ಒಂದು ಮತಕ್ಷೇತ್ರದಲ್ಲಿ ಕನಿಷ್ಠ ಮಿತಿಯಲ್ಲಿ ಚುನಾವಣಾ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಲು ಶಾಸನ ರೂಪಿಸುವುದು.
- ಈ ರಾಜಕೀಯ ಪಕ್ಷಗಳ ಸಂಖ್ಯೆ ಮಿತಿಗೊಳಿಸುವುದು.
- ಕಡ್ಡಾಯ ಮತದಾನ ವ್ಯವಸ್ಥೆ ಜಾರಿಗೊಳಿಸುವುದಕ್ಕಾಗಿ ಮತ ಹಾಕದ ಮತದಾರನಿಗೆ ಸೌಲಭ್ಯಗಳ ಕಡಿತ ಮಾಡುವುದು.
- ಒಂದು ರಾಷ್ಟ್ರ ಒಂದು ಚುನಾವಣೆಯ ಮೂಲಕ ಚುನಾವಣಾ ವೆಚ್ಚವನ್ನು ಕಡಿತಗೊಳಿಸುವುದು.
- ರಾಜಕೀಯ ಪಕ್ಷಗಳೊಳಗಿನ ಆಂತರಿಕ ಚುನಾವಣೆಗಳಲ್ಲೂ ಪಾರದರ್ಶಕತೆ ಮತ್ತು ಸ್ವಯಂ ಶಿಸ್ತು ಇರಬೇಕು.
- ರಾಜಕೀಯ ಪಕ್ಷಗಳ ಪ್ರಣಾಳಿಕೆಯ ಅನುಷ್ಠಾನದಲ್ಲಿ ಮತದಾರರು ಭಾಗಿಯಾಗಿ ಸಾಮಾಜಿಕ ಪರಿಶೋಧನೆಗೊಳಪಡಿಸುವುದು, ಭ್ರಷ್ಟಾಚಾರದ ನಿರ್ಮೂಲನೆಗಾಗಿ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧನೆಗಳನ್ನು ವಿಧಿಸುವುದು.
- ಶುದ್ಧಚಾರಿತ್ರ್ಯ ಇರುವ ಮತ್ತು ಕ್ರಿಮಿನಲ್ ಹಿನ್ನೆಲೆ ಇಲ್ಲದೆ ಸಾಮಾಜಿಕ ಕಾಳಜಿ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ರಾಜಕೀಯ ಪಕ್ಷಗಳು ಜವಾಬ್ದಾರಿ ವಹಿಸಬೇಕು.
- ಅಧಿಸೂಚನೆಯ ನಂತರ ಬೇರೆ ರಾಜಕೀಯ ಪಕ್ಷದಿಂದ ಬದಲಾದ ಅಭ್ಯರ್ಥಿಗಳನ್ನು ಕಣಕ್ಕಿಳಸದಂತೆ ನಿರ್ಧರಿಸುವುದು.
- ರಾಜಕೀಯ ಪಕ್ಷಗಳು, ಸಂಸ್ಥೆಗಳು 'ಮಾರಾಟಕ್ಕಾಗಿ ಮತ' ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಲು 'ನನ್ನ ಮತ ಮಾರಾಟಕ್ಕಿಲ್ಲ' ಎಂಬ ರಾಷ್ಟ್ರೀಯ ಅಭಿಯಾನವನ್ನು ಆರಂಭಿಸುವುದು.
- ಚುನಾವಣಾ ಆಯೋಗವು ರಾಜಕೀಯ ಪಕ್ಷಗಳ ಮತ್ತು ಸಾಮಾಜಿಕ ನಿಧಿಯನ್ನು ಸಾಮಾಜಿಕ ಸಂಸ್ಥೆಗಳ ಮೂಲಕ ಲೆಕ್ಕ ಪರಿಶೋಧನೆ ಮಾಡಲು ಕ್ರಮ ಕೈಗೊಳ್ಳುವುದು.
- ಚುನಾವಣಾ ಸುಧಾರಣೆಗಳನ್ನು ಪ್ರಜಾಪ್ರಾತಿನಿಧ್ಯ ಕಾಯ್ದೆ ಸೇರಿದಂತೆ ಜಾರಿಗೆ ತರಲು ಸಂಬಂಧಿಸಿದ ಕಾನೂನುಗಳನ್ನು ತಿದ್ದುಪಡಿ ಮಾಡುವುದು.

- ಎರಡು ಅಥವಾ ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸದೆ ಇರುವಂತಹ ಹಾಗೂ ನಿಗದಿತ ಸ್ಥಾನ ಗಳಿಸದ ರಾಜಕೀಯ ಪಕ್ಷಗಳನ್ನು ಅಮಾನ್ಯತೆಗೊಳಿಸುವುದು.
- ಎಲ್ಲಾ ಚುನಾವಣೆಗಳಿಗೆ ಅನ್ವಯವಾಗುವಂತಹ ಏಕ ಮತದಾರರ ಪಟ್ಟಿ ಪ್ರಕಟಿಸಲು ಕ್ರಮವಹಿಸುವುದು.

ಆಧಾರ: ಉದಯವಾಣಿ, ದಿನಾಂಕ: 27.03.2022

ದಿನಾಂಕ: 28.03.2022 ರಂದು ಸನ್ಮಾನ್ಯ ಸಭಾಧ್ಯಕ್ಷರು ಸದನದಲ್ಲಿ "ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ" ವಿಶೇಷ ಚರ್ಚೆ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ ವಿಷಯವನ್ನು ಮಂಡಿಸುತ್ತಿರುವ ಸಂದರ್ಭ;

ಮಾನ್ಯ ಸಭಾಧ್ಯಕ್ಷರ ಪ್ರಸ್ತಾವಿಕ ಭಾಷಣ:–

ಚುನಾವಣಾ ವ್ಯವಸ್ಥೆ ಸುಧಾರಣೆಗಳ ಅಗತ್ಯತೆ

ಸಭಾನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರೇ,

ಸನ್ಮಾನ್ಯ ಪ್ರತಿ ಪಕ್ಷದ ನಾಯಕರೇ,

ಸನ್ಮಾನ್ಯ ಉಪ ಸಭಾಧ್ಯಕ್ಷರೇ,

ಸನ್ಮಾನ್ಯ ಸಚಿವ ಸಂಪುಟದ ಸದಸ್ಯರುಗಳೇ,

ಹಾಗೂ

ಸನ್ಮಾನ್ಯ ಶಾಸಕ ಮಿತ್ರರೇ,

ತಮ್ಮೆಲ್ಲರ ಗಮನಕ್ಕೆ ತಂದಿರುವಂತೆ ಈಗ ಅತ್ಯಂತ ಪ್ರಚಲಿತವಾಗಿ ಚರ್ಚೆಯಾಗುತ್ತಿರುವ ವಿಷಯ "ಚುನಾವಣಾ ವ್ಯವಸ್ಥೆ ಸುಧಾರಣೆಗಳ ಅಗತ್ಯತೆ" ಬಗ್ಗೆ ಒಂದು ವಿಶೇಷ ಚರ್ಚೆಯನ್ನು ಹಮ್ಮಿಕೊಂಡು ತಮ್ಮೆಲ್ಲರನ್ನು ಉದ್ದೇಶಿಸಿ ಮಾತನಾಡುವುದು ನನಗೆ ಒದಗಿರುವ ಅವಕಾಶವೆಂದು ಭಾವಿಸಿ ನನ್ನ ಪ್ರಾಸ್ತಾವಿಕ ನುಡಿಗಳನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

1. ಭಾರತ ದೇಶವು, ವಿವಿಧ ಧರ್ಮಗಳ ಜಾತಿಗಳ ಹಾಗೂ ಭಾಷೆಗಳಿಂದ ಕೂಡಿದ್ದು, ಭವ್ಯ ಪರಂಪರೆಯ ಹಿನ್ನೆಲೆ ಇರುವಂತಹ ವಿಶ್ವದಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವವನ್ನು ಆಚರಣೆಯಲ್ಲಿಟ್ಟುಕೊಂಡು ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದೆ.

2. 1950ರಲ್ಲಿ ಅಂಗೀಕರಿಸಲ್ಪಟ್ಟ ಸಂವಿಧಾನದಲ್ಲಿ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಅಳವಡಿಸಿಕೊಂಡು ಭಾರತ ದೇಶವನ್ನು ಉತ್ತಮ ಆಡಳಿತ ಮತ್ತು ಅಭಿವೃದ್ಧಿಯ ದೇಶವನ್ನಾಗಿ ರೂಪಿಸಲು ಘೋಷಿಸಲಾಗಿದೆ. ಈ ಸಂವಿಧಾನದ ಮೂಲ ಉದ್ದೇಶದ ಪ್ರಸ್ತಾವನೆಯಲ್ಲಿ;

"ಭಾರತದ ಪ್ರಜೆಗಳಾದ ನಾವು ಈ ದೇಶವನ್ನು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ, ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಸಮಸ್ತ ನಾಗರೀಕರಿಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವವನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕವಾಗಿ ಸಂಕಲ್ಪ ಮಾಡಿ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ನಮಗೆ ನಾವೇ ಅದನ್ನು ಅರ್ಪಿಸಿಕೊಂಡಿದ್ದೇವೆ" ಎನ್ನುವ ಪ್ರಸ್ತಾವನೆಯ ಭಾಗವನ್ನು ಸ್ಪಷ್ಟವಾಗಿ ಉಲ್ಲೇಖಿಸ ಬಯಸುತ್ತೇನೆ.

3. ಸಂವಿಧಾನದ ಸರಿಸಮಾನತೆ ಎಂಬ ಈ ಮೂಲೋದ್ದೇಶ ಆರ್ಟಿಕಲ್ 14ರಲ್ಲಿದೆ. ಸರಿಸಮಾನತೆ ಎಂಬುದು ನಮ್ಮ ಸಂವಿಧಾನ ಸೌಧದ ಭದ್ರ ಬುನಾದಿಯ ಮೂಲೆಗಲ್ಲು (ಅಠಡಿಟಿಜಡಿ ಖಣಠಟಿಜ) ಈ ಸರಿಸಮಾನತೆಯ ಬುನಾದಿಯ ಮೇಲೆ ಕಟ್ಟಿದ ರಾಜ್ಯಾಡಳಿತ ವ್ಯವಸ್ಥೆಯು 'ಪ್ರಜಾಸತ್ತೆ'ಯ ಆಡಳಿತ ವ್ಯವಸ್ಥೆ. ಇಂಥ ಆಡಳಿತ ಯಂತ್ರವನ್ನು ರಚಿಸಲು ದೇಶದ ನೂರಾರು ಕೋಟಿ ಪ್ರಜೆಗಳೇ ತಮ್ಮ ಒಡೆತನವನ್ನು ಕಾರ್ಯಗತಗೊಳಿಸಲು ತಮ್ಮ ಪ್ರತಿನಿಧಿಗಳನ್ನು 'ಚುನಾವಣೆ'ಯ ಮೂಲಕ ಆಯ್ಕೆ ಮಾಡಿ ಪ್ರತಿಯೊಬ್ಬರಲ್ಲಿರುವ ಸಾರ್ವಭೌಮಾಧಿಕಾರವನ್ನು 'ಪ್ರಜಾಪ್ರತಿನಿಧಿ'ಗಳಿಗೆ ಕೊಡುತ್ತಾರೆ. ಆ ಪ್ರಜಾಪ್ರತಿನಿಧಿಗಳು ಪ್ರಾಮಾಣಿಕವಾಗಿ ಆಯ್ಕೆಯಾಗಿ, ಪ್ರಜೆಗಳ ಸೇವಕರಾಗಿ ಶಾಸನಸಭೆಗಳನ್ನು ನಡೆಸಬೇಕು. ಅಂದರೆ ಪ್ರಜಾಪ್ರತಿನಿಧಿಗಳನ್ನು ಆರಿಸುವ ಪ್ರಕ್ರಿಯೆಯೆ 'ಚುನಾವಣೆ'. ಚುನಾವಣೆಗಳು ಪ್ರಜಾಪ್ರಾತಿನಿಧ್ಯ ಕಾಯ್ದೆ 1951ರ ಪ್ರಕಾರವಾಗಿಯೆ ನಡೆಯಬೇಕಾಗಿದೆ.

4. ಭಾರತದಲ್ಲಿ 17 ಸಾರ್ವತ್ರಿಕ ಲೋಕಸಭಾ, ಕರ್ನಾಟಕದಲ್ಲಿ 15 ಸಾರ್ವತ್ರಿಕ ವಿಧಾನ ಸಭಾ ಹಾಗೂ ವಿವಿಧ ರಾಜ್ಯಗಳಲ್ಲಿ ಸರಾಸರಿ 15 ವಿಧಾನ ಸಭಾ ಚುನಾವಣೆಗಳನ್ನು ನಡೆಸಿರುವುದರ ಜೊತೆಗೆ ರಾಜ್ಯಸಭಾ ಮತ್ತು ವಿಧಾನ ಪರಿಷತ್‌ನ ದ್ವೈವಾರ್ಷಿಕ ಚುನಾವಣೆಗಳು ನಡೆದಿವೆ. ಪ್ರತಿ ಚುನಾವಣೆಯು ಪ್ರಜಾಪ್ರಭುತ್ವದ ಹಬ್ಬವಾಗಿ ಮಾರ್ಪಟ್ಟಿವೆ. ತ್ರಿಸ್ಥರದ ಸ್ಥಳೀಯ ಚುನಾವಣೆಗಳ ಹಬ್ಬಗಳನ್ನು ಸಹ ಅಭೂತಪೂರ್ವವಾಗಿ ನಡೆಸಿದ್ದೇವೆ ಎಂಬ ಹೆಮ್ಮೆ ಇದ್ದರೂ, ಚುನಾವಣೆಗಳ ಹಿಂದೆ ಇರುವ ಸಾಹಸ ಮಾತ್ರ ಅಸಾಧಾರಣನೀಯ.

5. ಚುನಾವಣೆ ಒಂದು ಅಭೂತಪೂರ್ವ ಪ್ರಜಾಪ್ರಭುತ್ವದ ಪ್ರಯೋಗ. ಭಾರತವು ವಿಶ್ವದ ಇತಿಹಾಸದಲ್ಲೇ ಅತೀ ಬೃಹತ್ ಗಾತ್ರದ ಚುನಾವಣೆ ವ್ಯವಸ್ಥೆ ಹೊಂದಿದೆ ಮತ್ತು ಯಶಸ್ವಿಯಾಗಿ ನಿರ್ವಹಿಸಿ ವಿಶ್ವಮಾನ್ಯತೆ ಪಡೆದಿದೆ. ಭಾರತದ ಪ್ರಜಾಪ್ರಭುತ್ವ ಹಾಗೂ ಚುನಾವಣಾ ಆಯೋಗಕ್ಕೆ ಇದು ಹೆಮ್ಮೆ ಪಡುವ ವಿಷಯವಾಗಿರುವುದರಲ್ಲಿ ಅನುಮಾನವಿಲ್ಲ. ಈ ಹೆಮ್ಮೆ 1970ರ ನಂತರದ ದಶಕಗಳ ಚುನಾವಣೆಗಳಿಂದ ವಿಭಿನ್ನ ದಾರಿ ತುಳಿದಿರುವುದು ವಿಷಾದನೀಯ. ಇತ್ತೀಚೆಗೆ ಚುನಾವಣೆಗಳು ಹಣ, ಜಾತಿ, ತೋಳು ಬಲದಿಂದ ಕೂಡಿರುವುದು ಸರ್ವರಿಗೂ ತಿಳಿದಿರುವ ವಿಷಯ. ಇವು ಗ್ರಾಮ, ಸಮಾಜ

ಮತ್ತು ಕುಟುಂಬಗಳಲ್ಲಿ ವೈಷಮ್ಯದ ವಾತಾವರಣವನ್ನು ಸೃಷ್ಟಿಸುತ್ತಿರುವುದರ ಜೊತೆಗೆ ಸಾವು ನೋವುಗಳಿಗೂ ಕಾರಣವಾಗಿರುವುದು ವಿಷಾದ ಸಂಗತಿಯಾಗಿದೆ.

6. ಚುನಾವಣಾ ಆಯೋಗ ಜಾರಿಗೊಳಿಸುವ ಚುನಾವಣಾ ನೀತಿ ಸಂಹಿತೆಯನ್ನು ಗಾಳಿಗೆ ತೂರಿ ಪರಸ್ಪರ ಕೀಳು ನಿಂದನೆಗಳು, ದ್ವೇಷ ದಳ್ಳುರಿಗಳನ್ನುಂಟು ಮಾಡುವ ಭಾಷಣಗಳು, ಎಲ್ಲೆ ಮೀರಿದ ಚುನಾವಣಾ ಅಕ್ರಮಗಳು ಹೆಚ್ಚಾಗಿವೆ. ಕ್ರಿಮಿನಲ್ ಆಪಾದನೆಗೊಳಗಾದವರ ಸ್ಪರ್ಧೆ ಮುಂದುವರೆದಿದೆ.

7. ಹಣದ ವೆಚ್ಚದ ದೃಷ್ಟಿಯಿಂದ ನೋಡಿದರೆ ನಮ್ಮ ಚುನಾವಣೆಗಳು ಅತ್ಯಂತ ದುಬಾರಿ ಎಂಬುದು ಅಕ್ಷರಶಃ ನಿಜ. ಒಂದೊಂದು ಮಹಾಚುನಾವಣೆಯ ವೆಚ್ಚ ಒಂದೊಂದು ರಾಜ್ಯವನ್ನೆ ಅಭಿವೃದ್ಧಿ ಮಾಡಬಹುದಾಗಿದೆ. ಚುನಾವಣೆಗಳಲ್ಲಿ ಹಣದ ಪಾತ್ರ ನಿಗ್ರಹಿಸಲು ಚುನಾವಣಾ ಆಯೋಗ ಲೋಕಸಭಾ ಸ್ಪರ್ಧಿಯ ವೆಚ್ಚಕ್ಕೆ ರೂ.95/–ಲಕ್ಷ ಮತ್ತು ವಿಧಾನಸಭಾ ಸ್ಪರ್ಧಿಗೆ ರೂ.40 ಲಕ್ಷದ ಮಿತಿ ಹಾಕಿದೆ. ಆದರೆ ಪ್ರತಿಯೊಂದು ರಾಜಕೀಯ ಪಕ್ಷ ಮತ್ತು ಸ್ಪರ್ಧಿಯು ಚುನಾವಣಾ ಹಣವನ್ನು ಲೆಕ್ಕವಿಲ್ಲದೆ ವೆಚ್ಚ ಮಾಡಲಾಗುತ್ತಿದೆ. ಕಾಸು ಲೆಕ್ಕಾಚಾರದ ಬಿಗಿ ನಿಬಂಧನೆಗಳನ್ನು ಜಾರಿಗೊಳಿಸಿ ಇದನ್ನು ಉಸ್ತುವಾರಿ ಮಾಡಲು ವೆಚ್ಚ ವೀಕ್ಷಕರನ್ನು ನೇಮಿಸುತ್ತದೆ. ಆದಾಗ್ಯೂ ತಜ್ಞರ ಅಂದಾಜಿನ ಪ್ರಕಾರ ಲೋಕಸಭಾ ಕ್ಷೇತ್ರಗಳ ಪ್ರದೇಶವನ್ನು ಆಧರಿಸಿ ಪ್ರತೀ ಅಭ್ಯರ್ಥಿಯೂ ನಿರೀಕ್ಷೆಗೂ ಮೀರಿದ ಕೋಟಿ ಕೋಟಿ ಹಣ ವೆಚ್ಚವಾಗುತ್ತಿರುವುದು ಗಂಭೀರದ ವಿಷಯವಾಗಿದೆ. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಡಿಸೆಂಬರ್ 2021ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳಾದ ಪಂಚಾಯ್ತಿ ಪುರಸಭೆ ಮತ್ತು ಪಾಲಿಕೆಗಳ ಚುನಾಯಿತ ಪ್ರತಿನಿಧಿಗಳೇ ಮತದಾರರಾಗಿದ್ದ ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ಜರುಗಿದ ಚುನಾವಣೆ ಬಗ್ಗೆ ಹಲವಾರು ಲೇಖನಗಳು, ಪತ್ರಿಕಾ ವರದಿಗಳು ಪ್ರಕಟವಾಗಿರುವುದು ನಮಗೆಲ್ಲಾ ತಿಳಿದಿರುವುದೇ ಆಗಿದೆ. ಆದುದರಿಂದ ಒಟ್ಟಾರೆ ಚುನಾವಣೆಗಳಿಗಾಗಿ ಸರ್ಕಾರದ ಸಾವಿರಾರು ಕೋಟಿ ವೆಚ್ಚವಲ್ಲದೆ ಪಕ್ಷ ಮತ್ತು ಸ್ಪರ್ಧಿಗಳು ಸಾವಿರಾರು ಕೋಟಿಗಳು ವೆಚ್ಚ ಮಾಡಿರುವುದನ್ನು ಪರಿಗಣಿಸಿದರೆ ಆ ವೆಚ್ಚದಲ್ಲಿ ಒಂದು ಚಿಕ್ಕ ರಾಜ್ಯವನ್ನು ಅಭಿವೃದ್ಧಿಪಡಿಸಬಹುದು.

8. ಚುನಾವಣೆಯ ಸಂದರ್ಭದಲ್ಲಿ ಮತ ಗಿಟ್ಟಿಸಲು ಕೊಂಡೊಯ್ಯುತ್ತಿದ್ದ ನೂರಾರು ಕೋಟಿ ನಗದು ಹಣ, ಮದ್ಯ, ಆಹಾರ ಪದಾರ್ಥಗಳು, ಮಾದಕ ದ್ರವ್ಯಗಳು, ಮತದಾರರನ್ನು ಆಕರ್ಷಿಸಲು ನೀಡಲಾಗುತ್ತಿರುವ ಉಡುಗೊರೆ ಇತ್ಯಾದಿಗಳನ್ನು ಆಯೋಗದ ಅಧಿಕಾರಿಗಳು ವಶಪಡಿಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಈ ಘಟನೆಗಳು ಹೊಸದಲ್ಲದಿದ್ದರೂ ಚುನಾವಣೆಗಳ ನ್ಯಾಯಯುಕ್ತತೆಯ ಬಗ್ಗೆ ಆತಂಕವನ್ನು ಹೆಚ್ಚಿಸುತ್ತದೆ.

9. ರಾಜಕೀಯದ ಅಧೋಗತಿಯೋ ಭಾರತದ ಚುನಾವಣಾ ವ್ಯವಸ್ಥೆಯ ರೋಗಗ್ರಸ್ಥ ಸ್ಥಿತಿಯೋ ತಿಳಿಯದು. ಅಥವಾ ಇವೆರಡೂ ಆಗಿದ್ದರೆ ರೋಗ ಉಲ್ಬಣಿಸುವ ಮೊದಲೇ ಚಿಕಿತ್ಸೆಯನ್ನು ಮಾಡಬೇಕಾದವರು ಶಾಸನ ಸಭೆಯ ಸದಸ್ಯರುಗಳಲ್ಲದೆ ಮತ್ತಾರು?

10. ಚುನಾವಣೆಗಳಲ್ಲಿ ಅಸಹ್ಯ ಪಡುವಷ್ಟು ಹಣಶಕ್ತಿಯ ಪಾತ್ರ ಇಡೀ ವ್ಯವಸ್ಥೆಗೆ ರೋಗತರುವಷ್ಟು ಅಪರಾಧಿಗಳ ಪಾತ್ರ, ಜಾತಿ–ಧರ್ಮ–ಲಿಂಗ ಮತ್ತೆಲ್ಲ ತರಹದ ಪ್ರಭಾವಗಳು ಚುನಾವಣೆಗಳನ್ನು ರೋಗಗ್ರಸ್ತವಾಗಿಸಿವೆ. ಚುನಾವಣೆಗಳು 'ಜನಾದೇಶ'ವಾಗುವ ಬದಲು 'ಧನಾದೇಶ'ವಾಗುತ್ತಿವೆ.

11. ಅಪರಾಧೀಕರಣ ಹಿನ್ನೆಲೆಯಿಂದ ಕಾನೂನಿನ ಶಿಕ್ಷೆಗೊಳಗಾಗಬೇಕಾದ ಅಪರಾಧ ಹೊತ್ತವರೇ ಸ್ಪರ್ಧಿಸುತ್ತಿರುವುದರಿಂದ ಚುನಾವಣೆಗಳಲ್ಲಿ ಸಮಾನಾಂತರ ಸ್ಪರ್ಧೆ ಕ್ಷೀಣಿಸಿದೆ. ಇಂತಹ ಚುನಾವಣಾ ವ್ಯವಸ್ಥೆಯು ಇಡೀ ರಾಜಕೀಯ ವ್ಯವಸ್ಥೆಯ ಇತರ ರೋಗರುಜಿನಗಳಿಗೆ ಮೂಲವೂ ಮತ್ತು ಪೋಷಕವೂ ಆಗಿದೆ. ಅಲ್ಲದೆ ಚುನಾವಣೆಗಳ ಪಾವಿತ್ರ್ಯತೆ ಹಾಳಾಗುವುದಕ್ಕೆ ಇನ್ನೊಂದು ಮಹತ್ವದ ಕಾರಣ. ಈ

ಕಾರಣದಿಂದ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಚುನಾವಣಾ ಸುಧಾರಣೆಯ ಮೂಲಕ ನ್ಯಾಯಯುಕ್ತ, ಸ್ಥಿರ ಮತ್ತು ದಕ್ಷವಾಗಿಸಲು ಪ್ರಯತ್ನಿಸುವುದು ಇಂದು ಅತ್ಯಗತ್ಯವಾಗಿದೆ.

12. ಹಿರಿಯರ ಮನೆ ಎನಿಸಿಕೊಂಡಿರುವ ವಿಧಾನ ಪರಿಷತ್ತಿಗೆ ದ್ವೈವಾರ್ಷಿಕವಾಗಿ ಪದವೀಧರ/ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆಗಳು ಹಾಗೂ ನಾಮನಿರ್ದೇಶನದಲ್ಲೂ ಸಹ ಕಲುಷಿತ ವಾತಾವರಣ ಕಂಡು ಬರುತ್ತದೆ. ಇಲ್ಲಿಯೂ ಸಹ ಸುಧಾರಣೆಯ ಅಗತ್ಯತೆ ಕಂಡುಬರುತ್ತಿದೆ.

13. ಕುವೆಂಪು ಅವರು ತಮ್ಮ 'ವಿಚಾರ ಕ್ರಾಂತಿಗೆ ಆಹ್ವಾನ' ಎಂಬ ಭಾಷಣದಲ್ಲಿ ರಾಜಕೀಯದ ಬಗ್ಗೆ ಹೀಗೆ ಹೇಳಿದ್ದರು.

> ***'ನಮ್ಮಲ್ಲಿ ಡೆಮಾಕ್ರಸಿ ಎನ್ನುವುದು ಬರಿಯ ಅಪಹಾಸ್ಯವಾಗಿದೆ. ಕೋಟ್ಯಾಧೀಶರಲ್ಲದವರು ಚುನಾವಣೆಯಲ್ಲಿ ಗೆಲ್ಲುವುದು ಇರಲಿ ನಿಲ್ಲುವುದೂ ಕೂಡ ಅಸಾಧ್ಯವಾಗಿದೆ. ಜಾತಿ, ಮತ, ಹೆಂಡ, ದುಡ್ಡು ಇವೇ ಓಟರುಗಳಾಗಿವೆ. ಓಟು ಕೊಡುವ ಪ್ರಜೆಗಳು ಬರೀ ನಿಮಿತ್ತ ಮಾತ್ರ, ಮೂಕವಾಹನಗಳಷ್ಟೇ... ಚುನಾವಣಾ ಸುಧಾರಣೆಗಳ ಮೂಲಕ ನಮ್ಮ ಪ್ರತಿನಿಧಿಗಳ ಗುಣ ಹಾಗೂ ಸರ್ಕಾರಗಳ ಪ್ರಾತಿನಿಧಿತ್ವ, ಗುಣಮಟ್ಟ, ನ್ಯಾಯಪರತೆ, ಸ್ಥಿರತೆ, ಸಾಮರ್ಥ್ಯಗಳನ್ನು ವೃದ್ಧಿಸಬೇಕಾಗಿದೆ. ಪ್ರಜಾಪ್ರಭುತ್ವವನ್ನು ಸಾಕಾರಗೊಳಿಸಿ ಪರಿಣಾಮಕಾರಿಯನ್ನಾಗಿಸಬೇಕಾಗಿದೆ. ಚುನಾವಣೆಗಳ ಮೇಲೆ ಚುನಾವಣೆಗಳು ಬರುತ್ತಿವೆ. ಆಳುವ ಸರ್ಕಾರಗಳಿಗೆ ಚುನಾವಣಾ ಸುಧಾರಣೆಗಳಲ್ಲಿ ಆಸಕ್ತಿ ಕಾಣುತ್ತಿಲ್ಲ. ಚುನಾವಣಾ ಸುಧಾರಣೆಗಳಿಗಾಗಿ ಜನರ ಎಚ್ಚರ, ಕೂಗು ಮತ್ತು ಒತ್ತಾಯಗಳು ದೊಡ್ಡದಾಗಬೇಕಾಗಿವೆ' ಎಂದು ಹೇಳಿದ್ದಾರೆ. ಕುವೆಂಪು ಅವರ ವಿಚಾರದ ಕುರಿತು ಯೋಚಿಸುವ ಅಗತ್ಯವಿದೆ.***

14. ಚುನಾವಣೆಗಳು ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು ಆದರೆ ಸಡಿಲಗೊಳಿಸತೊಡಗಿವೆ. ಚುನಾವಣಾ ಸುಧಾರಣೆಗಾಗಿ ನಡೆದ ಪ್ರಯತ್ನಗಳನ್ನು ಅವಲೋಕಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ.

(i). ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮೊಟ್ಟ ಮೊದಲ ಬಾರಿಗೆ ವಯಸ್ಕರ ಸಾರ್ವತ್ರಿಕ ಮತದಾನದ ಹಕ್ಕುಗಳನ್ನು ತಾತ್ಪೂರ್ತಿಕ ಚುನಾವಣಾ ನಿಯಮಗಳೊಂದಿಗೆ ಜಾರಿಗೆ ತರಲಾಯಿತು.

(ii). 'ಸಾರ್ವತ್ರಿಕ ಮತದಾನದ ಹಕ್ಕು' ಪದ್ಧತಿಯನ್ನು ಭಾರತದ ಪರಿಸ್ಥಿತಿಗೆ ಅಳವಡಿಸಿಕೊಳ್ಳುವಲ್ಲಿ ಭಾರತದ ಚುನಾವಣಾ ಪ್ರಕ್ರಿಯೆಗೆ ಒತ್ತಾಸೆಯಾಗಿರುವ ಇಲ್ಲಿನ ಸಂಸ್ಥೆಗಳು, ಕಾಯಿದೆಗಳು ಮತ್ತು ಮಾದರಿಗಳು ವಿಕಾಸಗೊಳ್ಳುವಲ್ಲಿ ಅದ್ಭುತವಾದ ಜಾಣತನವನ್ನು ತೋರಿವೆ. ನಮ್ಮಲ್ಲಿ ಬಹು ಸದಸ್ಯ ಮತಕ್ಷೇತ್ರಗಳ ಪದ್ಧತಿಯನ್ನು ಕೈಬಿಟ್ಟು ಏಕ ಸದಸ್ಯ ಮತಕ್ಷೇತ್ರಗಳ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.

(iii). ಚುನಾವಣಾ ಅಕ್ರಮಗಳು ಅಥವಾ ಹಿಂಸಾಚಾರ ನಡೆದಾಗ ಮತದಾನವನ್ನು ತಡೆದು ಪುನರ್ ಮತದಾನ ನಡೆಯುವಂತೆ ಆದೇಶ ಹೊರಡಿಸುವುದು ಅಪರೂಪವೇನಲ್ಲ.

(iv). ರೋಗವನ್ನು ಗುಣಪಡಿಸಲು ಸುಧಾರಣೆ ಅವಶ್ಯವೆನ್ನುವ ಮಾತು ಎಲ್ಲೆಡೆ ಪ್ರಚಲಿತಗೊಂಡಿದೆ. ಮಿರ್ದಲ್ ಎನ್ನುವ ವ್ಯಾಖ್ಯಾನಕಾರ ಬರೆಯುತ್ತಾನೆ ***"ಈ ಘಳಿಗೆಯಲ್ಲಿ ಮಾಡಬೇಕಾದ ಮೊಟ್ಟ ಮೊದಲ ಅತಿ ಮುಖ್ಯ ಕೆಲಸವೆಂದರೆ ಈಗಾಗಲೇ ತಿಳಿಸಿರುವ ಮೂರು ಭಯಂಕರ ಪಿಡುಗುಗಳಾದ ಹಣಬಲ, ತೋಳ್ಬಲ ಮತ್ತು ಮಾಫಿಯಾ ಬಲಗಳನ್ನು ತೊಲಗಿಸುವುದು. ಅಲ್ಲದೇ ನಾಲ್ಕು ಅನಿಷ್ಟಗಳಾದ; ಭ್ರಷ್ಟಾಚಾರ, ಅಪರಾಧೀಕರಣ, ಜಾತಿವಾದ ಮತ್ತು ಧಾರ್ಮಿಕ ದುರಭಿಮಾನಗಳನ್ನು ತೊಡೆದುಹಾಕಬೇಕಾಗಿದೆ".***

(v). ರಾಜಕೀಯ ರಂಗದಲ್ಲಿನ ಭ್ರಷ್ಟಾಚಾರ ಮತ್ತು ಅಪರಾಧೀಕರಣಗಳ ನಡುವಿನ ನಂಟು. ದೋಷಾರೋಪಣೆ ಹೊತ್ತ ಶಾಸಕರು, ಕಪ್ಪು ಹಣ, ಲಂಚ ಮತ್ತು ಸ್ವಜನ ಪಕ್ಷಪಾತ ಇವು ಅಪರಾಧ,

ಚುನಾವಣಾ ರಾಜಕೀಯ ಮತ್ತು ಅವ್ಯವಸ್ಥೆಗಳ ನಡುವೆ ಇರುವ 'ಕೊಡು–ಕೊಳ್ಳುವ' ಸಂಬಂಧದ ಸಾಕ್ಷ್ಯಗಳು. ಆದ್ದರಿಂದ ಉನ್ನತ ಸ್ಥಾನಗಳಲ್ಲಿರುವ ಜನರ ನ್ಯಾಯಪರತೆಯನ್ನು ಪ್ರಶ್ನಿಸುವಂತಹ ನಡವಳಿಕೆಯನ್ನು ಚುನಾವಣಾ ಆಯೋಗವೇ ದಾಖಲಿಸಬೇಕು.

(vi). ನಾಲ್ಕು ದಶಕಗಳ ಚುನಾವಣಾ ಸುಧಾರಣೆಗಳ ಬೇಡಿಕೆಯ ಹಿನ್ನೆಲೆಯಲ್ಲಿ ಆಗಿನ ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ಅವರು 1990ರ ಜನವರಿ 9ರಂದು ಸರ್ವ ಪಕ್ಷ ಸಭೆ ನಡೆಸಿದರು. ಆ ಸಭೆಯ ಪರಿಣಾಮವಾಗಿಯೇ ಆಗಿನ ಕಾನೂನು ಸಚಿವ ದಿನೇಶ್ ಗೋಸ್ವಾಮಿ ಅಧ್ಯಕ್ಷತೆಯಲ್ಲಿ ಸಮಿತಿ **(ಇಟಜಛಿಣಠಡಿಚಿಟ ಖಜಜಿಠಡಿಛ)** ರಚನೆ ಮಾಡಲಾಯಿತು. ಆ ಸಮಿತಿಯಲ್ಲಿ ಮುಂಚೂಣಿಯ ರಾಜಕೀಯ ನೇತಾರರಾದ ಎಲ್.ಕೆ. ಆದ್ವಾಣಿ, ಸೋಮನಾಥ ಚಟರ್ಜಿ, ಈರ ಸೇಝೀಯಾನ್, ಮಾಜಿ ರಾಜ್ಯಪಾಲ ಎಲ್.ಪಿ. ಸಿಂಗ್, ಚುನಾವಣಾ ಆಯೋಗದ ನಿವೃತ್ತ ಮುಖ್ಯ ಆಯುಕ್ತ ಎಸ್.ಎಲ್.ಶಕ್ದರ್ ಇದ್ದರು. ಈ ಸಮಿತಿಯೂ 107 ಶಿಫಾರಸುಗಳನ್ನು ಮಾಡಿತು. ಈ ಶಿಫಾರಸುಗಳಲ್ಲಿ ಬಹಳಷ್ಟು ಜಾರಿಗೆ ಬಂದಿಲ್ಲ.

(vii). ಮತ್ತೊಂದು ಪ್ರಮುಖ ಹೆಜ್ಜೆಯೆಂದರೆ ನೇರವಾಗಿ ಚುನಾವಣಾ ಸುಧಾರಣೆಗೆ ಸಂಬಂಧಿಸಿಲ್ಲವಾದರೂ 1993ರಲ್ಲಿ ವೋರಾ ಕಮಿಟಿ **(ಅಣಡಿಛುಟಿರ ಅಡಿುಟುಟಿಚಿಟ್ಛುಚಿಣುಠಟಿ ಠಜಿ ಕಠಟುಣುಛಿ)** ನೀಡಿದ ವರದಿ, ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಕಾರ್ಯದರ್ಶಿಯಾಗಿದ್ದ ಎನ್.ಎನ್.ವೋರಾ ಅವರು ವರದಿ ಸಿದ್ಧಪಡಿಸಿದರು. ಸಮಿತಿಯು ಅಪರಾಧ ಚಟುವಟಿಕೆ ನಡೆಸುವವರು, ಮಾಫಿಯಾ ಹಾಗೂ ಇದರಿಂದ ರಾಜಕೀಯ ಮತ್ತು ಅಧಿಕಾರಿಗಳಿಗೆ ಇರುವ ತೊಂದರೆಗಳೇನು ಎಂಬ ಬಗ್ಗೆಯೂ ಮಾಹಿತಿ ಸಂಗ್ರಹಿಸಿತ್ತು. ಈ ವರದಿಯ ಪ್ರಮುಖ ಅಂಶಗಳೆಂದರೆ ಚುನಾವಣಾ ಸುಧಾರಣೆಗೆ ಸಂಬಂಧಿಸಿದ್ದವೆ ಆಗಿವೆ. ಇದರಲ್ಲಿ ರಾಜಕೀಯ ಅಪರಾಧೀಕರಣದ ಬಗ್ಗೆ ಹೆಚ್ಚಿನ ಒತ್ತು ನೀಡಲಾಗಿತ್ತು.

(viii). ನಂತರದ ಪ್ರಮುಖವಾದ ಶಿಫಾರಸುಗಳ ವರದಿ ಎಂದರೆ 1997ರಲ್ಲಿ ಕಾನೂನು ಸಚಿವ ರಾಮ್ ಜೇಠ್ಮಲಾನಿ ಅವರಿಗೆ ಕಾನೂನು ಆಯೋಗ ಸಲ್ಲಿಸಿದ 170ನೇ **(Reform of the Electoral Laws)** ವರದಿ. 15ನೇ ಕಾನೂನು ಆಯೋಗದ ಅಧ್ಯಕ್ಷ ನ್ಯಾ. ಬಿ.ಪಿ. ರೆಡ್ಡಿ ಅವರು ಸಿದ್ಧಪಡಿಸಿದ್ದ ಈ 'ಚುನಾವಣಾ ಕಾನೂನುಗಳ ಸುಧಾರಣೆ' ವರದಿ ಬಹುಮುಖ್ಯವೆನಿಸುವ ಶಿಫಾರಸುಗಳನ್ನು ಒಳಗೊಂಡಿತ್ತು. ಚುನಾವಣಾ ಪದ್ಧತಿಯಲ್ಲಿ ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಂಡರೂ ಅದರಿಂದ ಯಾವುದೇ ಫಲ ಸಿಕ್ಕಿಲ್ಲ ಎಂಬುದನ್ನು ಮನಗಂಡ ಕಾನೂನು ಆಯೋಗ ಸಮಗ್ರವಾದ ಬದಲಾವಣೆಯ ಬಗ್ಗೆ ಸಲಹೆಗಳನ್ನು ನೀಡಿದ್ದು, ಸಮಾಜದ ಅಗತ್ಯತೆಗೆ ತಕ್ಕಂತೆ ಸುಧಾರಣೆಯ ಬಗ್ಗೆ ಹೇಳಿದೆ.

*(ix).*ಚುನಾವಣೆ ಸುಧಾರಣೆಗೆ ಸಂಬಂಧಿಸಿದಂತೆ ಅಧಿಕೃತವಾಗಿ ನಡೆದ ಪ್ರಯತ್ನವೆಂದರೆ 1998ರಲ್ಲಿ ರಚನೆಯಾದ ಇಂದ್ರಜಿತ್ ಗುಪ್ತ ಸಮಿತಿ **(ಖಣಚಿಣಜ ಈಣಟಿಜುಟಿರ ಠಜಿ ಇಟಜಛಿಣುಠಛಿ)** ವರದಿ. ಈ ಸಮಿತಿಯ ವರದಿಯು ಚುನಾವಣೆ ಸುಧಾರಣೆಗಳ ಬಗ್ಗೆ ಅದರಲ್ಲೂ ಸರ್ಕಾರದ ನೆರವು ನೀಡುವ ಬಗ್ಗೆಯೂ ಹೇಳಿತ್ತು.

*(x).*ನ್ಯಾ. ಎಂ.ಎನ್. ವೆಂಕಟಚಲಯ್ಯ ಅವರ ಅಧ್ಯಕ್ಷತೆಯಲ್ಲಿ 2002 ಫೆಬ್ರವರಿ 23ರಲ್ಲಿ ರಚನೆಯಾಗಿದ್ದ ಸಂವಿಧಾನ ಸುಧಾರಣೆಯ ರಾಷ್ಟ್ರೀಯ ಆಯೋಗ **(Political Party Discipline-Splits & Mergers)** ಸಹ ಕೆಲವು ಸಲಹೆಗಳನ್ನು ನೀಡಿದೆ. ಈ ವರದಿಯಲ್ಲಿ "ಚುನಾವಣಾ ಪ್ರಕ್ರಿಯೆ ಮತ್ತು

ರಾಜಕೀಯ ಪಕ್ಷಗಳು" ಎಂಬ ಪ್ರತ್ಯೇಕ ಅಧ್ಯಾಯದಲ್ಲಿ ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ 38 ಶಿಫಾರಸು ಮಾಡಿದೆ.

(xi). ಭಾರತ ಚುನಾವಣಾ ಆಯೋಗ ಸಹ ಕಾಲಕಾಲಕ್ಕೆ ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಶಿಫಾರಸುಗಳನ್ನು ಮಾಡುತ್ತಿದೆ. ಆದರೆ ಚುನಾವಣೆ ನಡೆಸುವ ಆಯೋಗ ಸ್ವತಃ ಯಾವುದೇ ಸುಧಾರಣೆ ಜಾರಿಗೆ ತರಲು ಸಾಧ್ಯವಿಲ್ಲ. ಆಯೋಗವು ಜನಪ್ರತಿನಿಧಿ ಕಾಯ್ದೆ 1951 ಮತ್ತು ಚುನಾವಣಾ ನಿಯಮಗಳು 1961, ಇದೇ ರೀತಿಯ ನಿಯಮ ಮತ್ತು ಕಾನೂನುಗಳಲ್ಲಿ ಬದಲಾವಣೆಯ ಬಗ್ಗೆ ಆಯೋಗ ಹೇಳಿದೆ.

15. ಚುನಾವಣೆ ಸುಧಾರಣೆಗಳಲ್ಲಿ ಭಾರತದ ಚುನಾವಣಾ ಆಯೋಗವು ಈ ಕೆಳಗಿನ ಸುಧಾರಣೆಗಳನ್ನು ತಂದಿರುವುದು ಗಮನಾರ್ಹವಾಗಿದೆ.

1. 1985ರಲ್ಲಿ ಪಕ್ಷಾಂತರ ನಿಷೇಧಕ್ಕೆ ಸಂಬಂಧಪಟ್ಟ 10ನೇ ಶೆಡ್ಯೂಲ್‌ನ್ನು ಭಾರತದ ಸಂವಿಧಾನದಲ್ಲಿ ಸೇರ್ಪಡೆ ಮಾಡಲಾಯಿತು.

2. 1989ರಲ್ಲಿ ಮತದಾರರ ವಯೋಮಿತಿಯನ್ನು 21 ವರ್ಷಗಳಿಂದ 18 ವರ್ಷಗಳಿಗೆ ಇಳಿಕೆ ಮಾಡಲಾಯಿತು.

3. **ಮತದಾರರ ಗುರುತಿನ ಚೀಟಿ ಬಳಕೆ:** 1990ರಲ್ಲಿನ ದಿನೇಶ್ ಗೋಸ್ವಾಮಿ ಆಯೋಗದ ಚುನಾವಣಾ ಸುಧಾರಣೆ ಮಾಡಬೇಕೆಂಬ ಶಿಫಾರಸ್ಸಿನಂತೆ ಗುರುತಿನ ಚೀಟಿ (**ಇಕಖಅ–ಇಟಜಛಿಣುಠಟಿ ಕುಠಣಠ ಖಜಜಟಿಣುಣುಣಛಿ ಅಚಿಡಿಜ**) ಪ್ರಾರಂಭಿಸಲಾಯಿತು.

4. **ವಿದ್ಯುನ್ಮಾನ ಮತಯಂತ್ರ ಬಳಕೆ:** 1991ರ ಚುನಾವಣೆಯಲ್ಲಿ ಭ್ರಷ್ಟಾಚಾರ, ಹಿಂಸಾಚಾರ ಅಧಿಕವಾಗಿತ್ತು. ಇದು ಚುನಾವಣೆಯ ದೋಷ ಮತ್ತು ಉತ್ತಮ ಸರ್ಕಾರ ರಚನೆಗೆ ತೊಡಕೆಂಬ ಕಾರಣ – ವಿದ್ಯುನ್ಮಾನ ಮತ ಯಂತ್ರ (**ಇಗಿಒ–ಇಟಜಛಿಣಡಿಠಟಿಛಿ ಗಿಠಣುಟಿರ ಒಜಛಿಖುಟಿಜ**) ಬಳಕೆ ಪ್ರಾರಂಭಿಸಲಾಯಿತು. ಪ್ರಪಂಚದಲ್ಲಿಯೇ ಮೊದಲ ಬಾರಿ ವಿದ್ಯುನ್ಮಾನ ಮತ ಯಂತ್ರ ಬಳಕೆ ಮಾಡಿದ ಕೀರ್ತಿ ಭಾರತದ್ದು.

5. **ಅಭ್ಯರ್ಥಿಗಳ ಪೂರ್ವ ಚರಿತ್ರೆ ಕಡ್ಡಾಯ:** ರಾಜಕೀಯ ಅಪರಾಧಿಕರಣವು ಇಂದು ನಮ್ಮ ರಾಜಕೀಯ ವ್ಯವಸ್ಥೆಯನ್ನು ಕಾಡುತ್ತಿರುವ ಪೆಡಂಭೂತವಾಗಿದೆ. ರಾಜಕಾರಣಿಗಳಲ್ಲಿ ಕಂಡುಬರುವ ಅಪರಾಧಿಕರಣ, ಅಪರಾಧಿಗಳೊಂದಿಗಿನ ಸಖ್ಯ, ಅಕ್ರಮ ಆಸ್ತಿ ಸಂಪಾದನೆ ತಡೆಗಟ್ಟುವ ಉದ್ದೇಶದಿಂದ ಸರ್ವೋಚ್ಚ ನ್ಯಾಯಾಲಯವು ಮೇ 27, 2003 ರಂದು ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿಯಿಂದ ನಾಮಪತ್ರ ಜೊತೆಗೆ ಕಡ್ಡಾಯವಾಗಿ ಒಂದು ಪ್ರಮಾಣಪತ್ರ ಪಡೆದುಕೊಳ್ಳುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ. ಈ ಪ್ರಮಾಣ ಪತ್ರವು ಅಭ್ಯರ್ಥಿಯ ಅಪರಾಧದ ಹಿನ್ನೆಲೆ, ಚರ ಮತ್ತು ಸ್ಥಿರ ಆಸ್ತಿಯ ವಿವರಗಳು, ಅವಲಂಬಿತರ ವಿವರಗಳು, ಸಾಲಗಳು ಮತ್ತು ಶೈಕ್ಷಣಿಕ ಅರ್ಹತೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಹೊಂದಿರಬೇಕು. ಹೀಗೆ ಸುಪ್ರೀಮ್ ಕೋರ್ಟ್ ಚುನಾವಣೆಗೆ ಸ್ಪರ್ಧಿಸಬಯಸುವ ಪ್ರತಿಯೊಬ್ಬ ಅಭ್ಯರ್ಥಿಯು ತನ್ನ ಪೂರ್ವ ಚರಿತ್ರೆ ಘೋಷಿಸುವುದನ್ನು ಕಡ್ಡಾಯಗೊಳಿಸಿದೆ. ಇದನ್ನು ಚುನಾವಣಾ ಆಯೋಗ ಜಾರಿಗೆ ತಂದಿದೆ.

6. **ದಂಡನೆ:** ಚುನಾವಣೆಯಲ್ಲಿ ಗಲಭೆ ಮಾಡಿದವರಿಗೆ ರೂ. 250 ರಿಂದ ರೂ. 2000ವರೆಗೆ ದಂಡ, 6 ತಿಂಗಳಿನಿಂದ 3 ವರ್ಷದವರೆಗೆ ಬಂಧನದಲ್ಲಿರಿಸಲು ಅವಕಾಶವಿದೆ.

7. ***ಅಭ್ಯರ್ಥಿಗಳ ವೆಚ್ಚದ ಮಿತಿ:*** *ಪ್ರತಿ ಚುನಾವಣೆಯಲ್ಲಿ ಅಭ್ಯರ್ಥಿಗಳ ವೆಚ್ಚಗಳ ಮಿತಿಯನ್ನು ಆಯೋಗ ನಿರ್ಧರಿಸುತ್ತದೆ. ಎಷ್ಟು ಹಂತಗಳಲ್ಲಿ ಚುನಾವಣೆ ನಡೆಸಬೇಕು ಎನ್ನುವುದನ್ನೂ ನಿರ್ಧರಿಸುವುದು ಆಯೋಗವೇ.*

8. *ಮತದಾರರಿಗೆ ತಮ್ಮ ಮತದಾರರ ಗುರುತಿನ ಚೀಟಿ ಇದ್ದರಷ್ಟೇ ಸಾಲದು ಮತದಾರರ ಪಟ್ಟಿಯಲ್ಲಿ ಅವರ ಹೆಸರು ಮತ್ತು ಭಾವಚಿತ್ರವಿರಬೇಕು.*

9. *16ನೇ ಲೋಕಸಭಾ ಚುನಾವಣೆಯಲ್ಲಿ ಮತದಾನದ ಅಕ್ರಮ ತಡೆಗಟ್ಟುವುದಕ್ಕಾಗಿ, ವಿದ್ಯುನ್ಮಾನ ಮತಯಂತ್ರಗಳನ್ನು ಅಳವಡಿಸಲಾಗಿದೆ ಅಲ್ಲದೆ ಕ್ರಮಬದ್ಧ ಖಚಿತತೆ ಯಂತ್ರವನ್ನು ಅಳವಡಿಸಿದ್ದು ಇನ್ನೊಂದು ಸುಧಾರಣೆ (ಗಿಗಿಕಂಖಿ–ಗಿಠಣಜಿಡಿ ಗಿಜಡಿಜಿಚಿಛಟಜ ಕಚಿಠಿಜಿಡಿ ಂಣಜುಣ ಖಿಡಿಚಿಟ).*

10. *ಚುನಾವಣೆಯಾಗಿ ಒಂದು ತಿಂಗಳೊಳಗಾಗಿ ಚುನಾವಣಾ ವೆಚ್ಚದ ಅಂಕಿ ಸಂಖ್ಯೆಯನ್ನು ಅಭ್ಯರ್ಥಿಗಳು ಆಯೋಗಕ್ಕೆ ಒಪ್ಪಿಸುವುದು, ಇಲ್ಲದಿದ್ದಲ್ಲಿ ಅಭ್ಯರ್ಥಿಯನ್ನು ಅನರ್ಹಗೊಳಿಸುವ ಅಧಿಕಾರ ಆಯೋಗಕ್ಕಿದೆ.*

11. ***ಮತ ತಿರಸ್ಕಾರ ಹಕ್ಕು ಜಾರಿಗೆ:*** *(ಓಟಿಖಿಂ) ಸ್ವಾತಂತ್ರ್ಯ ಭಾರತದ ಚುನಾವಣಾ ಇತಿಹಾಸದಲ್ಲಿಯೇ ಮೊದಲಬಾರಿಗೆ ಅಭ್ಯರ್ಥಿಗಳನ್ನು ತಿರಸ್ಕರಿಸುವ ಹಕ್ಕು ಮತದಾರರಿಗೆ ದೊರೆತಿದೆ. ಈ ಕುರಿತಾಗಿ ಸುಪ್ರೀಮ್ ಕೋರ್ಟ್ ಅಕ್ಟೋಬರ್ 15, 2003 ರಂದು ಮಹತ್ವದ ತೀರ್ಪು ನೀಡಿದೆ. ಅದರಂತೆ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪೈಕಿ ಯಾರೂ ಅರ್ಹರಿರುವುದಿಲ್ಲ ಎನ್ನುವ ಮತದಾರರಿಗೆ 'ನಿರಾಕರಣೆಯ ಮತ' ಚಲಾಯಿಸುವ ಹಕ್ಕನ್ನು ನೀಡಲಾಗಿದೆ. ಇದರಿಂದ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಯಾರು ಯೋಗ್ಯರಲ್ಲ ಎಂಬ ಭಾವನೆಯಿಂದ ಮತದಾನದಿಂದ ದೂರ ಉಳಿಯುವ ಮತದಾರರಿಗೆ ಮತದಾನದಲ್ಲಿ ಪಾಲ್ಗೊಳ್ಳುವಂತಾಗಿದೆ.*

12. *2013ರಲ್ಲಿ ಚುನಾವಣಾ ಸುಧಾರಣೆಯ ಮೂಲಕ "ನೋಟಾ" ಪದ್ಧತಿಯನ್ನು ಜಾರಿಗೆ ತರಲಾಗಿರುತ್ತದೆ. ಅಂದರೆ 'ಮೇಲಿನವರಲ್ಲಿ ಯಾರಿಗೂ ಮತವಿಲ್ಲ' ಎನ್ನುವ ಸಕಾರಾತ್ಮಕ ಮತ ನೀಡುವ ಅವಕಾಶ.*

ಮೇಲಿನ ಸುಧಾರಣೆಗಳು ಕೆಲವೊಂದು ನಾಗರೀಕ ಸಮಾಜದ ಸಂಘಟನೆಗಳು ನ್ಯಾಯಾಲಯಗಳಲ್ಲಿ ಚುನಾವಣೆ ಪ್ರಕ್ರಿಯೆಗಳನ್ನು ಪ್ರಶ್ನಿಸುವ ಮೂಲಕ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ ಹಾಗೂ ಚುನಾವಣಾ ಆಯೋಗದ ವತಿಯಿಂದ ಜಾರಿಗೆ ಬಂದವುಗಳಾಗಿವೆ.

16. ಚುನಾವಣಾ ಸುಧಾರಣೆಯ ಸಂದರ್ಭದಲ್ಲಿ 2010ರ ಡಿಸೆಂಬರ್ 9ರಂದು ನಮ್ಮ ಕರ್ನಾಟಕದ ಮಾಜಿ ಮುಖ್ಯಮಂತ್ರಿಯವರು ಹಾಗೂ ಆಗಿನ ಕೇಂದ್ರದ ಕಾನೂನು ಸಚಿವ ಎಂ. ವೀರಪ್ಪ ಮೋಯ್ಲಿ ಮತ್ತು ಆಗಿನ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಶಿ ಅವರುಗಳು ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಸಮಗ್ರ ಕಾನೂನು ರೂಪಿಸುವುದಾಗಿ ಹೇಳಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸುವೆ.

17. ಇತ್ತೀಚೆಗಿನ ಚುನಾವಣೆಗಳ ಫಲಿತಾಂಶ, ಮತದಾನ ನಡೆಯುವ ರೀತಿ, ಜನ ಪ್ರತಿನಿಧಿಗಳ ಕಾರ್ಯವೈಖರಿ, ಸಂಸದೀಯ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಸದನಗಳ ಕಾರ್ಯನಿರ್ವಹಣೆಯ ಮೌಲ್ಯಗಳು, ಆಡಳಿತ ವ್ಯವಸ್ಥೆಯ ಬಗ್ಗೆ ಆತ್ಮಾವಲೋಕನ ಮಾಡುವಂತಹ ಸಂದರ್ಭ ಬಂದೊದಗಿದೆ. ಇದೇ ನಿಟ್ಟಿನಲ್ಲಿ ನಾನು ಕೆಲವೊಂದು ಬದಲಾವಣೆಗಳನ್ನು ತರುವಂತಹ ಮನೋಭಾವನೆ ಬರಲೆಂಬ ಉದ್ದೇಶದಿಂದ ಮಾರ್ಚ್ 2020 ರಿಂದ ಈ ಅಧಿವೇಶನದವರೆಗೂ ಕೆಳಕಂಡ ವಿಷಯಗಳ ಬಗ್ಗೆ ಚರ್ಚೆಗಳನ್ನು ಏರ್ಪಡಿಸಿರುತ್ತೇನೆ.

1. ನಮ್ಮ ಸಂವಿಧಾನ ನಮ್ಮ ಹೆಮ್ಮೆ,
2. ಸಂಸದೀಯ ಮೌಲ್ಯಗಳ ಕುಸಿತವನ್ನು ತಡೆಗಟ್ಟುವ ನಿಟ್ಟಿನಲ್ಲಿ ಒಂದು ಆತ್ಮಾವಲೋಕನ,
3. ಒಂದು ರಾಷ್ಟ್ರ ಒಂದು ಚುನಾವಣೆ,
4. ಪ್ರಜಾಪ್ರಭುತ್ವ: ಸಂಸದೀಯ ಮೌಲ್ಯಗಳ ರಕ್ಷಣೆ

ಅಲ್ಲದೆ ಚುನಾವಣೆ ಸುಧಾರಣೆಗಳ ಅಗತ್ಯತೆ ಬಗ್ಗೆ ಪತ್ರಿಕಾಗೋಷ್ಠಿಯನ್ನು ನಡೆಸಿ, ಈ ಬಗ್ಗೆ ಯುವ ಜನಾಂಗದಲ್ಲಿ ಜಾಗೃತಿಯನ್ನು ಮೂಡಿಸಲು ವಿದ್ಯಾಸಂಸ್ಥೆಗಳ ಮುಖ್ಯಸ್ಥರಿಗೆ ಮಾಧ್ಯಮದ ಮುಖ್ಯಸ್ಥರಿಗೆ, ಸಮಾಜದ ಚಿಂತಕರಿಗೆ ಪತ್ರವನ್ನು ಬರೆಯುವ ಮೂಲಕ ಒಂದು ಆಂದೋಲನವನ್ನು ಸೃಷ್ಟಿ ಮಾಡುವ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೇನೆ. ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಚುನಾವಣಾ ಪ್ರಕ್ರಿಯೆಯು ಜಾತೀಯತೆ, ತೋಳ್ಬಲ ಮತ್ತು ಹಣ ಬಲದ ಸೋಂಕಿಗೆ ಒಳಗಾಗಿದೆ ಎಂಬುದು ಬಹಿರಂಗವಾಗಿ ಸ್ಪಷ್ಟಪಡಿಸುತ್ತದೆ. ಭ್ರಷ್ಟಾಚಾರ ಮತ್ತು ಭ್ರಷ್ಟರನ್ನು ತೊಡೆದು ಹಾಕಲು ನಮ್ಮ ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ವ್ಯಾಪಕವಾದ ಸುಧಾರಣೆಗಳನ್ನು ತರುವುದು ಅನಿವಾರ್ಯವಾಗಿದೆ ಎಂಬುದು ನನ್ನ ಅನಿಸಿಕೆ ಹಾಗೂ ಈ ದಿಸೆಯಲ್ಲಿ ಈ ಕೆಳಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

18. ಭಾರತದ ಚುನಾವಣೆಯ ನ್ಯೂನತೆಗಳು ಮತ್ತು ಸುಧಾರಣೆಗಳ ಬಗ್ಗೆ ಹಿಂದಿನಿಂದಲೂ ಚರ್ಚೆ ನಡೆಯುತ್ತಾ ಬಂದಿದೆ. ಚುನಾವಣಾ ಆಯೋಗ, ಕಾನೂನು ಆಯೋಗ, ದಿನೇಶ್ ಗೋಸ್ವಾಮಿ ಸಮಿತಿ, ತಾರಕುಂಡೆ ಸಮಿತಿ, ಆಡಳಿತ ಸುಧಾರಣಾ ಆಯೋಗ ಮುಂತಾದ ಸರ್ಕಾರಿ ಮತ್ತು ಖಾಸಗಿ ಆಯೋಗ, ಸಮಿತಿಗಳು ಹಾಗೂ ರಾಜಕೀಯ ವ್ಯವಸ್ಥೆಯ ಅನೇಕ ವಿಶ್ಲೇಷಕರೂ ಈ ಚರ್ಚೆಯನ್ನು ಮುಂದುವರಿಸಿದ್ದಾರೆ. ಅಲ್ಲಲ್ಲಿ ಮೂಡಿರುವ ಶಿಫಾರಸುಗಳ ಪಟ್ಟಿ ದೊಡ್ಡದಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಪ್ರಜಾಪ್ರಭುತ್ವದ ಚುನಾವಣಾ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರಕ್ಕೆ ಕಾರಣಗಳು, ಪ್ರಮುಖವಾದ ನ್ಯೂನತೆಗಳನ್ನೂ ಮತ್ತು ಸುಧಾರಣೆಗಳನ್ನು ಆದ್ಯತೆಗೊಳಿಸಿ ಜನಪ್ರತಿನಿಧಿಗಳು ಜಾರಿಮಾಡಬೇಕಾಗಿದೆ.

19. ಭಾರತೀಯ ಪ್ರಜಾಪ್ರಭುತ್ವದ ಚುನಾವಣಾ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರಕ್ಕೆ ಕಾರಣಗಳು:–

1. ಅನಕ್ಷರತೆಯನ್ನು ಹೊಂದಿರುವ ದೊಡ್ಡ ಜನಸಂಖ್ಯೆ ಹಾಗೂ ಆರ್ಥಿಕ ಅಸಮಾನತೆ.
2. ಚುನಾವಣೆಗಳ ರಾಜಕೀಯ ಮತ್ತು ಸಾಮಾಜಿಕ ನಿಧಿಯ ಪಾರದರ್ಶಕತೆಯ ಕೊರತೆ.
3. ಆದಾಯದ ಅಸಮಾನತೆಗಳು: ತೋಳ್ಬಲ ಮತ್ತು ಹಣದ ಬಲ.
4. ಬಹು–ಪಕ್ಷ ವ್ಯವಸ್ಥೆ ಹಾಗೂ ಆಗಾಗ್ಗೆ ಬರುವಂತಹ ಚುನಾವಣೆಗಳು.
5. ರಾಜಕೀಯದಲ್ಲಿ ಕೋಮುವಾದ ಮತ್ತು ಅಪರಾಧಿಕರಣ.
6. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆಯ ಕೊರತೆ.
7. ಬದ್ಧತೆಯಿಂದ ಚುನಾವಣೆಯಲ್ಲಿ ತೊಡಗಿಸಿಕೊಳ್ಳದ ನಿರಾಸಕ್ತ ಯುವ ಜನಾಂಗ.
8. ಚುನಾವಣೆಗಳಲ್ಲಿ ಧಾರ್ಮಿಕ ಸಂಸ್ಥೆಗಳ ಪ್ರಭಾವ.
9. ಸಂಸದೀಯ ಮೌಲ್ಯ, ಮಾನವೀಯ ಹಾಗೂ ನೈತಿಕ ಮೌಲ್ಯಗಳ ಕುಸಿತ.
10. ಕಪ್ಪು ಹಣದ ಮಿತಿಮೀರಿದ ಗಳಿಕೆ ಮತ್ತು ಬಳಕೆ.
11. ಮತದಾನದಲ್ಲಿ ಭಾಗಿಯಾಗದವರಿಗೆ ದಂಡ / ಶಿಕ್ಷೆ ಇಲ್ಲದಿರುವುದು.
12. ಸ್ಪರ್ಧೆಯಲ್ಲಿ ಹೆಚ್ಚಾದ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು.

13. ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಲ್ಲದಂತಹ ಅಭ್ಯರ್ಥಿಗಳ ಆಯ್ಕೆ.

14. ಪಕ್ಷಗಳು ಗಳಿಸುವ ಮತಗಳು ಮತ್ತು ಸ್ಥಾನಗಳ ಸಂಖ್ಯೆಯಲ್ಲಿನ ಅಂತರ.

20. ವಿವಿಧ ಕಾರಣಗಳಿಂದ ಚುನಾವಣೆಯ ನೈತಿಕ ಮಟ್ಟ ಕುಸಿದಿರುವುದನ್ನು ರಾಜಕಾರಣಿಗಳಾದಿಯಾಗಿ, ನ್ಯಾಯಾಧೀಶರು, ಸಮಾಜದ ಚಿಂತಕರು, ಪತ್ರಕರ್ತರು ಹಾಗೂ ಶ್ರೀ ಸಾಮಾನ್ಯರೂ ಕೂಡ ಒಪ್ಪಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಚುನಾವಣೆಗಳನ್ನು ನ್ಯಾಯಯುತವಾಗಿ ಮತ್ತು ಭ್ರಷ್ಟಾಚಾರದಿಂದ ಮುಕ್ತಗೊಳಿಸಲು ಕಾನೂನು ತಿದ್ದುಪಡಿ ಹಾಗೂ ಸಾಂಸ್ಥಿಕ ಸುಧಾರಣೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಕ್ರೂಡೀಕರಿಸಿದ ಕೆಲ ಚುನಾವಣಾ ಸುಧಾರಣೆಗಳು ಇಂತಿವೆ.

1. ***ಚುನಾವಣೆಗಳಲ್ಲಿ ದುಂದು ವೆಚ್ಚಕ್ಕೆ ಕಡಿವಾಣ:*** *ಚುನಾವಣಾ ಪ್ರಚಾರ ಪ್ರಕ್ರಿಯೆಯನ್ನು ರಾಷ್ಟ್ರೀಕರಣ ಮಾಡಿ, ಅದರ ವೆಚ್ಚವನ್ನು ಇಳಿಸಿ, ಆ ವೆಚ್ಚವನ್ನು ಸರ್ಕಾರವೇ/ ಚುನಾವಣಾ ಆಯೋಗವೇ ಭರಿಸುವಂತೆ (ಖಣಚಿಣಜಿ ಈಣಟಿಜಜಜ ಇಟಜಛಿಣುಠಟಿ) ಮಾಡುವುದು.*

2. ***ಚುನಾವಣಾ ಪ್ರಚಾರ ಪುಸ್ತಿಕೆ:*** *ಒಂದು ಮನೆಗೆ ಒಂದರಂತೆ, ಪ್ರತಿಕ್ಷೇತ್ರದಲ್ಲೂ ಕಣದಲ್ಲಿರುವ ಎಲ್ಲಾ ಪಕ್ಷಗಳ, ಅಭ್ಯರ್ಥಿಗಳ ಬಗ್ಗೆ ಅಧಿಕೃತವಾಗಿ ಸಮಾನ ಪುಟಗಳ ಮಿತಿಯಲ್ಲಿ ಅವರೇ ಒದಗಿಸಿದ ಬರಹಗಳನ್ನು ಒಂದು ಸಮಗ್ರ ಪುಸ್ತಿಕೆಯ ರೂಪದಲ್ಲಿ ಪ್ರಕಟಿಸಿ ವಿತರಿಸುವುದು.*

3. ***ಸರ್ವ ಪಕ್ಷಗಳಿಗೂ ಪ್ರಚಾರ ಸಭೆಗಳು:*** *ಸ್ಪರ್ಧಿಸಿರುವ ಅಭ್ಯರ್ಥಿಗಳಿಗಾಗಿ ಪ್ರಚಾರ ಮಾಡಲು ಅವಕಾಶವಿರುವ ಸಾಮಾನ್ಯ ಸಾರ್ವಜನಿಕ ಸಭೆಗಳನ್ನು ವಿವಿಧ ಸ್ಥಳಗಳಲ್ಲಿ ಏರ್ಪಡಿಸಿ ಒದಗಿಸುವುದು.*

4. ***ಮಾಧ್ಯಮಗಳಲ್ಲಿ ಸಮಾನ ಅವಕಾಶ:*** *ಶ್ರವ್ಯ, ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರತೀ ಅಭ್ಯರ್ಥಿಗೂ ಪ್ರಚಾರಕ್ಕಾಗಿ ಸಮಾನ ಸ್ಥಳ ಮತ್ತು ಕಾಲಾವಕಾಶಗಳನ್ನು ಮಾಡಿಕೊಡುವುದು.*

5. ***ಸಾಮಾಜಿಕ ಜಾಲತಾಣಗಳ ಸದ್ಬಳಕೆ:*** *ಸಾಮಾಜಿಕ ಜಾಲತಾಣಗಳಲ್ಲೂ ಸೆನ್ಸಾರ್ ಮಾಡಿದ ಸಾಮಗ್ರಿಗಳನ್ನು ಪ್ರಚಾರಕ್ಕೆ ವ್ಯವಸ್ಥೆ ಮಾಡುವುದು.*

6. *ಚುನಾವಣಾ ಕ್ಷೇತ್ರ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಕೃತ ಚುನಾವಣಾ ಪ್ರಚಾರವನ್ನು ಚುನಾವಣಾ ಆಯೋಗ ನೇಮಿಸುವುದು ಹಾಗೂ ಉಸ್ತುವಾರಿ ಮಾಡುವುದು.*

7. ***ವಿಶೇಷ ಚುನಾವಣಾ ಕೋರ್ಟುಗಳ ರಚನೆ:*** *ಚುನಾವಣೆಗಳಲ್ಲಿ ಗೆದ್ದ ಕ್ರಿಮಿನಲ್ ಆಪಾದನೆ ಹೊತ್ತ ಶಾಸಕರ ಪ್ರಕರಣಗಳನ್ನು ವಿಶೇಷ ಚುನಾವಣಾ ಕೋರ್ಟುಗಳ ಮೂಲಕ ಆರು ತಿಂಗಳೊಳಗೆ ಇತ್ಯರ್ಥಗೊಳಿಸುವುದು ಮತ್ತು ಆರೋಪಗಳು ರುಜುವಾತಾಗಿ ಶಿಕ್ಷೆಗೊಳಗಾದವರನ್ನು ಅನರ್ಹಗೊಳಿಸಿ ಅವರ ಸ್ಥಾನಕ್ಕೆ ಚುನಾವಣೆಯಲ್ಲಿ ಎರಡನೆಯ ಸ್ಥಾನದಲ್ಲಿದ್ದ ಅಭ್ಯರ್ಥಿಯನ್ನು ಅರ್ಹನೆಂದು ಘೋಷಿಸುವುದು.*

8. ***ಅಭ್ಯರ್ಥಿಗಳ ಮಿತಿ:*** *ಒಂದು ಮತಕ್ಷೇತ್ರದಲ್ಲಿ ಕನಿಷ್ಠ ಮಿತಿಯಲ್ಲಿ ಚುನಾವಣಾ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಲು ಶಾಸನ ರೂಪಿಸುವುದು.*

9. *ರಾಜಕೀಯ ಪಕ್ಷಗಳು ದೇಶದಾದ್ಯಂತ ಒಟ್ಟು ಮತ ಹೆಚ್ಚಾಗಿ ಪಡೆದೂ ಕಡಿಮೆ ಸ್ಥಾನಗಳನ್ನು ಗಳಿಸುತ್ತಿರುವ ಕಾರಣದಿಂದಾಗಿ ರಾಜಕೀಯ ಪಕ್ಷಗಳಿಗೆ ಮಿತಿಗೊಳಿಸುವುದು.*

10. **ಕಡ್ಡಾಯ ಮತದಾನ ವ್ಯವಸ್ಥೆ:** ಪ್ರತಿ ಮತದಾರನೂ ಚುನಾವಣೆಯ ದಿನದಂದು ಮತ ಚಲಾಯಿಸಲೇಬೇಕು. ಮತದಾನದಲ್ಲಿ ಭಾಗಿಯಾಗದ ಮತದಾರನಿಗೆ ಸೌಲಭ್ಯಗಳ ಕಡಿತ ಮಾಡುವುದು.

11. ಒಂದು ರಾಷ್ಟ್ರ ಒಂದು ಚುನಾವಣೆಯ ಮೂಲಕ ಚುನಾವಣಾ ವೆಚ್ಚವನ್ನು ಕಡಿತಗೊಳಿಸುವುದು.

12. ರಾಜಕೀಯ ಪಕ್ಷಗಳೊಳಗಿನ ಆಂತರಿಕ ಚುನಾವಣೆಗಳಲ್ಲಿ ಪಾರದರ್ಶಕತೆ ಮತ್ತು ಸ್ವಯಂ ಶಿಸ್ತು.

13. ರಾಜಕೀಯ ಪಕ್ಷಗಳ ಪ್ರಣಾಳಿಕೆಯ ಅನುಷ್ಠಾನದಲ್ಲಿ ಮತದಾರರು ಭಾಗಿಯಾಗಿ ಸಾಮಾಜಿಕ ಪರಿಶೋಧನೆಗೊಳಪಡಿಸುವುದು.

14. ಭ್ರಷ್ಟಾಚಾರದ ನಿರ್ಮೂಲನೆಗಾಗಿ ಸಾಮಾಜಿಕ ಮತ್ತು ರಾಜಕೀಯ ನಿರ್ಬಂಧನೆಗಳನ್ನು ವಿಧಿಸುವುದು.

15. ಶುದ್ಧ ಚಾರಿತ್ರ್ಯ ಇರುವ ಮತ್ತು ಕ್ರಿಮಿನಲ್ ಹಿನ್ನೆಲೆ ಇಲ್ಲದ ಸಾಮಾಜಿಕ ಕಾಳಜಿ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ರಾಜಕೀಯ ಪಕ್ಷಗಳು ಕಟ್ಟುನಿಟ್ಟಾದ ಸ್ವಯಂ–ಶಿಸ್ತಿನ ಮಾನದಂಡಗಳನ್ನು ಅಳವಡಿಸಿಕೊಳ್ಳುವುದು.

16. ರಾಜಕೀಯ ಪಕ್ಷಗಳು ಚುನಾವಣಾ ದಿನಾಂಕಗಳ ಅಧಿಸೂಚನೆಯ ಮೊದಲು ಹಾಗೂ ಅಧಿಸೂಚನೆಯ ನಂತರ ಬೇರೆ ರಾಜಕೀಯ ಪಕ್ಷದಿಂದ ಬದಲಾದ ಅಭ್ಯರ್ಥಿಗಳನ್ನು ಕಣಕ್ಕಿಳಿಸದಂತೆ ನಿರ್ಧರಿಸುವುದು.

17. ಎಲ್ಲಾ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಸ್ಥೆಗಳು "ಮಾರಾಟಕ್ಕಾಗಿ ಮತ" ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಲು "ನನ್ನ ಮತ ಮಾರಾಟಕ್ಕಿಲ್ಲ" ಎಂಬ ರಾಷ್ಟ್ರೀಯ ಅಭಿಯಾನವನ್ನು ಆರಂಭಿಸುವುದು.

18. ಚುನಾವಣಾ ಆಯೋಗವು ಪಾರದರ್ಶಕ ರೀತಿಯಲ್ಲಿ ರಾಜಕೀಯ ಪಕ್ಷಗಳ ಮತ್ತು ಸಾಮಾಜಿಕ ನಿಧಿಯನ್ನು, ಸಾಮಾಜಿಕ ಸಂಸ್ಥೆಗಳ ಮೂಲಕ ಲೆಕ್ಕ ಪರಿಶೋಧನೆ ಮಾಡಲು ಕ್ರಮ ಕೈಗೊಳ್ಳುವುದು.

19. ಒಟ್ಟಾರೆಯಾಗಿ ಜನಸಾಮಾನ್ಯರಿಗೆ ಮತ್ತು ನಿರ್ದಿಷ್ಟವಾಗಿ ಮತದಾರರಿಗೆ ಮತದಾನದ ಸಾಕ್ಷರತೆಯ ಪ್ರಜ್ಞೆ ಮೂಡಿಸುವುದು.

20. ಚುನಾವಣಾ ಸುಧಾರಣೆಗಳನ್ನು ಜಾರಿಗೆ ತರಲು ಪ್ರಜಾಪ್ರಾತಿನಿಧ್ಯ ಕಾಯ್ದೆ ಸೇರಿದಂತೆ ಸಂಬಂಧಿಸಿದ ಕಾನೂನುಗಳನ್ನು ತಿದ್ದುಪಡಿ ಮಾಡುವುದು.

21. ಎರಡು ಅಥವಾ ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸದೆ ಇರುವಂತಹ ಹಾಗೂ ನಿಗದಿತ ಸ್ಥಾನ ಗಳಿಸದ ರಾಜಕೀಯ ಪಕ್ಷಗಳನ್ನು ಅಮಾನ್ಯತೆಗೊಳಿಸುವುದು.

22. ಆಧಾರ್ ಸೇವಾ ಕೇಂದ್ರದ ಮಾದರಿಯಲ್ಲಿ ಮತದಾರರ ಗುರುತಿನ ಚೀಟಿ ವರ್ಷ ಪೂರ್ತಿ ನಿರಂತರವಾಗಿ ನೊಂದಣಿ ಮತ್ತು ವಿತರಣೆಗಾಗಿ ಪ್ರತ್ಯೇಕವಾದ ವೋಟರ್ ಐಡಿ ಸೇವಾ ಕೇಂದ್ರ ಸ್ಥಾಪನೆ ಮಾಡುವುದು ಅತ್ಯಗತ್ಯವಾಗಿದೆ.

23. ಎಲ್ಲಾ ಚುನಾವಣೆಗಳಿಗೆ ಅನ್ವಯವಾಗುವಂತಹ ಏಕ ಮತದಾರರ ಪಟ್ಟಿ ಪ್ರಕಟಿಸಲು ಕ್ರಮಕೈಗೊಳ್ಳುವುದು.

21. ಸಹಭಾಗಿತ್ವದ ಪ್ರಜಾಪ್ರಭುತ್ವದಲ್ಲಿ ಚುನಾವಣಾ ಸುಧಾರಣೆಗಳನ್ನು ಜಾರಿಗೊಳಿಸಲು ಆಸಕ್ತರ ಪಾತ್ರ (Stake Holders) ಅತ್ಯಗತ್ಯವಾಗಿದೆ.

1. ***ಮತದಾರರು:*** *ನಾಗರೀಕರು ಚುನಾವಣೆಯಲ್ಲಿ ಮತದಾನ ಮಾಡುವ ಮೂಲಕ ಪಾಲ್ಗೊಳ್ಳುವಿಕೆಯು ಸಂವಿಧಾನದ ಅನುಚ್ಛೇದ 19(1ಎ) ಅಡಿಯಲ್ಲಿರುವಂತೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕು ಆಗಿರುತ್ತದೆ ಹಾಗೂ ಅನುಚ್ಛೇದ 51ಎ(ಡಿ) ಅಡಿಯಲ್ಲಿರುವಂತೆ ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು ನಾಗರಿಕನ ಮೂಲಭೂತ ಕರ್ತವ್ಯ ಕೂಡ ಆಗಿರುತ್ತದೆ.*
2. ***ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಆಖ):*** *ಇವರ ಮೂಲಕ ಚುನಾವಣೆ ಮತ್ತು ರಾಜಕೀಯ ಪಕ್ಷಗಳ ಸಾಮಾಜಿಕ ಲೆಕ್ಕಪರಿಶೋಧನೆ ಮಾಡುವ ಮತ್ತು ಸುಧಾರಣೆ ತರುವಂತಹ ಅಗತ್ಯವಿದೆ.*
3. ***ಸಮುದಾಯ:*** *ಪ್ರಣಾಳಿಕೆ, ನೀತಿ ರಚನೆ ಹಾಗೂ ಕಡ್ಡಾಯ ಮತದಾನದಲ್ಲಿ ಸಮುದಾಯದ ಭಾಗವಹಿಸುವಿಕೆ.*
4. ***ಸಾಮಾಜಿಕ ಸಂಸ್ಥೆಗಳು:*** *ಸಮಾಜ ಸುಧಾರಕರು ಚುನಾವಣಾ ಸುವ್ಯವಸ್ಥೆಗಾಗಿ ಸಕ್ರಿಯವಾಗಿ ತೊಡಗಿಕೊಳ್ಳುವುದು.*
5. ***ಶೈಕ್ಷಣಿಕ ಸಂಸ್ಥೆಗಳು:*** *ಚುನಾವಣೆಗಳು ಮತ್ತು ಪ್ರಜಾಪ್ರಭುತ್ವದ ಬಗ್ಗೆ ಜಾಗೃತಿ ಮೂಡಿಸಲು, ಸೆಮಿನಾರ್‌ಗಳು, ರಸಪ್ರಶ್ನೆ ಇತ್ಯಾದಿಗಳನ್ನು ನಡೆಸಲು ಚುನಾವಣಾ ಸಾಕ್ಷರತಾ ಕ್ಲಬ್/ಸಂಘಗಳನ್ನು ಸ್ಥಾಪಿಸುವುದು ಹಾಗೂ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು (25ನೇ ಜನವರಿ) ಕಡ್ಡಾಯವಾಗಿ ಆಚರಿಸುವುದು.*
6. ***ಯುವ/ಕಾಲೇಜು ವಿದ್ಯಾರ್ಥಿಗಳು:*** *ವಿವಿಧ ರಾಜಕೀಯ ಪಕ್ಷಗಳ ಮೂಲಕ ಚುನಾವಣೆ ಸಮಯದಲ್ಲಿ ಇಂಟರ್ನ್‌ಶಿಪ್ ಮಾಡುವ ಮೂಲಕ ಪ್ರಜಾತಂತ್ರದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.*
7. ***ರಾಜ್ಯ ಮತ್ತು ಕೇಂದ್ರದ ಕಾನೂನು ಆಯೋಗಗಳು:*** *ಪ್ರಜಾಪ್ರಭುತ್ವದ ಪರಿಣಾಮಕಾರಿ ಕಾರ್ಯನಿರ್ವಹಣೆಯ ಸುಧಾರಣೆಗಳನ್ನು ಸೂಚಿಸುವುದು.*
8. ***ಅಭಿಪ್ರಾಯ ರೂಪಿಸುವವರು:*** *ಮಾಧ್ಯಮದವರು, ವಕೀಲರು, ನಿವೃತ್ತ ನ್ಯಾಯಾಧೀಶರು, ರಾಜಕೀಯ ಚಿಂತಕರು, ತಮ್ಮದೇ ಆದ ರೀತಿಯಲ್ಲಿ ಆಯಾ ಕ್ಷೇತ್ರಗಳಲ್ಲಿ ಸುಧಾರಣೆಗೆ ಕ್ರಮ ವಹಿಸುವುದು.*
9. ***ಸರ್ಕಾರಿ ಏಜೆನ್ಸಿಗಳು/ಅಧಿಕಾರಿಗಳು:*** *ಚುನಾವಣಾ ಸಿಬ್ಬಂದಿ, ಪೊಲೀಸ್, ಇತ್ಯಾದಿಯವರು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳಲು ಪೂರಕ ಕ್ರಮಗಳನ್ನು ಕೈಗೊಳ್ಳುವುದು.*

22. ಕೊನೆಯದಾಗಿ, ಮೇಲಿನ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ 2025ರಿಂದ ನಮ್ಮ ಸಂಸದೀಯ ಪ್ರಜಾಪ್ರಭುತ್ವ ಮತ್ತು ಚುನಾವಣಾ ಪದ್ಧತಿಯು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಪಾರದರ್ಶಕವಾಗಿ ಅತ್ಯುತ್ತಮ ಸದೃಢ ವ್ಯವಸ್ಥೆಯನ್ನು ಹೊಂದಿರಬೇಕೆಂದು ಹಾಗೂ ನಮ್ಮ ಚುನಾವಣಾ ಪ್ರಕ್ರಿಯೆಯು ನ್ಯಾಯಯುತ ಮತ್ತು ನಿರ್ಭೀತವಾಗಿರುವ ರಾಷ್ಟ್ರವನ್ನು ನಿರ್ಮಿಸುವುದು ನಮ್ಮ ಸದುದ್ದೇಶವಾಗಿದೆ ಎಂಬುದನ್ನು ತಿಳಿಸಬಯಸುತ್ತೇನೆ. ***'ಚುನಾವಣಾ ಅಕ್ರಮಗಳು ಪ್ರಜಾಪ್ರಭುತ್ವಕ್ಕೆ ನಿಧಾನಗತಿಯ ಪಾರ್ಶ್ವವಾಯು'*** *ಎಂದು ಕರೆಯಬಯಸುತ್ತೇನೆ. 'ಚುನಾವಣೆಗಳು ಕಲುಷಿತವಾದರೆ ಪ್ರಜಾಪ್ರಭುತ್ವವೆಂಬ ವೃಕ್ಷ ಬೆಳೆಯಲಾರದು ಮತ್ತು ಉಳಿಯಲಾರದು. ಆದುದರಿಂದ ಈ ವೃಕ್ಷ ಇನ್ನೂ*

ಹೆಮ್ಮರವಾಗಿ ಬೆಳೆಯಬೇಕಾದರೆ ಒಳ್ಳೆಯ ನೀರನ್ನು ಉಣಿಸಬೇಕಾದುದು ನಮ್ಮ ಜವಾಬ್ದಾರಿ'. ***'ಪ್ರಜಾಪ್ರಭುತ್ವದ ಚುನಾವಣೆಗಳೆಂಬ ಐಕ್ಯಮತದ ಹಬ್ಬಗಳು ಸಂಭ್ರಮ, ಶ್ರದ್ಧೆ ಮತ್ತು ಪರಿಶುದ್ಧವಾಗಿ ನಡೆಯಬೇಕು ಎನ್ನುವುದು ನಮ್ಮೆಲ್ಲರ ಕಳಕಳಿ'.*** *ಈ ನಿಟ್ಟಿನಲ್ಲಿ ಕರ್ನಾಟಕವು ಚುನಾವಣಾ ಸುಧಾರಣೆಗೆ ದೇಶದಲ್ಲಿ ಮೊಟ್ಟ ಮೊದಲ ಹೆಜ್ಜೆ ಇಡಲಿ ಮತ್ತು ಅದಕ್ಕೆ ತಾವುಗಳೆಲ್ಲರೂ ಚರ್ಚೆಯಲ್ಲಿ ಭಾಗಿಯಾಗಿ ಸುಧಾರಣೆಗೆ ಆಸಕ್ತ ಮೊದಲ ವರ್ಗದವರಾಗಿರೆಂದು ವಿನಂತಿಸುತ್ತಾ ನನ್ನ ಮಾತುಗಳನ್ನು ಆಲಿಸಿದ ತಮಗೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.*

ಎಲ್ಲರಿಗೂ ನನ್ನ ಆತ್ಮೀಯ ವಂದನೆಗಳು.

ಜೈ ಹಿಂದ್

ಜೈ ಕರ್ನಾಟಕ

ಜೈ ಪ್ರಜಾಪ್ರಭುತ್ವ.

*****

123. Speaker pushes debate on electoral reforms

With speaker Vishweshwar Hegde, Kageri relentlessly pursuing the initiative, the legislative assembly is likely to debate electoral reforms for two days Congress functionaries have opposed the move, claiming it is the BJP's "hidden agenda" to moot a debate on 'one nation, one election', which it has been resisting all along. Instead, it wants the house to devote more time to the ongoing debate on demands for grants.

"We have made it clear during the meeting of the business advisory committee that the debate on electoral reforms makes no sense as it is the job of the Election Commission of India," said Congress' UT Khader, Deputy floor leader in assembly. "The BJP is trying to bring up the 'one nation, one election' issue in the guise of a debate on electoral reforms and we will oppose it."

The speaker is planning to launch the debate on Monday, after the government replies to the debate on demands for grants and the bill is passed. However, Congress MLAs are likely to stay away since party legislators are scheduled to attend an event to commemorate senior functionary MB Patil taking over as KPCC campaign committee chairman.

"The fact is that BJP itself is not keen on electoral reforms," said Ajay Singh, Congress chief whip. "We urge the government to allow more members to speak on demands for grants instead of taking up this politically-motivated issue. We are not opposed to electoral reforms but the ‘one nation, one election' concept is impractical."

The session is scheduled to end on (March 30 and Congress members said the debate on election reforms will only eat into the limited time left at the cost of budget proceedings. They pointed out that the finance bill is yet to be passed in both the assembly and council.

Singh said KPCC president DK Shivakumar, former minister KJ George and MLAS Raje Gowda and Raghumurthy are among others who want to speak on the issue of demands for grants. Former chief minister and JD(S) floor leader HD Kumaraswamy has also sought permission to speak, although the speaker said the debate on demands has closed on Friday

"The 'One nation, one election' issue is not on our minds nor are we trying to bring it indirectly," Kageri insisted. "This debate is purely conceptualised to inspire youth and other sections to actively participate in electoral politics."

The speaker had proposed a debate on the 'One nation, one election' issue during the budget session last year, but both Congress and JD(S) opposed it.

"The Congress must explain why it does not want to discuss the issue of electoral reforms," said BJP chief whip Satish Reddy. "It is only trying to escape from its responsibility to bring in much-needed reforms."

Courtesy: Times of India, dt: 28.03.2022

124. Legislature on track to meet 60-day target

With no major disruption during the budget session so far, presiding officials of both the legislative assembly and council are hoping the state legislature will meet the target of sitting for a minimum 60 days this year.

According to The Karnataka Conduct of Government Business In The State Legislature Act, 2005, the government is obligated to ensure the legislature conducts business for 60 days in a calendar year.

There are four sessions in a year: Joint session held in January-February, budget session convened in March-April, monsoon session in July-August and winter session in November-December. The law mandates a minimum 15 days each for the joint and monsoon session and while the winter session should be held for at least 10 days, the budget session must be held for a minimum of 20 days.

However, this target has not been met in recent years due to various reasons, including the government's lack of interest and frequent adjournments because of standoffs between the treasury and opposition benches.

However, buoyed by relatively smooth proceedings during the ongoing budget session, Basavaraj Horatti, Chairman of legislative council, is hopeful that the legislature will meet the minimum target of 60 working days in 2022.

"The level of discipline maintained by members of the ruling party and the opposition is relatively better this session," Horatti said. "If they continue this practice over the next two sessions as well, the legislature will conduct more than 60 days of business."

Vishweshwar Hegde Kageri, Speaker of the legislative assembly, is also enthused by the development and was pleased with the resumption of the debate on demands for grants after a gap of seven years.

"We can surely take the momentum built in the budget session forward to the monsoon and winter sessions if all members cooperate," Kageri said. "I'm happy that the debate on demands has resumed. In this manner, we can bring back other good practices as well."

The current session has seen 17 days of business so far, and, for the first time since 2004, it is expected to meet the target of 20 days when it ends on March 30. In 2019, the budget session saw only eight days of business and a total of only 18 days through the year, the lowest.

In 2021, the legislature sat for 39 days 13 of which were during the budget session.

The joint session in February 2022 saw eight days of business, although it was disrupted due to the Congress' day night dharana in both the assembly and council over the national flag issue.

However, members of the opposition insist it all depends on the government's approach towards legislature practices. They said they will protest if the ruling party goes astray.

"We are prepared to cooperate with the government since we too want the legislature to meet for more days," said Ajay Singh, Congress chief whip. "However, the government too should take responsibility and behave accordingly."

Courtesy: Times of India, dt: 29.03.2022

125. ಅಸ್ಪೃಶ್ಯತೆ ತಡೆಗೆ ವಿನಯ ಸಾಮರಸ್ಯ ಯೋಜನೆಯ ಅಸ್ತ್ರ

ಸಮಾಜದಲ್ಲಿ ಇನ್ನೂ ತಾಂಡವವಾಡುತ್ತಿರುವ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸಂಬಂಧ ರಾಜ್ಯ ಸರ್ಕಾರವು ಜನಾಂದೋಲನ ರೂಪಿಸುವ ಜೊತೆಗೆ 'ವಿನಯ ಸಾಮರಸ್ಯ' ಎಂಬ ವಿನೂತನ ಯೋಜನೆ ಜಾರಿಗೆ ಮುಂದಾಗಿದೆ. ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಈ ವಿಷಯ ತಿಳಿಸಿದ್ದಾರೆ.

ಸದನದಲ್ಲಿ ಇಲಾಖಾವಾರು ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ನೀಡಿದ ಅವರು ಕೊಪ್ಪಳ ಜಿಲ್ಲೆ ಮಿಯಾಪುರ ಗ್ರಾಮದಲ್ಲಿ ಎರಡು ವರ್ಷದ ವಿನಯ್ ಆಕಸ್ಮಿಕವಾಗಿ ದೇವಾಲಯ ಪ್ರವೇಶಿಸಿದ್ದಕ್ಕೆ ಗ್ರಾಮಸ್ಥರು ಮಗುವಿನ ಪೋಷಕರಿಗೆ ದಂಡ ವಿಧಿಸಿದ್ದಾರೆ. ಅಸ್ಪೃಶ್ಯತೆ ನಿವಾರಣೆಗೆ ಹಲವು ಕ್ರಮ ಕೈಗೊಂಡರೂ ಇನ್ನೂ ನಡೆಯುತ್ತಿರುವುದು ಸಮಾಜವು ತಲೆಬಗ್ಗಿಸುವ ವಿಚಾರವಾಗಿದೆ ಎಂದರು.

ಮಗುವನ್ನು ಇಲಾಖೆಯು ದತ್ತು ತೆಗೆದುಕೊಂಡು ಶಿಕ್ಷಣದ ಎಲ್ಲಾ ವೆಚ್ಚವನ್ನು ನೋಡಿಕೊಳ್ಳಲಾಗುತ್ತದೆ. ಪ್ರಕರಣವನ್ನು ಇಲಾಖೆಯು ಗಂಭೀರವಾಗಿ ಪರಿಗಣಿಸಿ ಅಸ್ಪೃಶ್ಯತೆ ಹೋಗಲಾಡಿಸಲು ದಿಟ್ಟ ಕ್ರಮ ಕೈಗೊಂಡಿದ್ದು, ಸಾಮರಸ್ಯ ಕಾಪಾಡಲು 'ವಿನಯ ಸಾಮರಸ್ಯ' ಎಂಬ ಯೋಜನೆಯನ್ನು ಪ್ರಾರಂಭಿಸಲಾಗುವುದು. ಈ ಬಗ್ಗೆ ಮುಖ್ಯ ಮಂತ್ರಿಗಳ ಜೊತೆ ಚರ್ಚಿಸಲಾಗುವುದು. ಅಲ್ಲದೆ, ರಾಜ್ಯದಲ್ಲಿನ 6020 ಗ್ರಾಮ ಪಂಚಾಯಿತಿಗಳಲ್ಲೂ ಅಸ್ಪೃಶ್ಯತೆ ವಿರುದ್ಧ ಸಾಮಾಜಿಕ ಸಾಮರಸ್ಯ ಕಾಪಾಡಲು ಸದಸ್ಯರಲ್ಲಿ ಜಾಗೃತಿ ಮೂಡಿಸಲಾಗುವುದು. ಯಾವ ಗ್ರಾಮ ಪಂಚಾಯಿತಿ ಆಸ್ಪೃಶ್ಯತೆ ಮುಕ್ತವಾಗಲಿದೆಯೋ ಅಂತಹ ಗ್ರಾಮಗಳಿಗೆ ಹೆಚ್ಚಿನ ಅನುದಾನ ನೀಡಲು ಕ್ರಮ ಜರುಗಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಇದೇ ವೇಳೆ ಎಸ್‌ಸಿಪಿ/ಟಿಎಸ್‌ಪಿ ಅನುದಾನವನ್ನು ಇತರೆ ಬೇರೆ ಇಲಾಖೆಗಳಿಗೆ ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ಅವಕಾಶ ಇರುವ 7ಡಿ ಕಾಯ್ದೆಯನ್ನು ರದ್ದುಪಡಿಸಬೇಕು ಎಂದು ಸಲಹೆ ನೀಡಿದ್ದಾರೆ. ಇದನ್ನು ರದ್ದುಪಡಿಸಬೇಕಾದರೆ ಹಾಲಿ ಇರುವ ಕಾಯ್ದೆಗೆ ತಿದ್ದುಪಡಿ ಮಾಡಬೇಕು. ಈ ಬಗ್ಗೆ ಸಿಎಂ ಜೊತೆ ಚರ್ಚೆ ನಡೆಸಿ ಸೂಕ್ತ ತೀರ್ಮಾನವನ್ನು ಕೈಗೊಳ್ಳಲಾಗುವುದು. ರಾಜ್ಯದಲ್ಲಿ ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧ ಮಾಡಲು ಸರ್ಕಾರ ಬದ್ಧವಾಗಿದೆ. ಇದೊಂದು ಸಾಮಾಜಿಕ ಪಿಡುಗಾಗಿದ್ದು, ಇದನ್ನು ಪಕ್ಷಬೇಧ ಮರೆತು ಎಲ್ಲರೂ ಕೊನೆಗೊಳಿಸಬೇಕು ಎಂದರು.

ಎಸ್‌ಸಿ/ಎಸ್‌ಟಿ ನಿಗಮಗಳಿಗೆ ಹೆಚ್ಚುವರಿ ಅನುದಾನವನ್ನು ಸರ್ಕಾರ ಒದಗಿಸಿದೆ. ನಿಗಮಗಳ ಮೂಲಕ ಅನೇಕ ರೀತಿಯ ಜನೋಪಯೋಗಿ ಕೆಲಸಗಳನ್ನು ಮಾಡುತ್ತಿದ್ದೇವೆ. ಪ್ರತಿಯೊಬ್ಬನಿಗೂ ಉತ್ತಮವಾದ ಕೆಲಸ ಮಾಡುವುದೇ ನಮ್ಮ ಸರ್ಕಾರದ ಗುರಿ. ಪೌರ ಕಾಮಿಕರಿಗೆ ಕಾಲಕಾಲಕ್ಕೆ ವೇತನ ಬಿಡುಗಡೆ ಮಾಡಲಾಗುತ್ತಿದೆ. ಕೆಲವು ಪೌರಕಾರ್ಮಿಕರನ್ನು ಕಾಯಂ ಮಾಡಬೇಕೆಂಬ ಸಲಹೆ ಬಂದಿದೆ. ಈ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ರದ್ದುಗೊಂಡ ಕಾರ್ಯಕ್ರಮ ಮುಂದುವರಿಕೆ: ಎಸ್‌ಸಿ/ಎಸ್‌ಟಿ ವರ್ಗದ ಯುವಕ–ಯುವತಿಯವರಿಗೆ ಗಗನಸಖಿ, ಪೈಲಟ್ ತರಬೇತಿ ಕಾರ್ಯಕ್ರಮವನ್ನು 2022–23ನೇ ಆರ್ಥಿಕ ಸಾಲಿನಿಂದ ಆರಂಭಿಸಲಾಗುವುದು ಎಂದು ಪೂಜಾರಿ ಹೇಳಿದರು. ಕೋವಿಡ್ ನಿಂದ ಸಂಕಷ್ಟ ಎದುರಾಗಿದ್ದರಿಂದ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು. ಮುಂದಿನ ವರ್ಷದಿಂದ ಯೋಜನೆಯನ್ನು ಮುಂದುವರಿಸುತ್ತೇವೆ. ಸಮುದಾಯದ ಯುವಕ–ಯುವತಿಯವರಿಗೆ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳುವಲ್ಲಿ ಇಲಾಖೆಯು ಅವಿರತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ ಎಂದು ತಿಳಿಸಿದರು.

ವಿನಯ ಸಾಮರಸ್ಯ ಎಂಬ ಹೆಸರು ಏಕೆ: ಕೊಪ್ಪಳ ಜಿಲ್ಲೆಯ ಮಿಯಾಪುರ ಗ್ರಾಮದಲ್ಲಿ ಇತ್ತೀಚೆಗೆ 2 ವರ್ಷದ ವಿನಯ್ ಎಂಬ ಮಗು ಆಕಸ್ಮಿಕವಾಗಿ ದೇವಾಲಯ ಪ್ರವೇಶಿಸಿದ್ದಕ್ಕೆ ಗ್ರಾಮಸ್ಥರು ದಂಡ ವಿಧಿಸಿದ್ದರು. ಅದು ಭಾರಿ ವಿವಾದವಾಗಿತ್ತು. ಹೀಗಾಗಿ ಅಸ್ಪೃಶ್ಯತೆ ವಿರುದ್ಧದ ಆಂದೋಲನಕ್ಕೆ ವಿನಯ ಸಾಮರಸ್ಯ ಎಂದು ಸರ್ಕಾರ ಹೆಸರಿಟ್ಟಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ:29.03.2022

126. ಪ್ರಬಲರ ಕಪಿಮುಷ್ಟಿಯಲ್ಲಿ ಭಾರತದ ಜನತಂತ್ರ

ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಹೆಸರಿಗಷ್ಟೇ ಇದ್ದು, ಅವೂ 'ವಶಾಧೀನ ಜನತಂತ್ರ' ವ್ಯವಸ್ಥೆಯತ್ತ ಹೊರಳುತ್ತಿವೆ. ಪ್ರಬಲರು ಜನತಂತ್ರವನ್ನೇ ತಮ್ಮ ಕಪಿಮುಷ್ಟಿಗೆ ತೆಗೆದುಕೊಳ್ಳುತ್ತಿದ್ದಾರೆ. ಭಾರತವು ಈ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ ಕಳವಳ ವ್ಯಕ್ತಪಡಿಸಿದರು.

ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯದ ಕುರಿತು ವಿಧಾನಸಭೆಯಲ್ಲಿ ನಡೆದ ವಿಶೇಷ ಚರ್ಚೆಯಲ್ಲಿ ಮಾತನಾಡಿದ ಅವರು, ಮತದಾನ ನಡೆಯುತ್ತಿದೆ ಎಂಬ ಮಾತ್ರಕ್ಕೆ ದೇಶದಲ್ಲಿ ಜನತಂತ್ರ ವ್ಯವಸ್ಥೆ ಇದೆ ಎನ್ನಲಾಗದು. ಸಮಾನತೆಯ ತತ್ವಗಳಿಗೆ ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಬೆಳವಣಿಗೆಗಳು ಇಲ್ಲಿ ನಡೆಯುತ್ತಿವೆ. ಭಾರತವು ಇನ್ನು ಮುಂದೆಯೂ ಪ್ರಜಾಪ್ರಭುತ್ವ ದೇಶವಾಗಿಯೇ ಉಳಿಯಬೇಕು ಎನ್ನುವುದು ನನ್ನ ಬಯಕೆ ಎಂದರು. ಹೇಳಿಕೆಯನ್ನು ಬಿಜೆಪಿ ಸದಸ್ಯರು ಕಟುವಾಗಿ ವಿರೋಧಿಸಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಚುನಾಯಿತ ಸರ್ಕಾರ ಅಸ್ತಿತ್ವದಲ್ಲಿದ್ದರೂ ಇದು ಸರ್ವಾಧಿಕಾರಿ ಸರ್ಕಾರ ಎಂದು ಆರೋಪ ಮಾಡುವುದರಲ್ಲಿ ಅರ್ಥವಿಲ್ಲ. ಅನೇಕ ಚುನಾವಣೆಗಳನ್ನು ಕಂಡ ಬಳಿಕ ಜನರು ಬುದ್ಧಿವಂತರಾಗಿದ್ದಾರೆ. ಅದನ್ನು ನಿಮಗೆ ಅರಗಿಸಿಕೊಳ್ಳಲಾಗುತ್ತಿಲ್ಲ ಎಂದರು.

ವಿಧಾನ ಸಭಾಧ್ಯಕ್ಷ ವಿಶೇಶ್ವರ ಹೆಗಡೆ, ಕಾಗೇರಿ "ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಆಯ್ಕೆಯಾದ ಸರ್ಕಾರ ಸಂವಿಧಾನದ ಚೌಕಟ್ಟು ಮೀರಿ ಆಡಳಿತ ನಡೆಸಲು ಅವಕಾಶವೇ ಇಲ್ಲ" ಎಂದರು.

ಕೃಷ್ಣ ಬೈರೇಗೌಡ, ರಷ್ಯಾದಲ್ಲೂ ಚುನಾವಣೆ ನಡೆಯುತ್ತದೆ. ಅಂದ ಮಾತ್ರಕ್ಕೆ ಅದನ್ನು ಪ್ರಜಾಪ್ರಭುತ್ವ ವ್ಯವಸ್ಥೆ ಎನ್ನಲಾಗುತ್ತದೆಯೇ ಆ ರೀತಿ ನಮ್ಮಲ್ಲಿ ಆಗಬಾರದು ಎನ್ನುವುದು ನನ್ನ ಆಶಯ ಎಂದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಮಾಧುಸ್ವಾಮಿ ಆ ರೀತಿ ಆತಂಕ ಪಡುವ ಸಂದರ್ಭ ಈಗ ಇಲ್ಲ. ತುರ್ತು ಪರಿಸ್ಥಿತಿ ಜಾರಿಯಾದಾಗ ಅಂತಹ ಪರಿಸ್ಥಿತಿ ಇತ್ತು ಎಂದರು.

ಕೃಷ್ಣ ಭೈರೇಗೌಡ ಘೋಷಿತ ತುರ್ತು ಪರಿಸ್ಥಿತಿ ಹೇರಿದ್ದು ಸರಿಯಲ್ಲ ಎಂಬುದನ್ನು ನೈತಿಕವಾಗಿ ನಾವು ಒಪ್ಪಿಕೊಂಡಿದ್ದೇವೆ. ಈಗ ಅಘೋಷಿತ ತುರ್ತು ಪರಿಸ್ಥಿತಿ ಇದೆ ಈ ಮಾತನ್ನು ಜೆಡಿಎಸ್‌ನ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದ್ದಾರೆ. ಇದನ್ನು ಒಪ್ಪಿಕೊಳ್ಳುವುದು ಬಿಡುವುದು ನಿಮಗೆ ಬಿಟ್ಟಿದ್ದು ಎಂದರು.

ಒಂದೇ ಚುನಾವಣೆ–ಪ್ರಾದೇಶಿಕ ಪಕ್ಷಗಳು ನಾಶವಾಗುವ ಅಪಾಯ: ಒಂದು ದೇಶ–ಒಂದು ಚುನಾಣೆ ಎಂಬ ಘೋಷಣೆ ಕೇಳಲು ಚೆಂದ. ಆದರೆ, ಇದು ಪ್ರಾದೇಶಿಕ ಪಕ್ಷಗಳನ್ನೇ ನಾಸಪಡಿಸುವ ಅಪಾಯವಿದೆ ಎಂದು ಕೃಷ್ಣ ಬೈರೇಗೌಡ ಆತಂಕ ವ್ಯಕ್ತಪಡಿಸಿದರು.

ಚುನಾವಣೆಯಲ್ಲಿ ನಿರ್ದಿಷ್ಟ ಪಕ್ಷಕ್ಕೆ ಬಹುಮತ ಸಿಗದೇ ಹೋದರೆ ಸಮ್ಮಿಶ್ರ ಸರ್ಕಾರದ ರಚನೆಗೆ ಪಕ್ಷಗಳಲ್ಲಿ ಸಹಮತ ವ್ಯಕ್ತವಾಗದೇ ಹೋದರೆ ಮತ್ತೆ ಚುನಾವಣೆ ನಡೆಸಬೇಕಾಗುತದೆ. ಆಗ ಒಂದೇ ಚುನಾವಣೆ ಎಂಬ ಘೋಷಣೆ ಹುಸಿಯಾಗುವುದಿಲ್ಲವೇ ಎಂದು ಅವರು ಪ್ರಶ್ನಿಸಿದರು.

ಒಂದೇ ಚುನಾವಣೆಯ ನೆಪ ಇಟ್ಟುಕೊಂಡು ಕೇಂದ್ರ ಸರ್ಕಾರವು ರಾಜ್ಯಪಾಲರ ಆಳ್ವಿಕೆ ಹೇರಿದರೆ ಪರಿಸ್ಥಿತಿ ಹೇಗಿರಬೇಡ ಡಿಎಂಕೆ ತೃಣಮೂಲ ಕಾಂಗ್ರೆಸ್, ಅಮ್ ಆದ್ಮಿ ಪಾರ್ಟಿಯವಂತಹ ಪಕ್ಷಗಳ ಗತಿ ಏನು. ಈಗಾಗಲೇ ಅರುಣಾಚಲ ಪ್ರದೇಶ ಹಾಗೂ ಉತ್ತರ ಖಂಡದಲ್ಲಿ ಏನೆಲ್ಲ ಬೆಳವಣಿಗೆ ನಡೆದಿದೆ ಎಂಬುದನ್ನು ನೋಡಿದ್ದೇವೆ ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:30.03.2022

127. 19 ಲಕ್ಷ ಇವಿಎಂ ನಾಪತ್ತೆ

ಸಾಮಾಜಿಕ ಕಾರ್ಯಕರ್ತರು ಮಾಹಿತಿ ಹಕ್ಕಿನಡಿ ಪಡೆದ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ 19 ಲಕ್ಷ ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ನಾಪತ್ತೆಯಾಗಿವೆ. ಈ ಮತ ಯಂತ್ರಗಳು ಎಲ್ಲಿಗೆ ಹೋದವು.

'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯ' ಕುರಿತು ವಿಧಾನಸಭೆಯಲ್ಲಿ ನಡೆದ ವಿಶೇಷ ಚರ್ಚೆ ಇವಿಎಂಗಳ ನಾಪತ್ತೆ ಹಾಗೂ ದುರ್ಬಳಕೆ ಕುರಿತ ಗಂಭೀರ ಜಿಜ್ಞಾಸೆಗೆ ಅವಕಾಶ ಒದಗಿಸಿತು.

ಇವಿಎಂಗಳು ದುರ್ಬಳಕೆಯಾಗಿರುವ ಕುರಿತು ಪ್ರಸ್ತಾಪಿಸಿದ ಕಾಂಗ್ರೆಸ್‌ನ ಎಚ್. ಕೆ. ಪಾಟೀಲ್ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸಂಸ್ಥೆಯಿಂದ 9,64,270 ಹಾಗೂ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ (ಇಸಿಐಎಲ್) ಸಂಸ್ಥೆಯಿಂದ 9,29,992 ಇವಿಎಂಗಳು ನಾಪತ್ತೆಯಾಗಿವೆ ಎಂದು ಮಾಹಿತಿ ಹಕ್ಕಿನಡಿ ಪಡೆಯಲಾದ ದಾಖಲೆಗಳು ಹೇಳುತ್ತಿವೆ. 2014–15ರಲ್ಲಿ ಭಾರತೀಯ ಚುನಾವಣಾ ಆಯೋಗಕ್ಕೆ 62,183 ಇವಿಎಂಗಳನ್ನು ಪೂರೈಸಿರುವುದಾಗಿ ಬಿಇಎಲ್ ಹೇಳುತ್ತಿದೆ. ಆದರೆ, ಅವುಗಳು ತಲುಪಿಯೇ ಇಲ್ಲ ಎಂದು ಚುನಾವಣಾ ಆಯೋಗ ಹೇಳುತ್ತಿದೆ. ಹಾಗಾದರೆ ಈ ಇವಿಎಂಗಳು ಏನಾದವು ಎಂದು ಪ್ರಶ್ನಿಸಿದರು.

ಈ ಬಗ್ಗೆ ಚುನಾವಣಾ ಆಯೋಗವೇ ಪ್ರತಿಕ್ರಿಯೆ ನೀಡಬೇಕು. ಯಾವುದೇ ಇವಿಎಂ ದುರ್ಬಳಕೆ ಆಗುತ್ತಿಲ್ಲ ಎಂಬುದನ್ನು ಆಯೋಗ ಸಾಬೀತುಪಡಿಸದೇ ಹೋದರೆ, ಈ ಕುರಿತ ಶಂಕೆಗಳು ಇನ್ನಷ್ಟು ಗಟ್ಟಿಗೊಳ್ಳುತ್ತವೆ. ಚುನಾವಣಾ ಪ್ರಕ್ರಿಯೆ ಕುರಿತು ಜನರ ಸಂದೇಹಗಳನ್ನು ನಿವಾರಿಸುವ ಜವಾಬ್ದಾರಿ ಆಯೋಗದ ಮೇಲಿದೆ. ನಾನು ನೀಡಿರುವ ಮಾಹಿತಿ ತಪ್ಪಾಗಿದ್ದರೆ ಯಾವುದೇ ಶಿಕ್ಷೆಗೆ ಬೇಕಿದ್ದರೂ ಗುರಿಪಡಿಸಬಹುದು ಎಂದು ಎಚ್.ಕೆ. ಪಾಟೀಲ ಸವಾಲು ಹಾಕಿದರು.

ಈ ಹಿಂದೆ ಚುನಾವಣಾ ಆಯೋಗವು ಇವಿಎಂಗಳ ಅಸುರಕ್ಷಿತ ಎಂದು ಸಾಬೀತುಪಡಿಸಲು ಸಾರ್ವಜನಿಕರಿಗೆ ಮುಕ್ತ ಆಹ್ವಾನ ನೀಡಿತ್ತು. ಆಗ ಯಾರೂ ಮುಂದೆ ಬಂದಿರಲಿಲ್ಲ ಎಂದು ಬಿಜೆಪಿಯ ಅರವಿಂದ ಬೆಲ್ಲದ ಹೇಳಿದರು.

ಇವಿಎಂಗಳನ್ನು ಪರೀಕ್ಷೆ ಮಾಡಲು ಚುನಾವಣಾ ಆಯೋಗವು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಆಹ್ವಾನ ನೀಡಿತ್ತು. ಆದರೆ ಅವುಗಳನ್ನು ಪರೀಕ್ಷೆಗೆ ಒಳಪಡಿಸುವ ತಂತ್ರಜ್ಞರು ರಾಜಕೀಯ ಪಕ್ಷದಲ್ಲಿಲ್ಲ. ಅದರ ಬದಲು, ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರಿಂದ ಇದನ್ನು ಪರೀಕ್ಷೆಗೆ ಒಳಪಡಿಸಲಿ ಎಂದು ಒತ್ತಾಯಿಸಿದ ಪಾಟೀಲರು, ಈ ಬಗ್ಗೆ ಹೆಚ್ಚಿನ ಮಾಹಿತಿ ಪ್ರಿಯಾಂಕ್ ಖರ್ಗೆ ಬಳಿ ಇದೆ ಎಂದರು.

ಆಗ ಮಾತನಾಡಿದ ಕಾಂಗ್ರೆಸ್‌ನ ಪ್ರಿಯಾಂಕ್, ಬಿಜೆಪಿಯವರೇ ಆದ ಜಿವಿಎಲ್ ನರಸಿಂಹ ರಾವ್ ಅವರು ಇವಿಎಂ ಹ್ಯಾಕಿಂಗ್ ಬಗ್ಗೆ ಪುಸ್ತಕವನ್ನೇ ಬರೆದಿದ್ದಾರೆ. ಚುನಾವಣಾ ಆಯೋಗವು ಇವಿಎಂನ ಲೋಪಗಳನ್ನು ಸಾಬೀತುಪಡಿಸುವಂತೆ ಸವಾಲೆಸೆದಾಗ ನಾನು ರಾಜ್ಯದ ಮಾಹಿತಿ ತಂತ್ರಜ್ಞಾನ ಸಚಿವನಾಗಿದ್ದೆ. ಲೋಪಗಳ ಬಗ್ಗೆ ಸರ್ಕಾರದಿಂದ ಎರಡು ಪತ್ರ ಬರೆದಿದ್ದೆವು. ಅದಕ್ಕೆ ಪ್ರತಿಯಾಗಿ ಇವಿಎಂ ನಿರ್ವಹಣೆಯ ಕೈಪಿಡಿಯನ್ನಷ್ಟೇ ಕಳುಹಿಸಿಕೊಟ್ಟ ಆಯೋಗವು ಸಂದೇಹಗಳಿಗೆ ಉತ್ತರ ನೀಡುವ ಗೋಜಿಗೆ ಹೋಗಿರಲಿಲ್ಲ ಎಂದರು.

ಚುನಾವಣಾ ಆಯೋಗಕ್ಕೆ ಸಮಸ್ಸ್ ನೀಡಿ: ಚುನಾವಣಾ ಆಯೋಗಕ್ಕೆ ಸಮಸ್ಸ್ ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇದೆ. ಚುನಾವಣಾ ಆಯೋಗದವರನ್ನು ಈ ಸದನಕ್ಕೆ ಕರೆಸಿ ಇವಿಎಂ ದುರ್ಬಳಕೆ ವಿಚಾರದಲ್ಲಿ ದೇಶದ ಸಂದೇಹ ನಿವಾರಿಸಿ ಸತ್ಯಸ್ಥಾಪನೆ ಮಾಡುವ ನಿರ್ಣಯವನ್ನು ಸಭಾಧ್ಯಕ್ಷರು ಕೈಗೊಳ್ಳಬೇಕು ಎಂದು ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಒತ್ತಾಯಿಸಿದರು.

ನಮ್ಮ ದೇಶದಲ್ಲಿ ಚುನಾವಣಾ ಆಯೋಗವನ್ನು ಬಿಟ್ಟೂ ಬೇರೆ ಯಾರಿಗೂ ಇವಿಎಂಗಳನ್ನು ಪೂರೈಸಲು ಬಿಇಎಲ್ ನಂತಹ ಸಂಸ್ಥೆಗಳಿಗೆ ಅವಕಾಶವಿಲ್ಲ. ರಾಷ್ಟ್ರಪತಿಯವರಿಂದಲೇ ಪ್ರಮಾಣವಚನ ಸ್ವೀಕರಿಸುವ ಮುಖ್ಯ ಚುನಾವಣಾ ಆಯುಕ್ತರು ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕಿದೆ. ಈ ಬಗ್ಗೆ ಸಭಾಧ್ಯಕ್ಷರತು ಆಯೋಗಕ್ಕೆ ನೋಟೀಸ್ ನೀಡಿದರೆ ಇಡೀ ಸದನ ಅವರ ಪರ ನಿಲ್ಲಬೇಕು ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:30.03.2022

128. ಜನನಾಯಕರ ಆತ್ಮಾವಲೋಕನ

ದೇಶದ ಚುನಾವಣಾ ವ್ಯವಸ್ಥೆ ಸುಧಾರಣೆ ಬಗ್ಗೆ ವಿಧಾನಸಭೆಯಲ್ಲಿ ಅಭೂತಪೂರ್ವ ಎಂಬಂತೆ ಗಂಭೀರ ಚರ್ಚೆ ನಡೆದಿದೆ. ಚುನಾವಣೆಯೊಂದಿಗೆ ಭ್ರಷ್ಟಾಚಾರ ಮಿಳಿತಗೊಂಡಿರುವುದಕ್ಕೆ ಪಕ್ಷಭೇದ ಮರೆತು ಶಾಸಕರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಆತ್ಮಾವಲೋಕನಕ್ಕೆ ಇದು ಸಕಾಲ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. 'ಚುನಾವಣೆ ವ್ಯೆವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ' ವಿಚಾರವಾಗಿ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಪ್ರಸ್ತಾಪ ಮಂಡಿಸಿದ್ದರು. ಇದರ ಆಧಾರದಲ್ಲಿ ಕಲಾಪದಲ್ಲಿ ಸುದೀರ್ಘ ಚರ್ಚೆ ನಡೆಸಲಾಯಿತು.

'ಒಂದು ದೇಶ–ಒಂದು ಚುನಾವಣೆ' ಕುರಿತು ಸಾಧಕ–ಬಾಧಕದ ಬಗ್ಗೆಯೂ ಪ್ರಸ್ತಾಪವಾಯಿತು.

ಚುನಾವಣಾ ಪ್ರಕ್ರಿಯೆಯಲ್ಲಿ ನೈತಿಕ ಪತನ ಕಾಣುತ್ತಿರುವುದು ಮತ್ತು ಹಣದ ಹೊಳೆ ಹರಿಯುತ್ತಿರುವುದರ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಲಾಯಿತು. ಇದಕ್ಕೆ ಪರಿಹಾರ ಕಂಡುಕೊಳ್ಳುವತ್ತಲೂ ಇಡೀ ಸದನ ನಿಷ್ಕರ್ಷೆ ಮಾಡಿದ್ದು ಗಮನ ಸೆಳೆಯಿತು.

ಚುನಾವಣಾ ವ್ಯವಸ್ಥೆಯನ್ನು ಪರಿಶುದ್ಧ ಮತ್ತು ಪರಿಪಕ್ವಗೊಳಿಸಲು ಆತ್ಮವಲೋಕನ ಅಗತ್ಯ. ಇದು ಅತ್ಯಂತ ಗಂಭೀರ ನೆಲೆಯಲ್ಲಿ ನಡೆಯಬೇಕು. ಭ್ರಷ್ಟಾಚಾರದ ಮೂಲವನ್ನೇ ಕಿತ್ತೊಗೆಯಲು ಸಕಾರಾತ್ಮಕ ಹೆಜ್ಜೆಯಿಡಬೇಕು. ಇದರಲ್ಲಿ ಶಾಸಕಾಂಗದ ಜೊತೆಗೆ ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮ ರಂಗವು ಒಳಗೊಳ್ಳಬೇಕು. ಪ್ರಜಾಪ್ರಭುತ್ವದ ಪ್ರತಿಯೊಂದು ಅಂಗವೂ ತನ್ನನ್ನು ತಾನು ಪ್ರಶ್ನೆಗೆ ಒಡ್ಡಿಕೊಳ್ಳಬೇಕು ಎಂದು ಪ್ರತಿಪಾದಿಸಲಾಯಿತು.

ಹಣಬಲ ತೋಳ್ಬಲ: ಚುನಾವಣಾ ಪ್ರಕ್ರಿಯೆ ಮೇಲೆ ನಾನಾ ಲಾಬಿಯ ಪ್ರಭಾವದ ಬಗ್ಗೆಯೂ ಕೆಲ ಶಾಸಕರು ಪ್ರಸ್ತಾಪಿಸಿದರು. ಹಣಬಲ, ತೋಳ್ಬಲ, ಜಾತಿಬಲದ ಮೇಲಾಟದಿಂದ ಚುನಾವಣಾ ವ್ಯವಸ್ಥೆ ಎಷ್ಟೊಂದು ಹದಗೆಟ್ಟಿದೆ ಎಂಬುದರ ಬಗ್ಗೆ ಆಕ್ರೋಶ ಹೊರ ಹಾಕಲಾಯಿತು. ಚುನಾವಣೆಯೆಂದರೆ ಪ್ರಜಾಪ್ರಭುತ್ವದ ಹಬ್ಬ ಇದರಲ್ಲಿ ಅತ್ಯಂತ ಆಸಕ್ತಿ ಮತ್ತು ಖುಷಿಯಿಂದ ಪಾಲ್ಗೊಳ್ಳುವವರು ಯಾರು ಎಂಬ ಬಗ್ಗೆಯೂ ಮಾತುಕತೆ ನಡೆಯಿತು. ಶ್ರೀಮಂತ ವರ್ಗ ಮತದಾನಕ್ಕೆ ನಿರಾಸಕ್ತಿ ತೋರಿದರೆ ಬಡವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ ಎಂದು ಶಾಸಕರು ಅಭಿಪ್ರಾಯಪಟ್ಟರು. ರಾಜಕೀಯ ಮತ್ತು ಸೇವೆಗಳ ಉದ್ದೇಶದ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡುವಾಗಲೇ ತಿಳಿಸಿ ಕೊಡುವ ಅಗತ್ಯವಿದೆ .ಇಂಥ ವಿಚಾರವನ್ನು ಪಠ್ಯದಲ್ಲಿ ಅಳವಡಿಸುವ ಅಗತ್ಯವಿರುವುದಾಗಿ ಸಭಾಧ್ಯಕ್ಷರು ಸೇರಿದಂತೆ ಹಲವರು ಅಪೇಕ್ಷಿಸಿದರು.

ಸದಸ್ಯರ ಸಲಹೆಗಳೇನು:

- ಮತ ಚೀಟಿಗೆ ಆಧಾರ ಲಿಂಕ್ ಕಡ್ಡಾಯಗೊಳಿಸುವುದು.
- ಪದವೀಧರ ಕ್ಷೇತ್ರಕ್ಕೆ ಇರುವಂತೆ ವಿಧಾನಸಭೆಗೂ ಪ್ರಾಶಸ್ತ್ಯ ಮತಗಳ ಆಧಾರದಲ್ಲಿ ಅಭ್ಯರ್ಥಿ ಆಯ್ಕೆ.
- ಚುನಾವಣೆ ವೇಳೆ ಡಿಜಿಟಲ್ ಹಣ ಸಂದಾಯದ ಮೇಲೆ ನಿಗಾ.

- ಏಕಕಾಲದಲ್ಲಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸದಂತೆ ತಡೆಯುವುದು.
- ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆವರೆಗೆ ಮಾತ್ರ ಪ್ರಚಾರ.
- ನಾಮಪತ್ರ ಸಲ್ಲಿಕೆ ನಂತರ ಮತದಾನದವರೆಗೂ ಅಭ್ಯರ್ಥಿಯನ್ನು ಕ್ಷೇತ್ರದಿಂದ ಹೊರಗೆ ಕಳಿಸುವುದು.

ಚುನಾವಣೆ ವ್ಯವಸ್ಥೆ ಸುಧಾರಣೆ ಬಗ್ಗೆ ಸದನದಲ್ಲಿ ಚರ್ಚೆ ಕೈಗೆತ್ತಿಕೊಳ್ಳಲು ಕಳೆದೊಂದು ವರ್ಷದಿಂದಲೇ ಸ್ಪೀಕರ್ ಪ್ರಯತ್ನ ಮಾಡುತ್ತಿದ್ದರು. ಇದರ ಭಾಗವಾಗಿ 'ಒನ್ ನೇಷನ್–ಒನ್ ಎಲೆಕ್ಷನ್' ಬಗ್ಗೆ ಚರ್ಚೆ ಸಂಬಂಧ ಸಮಯವನ್ನು ನಿಗದಿ ಮಾಡಿದ್ದರು. ಆದರೆ, ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಕಾಂಗ್ರಸ್ ಧರಣಿ ನಡೆಸಿತ್ತು. ಹಾಗಾಗಿ ಬೇರೆಯದೇ ಸ್ವರೂಪದಲ್ಲಿ ಚರ್ಚೆಗೆ ಈ ಬಾರಿ ಸ್ಪೀಕರ್ ಅವಕಾಶ ನೀಡಿದ್ದಾರೆ. ಅಂದರೆ ಒಂದು ರಾಷ್ಟ ಒಂದು ಚುನಾವಣೆ ಎಂಬುದರ ಬದಲಾಗಿ ಚುನಾವಣಾ ವ್ಯವಸ್ಥೆ ಸುಧಾರಣೆ ಎಂಬ ವಿಷಯದಡಿ ಚರ್ಚೆ ಪ್ರಾರಂಭಿಸಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:30.03.2022

129. ಚುನಾವಣೆ ವ್ಯವಸ್ಥೆ ಸುಧಾರಣೆ

ವಿಧಾನ ಸಭೆಯಲ್ಲಿ ಚಿಂತನ ಮಂಥನ ಸ್ವಾಗತಾರ್ಹ:–

ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದು. ನಮ್ಮ ಹಿರಿಯರು ರೂಪಿಸಿದ ಈ ವ್ಯವಸ್ಥೆ ಹಲವು ದೇಶಗಳಿಗೆ ಮಾದರಿಯಾಗಿದೆ. ಆದರೆ, ಪ್ರಜಾಪ್ರಭುತ್ವದ ಆಧಾರ ಎನಿಸಿರುವ ಚುನಾವಣೆ ವ್ಯವಸ್ಥೆ ಮಾತ್ರ ಇತ್ತೀಚಿನ ವರ್ಷಗಳಲ್ಲಿ ಹಾದಿ ತಪ್ಪುತ್ತಿದೆ. ಸ್ವಾತಂತ್ರ್ಯ ನಂತರದ ಮೊದಲ ಮೂರ್ನಾಲ್ಕು ಚುನಾವಣೆಗಳನ್ನು ಹೊರತುಪಡಿಸಿದರೆ ಆ ನಂತರದ ಎಲ್ಲ ಚುನಾವಣೆಗಳಲ್ಲಿ ದುಡ್ಡಿದ್ದವರಿಗೆ ಮನ್ನಣೆ ದೊರೆಯಿತು. ಈಗಂತೂ ದುಡ್ಡೊಂದು ಇದ್ದರೆ ಸಾಕು, ಚುನಾವಣೆಯನ್ನು ಸಲೀಸಲಾಗಿ ಗೆಲ್ಲಬಹುದು ಎಂಬ ಆತ್ಮವಿಶ್ವಾಸ ಎಲ್ಲರಲ್ಲೂ ಇದೆ ಮತ್ತು ಇದು ನಿಜವೂ ಹೌದು. ಪ್ರಾಮಾಣಿಕರು, ದಕ್ಷರು, ಜನಪರ ಕಾಳಜಿಯುಳ್ಳವರು ಚುನಾವಣೆಗೆ ಸ್ಪರ್ಧಿಸಿ, ಗೆಲ್ಲುವುದು ಅಸಾಧ್ಯದ ಮಾತು. ದೀರ್ಘಾವಧಿಯಲ್ಲಿ ಇದರಿಂದಾಗುವ ಅಪಾಯಗಳ ಬಗ್ಗೆ ಎಲ್ಲರಿಗೂ ಗೊತ್ತು. ಆದರೆ, ಯಾರೂ ಏನು ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಚುನಾವಣೆ ವ್ಯವಸ್ಥೆ ಮೇಲ್ವಿಚಾರಣೆಗೆ ಚುನಾವಣಾ ಆಯೋಗ ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸುತ್ತಿದೆ. ವ್ಯವಸ್ಥೆಯನ್ನುನ ಸುಧಾರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಆದರೆ, ವಾಸ್ತವ ಸ್ಥಿತಿ ಮಾತ್ರ ಭಿನ್ನವಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ವಿಧಾನಸಭೆಯಲ್ಲಿ ಚುನಾವಣೆ ಸುಧಾರಣೆಗೆ ಪಕ್ಷಬೇದ ಮರೆತು ಅವಲೋಕನ ಮಾಡಿಕೊಂಡಿರುವುದು ಸಕಾರಾತ್ಮಕ ಸಂಗತಿಯಾಗಿದೆ. ಕನಿಷ್ಠ ಚರ್ಚೆಯಾದರೂ ನಮ್ಮ ಪ್ರತಿನಿಧಿಗಳು ಮಾಡಿದರಲ್ಲ ಎಂಬ ಸಮಾಧಾನವನ್ನು ತಂದುಕೊಳ್ಳಬಹುದು.

ಚುನಾವಣೆ ಎನ್ನುವುದು ಈಗ ಉದ್ಯಮವಾಗಿದೆ. ಹಣ ಹೂಡಿಕೆ ಮಾಡಿ, ವಾಪಸ್ ತೆಗೆದುಕೊಳ್ಳುವ ವ್ಯಾಪಾರಿ ನೀತಿಯನ್ನು ನಾವು ಕಾಣುತ್ತಿದ್ದೇವೆ. ಇಲ್ಲಿ ಜನ ಕಲ್ಯಾಣ, ದೇಶ ಸೇವೆ ಅಭಿವೃದ್ಧಿ ಎಂಬುದೆಲ್ಲ ಗೌಣ. ದುಡ್ಡು ಮಾತ್ರವೇ ಮಾತನಾಡುತ್ತಿದೆ. ಎಲ್ಲ ಸ್ತರದ ಚುನಾವಣೆಯಲ್ಲೂ ಮಿತಿ ಮೀರಿದ ವೆಚ್ಚ ಸಾಮಾನ್ಯ: ಅಕ್ರಮ ಹಣ, ಕಪ್ಪು ಹಣ ಬಳಕೆಯಾಗುತ್ತಿರುವುದು ಈಗ ಗುಟ್ಟಾಗಿ ಉಳಿದಿಲ್ಲ. ಈ ಬಗ್ಗೆ ಅನೇಕ ರಾಜಕೀಯ ನಾಯಕರು ಹಲವು ವೇದಿಕೆಗಳಲ್ಲಿ ಆತ್ಮಾವಲೋಕನ ಮಾತುಗಳನ್ನು ಆಡಿದ್ದಾರೆ. ಈಗಿರುವ ವ್ಯವಸ್ಥೆಯಲ್ಲಿ ಕೇಂದ್ರ ಚುನಾವಣಾ ಆಯೋಗವು ಲೋಪರಹಿತವಾಗಿ ಚುನಾವಣೆಗಳನ್ನು ನಡೆಸಲು ಪ್ರಯತ್ನಿಸುತ್ತಿದೆ. ವೆಚ್ಚದ ಮೇಲೆ ಮಿತಿ ಹೇರಿದ್ದರೂ ಯಾವುದಕ್ಕೂ ಸಾಕಾಗುತ್ತಿಲ್ಲ. ನಮ್ಮ ವ್ಯವಸ್ಥೆಯೊಳಗಿನ ಲೋಕ ದೋಷಗಳೇ ಕೈ ಮೇಲಾಗುತ್ತಿದೆ. ಒಂದು

ಸಾಮಾನ್ಯ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಅಭ್ಯರ್ಥಿಯೊಬ್ಬ ಲಕ್ಷಾಂತರ ರೂಪಾಯಿ ವೆಚ್ಚ ಮಾಡುತ್ತಾನೆಂದರೆ, ಇನ್ನು ವಿಧಾನಸಭೆ–ಲೋಕಸಭೆ ಚುನಾವಣೆಗೆ ಯಾವ ಪರಿ ದುಡ್ಡು ವೆಚ್ಚವಾಗಬಹುದು ಎಂಬುದನ್ನು ಊಹೆ ಮಾಡಿಕೊಳ್ಳಬಹುದು.

ಅಭ್ಯರ್ಥಿಗಳು ಮತದಾರರಿಗೆ ಹಂಚುವ ಹಣಕ್ಕೂ ಗೆದ್ದ ಮೇಲೆ ಐದು ವರ್ಷಗಳಲ್ಲಿ ಅವರು ಹೆಚ್ಚಿಸಿಕೊಳ್ಳುವ ಸ್ವಂತ ಆಸ್ತಿಗೂ ಸಾಕಷ್ಟು ಸಂಬಂಧ ಇದೆ. ಇದು ಹಣ ಹಂಚಿದವರು ಮುಂದಿನ ಐದು ವರ್ಷಗಳಲ್ಲಿ ಅದರ ಮೂರು ಪಟ್ಟು ಗಳಿಸುವ ಉದ್ದೇಶದಿಂದಲೇ ಹೊರಟಿರುತ್ತಾರೆ ಎಂಬುದು ನಿರ್ವಿವಾದ. ಇದೊಂದು ವಿಷಚಕ್ರ. ಈ ಚಕ್ರದಲ್ಲಿ ಮತದಾರರು ಕೂಡ ಅರಿವಿಲ್ಲದೆ ಭಾಗಿಗಳಾಗಿರುತ್ತಾರೆ. ಚುನಾವಣಾ ಅಕ್ರಮ ಎಂಬುದು ದ್ವಿಮುಖಿಯಾದುದು. ಹಣ ಹಂಚುವವರು ಮತ್ತು ಹಣ ಪಡೆದುಕೊಳ್ಳುವರಿಬ್ಬರೂ ಇದಕ್ಕೆ ಬಾಧ್ಯಸ್ಥರಾಗುತ್ತಾರೆ. ಇದು ಆರೋಗ್ಯಕರ ಪ್ರಜಾಪ್ರಭುತ್ವಕ್ಕೆ ಹಾನಿಕರ. ಹಣ ಚೆಲ್ಲಿ ಆರಿಸಿ ಬರುವವರು ಮತ್ತೇ ಅದನ್ನು ಗಳಿಸುವುದಕ್ಕಾಗಿ ಅದೇ ಪ್ರಜೆಗಳನ್ನೇ ಸುಲಿಯುವುದಕ್ಕೆ ಮುಂದಾಗುತ್ತಾರೆ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ.

ಪ್ರಜಾಪ್ರಭುತ್ವ ಸಶಕ್ತವಾಗಿ ಉಳಿದು, ಮುಂದುವರಿಯಬೇಕೆಂದರೆ ನಮ್ಮ ಚುನಾವಣಾ ವ್ಯವಸ್ಥೆ ಆಮೂಲಾಗ್ರವಾಗಿ ಬದಲಾಗಬೇಕು. ಆ ನಿಟ್ಟಿನಲ್ಲಿ ವಿಧಾನಸಭೆಯಲ್ಲಿ ನಡೆದ ಚರ್ಚೆಯು ಮುಂದಿನ ಕ್ರಮಗಳಿಗೆ ದಿಕ್ಸೂಚಿಯಾಗಲಿ ಇದು ಕೇವಲ ಚರ್ಚೆಯಾಗಿ ಉಳಿಯದೆ ಅಗತ್ಯವಿರುವ ಕಾನೂನು ತಿದ್ದುಪಡಿಗಳನ್ನು ತಂದು, ಲೋಪರಹಿತ ವ್ಯವಸ್ಥೆಯನ್ನು ರೂಪಿಸಲು ಶ್ರೀಕಾರ ಹಾಕಲಿ.

ಆಧಾರ: ವಿಜಯ ಕರ್ನಾಟಕ, ದಿನಾಂಕ:30.03.2022

130. ಬೊಮ್ಮಾಯಿ ಚೊಚ್ಚಲ ಬಜೆಟ್‌ಗೆ ವಿಧಾನ ಮಂಡಲದ ಅಂಗೀಕಾರ

2022–23ನೇ ಆರ್ಥಿಕ ವರ್ಷಕ್ಕಾಗಿ ರೂ.2.17 ಲಕ್ಷ ಕೋಟಿ ಅನುದಾನ ಕಲ್ಪಿಸಲು ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕಕ್ಕೆ ಅನುಮೋದನೆ ನೀಡುವ ಮೂಲಕ ಬಜೆಟ್ ಅನ್ನು ವಿಧಾನಮಂಡಲದಲ್ಲಿ ಅಂಗೀಕರಿಸಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯು ಅವರು ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡರು. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತವನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟ ಸೇವೆ ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಲಾಗುವುದು ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ. ಇದಕ್ಕೂ ಮುನ್ನ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ ಕಳೆದ ಸಾಲಿಗಿಂತ ಶೇ.7.9 ರಷ್ಟು ಹೆಚ್ಚಿನ ಗಾತ್ರದ ಬಜೆಟ್ ನೀಡುವಲ್ಲಿ ಯಶಸ್ವಿಯಾಗಿದ್ದೇವೆ. ಬಜೆಟ್‌ನ ಎಲ್ಲಾ ಘೋಷಣೆಗಳನ್ನು ಖಂಡಿತವಾಗಿ ಅನುಷ್ಠಾನ ಮಾಡುತ್ತೇವೆ ಎಂದರು.

ಆರ್ಥಿಕ ಹೊಣೆಗಾರಿಕೆ ತಿದ್ದುಪಡಿ ವಿಧೇಯಕ ಅಂಗೀಕಾರ: ಇದೇ ವೇಳೆ, ಆರ್ಥಿಕ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ–2022 ಅನ್ನು ಅಂಗೀಕರಿಸಲಾಗಿದೆ. ಹಣಕಾಸಿನ ಕೊರತೆಯ ಮಿತಿಯನ್ನು ಶೇ.3 ರಿಂದ ಶೇ.3.5ಕ್ಕೆ ಹೆಚ್ಚಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ:31.03.2022

131. ಕೆಳಮನೆ ಸ್ಪೀಕರ್ ಭಾಷಣಕ್ಕೆ ಮೇಲ್ಮನೆಯಲ್ಲಿ ಆಕ್ಷೇಪ

ಚುನಾವಣಾ ಸುಧಾರಣೆ ಕುರಿತು ವಿಧಾನಸಭೆಯ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಮಾಡಿದ ಪ್ರಾಸ್ತಾವಿಕ ಭಾಷಣದ ಕಿರು ಪುಸ್ತಕವನ್ನು ಸದನದಲ್ಲಿ ವಿತರಿಸಿದ್ದಕ್ಕೆ ಪ್ರತಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಹರಿಹಾಯ್ದರು.

ಪ್ರಶ್ನೋತ್ತರ ಕಲಾಪ ಬಳಿಕ ಎದ್ದುನಿಂತ ಅವರು ಅಜೆಂಡಾದಲ್ಲಿ ಇಲ್ಲದೆಯೇ ಇಲ್ಲೇಕೆ ಅವರ ಭಾಷಣದ ಪುಸ್ತಕ ಹಂಚಲಾಗಿದೆ. ಇಲ್ಲಿ ಅವಕಾಶವಿದೆಯೇ ಎಂದು ಕೇಳಿದರು.

ಪುಸ್ತಕದ ಮುಖಪುಟದಲ್ಲಿ ಭಾರತದ ತ್ರಿವರ್ಣ ಧ್ವಜಕ್ಕೆ ಅಪಮಾನವಾಗಿದೆ. ಧ್ವಜಸಂಹಿತೆಯ ನಿಯಮ ಉಲ್ಲಂಘನೆಯಾಗಿದೆ. ಇದಲ್ಲದೆ ಪುಸ್ತಕದ ನಾಲ್ಕನೇ ಪುಟದ 7ನೇ ಪ್ಯಾರಾದಲ್ಲಿ ಕಳೆದ ಡಿಸೆಂಬರ್‌ನಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಕೋಟ್ಯಾಂತರ ಹಣ ಖರ್ಚಾಗಿದೆ ಎಂದು ಹೇಳಲಾಗಿದೆ. ಆ ರೀತಿ ಹೇಳುವ ಮೂಲಕ ಸಭಾಧ್ಯಕ್ಷರು ಆ ಚುನಾವಣೆಯಲ್ಲಿ ಗೆದ್ದವರನ್ನು ಅಪಮಾನಿಸಿದ್ದಾರೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಎರಡು ಕಡೆ ಗೆದ್ದವರಿದ್ದಾರೆ. ಅವರಿಗೆಲ್ಲ ಅವಮಾನಿಸಿದಂತಾಗಿದೆ. ಪರಿಷತ್ತಿಗೂ ಅಗೌರವ ತೋರಿದಂತಾಗಿದೆ. ಇದಕ್ಕೆ ತಮ್ಮ ತೀವ್ರ ಆಕ್ಷೇಪವಿದೆ ಎಂದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:31.03.2022

132. ಈ ಬಾರಿ ಧರಣಿ, ಗದ್ದಲವಿಲ್ಲದೆ ವಿಧಾನಮಂಡಲ ಕಲಾಪ ಅಂತ್ಯ

ಆಡಳಿತಾರೂಢ, ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್, ಜೆಡಿಎಸ್ ನಡುವೆ ಕೆಲ ವಿಚಾರಗಳಿಗೆ ವಾಗ್ವಾದ, ಟೀಕೆಗಳು ಹೊರತಾಗಿ ಧರಣಿ, ಗದ್ದಲಗಳಿಲ್ಲದೆ 26 ದಿನಗಳ ಕಾಲ ನಡೆದ ವಿಧಾನ ಮಂಡಲದ ಉಭಯ ಸದನಗಳ ಬಜೆಟ್ ಅಧಿವೇಶನಕ್ಕೆ ತೆರೆ ಬಿದ್ದಿದೆ.

ರಾಜ್ಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಹಿಜಾಬ್, ಹರ್ಷ ಕೊಲೆ ಪ್ರಕರಣ, ಹಲಾಲ್ ಬಹಿಷ್ಕಾರ ಮತ್ತಿತರ ಜ್ವಲಂತ ವಿಷಯಗಳು ಉಭಯ ಸದನಗಳ ಪ್ರತಿಧ್ವನಿಸಿದವು. ಆದರೆ, ಸದನಕ್ಕೆ ಅಡ್ಡಿಯನ್ನುಂಟು ಮಾಡುವಷ್ಟರ ಮಟ್ಟಿಗೆ ಕೋಲಾಹಲ ಸೃಷ್ಟಿಸಲಿಲ್ಲ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಪ್ರತಿಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವರಾದರೂ ಸರ್ಕಾರವು ಸಹ ಪ್ರತಿಪಕ್ಷಗಳಿಗೆ ತಿರುಗೇಟು ನೀಡಿ ಕಾನೂನು ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಉತ್ತರಿಸಿತು.

ಯಾವುದೇ ಗದ್ದಲಗಳಿಲ್ಲದೆ 2022–23ನೇ ಸಾಲಿನ ಬಜೆಟ್‌ಗೆ ಅನುಮೋದನೆ ಪಡೆದುಕೊಳ್ಳಲಾಯಿತು. ಹಣಕಾಸಿನ ಕೊರತೆಯ ಮಿತಿಯನ್ನು 2022–23ನೇ ಆರ್ಥಿಕ ವರ್ಷಕ್ಕೆ ಸೀಮಿತವಾಗುವಂತೆ ಶೇ.3 ರಿಂದ ಶೇ.3.5ಕ್ಕೆ ಹೆಚ್ಚಿಸಿ ವಿಧೇಯಕವನ್ನು ಅಂಗೀಕರಿಸಲಾಯಿತು. ಇದಲ್ಲದೇ, ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ರೂ.30 ಸಾವಿರಕ್ಕಿಂತ ಹೆಚ್ಚು ತೆರಿಗೆ ಪಾವತಿಸುವ ವಾಹನ ಮಾಲೀಕರಿಗೆ ನೀಡಿದ 15 ದಿನಗಳ ಕಾಲಾವಕಾಶವನ್ನು 30 ದಿನಗಳವರೆಗೆ ವಿಸ್ತರಿಸುವ ವಿಧೇಯಕ ಅಂಗೀಕರಿಸಲಾಯಿತು.

ಆಧಾರ: ಕನ್ನಡ ಪ್ರಭ, ದಿನಾಂಕ:31.03.2022

133. ಹಲವು ವೈಶಿಷ್ಟ್ಯಕ್ಕೆ ಅಧಿವೇಶನ ಸಾಕ್ಷಿ

ಹಾಲಿ ವಿಧಾನಸಭೆ ಅವಧಿಯಲ್ಲಿ ಈ ಬಾರಿಯೂ ಅಧಿವೇಶನ ಹಲವು ವೈಶಿಷ್ಟ್ಯಕ್ಕೆ ಸಾಕ್ಷಿಯಾಯಿತು. ಇತ್ತೀಚಿನ ವರ್ಷಗಳಲ್ಲಿ ಇಲಾಖಾವಾರು ಬೇಡಿಕೆ ಮೇಲೆ ವಿಸ್ತೃತ ಚರ್ಚೆ ನಡೆಯುವುದು ವಿರಳ. ಸಿದ್ದರಾಮಯ್ಯ ಅವರ 14ನೇ ವಿಧಾನಸಭೆ ಅವಧಿಯಲ್ಲಿ ಅಂಥದೊಂದು ಚರ್ಚೆ ನಡೆದಿತ್ತು. ಈಗ

ಮತ್ತೆ ನಡೆದಿದೆ. ಹದಿನೈದನೆ ವಿಧಾನಸಭೆ ಹಲವಾರು ನಾಟಕೀಯ ಬೆಳವಣಿಗೆಗೆ ಸಾಕ್ಷಿಯಾಗಿದೆ. ಮೊದಲು ಸಮ್ಮಿಶ್ರ ಸರ್ಕಾರ. ಆ ಬಳಿಕ ಬಿಜೆಪಿ ನೇತೃತ್ವದ ಸರ್ಕಾರ. ಇಂತಹ ವಾತಾವರಣದ ನಡುವೆ ದೀರ್ಘ ಅವಧಿಗೆ ಅಧಿವೇಶನ ನಡೆಸುವುದು ಸವಾಲು ಕೂಡ.

ಆದರೆ, ಈ ನಿಟ್ಟಿನಲ್ಲಿ ಸರ್ಕಾರ ದಿಟ್ಟವಾಗಿ ನಡೆದುಕೊಳ್ಳುವ ಮೂಲಕ ಕರ್ನಾಟಕ ವಿಧಾನಮಂಡಲದ ಚರ್ಚೆ ಗಮನ ಸೆಳೆಯುವಂತೆ ಮಾಡಿದೆ. ಈ ಬಾರಿಯ ಅಧಿವೇಶನದಲ್ಲಿ 19 ದಿನಗಳ ಕಾಲ ಉಭಯ ಸದನಗಳ ಕಲಾಪ ನಡೆದಿದೆ. ಪ್ರಾರಂಭದಲ್ಲಿ ಚರ್ಚೆಯಾದದ್ದು ಮುಖ್ಯಮಂತ್ರಿಯವರು ಮಂಡಿಸಿದ ಚೊಚ್ಚಲ ಬಜೆಟ್‌ನ ಬಗ್ಗೆ ಆ ಬಳಿಕ ನಾನಾ ಇಲಾಖೆಗಳ ಬೇಡಿಕೆ ಸಂಬಂಧ ಚರ್ಚೆಯಾಗಿದೆ. ಶಾಸಕರ ಹಾಜರಿ ಸಂಖ್ಯೆ ಕಡಿಮೆಯಿತ್ತಾದರೂ ಇಲಾಖಾವಾರು ಬೇಡಿಕೆ ಬಗ್ಗೆ ಗಂಭೀರ ಚರ್ಚೆ ನಡೆದಿದೆ. ಇದರಲ್ಲಿ ಭಾಗಿಯಾಗಿದ್ದ ಶಾಸಕರು ಅಧ್ಯಯನ ಸಹಿತ ಬರುವುದರೊಂದಿಗೆ ಭರವಸೆ ಮೂಡಿಸಿದರು.

ಚುನಾವಣಾ ವ್ಯವಸ್ಥೆ ಸುಧಾರಣೆ: ಚುನಾವಣಾ ವ್ಯವಸ್ಥೆ ಸುಧಾರಣೆ ಬಗ್ಗೆ ಮಾತುಕತೆ ನಡೆಯಬೇಕು ಎನ್ನುವುದು ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅಭಿಮತವಾಗಿತ್ತು. ಅದರಂತೆ ಎರಡು ದಿನ ಉತ್ತಮ ಚರ್ಚೆ ನಡೆದು ರಾಜ್ಯ ವಿಧಾನಮಂಡಲದ ದೃಷ್ಟಿಯಿಂದ ದಾಖಲೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:31.03.2022

134. ಆರೋಗ್ಯಕರ ಚುನಾವಣಾ ವ್ಯವಸ್ಥೆಗೆ ಸದನ ಪ್ರತಿಜ್ಞೆ

ಚುನಾವಣೆ ವ್ಯವಸ್ಥೆ ಸುಧಾರಣೆ ಬಗ್ಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಮಂಡಿಸಿದ ವಿಚಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಸದನ ರಾಜಕೀಯ ಚರ್ಚೆ, ಆರೋಪ, ಧರಣಿಗಳಿಗೆ ಹೊರತಾಗಿ ಸಮಾಜ ಸುದಾರಣೆ ನಿಟ್ಟಿನಲ್ಲಿ ಅನುಭವ ಮಂಟಪವಾಗೀ ಕರ್ನಾಟಕ ವಿಧಾನಸಭೆ ಕೆಲಸ ಮಾಡಿದೆ. ಇದು ರಾಷ್ಟ್ರಕ್ಕೊಂದು ಮಾದರಿಯಾಗಿ ನಿಲ್ಲಲಿದೆ. ಹಳಿತಪ್ಪುತ್ತಿರುವ ಚುನಾವಣಾ ವ್ಯವಸ್ಥೆ ಬಗ್ಗೆ ಅವಲೋಕನಕ್ಕೆ ದಾರಿಯಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಾಮಾಣಿಕ ಮತ್ತು ಪಾರದರ್ಶಕ ಚುನಾವಣೆಗಳು ಪ್ರಸ್ತುತ ದಿನಗಳಲ್ಲಿ ಸಾಧ್ಯವೇ ಎಂಬ ವಿಷಯ ಕುರಿತು ಜನಪ್ರತಿನಿಧಿಗಳ ಆತ್ಮಾವಲೋಕನಕ್ಕೆ ಸದನ ಸಾಕ್ಷಿಯಾಯಿತು.

ಹಲವು ಸದಸ್ಯರು ಚುನಾವಣಾ ವ್ಯವಸ್ಥೆ ಸುಧಾರಣೆ ಅಗತ್ಯವಿದೆ ಮತ್ತು ಚುನಾವಣೆಗಳನ್ನು ನಿಯಂತ್ರಿಸುವ ಸಮಾಜಘಾತುಕ ಶಕ್ತಿಗಳನ್ನು ಒಟ್ಟಾಗಿ ನಿಯಂತ್ರಿಸಬೇಕೆನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು. ಹಳಿ ತಪ್ಪಿದ ವ್ಯವಸ್ಥೆಗೆ ಎಲ್ಲರೂ ಜವಾಬ್ದಾರರು ಹಾಗೂ ಈ ವ್ಯವಸ್ಥೆಯನ್ನು ಟೀಕಿಸುವ ಭರದಲ್ಲಿ ನಾವೇ ಶುದ್ಧಹಸ್ತರು ಎಂದು ಪ್ರತಿಪಾದಿಸದೇ, ಆರೋಗ್ಯಕರ ವ್ಯವಸ್ಥೆ ಮತ್ತೊಮ್ಮೆ ಪುಟಿದೇಳುವಂತೆ ಪಕ್ಷಭೇದ ಮರೆತು ಕೈ ಜೋಡಿಸುವ ಪ್ರತಿಜ್ಞೆ ಮಾಡಲಾಯಿತು.

ವಿಧಾನಸಭೆ ಅಧಿವೇಶನದಲ್ಲೇ ಮೊದಲ ಬಾರಿ ಚುನಾವಣಾ 'ವಿಷಯಗಳಲ್ಲಿ ಸುಧಾರಣೆ ಅಗತ್ಯ' ಎಂಬ ಸಭಾಧ್ಯಕ್ಷರ ಪ್ರಸ್ತಾಪದ ಮೇಲೆ 17 ಸದಸ್ಯರು 10 ಗಂಟೆಗಳ ಕಾಲ ಮಾತನಾಡಿದರು. ಸಭಾಧ್ಯಕ್ಷರ ಊಹೆಗೂ ಮೀರಿ ಅತ್ಯುತ್ತಮ ಪ್ರತಿಕ್ರಿಯೆ, ಅಭಿಪ್ರಾಯಗಳು ವ್ಯಕ್ತವಾದವು. ವ್ಯಕ್ತಿ ಪರಿವರ್ತನೆ ಜೊತೆಗೆ ವ್ಯವಸ್ಥೆಯ ಪರಿವರ್ತನೆಯು ಅಗತ್ಯ ಮತ್ತು ನಿಷ್ಪಕ್ಷಪಾತ ಪಾರದರ್ಶಕ ಮತ್ತು ಪ್ರಾಮಾಣಿಕ ಚುನಾವಣೆಗಳು ಆಗಲೇಬೇಕೆಂಬುದು ಸದನದ ಪ್ರತಿ ಸದಸ್ಯರ ಮಾತಿನಲ್ಲಿ ಸ್ಪಷ್ಟವಾಗಿತ್ತು. ಚರ್ಚೆಯನ್ನು ಪುಸ್ತಕ ಮಾದರಿಯಲ್ಲಿ ಹೊರತಂದು ಸಂಘ ಸಂಸ್ಥೆ, ಶಿಕ್ಷಣ ಸಂಸ್ಥೆ ಹಾಗೂ ಸಮಾಜದಲ್ಲಿ ಚರ್ಚೆಗಳು ನಡೆಯುವಂತಾಗಬೇಕು ಎಂಬ ಒಮ್ಮತದ ಅಭಿಪ್ರಾಯಕ್ಕೆ ಬರಲಾಯಿತು.

ವ್ಯವಸ್ಥೆ ಸುಧಾರಣೆಗೆ ಸಲಹೆಗಳು:

- ಶಾಸಕಾಂಗ ಮತ್ತು ನ್ಯಾಯಾಂಗ ಪರಸ್ಪರ ಸಮಾಲೋಚಿಸಿ ಕಾನೂನು ತಿದ್ದುಪಡಿ.
- ರಾಜಕೀಯ ಪಕ್ಷಗಳಿಂದ ಮುನ್ನಡಿ ಅಗತ್ಯ
- ಚುನಾವಣಾ ಆಯೋಗಕ್ಕೂ ಕೊಲಿಜಿಯಂ
- ರಾಜೀನಾಮೆ ನೀಡಿದವರಿಗೆ 10 ವರ್ಷ ನಿರ್ಬಂಧ
- ಪಕ್ಷಾಂತರ ನಿಷೇಧ ಕಾಯಿದೆ ಕಠಿಣಗೊಳಿಸುವುದು.

ಹದಗೆಡಲು ಕಾರಣಗಳೇನು:

- ಕೆಲ ಸನ್ನಿವೇಶ ಸ್ವಹಿತಾಸಕ್ತಿ ರಾಜಕಾರಣ
- ನಾಗರಿಕ ಸಮಾಜದ ಅಧ:ಪತನ
- ಉಳ್ಳವರ ಕೈಯಲ್ಲಿ ಆಡಳಿತ ಯಂತ್ರ
- ಕಠಿಣ ಮತ್ತು ಅವೈಜ್ಞಾನಿಕ ನೀತಿ ಸಂಹಿತೆ

ಆಧಾರ: ವಿಜಯ ಕರ್ನಾಟಕ, ದಿನಾಂಕ:31.03.2022

135. ರಾಜಕೀಯ ಆತ್ಮಾವಲೋಕನ ಅನಿವಾರ್ಯ

'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ' ಕುರಿತು ವಿಧಾನಸಭೆಯಲ್ಲಿ ಮುಂದುವರಿದ ಚರ್ಚೆಯಲ್ಲಿ ಚುನಾವಣಾ ವ್ಯವಸ್ಥೆಯಲ್ಲಿ ಹುಳುಕುಗಳ ಮೇಲೆ ಬೆಳಕುಚೆಲ್ಲುವ ಪ್ರಯತ್ನ ನಡೆಯಿತು. 10 ಗಂಟೆಗೂ ಹೆಚ್ಚು ಕಾಲ ನಡೆದ ಚರ್ಚೆಯಲ್ಲಿ ಮುಖ್ಯಂತ್ರಿಯವರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿ 17 ಸದಸ್ಯರು ಭಾಗವಹಿಸಿ ಚುನಾವಣಾ ಅಕ್ರಮ ಭ್ರಷ್ಟತೆಯಲ್ಲಿ ಎಲ್ಲರೂ ಬಾಧ್ಯಸ್ಥರಾಗಿದ್ದು ರಾಜಕೀಯ ಪಕ್ಷಗಳ ಆತ್ಮಾವಲೋಕನ ಅನಿವಾರ್ಯತೆ ಇದೆ ಎಂಬ ಒಟ್ಟು ಅಭಿಪ್ರಾಯವು ಸದನದಲ್ಲಿ ವ್ಯಕ್ತವಾಯಿತು.

ಕೇವಲ ಚುನಾವಣೆ ಶುದ್ಧಿ ಕರಣವಾದರೆ ದೇಶ ಸುಧಾರಿಸುವುದಿಲ್ಲ. ಶೈಕ್ಷಣಿಕ, ಸಾಂಸ್ಕೃತಿಕ ರಂಗವೂ ಶುದ್ಧವಾಗಬೇಕು. ಮೊದಲು ನಾಗರೀಕ ಸಮಾಜದ ಬಗ್ಗೆ ಭಯ ಇತ್ತು. ಈಗ ಆ ಮಟ್ಟದ ನಾಗರಿಕ ಸಮಾಜ ಈಗಿಲ್ಲ ಎಂದು ಮುಖ್ಯಮಂತ್ರಿಯವರು ಅಭಿಪ್ರಾಯ ವ್ಯಕ್ತಪಡಿಸಿದರು. ಚುನಾವಣಾ ವ್ಯವಸ್ಥೆ ಬದಲಾಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಸುಧಾರಣೆಯಾಗದೆ ಹೋದರೆ ಪ್ರಜಾಪ್ರಭುತ್ವ ದುರ್ಬಲವಾಗಿ ಸಮಾಜ ದೇಶ ದುರ್ಬಲವಾಗುತ್ತದೆ ಎಂದು ಸಿದ್ದರಾಮಯ್ಯ, ರಾಜಕೀಯ ಪಕ್ಷಗಳು ಹಾಗೂ ಕಾರ್ಪೋರೇಟ್ ಸಂಸ್ಥೆಗಳ ಮೈತ್ರಿ ಇತ್ತೀಚೆಗೆ ಆರಂಭವಾಗಿದ್ದು ಸರ್ಕಾರವನ್ನು ನಿಯಂತ್ರಿಸುವಷ್ಟು ಪ್ರಬಲವಾಗಿ ಕಾರ್ಪೋರೇಟ್ ಸಂಸ್ಥೆಗಳು ಬೆಳೆದು ನಿಂತಿವೆ. ಅವುಗಳ ಜೊತೆ ಮೈತ್ರಿ ಕಡಿದುಕೊಳ್ಳದಿದ್ದರೆ ಪ್ರಜಾಪ್ರಭುತ್ವಕ್ಕೆ ದೊಡ್ಡ ಅಪಾಯ ಇದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾತನಾಡಿ ಹಣ, ಹೆಂಡ, ಜಾತಿ ಕುಲ, ಗೋತ್ರ ಏನೆಲ್ಲ ಆಮಿಷಗಳನ್ನು ಚುನಾವಣೆ ಸಂದರ್ಭ ಒಡ್ಡಲಿ ಮತದಾನದ ವೇಳೆ ತನಗೇನು ಸರಿ ಅನಿಸುತ್ತೊ ಅದನ್ನೇ ಮತದಾರ ಮಾಡುವುದು. ನಾವೂ ಎಷ್ಟೇ ಕೆಡಿಸುವ ಪ್ರಯತ್ನ ಮಾಡಿದರೂ ಅದು ಕೈಗೂಡುವುದಿಲ್ಲ ಎಂದರು. ಎಲ್ಲ ರಾಜಕೀಯ ಪಕ್ಷಗಳು, ನಾಯಕರು ಆತ್ಮಾವಲೋಕನ

ಮಾಡಿಕೊಳ್ಳಬೇಕಿದೆ. ಸ್ವಯಂ ಶುದ್ಧೀಕರಣ ಮಾಡದೆ ಹೋದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿವು ಕಷ್ಟವಾಗುತ್ತದೆ. ಪ್ರಾಮಾಣಿಕ ಜನಪರ ಕಾಳಜಿ ಇರುವ ಆರ್ಥಿಕವಾಗಿ ದುರ್ಬಲರಾದ ನಿಷ್ಠಾವಂತ ಜನರು ರಾಜಕೀಯದಿಂದ ದೂರ ಹೋಗದಂತೆ ತಡೆಯಬೇಕು ಎಂಬ ಕಾರಣಕ್ಕೆ ರಾಜಕೀಯ ವ್ಯವಸ್ಥೆಯ ಬದಲಾವಣೆಯನ್ನು ಮಾಡಲೇಬೇಕಾಗಿದೆ ಎಂದರು. ಕಾರ್ಪೋರೇಟ್ ಡೊನೆಷನ್ 1970ರವರೆಗೆ ಇರಲಿಲ್ಲ. ಆದರೆ, ಪ್ರಭಾವ ಇತ್ತು. ಬೇರೆ ಬೇರೆ ರೀತಿಯಲ್ಲಿ ನಿಯಂತ್ರಿಸುವ ಕೆಲಸ ಆಗಿನಿಂದಲೂ ಇದ್ದೇ ಇದೆ. ಈಗ ಆದರೆ ವಿಸ್ತಾರ ದೊಡ್ಡದಾಗಿದೆ. ಇದೆಲ್ಲ ನ್ಯೂನತೆಗಳ ನಡುವೆ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನ ಮಾಡಬೇಕು. ಪವರ್ ಪೊಲಿಟಿಕ್ಸ್‌ನಲ್ಲಿ ಜನಪರ ಆಡಳಿತ ನೀಡಿದರೆ ಜನರು ಒಳ್ಳೆಯದಕ್ಕೆ ಬೆಲೆ ಕೊಡುತ್ತಾರೆ ಎನ್ನುವ ವಿಶ್ವಾಸ ಇಟ್ಟುಕೊಂಡು ಸ್ವಲ್ಪವಾದರೂ ಮುತ್ಸದ್ದಿಯಾಗಬೇಕು ಎಂದು ಚರ್ಚೆಗೆ ತೆರೆ ಎಳೆದರು.

ನಮ್ಮ ಮತ ಮಾರಾಟಕ್ಕಿಲ್ಲ ಎಂದು ಹಳ್ಳಿ ಹಳ್ಳಿಯಲ್ಲಿ ಬೋರ್ಡ್ ಹಾಕಿಸಿ. ಹೊಸ ಚುನಾವಣಾ ವ್ಯವಸ್ಥೆ ತರಲು ನಾವಲ್ಲ ಪ್ರಯತ್ನಿಸೋಣ ಎಂದು ಮಾಜಿ ಸಿ.ಎಂ. ಕುಮಾರಸ್ವಾಮಿ ಹೇಳಿದರು. ವಿಧಾನಸಭೆಯಲ್ಲಿ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಹಳ ಅಗತ್ಯತೆ ಕುರಿತ ವಿಶೇಷ ಚರ್ಚೆಯಲ್ಲಿ ಮಾತನಡೀ, ಚುನಾವಣಾ ವ್ಯವಸ್ಥೆಯನ್ನು ನಾವೇ ಕೆಡಿಸಿದ್ದೇವೆ. ಗೆಲ್ಲಲೇಬೇಕೆಂದು ಜಿದ್ದಿಗೆ ಬಿದ್ದವರಂತೆ ಹಣ ಖರ್ಚು ಮಾಡುತ್ತಿದ್ದೇವೆ. ಪಂಚಾಯತಿ ಅಧ್ಯಕ್ಷ ಆಗಲು ರೂ.1–2 ಕೋಟಿ ಖರ್ಚು ಮಾಡುತ್ತಿದ್ದಾರೆ. ಅವರೇ ಅಷ್ಟುಖರ್ಚು ಮಾಡುವಾಗ ನಮ್ಮ ಚುನಾವಣೆ ಹೇಗೆ ಮಾಡಬೇಕು ಹಣ ಕೇಳುವುದರಲ್ಲಿ ಯಾವುದೇ ಧರ್ಮ ಅಡ್ಡ ಬರುವುದಿಲ್ಲ. ಬೆಕ್ಕಿಗೆ ಗಂಟೆ ಕಟ್ಟುವವರು ಯಾರೂ ಎಂದು ಕೇಳಿದರು. ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಮಾತನಾಡಿ, 10ನೇ ಷೆಡ್ಯೂಲ್‌ಗೆ ಶಕ್ತಿ ತುಂಬುವ ಕೆಲಸ ಮಾಡಬೇಕು. ವಿಧಾನಸಭೆಯಲ್ಲಿ ನಿರ್ಣಯ ತೆಗೆದುಕೊಂಡು ಕಳುಹಿಸಿದರೆ ಈ ಚರ್ಚೆಗೆ ಅರ್ಥ ಬರುತ್ತದೆ ಎಂದು ಸಲಹೆ ನೀಡಿದರು. ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡೀ ಈ ಹಿಂದೆ ಉತ್ತರ ಕರ್ನಾಟಕದಲ್ಲಿ ಚುನಾವಣೆ ವೇಳೆ ತುಂಬ ಹಣ ಬೇಕಾಗಿರಲಿಲ್ಲ. ನನಗೆ ಪಕ್ಷ ಕೊಟ್ಟ ಹಣದಲ್ಲಿ ಇನ್ನಷ್ಟು ಉಳಿದಿತ್ತು. ಇಂದು ಗ್ರಾಮ ಪಂಚಾಯತಿ ಸದಸ್ಯನಾಗಲು ಲಕ್ಷಾಂತರ ಹಣ ಬೇಕಾಗಿದೆ. ಗಣಿಗಾರಿಕೆ ರಿಯಲ್ ಎಸ್ಟೇಟ್, ಜಾತಿಯಿಂದ ಚುನಾವಣಾ ವ್ಯವಸ್ಥೆಗೆ ಮೂರು ಪಿಡುಗುಗಳು ಎಂದರು.

ಆಧಾರ: ವಿಜಯವಾಣಿ, ದಿನಾಂಕ:31.03.2022

136. ಒಂದು ದೇಶ, ಒಂದು ಚುನಾವಣೆ ಅಸಾಧ್ಯ

ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಒಂದು ದೇಶ, ಒಂದು ಚುನಾವಣೆ ಅಸಾಧ್ಯ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

ಚುನಾವಣೆ ಸುಧಾರಣಾ ಚರ್ಚೆಯಲ್ಲಿ ಮಾತನಾಡಿದ ಅವರು, ಒಂದು ದೇಶ, ಒಂದು ಚುನಾವಣೆ ಎಂಬುದು ಭಾರತದಂತಹ ಒಕ್ಕೂಟ ವ್ಯವಸ್ಥೆಯ ದೇಶದಲ್ಲಿ ಪ್ರಾಯೋಗಿಕವಾಗಿ ಅಸಾಧ್ಯವಾದ ಮಾತು. ಇದಕ್ಕೆ ನೂರಾರೂ ಕಾರಣ ಕೊಡಬಹುದು. ಸ್ವಾತಂತ್ರ್ಯ ಬಂದಾಗ ದೇಶದ ಸಾಕ್ಷರತೆ ಪ್ರಮಾಣ ಶೇ.16. ಈಗ ದೇಶದ ಸಾಕ್ಷರತೆ ಪ್ರಮಾಣ ಶೇ.82 ಶೈಕ್ಷಣಿಕ ಕ್ಷೇತ್ರದಲ್ಲಿ ಇಷ್ಟು ಬದಲಾವಣೆ ಆದರೂ ಇಂದಿನ ಚುನಾವಣೆಯನ್ನು ಜಾತಿ, ಹಣ ಬಲ ತೋಳ್ಬಲ ಮತ್ತು ಮಾಫಿಯಾಗಳು ನಿಯಂತ್ರಿಸುತ್ತಿವೆ ಎಂದರು.

ಚುನಾವಣಾ ಆಯುಕ್ತರು ಮತ್ತು ಆಯೋಗದ ಅಧ್ಯಕ್ಷರ ನೇಮಕವನ್ನು ಸರ್ಕಾರದ ಶಿಫಾರಸ್ಸಿನ ಮೇಲೆ ರಾಜ್ಯಪಾಲರು ರಾಷ್ಟ್ರಪತಿಗಳು ಮಾಡುವ ಬದಲು ಪ್ರಧಾನಿಗಳು, ಪ್ರತಿಪಕ್ಷದ ನಾಯಕರು, ಮೇಲ್ಮನೆಯ ಪ್ರತಿಪಕ್ಷದ ನಾಯಕ, ಸುಪ್ರೀಂ ಮತ್ತು ಹೈಕೋರ್ಟ್ ನ್ಯಾಯಾಮೂರ್ತಿಗಳನ್ನು ಒಳಗೊಂಡ

ಒಂದು ಮಂಡಳಿ ರಚನೆಯಾಗಬೇಕು ಅವರ ಮೂಲಕ ಅಧ್ಯಕ್ಷರು ಮತ್ತು ಆಯುಕ್ತರ ನೇಮಕವಾಗಬೇಕು. ಸುಧಾರಣೆಗಳು ಹೀಗೆ ಆರಂಭವಾದಾಗ ಮಾತ್ರ ಬದಲಾವಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

1990ರಲ್ಲಿ ವಿ.ಪಿ. ಸಿಂಗ್ ಅವರು ಪ್ರಧಾನಿಯಾಗಿದ್ದಾಗ ದಿನೇಶ್ ಗೋಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿತ್ತು. ಅದರಲ್ಲಿ ಅಡ್ವಾಣಿ ಅವರು ಇದ್ದರು.

ಆ ಸಮಿತಿಯ 107 ಶಿಪಾರಸ್ಸುಗಳಲ್ಲಿ ಹಲವು ಜಾರಿಯಾಗಲೇ ಇಲ್ಲ. 1993ರಲ್ಲಿ ವೋರಾ ಕಮಿಟಿ ರಚನೆಯಾಯಿತು. ಅದೂ ಶಿಫಾರಸ್ಸು ಮಾಡಿತು. 1985ರಲ್ಲಿ ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಪಕ್ಷಾಂತರ ನಿಷೇಧ ಕಾನೂನು ಜಾರಿಗೆ ತಂದರು. ಆದರೆ ಈಗಲೂ ಪಕ್ಷಾಂತರ ನಡೆಯುತ್ತಿದೆ. ಒಂದು ಪಕ್ಷದಿಂದ ಗೆದ್ದ ನಂತರ ಮಧ್ಯದಲ್ಲಿ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ ವ್ಯಕ್ತಿ ಮುಂದಿನ ಹತ್ತು ವರ್ಷಗಳವರೆಗೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧೆ ಮಾಡದಂತಹ ನಿಯಮ ರೂಪಿಸಿ, ಜಾರಿ ಮಾಡಬೇಕು. ಆಗ ಪ್ರಜಾಪ್ರಭುತ್ವಕ್ಕಂಟಿದ ಪಕ್ಷಾಂತರ ಎಂಬ ರೋಗ ಗುಣವಾಗುತ್ತದೆ. ಈ ಕೆಲಸವನ್ನು ಕೇಂದ್ರ ಸರ್ಕಾರ ಏಕೆ ಮಾಡಬಾರದು ಎಂದು ಪ್ರಶ್ನಿಸಿದರು.

ಆತ್ಮಾವಲೋಕನ ಮಾಡಿಕೊಳ್ಳಲಿ: ಎಲ್ಲ ರಾಜಕೀಯ ಪಕ್ಷಗಳು ಮತ್ತು ನಾಯಕರು ಆತ್ಮಾವಲೋಕನ ಮಾಡಿಕೊಂಡು, ಸ್ವಯಂ ಶುದ್ಧಿ ಕರಣಗೊಳಿಸದಿದ್ದರೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿವು ಕಷ್ಟವಾಗುತ್ತದೆ. ಪ್ರಾಮಾಣಿಕ ಜನಪರ ಕಾಳಜಿಯಿರುವ, ಆರ್ಥಿಕವಾಗಿ ದುರ್ಬಲರಾದ ನಿಷ್ಠಾವಂತ ಜನರು ರಾಜಕೀಯದಿಂದ ದೂರ ಹೋಗದಂತೆ ತಡೆಯಬೇಕು ಎಂಬ ಕಾರಣಕ್ಕೆ ರಾಜಕೀಯ ವ್ಯವಸ್ಥೆಯ ಬದಲಾವಣೆಯನ್ನು ಮಾಡಲೇ ಬೇಕಾಗಿದೆ ಎಂದರು. ಚುನಾವಣೆ ವ್ಯವಸ್ಥೆ ಬದಲಾಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಸುಧಾರಣೆಯಾಗದೆ ಹೋದರೆ ಪ್ರಜಾಪ್ರಭುತ್ವ ದುರ್ಬಲವಾಗುತ್ತೆ, ಪ್ರಜಾಪ್ರಭುತ್ವ ದುರ್ಬಲವಾದರೆ ಸಮಾಜ ದೇಶ ದುರ್ಬಲವಾಗುತ್ತದೆ. ಎಪ್ಪತ್ತರ ದಶಕದಿಂದ ಈಚೆಗೆ ಚುನಾವಣಾ ವ್ಯವಸ್ಥೆ ಕೆಡಲು ಆರಂಭವಾಯಿತು. ಚುನಾವಣೆ ವ್ಯವಸ್ಥೆ ಒಂದು ಚುನಾವಣಾಯಿಂದ ಮತ್ತೊಂದು ಚುನಾವಣೆಗೆ ಬಲಿಷ್ಠವಾಗುತ್ತಾ ಹೋಗಬೇಕಿತ್ತು. ಆದರೆ ನಮ್ಮಲ್ಲಿ ದುರ್ಬಲವಾಗುತ್ತಾ ಹೋಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಆಧಾರ: ವಿಶ್ವವಾಣಿ, ದಿನಾಂಕ:31.03.2022

137. ಎಸ್ಟಿ ಮೀಸಲಿಗೆ ಶೀಘ್ರ ಪರಿಹಾರ

ಪರಿಶಿಷ್ಟ ಪಂಗಡದ ಮೀಸಲು ಹೆಚ್ಚಳದ ಬಗ್ಗೆ 10 ದಿನಗಳಲ್ಲಿ ಸರ್ಕಾರದ ಕಡೆಯಿಂದ ಸ್ಪಷ್ಟತೆ ಮೂಡುವ ಸಾಧ್ಯತೆ ಇದೆ. ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಪರಿಶಿಷ್ಠ ಪಂಗಡದ ಶಾಸಕರು ಒತ್ತಡ ತಂದ ಹಿನ್ನಲೆಯಲ್ಲಿ ಮುಖ್ಯಮಂತ್ರಿಯವರು ಸ್ಪಷ್ಟನೆ ನೀಡಿದರು.

ಮೀಸಲು ಮರುಹಂಚಿಕೆ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನ್ಯಾ. ಸುಭಾಷ್ ಅಡಿ ಸಮಿತಿ 7–10 ದಿನಗಳಲ್ಲಿ ಮಧ್ಯಂತರ ವರದಿ ನೀಡಲಿದೆ. ಜೊತೆಗೆ ಅಡ್ವೋಕೇಟ್ ಜನರಲ್ ಅವರಿಂದಲೂ ವರದಿ ಪಡೆದು ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ಇದು ಸರ್ಕಾರವೊಂದರಿಂದಲೇ ಆಗುವ ಕೆಲಸವಲ್ಲ. ಸರ್ವಪಕ್ಷ ಸಭೆ ಕರೆದು ಚರ್ಚೆ ಮಾಡಿ ತೀರ್ಮಾನ ಮಾಡಲಾಗುತ್ತದೆ. ಕಾನೂನು ತರುವ ಅಗತ್ಯವಿರುತ್ತದೆ ಎಂದು ಸೂಚ್ಯವಾಗಿ ತಿಳಿಸಿದರು.

ಮುಖ್ಯಮಂತ್ರಿ ಹೇಳಿದ ಅಂಶಗಳು:

- ಪರಿಶಿಷ್ಟ ಸಮುದಾಯಗಳು ಮೊದಲು ಬ್ಯಾಕ್ವರ್ಡ್ ಟ್ರೈಬ್ ಎಂದಿತ್ತು. ಶೇ.5 ಮೀಸಲು ಪ್ರಮಾಣವಿತ್ತು. ಅದು ಎಸ್ಟಿಗೆ ಸೇರಿದ ಮೇಲೆ ಆ ಪ್ರಮಾಣ ಕಡಿಮೆ ಆಗಿದೆ. ಈಗ ಶೇ.7.5ಕ್ಕೆ ಏರಿಸಬೇಕೆಂಬ ಬೇಡಿಕೆ ಇದೆ.

- ಮೀಸಲು ಪ್ರಮಾಣ ಈ ಹಿಂದೆ ಶೇ.50ಕ್ಕಿಂತ ಹೆಚ್ಚಿಸಿದಾಗ ಸುಪ್ರೀಂ ತಳ್ಳಿಹಾಕಿತು. ಹೀಗಾಗಿ ಸರಿಯಾದ ಕ್ರಮದಲ್ಲಿ ದತ್ತಾಂಶ ಸಂಗ್ರಹಿಸಲು ಮೈತ್ರಿ ಸರ್ಕಾರದ ಅವಧಿಯಲ್ಲಿ ಎಚ್.ಡಿ. ಕುಮಾರಸ್ವಾಮಿ, ನಾಗಮೋಹನ್ ದಾಸ್ ಸಮಿತಿ ರಚಿಸಿದ್ದರು. ಅವರು ವರದಿ ಕೊಟ್ಟಿದ್ದಾರೆ.
- ಅದಾದ ಮೇಲೆ ಹಲವು ಸುಮುದಾಯ ಬೇರೆ ಬೇರೆ ಬೇಡಿಕೆ ಇಟ್ಟಿದ್ದವು. ಎಸ್ಸಿ ಎಸ್ಟಿ ಜನಸಮುದಾಯಕ್ಕೆ ಅನುಗುಣವಾಗಿ ಮೀಸಲು ಪ್ರಮಾಣ ಹೆಚ್ಚಳ ಆಗಬೇಕು ಎಂದು ಬೇಡಿಕೆ ಇದೆ. ಒಬಿಸಿ 2ಎನಲ್ಲಿ ಇರುವವರು ಎಸ್ಸಿಗೆ ಬರಬೇಕು, ಒಬಿಸಿ 3ಬಿ ಯಲ್ಲಿರುವವರು 2ಎ ಗೆ ಬರಬೇಕು, ಯಾವುದೂ ಇಲ್ಲದವರು ಹಿಂದುಳಿದ ವರ್ಗಕ್ಕೆ ಸೇರಬೇಕೆಂಬ ಬೇಡಿಕೆ ಇದೆ.
- ಈ ನಡುವೆ ಸುಪ್ರೀಂ ಮೀಸಲು ಹೆಚ್ಚಳದ ಬಗ್ಗೆ ಎಲ್ಲ ರಾಜ್ಯಗಳ ಅಭಿಪ್ರಾಯ ಕೇಳಿತು. ನಾವೂ ಕೊಟ್ಟಿದ್ದೆವು. ಎಸ್ಸಿ, ಎಸ್ಟಿ ಜನಸಂಖ್ಯೆ ಹೆಚ್ಚಾಗಿದೆ. ಆಕಾಂಕ್ಷೆ ಶೇ.50ಕ್ಕಿಂತ ಸೀಲಿಂಗ್ ತೆಗೆದು ಹೆಚ್ಚು ಮೀಸಲು ಕಲ್ಪಿಸಲು ಅವಕಾಶ ಕಲ್ಪಿಸಬೇಕೆಂದು ಅಭಿಪ್ರಾಯ ಕೊಟ್ಟಿದ್ದೆವು. ಆದರೆ, ಸುಪ್ರೀಂಕೋರ್ಟ್ ಶೇ.50 ಮೀಸಲು ಮೀರಲು ಒಪ್ಪಲಿಲ್ಲ.
- ನಾಗಮೋಹನ್ ದಾಸ್ ವರದಿಯನ್ನು ಕಾನೂನಿನ ಚೌಕಟ್ಟಿನಲ್ಲಿ ಹೇಗೆ ಅನುಷ್ಠಾನ ಮಾಡಬೇಕು ಬೇರೆ ಬೇರೆ ಸುಮುದಾಯದ ಬೇಡಿಕೆ ಬಗ್ಗೆ ವರದಿ ಕೊಡಲು ನ್ಯಾ. ಸುಭಾಷ್ ಅಡಿ ನೇತೃತ್ವದಲ್ಲಿ ಸಮಿತಿ ಮಾಡಲಾಗಿದೆ.
- ಇಂದಿರಾ ಸಹಾನಿ ಪ್ರಕರಣದಲ್ಲಿ ವಿಶೇಷ ಪ್ರಕರಣ ಪರಿಗಣಿಸಲು ಅವಕಾಶ ಇದೆ ಎಂದು ಹೇಳುತ್ತದೋ ಅದರಡಿ ಎಸ್ಟಿ ಮೀಸಲು ಹೆಚ್ಚಿಸುವ ಬಗ್ಗೆ ಅವಕಾಶ ಕುರಿತು ವರದಿಯನ್ನು ಕೂಡಲೇ ಕೊಡಲು ಅಡ್ವೋಕೇಟ್ ಜನರಲ್‌ಗೆ ಸೂಚಿಸಲಾಗಿದೆ. ವಿಶೇಷ ಪ್ರಕರಣದ ಅಡಿ ಬಂದರೆ ಮೀಸಲು ಹೆಚ್ಚಿಸಲು ಸಾಧ್ಯವಿದೆ. ಅದೊಂದು ಅವಕಾಶ ಇದೆ.
- ಸುಭಾಷ್ ಅಡಿಯವರಿಗೆ ಮಧ್ಯಂತರ ವರದಿ ಬೇಗ ಕೊಡಿ ಎಂದು ಹೇಳಿದ್ದೇವೆ. ಅದೂ ಅತಿ ಶೀಘ್ರ ಬರಲಿದೆ. ಬಳಿಕ ಸರ್ವಪಕ್ಷ ಸಭೆಯಲ್ಲಿ ಅದನ್ನೆಲ್ಲ ಚರ್ಚಿಸಿ ಅಂತಿಮ ತೀರ್ಮಾನ ಮಾಡುತ್ತೇವೆ.
- ಎಸ್ಸಿ, ಎಸ್ಟಿ ಸಮುದಾಯ ಜನಸಂಖ್ಯೆಗೆ ಅನುಗುಣವಾಗಿ ಮೀಸಲು ಕೊಡಬೇಕೆಂದೂ ಸಂವಿಧಾನದಲ್ಲಿ ಇದೆ. ಆ ಹಿನ್ನಲೆಯಲ್ಲಿ ನಾವೂ ಅವರಿಗೆ ನ್ಯಾಯಕೊಡಲು ಕಾನೂನಿನ ಚೌಕಟ್ಟಿನಲ್ಲೇ ಮುಂದುವರಿಯಬೇಕಾಗುತ್ತದೆ. ಸ್ವಲ್ಪ ಸಮಯಾವಕಾಶ ಕೊಟ್ಟರೆ ನ್ಯಾಯ ದೊರಕಿಸಲು ಸಾಧ್ಯ.
- ನಾವಿಲ್ಲಿ ಏನೇ ಆದೇಶ ಮಾಡಿದರೂ ಕೋರ್ಟ್‌ನಲ್ಲಿ ಪರಿಶೀಲನೆಗೊಳಪಡುತ್ತದೆ. ಹಿಂದೆ ಏನಾಗಿದೆ ಎಂದು ನೋಡಿದ್ದೇವೆ ಆ ರೀತಿ ಆಗಬಾರದೆಂದು ಎಲ್ಲ ಮುಂಜಾಗ್ರತೆ ತೆಗೆದುಕೊಳುತ್ತಿದ್ದೇವೆ. ಅಗತ್ಯವಾದರೆ ಶಾಸನಸಭೆಗೂ ವಿಷಯ ಬರಲಿದೆ.
- 2ಎ, ಹಿಂದುಳಿದ ವಿಷಯದಲ್ಲಿ ಹಲವು ಸಭೆಗಳಾಗಿದ್ದು, ಪ್ರಗತಿ ಸಾಧಿಸಿದೆ. ಅವರು ವರದಿಕೊಟ್ಟ ಕೂಡಲೇ ವರದಿ ಅನ್ವಯ ತೀರ್ಮಾನ ಮಾಡುತ್ತೇವೆ. ಶೇ.50 ಮೀಸಲು ಮುಟ್ಟಿದ್ದೇವೆ. ಮೀಸಲು ಪ್ರಮಾಣ ಹೆಚ್ಚಿದರೆ ಮಾತ್ರ ಎಲ್ಲರ ಬೇಡಿಕೆ ಈಡೇರಿಸಲು ಸಾಧ್ಯ.
- ಕ್ಲಿಷ್ಟ ಇರುವುದನ್ನು ಖಂಡಿತವಾಗಿ ಬಗೆಹರಿಸುತ್ತೇವೆ. ಇಂದಿರಾ ಸಹಾನಿ ಪ್ರಕರಣದಲ್ಲಿ ಇರುವ ಸಣ್ಣ ಅವಕಾಶ ಬಳಕೆ ಮಾಡಿಕೊಂಡು ಎಸ್ಟಿ ಸಮುದಾಯದ ಮೀಸಲು ಹೆಚ್ಚಿಸುವ ಬೇಡಿಕೆಗೆ ನ್ಯಾಯ ಕೊಡುತ್ತವೆ.

ಆಧಾರ: ವಿಜಯವಾಣಿ, ದಿನಾಂಕ:31.03.2022

138. ಚುನಾವಣಾ ವ್ಯವಸ್ಥೆ ಸುಧಾರಣೆ ಆಗದಿದ್ದರೆ ಪ್ರಜಾತಂತ್ರ ದುರ್ಬಲ

ಚುನಾವಣಾ ವ್ಯವಸ್ಥೆ ಸುಧಾರಣೆಯಾಗದೆ ಹೋದರೆ ಪ್ರಜಾಪ್ರಭುತ್ವ ದುರ್ಬಲವಾಗುತ್ತದೆ. ಪ್ರಜಾಪ್ರಭುತ್ವ ದುರ್ಬಲವಾದರೆ ಸಮಾಜ ದೇಶ ದುರ್ಬಲವಾಗುತ್ತದೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದ್ದಾರೆ.

ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, ಚುನಾವಣಾ ವ್ಯವಸ್ಥೆ ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಗೆ ಬಲಿಷ್ಠವಾಗುತ್ತಾ ಹೋಗಬೇಕಿತ್ತು. ಆದರೆ, ನಮ್ಮಲ್ಲಿ ದುರ್ಬಲವಾಗುತ್ತಾ ಹೋಗುತ್ತಿದೆ. ಇದು ಅತ್ಯಂತ ಕಳವಳದ ಸಂಗತಿಯಾಗಿದೆ. ಎಲ್ಲಾ ರಾಜಕೀಯ ಪಕ್ಷಗಳು ಮತ್ತು ನಾಯಕರು ಆತ್ಮಾವಲೋಕನ ಮಾಡಿಕೊಂಡು ಸ್ವಯಂ ಶುದ್ಧೀಕರಣ ಮಾಡದೆ ಹೋದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿವು ಕಷ್ಟವಾಗುತ್ತದೆ. ಪ್ರಾಮಾಣಿಕ ಜನಪರ ಕಾಳಜಿ ಇರುವ, ಆರ್ಥಿಕವಾಗಿ ದುರ್ಬಲರಾದ ನಿಷ್ಠಾವಂತ ಜನರು ರಾಜಕೀಯದಿಂದ ದೂರ ಹೋಗದಂತೆ ತಡೆಯಬೇಕು ಎಂಬ ಕಾರಣಕ್ಕೆ ರಾಜಕೀಯ ವ್ಯವಸ್ಥೆಯನ್ನು ಬದಲಿಸಬೇಕಾಗಿದೆ ಎಂದರು.

ಚುನಾವಣಾ ಆಯೋಗ ರೂ.40 ಲಕ್ಷ ವಿಧಾನಸಭೆ ಚುನಾವಣೆಗೆ ರೂ.95 ಲಕ್ಷ ರೂಪಾಯಿ ಲೋಕಸಭಾ ಚುನಾವಣೆಗೆ ಖರ್ಚು ಮಾಡಬೇಕು ಎಂದು ನಿಗದಿ ಮಾಡಿದೆ. ಆದರೆ. ಆಯೋಗಕ್ಕೆ ನೀಡುವುದು ಹೆಚ್ಚಾಗಿ ಕೃಷ್ಣನ ಲೆಕ್ಕ. ಇಂದಿನ ಚುನಾವಣಾ ವ್ಯವಸ್ಥೆ ಹಾಳಾಗಲು ರಾಜಕಾರಣಿಗಳ ಪಾಲು ಎಷ್ಟಿದೆಯೂ ಅಷ್ಟೇ ಪ್ರಜಾಪ್ರಭುತ್ವದ ಉಳಿದ ಅಂಗಗಳ ಪಾಲು ಇದೆ. ಸಮಾಜದ ಎಲ್ಲಾ ಶಿಕ್ಷಿತ, ವಿಚಾರವಂತ ಪ್ರಗತಿಪರ, ಸಾಮಾಜಿಕ ಕಾಳಜಿ ಇರುವ ಜನರ ಜೊತೆಗೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಪತ್ರಿಕಾರಂಗ ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಸುಧಾರಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇಂದು ರಾಜಕೀಯ ಪಕ್ಷಗಳೂ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಮೈತ್ರಿ ಆರಂಭವಾಗಿದೆ. ಇದರಿಂದ ಕಾರ್ಪೊರೇಟ್‌ಗಳು ಸರ್ಕಾರವನ್ನು ನಿಯಂತ್ರಿಸುವಷ್ಟು ಪ್ರಬಲವಾಗಿವೆ ಈ ಕಾರಣಕ್ಕೆ ಕಾರ್ಪೊರೇಟ್ ಕಂಪನಿಗಳೊಂದಿಗೆ ಪಕ್ಷಗಳು ಮೈತ್ರಿ ಮಾಡಿಕೊಳ್ಳಬಾರದು.

ಒಂದು ದೇಶ, ಒಂದು ಚುನಾವಣೆ ಎಂಬುದು ಭಾರತದಂತ ಒಕ್ಕೂಟ ವ್ಯವಸ್ಥೆಯ ದೇಶದಲ್ಲಿ ಪ್ರಾಯೋಗಿಕವಾಗಿ ಅಸಾಧ್ಯವಾದ ಮಾತು. ಸ್ವಾತಂತ್ರ್ಯ ಬಂದಾಗ ದೇಶದ ಸಾಕ್ಷರತೆ ಪ್ರಮಾಣ 16% ಈಗ ದೇಶದ ಸಾಕ್ಷತರೆ ಪ್ರಮಾಣ 82%. ಶೈಕ್ಷಣಿಕ ಕ್ಷೇತ್ರದಲ್ಲಿ ಎಷ್ಟು ಬದಲಾವಣೆ ಆದರೂ ಇಂದಿನ ಚುನಾವಣೆಯನ್ನು ಜಾತಿ, ಹಣ ಬಲ ತೋಳ್ಬಲ ಮತ್ತು ಮಾಫಿಯಾಗಳು ನಿಯಂತ್ರಿಸುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:31.03.2022

139. ಚುನಾವಣಾ ಅಕ್ರಮಕ್ಕೆ ಜನರೂ ಕಾರಣ

ಚುನಾವಣಾ ವ್ಯವಸ್ಥೆ ಭ್ರಷ್ಟಾಚಾರ ಕೂಪವಾಗಿದೆ. ಹೀಗಾಗಿ ನಾವೆಲ್ಲರೂ ಚುನಾವಣೆಗೆ ನಿಗದಿಗಿಂತ ಒಂದು ರೂಪಾಯಿ ಕೂಡ ಹೆಚ್ಚು ಖರ್ಚು ಮಾಡಲ್ಲ ಎಂದು ಪ್ರಮಾಣ ಮಾಡಬೇಕು. ನಮ್ಮ ಮತ ಮಾರಾಟಕ್ಕೆ ಇಲ್ಲ ಎಂದು ಹೇಳಿ ಮತದಾರರು ಹೊಸ ವ್ಯವಸ್ಥೆಗೆ ನಾಂದಿ ಹಾಡಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಕರೆ ನೀಡಿದರು.

ಚುನಾವಣೆ ವ್ಯವಸ್ಥೆ ಸುಧಾರಣೆ ಕುರಿತು ಮಾತನಾಡಿದ ಅವರು ಒಂದು ಕಡೆ ಹಣ, ಮತ್ತೊಂದು ಕಡೆ ಭಾವನಾತ್ಮಕ ವಿಚಾರಗಳಿಂದ ಚುನಾವಣಾ ವ್ಯವಸ್ಥೆಯನ್ನು ಕಲುಷಿತವಾಗುತ್ತಿದೆ. ಇದನ್ನು ಹೀಗೆ

ಬಿಟ್ಟರೆ ಸರಿಪಡಿಸಲು ತುಂಬಾ ಅವಧಿ ಬೇಕಾಗುತ್ತದೆ. ಹೀಗಾಗಿ 224 ಮಂದಿ ಶಾಸಕರು ಚುನಾವಣೆ ವ್ಯವಸ್ಥೆ ಸುಧಾರಿಸಲು ಸಾಧ್ಯವಿಲ್ಲ. ರಾಜ್ಯದ ಜನತೆಯೂ ಎಚ್ಚೆತ್ತುಕೊಳ್ಳಬೇಕು ಎಂದರು.

ವಿಧಾನಸಭೆ ಅಭ್ಯರ್ಥಿ ವೆಚ್ಚಕ್ಕೆ ರೂ.40 ಲಕ್ಷ ನಿಗದಿ ಮಾಡಲಾಗಿದೆ. ಅದಕ್ಕಿಂತಲೂ ಹೆಚ್ಚು ಹಣ ನಾವು ಖರ್ಚು ಮಾಡುತ್ತಿದ್ದೇವೆ. ಅದನ್ನು ಚುನಾವಣಾ ಆಯೋಗದವರು ಲೆಕ್ಕ ಹಾಕುವುದಿಲ್ಲ. ಬಿಡದಿ ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ 1 ರಿಂದ 1.5 ಕೋಟಿ ಖರ್ಚು ಮಾಡುವಂತಾಗಿದೆ. ಹೀಗಾದರೆ ನಾವು ವಿಧಾನಸಭೆ ಚುನಾವಣೆಗಳನ್ನು ಹೇಗೆ ಮಾಡಬೇಕು. ಬೆಕ್ಕಿಗೆ ಗಂಟೆ ಕಟ್ಟುವವರು ಯಾರೂ ಎಂದು ಚುನಾವಣೆ ಭ್ರಷ್ಟಾಚಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಜನ ನಿದ್ದೆ ಮಾಡಲ್ಲ: ನಮ್ಮ ತಂದೆಯವರ ಕಾಲದಲ್ಲಿ ರೂ.5 ಸಾವಿರ ಕೊಟ್ಟರೆ ಕಣ್ಣಿಗೆ ಒತ್ತಿಕೊಳ್ಳುತ್ತಿದ್ದರು. ಈಗ ರೂ.5 ಕೋಟಿ ಕೊಟ್ಟರೂ ಇದು ಏನಕ್ಕೆ ಆಗುತ್ತದೆ ಎನ್ನುತ್ತಾರೆ. ಶಾಸಕರಿಗಾದರೂ ಬಂಡವಾಳ ವಾಪಸ್ಸು ಬರುತ್ತದೆ. ಆದರೆ ವಿಧಾನಪರಿಷತ್ ಸದಸ್ಯರು ಸಹ 25–30 ಕೋಟಿ ಖರ್ಚು ಮಾಡಿ ಬರುತ್ತಿದ್ದಾರೆ. ಅವರು ಹೇಗೆ ವಾಪಸ್ಸು ಸಂಪಾದನೆ ಮಾಡುತ್ತಾರೆ. ಜನರೂ ಸಹ, ಹಣ ಹಂಚುತ್ತಾರೆಂದರೆ ರಾತ್ರಿ ಪೂರ್ತಿ ನಿದ್ದೆ ಮಾಡದೇ ಕಾಯುತ್ತಾರೆ. ಮೂರು ಪಕ್ಷಗಳವರ ಜೊತೆಯೂ ಹಣ ತೆಗೆದುಕೊಳ್ಳುತ್ತಾರೆ. ಜೊತೆಗೆ ಮದುವೆಗೆ ಮನೆ ಕಟ್ಟಲು, ಅನಾರೋಗ್ಯ, ಶಿಕ್ಷಣ ಎಲ್ಲದಕ್ಕೂ ಬಂದು ಕೈಯೊಡ್ಡುತ್ತಾರೆ. ಹೀಗಾದರೆ ಭ್ರಷ್ಟಾಚಾರ ರಹಿತ ಆಡಳಿತ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:31.03.2022

140. ಚುನಾವಣೆ ಸುಧಾರಣೆ : ಮೌಲಿಕ ಚರ್ಚೆ

ಈ ಬಾರಿಯ ಬಜೆಟ್ ಅಧಿವೇಶನದ ವಿಶೇಷವೆಂದರೆ ಚುನಾವಣೆ ಸುಧಾರಣೆ ಬಗ್ಗೆ ವಿಧಾನಸಭೆಯಲ್ಲಿ ಸುದೀರ್ಘ ಚರ್ಚೆ ನಡೆದಿದ್ದು, ಮೂರು ಪಕ್ಷಗಳ ಪ್ರಮುಖ ನಾಯಕರು ಚುನಾವಣೆ ಸುಧಾರಣೆ ಕುರಿತಂತೆ ಮೌಲಿಕ ಸಲಹೆ ಸಾಧಕ–ಬಾಧಕದ ಬಗ್ಗೆ ಸುದೀರ್ಘವಾಗಿ ಮಾತನಾಡಿದರು. ಮತದಾನದ ಮೌಲ್ಯ ಹಾಗೂ ಮತದಾರನ ಜವಾಬ್ದಾರಿ ಕುರಿತು ಜಾಗೃತಿ ಮೂಡಿಸುವುದಲ್ಲದೆ, ಚುನಾವಣಾ ಅಕ್ರಮಗಳನ್ನು ತಡೆಯುವ ಪ್ರಯತ್ನ ಆಗಲೇಬೇಕೆಂದು ಆಡಳಿತ, ಪ್ರತಿಪಕ್ಷ ನಾಯಕರು ಪ್ರತಿಪಾದಿಸಿದರು.

ನಾಗರೀಕ ಸಮಾಜವೂ ಸುಧಾರಣೆಯಾಗಬೇಕು: ಪ್ರಸ್ತುತ ಪರಿಸ್ಥಿತಿಯಲ್ಲಿ ಕೇವಲ ಚುನಾವಣಾ ಸುಧಾರಣೆಯಾದರೆ ದೇಶ ಅಭಿವೃದ್ಧಿಯಾಗಲು ಸಾಧ್ಯವಿಲ್ಲ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ನಾಗರೀಕ ಸಮಾಜವು ಸುಧಾರಣೆಯಾಗಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಚುನಾವಣೆ ಸುಧಾರಣೆ ಕುರಿತು ಮಾತನಾಡಿ ನಮ್ಮ ದೇಶದ ಜನರಲ್ಲಿ ಅಂತರ್ಗತ ಶಕ್ತಿ ಇದೆ. ಬೇರೆ ಬೇರೆ ರಾಷ್ಟ್ರಗಳು ಒಂದೇ ರೀತಿಯ ವ್ಯವಸ್ಥೆ ಇದ್ದರೂ, ಪ್ರಜಾಪ್ರಭುತ್ವ ಬುಡಮೇಲಾಗಿದೆ. ನಮ್ಮ ದೇಶದಲ್ಲಿ ಅಧಿಕಾರ ಹಸ್ತಾಂತರ ಅತ್ಯಂತ ಶಾಂತಿಯುತವಾಗಿ ನಡೆಯುತ್ತದೆ. ಅಮೆರಿಕಾದಂತ ದೇಶದಲ್ಲಿ ಅಧಿಕಾರ ಹಸ್ತಾಂತರ ಎಷ್ಟು ಕಷ್ಟವಾಯಿತು ಎನ್ನುವುದನ್ನು ನೋಡಿದ್ದೇವೆ ಎಂದು ತಿಳಿಸಿದರು

ಕೆಳ ಹಂತದ ಮತದಾರ ತನ್ನ ಆತ್ಮಸಾಕ್ಷಿ ಉಳಿಸಿಕೊಂಡಿದ್ದಾನೆ. ಯುವಕರು ಹೊಸ ಹೊಸ ಆಲೋಚನೆ ಹೊಂದಿದ್ದಾರೆ, ವಿಶ್ವದಲ್ಲಿ ನಮ್ಮ ದೇಶ ಮುಂದೆ ಬರಬೇಕು ಎಂದು ಬಯಸುತ್ತಾರೆ. ಭ್ರಷ್ಟಾಚಾರ ಜನರನ್ನು ಭ್ರಷ್ಟರನ್ನಾಗಿ ಮಾಡುತ್ತಿದೆ. ಇದು ಅತಿಯಾದಾಗ ಇನ್ನು ಬದಲಾಯಿಸುವ ಸಮಯ ಬಂದೇ ಬರುತ್ತದೆ. ಪ್ರಜಾಪ್ರಭುತ್ವ ಕೇವಲ ಜೀವಂತವಾಗಿದ್ದರೆ ಸಾಲದು ಅದು ಆರೋಗ್ಯಕರವಾಗಿರಬೇಕು ಎಂದರು.

ಎಲೆಕ್ಟ್ರೋಲ್ ಬಾಂಡ್ ವ್ಯವಸ್ಥೆ ರದ್ದುಪಡಿಸಿ: ರಾಜಕೀಯ ಪಕ್ಷಗಳು ಅರ್ಥಿಕವಾಗಿ ನೆರವು ನೀಡಲು ಎಲೆಕ್ಟ್ರೋಲ್ ಬಾಂಡ್‌ವ್ಯವಸ್ಥೆ ತರಲಾಗಿದ್ದು, ಇದು ಕಾರ್ಪೋರೇಟ್ ವಲಯ, ರಾಜಕೀಯ ಪಕ್ಷಗಳ ನಡುವಿನ ಮೈತ್ರಿಗೆ ಕಾರಣವಾಗುತ್ತಿದೆ. ಎಲೆಕ್ಟ್ರೋಲ್ ಬಾಂಡ್ ವ್ಯವಸ್ಥೆ ರದ್ದುಪಡಿಸಬೇಕು ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು. ಚರ್ಚೆಯಲ್ಲಿ ಮಾತನಾಡಿದ ಅವರು, ಇತ್ತಿಚಿನ ದಿನಗಳಲ್ಲಿ ಕಾರ್ಪೋರೇಟ್ ವಲಯ ಹಾಗೂ ರಾಜಕೀಯ ಪಕ್ಷಗಳ ಮೈತ್ರಿಯಾಗುತ್ತಿದೆ. ಕಾರ್ಪೋರೇಟ್ ಬಾಡಿಗಳು ವೇಗವಾಗಿ ಬೆಳೆಯುತ್ತಿವೆ. ಕಾರ್ಪೋರೇಟ್ ಸಂಸ್ಥೆಗಳ ಆದಾಯ ಹೆಚ್ಚಾಗುತ್ತಿದೆ. ಅಂಬಾನಿ ಕಂಪನಿಯ ಆದಾಯ ರೂ.1.57 ಲಕ್ಷ ಕೋಟಿ ಇದ್ದಿದ್ದು, ರೂ.8 ಲಕ್ಷ ಕೋಟಿಗೆ ಏರಿದೆ. ಅಂದಾನಿ ಸಂಸ್ಥೆಯ ಆದಾಯ ರೂ.57 ಸಾವಿರ ಕೋಟಿ ಇದ್ದದ್ದು ಈಗ ರೂ.7 ಲಕ್ಷ ಕೋಟಿಯಾಗಿದೆ. ಕಾರ್ಪೋರೇಟ್ ಸಂಸ್ಥೆಗಳು ಪಕ್ಷ ಮತ್ತು ಸರ್ಕಾರಗಳನ್ನು ನಿಯಂತ್ರಿಸುವ ಕೆಲಸ ಮಾಡುತ್ತಿವೆ. ಇದನ್ನು ತಪ್ಪಿಸದಿದ್ದರೆ ಪ್ರಜಾಪ್ರಭುತ್ವ ಉಳಿಸುವುದು ಕಷ್ಟವಾಗಲಿದೆ.

ಎಲೆಕ್ಟ್ರೋಲ್ ಬಾಂಡ್ ಖರೀದಿಸುವ ವ್ಯವಸ್ಥೆ ಒಳ್ಳೆಯದಲ್ಲ, 2018ರಲ್ಲಿ ಎಲೆಕ್ಟ್ರೋಲ್ ಬಾಂಡ್‌ನಲ್ಲಿ ಬಿಜೆಪಿಗೆ ಶೇ.80 ರಷ್ಟು ಹಣ ಹೋಗಿದೆ. ಕಾಂಗ್ರೆಸ್‌ಗೆ ಶೇ.9 ರಷ್ಟು ಹಣ ಬಂದಿದೆ. ಎಲೆಕ್ಟ್ರೋಲ್ ಬಾಂಡ್ ಖರೀದಿ ವ್ಯವಸ್ಥೆ ಸ್ಥಗಿತಗೊಳಿಸಬೇಕು. ರಾಜಕೀಯ ಪಕ್ಷಗಳ ಜೊತೆ ಕಾರ್ಪೋರೇಟ್ ಸಂಸ್ಥೆಗಳ ಮೈತ್ರಿ ತಪ್ಪಿಸಬೇಕು ಎಂದು ಸಲಹೆ ನೀಡಿದರು.

ಚುನಾವಣೆ ವ್ಯವಸ್ಥೆ ಸುಧಾರಣೆ ನಮ್ಮಿಂದ ಸಾಧ್ಯವಿಲ್ಲ: ಚುನಾವಣಾ ವ್ಯವಸ್ಥೆ ಸುಧಾರಣೆ ಶಾಸಕಾಂಗದಿಂದ ಮಾತ್ರ ಸಾಧ್ಯವಿಲ್ಲ. ಪ್ರಜಾಪ್ರಭುತ್ವ ಉಳಿಸುವ ಬಗ್ಗೆ ರಾಜ್ಯದ ಆರೂವರೆ ಕೋಟಿ ಜನ ಚಿಂತನೆ ಮಾಡಬೇಕಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ ಪ್ರತಿಪಾದಿಸಿದರು. ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು ರಾಜಕೀಯ ಪಕ್ಷಗಳು ಹಾಗೂ ನಾಯಕರು ವ್ಯವಸ್ಥೆಯನ್ನು ಹಾಳು ಮಾಡಿದ್ದೇವೆ. ಹೀಗಾಗಿ ನನ್ನ ಮತ ಮಾರಾಟಕ್ಕೆ ಇಲ್ಲ ಎಂದು ಮತದಾರರು ಹೇಳಬೇಕು. ಆಗ ಮಾತ್ರ ಏನಾದರೂ ಸುಧಾರಣೆಯಾಗಲು ಸಾಧ್ಯ ಎಂದು ಹೇಳಿದರು.

ಈ ಸದನದಲ್ಲಿರುವ 224 ಸದಸ್ಯರಲ್ಲಿ ಎಷ್ಟು ಜನ ಚುನಾವಣೆಯಲ್ಲಿ ನಾನು ಹಣ ವೆಚ್ಚ ಮಾಡುವುದಿಲ್ಲ ಎಂದು ಎದೆಮುಟ್ಟಿ ಹೇಳುತ್ತಾರೆ ಎಂದು ಪ್ರಶ್ನಿಸಿದ ಅವರು, ಇಂದು ಚುನಾವಣೆ ಎಂದರೆ ಕೋಟ್ಯಂತರ ರೂಪಾಯಿ ವೆಚ್ಚ ಹೆಸರಿಗೆ ಆಯೋಗದ ರೂ.40 ಲಕ್ಷ ಮಿತಿ, ನಾವು ಅಷ್ಟಕ್ಕೆ ಸೀಮಿತವಾಗಿ ಲೆಕ್ಕ ಕೊಡುವುದು. ಒಬ್ಬ ಅಧಿಕಾರಿ ಅದರ ಉಸ್ತುವಾರಿ ನಿಜವಾಗಿಯೂ ನಾವು ಮಿತಿಯಲ್ಲೇ ವೆಚ್ಚ ಮಾಡುತ್ತೇವಾ, ಆತ್ಮಸಾಕ್ಷಿ ಪ್ರಕಾರ ನಡೆಯುತ್ತಿದ್ದೇವಾ ಎಂಬ ಆತ್ಮಾವಲೋಕನ ಅಗತ್ಯ ಎಂದು ತಿಳಿಸಿದರು. ಯಾರ ಮನೆ ಹಾಳು ಮಾಡಿದರೂ ಸರಿ, ಗೆಲ್ಲಬೇಕು ಅಷ್ಟೇ. ಚುನಾವಣೆ ಗೆಲ್ಲುವವರೆಗೂ ಒಂದು ಹಂತ, ನಂತರ 5 ವರ್ಷ ಉಳಿಯಬೇಕಲ್ಲ ಅದು ಭಾರೀ ಕಷ್ಟ. ದೇವಸ್ಥಾನ, ಮದುವೆ, ಸ್ಕೂಲ್ ಫೀಸ್ ಎಲ್ಲದಕ್ಕೂ ಜನ ಬರುತ್ತಾರೆ. ಎಲ್ಲಿಂದ ತಂದುಕೊಡಲು ಸಾಧ್ಯ ಎಂದು ಪ್ರಶ್ನಿಸಿದರು.

ಚುನಾವಣೆ ಸುಧಾರಣೆ ಚರ್ಚೆ ಯಶಸ್ವಿ : ಸ್ಪೀಕರ್: ರಾಜ್ಯ ವಿಧಾನಸಭೆಯಲ್ಲಿ ಎರಡು ದಿನ ನಡೆದ ಚುನಾವಣಾ ಸುಧಾರಣೆಯ ಕುರಿತ ಚರ್ಚೆಯ ವರದಿಯನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ತಲುಪಿಸುವುದಾಗಿ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು.

ಎರಡು ದಿನಗಳ ಕಾಲ ಎಲ್ಲ ಶಾಸಕರು ಅತ್ಯುತ್ತಮ ಸಲಹೆಗಳನ್ನು ನೀಡಿದ್ದು, ವಿಧಾನಸಭೆಯಲ್ಲಿ ಪ್ರತಿದಿನದ ಕಾರ್ಯಾಕಲಾಪದ ಹೊರತಾಗಿ ಸಮಾಜ ಸುಧಾರಿಸುವ ವಿಷಯಗಳ ಕುರಿತು ಮುಕ್ತವಾಗಿ ಚರ್ಚೆಯಾಗಬೇಕು. ಅದಕ್ಕೆ ಕರ್ನಾಟಕ ವಿಧಾನಸಭೆ ಮೇಲ್ಪಂಕ್ತಿಯಾಗಬೇಕು. ಜನರು ಚುನಾವಣೆಯಲ್ಲಿ ಆಯ್ಕೆಯಾದ ನಮ್ಮನ್ನು (ಜನಪ್ರತಿನಿಧಿಗಳು) ಮೆಲ್ಪಂಕ್ತಿಯಲ್ಲಿ ಇರಬೇಕು ಎಂದು ಬಯಸುತ್ತಾರೆ. ಅದರಂತೆ ನಾವು ನಡೆದುಕೊಳ್ಳುವ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಹೇಳಿದರು.

ಈ ಚರ್ಚೆಗಳನ್ನು ಸಂವಿಧಾನಬದ್ಧ ಸಂಸ್ಥೆಗಳಿಗೆ ತಲುಪಿಸುವ ಕೆಲಸ ಮಾಡುತ್ತೇನೆ. ಚುನಾವಣಾ ಆಯೋಗ, ರಾಷ್ಟ್ರಪತಿ, ಪ್ರಧಾನಮಂತ್ರಿ, ಸುಪ್ರೀಂಕೋರ್ಟ್ ಎಲ್ಲರ ಬಗ್ಗೆಯೂ ಚರ್ಚೆಯಾಗಿದೆ. ಎಲ್ಲರಿಗೂ ತಲುಪಿಸುವ ಪ್ರಯತ್ನ ನಡೆಸುತ್ತೇನೆ ಎಂದು ಹೇಳಿದರು.

ಆಧಾರ: ಉದಯವಾಣಿ, ದಿನಾಂಕ:31.03.2022

141. ಸದನದಲ್ಲೂ ಹಲಾಲ್ ಮಾಂಸ ವಿವಾದದ ಗದ್ದಲ

ರಾಜ್ಯಾದ್ಯಂತ ವಿವಾದ ಸೃಷ್ಟಿಸಿರುವ 'ಹಲಾಲ್' ವಿಚಾರ ವಿಧಾನಸಭೆಯಲ್ಲೂ ಪ್ರತಿಧ್ವನಿಸಿದೆ. ಹಿಜಾಬ್, ಜಾತ್ರೆಗಳಲ್ಲಿ ವ್ಯಾಪಾರ ಬಂದ್ ಆಯ್ತು, ಈಗ ಯುಗಾದಿಗೆ ಹಲಾಲ್ ಚರ್ಚೆ ನಡೆಯುತ್ತಿದೆ. ದೇವರ ಮೂರ್ತಿ ಕೆತ್ತುವ ಮುಸ್ಲಿಮರಿಗೂ ನಿಷೇಧ ಹೇರುತ್ತೀರಾ ಎಂದು ಮಾಜಿ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ ಸಚಿವ ಆರ್. ಅಶೋಕ್ ಮುಸ್ಲಿಮರು ಹಲಾಲ್ ಮಾಂಸ ತಿನ್ನುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಹಿಂದೂಗಳು ತಮಗೆ ಹಲಾಲ್ ಮಾಂಸ ಬೇಡ ಎನ್ನುವುದಕ್ಕೆ ಅವರಿಗೆ ಹಕ್ಕಿದೆ ಎಂದು ಸಮರ್ಥಿಸಿಕೊಂಡರು.

ಈ ವೇಳೆ ಕಾಂಗ್ರೆಸ್ ಸದಸ್ಯ ಕೆ. ಆರ್. ರಮೇಶ್ ಕುಮಾರ್ ಅವರು ಇದು ಕೇವಲ ಚುನಾವಣೆ ವಿಚಾರಕ್ಕಾಗಿ ಮಾತ್ರ ಬಳಕೆಯಾಗುತ್ತಿದೆ. ನೇರವಾಗಿ ಚುನಾವಣೆ ಎದುರಿಸಿದರೆ ಸಂಚಾರ ದಟ್ಟಣೆ ಹೆಚ್ಚಿರುತ್ತದೆ ಎಂದು ಬೈಪಾಸ್ ಮಾಡಲು ಇಂತಹ ವಿಚಾರಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕಿಡಿ ಕಾರಿದರು.

ಚುನಾವಣೆ ವ್ಯವಸ್ಥೆ ಸುಧಾರಣೆ ಕುರಿತು ಮಾತನಾಡಿದ ಕುಮಾರಸ್ವಾಮಿ, ಹಲವು ಧಾರ್ಮಿಕ ವಿಚಾರಗಳ ಚರ್ಚೆ ಬಳಿಕ ಇದೀಗ ಯುಗಾದಿಗೆ ಹಲಾಲ್ ಚರ್ಚೆ ನಡೆಯುತ್ತಿದೆ. ಮೂಲತ: ನಾವು ಮಾಂಸಾಹಾರಿಗಳು ನಾವು ಹಲಾಲ್, ಹರಾಂ ಮಾಂಸ ಅಂತೆಲ್ಲ ನೋಡುವುದಿಲ್ಲ. ಹಾಗಂತ ನಾವು ಅಂಗಡಿಯಿಂದ ಮಾಂಸವನ್ನು ತಂದು ಪೂಜೆಗೂ ಇಡಲ್ಲ. ಹಬ್ಬದ ಮರುದಿನ ವರ್ಷ ತೊಡಕು ಪ್ರಯುಕ್ತ ಗುಡ್ಡೆ ಮಾಂಸ ಮಾಡುತ್ತಾರೆ. ಈಗ ಇಂತಹ ಅಶಾಂತಿಯ ವಾತಾವರಣ ಯಾಕೆ ಸೃಷ್ಟಿಸಬೇಕು, ಮಾಧ್ಯಮಗಳು ಇಂಥ ಸುದ್ದಿಗಳನ್ನು ತೋರಿಸಲೇಬಾರದು ಎಂದರು.

ಸಾಮಾಜಿಕ ಜಾಲತಾಣಗಳಲ್ಲಿ, ಅದರಲ್ಲೂ ವಾಟ್ಸಾಪ್‌ನಲ್ಲಿ ಇಂತಹ ಸಾಕಷ್ಟು ಪ್ರಚೋದನೆಯ ಪೋಸ್ಟ್‌ಗಳು ಬರುತ್ತಿವೆ. ನಮ್ಮ ದೇಶ ಹಿಂದೂ ರಾಷ್ಟ್ರವಾಗಬೇಕು ನಿಮ್ಮ ಮಕ್ಕಳು ನೆರೆಯವರಿಗೆ ಕೇವಲ ಹಿಂದೂ ವ್ಯಾಪಾರಿಗಳ ಜೊತೆ ಮಾತ್ರ ವ್ಯವಹರಿಸಲು ತಿಳಿಸಿ. ನಿಮ್ಮ ಮಕ್ಕಳಿಗೆ ಕೇವಳ ಹಿಂದೂಗಳು ಮಾತ್ರ ಸ್ನೇಹಿತರಾಗಲಿ ಈ ವಿಚಾರವನ್ನು ನಿತ್ಯ ನೆನಯಿರಿ. ಈ ಮೆಸೇಜನ್ನು ಹತ್ತು ಜನರಿಗೆ ಹಂಚಿರಿ ಎಂದೆಲ್ಲಾ ಬರೆದು ಹಾಕುತ್ತಿದ್ದಾರೆ. ಇಂಥ ಪ್ರಚೋದನಾತ್ಮಕ ಓದಿದಾಗ ನನಗೆ ಬಹಳ ನೋವಾಯಿತು ಎಂದು ಕಿಡಿ ಕಾರಿದರು.

ಮಾಲೂರಿನ ಶಿವಾರಪಟ್ಟಣದಲ್ಲಿ 15 ಮುಸ್ಲಿಂ ಕುಟುಂಬಗಳು ಕಳೆದ 40 ವರ್ಷಗಳಿಂದಲೂ ಹಿಂದೂ ದೇವರ ಮೂರ್ತಿಗಳನ್ನು ಮಾಡುತ್ತಿದ್ದಾರೆ. ಅಲ್ಲಿಂದ ದೇವರ ಮೂರ್ತಿಗಳನ್ನು ತಂದು ನಾವು ಪೂಜೆ ಸಲ್ಲಿಸುತ್ತಿದ್ದೇವೆ. ಹಿಂದೂ ಮೂರ್ತಿಗಳನ್ನು ಕೆತ್ತುತ್ತಿರುವ ಆ ಮುಸ್ಲಿಮರನ್ನೂ ನೀವು ನಿಷೇಧಿಸುತ್ತೀರಾ ಎಂದು ಪ್ರಶ್ನಿಸಿದರು.

ಆಧಾರ: ಉದಯವಾಣಿ, ದಿನಾಂಕ:31.03.2022

142. Expensive polls keep women away from politics: MLA

Hiriyur BJP MLA K.Poornima said that “ex-orbitant elections” was one of the main reasons keeping women away from politics.

“The money involved in elections of late is so much that women candidates can’t afford it”. Poornima said in the Assembly during a special debate on electrol reforms.

“Typically, the men in the house fund the woman candidate. Then they have to spend so much on the candidate the men usually decide that they would rather contest the election themselves” she pointed out calling for reforms to put an end to corrupt practices in elections.

Karnataka has 10 women MLAs of which three are from BJP in the 224 member Assembly. There are three women MLCs in the 75 member Legislative Council.

JD(S) legislature party leader H.D.Kumarswamy said tens of crores of rupees are being spent on elections. “Even gram panchayat elections have become expensive where candidates are spending in crores” the former chief minister said.

Kumarswamy said candidates in the recent years were spending more than Rs.1 crore for panchayats with hardly 500-600 votes. “Meanwhile even MLCs are spending Rs.25-30 crore. How will they get back this money? Imagine the amount needed for Assembly elections” Kumaraswamy said.

There are Zilla Panchayat and APMC elections for which parties have to chip in money he added, illustrating how expensive the election process has become of late.

“Election regulations are also inadequate. The regulation prescribes a penalty up to Rs.2,000 for those creating disturbance in elections and up to 6 months jail term for violating norms. No one has been convicted until now” Kumaraswamy said. He also cautioned the media about its role in upholding democratic values.

“The media has become the opinion-maker and they make or break the images of politicians” he said.

Courtesy:- Deccan Herald, Dated: 31.03.2022

143. ದಿ: 4–2–2022ರಂದು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಏರ್ಪಡಿಸಿದ ತರಬೇತಿ ಶಿಬಿರದಲ್ಲಿ "ಸಂವಿಧಾನ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ" ವಿಷಯ ಕುರಿತು ಮಾನ್ಯ ಸಭಾಧ್ಯಕ್ಷರು ನೀಡಿದ ಉಪನ್ಯಾಸದ ಬಗ್ಗೆ:–

ಸನ್ಮಾನ್ಯ ಸಭಾಪತಿಗಳೇ, ವಿಧಾನ ಪರಿಷತ್ತಿನ ಸದಸ್ಯರುಗಳೇ ಅದರಲ್ಲಿಯೂ ಮೊತ್ತ ಮೊದಲ ಬಾರಿಗೆ ಮೇಲ್ಮನೆಯನ್ನು ಪ್ರವೇಶಿಸಿರುವ ಸದಸ್ಯರುಗಳಿಗೆ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ ಹಾಗೂ ಇಲ್ಲಿ ನೆರೆದಿರುವ ವಿಧಾನ ಸಭಾ ಸದಸ್ಯರುಗಳೇ ಹಾಗೂ ಹಾಜರಿರುವ ಎಲ್ಲಾ ಅಧಿಕಾರಿ ಸಿಬ್ಬಂದಿ ವರ್ಗದವರೇ ಈ ಒಂದು ತರಬೇತಿ ಶಿಬಿರವನ್ನು ಆಯೋಜಿಸಿ ನನಗೆ **"ಸಂವಿಧಾನದ ಅಡಿಯಲ್ಲಿ ಜನರ ನಿರೀಕ್ಷೆ ಹಾಗೂ ಶಾಸಕರ ಜವಾಬ್ದಾರಿ"** ವಿಷಯದ ಕುರಿತು ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ಸನ್ಮಾನ್ಯ ಸಭಾಪತಿಯವರಿಗೆ ಆಭಾರಿಯಾಗಿದ್ದೇನೆ. ಈ ಒಂದು ತರಬೇತಿ ಎಂಬುದು ಪ್ರಥಮ ಭಾರಿಗೆ ಆಯ್ಕೆಯಾದ ಸದಸ್ಯರುಗಳಿಗೆ ಅವಶ್ಯಕವಾಗಿದ್ದರೂ, ಇದು ನಿರಂತರವಾಗಿ ನಡೆಯುತ್ತಿರಬೇಕೆಂಬುದು ನನ್ನ ಅಭಿಲಾಷೆ. ಏಕೆಂದರೆ ಕಲಿಕೆ ಎಂಬುದು ಕೇವಲ ಶಾಸಕರಿಗೆ ಸೀಮಿತವಾಗದೆ ಪ್ರತಿಯೊಬ್ಬರಿಗೂ ನಿರಂತರವಾಗಿ ಅಗತ್ಯವಾಗಿರತಕ್ಕದ್ದು.

- ಸಂವಿಧಾನವೆಂದರೆ ರಾಷ್ಟ್ರದ ಮೂಲಭೂತ ಕಾನೂನು, ಸಂವಿಧಾನವು 1950 ಜನವರಿ 26 ರಂದು ಜಾರಿಗೆ ಬಂದಿದ್ದು, ಈ ಮೂಲ ಸಂವಿಧಾನದಲ್ಲಿ ಪೀಠಿಕೆಯನ್ನೊಳಗೊಂಡು 395 ವಿಧಿಗಳು, 8 ಅನುಸೂಚಿಗಳು, 22 ಭಾಗಗಳನ್ನೊಳಗೊಂಡಿತ್ತು. ಈಗ 460 ವಿಧಿಗಳು, 22 ಭಾಗಗಳು, 12 ಅನುಸೂಚಿಗಳು ಮತ್ತು 7 ಪರಿಶಿಷ್ಟಗಳನ್ನೊಳಗೊಂಡ ಸಂವಿಧಾನವಾಗಿದ್ದು, ಇದು ವಿಶ್ವದ ಬೇರೆ ಬೇರೆ ಸಂವಿಧಾನಗಳ ಚಿಂತನೆಗಳಿಂದ ಪ್ರಭಾವಿತವಾಗಿದ್ದು, ತನ್ನದೇ ಆದಂತಹ ಮೌಲ್ಯಗಳನ್ನು, ಆದರ್ಶಗಳನ್ನು ಒಳಗೊಂಡ ಒಂದು ಅತ್ಯುತ್ತಮವಾದ ಸಂವಿಧಾನವಾಗಿದೆ. ಸಂವಿಧಾನ ರಚನಾಕಾರರು ಭಾರತದ ಪ್ರಜೆಗಳ ನಿರೀಕ್ಷೆಗೆ ತಕ್ಕಂತೆ ಸಂವಿಧಾನ ರಚನೆಯ ಧ್ಯೇಯವನ್ನು ಹೊಂದಿದ್ದು, ದೇಶದ ವಿಭಿನ್ನ ಜಾತಿ, ಧರ್ಮ, ಜನಾಂಗ, ಭಾಷೆ, ಸಂಸ್ಕೃತಿಯನ್ನು ಹೊಂದಿರುವ ಬಾರತದಲ್ಲಿ ಎಲ್ಲರನ್ನು ಒಟ್ಟಿಗೆ ಬಾಳುವಂತೆ ಮಾಡಲು ಬೇಕಾದ ಅಂಶಗಳನ್ನು ಅಳವಡಿಸುವ ಪ್ರಯತ್ನ ಮಾಡುವ ಸಂದರ್ಭದಲ್ಲಿ ಅವರ ಮೇಲೆ ಭಾರತದ ಸನಾತನ ಧರ್ಮದಲ್ಲಿಯ "ಸರ್ವೇಜನೋ ಸುಖಿನೋ ಭವಂತು", "ಸಮಪಾಲು ಸಮ ಬಾಳು" "ವಸುದೈವ ಕುಟುಂಬಕಂ" ಎನ್ನುವ ಘೋಷ ವಾಕ್ಯಗಳು ಬುದ್ಧನ ಶಾಂತಿ ತತ್ವ, ಬಸವಣ್ಣನವರ ಸಮನತಾ ತತ್ವ, ಕನಕದಾಸರವರ ಜಾತಿ ರಹಿತ ವ್ಯವಸ್ಥೆ, ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆ, ಸ್ವರಾಜ್ಯ ತತ್ವಗಳು ಪ್ರಭಾವ ಬೀರಿದ್ದು, ಇವುಗಳನ್ನು ಭಾರತದ ಸಂವಿಧಾನದ ಪ್ರಸ್ತಾವನೆಯನ್ನೊಳಗೊಂಡು ಸಂವಿಧಾನದ 3ನೇ ಭಾಗದ ಮೂಲಭೂತ ಹಕ್ಕುಗಳು, ನಾಲ್ಕನೇ ಭಾಗದ ರಾಜ್ಯ ನಿರ್ದೇಶಕ ತತ್ವಗಳು, 4ಎ ಭಾಗದ ಮೂಲಭೂತ ಕರ್ತವ್ಯಗಳಲ್ಲಿ ಗುರುತಿಸಲಾಗಿದೆ.

- ಸಂವಿಧಾನದ ಪ್ರಸ್ತಾವನೆಯಲ್ಲಿ ಭಾರತದ ಸ್ವಾತಂತ್ರ್ಯ, ಗಣರಾಜ್ಯ, ಪ್ರಜೆಗಳ ಪರಮಾಧಿಕಾರ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ, ಅಲ್ಪಸಂಖ್ಯಾತರ ಮತ್ತು ಹಿಂದುಳಿದವರ ರಕ್ಷಣೆ ಇತ್ಯಾದಿಗಳ ಆಧಾರದ ಮೇಲೆ ರಚಿತಗೊಂಡ ಪ್ರಸ್ತಾವನೆ ಕೆಳಕಂಡಂತಿದೆ.

"ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ ಸಮಭಾವದ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರೀಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ;

ಸ್ಥಾನಮಾನ ಹಾಗೂ ಅವಕಾಶ ಸಮಾನತೆ

ದೊರೆಯುವಂತೆ ಮಾಡಲು ಮತ್ತು

ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು, ಸುನಿಶ್ಚಿತಗೊಳಿಸಿ, ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ 26ನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

ಈ ಪ್ರಸ್ತಾವನೆಯನ್ನು 'ಸಂವಿಧಾನ ಒಡವೆ' **(Jewel)** ಎಂದು ಕೆಲವರು ಬಣ್ಣಿಸಿದರೆ, ಕೆ.ಎಂ.ಮುನ್ಷಿಯವರು ಇದನ್ನು 'ರಾಜಕೀಯ ಜಾತಕ' **(Political Horoscope)** ಎಂದು ಕರೆದರು. ಈ ಪ್ರಸ್ತಾವನೆಯು ಸಂವಿಧಾನದ ಭಾಗವಾಗಿದ್ದು, ಇದರಲ್ಲಿ ಉಲ್ಲೇಖಿಸಿರುವ ಪದಗಳು ಅರ್ಥಗರ್ಭಿತವಾಗಿದ್ದು, ರಚನಾತ್ಮಕ ತತ್ವಗಳನ್ನು ಮತ್ತು ಭಾವನೆಗಳನ್ನು ಒಳಗೊಂಡು ಜನರ ನಿರೀಕ್ಷೆಗೆ ತಕ್ಕಂತಾಗಿರುತ್ತದೆ.

"ಮುಖವು ಮನಸ್ಸಿನ ಸೂಚಿ" (face is index of mind) ಎಂದು ನಾವು ಹೇಳುವಂತೆ "ಪ್ರಸ್ತಾವನೆಯು ನಮ್ಮ ಸಂವಿಧಾನದ ಮುಖಸೂಚಿಯಾಗಿದೆ". ಪ್ರಸ್ತಾವನೆಯನ್ನು "ಸಂವಿಧಾನದ ಹೃದಯ ಮತ್ತು ಆತ್ಮ" ಎಂದು ಕರೆದಿದ್ದಾರೆ. ಏಕೆಂದರೆ ಅದು ಸಂವಿಧಾನದ ಪ್ರತಿ ಅನುಚ್ಛೇದಕ್ಕೆ ಸಹ–ಸಂಬಂಧ ಕಲ್ಪಿಸಿಕೊಂಡಿದೆ. ಅದು "ಭಾರತದ ಪ್ರಜೆಗಳಾದ ನಾವು" ಎಂಬ ಪದಗಳೊಂದಿಗೆ ಪ್ರಾರಂಭವಾಗುತ್ತದೆ. ನಾವೆಲ್ಲರೂ "ಆಡಳಿತ, ಮಾರ್ಗದರ್ಶನ ಮತ್ತು ನಮ್ಮ ಜನರನ್ನು ಕಾಪಾಡುವ ಅಧಿಕಾರವನ್ನು" ಪಡೆಯುತ್ತೇವೆ.

ಭಾರತದ ಪ್ರಜೆಗಳು: ಈ ಪದಗಳ ಬಳಕೆಯಿಂದ ಪ್ರಜೆಗಳ ಪರಮಾಧಿಕಾರಕ್ಕೆ ಮಾನ್ಯತೆ ಕೊಡಲಾಗಿದೆ.

- **ಸಾರ್ವಭೌಮ ರಾಷ್ಟ್ರ: (Sovereign State):** ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಭಾರತವು ಒಂದು ಸಾರ್ವಭೌಮ ರಾಷ್ಟ್ರವಾಗಿದ್ದು, ಪ್ರಪಂಚದ ಯಾವುದೇ ರಾಷ್ಟ್ರಕ್ಕೆ ಅಧೀನವಾಗಿಲ್ಲ.
- **ಸಮಾಜವಾದಿ ರಾಷ್ಟ್ರ (Socialist State):** ಭಾರತವನ್ನು ಸುಖೀ ರಾಜ್ಯ ಮತ್ತು ಸಮಾಜವಾದಿ ರಾಷ್ಟ್ರವನ್ನಾಗಿ ಮಾಡುವುದು ಸಂವಿಧಾನದ ಪ್ರಧಾನ ಗುರಿಯಾಗಿದೆ. ಸಮಾಜವಾದಿ ತತ್ವಗಳನ್ನು ಪ್ರಜಾಪ್ರಭುತ್ವದ ಮೂಲಕ ಜಾರಿಗೆ ತರಲು ಸಾಧ್ಯ ಎಂಬುದನ್ನು ಪ್ರಸ್ತಾವನೆ ತಿಳಿಸುತ್ತದೆ.

- **ಸರ್ವಧರ್ಮದ ಸಮಭಾವದ ರಾಷ್ಟ್ರ (Secular State):** ವಿವಿಧ ಧರ್ಮಗಳು ಮತ್ತು ಜನಾಂಗಗಳನ್ನು ಒಳಗೊಂಡಿರುವ ಭಾರತದಲ್ಲಿ ಧಾರ್ಮಿಕ ಹಕ್ಕನ್ನು ಒಂದು ಮೂಲಭೂತ ಹಕ್ಕೆಂದು ಸಂವಿಧಾನದಲ್ಲಿ ಪರಿಗಣಿಸಿದ್ದರೂ, ಪ್ರಸ್ತಾವನೆಯಲ್ಲಿ ಭಾರತ 'ಜಾತ್ಯಾತೀತ ರಾಷ್ಟ್ರ' ಎಂದು ಘೋಷಿಸಲಾಗಿದೆ. ಈ ಅಂಶವನ್ನು ಒತ್ತಿ ಹೇಳಲು ಸಂವಿಧಾನದ 42ನೇ ತಿದ್ದುಪಡಿ ಮೂಲಕ ಸೆಕ್ಯುಲರ್ ಎಂಬ ಪದವನ್ನು ಪ್ರಸ್ತಾವನೆಗೆ 1976ರಲ್ಲಿ ಅಳವಡಿಸಲಾಗಿದೆ. ಭಾರತ ಸಂವಿಧಾನದಲ್ಲಿ ಯಾವುದೇ ಒಂದು ಧರ್ಮವನ್ನು ರಾಷ್ಟ್ರ ಧರ್ಮವಾಗಿ ಅಂಗೀಕರಿಸಿಲ್ಲ. ಎಲ್ಲಾ ಧರ್ಮಗಳನ್ನು ಸಮಾನತೆಯಿಂದ ಕಂಡು ಸಮಾನವಾಗಿ ಗೌರವಿಸುವುದು ರಾಷ್ಟ್ರದ ಗುರಿಯಾಗಿದೆ.

- **ಪ್ರಜಾಸತ್ತಾತ್ಮಕ ಗಣರಾಜ್ಯ (Democratic Republic):** ಪ್ರಜಾಪ್ರಭುತ್ವವೆಂದರೆ "ಪ್ರಜೆಗಳಿಂದ ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ಇರುವ ಸರ್ಕಾರವೆಂದು" ಅಬ್ರಹಾಂ ಲಿಂಕನ್ 19ನೇ ಶತಮಾನದಲ್ಲಿ ವ್ಯಾಖ್ಯಾನಿಸಿದರು. ನಿಯತ ಕಾಲಕ್ಕೊಮ್ಮೆ ನಡೆಯುವ ಚುನಾವಣೆಗಳ ಮೂಲಕ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ, ಈ ಪ್ರತಿನಿಧಿಗಳು ಚರ್ಚೆಗಳ ಮೂಲಕ ಜನರ ಸಮಸ್ಯೆಗಳನ್ನು ಅರಿತು, ಸರ್ಕಾರವನ್ನು ನಡೆಸುವುದೇ ಪ್ರಜಾಪ್ರಭುತ್ವ. ಪ್ರಪಂಚದಲ್ಲಿ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿರುವ ಭಾರತದಲ್ಲಿ ಶೇಕಡ 60ಕ್ಕೂ ಹೆಚ್ಚು ಮತದಾರರು ಚುನಾವಣೆಗಳಲ್ಲಿ ಭಾಗವಹಿಸಿ ಮತ ಚಲಾಯಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ.

- **ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ:** ಭಾರತದ ರಾಜಕೀಯ ಪದ್ದತಿಯ ನಾಲ್ಕು ಆಧಾರ ಸ್ಥಂಭಗಳಿದ್ದಂತೆ. ಎಲ್ಲ ಪೌರರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವುದೇ ಸಂವಿಧಾನದ ಮುಖ್ಯ ಗುರಿ.

- **ಪ್ರಸ್ತಾವನೆಯಲ್ಲಿ ವಾಕ್ ಸ್ವಾತಂತ್ರ್ಯ, ಧರ್ಮಸ್ವಾತಂತ್ರ್ಯ, ನಂಬಿಕೆ ಮತ್ತು ಉಪಾಸನಾ ಸ್ವಾತಂತ್ರ್ಯಗಳಿಗೆ** ಅವಕಾಶ ಕಲ್ಪಿಸಿರುವುದು ಪ್ರಜಾ ಪ್ರಭುತ್ವದ ಸಂಕೇತವಾಗಿದೆ.

- **ಸ್ವಾತಂತ್ರ್ಯ ಹೇಗೆ ಮುಖ್ಯವೋ ಹಾಗೆಯೇ ಸಮಾನತೆಯೂ** ಮುಖ್ಯವಾಗಿದೆ. ಇವೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಸಮಾನತೆಯಿಲ್ಲದ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಸ್ವತಂತ್ರವಾಗಿ ಜನಿಸಿದ ವ್ಯಕ್ತಿಗಳು, ಸ್ವತಂತ್ರವಾಗಿ ಜೀವಿಸಿ ಸಮಾನ ಹಕ್ಕುಗಳನ್ನು ಅನುಭವಿಸಬೇಕೆಂಬ ತತ್ವ ಇಲ್ಲಿ ಅಡಕವಾಗಿದೆ.

- **ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಗೆ ಭ್ರಾತೃತ್ವ (Fraternity)** ಅತ್ಯಗತ್ಯ. ವಿವಿಧ ಜನಾಂಗಗಳಿರುವ ಭಾರತದಲ್ಲಿ ಭ್ರಾತೃತ್ವದ ಮೂಲಕ ರಾಷ್ಟ್ರೀಯತೆಯನ್ನು ಉಂಟು ಮಾಡಲು ಸಾಧ್ಯ. ವ್ಯಕ್ತಿಗೆ ಘನತೆ ಮತ್ತು ಗೌರವ ಮುಖ್ಯವಾಗಿರುವುದರಿಂದ ಜಾತಿ ಅಥವಾ ಶ್ರೀಮಂತಿಕೆಯ ಆಧಾರದ ಮೇಲೆ ಭೇದಭಾವನೆ ಇರಬಾರದು.

  ಪ್ರಸ್ತಾವನೆಯು ಸಂವಿಧಾನದ ಕನ್ನಡಿಯಂತೆ ಇದ್ದು, ಭಾರತದ ರಾಜಕೀಯ ಪದ್ದತಿ, ಅದರ ರಾಜಕೀಯ, ಅರ್ಥಿಕ ಹಾಗೂ ಸಾಮಾಜಿಕ ಧ್ಯೇಯಗಳನ್ನು ಮತ್ತು ಮಾನವೀಯತೆಯ ಮೌಲ್ಯಗಳನ್ನು ಪ್ರತಿಬಿಂಬಿಸಿ ಪ್ರಜೆಗಳ ನಿರೀಕ್ಷೆಯಂತಿರುತ್ತದೆ.

- **ಪಾರ್ಲಿಮೆಂಟರಿ ಪದ್ಧತಿ ಸರ್ಕಾರ:** (ಸಂಸದೀಯ ಪದ್ಧತಿ ಸರ್ಕಾರ): ಸಂಸದೀಯ ಪದ್ಧತಿಯ ಸರ್ಕಾರದಲ್ಲಿ ಪ್ರಜೆಗಳಿಂದ ಆಯ್ಕೆಯಾದ ಸಂಸತ್ತು ಪರಮಾಧಿಕಾರವನ್ನು ಹೊಂದಿರುತ್ತದೆ. ಕ್ಯಾಬಿನೆಟ್ ಸಂಸತ್ತಿನಲ್ಲಿ (ಲೋಕಸಭೆಯಲ್ಲಿ) ಬಹುಮತದ ಬೆಂಬಲ ಪಡೆದು ಇದಕ್ಕೆ ಜವಾಬ್ದಾರಿಯಾಗಿದೆ. ಸಂಸದೀಯ ಪದ್ಧತಿಯನ್ನು ರಾಜ್ಯ ಮಟ್ಟದಲ್ಲಿಯೂ ಅಳವಡಿಸಲಾಗಿದೆ.

- **ಸಂಯುಕ್ತ ಪದ್ಧತಿ (Federal System)**: ಸಂಯುಕ್ತ ಪದ್ಧತಿ ದ್ವಿಸರ್ಕಾರ ಪದ್ದತಿಯಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂವಿಧಾನದಲ್ಲಿ ಅಧಿಕಾರಗಳು ಹಂಚಿಕೆಯಾಗಿರುತ್ತವೆ.

- **ಮೂಲಭೂತ ಹಕ್ಕುಗಳು (Fundamental Rights)**: ಸಂವಿಧಾನದ ಮೂರನೇ ಭಾಗದಲ್ಲಿ ಮೂಲಭೂತ ಹಕ್ಕುಗಳನ್ನು ಅಳವಡಿಸಿ, ಪ್ರಜೆಗಳ ಸ್ವಾತಂತ್ರ್ಯಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಪ್ರಸ್ತುತ 6 ಮೂಲಭೂತ ಹಕ್ಕುಗಳು ಇದೆ.

  1. ಸಮಾನತೆಯ ಹಕ್ಕು (**Right to Equality**)
  2. ಸ್ವಾತಂತ್ರ್ಯದ ಹಕ್ಕು (**Right to Freedom)**
  3. ಶೋಷಣೆ ವಿರುದ್ಧ ಹಕ್ಕು (**Right against Exploitation**)
  4. ಧಾರ್ಮಿಕ ಸ್ವಾತಂತ್ರ್ಯ ಹಕ್ಕು (**Right to Freedom of Religion**)
  5. ಸಾಂಸ್ಕೃತಿಕ ಹಾಗೂ ವಿದ್ಯಾಭ್ಯಾಸದ ಹಕ್ಕು (**Cultural and Educational Rights**)
  6. ಸಂವಿಧಾನ ಪರಿಹಾರ ಹಕ್ಕು (**Right to Constitutional Remedies)**

- **ರಾಜ್ಯ ನಿರ್ದೇಶಕ ತತ್ವಗಳು (Directive Principles of State Policy)**: ಸಂವಿಧಾನ ನಾಲ್ಕನೇ ಭಾಗದಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ಅಳವಡಿಸಲಾಗಿತ್ತು, ಇವುಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಬುನಾದಿಯಾಗಿವೆ.

- **ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ (Independent and Integrated Judicial System):** ಭಾರತದ ಸಂವಿಧಾನ ಸ್ವಾತಂತ್ರ್ಯ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆಗೆ ಅವಕಾಶ ಕಲ್ಪಿಸಿದೆ.

- **ಏಕ ಪೌರತ್ವ (Single Citizenship)**: ಭಾರತದಲ್ಲಿ ಸಂಕುಚಿತ ಪ್ರಾಂತೀಯ ಭಾವನೆಯನ್ನು ನಿಯಂತ್ರಿಸಿ, ರಾಷ್ಟ್ರೀಯ ಭಾವನೆಯನ್ನು ಬೆಳೆಸಲು ಏಕ ಪೌರತ್ವವನ್ನು ಅಳವಡಿಸಲಾಗಿದೆ. ಪ್ರಜೆಗಳು ಯಾವುದೇ ರಾಜ್ಯದಲ್ಲಿ ಜನಿಸಿದರೂ ಅಥವಾ ವಾಸಿಸಿದರೂ ಎಲ್ಲರೂ ಭಾರತದ ಪ್ರಜೆಗಳಾಗಿದ್ದಾರೆ.

- **ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ**: ಭಾರತದ ಸಂವಿಧಾನದ ಪಿತಾಮಹರು ಸಾರ್ವತ್ರಿಕ ವಯಸ್ಕ ಮತದಾನ ಪದ್ದತಿಯನ್ನು ಬೆಂಬಲಿಸಿ, ಪ್ರಜಾಪ್ರಭುತ್ವ ಯಶಸ್ವಿ ಕಾರ್ಯಾಚರಣೆಗೆ ಅದನ್ನು ಅಳವಡಿಸಿದರು. ಸಂವಿಧಾನದ 15ನೇ ಭಾಗದಲ್ಲಿರುವ 326ನೇ ವಿಧಿಯಲ್ಲಿ ವಯಸ್ಕ ಮತದಾನ ಪದ್ದತಿಯನ್ನು ಅಳವಡಿಸಿ ಲೋಕಸಭೆಗೆ ಮತ್ತು ರಾಜ್ಯಗಳ ವಿಧಾನ ಸಭೆಗಳಿಗೆ ನಡೆಯುವ ಚುನಾವಣೆಗಳಲ್ಲಿ 18 ವರ್ಷದವರೆಲ್ಲರೂ ಮತದಾರರಾಗಲು ಅವಕಾಶವಿದೆ. ಈ ಪದ್ಧತಿಯು ಪ್ರಜೆಗಳ ಪರಮಾಧಿಕಾರದ ಸಂಕೇತವಾಗಿದೆ.

- **ಅಖಿಲ ಭಾರತ ಸೇವೆಗಳು (All India Services)**: ಭಾರತದ ಫೆಡರಲ್ ಪದ್ದತಿಯಲ್ಲಿ ಕೇಂದ್ರ ಮತ್ತು ರಾಜ್ಯಗಳಿಗೆ ಪ್ರತ್ಯೇಕ ಆಡಳಿತ ಸೇವೆಗಳಿದ್ದರೂ ಸಂವಿಧಾನದ 312ನೇ ವಿಧಿ ಅನ್ವಯ ಅಖಿಲ ಭಾರತ ಸೇವೆಗಳಿಗೆ ಅವಕಾಶ ಮಾಡಲಾಗಿದೆ.

- **ಕೆಲವು ವರ್ಗಗಳಿಗೆ ವಿಶೇಷ ನಿಯಮಗಳು:** ಸಂವಿಧಾನದ 16ನೇ ಭಾಗದಲ್ಲಿ ಪರಿಶಿಷ್ಠ ಜಾತಿ ಪರಿಶಿಷ್ಠ ಪಂಗಡಗಳಿಗೆ, ಹಿಂದುಳಿದ ವರ್ಗಗಳಿಗೆ ಕೆಲವು ವಿಶೇಷ ನಿಯಮಗಳನ್ನು 333ನೇ ವಿಧಿಯಿಂದ 342ನೇ ವಿಧಿವರೆಗೆ ಅಳವಡಿಸಲಾಗಿದೆ.

ಸಂವಿಧಾನದ ಮಹತ್ವ/ ಪ್ರಾಮುಖ್ಯತೆ

- ಸಂವಿಧಾನವು ದೇಶದ ಜನರನ್ನು ಆಳುವ ಸರಕಾರದ ಮೂಲ ರಚನೆಯನ್ನು ನಿರ್ದಿಷ್ಟಪಡಿಸುತ್ತದೆ. ಅದು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳನ್ನು ಸರಕಾರದ ಮೂರು ಮುಖ್ಯ ಅಂಗಗಳಾಗಿ ಏರ್ಪಡಿಸುತ್ತದೆ. ಸಂವಿಧಾನವು ಪ್ರತಿ ಅಂಗದ ಅಧಿಕಾರದ ವ್ಯಾಖ್ಯೆಯನ್ನು ನೀಡುವುದಲ್ಲದೆ ಅವುಗಳ ಜವಾಬ್ದಾರಿಯನ್ನೂ ಖಚಿತಗೊಳಿಸುತ್ತದೆ.

- ವಿಭಿನ್ನ ಅಂಗಗಳ ನಡುವಿನ ಸಂಬಂಧವನ್ನೂ ಜನತೆ ಹಾಗೂ ಸರಕಾರದ ನಡುವಿನ ಸಂಬಂಧವನ್ನೂ ನಿಯಂತ್ರಿಸುತ್ತದೆ. ಸಂವಿಧಾನವು ದೇಶದ ಎಲ್ಲ ಕಾನೂನುಗಳಿಗೆ ಮಾತೃ ಸ್ಥಾನವನ್ನು ಹೊಂದಿದೆ. ಸರಕಾರವು ಮಾಡುವ ಪ್ರತಿಯೊಂದು ಕಾನೂನು ಸಂವಿಧಾನಕ್ಕೆ ಅನುಗುಣವಾಗಿರಬೇಕು. ಭಾರತದ ಸಂವಿಧಾನವು ದೇಶದ ಗುರಿಗಳು – ಪ್ರಜಾಪ್ರಭುತ್ವ, ಸಮಾಜವಾದ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಸಮಗ್ರತೆ ಎಂದು ಸ್ಪಷ್ಟಪಡಿಸುತ್ತದೆ.

  ಸಂವಿಧಾನದ ವಿಧಿಗಳಲ್ಲಿ ಹೊಂದಿರುವಂತಹ ಅವಕಾಶಗಳಂತೆ ನಮ್ಮ ದೇಶವು ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮುನ್ನಡೆಯುತ್ತಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿ ಹೇಳಿರುವಂತೆ ನಡೆದುಕೊಳ್ಳುವ ರಾಜಕಾರಣ ನಮ್ಮದಾಗಬೇಕು. ಸಂವಿಧಾನವನ್ನು ಅಳವಡಿಸಿಕೊಂಡು 72 ವರ್ಷಗಳಾದರೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಯು ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದ್ದರೂ ಜನರ ನಿರೀಕ್ಷೆ ಬಹುದೊಡ್ಡದಾಗಿದೆ. ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಹೊಂದಲು ನಮ್ಮ ಸಂಸದೀಯ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಈಗಾಗಲೆ ತಿಳಿಸಿದಂತೆ ಕೇಂದ್ರದಲ್ಲಿ ಸಂಸತ್ತು ರಾಜ್ಯದಲ್ಲಿ ವಿಧಾನ ಮಂಡಲಗಳು ಪರಮಾಧಿಕಾರವನ್ನು ಹೊಂದಿದ್ದು ಅದರಲ್ಲಿರುವಂತಹ ಜನರಿಂದ ಆಯ್ಕೆಯಾದ ಜನ ಪ್ರತಿನಿಧಿಗಳು ತಮ್ಮ ಜವಾಬ್ದಾರಿಗಳನ್ನು ಅರಿತುಕೊಳ್ಳುವುದು ಬಹಳ ಮುಖ್ಯ.

- ಉತ್ತಮ ಆಡಳಿತವು ಮುಖ್ಯವಾಗಿ ಶಾಸಕಾಂಗಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದರ ಮೇಲೆ ಅವಲಂಬಿತವಾಗಿದೆ. ಅದೇ ರೀತಿ ಶಾಸಕಾಂಗವು ಆರೋಗ್ಯಕರವಾದ ಲಿಖಿತ ಮತ್ತು ಅಲಿಖಿತ ರೂಢಿಗಳು ಮತ್ತು ಸಂಪ್ರದಾಯಗಳ ಮೇಲೆ ನಿಂತಿದೆ. ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ದೇವಾಲಯದ ಅತ್ಯುನ್ನತ ಸಂಸ್ಥೆಯಾದ 'ಸಂಸತ್ತು' ನಮ್ಮ ಸಂವಿಧಾನದ ಉಪಬಂಧಗಳು, ನಿಯಮಗಳು, ರೂಢಿಗಳು, ಪದ್ಧತಿಗಳು ಹಾಗೂ ಪ್ರಕ್ರಿಯೆಗಳೊಂದಿಗೆ ಕಾರ್ಯ ನಿರ್ವಹಿಸುತ್ತದೆ.

- ವಿಧಾನ ಮಂಡಲ/ ಸಂಸತ್ತು, ವಿವಿಧ ವಿಚಾರಗಳನ್ನು ಹಾಗೂ ಸಿದ್ಧಾಂತಗಳನ್ನು ಅಭಿವ್ಯಕ್ತಿಗೊಳಿಸುವುದಕ್ಕೆ ಪ್ರಮುಖ ವೇದಿಕೆಗಳಾಗಿವೆ. ಇದೇ ಸಂಸದೀಯ ವ್ಯವಸ್ಥೆಯ ಸಾರ ಸರ್ವಸ್ವ. ಸಂಸದೀಯ ಪದ್ಧತಿಗಳ ಕಾರ್ಯ ನಿರ್ವಹಣೆಯನ್ನು ನಿಯಂತ್ರಿಸುವ ಪದ್ಧತಿಗಳು, ಕಾರ್ಯ ವಿಧಾನಗಳು ಹೇಗಿರಬೇಕೆಂದರೆ ಸಾರ್ವಜನಿಕ ಹಿತಾಸಕ್ತಿಯ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯಗಳನ್ನು ಆಲಿಸುವಂತೆ ಕೇಳುವ ಸಂಪೂರ್ಣ ಅಧಿಕಾರವನ್ನು ಪ್ರತಿಯೊಬ್ಬ ಸದಸ್ಯರಿಗೂ ಕೊಡುವಂತಾಗಿರಬೇಕು. ಆದರೆ ವಿಧಾನ ಮಂಡಲ/ಸಂಸತ್ತಿನ ಅಶಿಸ್ತು, ಗಲಾಟೆ, ಗದ್ದಲ, ಸಂಸದೀಯ ವ್ಯವಸ್ಥೆಯ ಘನತೆ–ಗೌರವವನ್ನು ಕುಗ್ಗಿಸುತ್ತದೆ. ನಮ್ಮ ನಾಗರೀಕರಿಗೆ ನಮ್ಮ ಪ್ರಮುಖ ಪ್ರಜಾಪ್ರಭುತ್ವ

ಸಂಸ್ಥೆಗಳ ಬಗ್ಗೆ ಗೌರವ ಭಾವನೆ ಮೂಡುವಂತಿರಬೇಕು. ಪ್ರಯುಕ್ತ ನಮ್ಮ ಸಂಸದೀಯ ಸಂಸ್ಥೆಗಳು ಜನರ ದೃಷ್ಟಿಯಲ್ಲಿ ಹೆಚ್ಚು ವಿಶ್ವಾಸವನ್ನು ಗಳಿಸಿಕೊಳ್ಳಬೇಕಾದರೆ ಅದು ವ್ಯವಸ್ಥಿತ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕಾದುದು ಅತ್ಯಗತ್ಯ. ಶಿಸ್ತು ಮತ್ತು ಸಭ್ಯತೆಯನ್ನು ಕಾಪಾಡಿಕೊಂಡು ಬರುವ ವಿಷಯವು ಭಾರತದಲ್ಲಿನ ಶಾಸನಾತ್ಮಕ ಸಂಸ್ಥೆಗಳ ಪೀಠಾಸೀನ ಅಧಿಕಾರಿಗಳ ವಾರ್ಷಿಕ ಸಮ್ಮೇಳನಗಳಲ್ಲಿ ಆಗಾಗ್ಗೆ ಚರ್ಚೆಗೆ ಬರುತ್ತಲೇ ಇದ್ದು ಶಾಸನ ಸಭೆಗಳಲ್ಲಿ ಶಿಸ್ತು ಮತ್ತು ಸಭ್ಯತೆಯ ವಿಷಯದ ಬಗ್ಗೆ ಚರ್ಚಿಸಲಾಗುತ್ತದೆ.

- ಭಾರತದ ಎಲ್ಲಾ ರಾಜ್ಯಗಳಲ್ಲಿ ವಿಧಾನಸಭೆ ಇರುತ್ತದೆ. ಆದರೆ ವಿಧಾನಪರಿಷತ್ತು ಎಲ್ಲಾ ರಾಜ್ಯಗಳಲ್ಲಿ ಇಲ್ಲ. ಪ್ರಸ್ತುತ ಆರು ರಾಜ್ಯಗಳಲ್ಲಿ ಮಾತ್ರ ಈ ದ್ವಿಸದನ ಪದ್ಧತಿ ಇದೆ. ಕರ್ನಾಟಕ ಮಾತ್ರ ದೇಶದಲ್ಲಿಯೇ ಮೊದಲು ವಿಧಾನ ಪರಿಷತ್ತನ್ನು ಸ್ಥಾಪಿಸಿತ್ತು. ನಮ್ಮ ವಿಧಾನ ಪರಿಷತ್ತಿನ ಇತಿಹಾಸ 1908ರಿಂದ ಶುರುವಾಗಿದೆ. ಆದುದರಿಂದ ಪರಿಷತ್ತು ಹಿರಿಯ ಮನೆ ಮತ್ತು ಹಿರಿಯರ ಮನೆ. ವಿಧಾನಸಭೆ–ವಿಧಾನ ಪರಿಷತ್ತುಗಳೆರೆಡು ಶಾಸಕಾಂಗ. ಪ್ರಜಾಪ್ರಭುತ್ವದಲ್ಲಿ ಸರ್ವಶ್ರೇಷ್ಠವಾದುದು.

- ವಿಧಾನಪರಿಷತ್ತು ಹಿರಿಯರ ಮನೆ, ಪರಿಣತ ಪಾರಂಗತರ ಮನೆ, ಮಾರ್ಗದರ್ಶಕರ ಮನೆ, ಪದವೀಧರರು, ಶಿಕ್ಷಕರು, ಸ್ಥಳೀಯ ಸಂಸ್ಥೆಗಳ ಸದಸ್ಯರು, ಶಾಸಕರು, ರಾಜ್ಯಪಾಲರಿಂದ ನಾಮಕರಣವಾದವರು ಇವರೆಲ್ಲರೂ ವಿಧಾನಸಭೆಯ ಚುನಾವಣೆ ಕ್ಷೇತ್ರಗಳಲ್ಲಿ ಮತದಾರರಿರುವಾಗ ವಿಧಾನಸಭೆಯ ಸದಸ್ಯರೆಲ್ಲರೂ ಇವರ ಪ್ರತಿನಿಧಿಗಳಿರುವಾಗ ಈ ವರ್ಗದವರಿಗೆ ಪ್ರತ್ಯೇಕ ಪ್ರತಿನಿಧಿಗಳೇಕೆ ಬೇಕೆಂದು ಪ್ರಶ್ನಿಸುವವರು ಇದ್ದಾರೆ. ಹಾಗೂ ಇತ್ಯಾದಿ ಕಾರಣಗಳಿಗಾಗಿ ವಿಧಾನಸಭೆಯು ವಿಧಾನಪರಿಷತ್ತನ್ನು ರದ್ದುಮಾಡಿದ ಉದಾಹರಣೆ ಕೂಡ ಈ ರಾಷ್ಟ್ರದಲ್ಲಿವೆ. ರೈತವರ್ಗ, ಪ್ರಾಥಮಿಕ ಶಿಕ್ಷಕರ ವರ್ಗ, ನ್ಯಾಯವಾದಿಗಳ ವರ್ಗ, ವೈದ್ಯರ ವರ್ಗ, ಎಂಜಿನಿಯರ್ ವರ್ಗ, ಇವರೆಲ್ಲರ ಪ್ರತಿನಿಧಿಗಳಿಗೂ ವಿಧಾನಪರಿಷತ್ತಿನಲ್ಲಿ ಪ್ರತಿನಿಧಿ ಸ್ಥಾನ ಬೇಕೆಂಬುವರೂ ಇದ್ದಾರೆ. ಏನೇ ಇರಲಿ ಇದ್ದ ವಿಧಾನಪರಿಷತ್ತುಗಳು ಈ ರಾಷ್ಟ್ರದಲ್ಲಿ ಹಿರಿಯರ ಮನೆಯಾಗಿ ವಿಧಾನಸಭೆಗೆ ಹಾಗೂ ರಾಜ್ಯಕ್ಕೆ ಮಾದರಿಯಾಗಿರಬೇಕು.

- ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸಕಾಂಗ ಸರ್ವಶ್ರೇಷ್ಠ ಸಾರ್ವಭೌಮ ಸರ್ವೋತ್ತಮ ಅಧಿಕಾರವುಳ್ಳ ಸಂವಿಧಾನಬದ್ಧವಾದುದು. ರಾಜ್ಯದ ಆಗುಹೋಗುಗಳನ್ನು ಗಮನಿಸುವುದು ರಾಜ್ಯದ ಜನತೆಯ ಉಜ್ವಲ ಭವಿಷ್ಯವನ್ನು ನಿರ್ಮಿಸುವುದು ಇತ್ಯಾದಿ ಸರ್ವೋದ್ದೇಶ ಶಾಸಕಾಂಗದ್ದು. ಶಾಸಕಾಂಗ ವಿಧಾನಸಭೆಯ ಪಕ್ಷಬೇಧ ಮರೆತ ಎಲ್ಲಾ ಶಾಸಕರಿಂದ ಚುನಾಯಿತರಾದ ವಿಧಾನಸಭಾಧ್ಯಕ್ಷರು ಸದನದ ಮುಖ್ಯಸ್ಥರು. ಶಾಸಕಾಂಗಕ್ಕೆ ಕಾರ್ಯಾಂಗವೇ ಅಧೀನ ಹೊರತು ಕಾರ್ಯಾಂಗಕ್ಕೆ ಶಾಸಕಾಂಗ ಅಧೀನವಲ್ಲ.

- ಶಾಸಕರು ರಾಜ್ಯದ ಸಾರ್ವಭೌಮ ಜನ ಪ್ರಜಾಪ್ರಭುಗಳ ದೃಷ್ಟಿಯಲ್ಲಿ ಮಾದರಿಯಾಗಿರಬೇಕು, ಮಾರ್ಗದರ್ಶಕರಾಗಿರಬೇಕು. ಅವರ ಕಾರ್ಯವೈಖರಿ ಪ್ರಾಮಾಣಿಕವಾಗಿರಬೇಕು. ಜಾತೀಯತೆ, ಸ್ವಾರ್ಥ, ಸಮಾಜ ಘಾತುಕತನ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ರಾಗ–ದ್ವೇಷ ಇತ್ಯಾದಿ ಪ್ರಜಾತಂತ್ರ ವಿರೋಧಿ ನಿಲುವುಗಳು ಇರಲೇಬಾರದು.

- ರಾಜ್ಯದ ಪ್ರಗತಿಯ ಸಾಧನೆಗಾಗಿ ಈ ರಾಜ್ಯದ ಜನತೆಯ ಚುನಾಯಿತ ಪ್ರತಿನಿಧಿಗಳಾದ ನಾವು ಪ್ರತಿವರ್ಷ ಬಜೆಟ್ ಅಧಿವೇಶನ, ವಿಶೇಷ ಅಧಿವೇಶನ, ಚಳಿಗಾಲದ ಅಧಿವೇಶನ, ಮಳೆಗಾಲದ ಅಧಿವೇಶನ ಮೊದಲಾದ ಅನೇಕ ಅಧಿವೇಶನಗಳಲ್ಲಿ ಸೇರಿ ಉಪಯುಕ್ತವಾದ ನಿಲುವಳಿ ಸೂಚನೆ,

ಸಾರ್ವಜನಿಕ ಮಹತ್ವದ ಜರೂರು ವಿಷಯ, ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಸರ್ಕಾರದ ಗಮನಸೆಳೆಯುವುದಕ್ಕೆ ಶಾಸಕರ ಪಾತ್ರ ಈ ಕೆಳಕಂಡ ಮೂರು ಹಂತದಲ್ಲಿರುತ್ತವೆ.

ಮತದಾರ ಪರ ಶಾಸಕರ ಜವಾಬ್ದಾರಿ:

1. ಕ್ಷೇತ್ರದ ಜನತೆಯ ಆಕಾಂಕ್ಷೆಗಳನ್ನು ಈಡೇರಿಸುವುದು.
2. ಸರ್ಕಾರದ ಎಲ್ಲಾ ಕಲ್ಯಾಣ ಯೋಜನೆಗಳು ಅಗತ್ಯವಿರುವವರಿಗೆ ತಲುಪಿಸುವುದು.
3. ಮತದಾರರ ಸೇವೆ ಮಾಡುವ ಮೂಲಕ ಕ್ಷೇತ್ರವನ್ನು ಪೋಷಿಸುವುದು.
4. ಕ್ಷೇತ್ರದಲ್ಲಿನ ಜನರ ಸಮಸ್ಯೆಗಳನ್ನು ನಿಯತಕಾಲಿಕವಾಗಿ ಭೇಟಿ ಮಾಡುವುದು ಮತ್ತು ಪರಿಹರಿಸುವುದು
5. ರಾಜಕೀಯ ಪಕ್ಷವನ್ನು ಲೆಕ್ಕಿಸದೆ ಸ್ಥಳೀಯ ಕೌನ್ಸಿಲರ್‌ಗಳೊಂದಿಗೆ ಸಮನ್ವಯ ಸಾಧಿಸುವುದು ಮತ್ತು ಮತದಾರರಿಗೆ ಸೇವೆಯನ್ನು ಮಾಡುವುದು.
6. ಶಾಸಕರು ತಮ್ಮ ಚಟುವಟಿಕೆಗಳ ಅತಿಕ್ರಮಣವನ್ನು ತಪ್ಪಿಸುವ ಸಲುವಾಗಿ ಸಂಸದರು, ಮುನ್ಸಿಪಲ್ ಕೌನ್ಸಿಲರ್, ಪಂಚಾಯತ್ ಸದಸ್ಯರುಗಳೊಂದಿಗೆ ಸಮನ್ವಯವನ್ನು ಹೊಂದಿರುವುದು.

ಶಾಸಕಾಂಗದ ಪರ ಶಾಸಕರ ಜವಾಬ್ದಾರಿ:

1. ಭಾರತದ ಸಂವಿಧಾನವನ್ನು ಎತ್ತಿಹಿಡಿಯುವುದು.
2. ಸದನದ ಸಭ್ಯತೆ, ಘನತೆ ಮತ್ತು ಅಲಂಕಾರವನ್ನು ಕಾಪಾಡಿಕೊಳ್ಳುವುದು
3. ಬಹಿಷ್ಕಾರ/ಧರಣಿ/ಸದನದ ಬಾವಿಗೆ ಪ್ರವೇಶಿಸುವುದನ್ನು/ ಸದನದ ಕಲಾಪಗಳಿಗೆ ಅಡ್ಡಿಪಡಿಸುವುದನ್ನು ತಪ್ಪಿಸುವುದು.
4. ರಚನಾತ್ಮಕವಾಗಿ ಟೀಕಿಸುವುದು ಮತ್ತು ಸಮಸ್ಯೆಗೆ ಶಾಶ್ವತ ಪರಿಹಾರಗಳನ್ನು ನೀಡುವುದು.
5. ಸದನದ ಕಾರ್ಯವಿಧಾನದ ಮತ್ತು ನಡವಳಿಕೆಗಳ ನಿಯಮಾವಳಿಗಳನ್ನು ಪಾಲಿಸುವುದು.
6. ಎಲ್ಲಾ ಚರ್ಚೆಗಳು ಮತ್ತು ಸದನದ ಕಲಾಪಗಳಲ್ಲಿ ಭಾಗವಹಿಸುವುದು.
7. ವಿಷಯಾದಾರಿತ ವಾದಗಳನ್ನು ಅಭ್ಯಾಸ ಮಾಡುವುದು ಮತ್ತು ಸದನದ ಒಳಗೆ ಹಾಗೂ ಹೊರಗೆ ವ್ಯಕ್ತಿ ಆಧಾರಿತ ವಾದಗಳಲ್ಲಿ ಪಾಲ್ಗೊಳ್ಳದಿರುವುದು.
8. ಜನರ ಕಲ್ಯಾಣದಲ್ಲಿ ಪಕ್ಷಾತೀತವಾಗಿ ಸಾಧಿಸುವುದು.
9. ಸೂಕ್ತ ಸಿದ್ಧತೆಯೊಂದಿಗೆ ಶಾಸಕಾಂಗ ಅಧಿವೇಶನಗಳಲ್ಲಿ ಭಾಗವಹಿಸುವುದು.
10. ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಸಕ್ರಿಯವಾಗಿ ಭಾಗವಹಿಸುವುದು.
11. ಸಾರ್ವಜನಿಕ ಪ್ರಾಮುಖ್ಯತೆಯ ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಿ ಪಕ್ಷ ಹಾಗೂ ಸಾರ್ವಜನಿಕ ಕಲ್ಯಾಣದ ನಡುವೆ ಸಮತೋಲನವನ್ನು ಸಾಧಿಸುವುದು.
12. ಸಭಾಧ್ಯಕ್ಷರು/ಸಭಾಪತಿಗಳ ನಿರ್ಣಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ರಾಜಕೀಯ ಪಕ್ಷದ ಪರ ಶಾಸಕರ ಜವಾಬ್ದಾರಿ:

1. ಪಕ್ಷದ ಶಿಸ್ತು/ವಿಪ್ ಅನ್ನು ಅನುಸರಿಸಲು ಮತ್ತು ಅವರ ಕ್ಷೇತ್ರದಲ್ಲಿ ತಮ್ಮ ಪಕ್ಷದ ಘಟಕವನ್ನು ಬಲಪಡಿಸಲು ಕೊಡುಗೆ ನೀಡುವುದು.
2. ತಮ್ಮ ಕ್ಷೇತ್ರದಲ್ಲಿ ತಮ್ಮ ಪಕ್ಷದ ಕಾರ್ಯಕರ್ತರು ಮಾಡಿದ ಪ್ರಯತ್ನಗಳು ಮತ್ತು ಸಾಧನೆಗಳು/ಕೊಡುಗೆಗಳನ್ನು ಗುರುತಿಸಿ ಗೌರವಿಸುವುದು.
3. ಯಾವುದೇ ರೀತಿಯ ತಾರತಮ್ಯವಿಲ್ಲದೆ ಕ್ಷೇತ್ರದ ಮತ್ತು ಕ್ಷೇತ್ರದ ಜನರ ಕಲ್ಯಾಣದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು.
4. ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸಲು ಹೊಸ ಯೋಜನೆಗಳನ್ನು ಸೂಚಿಸುವುದು.
5. ತಮ್ಮ ಪಕ್ಷದ ಪ್ರಣಾಳಿಕೆಯ ಆಶ್ವಾಸನೆಗಳನ್ನು ಶಾಸಕಾಂಗ ಸಭೆ/ಸದನದಲ್ಲಿ ಅವುಗಳ ಅನುಷ್ಠಾನಕ್ಕಾಗಿ (ಪಕ್ಷವು ಅಧಿಕಾರದಲ್ಲಿಲ್ಲದಿದ್ದರೂ) ಖಚಿತಪಡಿಸಿಕೊಳ್ಳುವುದು.

- ಆಡಳಿತ ಹಾಗೂ ಅಭಿವೃದ್ಧಿಯಲ್ಲಿ 29000 ಗ್ರಾಮಗಳಿಂದ ಹಿಡಿದು ರಾಜ್ಯದ ರಾಜಧಾನಿ ಬೆಂಗಳೂರವರೆಗೆ ಯಾವುದೇ ಹಂತ ಅಥವಾ ಮಟ್ಟದಲ್ಲಿ ಯಾವುದೇ ತರಹದ ಹಗರಣಗಳು ನಡೆಯದಂತೆ ಶಾಸಕರೆಲ್ಲರೂ ಜಾಗ್ರತೆ ಹಾಗೂ ಜವಾಬ್ದಾರಿಯನ್ನು ರಾಜ್ಯದ ಆರು ವರೆ ಕೋಟಿ ಜನತೆಯ ಪರವಾಗಿ ವಹಿಸಬೇಕಾಗುತ್ತದೆ. ಈ ದಿಶೆಯಲ್ಲಿ ಶಾಸಕರು ಅಗತ್ಯವಾದ ಹಾಗೂ ಅವಶ್ಯ ಮಾಹಿತಿ ಪಡೆದು ಸರ್ಕಾರಕ್ಕೆ ಪ್ರಶ್ನೆ, ಸೂಕ್ತ ಸಲಹೆ, ವಿಮರ್ಶೆ ಹಾಗೂ ಮಾರ್ಗದರ್ಶನ ಮಾಡುವುದು ಅತ್ಯವಶ್ಯ.

ಸುಧಾರಣಾ ಕ್ರಮಗಳು:–

- ಶಾಸಕರಿಗೆ ಪೂರಕವಾಗಲು ರಾಜ್ಯದ ಸುದ್ದಿಮಾಧ್ಯಮಗಳು ಅನೇಕ ವಿಷಯ, ಪ್ರಕರಣ ಹಾಗೂ ಹಗರಣಗಳನ್ನು ಆಗಾಗ್ಗೆ ಬೆಳಕಿಗೆ ತರುತ್ತಲೇ ಇವೆ. ಇವುಗಳ ಬಗ್ಗೆ ಶಾಸಕರು ಗಮನಹರಿಸುವುದು ಮುಖ್ಯ.
- ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ಪ್ರಕಾರ ಇರುವ ಎಲ್ಲಾ ಹಕ್ಕುಬಾಧ್ಯತೆಗಳನ್ನು ಗಣನೀಯ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಂಡು ಎಲ್ಲಾ ಶಾಸಕರು ಕಾರ್ಯನಿರ್ವಹಿಸಿದರೆ ಕರ್ನಾಟಕ ವಿಧಾನಸಭೆ, ವಿಧಾನ ಪರಿಷತ್ತು, ಕರ್ನಾಟಕದ ಆಡಳಿತ, ಅಭಿವೃದ್ಧಿ ಹೊಂದುತ್ತದೆ. ಇದು ರಾಷ್ಟ್ರಕ್ಕೆ ಆದರ್ಶ ಹಾಗೂ ಮಾದರಿಯಾಗಬಹುದು.
- ಕರ್ನಾಟಕ ವಿಧಾನಮಂಡಲದ ಕಾರ್ಯಕಲಾಪ, ಶಾಸಕರ ನಡವಳಿಕೆ ಇತ್ತೀಚೆಗೆ ಗೊಂದಲದ ಗೂಡಾಗಿದೆ. ಕಾಲಹರಣದೊಂದಿಗೆ ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ. ಸದನದ ಕಲಾಪಗಳು ಸದುಪಯೋಗವಾಗುವಂತಹ ಕಾರ್ಯಕ್ಕೆ ನಾವುಗಳೆಲ್ಲ ಅಣಿಯಾಗಬೇಕು.
- ಬಹುತೇಕ ಶಾಸಕರು ತಮಗೆ ಮತ ನೀಡಿದ ಜನರಿಗೆ ಮಾತ್ರ ಸ್ಪಂದಿಸುತ್ತಾರೆ ಎನ್ನುವ ಕೂಗು ಇದೆ. ಇದು ಆಗಬಾರದು. ಒಂದು ಕ್ಷೇತ್ರದ ಶಾಸಕ ಇಡೀ ಕ್ಷೇತ್ರದ ಪ್ರತಿನಿಧಿಯಾಗಿರುವುದರಿಂದ ಎಲ್ಲರಿಗೂ ಸ್ಪಂದಿಸಬೇಕು.
- ಅಧಿವೇಶನಗಳಲ್ಲಿ ಸಮರ್ಪಕ ಚರ್ಚೆಯಾಗದೆ ನಿರರ್ಥಕ ವಾಗ್ವಾದಗಳು ನಡೆಯುತ್ತವೆ. ಶಾಸಕರು ಘನತೆಗೆ ತಕ್ಕಂತೆ ವರ್ತಿಸುತ್ತಿಲ್ಲ. ಸಭಾಧ್ಯಕ್ಷರ/ಸಭಾಪತಿಗಳ ಮೇಲೆ ದಾಳಿ ಪ್ರಯತ್ನ ನಡೆಯುತ್ತವೆ. ಕೆಲವು ಶಾಸಕರು ಅನುಚಿತವಾಗಿ ವರ್ತಿಸುತ್ತಿದ್ದಾರೆ. ಅಮೂಲ್ಯವಾದ ಕಾಲ ಹರಣವಾಗುತ್ತದೆ. ರಾಜ್ಯ

ಹಾಗೂ ರಾಜ್ಯದ ಜನತೆಯ ಅಭಿವೃದ್ಧಿ ಆಡಳಿತ ಬಗ್ಗೆ ಚಿಂತೆಯೇ ಇಲ್ಲ. ಶಾಸಕರು ಶೋಷಕರಾಗುತ್ತಿದ್ದಾರೆ. ಶಾಸಕರ ನಡವಳಿಕೆ ತೃಪ್ತಿಕರವಲ್ಲವೆಂಬ ಇತ್ಯಾದಿ ಅನೇಕ ಟೀಕೆಗಳು, ಅಭಿಪ್ರಾಯಗಳು ರಾಜ್ಯದ ಗಣ್ಯರು, ಧರ್ಮಗುರುಗಳು ಹಾಗೂ ಮಾಧ್ಯಮಗಳು ಸಹ ಸಂಪಾದಕೀಯಗಳ ಮುಖಾಂತರ ಕೇಳಿ ಬರುತ್ತಿರುವುದು ದುರ್ದೈವ. ಈ ಟೀಕೆಗಳು ಬಾರದಂತೆ ಜನಪ್ರತಿನಿಧಿಗಳು ವರ್ತಿಸಬೇಕಾಗಿದೆ. ನಮ್ಮ ಮೇಲೆ ಎಲ್ಲರ ಕಣ್ಣು ನೆಟ್ಟಿರುತ್ತದೆ ಎನ್ನುವುದನ್ನು ಮೈಯೆಲ್ಲಾ ಕಣ್ಣಾಗಿ ಗಮನಿಸಬೇಕು.

- ನಮ್ಮ ರಾಜ್ಯದ ಜನತೆಯ ಆಗುಹೋಗು, ಉಜ್ವಲ ಭವಿಷ್ಯದ ಬಗ್ಗೆ ಶಾಸನಗಳ ರಚನೆ, ಯೋಜನೆಗಳ ಜಾರಿ ನಮ್ಮ ಜವಾಬ್ದಾರಿ. ರಾಮರಾಜ್ಯ ನಿರ್ಮಾಣದ ಕನಸು ರಾಜ್ಯದ ವಿಧಾನ ಮಂಡಲದ ಸದಸ್ಯರ ಕೈಯಲ್ಲಿರುವುದರಿಂದ ಈ ಕುರಿತು ಶಾಸಕರು ಕಾರ್ಯತತ್ಪರರಾಗಬೇಕು.

- ಜನತೆಯಿಂದ ವಿವಿಧ ಮೂಲಗಳಿಂದ ಬಂದ ತೆರಿಗೆಯ ಹಣವನ್ನು ಜನತೆಯ ಸಲುವಾಗಿ ವಿವಿಧ ಆಡಳಿತ ಹಾಗೂ ಅಭಿವೃದ್ಧಿಗಾಗಿ ಆಯವ್ಯಯಗಳಲ್ಲಿ ನಿಗದಿಪಡಿಸಿದಂತೆ ವೆಚ್ಚ ಮಾಡಬೇಕಾಗುತ್ತದೆ. ಚುನಾಯಿತ ಪ್ರತಿನಿಧಿಗಳು ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ತಮ್ಮ ಅಧಿಕಾರದ ಅವಧಿಯಲ್ಲಿ ನಡೆದುಕೊಳ್ಳಲೇಬೇಕಾಗುತ್ತದೆ. ಎಲ್ಲಾ ಹಂತದ ಪ್ರಜಾಪ್ರತಿನಿಧಿಗಳು ಭಾರತ ದೇಶದಲ್ಲಿ ಸಂವಿಧಾನಬದ್ಧವಾಗಿ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿ ಅಧಿಕಾರಕ್ಕೆ ಬರುತ್ತಾರೆಂಬುದನ್ನು ಹಾಗೂ ದೇವರಿಗಿಂತ ದೊಡ್ಡವರು ಈ ಜಗತ್ತಿನಲ್ಲಿ ಯಾರೂ ಇಲ್ಲವೆಂಬುದನ್ನೂ ಅರಿತು ದೇವರ ಹೆಸರಿನಲ್ಲಿ **'ಸರ್ಕಾರದ ಕೆಲಸ, ದೇವರ ಕೆಲಸ–ದೇವರ ಕೆಲಸ ಸರ್ಕಾರದ ಕೆಲಸ'** ಎಂದು ಪ್ರಾಮಾಣಿಕವಾಗಿ, ಉತ್ತಮ ಆಡಳಿತ ಹಾಗೂ ಉತ್ತಮ ಅಭಿವೃದ್ಧಿ ಸಾಧಿಸುವ ಕೆಲಸ ಮಾಡಬೇಕಾಗಿದೆ. ನಮ್ಮ ನಡವಳಿಕೆಯನ್ನೇ ಮುಂದಿನ ಜನಾಂಗ ಅನುಸರಿಸುತ್ತದೆ ಎಂಬ ಎಚ್ಚರ ಮತ್ತು ಜಾಗೃತಿ ನಮಗಿರಬೇಕಾಗಿದೆ. ಹೀಗಾಗಿ ನಮ್ಮ ಸದನಗಳಲ್ಲಿ ಶಾಸಕರ ನಡವಳಿಕೆ ಅನುಕರಣೀಯವಾಗಬೇಕಾಗುತ್ತದೆ.

- ನಮ್ಮ ರಾಷ್ಟ್ರದಲ್ಲಿಯ ರಾಜ್ಯಗಳ ಶಾಸಕಾಂಗಕ್ಕೆ ರಾಜ್ಯಪಾಲರು ಸಂವಿಧಾನಬದ್ಧ ಮುಖ್ಯಸ್ಥರು. ಶಾಸಕಾಂಗದಿಂದ ಮಂಜೂರಾದ ಎಲ್ಲಾ ಮಸೂದೆಗಳಿಗೂ ಅವರೇ ಒಪ್ಪಿಗೆ ಕೊಟ್ಟು ಅಧಿನಿಯಮಗಳನ್ನಾಗಿ ಮಾಡಬೇಕಾಗುತ್ತದೆ. ಅವರಿಗೆ ಶಾಸನಬದ್ಧವಾದ ಇನ್ನೂ ಅನೇಕ ಅಧಿಕಾರಗಳಿರುತ್ತವೆ.

- ಪ್ರತಿವರ್ಷ ವರ್ಷದ ಆರಂಭದಲ್ಲಿ ಹಾಗೂ ಬಜೆಟ್ ಅಧಿವೇಶನದ ಪೂರ್ವದಲ್ಲಿ ರಾಜ್ಯಗಳ ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಜಂಟಿ ಅಧಿವೇಶನದಲ್ಲಿ ಸಭಾಧ್ಯಕ್ಷ ಹಾಗೂ ಸಭಾಪತಿಯವರ ಸಮ್ಮುಖದಲ್ಲಿ ಸದಸ್ಯರನ್ನುದ್ದೇಶಿಸಿ ಸರ್ಕಾರದ ಪರವಾಗಿ ರಾಜ್ಯಪಾಲರು ಭಾಷಣ ಮಾಡಿ ಸರ್ಕಾರ ಆಗಲೇ ಮಾಡಿದ ಕಾರ್ಯಗಳನ್ನು ಹಾಗೂ ಮುಂದೆ ಮಾಡಬೇಕಾದ ಕಾರ್ಯಗಳನ್ನು ಹೇಳಬೇಕಾಗುತ್ತದೆ. ಇದು ಎಲ್ಲಾ ರಾಜ್ಯಗಳಲ್ಲಿರುವ ಸಂವಿಧಾನಬದ್ಧ ಸತ್ಸಂಪ್ರದಾಯ. ಆದರೆ ಇತ್ತೀಚಿಗೆ ಈ ಸಂಪ್ರದಾಯಕ್ಕೆ ವಿರುದ್ಧವಾಗಿ ಕೆಲವು ರಾಜ್ಯಗಳಲ್ಲಿ ರಾಜ್ಯಪಾಲರೆಂದರೇನು? ಅವರ ಸಂವಿಧಾನಬದ್ಧ ಸ್ಥಾನಮಾನವೇನು? ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಬೇಕಾದ ಭಾಷಣವೇನು? ಆ ಭಾಷಣದ ಬಗ್ಗೆ ಚರ್ಚೆ ಯಾಕೆ ಮಾಡಬೇಕು? ಜನರ ನಿರೀಕ್ಷೆಯಂತೆ ರಾಜ್ಯಪಾಲರ ಭಾಷಣ ಇದೆಯೇ? ಎಂದು ತಿಳಿಯದೆ ಜಂಟಿ ಅಧಿವೇಶನದ ಸದನದಲ್ಲಿ ವ್ಯತಿರಿಕ್ತವಾಗಿ ನಡೆದುಕೊಳ್ಳುವುದು ಹಾಗೂ ಸದನದ ಸದಸ್ಯರ, ರಾಜ್ಯಪಾಲರ, ಸಭಾಧ್ಯಕ್ಷರ ಹಾಗೂ ಸಭಾಪತಿಗಳ ಗೌರವಕ್ಕೆ ಧಕ್ಕೆ ಮಾಡುತ್ತಿರುವುದು ದುರ್ದೈವ. ಇದಕ್ಕೆ ಹೊಣೆ ಅವರು ಪಡೆದ ಶಿಕ್ಷಣವೋ ಅಥವಾ ಅವರು ಬೆಳೆದು ಬಂದ ಪರಿಸರದ ಪ್ರತಿಫಲವೋ ಯಾರು ಹೇಳಬೇಕು?

ಅಥವಾ ರಾಜಕೀಯವೋ ತಿಳಿಯದು. ಇಂದಿನ ತರಬೇತಿಯು ಈ ಕುರಿತು ಚರ್ಚಿಸಿ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಚರ್ಚೆಗೆ ಹೆಚ್ಚು ಅವಕಾಶ ನೀಡುವಂತಾಗಲಿ ಎಂದು ಆಶಿಸುತ್ತೇನೆ.

- ರಾಜ್ಯಪಾಲರ ಭಾಷಣವನ್ನು ಸದಸ್ಯನಾಗಿ ಕೇಳಿ ಅವರ ಹಾಗೂ ಅವರ ಸರ್ಕಾರದಲ್ಲಿ ನಡೆದ ಘಟನೆ ಹಾಗೂ ಮುಂದಿನ ಆಗುಹೋಗು, ಧ್ಯೇಯಧೋರಣೆಯನ್ನು ತಿಳಿದುಕೊಳ್ಳದೆ ಸಾರ್ವಜನಿಕರ, ಪ್ರಜಾಪ್ರತಿನಿಧಿ ಕರ್ತವ್ಯದ ಲೋಪವನ್ನೇ ಅಥವಾ ಹಗರಣವನ್ನೇ ಮಾಡುತ್ತಿರುವ ಅಹಿತಕರ, ಅನಾಗರಿಕ, ಅನಾವಶ್ಯಕ ಸಂವಿಧಾನ ವಿರೋಧಿ ನೀತಿ ನಿಯಮಬಾಹಿರವಾದ ಅಕ್ರಮಗಳನ್ನೇ ಅನುಸರಿಸುವುದಾದರೆ ಪ್ರಜಾಪ್ರಭುತ್ವ ನಮಗೇಕೆಬೇಕೆಂದು ಪ್ರಶ್ನಿಸಬೇಕಾಗುತ್ತದೆ. ರಾಜ್ಯಗಳಲ್ಲಿ ಲಕ್ಷಾಂತರ ಸ್ಥಳೀಯ ಸರ್ಕಾರಗಳ ಸದಸ್ಯರು ಸಹ ದೇಶಾದ್ಯಂತ ತಾವು ಭಾಗವಹಿಸುವ ಸಭೆಗಳಲ್ಲಿ ಸಹ ವಿಧಾನಸಭೆ, ವಿಧಾನಪರಿಷತ್ತು ಅಥವಾ ಜಂಟಿ ಸಭೆಗಳಲ್ಲಿ ನಡೆದ ಗೊಂದಲಗಳಂತೆ ಅವರುಗಳಿಗೆ ನಾವು ಕಾರಣರಾಗಬಾರದು. ಈ ಬದಲಾವಣೆಯನ್ನು ಈ ತರಬೇತಿಯ ಕಾರ್ಯಕ್ರಮ ನೀಡಲಿ ಎಂದು ಬಯಸುತ್ತೇನೆ.

- ಇತ್ತಿಚೆಗೆ ಚುನಾವಣೆಗಳಲ್ಲಿ ಸುಧಾರಣೆ ತರಬೇಕಾದ ಅಗತ್ಯವನ್ನು ಎಲ್ಲಾ ಶಾಸಕ ಮಿತ್ರರು, ಸಂಸದರು, ಸಮಾಜ ಸುಧಾರಕರು, ಮಾಧ್ಯಮದವರು ಹಾಗೂ ಜನತೆ ಎತ್ತಿ ಹೇಳುತ್ತಿದ್ದಾರೆ. ಈ ಕುರಿತು ಚಿಂತನೆಯನ್ನು ಆರಂಭಿಸಿದ್ದೇವೆ. ತಾವುಗಳೆಲ್ಲ ಆಸಕ್ತಿ ವಹಿಸಿ ಈ ಕುರಿತು ತಮ್ಮ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಚುನಾವಣೆಗಳ ಬಗ್ಗೆ ಸುಧಾರಣೆ ತರುವ ಕುರಿತು ಚರ್ಚೆ ಮಾಡಿರಿ ಮತ್ತು ಸುಧಾರಣೆಯ ಮಾರ್ಗದಲ್ಲಿ ಸಾಗುವಂತೆ ಮಾಡಿರಿ ಎಂದು ವಿನಂತಿಸುತ್ತೇನೆ. ನಮ್ಮ ಮುಂದಿನ ಚುನಾವಣೆ ಸುಧಾರಣೆಯ ಮಾರ್ಗದಲ್ಲಿರಲಿ; ನಿರ್ಭೀಡೆಯಿಂದ ಮತ ಚಲಾಯಿಸುವಂತಹ ವಾತಾವರಣ ಸೃಷ್ಟಿಸಲಿ. ಜಾತೀಯತೆ, ತೋಳ್ಬಲ ಮತ್ತು ಹಣ ಬಲದ ಸೋಂಕಿನಿಂದ ದೂರ ಇರಲಿ ಎಂದು ಆಶಿಸುತ್ತೇನೆ.

- ಸಂವಿಧಾನದ ಆಶಯಗಳಾದ ಸದಸ್ಯರ ಸ್ವಾತಂತ್ರ್ಯ, ಪ್ರಜೆಗಳ ಸ್ವಾತಂತ್ರ್ಯ ಹರಣವಾಗದಂತೆ ನಾವು ಕಾರ್ಯನಿರ್ವಹಿಸಬೇಕು. ಪ್ರಜೆಗಳಲ್ಲಿ ಸಮಾನತೆ ಕಾಣುವುದು ಮತ್ತು ಅದನ್ನು ಅನುಷ್ಠಾನಕ್ಕೆ ತರುವುದು ನಮ್ಮ ಧರ್ಮವಾಗಬೇಕು. ಪ್ರಜೆಗಳಿಗೆ ನ್ಯಾಯ ಒದಗಿಸುವುದು ನಮ್ಮ ನೀತಿಯಾಗಬೇಕು. ಇದುವೇ ಸಂವಿಧಾನದ ನಿರ್ಮಾತೃಗಳ ಆಶಯ, ಜನತೆಯ ನಿರೀಕ್ಷೆ ಮತ್ತು ಶಾಸಕರ ಕರ್ತವ್ಯ.

- ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಪಾರದರ್ಶಕವಾಗಿ ಅತ್ಯುತ್ತಮ ವ್ಯವಸ್ಥೆಯನ್ನು ಹೊಂದಬೇಕೆಂದು ಹಾಗೂ ನಮ್ಮ ಚುನಾವಣಾ ಪ್ರಕ್ರಿಯೆಯು ನ್ಯಾಯಯುತ ನಿರ್ಭೀತವಾಗಿ ಮುಕ್ತವಾಗಿರುವ ರಾಷ್ಟ್ರವನ್ನು ನಿರ್ಮಿಸುವ ಅಗತ್ಯತೆ ಇದೆ ಎಂಬ ನಿಟ್ಟಿನಲ್ಲಿ ನಾನು 1. ನಮ್ಮ ಸಂವಿಧಾನ ನಮ್ಮ ಹೆಮ್ಮೆ, 2. ಸಂಸದೀಯ ಮೌಲ್ಯಗಳ ಕುಸಿತವನ್ನು ತಡೆಗಟ್ಟುವ ನಿಟ್ಟಿನಲ್ಲಿ ಒಂದು ಆತ್ಮಾವಲೋಕನ, 3. ಒಂದು ರಾಷ್ಟ್ರ – ಒಂದು ಚುನಾವಣೆ, 4. ಪ್ರಜಾಪ್ರಭುತ್ವ: ಸಂಸದೀಯ ಮೌಲ್ಯಗಳ ರಕ್ಷಣೆ ಬಗ್ಗೆ ಚರ್ಚೆಗಳನ್ನು ಏರ್ಪಡಿಸಿದ್ದೆನು. ಅಲ್ಲದೆ ಇತ್ತಿಚೆಗೆ 'ಪ್ರಜಾಪ್ರಭುತ್ವದ ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ' ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಸುಧಾರಣೆಗೆ ಸಲಹೆಗಳನ್ನು ಆಹ್ವಾನಿಸಿರುವುದು ತಮ್ಮ ಗಮನಕ್ಕೆ ಬಂದಿರಬಹುದು. ಈ ಸಂದರ್ಭದಲ್ಲಿ ಸುಧಾರಣೆಗಳನ್ನು ತರುವಲ್ಲಿ ಕೆಳಕಂಡ ನನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಮಂಡಿಸಿರುವ ಬಗ್ಗೆ ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರಬಯಸುತ್ತೇನೆ.

    1. ಭಾರತದ ಚುನಾವಣೆಗಳಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ 1951ರ ಪ್ರಜಾಪ್ರತಿನಿಧಿ ಕಾಯ್ದೆಯನ್ನು ತಿದ್ದುಪಡಿ ಮಾಡುವುದು.

2. ಸಂವಿಧಾನದ ಶಾಸನ ಸಭೆಗಳ ಕಲಾಪಗಳಿಗೆ ಸಂಬಂಧಿಸಿದ ಅನುಚ್ಛೇದಗಳ ತಿದ್ದುಪಡಿ ಮಾಡುವುದು.

3. ಶಾಸನ ಸಭೆಯ ಅಧಿವೇಶನದ ಕಾಲಾವಧಿಯನ್ನು ಹೆಚ್ಚುಗೊಳಿಸುವುದು.

4. ಈಗಿರುವ 3 ಅಧಿವೇಶನದ ಪದ್ದತಿಯನ್ನು 4 ಅಧಿವೇಶನಗಳಾಗಿ ಮಾರ್ಪಡಿಸುವುದು.

5. ಸದನದ ಕಾರ್ಯಕಲಾಪವನ್ನು ಬಹಿಷ್ಕರಿಸುವ ಹಾಗೂ ಮೊಟಕುಗೊಳಿಸುವ ಸದಸ್ಯರ ವಿರುದ್ಧ ತಕ್ಷಣವೇ ಕಠಿಣ ಕ್ರಮವನ್ನು ಜರುಗಿಸುವುದು (ಅಮಾನತ್ತುಗೊಳಿಸುವುದು, ಭತ್ಯೆಗಳನ್ನು ಕಡಿತಗೊಳಿಸುವುದು ಇತ್ಯಾದಿ).

6. ಕಾರ್ಯಕಲಾಪಗಳ ನಿಯಮಾವಳಿಗಳನ್ನು ಸೂಕ್ತ ತಿದ್ದುಪಡಿ ಮೂಲಕ ಹೆಚ್ಚು ಬಲಪಡಿಸುವುದು.

7. ಸದನದಲ್ಲಿ ಅಡ್ಡಿ ಆತಂಕಗಳ ಬದಲಿಗೆ ಅರ್ಥಪೂರ್ಣ ಚರ್ಚೆಗಳಾಗಲಿ. (**Discussions to replace Disruptions in the House.**)

8. **Strict enforcement of Rules of Procedure of Conduct of Business in the House to prevent "Disruptions by any member including by members of the Opposition who oppose on various issues/decisions just for the sake of being in the Opposition".**

9. ಪ್ರತಿಪಕ್ಷಗಳು ಪ್ರತಿಪಾದಿಸುವ ವಿಷಯಗಳನ್ನು ಚರ್ಚಿಸುವ ಸಲುವಾಗಿ ಸದನದಲ್ಲಿ ಪ್ರತ್ಯೇಕವಾಗಿ ದಿನ ಹಾಗೂ ಸಮಯವನ್ನು ನಿಗದಿಪಡಿಸುವುದು. (**Opposition Parties Business Day**)

10. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಹಂತದಿಂದ ಹಿಡಿದು ಶಾಸಕಾಂಗಕ್ಕೆ ಆಯ್ಕೆಯಾದ ಮೇಲೂ ರಾಜಕೀಯ ಶಿಕ್ಷಣ, ಸದನದಲ್ಲಿನ ನಡವಳಿಕೆ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಅವರ ನೈತಿಕ ಬೆಳವಣಿಗೆಗೆ ಮಹತ್ವ ನೀಡುವಂತಹ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಗುರುತರವಾದ ಪಾತ್ರವಹಿಸುವುದು ಹಾಗೂ ಈ ದಿಸೆಯಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳುವುದು. ಅದೇರೀತಿ ವಿಧಾನ ಮಂಡಲ/ಸಂಸತ್ತಿನಲ್ಲಿ ಸದಸ್ಯರ ಶಿಸ್ತು, ಸಭ್ಯತೆ ಮತ್ತು ಸದನದ ಘನತೆ ಹಾಗೂ ಗೌರವದ ಬಗ್ಗೆ ಆಯಾ ಪಕ್ಷದ ನಾಯಕರು/ ಸಚೇತಕರೇ ಜವಾಬ್ದಾರರಾಗುವುದು.

ಈ ನಿಟ್ಟಿನಲ್ಲಿ ಇಂದಿನ ತರಬೇತಿಯೂ ಸಹ ಒಂದಾಗಿದೆ ಎಂದು ಭಾವಿಸುತ್ತೇನೆ. ನಮ್ಮ ಪ್ರಜಾಪ್ರಭುತ್ವ ಸಂಸದೀಯ ವ್ಯವಸ್ಥೆಯನ್ನು ಬಲಪಡಿಸಲು ತಾವೆಲ್ಲರೂ ತಮ್ಮದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡಬೇಕೆಂದು ಕೋರುತ್ತೇನೆ.

ಜೈ ಸಂವಿಧಾನ್ ಜೈ ಹಿಂದ್ ಜೈ ಕರ್ನಾಟಕ

******

144. ವಿಧಾನ ಸಭೆಯ 12ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

15ನೇ ವಿಧಾನಸಭೆಯ ಹನ್ನೆರಡನೇ ಅಧಿವೇಶನವು ದಿನಾಂಕ 14ನೇ ಫೆಬ್ರವರಿ, 2022 ರಿಂದ 22ನೇ ಫೆಬ್ರವರಿ, 2022 ರವರೆಗೆ ಹಾಗೂ ದಿನಾಂಕ 04ನೇ ಮಾರ್ಚ್, 2022 ರಿಂದ 30ನೇ ಮಾರ್ಚ್, 2022 ರವರೆಗೆ ಒಟ್ಟು 26 ದಿನಗಳ ಕಾಲ 116 ಗಂಟೆ 20 ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ದಿನಾಂಕ: 14.02.2022 ರಂದು ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ವಂದನಾ ನಿರ್ಣಯದ ಪ್ರಸ್ತಾವವನ್ನು ದಿನಾಂಕ:22.02.2022 ರಂದು ಅಂಗೀಕರಿಸಲಾಯಿತು.

- 2022–23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:04.03.2022 ರಂದು ಮಂಡಿಸಿರುತ್ತಾರೆ. ಆಯವ್ಯಯದ ಸಾಮಾನ್ಯ ಚರ್ಚೆಯಲ್ಲಿ 19 ಮಾನ್ಯ ಸದಸ್ಯರುಗಳು ಒಟ್ಟು 23 ಗಂಟೆ 39 ನಿಮಿಷಗಳ ಕಾಲ ಭಾಗವಹಿಸಿದ್ದು, ದಿನಾಂಕ:16.03.2022 ರಂದು ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಿರುತ್ತಾರೆ.

- 2022–23ನೇ ಸಾಲಿನ ಅನುದಾನದ ಬೇಡಿಕೆಗಳನ್ನು ದಿನಾಂಕ:16.03.2022 ರಂದು ಮಂಡಿಸಿದ್ದು, ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ 27 ಮಾನ್ಯ ಸದಸ್ಯರುಗಳು ಒಟ್ಟು 15 ಗಂಟೆ 28 ನಿಮಿಷಗಳ ಕಾಲ ಭಾಗವಹಿಸಿದ್ದು, ಸರ್ಕಾರದ ಉತ್ತರದ ನಂತರ ದಿನಾಂಕ:29.03.2022 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

- 2021–22ನೇ ಸಾಲಿನ ಪೂರಕ ಅಂದಾಜುಗಳ ಮೂರನೇ ಹಾಗೂ ಅಂತಿಮ ಕಂತನ್ನು ದಿನಾಂಕ:23.03.2022 ರಂದು ಮಂಡಿಸಿದ್ದು, 24.03.2022 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

- ಇತ್ತೀಚೆಗೆ ನಿಧನ ಹೊಂದಿದ ಗಣ್ಯರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.

- ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದ ನಮ್ಮ ರಾಜ್ಯದ ಗಣ್ಯರುಗಳಿಗೆ ಸದನದ ಪರವಾಗಿ ಅಭಿನಂದನೆಯನ್ನು ಸಲ್ಲಿಸಲಾಗಿದೆ.

- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದಿನಾಂಕ:08.03.2022 ರಂದು ನಾಡಿನ ಸಮಸ್ತ ಮಹಿಳೆಯರಿಗೆ ಶುಭಾಶಯಗಳನ್ನು ಕೋರಲಾಯಿತು. ಬಲಿದಾನ ದಿವಸ್ ಪ್ರಯುಕ್ತ ಹುತಾತ್ಮರಾದ ಸ್ವಾತಂತ್ರ್ಯ ಹೋರಾಟಗಾರರನ್ನು ದಿನಾಂಕ: 23.03.2022ರಂದು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

- ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.

- "ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ" ಕುರಿತು ವಿಶೇಷ ಚರ್ಚೆಯನ್ನು ದಿನಾಂಕ: 28.03.2022 ರಂದು ಸಭಾಧ್ಯಕ್ಷರ ಪ್ರಾಸ್ತಾವಿಕ ಭಾಷಣದೊಂದಿಗೆ ಪ್ರಾರಂಭಿಸಿದ್ದು, ಈ ಕುರಿತು ನಡೆದ ವಿಶೇಷ ಚರ್ಚೆಯಲ್ಲಿ 16 ಸದಸ್ಯರು ಭಾಗವಹಿಸಿದ್ದು, ಒಟ್ಟು 10 ಗಂಟೆಗಳ ಕಾಲ ಚರ್ಚಿಸಲಾಗಿದೆ.

- ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಮೂರು ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

- ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ, ವಿಧಾನಸಭೆಯ ಅರ್ಜಿಗಳ ಸಮಿತಿ, ಸರ್ಕಾರಿ ಭರವಸೆಗಳ ಸಮಿತಿಯ ವರದಿಗಳನ್ನು ಮತ್ತು 134 ಅಧಿಸೂಚನೆಗಳು, 87 ವಾರ್ಷಿಕ ವರದಿಗಳು, 101 ಲೆಕ್ಕ ಪರಿಶೋಧನಾ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

- ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಾಲ್ಕು ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ದಿನಾಂಕ: 22.03.2022 ರಂದು ಮಾನ್ಯ ಸಭಾಧ್ಯಕ್ಷರಿಗೆ ಸದನವು ಅಧಿಕಾರ ನೀಡಿತು.

- 04 ಅರ್ಜಿಗಳನ್ನು ಒಪ್ಪಿಸಲಾಗಿದೆ.

- ಕರ್ನಾಟಕ ರಾಜ್ಯವು ರಚಿಸಿರುವ ಮೇಕೆದಾಟು ಕುಡಿಯುವ ನೀರಿನ ಯೋಜನೆಯ ಕುರಿತಂತೆ ದಿನಾಂಕ: 24.03.2022 ರಂದು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ ಅಧಿಕೃತ ನಿರ್ಣಯವನ್ನು ಸದನವು ಸರ್ವಾನುಮತದಿಂದ ಅಂಗೀಕರಿಸಲಾಯಿತು.

- ಈ ಅಧಿವೇಶನದಲ್ಲಿ 02 ಧನವಿನಿಯೋಗ ವಿಧೇಯಕಗಳು ಸೇರಿದಂತೆ ಒಟ್ಟು 13 ವಿಧೇಯಕಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

- ನಿಯಮ 60 ರಡಿಯಲ್ಲಿ ನೀಡಿದ್ದ 02 ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಲಾಗಿದ್ದು, ಅವುಗಳೂ ಸೇರಿದಂತೆ ಒಟ್ಟು 06 ಸೂಚನೆಗಳನ್ನು ನಿಯಮ 69ರಡಿಯಲ್ಲಿ ಚರ್ಚಿಸಲಾಗಿರುತ್ತದೆ.

- ಒಟ್ಟು 4769 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ 405 ಪ್ರಶ್ನೆಗಳ ಪೈಕಿ 385 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ 4264 ಪ್ರಶ್ನೆಗಳ ಪೈಕಿ 3489 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ನಿಯಮ 351 ರಡಿಯಲ್ಲಿ 361 ಸೂಚನೆಗಳನ್ನು ಅಂಗೀಕರಿಸಿದ್ದು, 242 ಸೂಚನೆಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಗಮನ ಸೆಳೆಯುವ 401 ಸೂಚನೆಗಳ ಪೈಕಿ 264 ಸೂಚನಾ ಪತ್ರಗಳ ಉತ್ತರಗಳನ್ನು ಸ್ವೀಕರಿಸಲಾಗಿದೆ.

- ಶೂನ್ಯ ವೇಳೆಯಲ್ಲಿ ಒಟ್ಟು 46 ಸೂಚನೆಗಳನ್ನು ಚರ್ಚಿಸಲಾಗಿದೆ.

ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಉಪ ಸಭಾಧ್ಯಕ್ಷರಿಗೆ, ಸರ್ಕಾರಿ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಎಲ್ಲಾ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಹಾಗೂ ವಿಶೇಷವಾಗಿ ದಿನಾಂಕ:28.03.2022ರಂದು ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ಅಗತ್ಯತೆ ಕುರಿತು ನಾನು ಮಾಡಿದ ಪ್ರಾಸ್ತಾವಿಕ ಭಾಷಣದ ಮೇಲೆ ನಡೆದ ಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಎಲ್ಲಾ ಪಕ್ಷಗಳ ನಾಯಕರುಗಳಿಗೆ ಹಾಗೂ ಸದಸ್ಯರುಗಳಿಗೆ ಮತ್ತೊಮ್ಮೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮುಂಬರುವ ಶುಭಕೃತ ಸಂವತ್ಸರವು ಎಲ್ಲರಿಗೂ ಸುಖ, ಶಾಂತಿ ಹಾಗೂ ಆರೋಗ್ಯವನ್ನು ನೀಡಲೆಂದು ಹಾರೈಸಿ ಯುಗಾದಿ ಹಬ್ಬದ ಶುಭಾಶಯಗಳನ್ನು ತಿಳಿಸುತ್ತೇನೆ.

ಈಗ ರಾಷ್ಟ್ರಗೀತೆಯೊಂದಿಗೆ ಸದನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡುತ್ತಿದ್ದೇನೆ.

*****

145. ಕರ್ನಾಟಕ ವಿಧಾನಸಭೆಯ 15ನೇ ವಿಧಾನಸಭೆ ದಿನಾಂಕ:14.02.2022 ರಿಂದ 22.02.2022 ರವರೆಗೆ ನಡೆದ ಹನ್ನೆರಡನೇ ಅಧಿವೇಶನದಲ್ಲಿ ಮಂಡಿಸಿದ/ಅಂಗೀಕರಿಸಿದ ಹಾಗೂ ಹಿಂಪಡೆಯಲಾದ ವಿಧೇಯಕಗಳ ಪಟ್ಟಿ

ಕ್ರ.ಸಂ. Sl.No	ವಿಧೇಯಕಗಳ ಹೆಸರು Name of the Bill	ವಿಧೇಯಕಗಳು			ಷರಾ Remarks
		ವಿಧಾನಸಭೆ Legislative Assembly		ವಿಧಾನ ಪರಿಷತ್ತು Legislative Council	
		ಮಂಡಿಸಿದ ದಿನಾಂಕ Date of Introduction	ಅಂಗೀಕರಿಸಿದ ದಿನಾಂಕ Date of Passing	ಅಂಗೀಕರಿಸಿದ ದಿನಾಂಕ Date of Passing	
1	2	3	4	6	7
1	ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:01) The Karnataka Stamp (Amendment) Bill, 2022 (L.A. Bill No. 01 of 2022)	**16.02.2022**	**21.02.2022**	**22.02.2022**	ಸದರಿ ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.
2	ಕ್ರಿಮಿನಲ್ ಕಾನೂನು ತಿದ್ದುಪಡಿ ಅಧ್ಯಾದೇಶ, 1944 (ಕರ್ನಾಟಕ ತಿದ್ದುಪಡಿ) ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:02) The Criminal Law Amendment Ordinance, 1944 (Karnataka Amendment) Bill, 2022 (L.A. Bill No. 02 of 2022)	**16.02.2022**	**21.02.2022**	**22.02.2022**	
3	ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:03)	**17.02.2022**	**21.02.2022**	**22.02.2022**	

ಕ್ರ.ಸಂ. Sl.No	ವಿಧೇಯಕಗಳ ಹೆಸರು Name of the Bill	ವಿಧೇಯಕಗಳು			ಷರಾ Remarks
		ವಿಧಾನಸಭೆ Legislative Assembly		ವಿಧಾನ ಪರಿಷತ್ತು Legislative Council	
		ಮಂಡಿಸಿದ ದಿನಾಂಕ Date of Introduction	ಅಂಗೀಕರಿಸಿದ ದಿನಾಂಕ Date of Passing	ಅಂಗೀಕರಿಸಿದ ದಿನಾಂಕ Date of Passing	
	The Karnataka Stamp (Second Amendment) Bill, 2022 (L.A. Bill No. 03 of 2022)				
4	ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರರ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:04) The Karnataka Civil Services (Validation of Selection and Appointment of 2011 batch Gazetted Probationers) Bill, 2022 (L.A. Bill No. 04 of 2022)	**18.02.2022**	**21.02.2022**	**22.02.2022**	
5	ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:05) The Karnataka Ministers Salaries and Allowances (Amendment) Bill, 2022 (L.A. Bill No. 05 of 2022)	**22.02.2022**	**22.02.2022**	**22.02.2022**	

ಕ್ರ.ಸಂ. Sl.No	ವಿಧೇಯಕಗಳ ಹೆಸರು Name of the Bill	ವಿಧೇಯಕಗಳು			ಷರಾ Remarks
		ವಿಧಾನಸಭೆ Legislative Assembly		ವಿಧಾನ ಪರಿಷತ್ತು Legislative Council	
		ಮಂಡಿಸಿದ ದಿನಾಂಕ Date of Introduction	ಅಂಗೀಕರಿಸಿದ ದಿನಾಂಕ Date of Passing	ಅಂಗೀಕರಿಸಿದ ದಿನಾಂಕ Date of Passing	
6	ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022 (2022ರ ವಿ.ಸ.ವಿ. ಸಂಖ್ಯೆ:06) The Karnataka Legislature Salaries, Pensions and Allowances (Amendment) Bill, 2022 (L.A. Bill No. 06 of 2022)	22.02.2022	22.02.2022	22.02.2022	

--2

146. ವಿಧಾನ ಪರಿಷತ್ತಿನ 146ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಮಾನ್ಯ ಸಭಾಪತಿಯವರು:

ವಿಧಾನ ಪರಿಷತ್ತಿನ 146ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತಅಧಿವೇಶನವುದಿನಾಂಕ:14.02.2022ರಿಂದ 22.02.2022 ರವರೆಗೆ ಹಾಗೂ ದಿನಾಂಕ: 04.03.2022 ರಿಂದ 30.03.2022ರವರೆಗೆಒಟ್ಟು 26 ದಿನಗಳು ಅಂದರೆ, 120.14 ಗಂಟೆ ನಡೆಸಲಾಗಿರುತ್ತದೆ.

ದಿನಾಂಕ:14.02.2022ರಂದು ಬೆಳಗ್ಗೆ 11.00 ಗಂಟೆಗೆಘನತೆವೆತ್ತರಾಜ್ಯಪಾಲರು ವಿಧಾನ ಮಂಡಲದಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಪ್ರಾರಂಭಗೊಂಡಿತು. ವಂದನಾ ನಿರ್ಣಯದ ಮೇಲೆ 2.41 ಗಂಟೆಗಳು ಚರ್ಚೆ ನಡೆಸಿ ದಿನಾಂಕ: 22.02.2022 ರಂದುರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಗಣ್ಯರುಗಳಿಗೆ ಸದನವುತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ದಿನಾಂಕ: 04.03.2022ರಂದು ಮಾನ್ಯ ಮುಖ್ಯಮಂತ್ರಿಯವರು 2022–23ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು.ಆಯವ್ಯಯ ಅಂದಾಜುಗಳ ಮೇಲೆ ಸುಮಾರು27.17 ಗಂಟೆಗಳ ಕಾಲ ಚರ್ಚೆ ನಡೆಸಿ, ದಿನಾಂಕ: 18.03.2022 ರಂದುಸರ್ಕಾರದಿಂದಉತ್ತರಿಸಲಾಯಿತು.

ಸಭೆಯ ಮುಂದಿಡಲಾಗುವಕಾಗದ ಪತ್ರಗಳ 01, 02, 03, 04 ಮತ್ತು 05ನೇ ಪಟ್ಟಿಗಳನ್ನು ಮಂಡಿಸಲಾಯಿತು.

ಸದಸ್ಯರುಗಳ ಖಾಸಗಿ ವಿಧೇಯಕ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ, ಎರಡನೇ ಹಾಗೂ ಮೂರನೇ ವರದಿಯನ್ನು ಮಂಡಿಸಲಾಯಿತು. ಮಾನ್ಯ ಶಾಸಕರಾದ ಶ್ರೀ ಯು.ಬಿ. ವೆಂಕಟೇಶ್‌ಅವರು ಮಂಡಿಸಿದ ಖಾಸಗಿ ನಿರ್ಣಯವನ್ನು ಸರ್ಕಾರವು ನೀಡಿದಉತ್ತರದ ಮೇರೆಗೆ ಹಿಂಪಡೆದಿರುತ್ತಾರೆ. ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಯ 35ನೇ ವರದಿಯನ್ನು, ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ 48ನೇ ವರದಿ ಹಾಗೂ ವಿಧಾನ ಮಂಡಲದ ಸಭೆಯ ಮುಂದಿಡಲಾದಕಾಗದ ಪತ್ರಗಳ 37ನೇ ವರದಿಯನ್ನು ಸದನಕ್ಕೆಒಪ್ಪಿಸಲಾಯಿತು.

ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿ,ಗ್ರಾಮೀಣಾಭಿವೃದ್ಧಿಇಲಾಖೆಯಲ್ಲಿಕುಡಿಯುವ ನೀರು ಹಾಗೂ ನೈರ್ಮಲ್ಯಯೋಜನೆಯಡಿ ಬಿಡುಗಡೆಯಾದ ಹಣ ಬಳಕೆಯಾಗದಿರುವ ಬಗ್ಗೆ ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಜಂಟಿಸದನ ಸಮಿತಿ ಹಾಗೂ ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣಯೋಜನೆಯಡಿಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿ ಸಲ್ಲಿಸಲುರಚಿಸಲಾಗಿರುವ ವಿಶೇಷ ಸದನಸಮಿತಿಗಳ ಕಾಲಾವಧಿಯನ್ನು ವಿಸ್ತರಿಸುವ ಪ್ರಸ್ತಾವವನ್ನು ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಕನ್ನಡ ವಿಶ್ವವಿದ್ಯಾಲಯ (ಹಂಪಿ) ಗೌರ್ನಿಂಗ್‌ಕೌನ್ಸಿಲ್‌ಗೆಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆಅಧಿಕಾರ ನೀಡುವ ಪ್ರಸ್ತಾವನೆಯನ್ನು ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರುಕರ್ನಾಟಕರಾಜ್ಯರಸ್ತೆ ಸುರಕ್ಷತಾ ಪ್ರಾಧಿಕಾರದಕಾರ್ಯನಿರ್ವಹಣೆಯಕಾರ್ಯಕ್ಷಮತೆ ಲೆಕ್ಕಪರಿಶೋಧನಾ ವರದಿ (ಸಂಖ್ಯೆ–5), ಪಂಚಾಯತ್‌ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕತಾಂತ್ರಿಕ ಪರಿಶೀಲನಾ ವರದಿ, ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿ (2022ನೇ ವರ್ಷದ ವರದಿ ಸಂಖ್ಯೆ–1), ರಾಜ್ಯ ಹಣಕಾಸು ಸಂಸ್ಥೆಗೆ ಸಂಬಂಧಿಸಿದ 2020–2021ನೇ ಸಾಲಿನವರದಿಹಾಗೂ 2021–2022ನೇ ಸಾಲಿನ ಪೂರಕ ಅಂದಾಜುಗಳ (ಮೂರನೇಹಾಗೂ ಅಂತಿಮಕಂತು) ವರದಿಯನ್ನುಮಂಡಿಸಲಾಯಿತು.

ಶ್ರೀ ಕೋಟ ಶ್ರೀನಿವಾಸ ಪೂಜಾರಿಅವರನ್ನು ಸಭಾನಾಯಕರನ್ನಾಗಿ ನೇಮಕ ಮಾಡಿರುವ ಬಗ್ಗೆ, ಶ್ರೀ ಬಿ.ಕೆ. ಹರಿಪ್ರಸಾದ್‌ಅವರನ್ನು ಮಾನ್ಯ ವಿರೋಧ ಪಕ್ಷದ ನಾಯಕರನ್ನಾಗಿ ಮಾನ್ಯತೆ ನೀಡಿರುವ ಬಗ್ಗೆ ಹಾಗೂ ಶ್ರೀ ಪ್ರಕಾಶ್ ಕೆ. ರಾಥೋಡ್‌ಅವರನ್ನು ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಿರುವ ಬಗ್ಗೆ ಹಾಗೂ ಡಾ: ಕೆ. ಗೋವಿಂದರಾಜುಅವರನ್ನು ವಿಧಾನ ಪರಿಷತ್ತಿನಲ್ಲಿಕಾಂಗ್ರೆಸ್ ಪಕ್ಷದಉಪನಾಯಕರನ್ನಾಗಿ ಪರಿಗಣಿಸಿರುವ ಬಗ್ಗೆ ಮತ್ತುಡಾ: ವೈ.ಎ. ನಾರಾಯಣಸ್ವಾಮಿಅವರನ್ನು ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಿರುವಕುರಿತು ಸದನದಲ್ಲಿ ಪ್ರಕಟಿಸಲಾಯಿತು.

ಸದನದಲ್ಲಿ ದಿನಾಂಕ: 25.03.2022ರಂದು ಸರ್ಕಾರವುಕರ್ನಾಟಕರಾಜ್ಯವು ಯೋಜಿಸಿರುವ ಮೇಕೆದಾಟುಕುಡಿಯುವ ನೀರು ಮತ್ತು ಸಮತೋಲನ ಜಲಾಶಯಯೋಜನೆಯಕುರಿತುಅಧಿಕೃತ ನಿರ್ಣಯವನ್ನು ಮಂಡಿಸಿದ್ದು ಸರ್ವಾನುಮತದಿಂದಅಂಗೀಕರಿಸಲಾಗಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ **2844** ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ405 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 299 ಪ್ರಶ್ನೆಗಳಿಗೆ ಸದನದಲ್ಲಿಉತ್ತರಿಸಲಾಯಿತು ಹಾಗೂ 21 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು **2439** ಪ್ರಶ್ನೆಗಳ ಪೈಕಿ 1886 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧ ಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 11 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 06 ಸೂಚನೆಗಳಿಗೆ ಸದನದಲ್ಲಿ ಚರ್ಚಿಸಲಾಗಿರುತ್ತದೆ ಹಾಗೂ 02 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 215 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 31 ಸೂಚನೆಗಳಿಗೆ ಉತ್ತರಿಸಲಾಯಿತು ಹಾಗೂ 71 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 131 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 17 ಸೂಚನೆಗಳಿಗೆಉತ್ತರಿಸಲಾಯಿತು ಹಾಗೂ 40 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆಯ ಒಟ್ಟು 157 ಸೂಚನೆಗಳ ಪೈಕಿ **37** ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಗಿದ್ದು, 79 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ನಿಯಮ **59**ರ ಅಡಿಯಲ್ಲಿ **04** ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಒಂದು ಸೂಚನೆಯನ್ನು ತಿರಸ್ಕರಿಸಿದ್ದು, ಮೂರುಸೂಚನೆಗಳನ್ನು ನಿಯಮ 68ಕ್ಕೆ ಪರಿವರ್ತಿಸಿದ್ದು, ಆ ಪೈಕಿ ಎರಡು ಸೂಚನೆಗಳನ್ನು ಚರ್ಚಿಸಿ ಉತ್ತರಿಸಲಾಯಿತು.

ನಿಯಮ 68ರ ಅಡಿಯಲ್ಲಿ 07 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಎರಡು ಸೂಚನೆಗಳನ್ನು ಚರ್ಚಿಸಿ ಉತ್ತರಿಸಲಾಯಿತು.

ವಿಧಾನ ಸಭೆಯಿಂದಅಂಗೀಕೃತರೂಪದಲ್ಲಿರುವ13 ವಿಧೇಯಕಗಳಿಗೆ ವಿಧಾನ ಪರಿಷತ್ತುತನ್ನ ಸಹಮತಿಯನ್ನು ನೀಡಿರುತ್ತದೆ.

ಮಾನ್ಯ ಸಭಾನಾಯಕರು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ:–

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ವಿರೋಧ ಪಕ್ಷದ ಮುಖ್ಯಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನಸಚಿವಾಲಯದಅಧಿಕಾರಿ/ನೌಕರವರ್ಗದವರಿಗೆ ಮತ್ತು ಸರ್ಕಾರದಎಲ್ಲಾಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, **ಸದನವನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡುತ್ತಿದ್ದೇನೆ**.

* * * * *

147. ಕರ್ನಾಟಕ ವಿಧಾನ ಪರಿಷತ್ತು ನೂರನಲವತ್ತಾರನೆಯ ಅಧಿವೇಶನ (ದಿನಾಂಕ: 14.02.2022 ರಿಂದ 22.02.2022 ರವರೆಗೆ ಮತ್ತು ದಿನಾಂಕ:04.03.2022ರಿಂದ 30.03.2022ರವರೆಗೆ) ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ವಿವರ

ಕ್ರ ಸಂ	ವಿಧೇಯಕದ ಹೆಸರು	ಸಂಖ್ಯೆ	ವಿ ಸ ಅಂಗೀಕರಿಸಿರುವ ದಿನಾಂಕ	ವಿ ಪ ಅಂಗೀಕರಿಸಿರುವ ದಿನಾಂಕ
1.	ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2022 The Karnataka Stamp (Amendment) Bill, 2022	01	21.02.2022	22.02.2022
2.	ಕ್ರಿಮಿನಲ್ ಕಾನೂನು ತಿದ್ದುಪಡಿಅಧ್ಯಾದೇಶ, 1944(ಕರ್ನಾಟಕತಿದ್ದುಪಡಿ)ವಿಧೇಯಕ, 2022, The Criminal Law Amendment Ordinance, 1944 (Karnataka Amendment) Bill, 2022	02	21.02.2022	22.02.2022
3.	ಕರ್ನಾಟಕ ಸ್ಟಾಂಪು (ಎರಡನೇತಿದ್ದುಪಡಿ) ವಿಧೇಯಕ, 2022(ಬಿಲ್ ಸಂಖ್ಯೆ:3) The Karnataka Stamp (Second Amendment) Bill, 2022	03	21.02.2022	22.02.2022
4.	ಕರ್ನಾಟಕ ಸಿವಿಲ್ ಸೇವೆಗಳ (2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರರಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ವಿಧೇಯಕ,2022. The Karnataka Civil Services (Validation of Selection and Appointment of 2011 batch Gazetted Probationers) Bill, 2022.	04	21.02.2022	22.02.2022
5.	ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022 . The Karnataka Ministers Salaries and Allowances (Amendment) Bill, 2022.	05	22.02.2022	22.02.2022
6	ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2022. The Karnataka Legislature Salaries , Pensions and Allowances (Amendment) Bill, 2022	06	22.02.2022	22.02.2022

7	ಕರ್ನಾಟಕ ಬಂದೀಖಾನೆಗಳ (ತಿದ್ದುಪಡಿ) ವಿಧೇಯಕ, 2022 The Karnataka Prisons (Amendment) Bill,2022	07	21.03.2022	23.03.2022
8	ಕರ್ನಾಟಕಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ, 2022 The Karnataka Industrial Areas Development(Amendment) Bill, 2022.	08	21.03.2022	23.03.2022
9	ಕರ್ನಾಟಕಆರ್ಥಿಕ ಹೊಣೆಗಾರಿಕೆ(ತಿದ್ದುಪಡಿ) ವಿಧೇಯಕ, 2022 The Karnataka Fiscal Responsibility (Amendment)Bill, 2022.	09	29. 03.2022	29.03.2022
10	ಕರ್ನಾಟಕಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2022 The Karnataka Gram Swaraj and Panchayat Raj (Amendment) Bill, 2022.	10	24.03.2022	28.03.2022
11	ಕರ್ನಾಟಕಧನವಿನಿಯೋಗ ವಿಧೇಯಕ, 2022 The Karnataka Appropriation Bill, 2022	11	24.03.2022	25.03.2022
12	ಕರ್ನಾಟಕಧನವಿನಿಯೋಗ (ಸಂಖ್ಯೆ:2) ವಿಧೇಯಕ, 2022 The Karnataka Appropriation (No.2)Bill, 2022	12	29.03.2022	29.03.2022
13	ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ(ತಿದ್ದುಪಡಿ) ವಿಧೇಯಕ, 2022 The Karnataka Motor Vehicles Taxation (Amendment) Bill, 2022	13	29.03.2022	29. 03.2022

ದಿನಾಂಕ: 01.01.2022 ರಂದು ಶ್ರೀ ಜಗದ್ಗುರು ಅನ್ನದಾನೀಶ್ವರ ಕಲ್ಯಾಣ ಮಂಟಪ, ಮುಂಡರಗಿಯಲ್ಲಿ ಜರುಗಿದ ಗುರುವಂದನೆ ಹಾಗೂ ಕೃತಜ್ಞತಾಸಮರ್ಪಣಾ ಸಮಾರಂಭದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಪಾಲ್ಗೊಂಡು ಎಸ್.ಎಂ ಅಗಡಿ ಪರಿವಾರದವರನ್ನು ಸನ್ಮಾನಿಸಿದರು

ದಿನಾಂಕ: 05.01.2022 ರಂದು ಸನ್ಮಾನ್ಯ ಸಭಾಧ್ಯಕ್ಷರವರು ಕರ್ನಾಟಕ ಇನ್ನೋವೇಷನ್ ಹಾಗೂ ಟೆಕ್ನಾಲಜಿ ಸಂಸ್ಥೆ ಮತ್ತು ಆರ್ಟ್ ಪಾರ್ಕ್ ಅಧಿಕಾರಿಗಳೊಂದಿಗೆ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಸ್ಥಾಪಿತವಾಗಿರುವ ಕೆ-ಟೆಕ್ ಸಂಸ್ಥೆಯ ಪ್ರತಿನಿಧಿಗಳೊಂದಿಗೆ ಆರ್ಟಿಫಿಷಿಯಲ್ ಇಂಟಿಲಿಜೆನ್ಸ್ ಬಗ್ಗೆ ಚರ್ಚಿಸಿ ಮಾಹಿತಿ ಪಡೆದ ಸಂದರ್ಭ:

ದಿನಾಂಕ: 07.01.2022 ರಂದು ಸನ್ಮಾನ್ಯ ಸಭಾಧ್ಯಕ್ಷರವರನ್ನು ಮಾನ್ಯ ಶಾಸಕರಾದ ಶ್ರೀ ರಘುಪತಿ ಭಟ್ ರವರು ಜನವರಿ 18ರಿಂದ ಪ್ರಾರಂಭವಾಗಲಿರುವ ಉಡುಪಿಯ "ಪರ್ಯಾಯ ಮಹೋತ್ಸವ" ದಲ್ಲಿ ಭಾಗವಹಿಸಬೇಕೆಂದು ಆಮಂತ್ರಣ ನೀಡಿ ಆಹ್ವಾನಿಸಿದರು.

ದಿನಾಂಕ: 07.01.2022 ರಂದು ಸನ್ಮಾನ್ಯ ಸಭಾಧ್ಯಕ್ಷರವರು ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ನೆಟ್ವರ್ಕ್ (ಅಂತರ್ಜಾಲ) ಸಂಪರ್ಕ ಇಲ್ಲದಿರುವ ಕಾರಣ ರಾಜ್ಯದ ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೆ ತೊಂದರೆಯಾಗುತ್ತಿರುವುದರಿಂದ, ಎಲ್ಲಾ ಕಡೆಗಳಲ್ಲಿಯೂ ಸಮರ್ಪಕ ನೆಟ್ವರ್ಕ್ ಸಂಪರ್ಕ ಒದಗಿಸುವ ಸಂಬಂಧ ಮಾಹಿತಿ ತಂತ್ರಜ್ಞಾನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಇತರೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸುತ್ತಿರುವ ಸಂದರ್ಭ;

ದಿನಾಂಕ: 07.01.2022 ರಂದು ಸನ್ಮಾನ್ಯ ಸಭಾಧ್ಯಕ್ಷರವರು ಬೆಂಗಳೂರಿನ ಜನರಲ್ ಪೋಸ್ಟ್ ಆಫೀಸ್‌ನ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿರುವ ಸಂದರ್ಭ;

ದಿನಾಂಕ: 11.01.2022 ರಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾಂಗಣದಲ್ಲಿ ನಡೆದ ಅತಿಥಿ ಉಪನ್ಯಾಸಕರ ಕುಂದುಕೊರತೆಗಳ ಚರ್ಚೆಯ ಸಭೆಯಲ್ಲಿ, ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ಅಧ್ಯಕ್ಷತೆ ವಹಿಸಿದ್ದು ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದರು. ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವ ಶ್ರೀ ಅಶ್ವತ್ಥ್ ನಾರಾಯಣ ಹಾಗೂ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದ ವಿಧಾನಪರಿಷತ್ತಿನ ಸದಸ್ಯರುಗಳು ಭಾಗವಹಿಸಿದ್ದರು.

ದಿನಾಂಕ: 12.01.2022 ರಂದು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆವರಣ ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಆಯೋಜಿಸಿದ್ದ, ಸ್ವಾಮಿ ವಿವೇಕಾನಂದರ 159ನೇ ಜಯಂತಿಯ ಪ್ರಯುಕ್ತ ಹೊರತಂದಿರುವ ವಿವೇಕದರ್ಶನ ಪುಸ್ತಿಕೆಯನ್ನು ಸಭಾಪತಿ ಶ್ರೀ ಬಸವರಾಜಹೊರಟ್ಟಿಯವರು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರಾದ ಶ್ರೀ ಅಶ್ವತ್ಥ್ ನಾರಾಯಣರವರು ಉಪಸ್ಥಿತರಿದ್ದರು.

ದಿನಾಂಕ: 14.01.2022 ರಂದು ವಿಧಾನಸೌಧದ ಮುಂಭಾಗದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯವರು ಆಯೋಜಿಸಿದ್ದ, ಕ್ವೀನ್ಸ್ ಬ್ಯಾಟನ್ ರಿಲೇ ಕಾಮನ್ ವೆಲ್ತ್ ಗೇಮ್ಸ್ 2022 ಬರ್ಮಿಂಗ್ ಹ್ಯಾಮ್ ಕಾರ್ಯಕ್ರಮಕ್ಕೆ ರಾಜ್ಯ ಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರು ಸಾಂಕೇತಿಕ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ.ಗೋವಿಂದರಾಜು ರವರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ರವರು ಮತ್ತು ಹಲವು ತರಬೇತುದಾರರು ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು

ದಿನಾಂಕ: **26.01.2022** ರಂದು ಶಾಸಕರ ಭವನದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ. ಸನ್ಮಾನ್ಯ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ಹಾಗೂ ಸನ್ಮಾನ್ಯ ಸಭಾಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಧ್ವಜಾರೋಹಣ ಮಾಡಿದರು. ನಂತರ ಗಣರಾಜ್ಯೋತ್ಸವದ ಕುರಿತು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ವಿಧಾನಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಕೆ.ಆರ್ ಮಹಾಲಕ್ಷ್ಮೀ ವಿಧಾನಸಭೆಯ ಕಾರ್ಯದರ್ಶಿ ಶ್ರೀಮತಿ ಎಂ.ಕೆ ವಿಶಾಲಾಕ್ಷಿ ಮತ್ತು ಸಚಿವಾಲಯದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ದಿನಾಂಕ: 26.01.2022 ರಂದು ಸನ್ಮಾನ್ಯ ಸಭಾಧ್ಯಕ್ಷರವರು 73ನೇ ಗಣರಾಜ್ಯೋತ್ಸವದ ಸಂದರ್ಭದಲ್ಲಿ ತಮ್ಮ ನಿವಾಸದಲ್ಲಿ ಧ್ವಜಾರೋಹಣ ನೆರವೇರಿಸಿದ ಸಂದರ್ಭ.

ದಿನಾಂಕ: 26.01.2022 ರಂದು ಸನ್ಮಾನ್ಯ ಸಭಾಧ್ಯಕ್ಷರವರು 73ನೇ ಗಣರಾಜ್ಯೋತ್ಸವದ ನಿಮಿತ್ತ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಸಂದರ್ಭ; ಈ ಸಂದರ್ಭದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರು ಹಾಗೂ ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಹಾಗೂ ಇನ್ನಿತರೆ ಗಣ್ಯರುಗಳೊಂದಿಗೆ:–

ದಿನಾಂಕ: **28.01.2022** ರಂದು ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು. ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಭೇಟಿ ಮಾಡಿ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದ ಸಂದರ್ಭದ ಛಾಯಾಚಿತ್ರ.

ದಿನಾಂಕ: **29.01.2022** ರಂದು ಸನ್ಮಾನ್ಯ ಸಭಾಧ್ಯಕ್ಷರವರು ಚುನಾವಣಾ ವ್ಯವಸ್ಥೆಯು ಸುಧಾರಣೆಗೊಳ್ಳುವ ಅಗತ್ಯತೆ ಬಗ್ಗೆ, ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕವಾಗಿ ಎಲ್ಲಾ ಕ್ಷೇತ್ರದಲ್ಲಿರುವ ಅನುಭವಿ ಹಿರಿಯರು, ಚಿಂತಕರು, ಯುವಕರು ಈ ಕುರಿತಂತೆ ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಬದಲಾವಣೆಗೆ ಕಾರಣರಾಗಬೇಕು, ಚುನಾವಣಾ ವ್ಯವಸ್ಥೆ ಸುಧಾರಣೆಗೊಳ್ಳಲು ಒಂದು ಜನಾಭಿಪ್ರಾಯದ ಚರ್ಚೆಗಳು ಪ್ರಾರಂಭಗೊಳ್ಳಬೇಕೆಂದು ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿ ಕರೆದು ಅಭಿಪ್ರಾಯ ವ್ಯಕ್ತಪಡಿಸಿದ ಸಂದರ್ಭ;

ದಿನಾಂಕ: 11.02.2022 ರಂದು ಹುಬ್ಬಳ್ಳಿಯ ಗ್ರಾಮಾಂತರ ಪೊಲೀಸ್ ಠಾಣೆಗೆ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ತಮ್ಮ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ ಪೋಲೀಸ್ ವಾಹನವನ್ನು ನೀಡುವುದರ ಮೂಲಕ ಹಸಿರು ನಿಶಾನೆ ತೋರಿಸಿದರು.

ದಿನಾಂಕ: 13.02.2022ರಂದು ಸನ್ಮಾನ್ಯ ಸಭಾಧ್ಯಕ್ಷರು, ದಿನಾಂಕ: 14.02.2022ರಂದು ನಡೆಯಲಿರುವ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ಆಗಮಿಸಲಿರುವ ಗೌರವಾನ್ವಿತ ರಾಜ್ಯಪಾಲರ ಸಾಂಪ್ರದಾಯಿಕ ಸ್ವಾಗತಕ್ಕೆ ವಿಧಾನಸೌಧದಲ್ಲಿ ಸಿದ್ಧತೆಯಲ್ಲಿರುವ ಕುದುರೆ ಸವಾರರು, ಹಾಗೂ ಪೊಲೀಸ್ ವಾದ್ಯವೃಂದದವರೊಂದಿಗೆ ಚರ್ಚಿಸುತ್ತಿರುವ ಸಂದರ್ಭ;

ದಿನಾಂಕ: 14.02.2022ರಂದು ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ: 15.02.2022 ರಿಂದ ನಡೆಯಲಿರುವ ವಿಧಾನ ಸಭೆ ಅಧಿವೇಶನದ ಕಾರ್ಯಕಲಾಪಗಳ ಕುರಿತಂತೆ ವಿಧಾನಸೌಧದ ಕೊಠಡಿ ಸಂಖ್ಯೆ 106ರಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ನಡೆಸಿ ಚರ್ಚಿಸುತ್ತಿರುವ ಸಂದರ್ಭ;

ದಿನಾಂಕ: 17.02.2022ರಂದು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ ರವರು, ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ರವರು ಹಾಗೂ ಸಂಸದರಾದ ಶ್ರೀ ತೇಜಸ್ವಿಸೂರ್ಯರವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡ ಪ್ರಸಕ್ತ ಸಾಲಿನ ಪದ್ಮಶ್ರೀ ಪುರಸ್ಕೃತರಿಗೆ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ, ಸಾಧಕರಾದ ಶ್ರೀ ಸುಬ್ಬಣ್ಣ ಅಯ್ಯಪ್ಪನ್, ಶ್ರೀ ಅಬ್ದುಲ್ ಖಾದರ್ ನಡಕಟ್ಟಿನ್, ಶ್ರೀ ಅಮೈ ಮಹಾಲಿಂಗ ನಾಯಕ್ ಹಾಗೂ ದಿವಂಗತ: ನಾಡೋಜ ಡಾ: ಸಿದ್ಧಲಿಂಗಯ್ಯ ಅವರ ಶ್ರೀಮತಿ ಅವರನ್ನು ಸನ್ಮಾನಿಸಿ ಗೌರವಿಸುತ್ತಿರುವ ಸಂದರ್ಭ;

ದಿನಾಂಕ: 18.02.2022 ರಂದು ಶಾಸಕರ ಭವನ–1 ರ ನೂತನ ಸ್ವಾಗತಕಾರರ ಕೊಠಡಿಯನ್ನು ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ರವರು ಉದ್ಘಾಟಿಸಿದರು.. ಈ ಸಂದರ್ಭದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ರವರು, ಲೋಕೋಪಯೋಗಿ ಸಚಿವರಾದ ಸಿ.ಸಿ ಪಾಟೀಲ್ ರವರು ಕೃಷಿ ಸಚಿವರಾದ ಶ್ರೀ ಬಿ.ಸಿ ಪಾಟೀಲ್ ಮತ್ತು ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಶ್ರೀ ಬಿ.ಕೆ ಹರಿಪ್ರಸಾದ್ ಮತ್ತು ಸಚಿವಾಲಯದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ದಿನಾಂಕ: 21.02.2022ರಂದು ಸನ್ಮಾನ್ಯ ಸಭಾಧ್ಯಕ್ಷರು ಅಧಿವೇಶನವು ಸುಗಮವಾಗಿ ನಡೆಸುವ ಕುರಿತು ಮಾನ್ಯ ಮುಖ್ಯಮಂತ್ರಿಗಳು, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು, ವಿರೋಧ ಪಕ್ಷದ ನಾಯಕರು ಹಾಗೂ ಇತರೆ ವಿಧಾನ ಸಭೆ ಸದಸ್ಯರುಗಳೊಂದಿಗೆ ಸಮಾಲೋಚನಾ ಸಭೆ ನಡೆಸುತ್ತಿರುವ ಸಂದರ್ಭ;

ದಿನಾಂಕ: 22.02.2022 ರಂದು ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ರವರು, ಶ್ರೀಮತಿ ತೇಜಸ್ವಿನಿಗೌಡ ಹಾಗೂ ವಿಧಾನ ಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಕೆ.ಆರ್. ಮಹಾಲಕ್ಷ್ಮಿ ಮತ್ತು ಸಭಾಪತಿಯವರ ಆಪ್ತ ಕಾರ್ಯದರ್ಶಿ ಡಾ. ಜಿ. ವಿಶ್ವನಾಥ್ ವಿಧಾನಪರಿಷತ್ ಅಧಿಕಾರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ದಿನಾಂಕ: 22.02.2022ರಂದು ಸನ್ಮಾನ್ಯ ಸಭಾಧ್ಯಕ್ಷರು ವಸತಿ ಯೋಜನೆಯಡಿ ಅರಣ್ಯ ಪ್ರದೇಶದಲ್ಲಿ ಅನೇಕ ವರ್ಷಗಳಿಂದ ಅತಿಕ್ರಮಣದಾರರಾಗಿದ್ದು ಗುಡಿಸಲು ಅಥವಾ ಕಚ್ಚಾ ಮನೆಯಲ್ಲಿ ವಾಸಿಸುತ್ತಿದ್ದು ಈಗಾಗಲೇ ಗ್ರಾಮಪಂಚಯಿತಿಯಿಂದ ಮನೆ ನಂಬರ್ ಹೊಂದಿರುವ ಎಲ್ಲಾ ವಸತಿ ರಹಿತರಿಗೆ ವಸತಿ ಯೋಜನೆಗಳಡಿ ಪರಿಗಣಿಸಿ ಸೌಕರ್ಯ ಕಲ್ಪಿಸುವ ಕುರಿತಂತೆ ರಾಜೀವ ಗಾಂಧಿ ವಸತಿ ನಿಗಮ ನಿಯಮಿತದಿಂದ ಹೊರಡಿಸಿರುವ ಆದೇಶದಲ್ಲಿನ ಗೊಂದಲದ ಬಗ್ಗೆ ಮಾನ್ಯ ವಸತಿ ಸಚಿವರಾದ ಶ್ರೀ ಸೋಮಣ್ಣ ಹಾಗೂ ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸುತ್ತಿರುವ ಸಂದರ್ಭ;

ದಿನಾಂಕ: **06.03.2022** ರಂದು ಹುಬ್ಬಳ್ಳಿಯಲ್ಲಿ ನೂತನವಾಗಿ ನಿರ್ಮಾಣಗೊಂಡ ಪ್ರಾದೇಶಿಕ ನ್ಯಾಯವಿಜ್ಞಾನ ಪ್ರಯೋಗಾಲಯ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಭಾಗವಹಿಸಿದ ಸಂದರ್ಭದ ಛಾಯಾಚಿತ್ರ. ಈ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಶ್ರೀ ಪ್ರಹ್ಲಾದ ಜೋಶಿ, ಗೃಹ ಸಚಿವ ಅರಗ ಜ್ಞಾನೇಂದ್ರ, ಸಚಿವರಾದ ಶಂಕರ್ ಪಾಟೀಲ್ ಮುನೇನಕೊಪ್ಪ ಮಾಜಿ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್, ವಿಧಾನಪರಿಷತ್ತಿನ ಸದಸ್ಯ ಸಲೀಂ ಅಹ್ಮದ್ ರವರು ಉಪಸ್ಥಿತರಿದ್ದರು.

ದಿನಾಂಕ: **10.03.2022** ರ ವಿಧಾನಪರಿಷತ್ತಿನ ಅಧಿವೇಶನ ಸಭೆಗೆ ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರು ಆಗಮಿಸಿದ್ದರು. ಪೀಠದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿರವರು ಉಪಸ್ಥಿತರಿರುವ ಸಂದರ್ಭದ ಛಾಯಾಚಿತ್ರ.

ದಿನಾಂಕ: 10.03.2022ರಂದು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಬೆಂಗಳೂರಿಗೆ ಆಗಮಿಸಿದ ಸನ್ಮಾನ್ಯ ಲೋಕಸಭಾ ಅಧ್ಯಕ್ಷರಾದ ಶ್ರೀ ಓಂ ಬಿರ್ಲಾ ಅವರನ್ನು ಸೌಹಾರ್ದಯುತವಾಗಿ ಭೇಟಿಮಾಡಿ, ಕರ್ನಾಟಕ ವಿಧಾನ ಸಭೆಯ ಕಾರ್ಯಕಲಾಪಗಳ ಬಗ್ಗೆ ಹಾಗೂ ಇತರೆ ಸಂಸದೀಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸುತ್ತಿರುವ ಸಂದರ್ಭ;

ದಿನಾಂಕ: 12.03.2022 ರಂದು ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಉಕ್ರೇನ್ ನಲ್ಲಿ ನಡೆಯುತ್ತಿದ್ದ ಯುದ್ದದಲ್ಲಿ ಬಾಂಬ್ ಬ್ಲಾಸ್ಟ್ ಆಗಿ ತನ್ನ ಪ್ರಾಣ ಕಳೆದುಕೊಂಡ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಚಳಗೇರಿ ಗ್ರಾಮದ ವಿದ್ಯಾರ್ಥಿ ನವೀನ್ ಗ್ಯಾನಗೌಡ್ರ ಅವರ ಮನೆಗೆ ಭೇಟಿ ನೀಡಿ ಅವರ ತಂದೆ ತಾಯಿಗೆ ಮತ್ತು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ದಿನಾಂಕ: 13.03.2022 ರಂದು ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ದಶಮಾನೋತ್ಸವ ಹಾಗೂ ಶಕ್ತಿ ಸಂರಕ್ಷಣ ದಿನಾಚರಣೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ದಿನಾಂಕ: 14.03.2022 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ನಲ್ಲಿ ಆಯೋಜಿಸಿದ್ದ "ನರೇಗಾ ಹಬ್ಬದ" ಕಾರ್ಯಕ್ರಮವನ್ನು ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಕೆ.ಎಸ್ ಈಶ್ವರಪ್ಪ, ವಿಧಾನಪರಿಷತ್ ಸದಸ್ಯ ಆ.ದೇವೇಗೌಡ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ ಅತೀಕ್ ಮತ್ತು ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವದರು ಉಪಸ್ಥಿತರಿದ್ದರು.

ದಿನಾಂಕ: 15.03.2022 ರಂದು ಮೇಲುಕೋಟೆಯಲ್ಲಿ ಆಯೋಜಿಸಿದ್ದ, "ವೈರಮುಡಿ ಉತ್ಸವ" ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಯವರೊಂದಿಗೆ ಪಾಲ್ಗೊಂಡಿದ್ದ ಸಂದರ್ಭದ ಛಾಯಾಚಿತ್ರ.

ದಿನಾಂಕ: 15.03.2022ರಂದು ಬೆಂಗಳೂರಿನ ಮಂತ್ರಿ ಮಾಲ್‌ನ ಐನಾಕ್ಸ್ ಚಿತ್ರಮಂದಿರದಲ್ಲಿ ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿರವರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪರವರು, ಸಚಿವರುಗಳು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳೊಂದಿಗೆ "ದಿ ಕಾಶ್ಮೀರ ಫೈಲ್ಸ್" ಸಿನೇಮಾ ವೀಕ್ಷಿಸುತ್ತಿರುವ ಸಂದರ್ಭ;

ದಿನಾಂಕ 17.3.2022ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಆಯೋಜಿಸಿದ್ದ, "ವೀರವನಿತೆ ಒನಕೆ ಓಬವ್ವ" ಜಯಂತಿ ಕಾರ್ಯಕ್ರಮವನ್ನು ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಎಂ ರಮೇಶಗೌಡ ಹಾಗೂ ವಿವಿಧ ಮಠಾಧೀಶರು ಉಪಸ್ಥಿತರಿದ್ದರು.

ದಿನಾಂಕ: 19.03.2022 ರಂದು ಅವ್ವ ಸೇವಾ ಟ್ರಸ್ಟ್ ಹುಬ್ಬಳ್ಳಿ ಮತ್ತು ಉತ್ತರ ಕನ್ನಡ ಜಿಲ್ಲಾ ಶಿಕ್ಷಕರ ಸಮೂಹಗಳ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ. ಶಿಕ್ಷಕರ ನೌಕರರ ಸಮ್ಮೇಳನ ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಬಿ.ಸಿ ನಾಗೇಶ್‌ರವರನ್ನು ಸನ್ಮಾನಿಸುತ್ತಿರುವ ಸಂದರ್ಭ.

ದಿನಾಂಕ: 21.03.2022 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಆಯೋಜಿಸಿದ್ದ, "ಗ್ರಾಮ ಡಿಜಿ ವಿಕಸನ" ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಭಾಗವಹಿಸಿದ್ದರು. ಈ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಗಾಮೀಣಾಭಿವೃದ್ಧಿ ಸಚಿವ ಕೆ.ಎಸ್ ಈಶ್ವರಪ್ಪ ಸಚಿವರಾದ ಸಿ.ಸಿ ಪಾಟೀಲ್ ಮತ್ತು ಆನಂದ್ ಸಿಂಗ್ ರವರು ಉಪಸ್ಥಿತರಿದ್ದರು.

ದಿನಾಂಕ: 21.03.2022ರಂದು ಇಸ್ರೇಲ್‌ನ ಟ್ಯಾಮಿ ಬೆನ್ ಹೈಮ್ ಕೌನ್ಸಲ್ ಜನರೆಲ್ ಅವರ ನೇತ್ರತ್ವದ ನಿಯೋಗವು, ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿದ ಸಂದರ್ಭ;

ದಿನಾಂಕ: 25.03.2022 ರಂದು ವಿಶ್ರಾಂತ ಶಿಕ್ಷಕರು ಮತ್ತು ಉಪನ್ಯಾಸಕರುಗಳ ಸಂಘವು ಬೆಂಗಳೂರಿನ ಚಂದ್ರ ಲೇಔಟ್ ನಲ್ಲಿ ಹಮ್ಮಿಕೊಂಡಿದ್ದ, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರನ್ನು ಗೌರವಾದರಗಳಿಂದ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಘದ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದಿನಾಂಕ: 25.03.2022 ರಂದು ಬೆಂಗಳೂರಿನ ಯವನಿಕಾ ಸಭಾಂಗಣದಲ್ಲಿ ಆಯೋಜಿಸಿದ್ದ, 13ನೇ ಬುಡಕಟ್ಟು ವಿನಿಮಯ ಕಾರ್ಯಕ್ರಮದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಪಾಲ್ಗೊಂಡಿದ್ದು, ಬುಡಕಟ್ಟು ಜನಾಂಗದ ಯುವ ಪ್ರತಿಭಾ ಮಕ್ಕಳನ್ನು ಕಾರ್ಯಕ್ರಮಕ್ಕೆ ಹುರಿದುಂಬಿಸಿದರು. ಈ ಸಂದರ್ಭದಲ್ಲಿ ಯುವಜನಸೇವಾ ಮತ್ತು ಕ್ರೀಡಾ ಸಚಿವರಾದ ನಾರಾಯಣಗೌಡ ಹಾಗೂ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ರವರು ಉಪಸ್ಥಿತರಿದ್ದರು.

ದಿನಾಂಕ: 25.03.2022 ರಂದು ಏಷ್ಯಾ ಟುಡೇ ಇವರು ಬೆಂಗಳೂರಿನಲ್ಲಿ ಆಯೋಜಿಸಿದ್ದ, ಮಹಿಳಾ ಸಾಧಕಿಯರಿಗೆ ಅಭಿನಂದನಾ ಸಮಾರಂಭದಲ್ಲಿ ಸಭಾಪತಿ ಶ್ರೀ ಬಸವರಾಜ ಹೊರಟ್ಟಿಯವರು ಕರ್ನಾಟಕ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರೊಂದಿಗೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಈ ಕಾರ್ಯಕ್ರಮದಲ್ಲಿ ಬೃಹತ್ ಕೈಗಾರಿಕಾ ಸಚಿವರಾದ ಶ್ರೀ ಮುರಗೇಶ್ ಆರ್ ನಿರಾಣಿ ರವರು ಚಿತ್ರನಟ ಅಜಯ್ ರಾವ್ ಮತ್ತು ಏಷ್ಯಾ ಟುಡೇ ಸಮೂಹಗಳ ಮುಖ್ಯಸ್ಥರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದಿನಾಂಕ: 25.03.2022ರಂದು ಸನ್ಮಾನ್ಯ ಸಭಾಧ್ಯಕ್ಷರು ನ್ಯೂಸ್ 18ರ ವತಿಯಿಂದ ಪ್ರತಿ ವರ್ಷವೂ ನೀಡಲ್ಪಡುವ "ವರ್ಷದ ಕನ್ನಡಿಗ ಪ್ರಶಸ್ತಿ" ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿರುವ ಸಂದರ್ಭ;

ದಿನಾಂಕ: 31.03.2022ರಂದು ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ: 30.03.2022ರಂದು ಮುಕ್ತಾಯಗೊಂಡ ಬಜೆಟ್ ಅಧಿವೇಶನದ ಕುರಿತಂತೆ ವಿಧಾನಸೌಧದ ಕೊಠಡಿ ಸಂಖ್ಯೆ: 106ರಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಸಂದರ್ಭ;

ಭಾಗ – 2

ಸಂಸತ್ ಸುದ್ದಿಗಳು

1. House Panel on marriage age has only one woman MP

The Parliamentary panel assigned to examine the landmark bill which seeks to rise the legal age of marriage for women to 21 has only one woman MP out of 31 members.

The Prohibition of Child Marriage (Amendment) Bill was introduced in Lok Sabha during the winter session and referred to the Parliamentary Standing Committee on Education, Women, Children, Youth and Sports.

The Bill, piloted by the Women and Child Development Ministry, seeks to increase the legal age of marriage from 18 to 21.

According to the members list of the parliamentary standing committee, led by senior BJP leader Vinay Sahasrabuddhe, available on the Rajya Sabha website, Trinomial MP Sushmita Dev is the only woman among the 31 members.

When contacted, Ms.Dev said it would have been better if there were more women MPs in the panel.

I wish there were more women MPs in the committee but having said that we will make sure all interest groups are heard, Ms. Dev said Echoing similar sentiments NCP MP Supriya Sule, who has been raising women-centric issues in Parliament said there should have been more women MPs in the panel.

However, she added that the chairman has the power to invite people before the panel. So for more inclusive and wider discussions, he can invite other women MPs.

The Parliamentary Standing Committee on Education, Women, Children, Youth and Sports is a Rajya Sabha administered Committee. Parties nominate members based on their strength in the House.

The introduced of the Bill was opposed by some members who contended that the move infringed upon several personal laws in violation of fundamental rights and demanded that it be referred to a Parliamentary panel.

Courtesy:- The Hindu, Dated: 03.01.2022

2. DCW chief writes to Naidu to reconstitute marriage bill panel

Delhi Commission for Women (DCW) Chief Swati Maliwal wrote to Rajya Sabha Chairman Venkaiah Naidu seeking reconstitution of the parliamentary panel formed for deliberating the Child Marriage Amendment Bill, 2021.

In the letter the DCW chief expressed concerns upon the fact that only one woman parliamentarian was included in the 31 member parliamentary standing committee and sought its reconstitution with more than half women MPs. Maliwal demanded that the commission set up for deliberating the bill which aims at raising the marriageable age of girls from 18 to 21 years must be chaired by a woman as the matter was integral to the future of crores of women.

It's said that the present committee has only one woman amongst 30 men. This is a sensitive matter. Therefore it must be decided through a comprehensive and consultative process led by women she said.

Drawing attention towards failure of agencies in implementation existing laws against child marriage. Maliwal emphasised upon wider consultation in the matter.

The issue of raising the legal marriageable age of women in India's contentious and requires comprehensive assessment and deliberation backed by extensive research both on the implementation of the existing provisions of law as well as the implications of the proposed amendments the DCW said in the letter.

Courtesy:- Deccan Herald, Dated: 05.01.2022

3. ಸಂಸತ್ತಿನ 400 ಸಿಬ್ಬಂದಿಗೆ ಕೋವಿಡ್

ಸಂಸತ್ತಿನ ಸುಮಾರು 400 ಸಿಬ್ಬಂದಿಗೆ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿದೆ. ಇದರ ಹಿಂದೆಯೇ ಸಿಬ್ಬಂದಿ ಹಾಜರಾತಿಗೆ ಸಂಬಂಧಿಸಿದ ಸರ್ಕಾರ ವಿವಿಧ ನಿರ್ಬಂಧ ಹೇರಿದೆ.

ಮೂಲಗಳ ಪ್ರಕಾರ, ರಾಜ್ಯಸಭೆಯ 65, ಲೋಕಸಭೆಯ 200 ಮಂದಿ ಸಿಬ್ಬಂದಿಗೆ ಸೋಂಕು ದೃಡಪಟ್ಟಿದೆ. ಅಲ್ಲದೆ, ಇತರೆ 133 ಸಿಬ್ಬಂದಿಗೂ ಸೋಂಕು ಇರುವುದು ಪತ್ತೆಯಾಗಿದೆ.

ಬಜೆಟ್ ಅಧಿವೇಶನ ಆರಂಭಕ್ಕೂ ಮುನ್ನ ಈ ಬೆಳವಣಿಗೆ ನಡೆದಿದೆ. ಬಜೆಟ್ ಅಧಿವೇಶನ ಸಾಮಾನ್ಯವಾಗಿ ಜನವರಿ ಅಂತ್ಯದಲ್ಲಿ ಆರಂಭವಾಗಲಿದೆ.

ಇದರ ಹಿಂದೆಯೇ ರಾಜ್ಯಸಭೆ ಸಚಿವಾಲಯವು, ಕಾರ್ಯದರ್ಶಿ ಮತ್ತು ಅದರ ಕೆಳಹಂತದ ಸಿಬ್ಬಂದಿಯು ಮಾಸಾಂತ್ಯದವರೆಗೆ ಮನೆಯಿಂದಲೇ ಕಾರ್ಯನಿರ್ವಹಿಸಲು ಆದೇಶಿಸಿದೆ. ರಾಜ್ಯ ಸಭೆ ಅಧ್ಯಕ್ಷರು ನಿಯಂತ್ರಣ ಕ್ರಮಗಳಿಗೆ ಸೂಚಿಸಿದ್ದರು.

ಲೋಕಸಭೆ ಸಚಿವಾಲಯವು ಅಧೀನ ಕಾರ್ಯದರ್ಶಿ ಹಾಗೂ ಕೆಳಗಿನ ಹಂತದ ಶೇ.50 ರಷ್ಟು ಸಿಬ್ಬಂದಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸಬೇಕು. ಈ ಬಗ್ಗೆ ಆಯಾ ಇಲಾಖೆಗಳ ಮುಖ್ಯಸ್ಥರು ನಿರ್ಧರಿಸಬೇಕು ಎಂದು ಸೂಚಿಸಿದೆ.

ದೆಹಲಿಯಲ್ಲಿ ಲಾಕ್‌ಡೌನ್ ಇಲ್ಲ–ಸಿಎಂ: ವಲಸೆ ಕಾರ್ಮಿಕರು, ವ್ಯಾಪಾರಿಗಳಲ್ಲಿನ ಆತಂಕವನ್ನು ನಿವಾರಿಸುವ ನಿಟ್ಟಿನಲ್ಲಿ ದೆಹಲಿ ಸರ್ಕಾರವು ರಾಜಧಾನಿಯಲ್ಲಿ ಲಾಕ್‌ಡೌನ್ ಹೇರುವುದಿಲ್ಲ. ಕನಿಷ್ಠ ನಿರ್ಭಂದ ಹೇರಲಾಗುವುದು ಎಂದು ತಿಳಿಸಿದೆ. ರಾಜಧಾನಿಯಲ್ಲಿ ಕೋವಿಡ್ ತೀವ್ರಗತಿಯಲ್ಲಿ ಏರುತ್ತಿದೆ. ವಲಸೆ ಕಾರ್ಮಿಕರಿಗೆ ಲಾಕ್‌ಡೌನ್ ಭೀತಿ ಕಾಡುತ್ತಿದೆ.

ವರ್ಚುಯಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅರವಿಂದ್ ಕೇಜ್ರಿವಾಲ್ ಎಲ್ಲರೂ ಮಾಸ್ಕ್ ಧರಿಸಿದರೆ ಲಾಕ್‌ಡೌನ್ ಅಗತ್ಯವಿಲ್ಲ. ಸದ್ಯ ಆಸ್ಪತ್ರೆಗೆ ಸೇರುವವರ ಸಂಖ್ಯೆಯೂ ಕಡಿಮೆ ಇದೆ ಎಂದು ಹೇಳಿದರು.

ತಮಿಳುನಾಡಿನಲ್ಲಿ ಒಂದು ದಿನ ಲಾಕ್‌ಡೌನ್: ಕೋವಿಡ್ ತಡೆ ಕ್ರಮವಾಗಿ ತಮಿಳುನಾಡಿನಲ್ಲಿ ಒಂದು ದಿನ ಲಾಕ್‌ಡೌನ್ ಘೋಷಿಸಲಾಗಿತ್ತು. ಅಗತ್ಯ ಸೇವೆ ಹೊರತುಪಡಿಸಿ ಉಳಿದೆಲ್ಲ ಚಟುವಟಿಕೆಗಳು ಬಂದ್ ಆಗಿದ್ದವು. ಮಾರುಕಟ್ಟೆ ಸೇರಿದಂತೆ ಬಹುತೇಕ ಪ್ರದೇಶ ನಿರ್ಜನವಾಗಿದ್ದವು. ನಗರಸಾರಿಗೆ ಸೇವೆ ರದ್ದುಪಡಿಸಲಾಗಿತ್ತು.

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಸೋಮವಾರದಿಂದ ಜಾರಿಗೆ ಬರುವಂತೆ 1 ರಿಂದ 9 ನೇ ತರಗತಿಯವರೆಗೆ ರಜೆ ನೀಡಿ ಸರ್ಕಾರ ಆದೇಶ ಹೊರಡಿಸಿದೆ. ಡಿಸೆಂಬರ್ 4 ರಂದು ತರಗತಿಗಳು ಪುನರಾರಂಭಗೊಂಡಿದ್ದವು.

ಮಹಾರಾಷ್ಟ್ರದಲ್ಲಿ ಮಾರ್ಗಸೂಚಿ ಪರಿಷ್ಕರಣೆ: ಮಹಾರಾಷ್ಟ್ರ ಸರ್ಕಾರ ಭಾನುವಾರ ಕೋವಿಡ್ ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ. ಜಿಮ್ ಪಾರ್ಲರ್‌ಗಳ ಮೇಲೆ ನಿರ್ಬಂಧ ಹೇರಿದ್ದು, ಶೇ.50 ರಷ್ಟು ಹಾಜರಿಗೆ ಅವಕಾಶ ಕಲ್ಪಿಸಿದೆ. ಶನಿವಾರ, ಜಿಮ್ ಮತ್ತು ಸಲೂನ್‌ಗಳನ್ನು ಮುಚ್ಚಲು ಆದೇಶಿಸಿತ್ತು. ಲಸಿಕೆ ಪಡೆದವರು ಮಾತ್ರ ಕಾರ್ಯನಿರ್ವಹಿಸಬೇಕು ಎಂದು ಹೇಳಿದೆ.

ಶೇ.20 ವಿಮಾನಯಾನ ರದ್ದು: ಸೋಂಕು ಏರಿಕೆ ಹಿನ್ನೆಲೆಯಲ್ಲಿ ಇಂಡಿಗೋ ವಿಮಾನಯಾನ ಸಂಸ್ಥೆ ಶೇ.20 ರಷ್ಟು ಸೇವೆಯನ್ನು ರದ್ದುಪಡಿಸಿದೆ. ಜನವರಿ 31ರವರೆಗೆ ಕಾಯ್ದಿರಿಸಿದ್ದ ಟಿಕೆಟ್‌ಗೆ ಅನ್ವಯಿಸಿ, ಪ್ರಯಾಣಿಕರಿಗೆ ಮಾರ್ಚ್ 31ರ ವರೆಗೆ ಟಿಕೆಟ್ ವ್ಯತ್ಯಾಸದ ಮೊತ್ತ ವಿನಾಯಿತಿ ನೀಡಲಾಗುತ್ತದೆ ಎಂದು ತಿಳಿಸಿದೆ.

ಹಿಮಾಚಲ ಪ್ರದೇಶದಲ್ಲಿ ಕಾರ್ಯಕ್ರಮಗಳು ರದ್ದು: ಕೋವಿಡ್ ಸೋಂಕು ತಡೆ ಕ್ರಮವಾಗಿ ಜನವರಿ 24ರ ವರೆಗೆ ಎಲ್ಲ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಿಗೆ ಹಿಮಾಚಲ ಪ್ರದೇಶ ಸರ್ಕಾರ ನಿರ್ಭಂಧ ಏರಿದೆ, ಅಲ್ಲದೆ, ಸರ್ಕಾರಿ ಕಛೇರಿಗಳಲ್ಲಿ ಐದು ದಿನದ ಕೆಲಸ ಅವಧಿಯನ್ನು ಜಾರಿಗೊಳಿಸಿದೆ.

ಮುಖ್ಯಮಂತ್ರಿ ಜೈರಾಂ ಠಾಕೂರ್ ಜನವರಿ 15ರ ವರೆಗೆ ತಮ್ಮ ಎಲ್ಲಾ ಕಾರ್ಯಕ್ರಮ ರದ್ದುಪಡಿಸಿದ್ದಾರೆ. ರಾಜ್ಯದಲ್ಲಿ 12 ದಿನದಲ್ಲಿ 3,000 ಪ್ರಕರಣ ವರದಿಯಾಗಿದ್ದು, ಈ ಅವಧಿಯಲ್ಲಿ ಎಂಟು ಜನರು ಮೃತಪಟ್ಟಿದ್ದಾರೆ.

ಸಂಸದ ವರುಣ್ ಗಾಂಧಿಗೆ ಕೋವಿಡ್: ಬಿಜೆಪಿ ಸಂಸದ ವರುಣ್ ಗಾಂಧಿ ಅವರಿಗೆ ಕೋವಿಡ್ ದೃಢಪಟ್ಟಿದೆ. ಈ ಕುರಿತು ಅವರು ಟ್ವೀಟ್ ಮಾಡಿದ್ದಾರೆ.

ಐದು ರಾಜ್ಯಗಳಿಗೆ ಚುನಾವಣೆ ಆಯೋಗ ಚುನಾವಣೆ ಘೋಷಿಸಿದೆ. ಅಭ್ಯರ್ಥಿಗಳು, ರಾಜಕೀಯ ಪಕ್ಷಗಳ ಕಾರ್ಯಕರ್ತರು ಮುಂಜಾಗ್ರತೆಯಾಗಿ ಕೋವಿಡ್ ಲಸಿಕೆ ಪಡೆಯುವಂತೆಯೂ ನೋಡಿಕೊಳ್ಳಬೇಕು ಎಂದಿದೆ.

ಆಧಾರ:–ಪ್ರಜಾವಾಣಿ, ದಿನಾಂಕ:10.01.2022

4. Parl panel invites feedback on bio diversity bill

A Parliamentary panel has invited suggestions from all stakeholders regarding the contentious Biological Diversity Amendment Bill 2021.

The panel headed by BJP member Sanjay Jaiswal issued a communique seeking suggestions from the general public, experts and other stakeholders within 15 days. The comments will become part of the minute of the Panel's deliberations.

The step was taken after the bill was referred to a joint committee of Parliament following objections by experts and a section of the opposition to some provisions of the crucial legislation. The bill was tabled in the Lok Sabha on December 16.

Congress leader Jairam Ramesh had registered a strong protest and wanted the legislation to be referred to the department-related standing on environment, forest and science and technology instead of a select committee. He had his displeasure known to Lok Sabha speaker Om Birla.

Experts also felt that the legislation warranted comprehensive public security before becoming a law. The main criticism is that the bill has been brought to benefit only the Ayush industry.

The legislation seeks to amend the Biological Diversity Act, 2002, allowing traditional medical practitioners to access medicinal plants for research without informing the biodiversity boards to fast-track getting patents on such studies and legalising certain practices.

The Biological Diversity Act, 2002 fulfilled India's obligation under Convention on Biological Diversity 1992, ratified in 1994. A three-tier structure of National Biodiversity Authority, State Biodiversity Boards and Biodiversity Management Committees is in place to protect the biological resources.

Courtesy:- Indian Express, Dated: 17.01.2022

5. ಸಂಸತ್ತಿನ ಬಜೆಟ್ ಅಧಿವೇಶನಕ್ಕೆ ಈ ಬಾರಿ ಪಾಳಿ ಪದ್ಧತಿ

ಸಂಸತ್ತಿನ ಬಜೆಟ್ ಅಧಿವೇಶನ ಮೊದಲ ಹಂತದಲ್ಲಿ ಸಂಸತ್ತಿನ ಉಭಯ ಸದನಗಳ ಕಲಾಪ ಪಾಳಿ ಪದ್ಧತಿಯಲ್ಲಿ ನಡೆಯಲಿದೆ. ರಾಜ್ಯ ಸಭೆ ಕಲಾಪ ಬೆಳಗಿನ ಅವಧಿ ಮತ್ತು ಲೋಕಸಭೆ ಕಲಾಪ ಮಧ್ಯಾಹ್ನ ನಡೆಯಲಿದೆ.

ಕೋವಿಡ್ ಮೂರನೇ ಅಲೆ ಹಿನ್ನೆಲೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಬಜೆಟ್ ಅಧಿವೇಶನ ಇದೇ 31ರಂದು ಶುರುವಾಗಲಿದೆ. ಆ ದಿನ ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾಷಣ ಮಾಡುವರು.

ಕೋವಿಡ್ ಹಿನ್ನೆಲೆಯಲ್ಲಿ ಸದಸ್ಯರ ಆಸನ ವ್ಯವಸ್ಥೆಯಲ್ಲಿ ಬದಲಾವಣೆ ಆಗಿದೆ. ಜಂಟಿ ಅಧಿವೇಶನ ದಿನ ಮೊದಲ ಬಾರಿಗೆ ಸೆಂಟ್ರಲ್ ಸಭಾಂಗಣದ ಜೊತೆಗೆ, ರಾಜ್ಯಸಭೆ, ಲೋಕಸಭೆ ಗ್ಯಾಲರಿಗಳಲ್ಲೂ ಆಸನ ವ್ಯವಸ್ಥೆಯಾಗಿದೆ.

ಜನವರಿ 31ರಂದು ರಾಷ್ಟ್ರಪತಿ ಭಾಷಣದ ಬಳಿಕ ಲೋಕಸಭೆಯು ಅರ್ಧಗಂಟೆ ಕಲಾಪ ನಡೆಸಲಿದ್ದು, ಆರ್ಥಿಕ ಸಮೀಕ್ಷೆ ವರದಿ ಮಂಡನೆಯಾಗಲಿದೆ. ರಾಜ್ಯಸಭೆ ಕಲಾಪ ಮಧ್ಯಾಹ್ನ 2.30ಕ್ಕೆ ಶುರುವಾಗಲಿದ್ದು, ರಾಷ್ಟ್ರಪತಿಗಳ ಭಾಷಣದ ಪ್ರತಿ ಮಂಡಿಸಲಾಗುತ್ತದೆ.

ಫೆಬ್ರವರಿ 1 ರಂದು ಲೋಕಸಭೆ ಕಲಾಪವು ಬೆಳಿಗ್ಗೆ 11 ಗಂಟೆಗೆ ಸೇರಲಿದ್ದು, 2022–23ನೇ ಸಾಲಿನ ಬಜೆಟ್ ಮಂಡನೆಯಾಗಲಿದೆ. ಲೋಕಸಭೆ ಅಧಿವೇಶನದ ಬಳಿಕ ರಾಜ್ಯಸಭೆಯಲ್ಲಿ ಬಜೆಟ್ ಪ್ರತಿ ಮಂಡಿಸಲಾಗುತ್ತದೆ.

ಫೆಬ್ರವರಿ 2 ರಿಂದ ರಾಜ್ಯಸಭೆಯ ಕಲಾಪ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆದರು, ಲೋಕಸಭೆಯ ಕಲಾಪವು ಸಂಜೆ 4 ಗಂಟೆಯಿಂದ ರಾತ್ರಿ 9 ಗಂಟೆಯವರೆಗೂ ನಡೆಯಲಿದೆ. ಕಲಾಪದ ಅವಧಿಯಲ್ಲಿ ಸದಸ್ಯರಿಗೆ ಗ್ಯಾಲರಿಯಲ್ಲಿಯೂ ಆಸನ ವ್ಯವಸ್ಥೆಯನ್ನು ಮಾಡಲಾಗಿದೆ.

ಬಜೆಟ್ ಅಧಿವೇಶನದ ಮೊದಲ ಹಂತದ ಅವಧಿಗಷ್ಟೇ ಈ ಆಸನ ವ್ಯವಸ್ಥೆ ಇರುತ್ತದೆ.

ಆಧಾರ:–ಪ್ರಜಾವಾಣಿ, ದಿನಾಂಕ:25.01.2022

6. House panel to take up plea to disqualify 2 MPs

Lok Sabha Speaker Om Birla has referred petitions submitted by the Trinamool Congress and the YSR Congress Party under the antidefection law against Sisir Adhikari and K.Raghu Rama Krishna Raju, respectively, to the Privileges Committee. Mr. Birla's move comes 18 months after YSRCP and nearly 7 months after the Trinmool had originally moved the Petitions.

The YSRCP had written to Mr. Birla seeking to disqualify Mr.Raju, Lok Labha member for Narasapuram, in July 2020, for publicly criticising the Andhra Pradesh government led by CM Jagan Mohan Reddy.

Mr.Raju it was believed was headed to the BJP. However he has not formally joined any other political outfit. The YSRCP has been pursuing the disqualification petition assiduously with the Speaker and has been upset with the delay.

Mr.Adhikari, Lok Sabha member for Kanthi in West Bengal, quit the Trinamool to join the BJP last March in the run-up to the Assembly election. His son, Suvendu Adhikari, defeated Chief Minister Mamata Banerjee in Nandigram in May last. Ms.Banerjee was later elected to the Assembly from Bhabanipur in a by-election.

Privileges Committee: Soon after the election the Trinamool Congress's Lok Sabha leader Sudip Bandyopadhyay had written to Mr.Birla seeking to disqualify Mr.Adhikari under the antidefection law.

Both the petitions are now with the Privileges committee headed by BJP MP from Jharkhand, Sunil Kumar Singh.

Courtesy:- The Hindu, Dated: 30.01.2022

7. ಇಂದಿನಿಂದ ಸಂಸತ್ ಬಜೆಟ್ ಅಧಿವೇಶನ

ಇಂದಿನಿಂದ ಸಂಸತ್ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಕೃಷಿಕರು ಎದುರಿಸುತ್ತಿರುವ ಸಂಕಷ್ಟ, ಪೆಗಾಸಸ್ ಸಾಫ್ಟ್‌ವೇರ್ ಬೇಹುಗಾರಿಕೆ, ಚೀನಾ ಅತಿಕ್ರಮಣದ ವಿಷಯಗಳನ್ನು ಇರಿಸಿಕೊಂಡು ಸರ್ಕಾರವನ್ನು ಹಣಿಯಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ. ರಾಷ್ಟ್ರಪತಿ ರಾಮನಾಥ ಕೋವಿಂದ ಜಂಟಿ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಅಧಿವೇಶನ ಚಾಲನೆಗೊಳ್ಳಲಿದ್ದು, ಮಧ್ಯಾಹ್ನದ ಕಲಾಪದಲ್ಲಿ ವಿತ್ತ ಸಚಿವೆ ನಿರ್ಮಾಲಾ ಸೀತಾರಾಮನ್ ಆರ್ಥಿಕ ಸಮೀಕ್ಷೆ ಮಂಡಿಸಲಿದ್ದಾರೆ. ಮಂಗಳವಾರ 2022–23ನೇ ಸಾಲಿನ ಅಯವ್ಯಯ ಮಂಡನೆ ಆಗಲಿದೆ.

ಕೋವಿಡ್ ಕಾರಣ ಲೋಕಸಭೆ ಮತ್ತು ರಾಜ್ಯಸಭೆಗಳು ಪಾಳಿಯಲ್ಲಿ ಕಾರ್ಯನಿರ್ವಹಿಸಲಿವೆ. ಫೆಬ್ರವರಿ 2 ರಿಂದ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ರಾಜ್ಯಸಭೆ, ಮಧ್ಯಾಹ್ನದಿಂದ ರಾತ್ರಿಯವರೆಗೆ ಲೋಕಸಭೆ ಕಲಾಪ ನಡೆಯಲಿದೆ. ಬುಧವಾರದಿಂದ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಚರ್ಚೆ ನಡೆಯಲಿದ್ದು, ಫೆಬ್ರವರಿ 7 ರಂದು ಪ್ರಧಾನಿ ನರೇಂದ್ರ ಮೋದಿ ಈ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ದಾಖಲಿಸುವ ಸಾಧ್ಯತೆ ಇದೆ. ಬಜೆಟ್ ಅಧಿವೇಶನದ ಮೊದಲ ಚರಣ ಫೆಬ್ರವರಿ 11ಕ್ಕೆ ಮುಗಿಯಲಿದ್ದು, ಎರಡನೇ ಹಂತದಲ್ಲಿ ಮಾರ್ಚ್ 14 ರಿಂದ ಏಪ್ರಿಲ್ 8ರವರೆಗೆ ನಡೆಯಲಿದೆ.

ಒಟ್ಟಾರೆ ಈ ಬಜೆಟ್ ಅಧಿವೇಶನದಲ್ಲಿ ಒಟ್ಟು 29 ಕಲಾಪ ನಡೆಯಲಿದ್ದು, ಪ್ರತಿ ದಿನ ವಾಡಿಕೆಗಿಂತ ಒಂದು ತುಸು ಕಡಿಮೆ ಕಾಲ ಉಭಯ ಸದನಗಳು ಕಾರ್ಯನಿರ್ವಹಿಸಲಿವೆ. ರಾಜ್ಯಸಭೆಯಲ್ಲಿ ಶೂನ್ಯ ವೇಳೆಯ ಕಲಾಪವನ್ನು 30 ನಿಮಿಷಗಳಿಗೆ ಸೀಮಿತ ಮಾಡಲಿದೆ. ಮೊದಲ ಚರಣದಲ್ಲಿ 10, 2ನೇ ಚರಣದಲ್ಲಿ 19 ಕಲಾಪಗಳನ್ನು ನಿಗದಿ ಮಾಡಲಾಗಿದೆ. ಒಟ್ಟಾರೆ ಕಲಾಪದ ಅವಧಿ ಸುಮಾರು 80 ತಾಸು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ:–ವಿಜಯವಾಣಿ, ದಿನಾಂಕ:31.01.2022

8. ಸಂಘಟಿತ ಯತ್ನದಿಂದ ದೇಶದ ಅಭಿವೃದ್ಧಿ

ಕೋವಿಡ್ ಸಾಂಕ್ರಾಮಿಕದ ವಿರುದ್ಧ ಹೋರಾಟ, ರೈತರಿಂದ ದಾಖಲೆ ಕೃಷಿ ಉತ್ಪನ್ನ ಉತ್ಪಾದನೆ ಮತ್ತು ಆಂತರಿಕ ಭದ್ರತೆ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳು ದೇಶದ ಮಹತ್ವಾಕಾಂಕ್ಷಿ ಗುರಿ ಮುಟ್ಟುವ ದಾರಿಯಲ್ಲಿ ಸಂಘಟಿತ ಸಾಧನೆಗಳು ಎಂದು ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಬಣ್ಣಿಸಿದ್ದಾರೆ.

ಬಜೆಟ್ ಅಧಿವೇಶನದ ಮೊದಲ ದಿನ ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ಸುಮಾರು 50 ನಿಮಿಷ ಮಾತನಾಡಿದ ಕೋವಿಂದ್, ಕೇಂದ್ರ ಸರ್ಕಾರದ ವಿವಿಧ ಸಾಧನೆಗಳನ್ನು ಜನರ ಮುಂದಿಡುವ ಪ್ರಯತ್ನ ಮಾಡಿದರು.

ಭಾಷಣದ ಪ್ರಮುಖಾಂಶ: ಭಾರತ ತನ್ನ ಹಕ್ಕು ಪಡೆಯಲು ಹೋರಾಡಿದ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರಿಗೆ ನಾನು ನಮಿಸುತ್ತೇನೆ. ಜೊತೆಗೆ ಭಾರತದ ಅಭಿವೃದ್ಧಿಯ ಹಾದಿಗೆ ನೆರವು ನೀಡಿದ ವ್ಯಕ್ತಿಗಳನ್ನು ಸ್ಮರಿಸುತ್ತೇನೆ. ರೂ.64,000 ಕೋಟಿ ವೆಚ್ಚದ ಪಿಎಂ. ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಯೋಜನೆಯು, ದೇಶವನ್ನು ಭವಿಷ್ಯದ ಆರೋಗ್ಯ ಸಂಕಷ್ಟ ಎದುರಿಸಲು ಸನ್ನದ್ಧಗೊಳಿಸಲಿದೆ.

ಕೋವಿಡ್ ಸಾಂಕ್ರಾಮಿಕ ವಿಶ್ವದ ಪ್ರತಿಯೊಬ್ಬರನ್ನೂ ತೊಂದರೆಗೆ ಗುರಿ ಮಾಡಿದೆ. ಭಾರತ ಕೂಡಾ ಈ ಅವಧಿಯಲ್ಲಿ ಹಲವರನ್ನು ಕಳೆದುಕೊಂಡಿದೆ. ಆದರೆ, ಈ ಹಂತದಲ್ಲಿ ಕೇಂದ್ರ ರಾಜ್ಯ, ಸ್ವಚ್ಛತಾ ಕಾರ್ಯಕರ್ತರು ಒಂದಾಗಿ ಕೆಲಸ ಮಾಡಿದ್ದು ಪ್ರಜಾಪ್ರಭುತ್ವಕ್ಕೆ ಉದಾಹರಣೆ, ನಾವು ಕೇವಲ ಒಂದು ವರ್ಷದಲ್ಲಿ 150 ಕೋಟಿ ಡೋಸ್ ಲಸಿಕೆ ನೀಡಿದ್ದೇವೆ. ಶೇ.90ರಷ್ಟು ಅರ್ಹ ನಾಗರಿಕರು ಮೊದಲ ಡೋಸ್ ಪಡೆದುಕೊಂಡಿದ್ದಾರೆ. ಮುಂಜಾಗ್ರತಾ ಡೋಸ್‌ಗಳನ್ನೂ ನೀಡಲಾಗುತ್ತಿದೆ. ಭಾರತದ ಲಸಿಕೆಗಳು ಕೋಟ್ಯಂತರ ಜನರ ಜೀವ ಕಾಪಾಡಿದೆ.

ಪ್ರಜಾಪ್ರಭುತ್ವವೆಂದರೆ ಪ್ರತಿಯೊಬ್ಬರ ಭಾವನೆಗಳನ್ನು ಗೌರವಿಸುವುದು. ನಮ್ಮ ಸರ್ಕಾರ ಪ್ರತಿಯೊಬ್ಬರಿಗೂ ನ್ಯಾಯ ದೊರಕಿಸುವತ್ತ ಕಾರ್ಯನಿರ್ವಹಿಸುತ್ತಿದೆ. ಪದ್ಮ ಪ್ರಶಸ್ತಿಗಳನ್ನು ಜಾತಿ, ಧರ್ಮ ನೋಡದೇ ಕೊಡಲಾಗುತ್ತಿದೆ. ಇದು ವೈವಿಧ್ಯತೆಯಲ್ಲಿ ಏಕತೆಗೆ ಒಂದು ಉದಾಹರಣೆ.

ಕೇಂದ್ರ ಸರ್ಕಾರದ ನೂತನ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕ ಭಾಷೆಗಳನ್ನು ಉತ್ತೇಜಿಸಲಾಗುತ್ತಿದೆ. ಎಲ್ಲಾ ಭಾಷೆಗಳಲ್ಲೂ ಅರ್ಹತಾ ಪರೀಕ್ಷೆಗಳನ್ನು ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ದೇಶದ 10 ರಾಜ್ಯಗಳ 19 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಇದೀಗ 6 ಭಾಷೆಗಳಲ್ಲಿ ಶಿಕ್ಷಣ ನೀಡುತ್ತಿದೆ.

ಮನೆ ಮನೆಗೂ ನೀರು ಯೋಜನೆಯಡಿ ಇದುವರೆಗೂ 6 ಕೋಟಿಗೂ ಹೆಚ್ಚಿನ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಭಾರತದ ಕೃಷಿ ವಲಯದ ರಫ್ತಿನ ಪ್ರಮಾಣ ರೂ.3 ಲಕ್ಷ ಕೋಟಿ ದಾಟಿದೆ. ಕೋವಿಡ್ ಸಾಂಕ್ರಾಮಿಕದಲ್ಲೂ ದೇಶದ ರೈತ ಸಮುದಾಯ 30 ಕೋಟಿ ಟನ್ ಆಹಾರ ಧಾನ್ಯ ಮತ್ತು 33 ಕೋಟಿ ಟನ್‌ನಷ್ಟು ತೋಟಗಾರಿಕಾ ಉತ್ಪನ್ನಗಳನ್ನು ಬೆಳೆದಿತ್ತು.

- ಕೋವಿಡ್ ಸಾಂಕ್ರಾಮಿಕ ವಿರುದ್ಧ ದೇಶದ ಸಂಘಟಿತ ಹೋರಾಟ
- ರೈತರಿಂದ ದಾಖಲೆಯ ಕೃಷಿ ಉತ್ಪಾದನೆ
- ಆಂತರಿಕ ಭದ್ರತೆ ಹೆಚ್ಚಿಸಲು ಸರ್ಕಾರದ ದಿಟ್ಟ ಕ್ರಮ: ಶಾಂತಿ ಸುವ್ಯವಸ್ಥೆ
- ಆರೋಗ್ಯ ಮೂಲಸೌಕರ್ಯ ಹೆಚ್ಚಳದಿಂದ ಜನರ ಆರೋಗ್ಯ ರಕ್ಷಣೆ
- ಕನ್ನಡ ಸೇರಿ ಪ್ರಾದೇಶಿಕ ಭಾಷೆಗಳಲ್ಲಿ ಎಂಜಿನಿಯರಿಂಗ್ ಶಿಕ್ಷಣಕ್ಕೆ ಅವಕಾಶ

ಆಧಾರ:–ಕನ್ನಡ ಪ್ರಭ, ದಿನಾಂಕ:01.02.2022

9. Government rules our discussion on Pegasus in Parl

The government virtually ruled out a discussion on Pegasus in the Budget Session, saying that the issue is sub-judice after a string of Opposition leaders made the demand at an all party meeting.

Parliamentary Affairs Minister Pralhad Joshi also told the digital meeting chaired by Defence Minister Rajnath Singh that the priority in the first leg of the session is to hold a debate on the Motion of Thanks to the President’s Address and general discussion on Budget and that any other issue could be taken up during the second leg of the session.

This could create a road block for the smooth functioning of the session with the Opposition now armed with a report in the New York Times that claimed that India bought the controversial Israelie spy-ware.

A senior Opposition Leader alleged that the government is running away from debates on issues like Pegasus, price rise and Covid-19 handling due to the election in five states.

Sources said several Opposition leaders demanded that Pegasus, price rise Omicron, the proposed amendments on All India Services, Governor's role, NEET and federalism among others.

While Leader of Opposition in Rajya Sabha raised the opaqueness of PM-CARES among other issues sources said, Congress Lok Sabha leader Adhir Ranjan Chowdhury, National Conference's Farooq Abdullah and DMK's T.R.Balu told the meeting that their experience was that the government goes back on the promises made in such meetings.

RSP's N.K.Premachandran told the meeting that Calling Attention Motions should be taken up and he has been told by the Speaker and Lok Sabha Secretariat that ministries concerned always object to the taking of matters. He said this should go.

At the meeting, the defence minister and Joshi appealed to all parties to allow the Parliament to function smoothly.

Singh said all parties could sit together and decide on the issues that could be taken up for discussion. A consensus has emerged that the House not be stalled, he told the leaders.

In the Budget Session the government has indicated that it is likely to bring 14 Bills and six financial Items. However, no legislative business will be taken up during the first leg of the session that ends on February 11. Thirty-six leaders from 26 parties attended the meeting

Budget Session maps out next year, PM reminds MPs: As the Parliament's Budget Session started during an election season, Prime Minister Narendra Modi said polls keep happening but MPs should keep in mind that the Budget and related proceedings during this period draws a blueprint for the coming year and they should make it fruitful.

Talking to reporters just before the proceedings started, he said there are lots of opportunities for the country. There is a confidence instilled in the world for India due to its economic progress. Covid-19 vaccination programme and Made in Indian initiatives.

Elections keep coming. It is true that elections have an impact on (Parliament) Sessions and debates. But I request all MP's that elections will go on but the Budget Session draws a blueprint for an entire year and therefore, it is very important. The more fruitful we make this session; there will be better opportunities in the coming year to take the country to new economic heights he said.

Uttar Pradesh, Punjab, Manipur, Uttarkhand, Goa will be going to polls between February 10 and March 7 while the counting of votes will be on March 10.

He expressed hope that all parties will discuss issues with an open mind in Parliament to take the country to new "heights of development".

Courtesy:- Deccan Herald, Dated: 01.02.2022

10. ಕೃಷಿಗೆ ತಂತ್ರಜ್ಞಾನ, ನವೋದ್ಯಮಗಳ ಬಲ

ಕೊರೋನಾ ಸಾಂಕ್ರಾಮಿಕ ಪಿಡುಗು ತಂದೊಡ್ಡಿದ ಆರ್ಥಿಕ ಸಂಕಷ್ಟದ ಸುಳಿಯಿಂದ ದೇಶವನ್ನು ಪಾರು ಮಾಡುವಲ್ಲಿ ಕೃಷಿ ಹಾಗೂ ಸಂಬಂಧಿತ ಕ್ಷೇತ್ರ ನಿರ್ಣಾಯಕ ಪಾತ್ರವಹಿಸಿದೆ. "ಕೃಷಿ ಉನ್ನತಿಯೇ ಆರ್ಥಿಕತೆಯ ಜೀವಾಳ"ವೆಂದು ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ 2022–23ನೇ ಸಾಲಿನ ಮುಂಗಡಪತ್ರದಲ್ಲಿ ಸಾರಿದ್ದಾರೆ.

ಸ್ವಾವಲಂಬಿ ಭಾರತ ಸಾಕಾರಗೊಳಿಸುವ ನಿಟ್ಟಿನಲ್ಲಿ ಆಹಾರಭದ್ರತೆ, ವಿದೇಶಗಳಿಗೂ ರಫ್ತು, ಖಾದ್ಯ ತೈಲ ಆಮದು ಕಡಿತ, ಅನ್ನದಾತರ ಬದುಕು ಸಮೃದ್ಧಿಗೊಳಿಸುವ ಜೊತೆಗೆ ಪರಿಸರಸ್ನೇಹಿ, ಗುಣಮಟ್ಟದ ಆಹಾರ ಪದಾರ್ಥಗಳ ಉತ್ಪಾದನೆಗೆ ಪ್ರಾಶಸ್ತ್ಯ ನೀಡಲಾಗಿದೆ.

ಸ್ಥಳೀಯವಾಗಿ ಎಣ್ಣೆಕಾಳು ಬೆಳೆಯುವುದಕ್ಕೆ ಉತ್ತೇಜಿಸಲು ಸಮಗ್ರ ಯೋಜನೆ ರೂಪಿಸಲಾಗಿದೆ. ಆ ಮೂಲಕ ಆಮದು ಖಾದ್ಯ ತೈಲದ ಮೇಲಿನ ಅವಲಂಬನೆ ಕ್ರಮೇಣ ತಗ್ಗಿಸಲು ಉದ್ದೇಶಿಸಲಾಗಿದೆ. ಅರಣ್ಯ ಕೃಷಿಗೆ ಮುಂದಾಗುವ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಆರ್ಥಿಕ ನೆರವು ಘೋಷಣೆಯಾಗಿದೆ.

ಸಾವಯವ ಕೃಷಿ, ಶೂನ್ಯ ಬಂಡವಾಳ ಅಥವಾ ಸಹಜ ಕೃಷಿಗೆ ಸರ್ಕಾರ ಗಮನ ನೀಡಿದೆ. ಇದರಿಂದ ಕೃಷಿ ಭೂಮಿಯ ಫಲವತ್ತತೆ ಉಳಿದು, ಉತ್ಪಾದನಾ ವೆಚ್ಚ ಕಡಿತವಾಗಲಿದೆ. ರಸಗೊಬ್ಬರ ಮತ್ತು ಕ್ರಿಮಿನಾಶಕ ಬಳಕೆ ಕಡಿಮೆ ಮಾಡುವುದರಿಂದ ಪರಿಸರ ಸಂರಕ್ಷಣೆ ಸಾಧ್ಯ ಎನ್ನುವುದು ಕೇಂದ್ರದ ನಿಚ್ಚಳ ನಿಲುವು.

ನಿರೀಕ್ಷಿತ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಆಧುನಿಕ ಕೃಷಿ, ಮೌಲ್ಯವರ್ಧನೆ ಮತ್ತು ನಿರ್ವಹಣೆ, ಸಹಜ/ಶೂನ್ಯ ಬಂಡವಾಳ ಮತ್ತು ಸಾವಯವ ಕೃಷಿಗೆ ಪ್ರೋತ್ಸಾಹಿಸುವುದಕ್ಕೆ ಪಠ್ಯಕ್ರಮ ಪರಿಷ್ಕರಿಸಬೇಕು ಎಂದು ಎಲ್ಲ ರಾಜ್ಯಗಳ ಕೃಷಿ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ. ರೈತರ ಜಮೀನಿನ ಫಲವತ್ತತೆ ಸಂರಕ್ಷಣೆ ಮತ್ತು ರಾಸಾಯನಿಕ ಮುಕ್ತ ನೈಸರ್ಗಿಕ ಕೃಷಿಗೆ ಪ್ರೋತ್ಸಾಹ ನೀಡುವ ಭಾಗವಾಗಿ ಮೊದಲ ಹಂತದಲ್ಲಿ ಗಂಗಾ ನದಿತೀರದಲ್ಲಿ ಐದು ಕಿ.ಮೀ. ಉದ್ದಗಲದ ಕಾರಿಡಾರ್ ನಿರ್ಮಿಸಲು ತೀರ್ಮಾನಿಸಲಾಗಿದೆ.

ಜಲ ಸಂಪನ್ಮೂಲ ಸದ್ಬಳಕೆ ನದಿಗಳ ಜೋಡಣೆಗೆ ಸರ್ಕಾರ ಸಮ್ಮತಿಸಿದೆ. ಪ್ರತಿ ಹನಿ ನೀರು ಸದ್ಬಳಕೆ, ಭೂಮಿ ಪಲವತ್ತತೆ ಸಂರಕ್ಷಣೆ, 'ಪರ್ ಡ್ರಾಪ್ ಮೋರ್ ಕ್ರಾಪ್' ಎಂಬ ಘೋಷವಾಕ್ಯದ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಮುಂದುವರಿಸಲಾಗಿದೆ. ಕೃಷಿ, ತೋಟಗಾರಿಕೆ, ಮೀನುಗಾರಿಕೆ

ಇತ್ಯಾದಿ ಸಂಬಂಧಿತ ಚಟುವಟಿಕೆಗಳನ್ನು ಒಳಗೊಂಡ ಕಿಸಾನ್ ಉನ್ನತಿ ಯೋಜನೆಗೆ ಈ ಬಾರಿ ರೂ.7,183 ಕೋಟಿ ಅನುದಾನ ಒದಗಿಸಿದೆ. ಈಶಾನ್ಯ ಭಾರತದ ರಾಜ್ಯಗಳಲ್ಲಿ ವೈಜ್ಞಾನಿಕ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲು ರೂ.45 ಕೋಟಿ ಕಾದಿರಿಸಿದೆ.

ನದಿ ಜೋಡಣೆ, ನೀರಾವರಿಗೆ ಹೊಸ ಆಯಾಮ:

- ಪ್ರಾಯೋಗಿಕ ಹಂತದಲ್ಲಿ ಕೆನ್–ಬೆತ್ವಾ ನದಿಗಳ ಜೋಡಣೆ ಅನುಷ್ಠಾನಕ್ಕಾಗಿ ರೂ. 1,400 ಕೋಟಿ ಅನುದಾನ ನಿಗದಿಪಡಿಸಿ, ಜೊತೆಗೆ ಹೊಸದಾಗಿ ಐದು ನದಿಗಳ ಜೋಡಣೆಗೆ ಸಮ್ಮತಿಸಿದ್ದು, ನೀರಾವರಿ ಕ್ಷೇತ್ರಕ್ಕೆ ಹೊಸ ಆಯಾಮ ನೀಡಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.
- ಯಮುನಾ ನದಿ ಕಣಿವೆಯಡಿ ಬರುವ ಕೆನ್ ನದಿ ನೀರೆತ್ತಿ ಬೆತ್ವಾ ನದಿಗೆ ಹರಿಸುವುದು ಕೆನ್–ಬೆತ್ವಾ ನದಿ ಜೋಡಣೆ ಯೋಜನೆ ತಿರುಳು.
- ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶ ರಾಜ್ಯಗಳ ವ್ಯಾಪ್ತಿಗೆ ಬರುವ ಬುಂದೇಲ್ ಖಂಡ್ ಬರಪೀಡಿತ ಪ್ರದೇಶದ 13 ಜಿಲ್ಲೆಗಳಿಗೆ ಅನುಕೂಲವಾಗಲಿದೆ.
- ಪನ್ನಾ ಹುಲಿ ಸಂರಕ್ಷಣಾ ಪ್ರದೇಶದ 5,803 ಹೆಕ್ಟೇರ್, ಮಧ್ಯಪ್ರದೇಶದ 'ನೌರಾದೇಹಿ ವನ್ಯಜೀವಿ ಸಂರಕ್ಷಣಾ ಧಾಮ' ಮತ್ತು 'ಉತ್ತರ ಪ್ರದೇಶದ ರಾಣಿಪುರ ವನ್ಯಜೀವಿ ಸಂರಕ್ಷಣಾಧಾಮ' ಮುಳುಗಡೆಯಾಗಲಿರುವುದು ಈ ಯೋಜನೆಗಿರುವ ದೊಡ್ಡ ಸವಾಲು.

ಡಿಜಿಟಲ್ ಸ್ಪರ್ಶ: ಕೃಷಿ ಆಧುನೀಕರಣ, ಯಾಂತ್ರೀಕರಣ, ಕೊಯ್ಲೋತ್ತರ ತಂತ್ರಜ್ಞಾನ, ಮೌಲ್ಯವರ್ಧನೆ, ಮಾರ್ಕೆಟಿಂಗ್ ನೈಪುಣ್ಯ ಸಾಧಿಸುವುದಕ್ಕಾಗಿ ಡಿಜಿಟಲ್ ಸ್ಪರ್ಶ ನೀಡಲು ಕೇಂದ್ರ ನಿರ್ಧರಿಸಿದೆ. ನಬಾರ್ಡ್ ನೆರವಿನಡಿ ಸಂಯೋಜಿತ ಬಂಡವಾಳ ಹೂಡಿಕೆ, ಕೃಷಿ ಮತ್ತು ಗ್ರಾಮೀಣ ಆಧಾರಿತ ನವೋದ್ಯಮಗಳಿಗೆ ಹಣಕಾಸಿನ ಬೆಂಬಲ, ಸಕಾಲಿಕ ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿ ಬೆಸೆಯುವುದು, ರೈತ ಉತ್ಪಾದಕ ಸಂಸ್ಥೆಗಳ ತೊಡಗಿಸುವಿಕೆ, ಯಂತ್ರೋಪಕರಣಗಳ ಬಾಡಿಗೆ, ಮಾಹಿತಿ–ತಂತ್ರಜ್ಞಾನ ಆಧಾರಿತ ಉನ್ನತ ತಂತ್ರಜ್ಞಾನ ಸ್ಪರ್ಶ ನೀಡಲು ಬಯಸಿದೆ.

ಕಿಸಾನ್ ಡ್ರೋನ್: ಹೊಸ ಪ್ರಯತ್ನವಾಗಿ ಕಿಸಾನ್ ಡ್ರೋನ್ ಪರಿಚಯಿಸಲಾಗುತ್ತಿದೆ. ಬೆಳೆಗಳ ಸಮೀಕ್ಷೆ, ಕ್ರಿಮಿನಾಶಕ ಹಾಗೂ ಪೋಷಕಾಂಶಗಳ ಸಿಂಪಡಣೆಗೆ ಡ್ರೋನ್‌ಗಳನ್ನು ಬಳಸಲು ಸರ್ಕಾರ ಯೋಚಿಸಿದೆ. ಅಲ್ಲದೆ, ಎಂಟು ಭಾಷೆಗಳಲ್ಲಿ ಭೂದಾಖಲೆಗಳ ಡಿಜಿಟಲೀಕರಣ ಮಾಡಲಿದೆ. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ರೈತರಿಗೆ ಉನ್ನತ ತಂತ್ರಜ್ಞಾನ ಮತ್ತು ಡಿಜಿಟಲ್ ಸೇವೆಗಳನ್ನು ಒದಗಿಸಲಿದೆ. ಇದಕ್ಕಾಗಿ ಸಾರ್ವಜನಿಕ ಕ್ಷೇತ್ರದ ಸಂಶೋಧನೆ ಮತ್ತು ವಿಸ್ತರಣೆ ಸಂಸ್ಥೆಗಳು ಮತ್ತು ಖಾಸಗಿ ಕ್ಷೇತ್ರದ ಅಗ್ರಿಟಿಕ್ ಕಂಪನಿಗಳ ನೆರವು ಪಡೆಯಲಿದೆ. ಸ್ಥಳೀಯ ಆಹಾರಧಾನ್ಯ ಸಾಗಣೆ, ಸ್ಪರ್ಧಾತ್ಮಕ ದರ ಮತ್ತು ಮೌಲ್ಯವರ್ಧನೆಗೆ ಪೂರಕವಾಗಿ 'ಒನ್ ಸ್ಟೇಷನ್ ಒನ್ ಪ್ರೊಡಕ್ಟ್' ಯೋಜನೆ ಪ್ರಕಟಿಸಿದೆ. ರೈತರು ಮತ್ತು ವರ್ತಕರನ್ನು ಆರ್ಥಿಕವಾಗಿ ಬಲಪಡಿಸುವುದು ಮುಖ್ಯ ಉದ್ದೇಶವಾಗಿದೆ.

ಬೆಳೆಗೆ ಬೆಂಬಲ: ಬೆಂಬಲ ಬೆಲೆ ಯೋಜನೆಯಡಿ ಆಹಾರಧಾನ್ಯಗಳ ಖರೀದಿ ಪ್ರಮಾಣ, ಕಾದಿರಿಸುವ ಮೊತ್ತ ಏರುಗತಿಯಲ್ಲಿದೆ. ಬೆಂಬಲ ಬೆಲೆಯಡಿ ಗೋಧಿ, ಭತ್ತ ಖರೀದಿ ಮತ್ತಿತರ ಆಹಾರಧಾನ್ಯ ಖರೀದಿಗೆ ರೂ. 2.73 ಲಕ್ಷ ಕೋಟಿ ಕಾದಿರಿಸಲಾಗಿದೆ. 2021–22ನೇ ಸಾಲಿನಲ್ಲಿ 163 ಲಕ್ಷ ರೈತರಿಂದ 1,208 ಲಕ್ಷ ಟನ್ ಭತ್ತ, ಗೋಧಿ ಖರೀದಿಗೆ ರೂ.2.37 ಲಕ್ಷ ಕೋಟಿ ಪಾವತಿಸಲಾಗಿದೆ.

ಕೃಷಿ ಉಪಕರಣಗಳ ತಯಾರಿಗೆಕೆ ಆದ್ಯತೆ: ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಯೋಜನೆಯಡಿ ಹೊಸ ತಂತ್ರಜ್ಞಾನದೊಂದಿಗೆ ಕೃಷಿ ಉಪಕರಣಗಳನ್ನು ತಯಾರಿಸಲು ಪ್ರೋತ್ಸಾಹ, ಅನುಭವಿ ರೈತರಿಂದ ಸ್ಥಳೀಯ ಮಟ್ಟದಲ್ಲೂ ಕೃಷಿ ಉಪಕರಣಗಳ ತಯಾರಿಕೆಗೆ ಒತ್ತು.

ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ: 2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಿಸುವ ಮೂಲಕ ಕೊಯ್ಲೋತ್ತರ ಮೌಲ್ಯವರ್ಧನೆಗೆ ಆದ್ಯತೆ, ದೇಶ ವಿದೇಶದ ಮಾರುಕಟ್ಟೆ, ಬ್ರಾಂಡಿಂಗ್‌ಗೆ ಉತ್ತೇಜನ ಸಿಗಲಿದೆ.

ಅನುದಾನ ಹಂಚಿಕೆ: ಕೃಷಿ ರೈತರ ಕಲ್ಯಾಣ ಸಂಬಂಧಿತ ಚಟುವಟಿಕೆಗೆ ಹಂಚಿಕೆಯಾದ ಅನುದಾನ ರೂ.1,51,521 ಕೋಟಿ ಹಿಂದಿನ ವರ್ಷ(2021–22)ಕ್ಕೆ ಹೋಲಿಸಿದರೆ ರೂ. 20,000 ಕೋಟಿ ಏರಿಕೆಯಾಗಿದೆ.

ಆಧಾರ:–ವಿಜಯವಾಣಿ, ದಿನಾಂಕ:02.02.2022

11. ರಾಹುಲ್‌ಗೆ ಹಕ್ಕುಚ್ಯುತಿ ಬಿಸಿ

ಕೇಂದ್ರ ಸರ್ಕಾರವನ್ನು ಟೀಕಿಸುವ ಭರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಆಡಿದ ಮಾತುಗಳು ದೊಡ್ಡ ವಿವಾದಕ್ಕೆ ನಾಂದಿ ಹಾಡಿವೆ. ತಮ್ಮ ಭಾಷಣದ ಮೂಲಕ ದೇಶದ ಜನರನ್ನು ತಪ್ಪು ದಾರಿಯಲ್ಲಿ ನಡೆಯಲು ಪ್ರಚೋದಿಸಿದ ಆಪಾದನೆ ಹೊರಿಸಿ ರಾಹುಲ್ ವಿರುದ್ಧ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಹಕ್ಕುಚ್ಯುತಿ ನಿಲುವಳಿ ಮಂಡಿಸಲು ನೋಟಿಸ್ ನೀಡಿದ್ದಾರೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಕೂಡ ಲಯ ತಪ್ಪಿದ ಕಾಂಗ್ರೆಸ್ ನಾಯಕನ ಮಾತಿನ ಧಾಟಿ ವಿರುದ್ಧ ಚಾಟಿ ಬೀಸಿದ್ದಾರೆ.

ರಾಷ್ಟ್ರಪತಿ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ್ದ ರಾಹುಲ್, ಮೋದಿ ಸರ್ಕಾರದ ಕಾರ್ಯಶೈಲಿ ವಿರುದ್ಧ ಕುಹುಕವಾಡಿದ್ದರು. ಭಾರತವು ರಾಜ್ಯಗಳ ಒಕ್ಕೂಟ, ಈ ಒಕ್ಕೂಟ ವ್ಯವಸ್ಥೆ ಬಗ್ಗೆಯೇ ಸಂವಿಧಾನದಲ್ಲಿ ಉಲ್ಲೇಖ ಇದೆ. ರಾಷ್ಟ್ರ ಎನ್ನುವ ಪರಿಕಲ್ಪನೆ ಬಗ್ಗೆ ಇಲ್ಲ. ಭಾರತದಲ್ಲಿ ಒಬ್ಬ ವ್ಯಕ್ತಿ ರಾಜ್ಯಗಳ ಜನತೆಯ ಮೇಲೆ ಆಡಳಿತ ನಡೆಸಲು ಸಾಧ್ಯವಿಲ್ಲ. ಭಿನ್ನ ಭಾಷೆಗಳು ಹಾಗೂ ಸಂಸ್ಕೃತಿಯ ವೈವಿಧ್ಯತೆಯನ್ನು ದಮನಿಸಲು ಆಗದು. ಇದೊಂದು ಸಹಭಾಗಿತ್ವವೇ ಹೊರತು, ಅಧಿಪತ್ಯ ಅಲ್ಲ. ಇದನ್ನೆಲ್ಲ ಮರೆತಿರುವ ಬಿಜೆಪಿ, ದಂಡ ಹಿಡಿದು ಆಡಳಿತ ಮಾಡಲು ಹೊರಟಿದೆ ಎಂದು ರಾಹುಲ್ ಆಪಾದಿಸಿದ್ದರು.

ಇದಕ್ಕೆ ದುಬೆ, ರಾಹುಲ್ ಗಾಂಧಿ ಕಟ್ಟುಕತೆಗಳನ್ನು ಸೃಷ್ಟಿ ಮಾಡುವ ನಾಯಕ. ಈತನಿಗೆ ವಾಸ್ತವ ಅರ್ಥ ಆಗುವುದೇ ಇಲ್ಲ, ಆರಾಮ ಕುರ್ಚಿಯಲ್ಲಿ ಕುಳಿತು ರಾಜಕಾರಣ ಮಾಡುವ ಸೋಗಲಾಡಿ ಮನುಷ್ಯ. ಸಂವಿಧಾನದ ಆಶಯಗಳ ಮುನ್ನುಡಿಯನ್ನೇ ಇವರು ಓದಿಲ್ಲ. ಸಂವಿಧಾನದ ಪ್ರಸ್ತಾವನೆಯು, "ನಾವು ಭಾರತದ ಜನರು, ಭಾರತವನ್ನು ಸಾರ್ವಭೌಮ ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣ ರಾಜ್ಯವಾಗಿ ರೂಪಿಸಲು ನಿರ್ಧರಿಸಿದ್ದೇವೆ" ಎಂದು ಸ್ಪಷ್ಟವಾಗಿ ಹೇಳುತ್ತದೆ. ಈ ಆಶಯದಲ್ಲಿ ಬಳಕೆಯಾಗಿರುವ 'ಗಣರಾಜ್ಯ' ಎನ್ನುವ ಪದ ಸ್ಪಷ್ಟವಾಗಿ ರಾಷ್ಟ್ರ ಎನ್ನುವುದನ್ನೇ ಸಂಕೇತಿಸುತ್ತದೆ. ಆದರೆ, ಕಾಂಗ್ರೆಸ್‌ನ ಘನತೆವೆತ್ತ ಸಂಸದನಿಗೆ ಇದರ ಅರ್ಥವಾಗದೇ ಇರುವುದು ದುರದೃಷ್ಟಕರ ಎಂದಿದ್ದಾರೆ.

"ಕೇಂದ್ರ ಸರ್ಕಾರದ ವಿದೇಶಾಂಗ ನೀತಿ ಸಹ ಸರಿ ಇಲ್ಲ. ಅದರ ಪರಿಣಾಮವಾಗಿ ಭಾರತದ ವಿರುದ್ಧ ಪಾಕಿಸ್ತಾನ–ಚೀನಾಗಳು ಒಂದಾಗಿವೆ" ಎಂದೂ ರಾಹುಲ್ ಗಾಂಧಿ ಹೇಳಿದ್ದರು. ರಾಹುಲ್ ನಿಯಂತ್ರಣ ಮೀರಿ ಮಾತನಾಡಿದ್ದಾರೆ. ಪದ ಬಳಕೆಯ ಮಿತಿಗಳೇ ಅವರಿಗೆ ಅರ್ಥವಾಗಿಲ್ಲ, ಅಥವಾ ಅರ್ಥವಾಗಿದ್ದರೂ ದುರದ್ದೇಶದ ಪಿತೂರಿ ಇರಬಹುದು. ಸಂವಿಧಾನದ ಬಗ್ಗೆ ತಪ್ಪು ಮಾಹಿತಿ ನೀಡಿ

ದೇಶದ ಜನರನ್ನು ದಾರಿ ತಪ್ಪಿಸುವ ದುರುದ್ದೇಶ ಅವರ ಮಾತಿನ ಹಿಂದಿದೆ, ಎಂದು ದುಬೆ ಹಕ್ಕುಚ್ಯುತಿ ನೋಟಿಸಿನಲ್ಲಿ ದೂರಿದ್ದಾರೆ.

ಏನಿದು ಹಕ್ಕುಚ್ಯುತಿ: ಸಂಸತ್ತಿನ ನಿಯಮಗಳ ಪ್ರಕಾರ, ವ್ಯಕ್ತಿ ಅಥವಾ ಸಂಸ್ಥೆಯು ಸದನ ಅಥವಾ ಸದಸ್ಯರು ಅಥವಾ ಸಮಿತಿಗಳ ಯಾವುದೇ ಸವಲತ್ತು, ಅಧಿಕಾರ ಮತ್ತು ರಕ್ಷಣಾತ್ಮಕ ವಿಶೇಷಾಧಿಕಾರವನ್ನು ಉಲ್ಲಂಘಿಸಿದರೆ ಅಥವಾ ನಿರ್ಲಕ್ಷಿಸಿದರೆ, ಅಂಥವರನ್ನು ಹಕ್ಕು ಉಲ್ಲಂಘನೆ ಅಥವಾ ಸದನ ಅವಹೇಳನಕ್ಕಾಗಿ ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಹಕ್ಕುಚ್ಯುತಿ ಅಥವಾ ಅಧಿಕಾರ ವ್ಯಾಪ್ತಿ ಉಲ್ಲಂಘನೆ ಯಾವುದು ಎನ್ನುವುದನ್ನು ತೀರ್ಮಾನಿಸುವ ಅಧಿಕಾರ ಸದನಕ್ಕೆ ಇದೆ. ಸದನ ಅಥವಾ ಸದನ ಸದಸ್ಯರನ್ನು ಕುರಿತಂತೆ ಸದನದ ಒಳಗೆ ಮತ್ತು ಹೊರಗೆ ಮಾಡುವ ಟೀಕೆ ಅಥವಾ ಉದ್ಧಟ ವರ್ತನೆಯು ಹಕ್ಕುಚ್ಯುತಿ ವ್ಯಾಪ್ತಿಗೆ ಒಳಪಡುತ್ತದೆ. ತಪ್ಪಿತಸ್ಥರ ವಿರುದ್ಧ ಜೈಲು ಶಿಕ್ಷೆ ಅಥವಾ ಎಚ್ಚರಿಕೆ ಅಥವಾ ವಾಗ್ದಂಡನೆ ವಿಧಿಸಬಹುದಾಗಿದೆ.

ಆಧಾರ:–ವಿಜಯಕರ್ನಾಟಕ, ದಿನಾಂಕ:04.02.2022

12. Remove penal clauses from population control Bill:BJP MP

The Rajya Sabha discussed a private member Bill on population regulation moved by the Bharatiya Janata Party’s Rakesh Sinha.

During the discussion, another BJP member Vikas Mahatme sought the removal of penal clauses from the Bill stating that if a family was penalised for more than two children then the third child would develop a feeling that he is an unwanted child. This is a very dangerous thought for the nation. Therefore, I say we can do something else instead of penalising he said. Mr.Mahatme he said though he supported the Bill, he felt it could encourage sex selection and would lead to female foeticide.

Mr.Mahatme said efforts should be made to achieve population control as per the vision of Prime Minister Narendra Modi.

The Delhi Municipal Corporation (Amendment) Bill, 2022 was introduced in Lok Sabha last week with the Ministry of Home Affairs (MHA) saying that the earlier trifurcation has resulted in increased financial difficulties, leaving them incapacitated in several ways.

It had also said that the experience of the past 10 years showed that the main objective of trifurcation of creating compact municipalities in Delhi to provide more efficient civic services to the public has not been achieved.

The bill is viewed in Opposition circles especially the AAP that is ruling the Delhi government, as an attempt by the BJP-led Centre to usurp the full control of the civic body once it is unified.

The polls for the three civic bodies were to be held next month but were put off at the last minute by the State Election Commission after a letter from the Centre about its intention to unify the civic bodies.

Most of the amendments related to the deletion of the proposed provision that takes the control of the civic bodies out of the Delhi government's hands and wresting it on the Centre.

Courtesy:- Deccan Herald, Dated: 30.03.2022

ಭಾಗ – 3

ಕೇಂದ್ರ ಸರ್ಕಾರದ ಸುದ್ದಿಗಳು

1. 5 ಎಕರೆ ಜಮೀನಿದ್ದರೆ ಇಡಬ್ಲ್ಯುಎಸ್ ಮೀಸಲಾತಿ ಇಲ್ಲ: ಕೇಂದ್ರ ಸರ್ಕಾರ

ಮೇಲ್ವರ್ಗದ ಮೀಸಲಾತಿಗೆ (ಇಡಬ್ಲ್ಯುಎಸ್ ಮೀಸಲು) ಈಗಿರುವ ವಾರ್ಷಿಕ ರೂ.8 ಲಕ್ಷ ಆದಾಯ ಮಿತಿಯನ್ನೇ ಈ ವರ್ಷವೂ ಪರಿಗಣಿಸಬೇಕು ಎಂದು ತ್ರಿಸದಸ್ಯ ಸಮಿತಿ ಶಿಫಾರಸ್ಸು ಮಾಡಿದೆ. ಅದನ್ನೇ ಒಪ್ಪಿಕೊಳ್ಳಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಆದರೆ, ಇದೇ ವೇಳೆ ಐದು ಎಕರೆ ಅಥವಾ ಅದಕ್ಕಿಂತ ಹೆಚ್ಚು ಕೃಷಿ ಭೂಮಿಯನ್ನು ಹೊಂದಿರುವವರನ್ನು ಅವರ ಆದಾಯ ಎಷ್ಟೇ ಆಗಿದ್ದರೂ ಮೇಲ್ವರ್ಗದ ಮೀಸಲಿನಿಂದ ಹೊರಗಿಡಬಹುದಾಗಿದೆ ಎಂದು ಹೇಳಿದೆ.

ಒಂದು ವೇಳೆ ಇದನ್ನು ಸುಪ್ರೀಂ ಕೋರ್ಟ್ ಕೂಡ ಅನುಮೋದಿಸಿದರೆ ಈ ವರ್ಷದ ಸ್ನಾತಕೋತ್ತರ ವೈದ್ಯ ಪದವೀಧರರ ನೀಟ್ (ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ) ಗೆ ಹಾದಿ ಸುಗಮವಾಗಲಿದೆ.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸರ್ಕಾರ ನೀಡುತ್ತಿರುವ ಶೇ.10 ರಷ್ಟು ಮೀಸಲಾತಿ ಪಡೆಯಲು ಕೌಟುಂಬಿಕ ವಾರ್ಷಿಕ ಆದಾಯ ರೂ.8 ಲಕ್ಷ ಒಳಗೆ ಇರುವವರನ್ನು ಮಾತ್ರ ಪರಿಗಣಿಸಬೇಕು ಎಂದು ಸಮಿತಿ ಹೇಳಿದೆ. ಭವಿಷ್ಯಕ್ಕಾಗಿ ಹೊಸ ಮಾನದಂಡವನ್ನೂ ಸೂಚಿಸಿದೆ ಎಂದು ನೀಟ್–ಪಿಜಿ ಪ್ರವೇಶಾತಿ ಕುರಿತು ವಿಚಾರಣೆ ನಡೆಸುತ್ತಿರುವ ನ್ಯಾಯಾಲಯಕ್ಕೆ ಕೇಂದ್ರ ಸರ್ಕಾರ ಪ್ರಮಾಣಪತ್ರ ಸಲ್ಲಿಸಿದೆ. ಆದರೆ, ಭವಿಷ್ಯದ ಮಾನದಷ್ಟ ಎಷ್ಟು ಎಂಬ ಸಂಗತಿಯನ್ನು ಬಹಿರಂಗಪಡಿಸಿಲ್ಲ.

2019 ರಿಂದ ಮೇಲ್ವರ್ಗದ ಮೀಸಲಿಗೆ ರೂ.8 ಲಕ್ಷ ಕೌಟುಂಬಿಕ ವಾರ್ಷಿಕ ಆದಾಯ ಮಿತಿಯನ್ನು ಅನುಸರಿಸಿಕೊಂಡು ಬರಲಾಗಿದೆ. ಈಗಾಗಲೇ ಪ್ರವೇಶಾತಿ ಕೂಡ ಆರಂಭವಾಗಿದೆ. ಈ ಸಂದರ್ಭದಲ್ಲಿ ಅದನ್ನು ಬದಲಿಸಿದರೆ ಸಮಸ್ಯೆಯಾಗುತ್ತದೆ. ಪ್ರವೇಶಾತಿ ಪ್ರಕ್ರಿಯೆಯನ್ನೇ ಹಲವು ತಿಂಗಳುಗಳ ಕಾಲ ಮುಂದೂಡಬೇಕಾಗುತ್ತದೆ. ಇದರಿಂದ ಭವಿಷ್ಯದ ಪ್ರವೇಶ, ಶೈಕ್ಷಣಿಕ ಚಟುವಟಿಕೆಗೂ ಸಮಸ್ಯೆಯಾಗಲಿದೆ. ದೇಶಾದ್ಯಂತ ವ್ಯಾಜ್ಯಗಳೂ ಸೃಷ್ಟಿಯಾಗಲಿವೆ. ಹೀಗಾಗಿ ಹೊಸ ಮಾನದಂಡವನ್ನು ಈ ವರ್ಷ ಬಳಸುವುದು ಬೇಡ, ಲಭ್ಯವಿರುವ ಮಾನದಂಡವನ್ನೇ ಮುಂದುವರಿಸುವುದು ಒಳಿತು. ಹೊಸ ಮಾನದಂಡದ ಬಗ್ಗೆ ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದ್ದು, ಮುಂದಿನ ವರ್ಷದಿಂದ ಅದನ್ನು ಬಳಸಬಹುದು ಎಂದು ಹೇಳಿದೆ.

ಆದರೆ ಆದಾಯ ಎಷ್ಟೇ ಇದ್ದರೂ ಕೃಷಿ ಭೂಮಿಯು 5 ಅಥವಾ 5 ಎಕರೆಗಿಂತ ಹೆಚ್ಚಿದ್ದರೆ ಅವರಿಗೆ ಇಡಬ್ಲ್ಯುಎಸ್ ಕೋಟಾ ಅನ್ವಯಿಸದು ಎಂದು ಪ್ರಮಾಣಪತ್ರದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ನೀಟ್ ಪರೀಕ್ಷೆ ಸಮಸ್ಯೆ: ನೀಟ್–ಪಿಜಿ ವೈದ್ಯಕೀಯ ಪರೀಕ್ಷೆಯಲ್ಲಿ ಒಬಿಸಿಗಳಿಗೆ ಶೇ.27 ಹಾಗೂ ಮೇಲ್ವರ್ಗದ ಬಡವರಿಗೆ ಶೇ.10 ಮೀಸಲು ನೀಡುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಈ ಕುರಿತು ಸಲಹೆ ನೀಡಲು ಕೇಂದ್ರ ಸರ್ಕಾರ ಸಮಿತಿ ರಚಿಸಿತ್ತು. ಅದರಿಂದಾಗಿ ನೀಟ್ ಪಿಜಿ ಕೌನ್ಸೆಲಿಂಗ್ 4 ವಾರ ಮುಂದೂಡಲಾಗಿತ್ತು.

ಆಧಾರ:–ಕನ್ನಡ ಪ್ರಭ, ದಿನಾಂಕ:03.01.2022

2. ಸುಪ್ರೀಂ ಮೇಟ್ಟಿಲೇರಿದ ಪ್ರಧಾನಿ ಭದ್ರತಾ ಲೋಪ

ನರೇಂದ್ರ ಮೋದಿ ಅವರ ಭೇಟಿ ವೇಳೆ ಭಾರಿ ಲೋಪ ಉಂಟಾದ ಘಟನೆ ಕುರಿತು ವಿಸ್ತೃತ ತನಿಖೆ ನಡೆಸಲು ಪಂಜಾಬ್ ಇಬ್ಬರು ಸದಸ್ಯರನ್ನು ಒಳಗೊಂಡ ಅತ್ಯುನ್ನತ ಸಮಿತಿಯೊಂದನ್ನು ರಚಿಸಿ 3 ದಿನದಲ್ಲಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದೆ. ಇದೇ ವೇಳೆ, ಭದ್ರತಾ ಲೋಪ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಹಿರಿಯ ವಕೀಲರು ಅರ್ಜಿ ಸಲ್ಲಿಸಿದ್ದು ವಿಚಾರಣೆ ನಡೆಸುವುದಾಗಿ ಕೋರ್ಟ್ ಹೇಳಿದೆ.

ರಾಜಕೀಯ ದುರುದ್ದೇಶದಿಂದ ಪಂಜಾಬ್ ಸರ್ಕಾರ ಪ್ರಧಾನಿ ಫ್ಲೈಓವರ್ ಮೇಲೆ ಅತಂತ್ರರಾಗುವ ಸ್ಥಿತಿಯನ್ನು ತಂದೊಡ್ಡಿದೆ ಎಂಬ ಆರೋಪಗಳು ಕೇಳಿಬಂದಿದ್ದವು. ಈ ಹಿನ್ನಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಮೇಹ್ತಾಬ್ ಸಿಂಗ್ ಹಾಗೂ ಗೃಹ–ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ ಅನುರಾಗ್ ವರ್ಮ ಅವರನ್ನೊಳಗೊಂಡ ಸಮಿತಿಯನ್ನು ಪಂಜಾಬ್ ಸರ್ಕಾರ ರಚಿಸಿದೆ. ಜೊತೆಗೆ ಕೇಂದ್ರ ಗೃಹ ಸಚಿವಾಲಯ ಸಂಸದೀಯ ಕಾರ್ಯದರ್ಶಿ, ಸುದೀರ್ ಕುಮಾರ್ ಸಕ್ಸೇನ, ಐಬಿ ಜಂಟಿ ನಿರ್ದೇಶಕ ಬಲ್‌ಬೀರ್ ಸಿಂಗ್ ಮತ್ತು ಐಜಿ ಎಸ್.ಸುರೇಶ್ ಅವರನ್ನೊಳಗೊಂಡ ಸಮಿತಿಯನ್ನು ರಚನೆ ಮಾಡಿದೆ.

ಸುಪ್ರೀಂ ವಿಚಾರಣೆ: ಪಂಜಾಬ್‌ನ ಫಿರೋಜ್‌ಪುರ ಬಳಿ ಪ್ರಧಾನಿ ಅವರ ಭದ್ರತೆಯಲ್ಲಿ ಭಾರಿ ಲೋಪವಾಗಿದೆ ಎಂದು ಹಿರಿಯ ವಕೀಲರಾದ ರಾದ ಮಣೀಂದ್ರಸಿಂಗ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ಇದನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ವಿಚಾರಣೆ ನಡೆಸುವುದಾಗಿ ಹೇಳಿತು. ಈ ನಡುವೆ ಪಂಜಾಬ್‌ನ ಗೃಹ ಸಚಿವರು ಮತ್ತು ಪೊಲೀಸ್ ಮಹಾನಿರ್ದೇಶಕರ ವಜಾ ಮಾಡಬೇಕೆಂದು ಬಿಜೆಪಿ ನಿಯೋಗ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ.

ಲೋಪ ಬಗ್ಗೆ ರಾಷ್ಟ್ರಪತಿಗೆ ಪ್ರಧಾನಿ ಮಾಹಿತಿ: ತಮ್ಮ ಪಂಜಾಬ್ ಭೇಟಿ ವೇಳೆ ಭಾರಿ ಭದ್ರತಾ ಲೋಪ ಉಂಟಾದ ಘಟನೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಭೇಟಿ ಮಾಡಿ ವಿವರಣೆ ನೀಡಿದ್ದಾರೆ. ಇದೇ ವೇಳೆ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಕೂಡ ಪ್ರಧಾನಿ ಜೊತೆ ಮಾತನಾಡಿ ಘಟನೆಯ ಕುರಿತು ತೀವ್ರ ಕಳವಳ ತೋಡಿಕೊಂಡಿದ್ದಾರೆ.

ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ರಾಷ್ಟ್ರಪತಿ ಭವನದಲ್ಲಿ ಮೋದಿ ಅವರು ಭೇಟಿಯಾದರು. ಪಂಜಾಬ್‌ನಲ್ಲಿ ಉಂಟಾದ ಭದ್ರತಾ ಲೋಪದ ಕುರಿತು ಪ್ರತ್ಯಕ್ಷ ಮಾಹಿತಿಯನ್ನು ರಾಷ್ಟ್ರಪತಿಗಳು ಪಡೆದುಕೊಂಡರು. ಭದ್ರತಾ ಲೋಪದ ಕುರಿತು ರಾಷ್ಟ್ರಪತಿಗಳು ಕಳವಳ ವ್ಯಕ್ತಪಡಿಸಿದರು ಎಂದು ರಾಷ್ಟ್ರಪತಿ ಭವನ ಟ್ವೀಟ್ ಮಾಡಿದೆ. ಈ ನಡುವೆ, ಸ್ಥಾಪಿತ ಭದ್ರತಾ ಶಿಷ್ಟಾಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಕುರಿತು ಕಠಿಣ ಕ್ರಮ ಜರುಗಿಸುವ ವಿಶ್ವಾಸವಿದೆ. ಭವಿಷ್ಯದಲ್ಲಿ ಇಂತಹ ಘಟನೆ ಮರುಕಳಿಸಬಾರದು ಎಂದು ಉಪರಾಷ್ಟ್ರಪತಿ ಕಛೇರಿ ಟ್ವೀಟ್ ಮಾಡಿದೆ.

ಪಂಜಾಬ್ ಪೊಲೀಸರ ವಿರುದ್ಧ ಕೇಂದ್ರೀಯ ವಿಚಾರಣೆ: ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ವೇಳೆ ಭಾರಿ ಭದ್ರತಾ ಲೋಪ ಉಂಟಾದ ಕಾರಣ ಪಂಜಾಬ್ ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಕೇಂದ್ರ ಸರ್ಕಾರ ಚಿಂತನೆಯಲ್ಲಿ ತೊಡಗಿದೆ.

ಈಗಾಗಲೇ ರಾಜ್ಯ ಸರ್ಕಾರ ತನಿಖೆಗೆ ಆದೇಶಿಸಿದ್ದರೂ, ಘಟನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ವಿಶೇಷ ಭದ್ರತಾ ಪಡೆ (ಎಸ್‌ಪಿಜಿ) ಕಾಯ್ದೆಯಡಿ ಕಠಿಣ ಕ್ರಮ ಜರುಗಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಇದರಡಿ ಸಂಬಂಧಿಸಿದ ಅಧಿಕಾರಿಗಳನ್ನು ದೆಹಲಿಗೆ ವಾಪಸ್ ಕರೆಸಿಕೊಳ್ಳುವುದು ಅಥವಾ ಕೇಂದ್ರೀಯ ವಿಚಾರಣೆ ಆರಂಭಿಸುವುದು ಸೇರಿದೆ ಎಂದು ಮೂಲಗಳು ತಿಳಿಸಿವೆ.

2020ರ ಡಿಸೆಂಬರ್‌ಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ.ನಡ್ಡಾ ಅವರ ವಾಹನದ ಮೇಲೆ ಟಿಎಂಸಿ ಬೆಂಬಲಿಗರು ಪಶ್ಚಿಮ ಬಂಗಾಳದಲ್ಲಿ ದಾಳಿ ನಡೆಸಿದ್ದರು. ಆ ಘಟನೆ ಸಂಬಂಧ ಐಜಿಪಿ, ಡಿಐಜಿ, ಎಸ್‌ಪಿ ದರ್ಜೆಯ ಅಧಿಕಾರಿಗಳಿಗೆ ಕೇಂದ್ರೀಯ ಸೇವೆಗೆ ನಿಯೋಜನೆಗೊಳ್ಳುವಂತೆ ಕೇಂದ್ರ ಸರ್ಕಾರ ತಾಕೀತು ಮಾಡಿತ್ತು. ಆದರೆ ಮೂವರು ಅಧಿಕಾರಿಗಳನ್ನು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಕಳುಹಿಸಿರಲಿಲ್ಲ. ಇದು ಕೇಂದ್ರ ಮತ್ತು ರಾಜ್ಯಗಳ ನಡುವೆ ಜಟಾಪಟಿಗೆ ಕಾರಣವಾಗಿತ್ತು. ಹೀಗಾಗಿ ಎರಡೂ ರಾಜ್ಯಗಳ ನಡುವೆ ಸಂಘರ್ಷ ಏರ್ಪಟ್ಟಿತ್ತು.

ಮೋದಿ ರ್‍ಯಾಲಿ ವಿಫಲಕ್ಕೆ ಖಲಿಸ್ತಾನಿ ಉಗ್ರ ಸಂಚು: ಪಂಜಾಬ್‌ನ ಫಿರೋಜ್‌ಪುರ ರ್‍ಯಾಲಿ ವಿಫಲಗೊಳಿಸಲು ಖಲಿಸ್ತಾನಿ ಉಗ್ರರು ಸಂಚು ನಡೆಸಿದ್ದ ವಿಷಯ ಬೆಳಕಿಗೆ ಬಂದಿದೆ. ಈ ಸಂಬಂಧ ರ್‍ಯಾಲಿಗೂ ಎರಡು ದಿನ ಮೊದಲು ವಿಡಿಯೋವೊಂದನ್ನು ಬಿಡುಗಡೆ ಮಾಡಿದ್ದ ಸಿಖ್ ಫಾರ್ ಜಸ್ಟಿಸ್ ಸಂಘಟನೆಯ ಮುಖ್ಯಸ್ಥ ಗುರುಪಾವತ್‌ಸಿಂಗ್ ಪನ್ನು, ಮೋದಿ ರ್‍ಯಾಲಿ ವಿಫಲಗೊಳಿಸುವಂತೆ ಕರೆ ಕೊಟ್ಟಿದಲ್ಲದೆ, ಹೀಗೆ ಮಾಡಿದವರಿಗೆ ರೂ. 1 ಲಕ್ಷ ಡಾಲರ್ (75 ಲಕ್ಷ) ಬಹುಮಾನ ಘೋಷಿಸಿದ್ದ ವಿಡಿಯೋವೊಂದು ಇದೀಗ ಬಹಿರಂಗವಾಗಿದೆ. ಜೊತೆಗೆ ಮೋದಿ ಕಾರಿಗೆ ಪ್ರತಿಭಟನಾಕಾರರು ಅಡ್ಡಗಟ್ಟಿ ಬಳಿಕವೂ ವಿಡಿಯೋ ಬಿಡುಗಡೆ ಮಾಡಿರುವ ಪನ್ನು, ಇದು ಖಲಿಸ್ತಾನಿ ಸ್ವಾತಂತ್ರ್ಯಕ್ಕಾಗಿ ರೈತರು ಆರಂಭಿಸಿದ ಸ್ವಾತಂತ್ರ್ಯ ಹೋರಾಟ ಎಂದು ಘೋಷಿಸಿದ್ದಾನೆ. ಅಲ್ಲದೆ ಈ ಹಿಂದೆ ಶಸ್ತ್ರಾಸ್ತ್ರ ಹಿಡಿದು ಬಂದ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಗೆ ಶಸ್ತ್ರಾಸ್ತ್ರದ ಮೂಲಕವೇ ಉತ್ತರ ನೀಡಿದ್ದೆವು ಎಂದು ನೆನಪಿಸಿದ್ದಾನೆ.

ಮೋದಿ ಬರ್ತಿದ್ದಾರೆಂದು ಗೊತ್ತಿರಲಿಲ್ಲ : ಪಂಜಾಬ್ ಭದ್ರತಾ ಲೋಪ ಕೇಸಿಗೆ ಹೊಸ ತಿರುವು ದೊರೆತಿದೆ. ಪ್ರಧಾನಿ ಅವರ ವಾಹನಗಳನ್ನು ತಡೆಯುವ ಯಾವುದೇ ಉದ್ದೇಶವೂ ನಮಗಿರಲಿಲ್ಲ. ಪ್ರಧಾನಿಯವರು ಈ ಹಾದಿಯಲ್ಲಿ ಬರುವ ವಿಚಾರವೇ ನಮಗೆ ತಿಳಿದಿರಲಿಲ್ಲ ಎಂದು ಹೆದ್ದಾರಿ ತಡೆ ನಡೆಸಿದ್ದ ರೈತರು ತಿಳಿಸಿದ್ದಾರೆ. ಪ್ರಧಾನಿ ರಸ್ತೆ ಮಾರ್ಗವಾಗಿ ಬರುತ್ತಾರೆ ಎಂದು ನಮಗೆ ಗೊತ್ತಿರಲಿಲ್ಲ. ಮಧ್ಯಾಹ್ನ 12.30 ರಿಂದ 1ರ ಸುಮಾರಿಗೆ ಪೊಲೀಸರು ಬಂದು ರಸ್ತೆ ಖಾಲಿ ಮಾಡಲು ಹೇಳಿದರು. ಮೋದಿ ಬರುತ್ತಾರೆ ಅಂತ ತಿಳಿಸಿದರು. ನಮ್ಮನ್ನು ತೆರವುಗೊಳಿಸಲು ಅವರೆಲ್ಲೋ ಸುಳ್ಳು ಹೇಳುತ್ತಿದ್ದಾರೆ ಎಂದು ಭಾವಿಸಿದ್ದೆವು ಎಂದಿದ್ದಾರೆ.

ಆಧಾರ:–ಕನ್ನಡ ಪ್ರಭ, ದಿನಾಂಕ:07.01.2022

3. ಸೆಂಟ್ರಲ್ ವಿಸ್ತಾ ಕಟ್ಟಡವೊಂದಕ್ಕೆ ಅನುಭವ ಮಂಟಪ ಹೆಸರು

ನವದೆಹಲಿಯಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಸಂಸತ್ ನೂತನ ಕಟ್ಟಡ ಸೆಂಟ್ರಲ್ ವಿಸ್ತಾ ಸಂಕೀರ್ಣದ ಕಟ್ಟಡವೊಂದಕ್ಕೆ ಅನುಭವನ ಮಂಟಪ ಎಂದು ನಾಮಕರಣ ಮಾಡುವ ವಿಚಾರದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ.

ವಿಧಾನಪರಿಷತ್ ಸಭಾಪತಿ ಬಸರಾಜ್ ಹೊರಟ್ಟಿ ಅವರ ಮನವಿಗೆ ರಾಷ್ಟ್ರಪತಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. 12ನೇ ಶತಮಾನದಲ್ಲಿ ಬಸವಾದಿ ಶರಣರು ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ನಿರ್ಮಿಸಿದ್ದ ಅನುಭವನ ಮಂಟಪ ಸರ್ವಜಾತಿ, ಜನಾಂಗ ಸಮುದಾಯ ಹಾಗೂ ಲಿಂಗಗಳಿಗೆ ಪ್ರಾತಿನಿಧ್ಯ ನೀಡಿ ಪ್ರಜಾಸತ್ತಾತ್ಮಕ ಮೌಲ್ಯಗಳ ವರ್ಧನೆಗೆ ಬೀಜಾಂಕುರ ಮಾಡುತ್ತಿದ್ದಾರೆ. ಬಸವಾದಿ ಶರಣರು ನಿರ್ಮಿಸಿರುವ ಅಸಂಖ್ಯಾತ ವಚನಗಳೇ ಇಂದಿನ ಸಂವಿಧಾನದ ಅನುಚ್ಛೇದಗಳಾಗಿ ರೂಪುಗೊಂಡಿರುವುದು ಹೆಮ್ಮೆಯ ವಿಷಯ. ನೂತನ ಲೋಕಸಭೆ ಸಂಕೀರ್ಣದ ಕಟ್ಟಡವೊಂದಕ್ಕೆ ಅನುಭವ ಮಂಟಪದ ಹೆಸರಿಡುವ ಮೂಲಕ ಇಂದಿನ ಯುವ ಪೀಳಿಗೆಗೆ ಪ್ರಜಾಪ್ರಭುತ್ವದ ಮೌಲ್ಯ

ಹಾಗೂ ಜ್ಞಾನ ದಾಸೋಹಕ್ಕೆ ಪ್ರೇರಣೆ ನೀಡುವಂತೆ ಬಸವರಾಜ ಹೊರಟ್ಟಿ ಅವರು ರಾಷ್ಟ್ರಪತಿಯವರಿಗೆ ಮನವಿ ಮಾಡಿದ್ದರು.

ಸಭಾಪತಿಯವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ರಾಷ್ಟ್ರಪತಿಯ ಕಛೇರಿ, ನೂತನ ಲೋಕಸಭಾ ಸಂಕೀರ್ಣದ ಕಟ್ಟಡವೊಂದಕ್ಕೆ 'ಅನುಭವ ಮಂಟಪ' ಹೆಸರಿಡುವ ಕುರಿತು ಸೂಕ್ತ ಗಮನಹರಿಸುವಂತೆ ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿ ಪತ್ರ ರವಾನಿಸಿದೆ. ರಾಷ್ಟ್ರಪತಿ ಕಛೇರಿಯ ಅಧೀನ ಕಾರ್ಯದರ್ಶಿ ಉಷಾ ಶಶಿದರನ್ ಅವರು ಈ ಕುರಿತು ಸಭಾಪತಿ ಕಛೇರಿಗೆ ಮಾಹಿತಿ ಸಲ್ಲಿಸಿದ್ದಾರೆ.

ಆಧಾರ:–ವಿಜಯವಾಣಿ, ದಿನಾಂಕ:07.01.2022

4. No PM photo in vaccination certificates in poll-bound States

Prime Minister Narendra Modi's name and photo will be removed from the COVID-19 vaccination certificates issued in the five poll bound States since the model code of conduct has come into force there, official sources said.

The Union Health Ministry would apply the necessary filters on the CoWIN platform to remove Mr.Modi's photo from the certificates issues to people in Goa, Manipur, Punjab, Uttarkhand and Uttar Pradesh, the sources said. The Election Commission of India had announced the poll schedule for the five States. Polling would take place in seven phases from February 10 to March 7 and counting would be on March 10.

Similar step: Similar changes were carried out during the Assembly elections in Assam, West Bengal, Tamil Nadu, Puducherry and Kerala last year, after the Election Commission wrote to the Health Ministry reminding it of its standing instructions against the use of photos of political leaders on government advertisements during elections.

Courtesy:- The Hindu, Dated: 10.01.2022

5. ಪ್ರತಿ ಡಿಸೆಂಬರ್ 26 ಇನ್ನು ವೀರ ಬಾಲ ದಿವಸ

ಇನ್ನು ಮುಂದೆ ಪ್ರತಿ ವರ್ಷದ ಡಿಸೆಂಬರ್ 26 ಅನ್ನು ವೀರ ಬಾಲ ದಿವಸ ಎಂದು ಆಚರಿಸಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿಯವರೇ ಘೋಷಣೆ ಮಾಡಿದ್ದಾರೆ. ಮೊಘಲ್ ಆಡಳಿತಗಾರರಿಂದ ಹತ್ಯೆಗೀಡಾದ ಸಿಖ್ ಸಮುದಾಯದ ಹತ್ತನೇ ಧರ್ಮಗುರು ಗುರುಗೋವಿಂದ ಸಿಂಗ್ ಅವರ ನಾಲ್ವರು ಮಕ್ಕಳ ಸ್ಮರಣಾರ್ಥ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ 'ನ್ಯಾಯಕ್ಕಾಗಿ' ಹುತಾತ್ಮರಾದವರಿಗೆ ಇದೊಂದು ಅರ್ಹ ಗೌರವ. ಸಿಖ್ ಸಮುದಾಯದ ಹತ್ತನೇ ಧರ್ಮಗುರು ಗುರು ಗೋವಿಂದ ಸಿಂಗ್ ಅವರ ನಾಲ್ವರು ಪುತ್ರರು ಹುತಾತ್ಮರಾಗಿದ್ದಾರೆ. ಧರ್ಮಕ್ಕಾಗಿ ಅವರು ತಮ್ಮ ಜೀವನವನ್ನೇ ತ್ಯಾಗ ಮಾಡಿದ್ದಾರೆ. ಹೀಗಾಗಿ ಪ್ರತಿ ವರ್ಷದ ಡಿಸೆಂಬರ್, 26 ಅನ್ನು ವೀರ ಬಾಲ ದಿವಸ ಎಂದು ಆಚರಿಸಲಾಗುತ್ತದೆ ಎಂದು ಬರೆದಿದ್ದಾರೆ.

ಆಧಾರ:–ಉದಯವಾಣಿ, ದಿನಾಂಕ:10.01.2022

6. ಜನವರಿ 31 ರಿಂದ ಅಧಿವೇಶನ: ಫೆ.1ರಂದು ಕೇಂದ್ರ ಬಜೆಟ್

ಬಹುನಿರೀಕ್ಷಿತ ಕೇಂದ್ರ ಮುಂಗಡಪತ್ರ ಫೆಬ್ರವರಿ 1 ರಂದು ಮಂಡನೆಯಾಗಲಿದೆ. ಬಜೆಟ್ ಅಧಿವೇಶನ ಜನವರಿ 31ಕ್ಕೆ ಆರಂಭವಾಗಲಿದ್ದು, ಏಪ್ರಿಲ್ 8 ರಂದು ಮುಕ್ತಾಯವಾಗಲಿದೆ. ಜನವರಿ 31ರಂದು ರಾಷ್ಟ್ರಪತಿಯವರು ಎರಡೂ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಭಾಷಣದ ನಂತರ ಆರ್ಥಿಕ ಸಮೀಕ್ಷೆ ಬಿಡುಗಡೆಯಾಗಲಿದೆ ಎಂದು ಲೋಕಸಭಾ ಸಚಿವಾಲಯ ಹೇಳಿದೆ.

2ನೇ ಹಂತ: ಈ ಅಧಿವೇಶನ 2 ಹಂತದಲ್ಲಿ ನಡೆಯಲಿದ್ದು, ಮೊದಲ ಹಂತದಲ್ಲಿ ಫೆ.11 ರಂದು ಮುಕ್ತಾಯವಾಗಲಿದೆ. ಮಾರ್ಚ್ 14 ರಿಂದ 2ನೇ ಹಂತ ಆರಂಭವಾಗಲಿದ್ದು 6 ರಂದು ಮುಗಿಯಲಿದೆ. ಉತ್ತರ ಪ್ರದೇಶ ಚುನಾವಣೆಗೂ ಮೊದಲು ಕೇಂದ್ರ ಬಜೆಟ್ ಮಂಡನೆಯಾಗುತ್ತಿರುವುದು ಸಾಕಷ್ಟು ಕುತೂಹಲ ಮೂಡಿಸಿದೆ.

ಕೋವಿಡ್ ನಿಯಮ ಪಾಲನೆ: ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಎಲ್ಲಾ ಸಂಸದರು ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವುದು ಕಡ್ಡಾಯ ಎಂದು ಸಚಿವಾಲಯ ಹೇಳಿದೆ. 2020ರ ಬಜೆಟ್ ಅಧಿವೇಶನ ಮೊದಲ ಬಾರಿ ಸಂಪೂರ್ಣ ಕೋವಿಡ್ ಮಾರ್ಗಸೂಚಿಗಳೊಂದಿಗೆ ನಡೆಸಲಾಗಿತ್ತು. ಆದರೆ ಈ ಬಾರಿಯ ಲೋಕಸಭೆ ಮತ್ತು ರಾಜ್ಯಸಭೆಗಳನ್ನು ಒಟ್ಟಿಗೆ ಅಥವಾ ಬೇರೆ ಬೇರೆ ನಡೆಸುವುದರ ಬಗ್ಗೆ ಇನ್ನೂ ಮಾಹಿತಿ ಲಭ್ಯವಾಗಿಲ್ಲ.

ಆಧಾರ:–ಕನ್ನಡ ಪ್ರಭ, ದಿನಾಂಕ:15.01.2022

7. ಜನವರಿ 23 ರಿಂದಲೇ ಗಣರಾಜ್ಯೋತ್ಸವ

ಇನ್ನು ಪ್ರತಿವರ್ಷದ ಜನವರಿ 23 ರಿಂದಲೇ ಗಣರಾಜ್ಯೋತ್ಸವ ಸಂಭ್ರಮ ಆರಂಭವಾಗಲಿದೆ. ಪ್ರತಿ ವರ್ಷದ ಜನವರಿ 23 ರಂದು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನವನ್ನು ಪರಾಕ್ರಮ ದಿವಸ್ ಎಂದು ಆಚರಿಸಿಕೊಂಡು ಬರಲಾಗುತ್ತಿದೆ. ಇನ್ನು ಮುಂದೆ ಗಣರಾಜ್ಯೋತ್ಸವ ಸಂಭ್ರಮಕ್ಕೆ ಪರಾಕ್ರಮ ದಿನವನ್ನೂ ಸೇರಿಸಲಾಗುತ್ತದೆ. ಕಳೆದ ವರ್ಷವಷ್ಟೇ ಕೇಂದ್ರದಲ್ಲಿರುವ ಮೋದಿ ಸರ್ಕಾರ, ನೇತಾಜಿ ಜಯಂತಿಯನ್ನು ಪರಾಕ್ರಮ ದಿನವೆಂದು ಆಚರಿಸಲು ಶುರು ಮಾಡಿತು. ಅಲ್ಲದೆ, 2021ರ ಜನವರಿ 23ರಂದು ನೇತಾಜಿ ಅವರು ಜನಿಸಿ 125 ವರ್ಷಗಳಾಗಿದ್ದರಿಂದ ಪರಾಕ್ರಮ ದಿನವೆಂದು ಕರೆಯಲು ನಿರ್ಧರಿಸಿತು. ಈಗ ನೇತಾಜಿ ಜನ್ಮದಿನವನ್ನು ಗಣರಾಜ್ಯೋತ್ಸವ ಸಂಭ್ರಮಕ್ಕೆ ಸೇರಿಸಿರುವುದು ಮಹತ್ವದ ನಡೆ ಎಂದೇ ಹೇಳಲಾಗುತ್ತಿದೆ. ಈ ಮುನ್ನ ಮೋದಿ ಸರ್ಕಾರದಲ್ಲಿ ಆಗಸ್ಟ್ 14ರಂದು ದೇಶ ವಿಭಜನೆಯ ಕರಾಳ ದಿನ, ಅಕ್ಟೋಬರ್ 31ನ್ನು ಏಕತಾ ದಿವಸ್, ನವೆಂಬರ್ 15ನ್ನು ಜನಜಾತಿಯ ಗೌರವ್ ದಿವಸ್, ನವೆಂಬರ್ 26 ಅನ್ನು ಸಂವಿಧಾನ ದಿನ, ಡಿಸೆಂಬರ್ 26 ಅನ್ನು ವೀರ ಬಾಲ ದಿವಸ್ ಎಂದು ಕರೆಯಲು ನಿರ್ಧರಿಸಲಾಗಿದೆ.

ಆಧಾರ:–ಉದಯವಾಣಿ, ದಿನಾಂಕ:16.01.2022

8. ಇಂಡಿಯಾ ಗೇಟ್ ಬಳಿ, ನೇತಾಜಿ ಪ್ರತಿಮೆ

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿರುವ ಇಂಡಿಯಾ ಗೇಟ್ ಬಳಿ ನೇತಾಜಿ ಸುಭಾಷ್‌ಚ್ಚಂದ್ರ ಬೋಸ್ ಅವರ ಪ್ರತಿಮೆ ಸ್ಥಾಪಿಸಲಾಗುತ್ತದೆ. ಜನವರಿ 23ರಂದು ಅವರ 125ನೇ ಜನ್ಮ ದಿನ ಆಚರಿಸುವ ಸಂದರ್ಭದಲ್ಲಿಯೇ ಆರಂಭದಲ್ಲಿ ಅದರ ಪ್ರತಿರೂಪ ಅನಾವರಣಗೊಳಿಸಲಾಗುತ್ತದೆ ಎಂದು ಖುದ್ದು ಪ್ರಧಾನಿ ನರೇಂದ್ರ ಮೋದಿಯವರೇ ಟ್ವೀಟ್ ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಸಿಗುವಲ್ಲಿ ನೇತಾಜಿ ಅವರ ಕೊಡುಗೆ ಮಹತ್ವದ್ದಾಗಿದೆ. ಅವರಿಗೆ ಕೃತಜ್ಞತೆ ಸಲ್ಲಿಸುವ ನಿಟ್ಟಿನಲ್ಲಿ ಪ್ರತಿಮೆ ಸ್ಥಾಪಿಸಲಾಗುತ್ತದೆ ಎಂದು ಪ್ರಧಾನಿಯವರು ಟ್ವೀಟ್‌ನಲ್ಲಿ ಬರೆದುಕೊಂಡಿದ್ದಾರೆ.

'ನೇತಾಜಿ ಅವರ 125ನೇ ಜನ್ಮ ದಿನದ ಶುಭ ಸಂದರ್ಭಕ್ಕೆ ಪೂರಕವಾಗಿ ಗ್ರಾನೈಟ್‌ನಿಂದ ತಯಾರಿಸಲಾಗಿರುವ ಪ್ರತಿಮೆಯನ್ನು ಇಂಡಿಯಾ ಗೇಟ್‌ನಲ್ಲಿ ಅನಾವರಣಗೊಳಿಸಲಾಗುತ್ತದೆ. ಅವರಿಗೆ ದೇಶ ಕೃತಜ್ಞತೆ ಸಲ್ಲಿಸುವ ದ್ಯೋತಕವಾಗಿ ಈ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬರೆದುಕೊಂಡಿದ್ದಾರೆ. ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ರವರು ಕೂಡ ಟ್ವೀಟ್ ಮಾಡಿ 'ನೇತಾಜಿ ಅವರ ಪ್ರತಿಮೆ ಸ್ಥಾಪನೆಯಾಗುವವರೆಗೆ ಅದರ ಪ್ರತಿರೂಪವನ್ನು ಕಾಣಿಸಲಾಗುತ್ತದೆ. ಜನವರಿ 23ರಂದು ನಾನು ಅವರ ಪ್ರತಿಮೆಯ ಪ್ರತಿರೂಪ ಅನಾವರಣಗೊಳಿಸುತ್ತೇನೆ. ಕಾಂಗ್ರೆಸ್ ಅವರ ಕೊಡುಗೆಗಳನ್ನು ನಿರ್ಲಕ್ಷಿಸಿತ್ತು' ಎಂದು ಬರೆದುಕೊಂಡಿದ್ದಾರೆ.

ಸರ್ಕಾರದ ನಿರ್ಧಾರವನ್ನು ನೇತಾಜಿ ಪುತ್ರಿ ಅನಿತಾ ಬೋಸ್, ಕೇಂದ್ರ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್ ರವರು ಸ್ವಾಗತಿಸಿದ್ದಾರೆ. ತೃಣಮೂಲ ಕಾಂಗ್ರೆಸ್ ಕೂಡಾ ಕೇಂದ್ರದ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದೆ.

ಆಧಾರ:–ಉದಯವಾಣಿ, ದಿನಾಂಕ:22.01.2022

9. ಕೋವಿಡ್ ಯೋಧರು, ಕೇಂದ್ರ, ಸೈನಿಕರ ಸೇವೆಗೆ ರಾಷ್ಟ್ರಪತಿ ಸಲಾಂ

73ನೇ ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ರಾಮನಾಥ್ ಕೋವಿಂದ್‌ರವರು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಕಾರ್ಯವೈಖರಿ, ದೇಶದ ಗಡಿ ಕಾಯುವ ಯೋಧರು, ಆರೋಗ್ಯ ಕಾರ್ಯಕರ್ತರ ಬಗ್ಗೆ ಮೆಚ್ಚುಗೆಗಳ ಸುರಿಮಳೆ ಸುರಿಸಿದರು.

ಮಂಗಳವಾರ ಸಂಜೆ ಭಾಷಣ ಮಾಡಿದ ರಾಷ್ಟ್ರಪತಿಯವರು ಮೈಕೊರೆಯುವ ಚಳಿಯಿಂದ ಹಿಮಾಲಯ, ಭಾರೀ ಉಷ್ಣಾಂಶವಿರುವ ಮರು ಭೂಮಿಯಂಥ ದೇಶದ ಭದ್ರತೆಗಾಗಿ ಯೋಧರು ತಮ್ಮ ಕುಟುಂಬಗಳನ್ನು ತೊರೆದು ಹಗಲಿರುಳು ಶ್ರಮವಹಿಸಿ ತಾಯಿನಾಡಿನ ರಕ್ಷಣೆ ಮಾಡುತ್ತಿದ್ದಾರೆ. ದೇಶದ ಹೆಮ್ಮೆಯ ಪರಂಪರೆಯನ್ನು ನಮ್ಮ ಭದ್ರತಾ ಸಿಬ್ಬಂದಿ ಮತ್ತು ಯೋಧರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂದರು,

ಕೊರೋನಾದಿಂದ ಆರಂಭವಾದ ಸಾಮಾಜಿಕ ಅಂತರವು ನಮ್ಮನ್ನು ಪರಸ್ಪರ ತೀರಾ ಹತ್ತಿರಕ್ಕೆ ತಂದು ನಿಲ್ಲಿಸಿದೆ. ನಾವು ಪರಸ್ಪರವಾಗಿ ಒಬ್ಬರ ಮೇಲೆ ಮತ್ತೊಬ್ಬರು ಅದೆಷ್ಟು ಅವಲಂಬಿತರಾಗಿದ್ದೇವೆ ಎಂದು ತಿಳಿಯಲು ನೆರವಾಯಿತು. ವೈದ್ಯರು, ದಾದಿಯರು ಸೇರಿದಂತೆ ಇತರರು ಕೋವಿಡ್ ವಿರುದ್ಧ ಸೆಣಸಾಡಿದರು ಎಂದು ರಾಮನಾಥ್ ಕೋವಿಂದ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಆಧಾರ:–ಕನ್ನಡ ಪ್ರಭ, ದಿನಾಂಕ:26.01.2022

10.ಒಂದು ದೇಶ, ಒಂದು ಎಲೆಕ್ಷನ್ ಪರ ಮತ್ತೆ ಮೋದಿ ಪ್ರತಿಪಾದನೆ

ಮತದಾನದ ಪ್ರಮಾಣ ಕಡಿಮೆ ಆಗುತ್ತಿರುವ, ಅದರಲ್ಲೂ ವಿಶೇಷತಃ ನಗರ ಪ್ರದೇಶದ 'ಸುರಕ್ಷಿತ' ಮತದಾರರು ಮತ ಹಾಕಲು ಮುಂದೆ ಬಾರದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದ್ದಾರೆ. ದೇಶದಲ್ಲಿ ಪ್ರಜಾಸತ್ತೆ ಬೆಳಗಬೇಕು ಎಂದರೆ ಇದು ಬದಲಾಗಬೇಕು ಎಂದು ಕರೆ ನೀಡಿದ್ದಾರೆ.

ಇದೇ ವೇಳೆ ತಮ್ಮ ಈ ಹಿಂದಿನ 'ಏಕ ದೇಶ–ಏಕ ಚುನಾವಣೆ' ಹಾಗೂ ಏಕ ಮತದಾರ ಪಟ್ಟಿ ಚಿಂತನೆಯನ್ನು ಪುನಃ ಪ್ರತಿಪಾದಿಸಿದ ಪ್ರಧಾನಿ ಪದೇ ಪದೇ ನಡೆಯುವ ಚುನಾವಣೆಗಳು ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಉಂಟು ಮಾಡುತ್ತವೆ ಎಂದಿದ್ದಾರೆ.

'ರಾಷ್ಟ್ರೀಯ ಮತದಾರರ ದಿನವಾದ ಮಂಗಳವಾರ ದೇಶದ ವಿವಿಧ ಭಾಗಗಳ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಆಡಿಯೋ ಭಾಷಣ ಮಾಡಿದ ಅವರು ದೇಶದಲ್ಲಿ ಒಂದೇ ಸಲ ಚುನಾವಣೆ ನಡೆಯುವುದು ಅಭಿವೃದ್ಧಿಗೆ ಪೂರಕ ಒಮ್ಮೆ ಲೋಕಸಭೆ, ಮತ್ತೊಮ್ಮೆ ವಿಧಾನಸಭೆ, ಇನ್ನೊಮ್ಮೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಯುವುದರಿಂದ ಮಾದರಿ ನೀತಿ ಸಂಹಿತೆ ವಿವಿಧ ಸಮಯದಲ್ಲಿ ಜಾರಿಯಾಗುತ್ತದೆ. ಸಂಹಿತೆ ಜಾರಿಯಲ್ಲಿದ್ದಾಗ ಅಭಿವೃದ್ಧಿ ಚಟುವಟಿಕೆಗೆ ಅಡ್ಡಿಯಾಗುತ್ತದೆ. ಹೀಗಾಗಿ ದೇಶದಲ್ಲಿ ಒಂದೇ ಸಲ ಈ ಎಲ್ಲ ಚುನಾವಣೆ ನಡೆದರೆ ಅಭಿವೃದ್ಧಿಗೆ ಇರುವ ಅಡ್ಡಿ ದೂರವಾಗುತ್ತದೆ' ಎಂದರು.

ಆಧಾರ:–ಕನ್ನಡ ಪ್ರಭ, ದಿನಾಂಕ:26.01.2022

11. ನರೇಗಾ ಅನುದಾನ ಕಡಿತ ಇಲ್ಲ ಎಂದ ಕೇಂದ್ರ

ಗ್ರಾಮೀಣ ವಲಯದಲ್ಲಿ ಉದ್ಯೋಗ ಸೃಷ್ಟಿಗೆ ಪೂರಕವಾದ ನರೇಗಾ ಯೋಜನೆಗೆ 2022–230 ಸಾಲಿನಲ್ಲಿ ಬಜೆಟ್ ಅನುದಾನವನ್ನು ಕಡಿತಗೊಳಿಸಿಲ್ಲ ಎಂದು ಹಣಕಾಸು ಕಾರ್ಯದರ್ಶಿ ಸೋಮನಾಥನ್ ತಿಳಿಸಿದ್ದಾರೆ.

ನರೇಗಾಗೆ 2021–22 ರ ಬಜೆಟ್‌ನಲ್ಲಿ 73,000 ಕೋಟಿ ರೂ. ನಿಗದಿಯಾಗಿತ್ತು ಮತ್ತು 2022–230 ಅಷ್ಟೇ ಮೊತ್ತವನ್ನು ಮೀಸಲಿಡಲಾಗಿದೆ. ಆದರೆ 2021ರ ಏಪ್ರಿಲ್–ಮೇನಲ್ಲಿ ಕೋವಿಡ್ ಬಿಕ್ಕಟ್ಟಿನ ಸಂದರ್ಭವಾದ್ದರಿಂದ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಲಾಗಿತ್ತು ಮತ್ತು ಒಟ್ಟಾರೆ ಅನುದಾನ ರೂ.98,000 ಕೋಟಿಗೆ ಏರಿತ್ತು ಎಂದು ಸೋಮನಾಥನ್ ಅವರು ವಿವರಿಸಿದರು. ಒಂದು ವೇಳೆ ನರೇಗಾಗೆ 2022–23ರಲ್ಲೂ ಹೆಚ್ಚುವರಿ ಅನುದಾನದ ಅಗತ್ಯ ಬಿದ್ದರೆ, ಪರಿಷ್ಕೃತ ಅಂದಾಜಿನಲ್ಲಿ ಸೇರಿಸ ಲಾಗುವುದು ಎಂದು ಅವರು ತಿಳಿಸಿದರು.

ಸಂಸತ್ತಿನಲ್ಲಿ ಮಂಡನೆಯಾದ 2022–23 ಕೇಂದ್ರ ಬಜೆಟ್‌ನಿಂದ ವ್ಯವಸ್ಥೆಯಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಬೇಡಿಕೆ ಮತ್ತು ಉದ್ಯೋಗ ಸೃಷ್ಟಿಯಾಗಲಿದೆ ಬಜೆಟ್ ಪ್ರಸ್ತಾಪಗಳಿಂದಾಗಿ ಸಾರ್ವ ಜನಿಕ ಹೂಡಿಕೆಯಲ್ಲಿ ಹೆಚ್ಚಳ ಉಂಟಾಗಲಿದೆ. ಇದು ಸಿಮೆಂಟ್, ಉಕ್ಕು, ಬಂಡವಾಳ ಸರಕುಗಳಿಗೆ ಬೇಡಿಕೆಯನ್ನು ಸೃಷ್ಟಿಸಲಿದೆ ಮತ್ತು ಉದ್ಯೋಗ ಸೃಷ್ಟಿಸಲಿದೆ ಎಂದು ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಠ್ ತಿಳಿಸಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2022–23ರಲ್ಲಿ ರೂ. 7.5 ಲಕ್ಷ ಕೋಟಿ ಸಾರ್ವಜನಿಕ ಹೂಡಿಕೆಯನ್ನು ಘೋಷಿಸಿದ್ದಾರೆ. ಇದು ಬಜೆಟ್‌ನ ಶೇ.2.9 ಪಾಲಿನಷ್ಟಾಗುತ್ತದೆ.

ಸುಮಾರು 350ಕ್ಕೂ ಹೆಚ್ಚು ಉತ್ಪನ್ನಗಳ ಮೇಲಿನ ಆಮದು ಸುಂಕ ವಿನಾಯಿತಿಯನ್ನು ಬಜೆಟ್‌ನಲ್ಲಿ ಹಿಂತೆಗೆದುಕೊಂಡಿರುವುದರಿಂದ ದೇಶಿ ಉತ್ಪಾದನೆ ಹೆಚ್ಚಳವಾಗಲಿದೆ ಎಂದು ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ ಮಂಡಳಿ ಸಿಬಿಐಸಿ ಟ್ವಿಟ್ ಮಾಡಿದೆ.

ಉದ್ಯೋಗ ಸೃಷ್ಟಿಗೆ ಕೊರತೆ: ಸ್ವದೇಶಿ ಜಾಗರಣ್ ಮಂಚ್

ಕೇಂದ್ರ ಬಜೆಟ್ 2022–23 ಬೆಳವಣಿಗೆಗೆ ಪೂರಕವಾಗಿದ್ದರೂ, ಉದ್ಯೋಗ ಸೃಷ್ಟಿಯ ನಿಟ್ಟಿನಲ್ಲಿ ಕೊರತೆ ಕಂಡುಬರುತ್ತಿದೆ ಎಂದು ಆರ್‌ಎಸ್‌ಎಸ್ ಬೆಂಬಲಿತ ಸ್ವದೇಶಿ ಜಾಗರಣ್ ಮಂಚ್ (ಎಸ್‌ಜೆಎಂ) ಪ್ರತಿಕ್ರಿಯಿಸಿದೆ.

ಬಜೆಟ್‌ನಲ್ಲಿ ಹಲವಾರು ಮೂಲ ಸೌಕರ್ಯ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ಡಿಜಿಟಲ್ ಮೂಲಸೌಕರ್‌ಯ, ಶಿಕ್ಷಣ, ಕುಡಿಯುವ ನೀರು, ಬಡವರಿಗೆ ಮನೆ ಇತ್ಯಾದಿ ವಿಚಾರಗಳಲ್ಲಿ ಪ್ರಗತಿಪರವಾಗಿದೆ.

7.5 ಲಕ್ಷ ಕೋಟಿ ರೂ.ಗಳನ್ನು ಮೂಲಸೌಕರ್ಯಕ್ಕೆ ವೆಚ್ಚ ಕೂಡ ಅಭಿವೃದ್ಧಿಪರವಾಗಿದೆ. ಹೀಗಿದರೂ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಹಾಗೂ ಉದ್ಯೋಗ ಸೃಷ್ಟಿಗೆ ಸೀಮಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದು ಕಳವಳಕಾರಿಯಾಗಿದೆ ಎಂದು ಸ್ವದೇಶಿ ಜಾಗರಣ್ ಮಂಚ್ ಹೇಳಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ: 03.02.2022

12. ಆಪರೇಷನ್ ಗಂಗಾ ಶುರು

ಉಕ್ರೇನ್‌ನಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಭಾರತೀಯರ ಪೈಕಿ 219 ಜನರ ಮೊದಲ ತಂಡ ಶನಿವಾರ ರಾತ್ರಿ ಮುಂಬೈಗೆ ಬಂದಿಳಿಯಿತು. 'ಆಪರೇಷನ್ ಗಂಗಾ' ಹೆಸರಿನ ಈ ಕಾರ್ಯಾಚರಣೆಯಲ್ಲಿ ಭಾರತೀಯರನ್ನು ಹೊತ್ತ ಏರ್ ಇಂಡಿಯಾ ವಿಮಾನ ರೊಮಾನಿಯಾದ ರಾಜಧಾನಿ ಬುಚಾರೆಸ್ಟ್‌ನಿಂದ ಮುಂಬೈಗೆ ಆಗಮಿಸಿತು. ಇನ್ನೆರಡು ವಿಮಾನಗಳು ಕೂಡ ಸ್ಥಳಾಂತರ ಕಾರ್ಯಾಚರಣೆಯಲ್ಲಿ ತೊಡಗಿದ್ದು, ಈ ಪೈಕಿ ಒಂದು ವಿಮಾನ ಬುಚಾರೆಸ್ಟ್ ನಿಂದ, ಇನ್ನೊಂದು ವಿಮಾನ ಹಂಗರಿಯ ರಾಜಧಾನಿ ಬುಡಾಪೆಸ್ಟ್ ನಿಂದ ಹೊರಡಲಿದೆ. ಶನಿವಾರ ತಡರಾತ್ರಿ ಅಥವಾ ಭಾನುವಾರ ಬೆಳಗ್ಗೆ ಭಾರತ ತಲುಪಲಿವೆ. ಉಕ್ರೇನ್‌ನಲ್ಲಿ 16,000 ಭಾರತೀಯರಿದ್ದಾರೆ. ಈ ಪೈಕಿ ಬಹುತೇಕರು ವಿದ್ಯಾರ್ಥಿಗಳಾಗಿದ್ದಾರೆ.

ಗೋಯೆಲ್ ಸ್ವಾಗತ: ವಿಮಾನ ಮುಂಬೈ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿದ್ದಂತೆಯೇ ಕೇಂದ್ರ ಸಚಿವ ಪಿಯೂಷ್ ಗೋಯೆಲ್ ವಿಮಾನ ಪ್ರವೇಶಿಸಿ ಬರಮಾಡಿಕೊಂಡರು. 'ಯೂಕ್ರೇನ್‌ನಲ್ಲಿರುವ ಎಲ್ಲ ಭಾರತೀಯರನ್ನು ವಾಪಸ್ ಕರೆತರುವ ಪ್ರಯತ್ನ ಶುರುವಾಗಿದೆ. ಯೂಕ್ರೇನ್ನಲ್ಲಿ ಬಾಕಿ ಉಳಿದವರಿಗೂ ಸರ್ಕಾರದ ಕಾರ್ಯದ ಬಗ್ಗೆ ತಿಳಿಸಿ ಧೈರ್ಯ ತುಂಬುವ ಕೆಲಸವನ್ನು ನೀವು ಮಾಡಬೇಕು. ಅವರನ್ನೂ ಹಂತ ಹಂತವಾಗಿ ಸ್ಥಳಾಂತರಿಸುವ ಕೆಲಸ ಮುಂದುವರಿಯಲಿದೆ.

12 ಕನ್ನಡಿಗರು ವಾಪಸ್: ರಾಜ್ಯ ಸರ್ಕಾರಗಳು ವೈದ್ಯ ಶಿಕ್ಷಣಕ್ಕೆ ಅಗತ್ಯ ಸೌಕರ್ಯ ಮಾಡಿಕೊಡಬೇಕು, ಹಾಗೆಯೇ ಯುವ ಜನರು ವೈದ್ಯಕೀಯ ಶಿಕ್ಷಣಕ್ಕಾಗಿ ಸಣ್ಣ ಸಣ್ಣ ದೇಶಗಳಿಗೆ ಹೋಗುವ ಬದಲು ಸ್ವದೇಶದಲ್ಲಿ ವ್ಯಾಸಂಗ ಮಾಡುವುದು ಒಳಿತು.

ಯೂಕ್ರೇನ್‌ಗೆ 27 ರಾಷ್ಟ್ರಗಳ ಬಲ : ರಷ್ಯಾ ದಾಳಿಯಿಂದ ತತ್ತರಿಸಿರುವ ಯೂಕ್ರೇನ್ ಬೆಂಬಲಕ್ಕೆ ಅಮೆರಿಕ, ಬ್ರಿಟನ್, ಕೆನಡಾ ಸೇರಿ 27 ರಾಷ್ಟ್ರಗಳು ಮುಂದೆ ಬಂದಿವೆ. ಶಸ್ತ್ರಾಸ್ತ್ರಗಳ ಜತೆಗೆ ಸೇನಾ ನೆರವು, ಔಷಧ ಪೂರೈಸಲಿವೆ. ನ್ಯಾಟೋ ರಾಷ್ಟ್ರಗಳ ಪಡೆಗಳು ಯೂಕ್ರೇನ್‌ಗೆ ತೆರಳಿ ರಷ್ಯಾ ವಿರುದ್ಧ ಸೆಣಸಲು ತೀರ್ಮಾನಿಸಿವೆ. ಈ ನಡುವೆ, ನ್ಯಾಟೋ ಸೇರದಂತೆ ಫಿನ್ಲೆಂಡ್ ಮತ್ತು ಸ್ವೀಡನ್ನಿಗೂ ಸೂಚಿಸಿರುವ ರಷ್ಯಾ, ಮಾತು ಮುರಿದರೆ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದೆ.

ವಿಶ್ವಸಂಸ್ಥೆಯಲ್ಲಿ ಭಾರತ, ಚೀನಾ ತಟಸ್ಥ : ಯೂಕ್ರೇನ್ ಮೇಲಿನ ದಾಳಿ ನಿಲ್ಲಿಸುವಂತೆ ಹಾಗೂ ತನ್ನೆಲ್ಲ ಪಡೆಗಳನ್ನು ಹಿಂತೆಗೆದುಕೊಳ್ಳುವಂತೆ ರಷ್ಯಾವನ್ನು ಒತ್ತಾಯಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಶನಿವಾರ ನಿರ್ಣಯ ಅಂಗೀಕರಿಸುವುದಕ್ಕೆ ತುರ್ತು ಸಭೆ ನಡೆಯಿತು. ಭಾರತ, ಚೀನಾ ಹಾಗೂ ಯುಎಇ ಮತದಾನದಿಂದ ದೂರ ಉಳಿಯುವ ಮೂಲಕ ತಟಸ್ಥ ನಿಲುವು ಕೈಗೊಂಡವು. ವಿಶ್ವಸಂಸ್ಥೆಯಲ್ಲಿ ಕಾಯಂ ಸದಸ್ಯತ್ವ, ವೀಟೋ ಅಧಿಕಾರ ಹೊಂದಿರುವ ರಷ್ಯಾ ವಿರುದ್ಧ ಅಮೆರಿಕ, ಅಲ್ಬೇನಿಯ ಸಲ್ಲಿಸಿದ್ದ

ನಿರ್ಣಯವನ್ನು ಮತದಾನಕ್ಕೆ ಹಾಕಲಾಯಿತು. ರಷ್ಯಾ ತನ್ನ ವಿಟೋ ಅಧಿಕಾರ ಚಲಾಯಿಸಿ 9 ನಿರ್ಣಯವನ್ನು ತಡೆದಿದೆ.

ಆಧಾರ: ವಿಶ್ವವಾಣಿ, ದಿನಾಂಕ: 27.02.2022

13. ಆಪರೇಷನ್ ಗಂಗಾ ಹೈಸ್ಪೀಡ್ : ರಕ್ಷಣೆಗೆ ರಷ್ಯಾ ನೆರವು

ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಕರೆತರಲು 'ಆಪರೇಷನ್ ಗಂಗಾ' ಕಾರ್ಯಾಚರಣೆ ನಡೆಸುತ್ತಿರುವ ಭಾರತ ಸರ್ಕಾರ, ಬುಧವಾರವೂ ತನ್ನ ಅವಿಶ್ರಾಂತ ಕಾಯಕ ಮುಂದುವರಿಸಿದೆ. ಈವರೆಗೆ 15 ವಿಮಾನಗಳಲ್ಲಿ 3389 ಜನರನ್ನು ಕರೆತರಲಾಗಿದೆ. ಇನ್ನು ಕೆಲವು ದಿನಗಳಲ್ಲಿ 31 ವಿಮಾನದಲ್ಲಿ 6300 ಜನರನ್ನು ಕರೆತರುವ ಗುರಿ ಹೊಂದಿದೆ. ಏತನ್ಮಧ್ಯೆ, ಸ್ವತಃ ಯುದ್ಧ ನಡೆಸುತ್ತಿರುವ ರಷ್ಯಾ ಕೂಡ ಭಾರತದ ರಕ್ಷಣಾ ಕಾರ್ಯಾಚರಣೆಗೆ ಸಹಕರಿಸುತ್ತಿದೆ.

ಯುದ್ಧಕ್ಕೂ ಮೊದಲು ಭಾರತ ಸರ್ಕಾರ ಸೂಚನೆ ನೀಡಿ 'ಬೇಗ ಉಕ್ರೇನ್‌ನಿಂದ ಹೊರಡಬೇಕು' ಎಂದು ಭಾರತೀಯರಿಗೆ ಸೂಚನೆ ನೀಡಿತ್ತು ಹಾಗೂ ಯುದ್ಧದ ಬಳಿಕ ವಿಮಾನದ ಮೂಲಕ ರಕ್ಷಣಾ ಕಾರ್ಯಾಚರಣೆ ನಡೆಸಿದೆ. ಈ ಎರಡೂ ಕಾರ್ಯಗಳಿಂದ ಈವರೆಗೆ ಉಕ್ರೇನ್‌ನಲ್ಲಿದ್ದ 20 ಸಾವಿರ ಜನರ ಪೈಕಿ ಶೇ.60 ಜನರು (12 ಸಾವಿರ ಜನ) ಭಾರತಕ್ಕೆ ಮರಳಿದ್ದಾರೆ ಎಂದು ಕೇಂದ್ರ ಹೇಳಿದೆ.

15 ವಿಮಾನದಲ್ಲಿ ಈವರೆಗೆ 3389 ಜನರು ವಾಪಸ್: ಈವರೆಗೆ 15 ವಿಮಾನಗಳಲ್ಲಿ 3,389 ಜನರನ್ನು ಜನರನ್ನು ಭಾರತಕ್ಕೆ ಕರೆತಂದಿದೆ. ಕಾರ್ಯಾಚರಣೆ ಆರಂಭವಾದ ಮೊದಲ ದಿನ ಶನಿವಾರ 219 ಮಂದಿ, ಭಾನುವಾರ 688 ಮಂದಿ, ಸೋಮವಾರ 489, ಮಂಗಳವಾರ 616 ಮತ್ತು ಬುಧವಾರ ಒಂದೇ ದಿನ 6 ವಿಮಾನಗಳಲ್ಲಿ 1377 ಮಂದಿ ಭಾರತಕ್ಕೆ ತಲುಪಿದ್ದಾರೆ. ರೊಮೆನಿಯಾ, ಪೋಲಂಡ್, ಹಂಗೇರಿ ಸೇರಿದಂತೆ, ಉಕ್ರೇನ್ ನೆರೆಯ ದೇಶಗಳಿಂದ ಏರ್ ಇಂಡಿಯಾ, ಇಂಡಿಗೋ, ಸ್ಪೈಸ್ ಜೆಟ್ ಮತ್ತು ಭಾರತೀಯ ವಾಯುಪಡೆಯ ವಿಮಾನಗಳು ಕಾರ್ಯಾಚರಣೆ ನಡೆಸುತ್ತಿವೆ.

ಮುಂದಿನ 31 ವಿಮಾನದಲ್ಲಿ 6300 ಜನ: ಮಾರ್ಚ್ 8ರವರೆಗೂ ಈ ಕಾರ್ಯಾಚರಣೆ ಮುಂದುವರೆಯಲಿದ್ದು, 31 ವಿಮಾನಗಳು ಮುಂದಿನ ದಿನಗಳಲ್ಲಿ 6,300 ಭಾರತೀಯರನ್ನು ಸ್ವದೇಶಕ್ಕೆ ಮರಳಿ ಕರೆತರಲಿವೆ. ರೊಮೇನಿಯಾದ ಬುಕಾರೆಸ್ಟಿಂದ 21 ವಿಮಾನಗಳು, ಹಂಗೇರಿಯ ಬುಡಾಪೆಸ್ಟ್‌ನಿಂದ 4, ಪೋಲಂಡ್‌ನ ಝೋಜವ್‌ನಿಂದ 4, ಸ್ಲೋವೋಕಿಯಾದ ಕೋಶಿಟ್ಟದಿಂದ 1 ವಿಮಾನ ಕಾರ್ಯಾಚರಣೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ. ಒಂದು ಬಾರಿಗೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಮತ್ತು ಸ್ಪೈಸ್‌ಜೆಟ್ ವಿಮಾನಗಳು 180 ಜನರನ್ನು ಹಾಗೂ ಏರ್ ಇಂಡಿಯಾ 250 ಮತ್ತು ಇಂಡಿಗೋ 216 ಜನರನ್ನು ಕರೆತರಲಿವೆ.

ವಾಯುಪಡೆ ವಿಮಾನಗಳು: ಉಕ್ರೇನ್‌ನಲ್ಲಿ ಸಿಲುಕಿಕೊಂಡಿರುವ ಭಾರತೀಯರ ರಕ್ಷಣೆಗಾಗಿ ಮಾನವೀಯ ನೆರವನ್ನು ಹೊತ್ತುಕೊಂಡು ವಾಯುಪಡೆಯ ಎಸಿ–17 ಗ್ಲೋಬ್ ಮಾಸ್ಟರ್ ವಿಮಾನ ಬುಧವಾರ ಮುಂಜಾನೆ ನವದೆಹಲಿಯಿಂದ ಹೊರಟಿದೆ. ಇಂಥ ಒಟ್ಟು 4 ಗ್ಲೋಬ್ ಮಾಸ್ಟರ್ ವಿಮಾನಗಳು ಕಾರ್ಯಾಚರಣೆ ನಡೆಸಲಿವೆ ಹಾಗೂ ವಿಮಾನ ಮರಳಿ ಬರುವಾಗ ರೊಮೇನಿಯಾ ಗಡಿಗೆ ತಲುಪಿರುವ 800 ಭಾರತೀಯರನ್ನು ಮರಳಿ ಸ್ವದೇಶಕ್ಕೆ ಕರೆತರಲಿವೆ. ರಷ್ಯಾ ದಾಳಿಯಿಂದ ಸಂಕಷ್ಟಕ್ಕೀಡಾಗಿರುವ ಉಕ್ರೇನ್ಗೆ ಮೊದಲ ಬಾರಿ ಭಾರತ ಮಾನವೀಯ ನೆರವನ್ನು ನೀಡಿದೆ. ಔಷಧ ಸೇರಿದಂತೆ ಹಲವು ಅಗತ್ಯ ವಸ್ತುಗಳನ್ನು ಭಾರತ ಉಕ್ರೇನ್ಗೆ ಕಳುಹಿಸಿಕೊಟ್ಟಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ: 03.03.2022

14. ನಾಳೆಯಿಂದ 12–14 ವರ್ಷದವರಿಗೆ ಲಸಿಕೆ

15 ರಿಂದ 18 ವರ್ಷದ ಮಕ್ಕಳಿಗೆ ಲಸಿಕೆ ನೀಡುತ್ತಿರುವಂತೆಯೇ 12–14 ವರ್ಷದವರಿಗೂ ಲಸಿಕೆ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮಾ.16ರಿಂದ ಅದನ್ನು ನೀಡಲಾಗುತ್ತದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಮನಸುಖ ಮಾಂಡವಿಯಾ ಸೋಮವಾರ ಟ್ವಿಟ್ ಮಾಡಿದ್ದಾರೆ. ಹೈದರಾಬಾದ್ ಬಯಲಾಜಿಕಲ್ ಇ ಲಿಮಿಟೆಡ್ ಸಂಶೋಧಿಸಿ, ಅಭಿವೃದ್ಧಿಪಡಿಸಿದ ಲಸಿಕೆಯನ್ನು ನೀಡಲು ನಿರ್ಧರಿಸಲಾಗಿದೆ ಎಂದು ಅವರು ಬರೆದು ಕೊಂಡಿದ್ದಾರೆ.

ಸದ್ಯ 15–18 ವರ್ಷ ವಯೋಮಿತಿಯ ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದೆ. ಮತ್ತೊಂದು ಮಹತ್ವದ ನಿರ್ಧಾರದಲ್ಲಿ 60 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಹಿರಿಯ ನಾಗರಿಕರಿಗೂ ಬೂಸ್ಟರ್ ಡೋಸ್ ನೀಡಲು ತೀರ್ಮಾನಿಸಲಾಗಿದೆ. ಇದುವರೆಗೆ ಇದ್ದ ನಿಯಮದ ಪ್ರಕಾರ ಇತರ ಆರೋಗ್ಯ ಸಮಸ್ಯೆಗಳು ಇರುವ 60 ವರ್ಷ ಮೇಲ್ಪಟ್ಟ ಹಿರಿಯರಿಗೆ ಲಸಿಕೆ ನೀಡಲಾಗುತ್ತಿದೆ. ಹೀಗಾಗಿ, 12–14 ವರ್ಷ ವಯೋಮಿತಿಯವರು, 60 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅವರ ಕುಟುಂಬ ಸದಸ್ಯರು ಸೋಂಕಿನ ವಿರುದ್ಧ ಲಸಿಕೆ ಹಾಕಿಸಿಕೊಳ್ಳಲು ಮನವರಿಕೆ ಮಾಡಬೇಕು ಎಂದು ಸಚಿವ ಮಾಂಡವಿಯಾ ಒತ್ತಾಯಿಸಿದ್ದಾರೆ. ದೇಶದಲ್ಲಿ 12–14 ವರ್ಷ ವಯೋಮಿತಿ ವ್ಯಾಪ್ತಿಯಲ್ಲಿರುವ 7.11 ಕೋಟಿ ಮಕ್ಕಳು ಇದ್ದಾರೆ. ಕೇಂದ್ರ ಸರ್ಕಾರಕ್ಕೆ ಬಯಲಾಜಿಕಲ್ ಇ ಲಿಮಿಟೆಡ್ ಇದುವರೆಗೆ 5 ಕೋಟಿ ಡೋಸ್ ಲಸಿಕೆಯನ್ನು ಪೂರೈಕೆ ಮಾಡಿದೆ. ಕಳೆದ ವರ್ಷದ ಜ.16ರಂದು ದೇಶಾದ್ಯಂತ ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಮೊದಲ ಹಂತದಲ್ಲಿ ಲಸಿಕೆ ನೀಡಲು ತೀರ್ಮಾನಿಸಲಾಗಿತ್ತು.

ಆಧಾರ: ಉದಯವಾಣಿ, ದಿನಾಂಕ: 15.03.2022

15. President confers Padma Shri award on 3 personalities from Karnataka

President Ram Nath Kovind conferred the Padma Shri award on three distinguished persons from Karnataka, including renowned Gamaki H R Keshavamurthy.

Abdul Khadar Nadakattin from Dharwad and Amai Mahalinga Naik from Dakshina Kannada, are others who received the prestigious national award.

The award was announced on the occasion of the Republic Day.

Vice President M Venkaiah Naidu, Prime Minister Narendra Modi and several Union ministers attended the civil investiture ceremony held at Rashtrapati Bhavan.

Keshavamurthy, 86, is a Gamaka exponent from Hosahalli in Shivamogga district. An artist of the art form 'Gamaka', he has been recognised globally for his style of singing. His style is proven to be Keshvamurthy Gharana just like Benares, Kanpur, Jaipur, Mumbai and Punagharanas. Along with orator-writer Mathur Krishnamurthy, he has the credit of taking the famed 'Kumaravyasa Bharata' to the common man through the Gamaka programme on TV.

Abdul Khader Nadakattin, 68, of Annigeri village in Navalgund taluk of Dharwad district. He is credited with over 40 innovations that assist small and marginal farmers across India.

Chairman of Vishwashanthi Agriculture Research Centre, Annigeri, Nadakattin has developed a number of user-friendly agriculture innovations. One of his popular innovations is the Nadakattin-five-in-one. This equipment can perform five actions deep digging, uprooting the grass when the farmland is wet, spraying herbal pesticides, applying fertilisers-and can be used even if the gap between the lines is four feet and can cover 20-25 acres in 12 hours.

Amai Mahalinga Naik, 77, is a farm labourer and a green revolutionary, known to many as the 'one-man-army'. An innovative farmer from Dakshina Kannada, he is known as "Tunnel Man' for digging tunnels to irrigate his barren land and transform it into a lush green farm.

His farm in Adyanadka, near Mangaluru, has over 300 areca nut palms, 75 coconut trees, 150 cashew trees, 200 banana plants and pepper vines.

Courtesy: Deccan Herald, dt: 29.03.2022

ಭಾಗ – 4

ರಾಜ್ಯ ಸರ್ಕಾರದ ಸುದ್ದಿಗಳು

1. ಗೋಮಾಳ ಸಕ್ರಮಕ್ಕೆ ಕಾನೂನು ತಿದ್ದುಪಡಿ

ಅಕ್ರಮ ಸಕ್ರಮದಡಿಯಲ್ಲಿ ಗೋಮಾಳ ಜಮೀನನ್ನು ಸಕ್ರಮ ಮಾಡಲು ನಮೂನೆ 53 ಮತ್ತು 67ನಲ್ಲಿ ಬಾಕಿ ಇರುವ ಅರ್ಜಿಗಳನ್ನು ಕಾನೂನಿನಡಿಯಲ್ಲಿ ಕೆಲವೊಂದು ತಿದ್ದುಪಡಿಯ ಅವಶ್ಯಕತೆ ಇರುವ ಬಗ್ಗೆ ಚರ್ಚಿಸಲಾಗಿದ್ದು, ಮುಂದಿನ ದಿನಗಳಲ್ಲಿ ಕಾನೂನು ಇಲಾಖೆಯಿಂದ ಪರಿಶೀಲನೆ ನಡೆಸಿ ಸೂಕ್ತ ತಿದ್ದುಪಡಿ ತರುವ ಬಗ್ಗೆ ಚರ್ಚಿಸಲಾಯಿತು ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಜಿಲ್ಲಾಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು ಡೀಮ್ಡ್ ಫಾರೆಸ್ಟ್‌ಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಕೇಸ್ ವಿಚಾರವಾಗಿ ಅರಣ್ಯ ಪ್ರದೇಶದಲ್ಲಿರುವ ಜಮೀನುಗಳು ಮತ್ತು ಅರಣ್ಯ ಪ್ರದೇಶದಲ್ಲಿಲ್ಲದ ಜಮೀನುಗಳ ದಾಖಲೆಗಳನ್ನು ಪರಿಶೀಲಿಸಿ ಮತ್ತೊಮ್ಮೆ ಸಮೀಕ್ಷೆ ಮಾಡಿ ಕೂಡಲೇ ವರದಿ ನೀಡಿದರೆ ಸರ್ಕಾರ ತೀರ್ಮಾನ ಕೈಗೊಳ್ಳಲು ಸಾಧ್ಯವಾಗುವುದಾಗಿ ಚರ್ಚಿಸಲಾಯಿತು. ಸಹಾಯಕ ಕಮೀಷನರ್ ಹಾಗೂ ತಹಶೀಲ್ದಾರ್ ಕೋರ್ಟ್‌ನಲ್ಲಿ 10–15 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಇವೆ ಇದನ್ನು ಕೂಡಲೇ ವಿಲೇವಾರಿ ಮಾಡಲು ಸೂಚಿಸಿದೆ. ಭೂ ಪರಿವರ್ತನೆಗೆ ಕಂದಾಯ ಸಚಿವರು ಹೊಸ ನಿಯಮಗಳನ್ನು ತರಲು ಘೋಷಣೆ ಮಾಡಿದ್ದಾರೆ. ವಿಶೇಷವಾಗಿ ಭೂ ಪರಿವರ್ತನೆ ಸಂದರ್ಭದಲ್ಲಿ ಮಾಸ್ಟರ್ ಪ್ಲಾನ್ ಸಿದ್ಧಪಡಿಸಲು ಉದ್ದೇಶಿಸಿರುವ ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಪ್ರಾಧಿಕಾರಗಳು ಅಭಿಪ್ರಾಯ ನೀಡಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮಾಸ್ಟರ್ ಪ್ಲಾನ್‌ಗಳನ್ನು 3 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ಸ್ವಾಮಿತ್ವ ಯೋಜನೆಯಡಿ ಡ್ರೋನ್ ಸರ್ವೇ ಈ ವರ್ಷದ ಗುರಿಗೆ ಶೇ.59 ರಷ್ಟು ಸಾಧನೆಯಾಗಿದೆ. ಇದನ್ನು ಚುರುಕುಗೊಳಿಸಲು ರೂ.20 ಕೋಟಿ ಅಗತ್ಯವಿದ್ದು, ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ. ಸುಮಾರು 4,370 ಸ್ಮಶಾನ ಭೂಮಿ ಅಗತ್ಯವಿದ್ದು, 1 ವರ್ಷದಲ್ಲಿ ವಿಶೇಷ ಅಭಿಯಾನದ ಮೂಲಕ ಸ್ಮಶಾನ ಭೂಮಿ ಒದಗಿಸಲು ಮತ್ತು ಸರ್ಕಾರಿ ಭೂಮಿ ಇರುವಲ್ಲಿ ನೀಡಬೇಕು. ಲಭ್ಯವಿಲ್ಲದ ಕಡೆಗಳಲ್ಲಿ ಖಾಸಗಿ ಜಮೀನು ಖರೀದಿ ಮಾಡಿ ಸ್ವಾಧೀನ ಪಡಿಸಿಕೊಳ್ಳಲು ಸೂಚನೆ ನೀಡಲಾಗಿದೆ. ಸಾಮಾಜಿಕ ಭದ್ರತಾ ಪಿಂಚಣಿ ಸೌಲಭ್ಯದಡಿಯಲ್ಲಿ ಸುಮಾರು 3 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳ ಅಧಾರ್ ಜೋಡಣೆ ಬಾಕಿಯಿದೆ. 1 ತಿಂಗಳಲ್ಲಿ ಜೋಡಣೆ ಕಾರ್ಯ ಆಗಬೇಕು ಮತ್ತು ನಿಜವಾದ ಫಲಾನುಭವಿಗಳಿಗೆ ದೊರೆಯಬೇಕು. ಪಿಂಚಣಿ ಸೌಲಭ್ಯ ಡಿಬಿಟಿ ಮೂಲಕವೇ ತಲುಪಬೇಕು ಎಂದು ಸೂಚನೆ ಕೊಡಲಾಗಿದೆ ಎಂದರು.

ಸ್ಪಂದನಶೀಲರಾಗಲು ಸಲಹೆ: ಜಿಲ್ಲಾಧಿಕಾರಿಗಳು ಜನರ ಮತ್ತು ಸರ್ಕಾರದ ನಡುವಿನ ಬಹುಮುಖ್ಯ ಕೊಂಡಿ. ಹಾಗಾಗಿ ಸ್ಪಂದನಶೀಲರಾಗಿ ಆಡಳಿತ ನಡೆಸುವಂತೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು. ಜಿಲ್ಲಾಧಿಕಾರಿಗಳು ಸ್ಪಂದನಾಶೀಲರಾಗಿ ಕೆಲಸ ನಿರ್ವಹಿಸದಿದ್ದರೆ ಕೆಲವರ ಹಿತಾಸಕ್ತಿಗೆ ಕೆಲಸ ನಿರ್ವಹಿಸಿದಲ್ಲಿ ಜಿಲ್ಲಾಧಿಕಾರಿಗಳಾಗಿರುವ ಅರ್ಹತೆ ಕಳೆದುಕೊಳ್ಳುವುದಾಗಿ ತಿಳಿಸಲಾಗಿದೆ ಎಂದರು.

ಪರಿಹಾರ: ಆಕಾಲಿಕ ಮಳೆಯಿಂದಾದ ಹಾನಿಯ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಉತ್ತಮ ಕೆಲಸ ನಿರ್ವಹಿಸಿದ್ದು ಬಾಕಿ ಇರುವ ರೈತರ ಬೆಳೆ ಪರಿಹಾರದ ದಾಖಲೆಗಳನ್ನು ಆ್ಯಪ್‌ಗಳಲ್ಲಿ ಅಪ್ ಲೋಡ್ ಮಾಡಲು ಜನವರಿ 7ರೊಳಗೆ ಮಾಡುವಂತೆ ಸೂಚಿಸಲಾಗಿದೆ. 2019–20ರಲ್ಲಿ ಹಾನಿಯಾದ ಮನೆಗಳಿಗೆ

ನೀಡಿರುವ ಪರಿಹಾರ ಬಳಸಿ ಮನೆ ನಿರ್ಮಾಣ ಮಾಡದಿರುವ ಬಗ್ಗೆ ಸಭೆಯ ಗಮನಕ್ಕೆ ತಂದಿದ್ದು, ಈ ಬಗ್ಗೆ ಮತ್ತೊಮ್ಮೆ ಜಿಪಿಎಸ್ ಮಾಡಿಸಿ ಮನೆ ನಿರ್ಮಾಣ ಮಾಡವದರಿಗೆ 10 ದಿನಗಳ ಗಡುವಿನ ಅಂತಿಮ ನೋಟೀಸ್ ನೀಡಬೇಕು. ಮನೆ ನಿರ್ಮಾಣಕ್ಕೆ ಫಲಾನುಭವಿಗಳ ಸ್ವಂತ ಸ್ಥಳದಲ್ಲಿಯೇ ಸ್ಥಳ ಬದಲಾವಣೆಗೂ ಅನುಮತಿ ನೀಡಬೇಕು. ನಗರ ಪ್ರದೇಶದಲ್ಲಿ 2,500ಕ್ಕಿಂತಲೂ ಹೆಚ್ಚು ಎಕರೆ ಜಮೀನು ವಸತಿ ನಿರ್ಮಾಣಕ್ಕಾಗಿ ಲಭ್ಯವಿದ್ದು, ವಸತಿ ನಿರ್ಮಾಣ ಭೂ ಪರಿವರ್ತನೆ ಮಾಡುವ ಕುರಿತು ಚರ್ಚಿಸಲಾಯಿತು ಎಂದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:01.01.2022.

2. ಗ್ರಾಮಗಳಿಗೆ ಹೋಗಿ ಕೆಲಸ ಮಾಡಿ : ಮುಖ್ಯಮಂತ್ರಿ

ಜಿಲ್ಲಾಧಿಕಾರಿಗಳು ಜನಸೇವಕರು ಎಂಬುದನ್ನು ಮರೆಯಬಾರದು. ನಿಮ್ಮ ಕಚೇರಿಗೆ ಜನ ಬರುವುದಲ್ಲ ನೀವೆ ಜನರ ಬಳಿ ಹೋಗಿ ಕೆಲಸ ಮಾಡಬೇಕು. ಕಂದಾಯ ಸಚಿವರೇ ಗ್ರಾಮ ವಾಸ್ತವ್ಯ ಮಾಡಿ ಜನರ ಸಮಸ್ಯೆಗಳನ್ನು ಆಲಿಸುತ್ತಾರೆ ಎನ್ನುವಾಗ ಆ ಕೆಲಸ ಮಾಡಲು ನಿಮಗೇನು ಕಷ್ಟ ಎಂದು ಜಿಲ್ಲಾಧಿಕಾರಿಗಳ ಕಾರ್ಯವೈಖರಿಯನ್ನು ಮುಖ್ಯಮಂತ್ರಿಯವರು ತರಾಟೆಗೆ ತೆಗೆದುಕೊಂಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿದ ಮುಖ್ಯಮಂತ್ರಿ, ಜನಸ್ಪಂದನೆಯ ಕೆಲಸದ ಮೂಲಕ ಕೆಲಸ ಮಾಡಿದ ಜಿಲ್ಲೆಯಲ್ಲಿ ಹೆಜ್ಜೆ ಗುರುತನ್ನು ಮೂಡಿಸಬೇಕು. ಆ ರೀತಿಯಲ್ಲಿ ಕೆಲಸ ಮಾಡಿ ಜನರಿಗೆ ಒಳ್ಳೆಯದು ಮಾಡಿದರೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಆದರೆ, ಜನರಿಗೆ ಸ್ಪಂದಿಸುವ ರೀತಿ ಕೆಲಸ ಮಾಡದೇ ಇದ್ದರೆ ನೀವು ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಲು ಅರ್ಹತೆ ಕಳೆದುಕೊಳ್ಳುತ್ತೀರಿ ಎಂದು ಕಿಡಿ ಕಾರಿದರು.

ಜಿಲ್ಲಾಧಿಕಾರಿಗಳು ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿ, ಜಿಲ್ಲೆ ಮತ್ತು ಸರ್ಕಾರದ ನಡುವೆ ಕೊಂಡಿಯಾಗಿ ಕೆಲಸ ಮಾಡಬೇಕು. ಈ ರೀತಿಯ ಬಹು ಆಯಾಮದ ಕೆಲಸ ಮಾಡುವ ಜಿಲ್ಲಾಧಿಕಾರಿಗಳು ಜನಸ್ಪಂದನೆ ಮಾಡದೆ ಕೆಲವರ ಹಿತಾಸಕ್ತಿಯಲ್ಲಿ ಕೆಲಸ ಮಾಡಿದರೆ ಆ ಹುದ್ದೆಗೆ ಅರ್ಹರಲ್ಲ ಎಂದರು.

ಮಳೆಹಾನಿ ಪರಿಹಾರಕ್ಕೆ ಶ್ಲಾಘನೆ: ಜಿಲ್ಲಾಧಿಕಾರಿಗಳು ನಿಮ್ಮ ವಿವೇಚನಾಧಿಕಾರ ಬಳಸಿ ಅಧಿಕಾರ ಮತ್ತು ಜವಾಬ್ದಾರಿಯ ಅರಿವಿನಿಂದ ಕೆಲಸ ಮಾಡಬೇಕು. ಮಳೆಹಾನಿ ಪರಿಹಾರ ವಿತರಣೆಯಲ್ಲಿ ಒಳ್ಳೆಯ ಕೆಲಸ ಮಾಡಿದ್ದೀರಿ. ಅದೇ ರೀತಿ ದಿಟ್ಟವಾಗಿ ಜನಪರವಾಗಿ ಕೆಲಸ ಮಾಡಿ, ಬಡವರ ಪರ ಪರಿಶಿಷ್ಟ ಜಾತಿ ಮತ್ತು ಪಂಗಡದವರ ವಿಚಾರದಲ್ಲಿ ವಿಳಂಬವಿಲ್ಲದೆ ನಿರ್ಣಯಗಳನ್ನು ಕೈಗೊಳ್ಳಿ. ಜನರು ಕಚೇರಿಗೆ ಬಾರದ ಇದ್ದರೆ ನೀವೆ ಹಳ್ಳಿಗಳಿಗೆ ಹೋಗಿ ಅವರಿಂದ ಅರ್ಜಿಗಳನ್ನು ಪಡೆದು ಪರಿಹಾರ ಕಲ್ಪಿಸಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಕೊಟ್ಟ ನಿರ್ದೇಶನಗಳು:–

- ಮಳೆಹಾನಿ ಪರಿಹಾರ ವಿತರಿಸಲು ಪರಿಹಾರ ಆ್ಯಪ್‌ನಲ್ಲಿ ಹಾನಿ ಕುರಿತು ದಾಖಲೆಗಳನ್ನು ಅಪ್ ಲೋಡ್ ಮಾಡಲು ಇದ್ದ ಕಾಲಾವಧಿಯನ್ನು ಜನವರಿ 7ರವರೆಗೆ ವಿಸ್ತರಿಸಲಾಗಿದೆ. ಬಾಕಿ ಅರ್ಜಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕೂಡಲೇ ಅಪ್‌ಲೋಡ್ ಮಾಡಿ ರೈತರಿಗೆ ಪರಿಹಾರ ನೀಡಬೇಕು. ಎನ್‌ಡಿಆರ್‌ಎಫ್ ಜೊತೆಗೆ ರಾಜ್ಯ ಸರ್ಕಾರ ನೀಡುವ ಹೆಚ್ಚುವರಿ ಪರಿಹಾರ ಒಟ್ಟು ಸೇರಿಸಿ ವಿತರಿಸಬೇಕು.

- 2019–20ನೇ ಸಾಲಿನಲ್ಲಿ ಮಂಜೂರದ ಮನೆಗಳನ್ನು ಇನ್ನೂ ಆರಂಭಿಸದೇ ಇರುವ ಬಗ್ಗೆ ಜಿಪಿಎಸ್ ಬಳಸಿ ಮತ್ತೊಮ್ಮೆ ಪರಿಶೀಲಿಸಿ, ಮನೆ ಆರಂಭಿಸದವರಿಗೆ ನೋಟಿಸ್ ಜಾರಿ ಮಾಡಿ

10 ದಿನಗಳ ಕಾಲಾವಕಾಶ ನೀಡಿ ನಿಗದಿತ ಪ್ರದೇಶ ಬಿಟ್ಟು ಬೇರೆ ಕಡೆ ಸ್ವಂತ ಜಾಗದಲ್ಲಿ ಮನೆ ನಿರ್ಮಿಸಲು ಅರ್ಜಿ ಸಲ್ಲಿಸುವವರಿಗೆ ಕೂಡಲೇ ಅನುಮತಿ ನೀಡಬೇಕು.

- ವಸತಿ ಉದ್ದೇಶಕ್ಕಾಗಿ ನಗರ ಪ್ರದೇಶಗಳಲ್ಲಿ 2,500 ಎಕರೆಗೂ ಹೆಚ್ಚು ಜಮೀನು ಗುರುತಿಸಲಾಗಿದೆ. ಅವುಗಳನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತಿಸಿ, ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಬೇಕು. ಮನೆ ನಿರ್ಮಿಸಲು ಅವರಿಗೆ ಅವಕಾಶ ಮಾಡಿಕೊಡಬೇಕು. ಈ ವಿಚಾರದಲ್ಲಿ ಯಾವುದೇ ವಿಳಂಬ ಧೋರಣೆ ಅನುಸರಿಸುವಂತಿಲ್ಲ>

- ಅಕ್ರಮ ಸಕ್ರಮ ವಿಚಾರದಲ್ಲಿ ಗೋಮಾಳಗಳಲ್ಲಿ ನಿರ್ಮಿಸಿರುವ ಮನೆಗಳನ್ನು ಸಕ್ರಮ ಮಾಡಲು ಸಮಸ್ಯೆ ಉದ್ಭವವಾಗಿರುವುದರಿಂದ ಕಾನೂನು ತಿದ್ದುಪಡಿ ಮಾಡಲಾಗುವುದು. ಈ ಕುರಿತು ಕಾನೂನು ಇಲಾಖೆಯೊಂದಿಗೆ ಪರಿಶೀಲನೆ ನಡೆಸಿ ಅಗತ್ಯ ತಿದ್ದುಪಡಿ ತರಲಾಗುವುದು.

- ಡೀಮ್ಡ್ ಅರಣ್ಯ ಸಮಸ್ಯೆ ಸುಪ್ರಿಂ ಕೋರ್ಟ್‌ನಲ್ಲಿದ್ದು, ಇದನ್ನು ಬಗೆಹರಿಸುವ ಪ್ರಯತ್ನ ನಡೆಯುತ್ತಿದೆ. ಹೀಗಾಗಿ ಯಾವ ಜಿಲ್ಲೆಯಲ್ಲಿ ಎಷ್ಟು ಅರಣ್ಯ ಇದೆ ಅವುಗಳಲ್ಲಿ ಡೀಮ್ಡ್ ಅರಣ್ಯ ಎಷ್ಟು ಹಾಗೂ ಆ ಪೈಕಿ ಅರಣ್ಯ ಸ್ವರೂಪವೇ ಇಲ್ಲದ ಜಮೀನು ಎಷ್ಟು ಎಂಬ ಬಗ್ಗೆ ಮತ್ತೊಮ್ಮೆ ಎಲ್ಲಾ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ಮಾಹಿತಿ ಕಳುಹಿಸಬೇಕು.

- ತಹಸೀಲ್ದಾರ್ ಕೋರ್ಟ್ ಮತ್ತು ಉಪ ವಿಭಾಗಾಧಿಕಾರಿಗಳ ಕೋರ್ಟ್‌ಗಳಲ್ಲಿ 10–15 ವರ್ಷಗಳಿಂದ ಕಂದಾಯ ಪ್ರಕರಣಗಳು ನೆನಗುದಿಗೆ ಬಿದ್ದಿದ್ದು, ಈ ವ್ಯಾಜ್ಯಗಳನ್ನು ಒಂದು ವರ್ಷದಲ್ಲಿ ಇತ್ಯರ್ಥಪಡಿಸಬೇಕು. ಅದಕ್ಕೆ ಅವಶ್ಯಕವಾಗಿರುವ ಹೆಚ್ಚುವರಿ ಉಪವಿಭಾಗಾಧಿಕಾರಿ ಮತ್ತು ರಹಸೀಲ್ದಾರ್ ಸೇರಿ ಅಗತ್ಯ ಸಿಬ್ಬಂದಿ ಒದಗಿಸಲಾಗುವುದು.

- ನಗರ ಪ್ರದೇಶಗಳಲ್ಲಿ ಭೂ ಪರಿವರ್ತನೆಗೆ ಹೊಸ ನಿಯಮಾವಳಿ ಜಾರಿಗೆ ತರಲಾಗುತ್ತಿದೆ. ಆದರೆ, ಅದಕ್ಕೆ ನಗರ ಪ್ರದೇಶಗಳಲ್ಲಿ ಮಾಸ್ಟರ್ ಪ್ಲಾನ್ ಸಿದ್ಧವಾಗಬೇಕಿದೆ. 40 ನಗರಗಳಲ್ಲಿ ಇನ್ನು ಮಾಸ್ಟರ್ ಪ್ಲಾನ್ ಸಿದ್ಧವಾಗದ ಕಾರಣ ಮೂರು ತಿಂಗಳಲ್ಲಿ ಈ ಕೆಲಸ ಪೂರ್ಣಗೊಳಿಸಬೇಕು. ಇಲ್ಲವಾದಲ್ಲಿ ಟೌನ್ ಅಂಡ್ ಕಂಟ್ರೀ ಪ್ಲಾನಿಂಗ್ ನಿರ್ದೇಶಕರು ಈ ಕೆಲಸ ಮಾಡಬೇಕಾಗುತ್ತದೆ. ಅದಕ್ಕೆ ಅವಕಾಶವಾಗದಂತೆ ಜಿಲ್ಲಾಧಿಕಾರಿಗಳು ಕ್ರಮ ವಹಿಸಬೇಕು.

- ಜಿಲ್ಲೆಗಳಲ್ಲಿ ಕಡತ ವಿಲೇವಾರಿ ಜವಾಬ್ದಾರಿಯನ್ನು ವಿಭಾಗಾಧಿಕಾರಿಗಳಿಗೆ ನೀಡಲಾಗಿದ್ದು, ಜಿಲ್ಲಾಧಿಕಾರಿಗಳು ಈ ಬಗ್ಗೆ ಪರಿಶೀಲನೆ ನಡೆಸಿ ಸರ್ಕಾರಕ್ಕೆ ಪ್ರಗತಿ ವರದಿಗಳನ್ನು ಕಾಲ ಕಾಲಕ್ಕೆ ಕಳುಹಿಸಿಕೊಡಬೇಕು.

- ಕೇಂದ್ರ ಸರ್ಕಾರದ ಸ್ವಾಮಿತ್ವ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಭೂ ಮಾಲೀಕರಿಗೆ ಕಂದಾಯ ದಾಖಲೆ ಮತ್ತು ಹಕ್ಕುಪತ್ರ ಕೊಡಲಾಗುತ್ತಿದ್ದು, ಅದಕ್ಕಾಗಿ ಡ್ರೋಣ್ ಮೂಲಕ ಆಸ್ತಿ ಸರ್ವೇ ಮಾಡಲಾಗುತ್ತಿದೆ. ಈ ಕಾರ್ಯ ತೀವ್ರಗೊಳಿಸಲು ಖಾಸಗಿ ಡ್ರೋಣ್‌ಗಳನ್ನು ಬಳಸಿಕೊಳ್ಳಬೇಕು. ಇದಕ್ಕೆ ಸರ್ಕಾರ ರೂ.20 ಕೋಟಿ ಒದಗಿಸುತ್ತದೆ.

- ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ಮಶಾನ ಭೂಮಿ ಕೊರತೆ ಇದೆ. 4370 ಊರುಗಳಲ್ಲಿ ಸ್ಮಶಾನ ಇಲ್ಲ. ಹೀಗಾಗಿ ಅಂತಹ ಕಡೆ ಸರ್ಕಾರಿ ಭೂಮಿಯನ್ನು ಸ್ಮಶಾನಕ್ಕೆ ಮೀಸಲಿಡಬೇಕು.

ಸರ್ಕಾರಿ ಭೂಮಿ ಇಲ್ಲದ ಕಡೆ ಖಾಸಗಿ ಭೂಮಿ ಖರೀದಿಸಬೇಕು. ಇದಕ್ಕೆ ಸರ್ಕಾರದಿಂದ ಹಣಕಾಸು ಒದಗಿಸಲಾಗುತ್ತದೆ.

- ರಾಜ್ಯದಲ್ಲಿ 68 ಲಕ್ಷ ಮಂದಿಗೆ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ನೀಡಲಾಗುತ್ತಿದ್ದು, 3 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳ ಆಧಾರ್ ಕಾರ್ಡ್‌ಗಳನ್ನು ಬ್ಯಾಂಕ್ ಖಾತೆ ಜೊತೆ ಜೋಡಿಸುವ ಕೆಲಸ ಬಾಕಿ ಇದೆ. ಕೂಡಲೇ ಈ ಕಾರ್ಯ ಪೂರ್ಣಗೊಳಿಸಿ ಫಲಾನುಭವಿಗಳ ಖಾತೆಗೆ ಪಿಂಚಣಿ ಹೋಗುವಂತಾಗಬೇಕು. ಪಿಂಚಣಿ ಅದಾಲತ್ ನಡೆಸಿ ಅರ್ಹರನ್ನು ಸೇರಿಸಿ, ಸುಳ್ಳು ದಾಖಲೆ ನೀಡಿ ಪಿಂಚಣಿ ಪಡೆಯುತ್ತಿರುವವರನ್ನು ಕೈ ಬಿಡಬೇಕು.

- ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ ಎಲ್ಲರಿಗೂ ಕಾರ್ಡ್ ವಿತರಿಸಬೇಕು. ಅದಕ್ಕಾಗಿ ಆರೋಗ್ಯ ಕ್ಯಾಂಪ್‌ಗಳನ್ನು ಆಯೋಜಿಸಬೇಕು. ಆರೋಗ್ಯ ಕಾರ್ಡ್‌ಗೆ ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಲಿಂಕ್ ಮಾಡಬೇಕು.

ಆಧಾರ: ವಿಶ್ವವಾಣಿ, ದಿನಾಂಕ:01.01.2022.

3. ರಾಜ್ಯದಲ್ಲಿ ಹೆಚ್ಚಿದ ಆತಂಕ –ಕಟ್ಟೆಚ್ಚರ

ರಾಜ್ಯದಲ್ಲಿ ಓಮೈಕ್ರಾನ್ ಸೋಂಕು ಹೆಚ್ಚುತ್ತಿದ್ದು ಜನರಲ್ಲಿ ತೀವ್ರ ಆತಂಕ ಮೂಡಿದೆ. ಪಕ್ಕ ರಾಜ್ಯಗಳಿಗೆ ಹೋಲಿಸಿದರೆ ಓಮೈಕ್ರಾನ್ ಸೋಂಕಿತರ ಸಂಖ್ಯೆ ಕಡಿಮೆ ಇದೆಯಾದರೂ ದಿನದಿಂದ ದಿನಕ್ಕೆ ಹೋಲಿಸಿದರೆ ಕ್ರಮೇಣ ಸೋಂಕಿನ ಸಂಖ್ಯೆ ಅಧಿಕವಾಗುತ್ತಿದೆ. ಈಗಾಗಲೇ ರಾಜ್ಯದಲ್ಲಿ 63 ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ.

ಈ ಮಧ್ಯೆ ಕೊರೋನಾ ಸಾವಿರ ಗಡಿದಾಟಿದೆ. ಕಳೆದ ವಾರ 200 ರಷ್ಟಿದ್ದ ಸೋಂಕಿತರ ಸಂಖ್ಯೆ ಜನವರಿ 1ಕ್ಕೆ 1033ಕ್ಕೆ ಏರಿಕೆಯಾಗಿದೆ.

ಈಗಾಗಲೇ ಸಮುದಾಯಕ್ಕೆ ಹರಡಿದ್ದು ಫೆಬ್ರವರಿ ತಿಂಗಳಲ್ಲಿ ಸೋಂಕಿನ ಸಂಖ್ಯೆ ಭಾರೀ ಪ್ರಮಾಣದಲ್ಲಿ ಎರಿಕೆಯಾಗಲಿದೆ. ಈಗಿನಿಂದಲೇ ಮುನ್ನೆಚ್ಚರಿಕೆ ವಹಿಸಬೇಕು ಎಂದು ತಜ್ಞರು ಸರ್ಕಾರಕ್ಕೆ ವರದಿ ನೀಡಿದ್ದಾರೆ. ಓಮೈಕ್ರಾನ್ ಬೇಗ ಹರಡುತ್ತದೆ. ಡೆಲ್ಟಾದಷ್ಟು ಅಪಾಯಕಾರಿ, ಮಾರಾಣಾಂತಿಕ ಅಲ್ಲವಾದರೂ ನಿರ್ಲಕ್ಷ್ಯ ಸಲ್ಲ. ಆದರೂ ಇದರ ಬಗ್ಗೆ ನಿರ್ಲಕ್ಷ್ಯ ತೋರಿದರೆ ಅಪಾಯ ಕಟ್ಟಿಟ್ಟಿಬುತ್ತಿ ಎಂದು ಸಹ ತಜ್ಞರು ವರದಿಯಲ್ಲಿ ತಿಳಿಸಿದ್ದಾರೆ.

ಸರ್ಕಾರವು ಸಹ ಈಗಾಗಲೇ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲು ಮುಂದಾಗಿದೆ. ಎಲ್ಲ ಖಾಸಗಿ ಆಸ್ಪತ್ರೆಗಳಿಗೆ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಸರ್ಕಾರಿ ಆಸ್ಪತ್ರೆಗಳಿಲ್ಲಿ ಬೆಡ್‌ಗಳ ವ್ಯವಸ್ಥೆ ಮಾಡಿಕೊಳ್ಳುವಂತೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ.

ವಿದೇಶದಿಂದ ಬರುವವರಿಂದ ಓಮೈಕ್ರಾನ್ ಹೆಚ್ಚಿಗೆ ಆಗುತ್ತಿದೆ. ಅಲ್ಲದೇ ಪಕ್ಕದ ಮಹಾರಾಷ್ಟ್ರದಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ. ಆ ರಾಜ್ಯದಿಂದ ವ್ಯಾಪಾರ ವಹಿವಾಟಿಗಾಗಿ ರಾಜ್ಯಕ್ಕೆ ಪ್ರತಿದಿನ ನೂರಾರೂ ಜನರು ಬರುತ್ತಾರೆ ಹಾಗಾಗಿ ಗಡಿ ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಸಜ್ಜಾಗಿದೆ. ಪರೀಕ್ಷೆಗಳ ಸಂಖ್ಯೆ ಹೆಚ್ಚಳ ಮಾಡಲಾಗಿದೆ. ಬೆಂಗಳೂರೂ ಸೇರಿದಂತೆ ಎಲ್ಲ ಜಿಲ್ಲೆಗಳಲ್ಲಿ ಸೋಂಕಿನ ಪ್ರಮಾಣ ಏರುತ್ತಿದೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೋಂಕಿನ ಕುರಿತು ನಿಗಾ ವಹಿಸಲು ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ಮಕ್ಕಳಿಗೆ ಲಸಿಕೆ ಹಾಕಿಸುವ ನೋಂದಣಿ ಆರಂಭವಾಗಿದೆ

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:01.01.2022.

4. ನಗರದ ಎಲ್ಲಾ ಕಾಮಗಾರಿಗಳಿಗೆ ಡೆಡ್‌ಲೈನ್

ಬಿಬಿಎಂಪಿ ಚುನಾವಣೆ ಎದುರಾಗುವ ಸಾಧ್ಯತೆಯಿದೆ ಎಂಬ ಮಾತುಗಳು ಕೇಳಿಬರುತ್ತಿರುವ ನಡುವೆಯೇ ರಾಜಧಾನಿ ಬೆಂಗಳೂರಿನ ಅಭಿವೃದ್ಧಿ ಯೋಜನೆಗಳಿಗೆ ಮುಖ್ಯಮಂತ್ರಿಯವರು ಒತ್ತು ನೀಡಿದ್ದು, ರಾಜ ಕಾಲುವೆ ಅಭಿವೃದ್ಧಿ ಹದಗೆಟ್ಟಿರುವ ರಸ್ತೆ ದುರಸ್ತಿ, ರಸ್ತೆ ಗುಂಡಿ ಮುಚ್ಚುವುದು, ಟೆಂಡರ್ ಶ್ಯೂರ್, ವೈಟ್ ಟಾಪಿಂಗ್ ಕಾಮಗಾರಿಗಳಿಗೆ ವೇಗ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಬಹುತೇಕ ಯೋಜನೆಗಳನ್ನು ಪೂರ್ಣಗೊಳಿಸಲು ಗಡುವನ್ನು ವಿಧಿಸಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ ಬಿಬಿಎಂಪಿ ಬೆಂಗಳೂರು ಜಲಮಂಡಳಿ ಮತ್ತು ಬೆಸ್ಕಾಂ ನಡುವಿನ ಸಮನ್ವಯ ಕೊರತೆಯಿಂದ ಸುಸ್ಥಿತಿಯಲ್ಲಿರುವ ರಸ್ತೆಗಳನ್ನು ಆಗೆದು ಮುಚ್ಚಿ ಸಾರ್ವಜನಿಕ ಸಂಚಾರಕ್ಕೆ ಆಡಚಣೆ ಮತ್ತೂ ಸರ್ಕಾರದ ಬೊಕ್ಕಸಕ್ಕಾಗುವ ನಷ್ಟ ತಡೆಯಲು ಮೂರು ಸಂಸ್ಥೆಗಳ ಅಧಿಕಾರಿಗಳ ಮಟ್ಟದಲ್ಲಿ ಸಮನ್ವಯ ಸಮಿತಿ ಇದರ ಮೇಲ್ವಿಚಾರಣೆಗೆ ಮುಖ್ಯಮಂತ್ರಿಗಳು ಹಾಗೂ ಮುಖ್ಯ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ಇದರ ಮೇಲ್ವಿಚಾರಣ ಸಮಿತಿ ರಚಿಸಲು ನಿರ್ಧರಿಸಲಾಗಿದ್ದು, ಇನ್ನೆರಡು ದಿನಗಳಲ್ಲಿ ಈ ಸಂಬಂಧ ಆದೇಶ ಮಾಡುವುದಾಗಿಯೂ ಮುಖ್ಯಮಂತ್ರಿಯವರು ಹೇಳಿದ್ದಾರೆ.

ಬೆಂಗಳೂರು ಅಭಿವೃದ್ಧಿ ಕುರಿತಂತೆ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಸಚಿವರು ಸೇರಿದಂತೆ ನಗರದ ಎಲ್ಲಾ ಜನ ಪ್ರತಿನಿಧಿಗಳು ಹಾಗೂ ಸಂಬಂಧಿಸಿದ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿಗಳು ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡಿದ್ದಾರೆ.

15 ದಿನಗಳಲ್ಲಿ ರಸ್ತೆಗುಂಡಿ ಮುಚ್ಚಿ: ರಸ್ತೆ ಗುಂಡಿ ಮುಚ್ಚುವ ಕಾರ್ಯ ಎಷ್ಟು ಪೂರ್ಣಗೊಂಡಿದೆ ಇನ್ನೆಷ್ಟು ಬಾಕಿ ಇದೆ ಎಂದು ಸಭೆಯಲ್ಲಿ ಪಾಲಿಕೆ ಅಧಿಕಾರಿಗಳಿಂದ ಮಾಹಿತಿ ಪಡೆದ ಮುಖ್ಯಮಂತ್ರಿಯವರು ಬಾಕಿ ಇರುವ 730 ಕಿ.ಮೀ. ರಸ್ತೆ ಗುಂಡಿ ಮುಚ್ಚುವ ಕಾರ್ಯವನ್ನು 15 ದಿನಗಳಲ್ಲಿ ಪೂರ್ಣಗೊಳಿಸಬೇಕು ತಪ್ಪಿದರೆ ಸಂಬಂಧಪಟ್ಟ ಅಧಿಕಾರಿಗಳ ವಿರದುದ್ಧ ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ ನೀಡಿದ್ದಾರೆ.

ಟೆಂಡರ್ ಶ್ಯೂರ್‌ಗೆ ಮಾರ್ಚ್ 31ರ ಗಡುವು: ಟೆಂಡರ್ ಶ್ಯೂರ್ ಯೋಜನೆಯಡಿ ಅಭಿವೃದ್ಧಿಪಡಿಸುತ್ತಿರುವ ಎಲ್ಲಾ ಯೋಜನೆಗಳು ಹಾಗೂ ಬಾಕಿ ಇರುವ ವೈಟ್ ಟಾಪಿಂಗ್ ರಸ್ತೆಗಳ ಕಾಮಗಾರಿಗಳನ್ನು ಮಾರ್ಚ್ 31ರೊಳಗೆ ಪೂರ್ಣಗೊಳಿಸಬೇಕು. ಇದೇ ಅವಧಿಯೊಳಗೆ ಪಾಲಿಕರ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳಲ್ಲಿ 950 ಕಿ.ಮೀ. ಅಭಿವೃದ್ಧಿ ಕಾಮಗಾರಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಪೂರ್ಣಗೊಳಿಸಬೇಕು. ನಗರದ ಎಲ್ಲಾ ಬೀದಿದೀಪಗಳನ್ನು ಬಿಬಿಎಂಪಿಯಿಂದಲೇ ನಿರ್ವಹಿಸುವ ಕಾರ್ಯ ಪುನರಾರಂಭಿಸಬೇಕು. ಅಗತ್ಯವಿರುವಡೆ ಹೊಸದಾಗಿ ಬೀದಿ ದೀಪಗಳನ್ನು ಬಿಬಿಎಂಪಿ ಅಳವಡಿಬೇಕು ಅನುದನದ ಕೊರತೆ ಇದ್ದರೆ ಸರ್ಕಾರದಿಂದ ಅನುಮೋದನೆ ಪಡೆಯಬೇಕು ಎಂದು ಸೂಚಿಸಿದ್ದಾರೆ.

ಸಚಿವರಾದ ಆರ್. ಅಶೋಕ್, ವಿ. ಸೋಮಣ್ಣ, ಡಾ:ಸಿಎನ್. ಅಶ್ವತ್ಥನಾರಾಯಣ್, ಎಸ್. ಟಿ. ಸೋಮಶೇಖರ್, ಭೈರತಿ ಬಸವರಾಜು, ಕೆ ಗೋಪಾಲಯ್ಯ, ಮುನಿರತ್ನ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಸೇರಿದಂತೆ ನಗರದ ಬಹುತೇಕ ಎಲ್ಲಾ ಶಾಸಕರು ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲದೆ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾತ್ ಪ್ರಸಾದ್, ಬಿಬಿಎಂಪಿ ಮುಖ್ಯಾಯುಕ್ತ ಗೌರವ್ ಗುಪ್ತಾ. ಆಡಳಿತಾಧಿಕಾರಿ ರಾಕೇಶ್ ಸಿಂಗ್, ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತ ವಂದಿತಾ ಶರ್ಮಾ, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಸಭೆಯಲ್ಲಿ ಉಪಸ್ಥಿತರಿದ್ದರು.

ಆಧಾರ: ಕನ್ನಡಪ್ರಭ, ದಿನಾಂಕ:03.01.2022.

5. ಹಲವು ಇಲಾಖೆಗಳ ಸಮನ್ವಯಕ್ಕೆ ಸಮಿತಿ ರಚನೆ

ಹಲವು ಇಲಾಖೆಗಳ ನಡುವೆ ಸಮನ್ವಯ ಉತ್ತಮಗೊಳಿಸುವ ನಿಟ್ಟಿನಲ್ಲಿ ಬಿಬಿಎಂಪಿ, ಬೆಸ್ಕಾಂ ಜಲಮಂಡಳಿ ಅಧಿಕಾರಿಗಳ ವಲಯ ಮಟ್ಟದ ಸಮಿತಿ ಹಾಗೂ ರಾಜ್ಯಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿ ರಚಿಸಿ ಸಂಯೋಜಕರನ್ನು ನೇಮಿಸಿ ಶೀಘ್ರವೇ ಆದೇಶ ಹೊರಡಿಸಲಾಗುವುದು ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಬೆಂಗಳೂರು ನಗರದ ಅಭಿವೃದ್ಧಿಗೆ ಸಂಬಂಧಿಸಿ, ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ನಗರದ ಮಳೆ ನೀರು ಚರಂಡಿಗಳ ಕಾಮಗಾರಿ ಪಕ್ಕಾ ಕೆಲಸವಾಗಬೇಕು. ಇದಕ್ಕಾಗಿ ವೃತ್ತಿಪರ ಡಿ.ಪಿ. ಆರ್ ಸಿದ್ದಪಡಿಸಿ ರೂ.1,500 ಕೋಟಿಗಳ ಹೆಚ್ಚುವರಿ ಅನುದಾನವನ್ನೂ ನೀಡಲಾಗುವುದು. ಯೋಜನೆ ಮಾದರಿಯಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು. ನಗರದಲ್ಲಿ ಬೀದಿ ದೀಪಗಳ ವ್ಯವಸ್ಥೆ ಮಾಡಬೇಕು. ಹಣದ ಕೊರತೆ ಇದ್ದಲ್ಲಿ ತಕ್ಷಣವೇ ಅನುಮೋದನೆಯನ್ನು ಪಡೆದು ಕೂಡಲೇ ನಿರ್ವಹಣೆ ಕೆಲಸವನ್ನು ಪೂರ್ಣಗೊಳಿಸಬೇಕು. ಹೊಸ ದೀಪಗಳನ್ನು ಅಳವಡಿಸಲು ಸಹ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ನಿರ್ಭಯಾ ಯೋಜನೆಯಡಿ 7,000 ಸಿಸಿ ಟಿವಿಗಳನ್ನು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗುವುದು ಎಂದು ಅವರು ತಿಳಿಸಿದರು.

ನಗರದಲ್ಲಿರುವ 751.41 ಕಿ.ಮೀ ರಸ್ತೆಗಳ ಗುಂಡಿಗಳನ್ನು 15 ದಿನಗಳಲ್ಲಿ ಮುಚ್ಚುವಂತೆ ಸೂಚನೆ ನೀಡಿದ ಅವರು ಟೆಂಡರ್ ಶ್ಯೂರ್ ಯೋಜನೆಯಡಿ ರಸ್ತೆ ಅಭಿವೃದ್ಧಿಯನ್ನು ಮಾರ್ಚ್ 31ರೊಳಗೆ ಮುಗಿಸುವಂತೆ ಸೂಚನೆ. ಹೈಡೆನ್ಸಿಟಿ ರಸ್ತೆ ದುರಸ್ತಿಗೆ ಅಲ್ಪಾವಧಿ ಟೆಂಡರ್ ಕರೆದು ಕೆಲಸ ಮುಗಿಸಲು ಸೂಚನೆ ನೀಡಲಾಯಿತು. ಬೆಂಗಳೂರಿಗೆ ಹೊಸದಾಗಿ ಸೇರ್ಪಡೆಯಾದ 110 ಗ್ರಾಮಗಳಲ್ಲಿ 950 ಕಿ.ಮೀ ರಸ್ತೆ, ಅಭಿವೃದ್ಧಿ ಕಾಮಗಾರಿಗಳಲ್ಲಿ ಸಾಧ್ಯವಿರುವೆಡೆಗಳಲ್ಲಿ ಗರಿಷ್ಠ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಲಾಯಿತು.

ವೈಟ್–ಟಾಪಿಂಗ್ ಯೋಜನೆಯಡಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಸಾರ್ವಜನಿಕರಿಗೆ ತೊಂದರೆಯಾಗದಂತೆ ಪೂರ್ಣಗೊಳಿಸಬೇಕು. ರಸ್ತೆ ಸಂಚಾರಕ್ಕೆ ತೊಂದರೆಯಾಗಿರುವುದರಿಂದ ಗ್ರೇಡ್ ಸೆಪರೇಟರ್ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು ಬೆಂಗಳೂರು ಎಲ್ಲ ವಲಯಗಳಲ್ಲಿ ಖಾಲಿ ಇರುವ ವಾರ್ಡ್ ಎಂಜಿನಿಯರ್ ಹುದ್ದೆ ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಬೆಂಗಳೂರು ಪೂರ್ವ ವಲಯದಲ್ಲಿ ರಸೆಲ್ ಮಾರ್ಕೆಟ್ ನವೀಕರಣ ಕಾರ್ಯವನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಸೇರ್ಪಡೆಗೊಳಿಸಿದೆ. ಬಿ.ವಿ.ಕೆ. ಅಯ್ಯಂಗಾರ್ ರಸ್ತೆ ಅಭಿವೃದ್ಧಿಗೆ ಕ್ರಮ . ಟಿಡಿಆರ್ ಮತ್ತು ಭೂಸ್ವಾಧೀನ ವಿಷಯಗಳ ವಿಲೇವಾರಿಗೆ ಆದ್ಯತೆ ನೀಡಬೇಕು. ಅಮೃತ್ ನಗರೋತ್ಥಾನ ಯೋಜನೆಯಡಿ ಪ್ರಮುಖ ರಸ್ತೆಗಳನ್ನು ತೆಗೆದುಕೊಳ್ಳುವುದು. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಮತ್ತು ಬೆಳವಣಿಗೆಗೆ ಯೋಜನೆ ಮಾಡುವಂತೆ ತಿಳಿಸಿದರು.

ರೋಡ್ ಮ್ಯಾಪ್ ಪ್ರತ್ಯೇಕ: ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಈ ಸಂಬಂಧ ಒಂದು ರೋಡ್ ಮ್ಯಾಪ್ ಅನ್ನು ಸಿದ್ಧಪಡಿಸಿ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿಯವರು ಸೂಚನೆ ನೀಡಿದರು. ನಗರದ ಅಡ್ಡಾದಿಡ್ಡಿ ಬೆಳವಣಿಗೆಗೆ ಮುಂದೆ ಅವಕಾಶ ನೀಡುವುದಿಲ್ಲ. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ನೀಲನಕ್ಷೆ ರೂಪಿಸಿ ಅದರಂತೆ ನಗರವನ್ನು ಅಭಿವೃದ್ಧಿ ಪಡಿಸುವಂತೆ ಸೂಚಿಸಿದರು. ಸಮರ್ಪಕವಾಗಿ ಕೆಲಸ ನಿರ್ವಹಿಸದ ವಿಳಂಬ ಧೋರಣೆ ಅನುಸರಿಸುವ

ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ ಮುಖ್ಯಮಂತ್ರಿ ಕರ್ತವ್ಯ ಲೋಪ ಎಸಗುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಆಧಾರ: ವಿಶ್ವವಾಣಿ, ದಿನಾಂಕ:03.01.2022

6. ಮೇಕೆದಾಟು : ಲೋಪವಿದ್ದರೆ ದಾಖಲೆ ನೀಡಿ

ಮೇಕೆದಾಟು ಯೋಜನೆ ವಿಳಂಬವಾಗಲು ಕೇಂದ್ರ ಮತ್ತು ರಾಜ್ಯದಲ್ಲಿರುವ ಬಿಜೆಪಿ ಸರ್ಕಾರವೇ ಕಾರಣ ಹೀಗಾಗಿ ನಮ್ಮ ನೀರು ನಮ್ಮ ಹಕ್ಕು ಎಂಬ ಘೋಷಣೆಯೊಂದಿಗೆ ಮೇಕೆದಾಟು ಯೋಜನೆಗಾಗಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಮಾರಿಗುಡಿ ಮುಂಭಾಗದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಡೆದ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನ ಹಾಗೂ ಮೇಕೆದಾಟು ಯೋಜನೆಗಾಗಿ ಜನ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಬಲ್ ಇಂಜಿನ್: ನಮ್ಮ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮೇಕೆದಾಟು ಯೋಜನೆ ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸಲಾಗಿತ್ತು. ಕಾವೇರಿ ನ್ಯಾಯಾಧಿಕರಣ ತೀರ್ಪು, ತಮಿಳುನಾಡು ಸರ್ಕಾರ ಕೋರ್ಟ್ ಮೊರೆ ಹೋದ ಕಾರಣದಿಂದ ವಿಳಂಬವಾಗಿತ್ತು. ಕೇಂದ್ರದಲ್ಲಿ 2017 ರಿಂದ ನಿಮ್ಮದೇ ಸರ್ಕಾರವಿದೆ. ಪ್ರಧಾನಿ ನರೇಂದ್ರ ಮೋದಿ ಹೇಳಿದಂಗೆ ಡಬಲ್ ಇಂಜಿನ್ ಸರ್ಕಾರ ನಿಮ್ಮದು. ಏಕೆ ವಿಳಂಬವಾಗುತ್ತಿದೆ ಎಂಬುದನ್ನು ಜನರಿಗೆ ತಿಳಿಸಿ ಎಂದರು.

ಬಿಜೆಪಿ ತಮಿಳು ನಾಡು ಪರ: ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಮೂರುವರೆ ವರ್ಷಗಳಾಗಿದ್ದು, ಇನ್ನು ಸಹ ಈ ಯೋಜನೆಯನ್ನು ಜಾರಿ ಮಾಡಿಲ್ಲ. ಕೇಂದ್ರ ಅರಣ್ಯ ಪರಿಸರ ಇಲಾಖೆಯ ಮಾತ್ರ ಅನುಮತಿ ಬೇಕಿದೆ. ಈ ಯೋಜನೆ ಕುಡಿಯುವ ಯೋಜನೆ ಉದ್ದೇಶವಾಗಿರುವುದರಿಂದ ನಿರಾಕರಿಸುವಂತಿಲ್ಲ. ಆದರೆ, ಬಿಜೆಪಿ ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿದೆ. ತಮಿಳುನಾಡು ಬಿಜೆಪಿ ಪಕ್ಷದ ಅಧ್ಯಕ್ಷ ಅಣ್ಣಾಮಲೆ ಮೇಕೆದಾಟು ಯೋಜನೆ ಜಾರಿಯಾದರೆ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಎಚ್ಚರಿಕೆ ನೀಡುತ್ತಾರೆ. ತಮಿಳುನಾಡಿನ ಬಿಜೆಪಿ ಉಸ್ತುವಾರಿ ಸಿ.ಟಿ. ರವಿ ಕೂಡ ತಮಿಳುನಾಡು ಪರವಾಗಿ ಮಾತನಾಡುವ ಮೂಲಕ ರಾಜ್ಯಕ್ಕೆ ದ್ರೋಹ ಬಗೆಯುತ್ತಿದ್ದಾರೆ ಎಂದರು.

ಜಲ ಸಂಪನ್ಮೂಲ ಸಚಿವ ಕಾರಜೋಳ ಮೇಕೆದಾಟು ಯೋಜನೆ ವಿಳಂಬಕ್ಕೆ ಕಾಂಗ್ರೆಸ್ ಕಾರಣ ಎಂದು ಹೇಳುತ್ತಿದ್ದಾರೆ. ಅಲ್ಲದೆ ನಮ್ಮ ಬಳಿ ದಾಖಲೆಗಳು ಇವೆ. ಸ್ಫೋಟಿಸುತ್ತೇವೆ ಎಂದು ಹೇಳುತ್ತಿದ್ದಾರೆ ಅವರ ಬಳಿಯಿರುವ ದಾಖಲೆಗಳನ್ನು ಈಗಲೇ ಬಿಡುಗಡೆ ಮಾಡಿ ಸತ್ಯಾಂಶವನ್ನು ಜನರಿಗೆ ತಿಳಿಸಲಿ ಎಂದು ಸಿದ್ದರಾಮಯ್ಯ ಸವಾಲು ಹಾಕಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್ ಧ್ರುವನಾರಾಯಣ ಮಾತನಾಡಿ ಬಿಜೆಪಿ ಸರ್ಕಾರ ಜಿಲ್ಲೆಗೆ ಅನ್ಯಾಯ ಮಾಡಿದೆ. ಯಾವುದೇ ಹೊಸ ಯೋಜನೆ ನೀಡಿಲ್ಲ. ಸಿದ್ಧರಾಮಯ್ಯ ಅವರ ಸರ್ಕಾರದ ಕಾರ್ಯಕ್ರಮಗಳೇ ಮುಂದುವರಿದಿದ್ದು ಅನೇಕ ಯೋಜನೆಗಳು ಅನುದಾನ ಕೊರತೆಯಿಂದ ನೆನಗುದಿಗೆ ಬಿದ್ದಿವೆ. ಕೋವಿಡ್–19 ಹಾಗೂ ಅಕ್ಸಿಜನ್ ದುರಂತದಲ್ಲಿ ಮೃತಪಟ್ಟವರಿಗೆ ಯಾವುದೇ ಪರಿಹಾರ ನೀಡಿಲ್ಲ. ಆದರೆ, ನಮ್ಮ ಸಮಾವೇಶ ಇದೆ ಎಂಬ ಕಾರಣಕ್ಕೆ ಇಂದು ಮಧ್ಯಾಹ್ನ ಸಂತ್ರಸ್ತರಿಗೆ ಪರಿಹಾರ ಚೆಕ್ ವಿತರಣೆ ಮಾಡುತ್ತಿರುವುದು ನಾಚಿಕೆಗೇಡಿನ ಕ್ರಮವಾಗಿದೆ ಎಂದರು.

ಸಮಾವೇಶಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಿಂದ ಸಮಾವೇಶ ನಡೆಯುವ ಮಾರಿಗುಡಿ ಮೈದಾನದವರೆಗೆ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ನೇತೃತ್ವದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಪಾದಯಾತ್ರೆ ನಡೆಸಿದರು.

ಸಮಾವೇಶದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ ಮರಿಸ್ವಾಮಿ, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಆರ್. ನರೇಂದ್ರ, ಡಾ.ತಿಮ್ಮಯ್ಯ ಮಾಜಿ ಸಂಸದರಾದ ಸಿದ್ದರಾಜು, ಶಿವಣ್ಣ, ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್. ಜಯಣ್ಣ, ಎಸ್. ಬಾಲರಾಜ್, ಮುಖಂಡ ಹೆಚ್. ಎಂ. ಗಣೇಶ್ ಪ್ರಸಾದ್ ಮಹಿಳಾ ಘಟಕ ರಾಜಾಧ್ಯಕ್ಷೆ ಪುಷ್ಪಾ ಅಮರನಾಥ್ ಇತರರಿದ್ದರು.

ಆಧಾರ: ಉದಯವಾಣಿ, ದಿನಾಂಕ:03.01.2022

7. ಉದ್ಯಮಗಳು ಮುಚ್ಚಿದ್ದರೂ ಸಂಬಳ ಪಾವತಿ ನಿರಂತರ

ನಿರ್ವಹಣೆ ವೈಫಲ್ಯ, ಉತ್ಪಾದನಾ ವೆಚ್ಚ ಜಾಸ್ತಿ ಇತ್ಯಾದಿ ಕಾರಣಗಳಿಗೆ ನಷ್ಟಪೀಡಿತ 24 ಸಾರ್ವಜನಿಕ ಉದ್ಯಮ (ಪಿಎಸ್‌ಯು) ಗಳೂ ಬಂದ್ ಆಗಿ ವರ್ಷಗಳೇ ಕಳೆದಿವೆ. ಆದರೂ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಕೆಲಸವಿಲ್ಲದೆ ಕೂಡಿಸಿ ಸಂಬಳ, ಸಾರಿಗೆ ವೆಚ್ಚ ಪಾವತಿಸುತ್ತಿರುವುದು ಬಯಲಾಗಿದೆ.

ವಿಧಾನಸೌಧದಲ್ಲಿ ನಡೆದ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ ಸಭೆಯಲ್ಲಿ ಈ ವಿಷಯ ತಿಳಿದ ಅನೇಕ ಸದಸ್ಯರು ಅಚ್ಚರಿ ವ್ಯಕ್ತಪಡಿಸಿ ಅನಗತ್ಯ ಹೊರೆ ತಪ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ನಷ್ಟದ ಕಾರಣಕ್ಕೆ ಉದ್ಯಮಗಳನ್ನು ಮುಚ್ಚಿದ ನಂತರ ಅಲ್ಲಿರುವ ಅಧಿಕಾರಿಗಳು ಸಿಬ್ಬಂದಿಯನ್ನು ಹುದ್ದೆಸಹಿತ ಬೇರೆಡೆ ಸ್ಥಳಾಂತರಿಸಬೇಕಾಗಿತ್ತು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸಂಬಳ, ಸಾರಿಗೆ ವೆಚ್ಚ ಪಾವತಿ ಉಳಿಸಿಕೊಳ್ಳಬಹುದಾಗಿತ್ತು ಎಂದು ಕೆಲವು ಸದಸ್ಯರು ಅಸಹನೆ ಹೊರ ಹಾಕಿದ್ದಾರೆ. ಬಂದ್ ಮಾಡಿರುವ ನಿಗಮಗಳ ಅಧಿಕಾರಿಗಳು ಮತ್ತು ನೌಕರರನ್ನು ಖಾಲಿ ಹುದ್ದೆಗಳಿಗೆ ವರ್ಗಾಯಿಸಿದರೆ, ಕೆಲಸ ತೆಗೆದುಕೊಳ್ಳುವ ಜೊತೆಗೆ ಸರ್ಕಾರದ ಬೊಕ್ಕಸಕ್ಕೂ ಹೊರೆ ತಗ್ಗುತ್ತದೆ ಎಂದು ಸಮಿತಿ ಸಲಹೆ ನೀಡಿದೆ ಎಂದು ಮೂಲಗಳು ತಿಳಿಸಿವೆ. ಮುಚ್ಚಿರುವ ನಿಗಮಗಳಲ್ಲಿ ಬಂಡವಾಳ ಹಿಂತೆಗೆತ ಅಥವಾ ಖಾಸಗಿಗೆ ಒಪ್ಪಿಸುವ ಸಾಧ್ಯತೆಗಳನ್ನು ಪರಿಶೀಲಿಸಬೇಕು. ಈ ಕುರಿತು ಕಾರ್ಯಸಾಧು ವರದಿಯನ್ನು ಸಿದ್ಧಪಡಿಸಿ ಸಮಿತಿ ಮುಂದಿನ ಸಭೆಗೆ ತರಬೇಕು ಎಂದು ಕೆಲವು ಸದಸ್ಯರು ಸಲಹೆ ನೀಡಿದ್ದಾರೆ.

ಒಟ್ಟು ಸಾರ್ವಜನಿಕ ಉದ್ಯಮಗಳ ಪೈಕಿ 37 ಲಾಭದಾಯಕವಾಗಿದ್ದರೆ 18 ನಷ್ಟದಲ್ಲಿದ್ದರೂ ಚಾಲ್ತಿಯಲ್ಲಿವೆ. ರೋಗಗ್ರಸ್ತ 24 ಪಿಎಸ್‌ಯುಗಳನ್ನು ಮುಚ್ಚಲಾಗಿದ್ದು, ಸರ್ಕಾರ ಅರ್ಥಿಕ ನೆರವು ನೀಡಿ ಪುನಶ್ಚೇತನಕ್ಕೆ ಅವಕಾಶ ಕಲ್ಪಿಸಿದರೂ ಪ್ರಯೋಜನವಾಗಿಲ್ಲವೆಂಬ ಮಾಹಿತಿಯನ್ನು ಸಭೆಗೆ ನೀಡಲಾಗಿದೆ. ಪಿಎಸ್‌ಯುಗಳು ವಿವಿಧ ಇಲಾಖೆಗಳೊಂದಿಗೆ ಜೋಡಣೆಯಾಗಿರುವ ಕಾರಣ ಮುಂದಿನ ಸಭೆಗೆ ಆಯಾ ಘಟಕಗಳಿಗೆ ಸಂಬಂಧಿಸಿದ ಅಧಿಕಾರಿಗಳು ಮಾಹಿತಿ ಸಹಿತ ಹಾಜರಿರಬೇಕು ಎಂಬ ಸೂಚನೆಯನ್ನು ಸಮಿತಿ ನೀಡಿದೆ ಎಂದು ಮೂಲಗಳು ತಿಳಿಸಿವೆ. ಸಮಿತಿ ಸದಸ್ಯರೂ ಆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಭೆಗೆ ಹಾಜರಾಗುವ ಮೂಲಕ ಗಮನಸೆಳೆದರು.

ಆಧಾರ: ವಿಜಯವಾಣಿ, ದಿನಾಂಕ:05.01.2022

8. ಮತ್ತೆ 50 : 50 ರೂಲ್ಸ್

ಕೊರೋನಾ ಮತ್ತು ಒಮಿಕ್ರಾನ್ ಕೇಸುಗಳ ಹೆಚ್ಚಳ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಮತ್ತಷ್ಟು ಬಿಗಿನಿಯಮ ಜಾರಿ ಮಾಡಲಾಗಿದೆ. ಹೋಟೆಲ್, ಪಬ್, ಬಾರ್ ರೆಸ್ಟೋರೆಂಟ್ ಮಾಲ್

ಚಿತ್ರಮಂದಿರಗಳಲ್ಲಿ ಆಸನ ಸಾಮರ್ಥ್ಯದ ಶೇ.50ರಷ್ಟು ಮಂದಿ ಪ್ರವೇಶಕ್ಕೆ ಅನುಮತಿ ನೀಡಲಾಗಿದೆ. ಹಾಗೆಯೇ ಮುದಿನ ಎರಡು ವಾರ ವೀಕೆಂಡ್ ಕರ್ಫ್ಯೂ ಜಾರಿಯಲ್ಲಿರಲಿದೆ.

ಮುಖ್ಯಮಂತ್ರಿಯವರ ನೇತೃತ್ವದಲ್ಲಿ ರಾತ್ರಿ ಹಿರಿಯ ಸಚಿವರು ಕೊರೋನಾ ತಾಂತ್ರಿಕ ತಜ್ಞರು ಮತ್ತು ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಎಲ್ಲಾ ನಿಯಮಗಳು ರಾತ್ರಿಯಿಂದ ಜನವರಿ 19ರವರೆಗೆ ಜಾರಿಯಾಗಲಿವೆ. ರಾಜ್ಯಾದ್ಯಂತ ವೀಕೆಂಡ್ ಕರ್ಫ್ಯೂ ಜಾರಿಯಲ್ಲಿರಲಿದೆ. ಈ ಅವಧಿಯಲ್ಲಿ ಹಾಲು ತರಕಾರಿ ಆಹಾರ ಧಾನ್ಯ ಔಷಧ ಸೇರಿ ಅಗತ್ಯ ವಸ್ತುಗಳು ಹೊರತುಪಡಿಸಿದರೆ ಬೇರೆ ಯಾವುದೇ ಚಟುವಟಿಕೆಗೆ ಅವಕಾಶವಿಲ್ಲ ಉಳಿದಂತೆ ಈಗಿರುವ ಪ್ರಕಾರ ರಾತ್ರೀ ಕರ್ಫ್ಯೂ ಎರಡು ವಾರ ಜಾರಿಯಲ್ಲಿರುತ್ತದೆ.

ಹೋಟೆಲ್, ಪಬ್, ಬಾರ್ ರೆಸ್ಟೋರೆಂಟ್ ಮಾಲ್, ಚಿತ್ರಮಂದಿರಗಳಲ್ಲಿ ಆಸನ ಸಾಮರ್ಥ್ಯದ ಶೇ.50ರಷ್ಟು ಮಂದಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಎರಡು ಡೋಸ್ ಪಡೆಯುವುದು ಕಡ್ಡಾಯವಾಗಿದೆ. ಎರಡು ವಾರ ಯಾವುದೇ ರೀತಿಯ ರ್‍ಯಾಲಿ, ಪ್ರತಿಭಟನೆ, ಜಾತ್ರೆ, ಯಾತ್ರೆಗೆ ಅವಕಾಸ ಇಲ್ಲ. ಇದು ಎಲ್ಲ ರಾಜಕೀಯ ಪಕ್ಷ ಸಂಘ–ಸಂಸ್ಥೆಗಳಿಗೂ ಅನ್ವಯಿಸಲಿದೆ. ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ದರ್ಶನಕ್ಕೆ ಮಾತ್ರ ಅವಕಾಸ ನೀಡಲಾಗಿದೆ. ಆದರೆ ಯಾವುದೇ ಸೇವೆಗಳಿಗೆ ಅವಕಾಶವಿಲ್ಲ.

ಸಭೆಯ ನಂತರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರಾದ ಆರ್. ಅಶೋಕ್ ಹಾಗೂ ಡಾ. ಕೆ. ಸುಧಾಕರ್, ರಾಜ್ಯದಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಬೆಂಗಳೂರಿನಲ್ಲಿ ಒಂದೇ ದಿನ 3048 ಕೊರೋನಾ ಹಾಗೂ 147 ಒಮಿಕ್ರಾನ್ ಪ್ರಕರಣಗಳು ದಾಖಲಾಗಿವೆ. ಗೋವಾ ಮಹಾರಾಷ್ಟ್ರ ಕೇರಳದಿಂದ ರಾಜ್ಯಕ್ಕೆ ಬರುವವರು ಆರ್‌ಟಿಪಿಸಿಆರ್ ವರದಿ ತರುವುದು ಕಡ್ಡಾಯ. ವಿದೇಶಿ ಪ್ರವಾಸಿಗರಿಗೆ ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ಕಡ್ಡಾಯ. ಪಾಸಿಟಿವ್ ಪತ್ತೆಯಾದರೆ ಸಾಂಸ್ಥಿಕ ಕ್ವಾರಂಟೈನ್ ಕಡ್ಡಾಯವಾಗಲಿದೆ ಎಂದು ತಿಳಿಸಿದರು.

3ನೇ ಅಲೆ ಪ್ರವೇಶ: ಕೊರೋನಾ ಕೇಸುಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದು 3ನೇ ಅಲೆ ಲಕ್ಷಣ ಎಂದು ಅರೋಗ್ಯ ಸಚಿವ ಡಾ: ಕೆ. ಸುಧಾಕರ್ ಹೇಳಿದ್ದಾರೆ. ಒಟ್ಟು ಪ್ರಕರಣದಲ್ಲಿ ಶೇ.90ರಷ್ಟು ಬೆಂಗಳೂರು ನಗರದಲ್ಲಿ ಕಂಡು ಬರುತ್ತಿದೆ. ದೇಶದಲ್ಲಿ ಮೆಟ್ರೋ ಪಾಲಿಟನ್ ನಗರದಲ್ಲಿಯೇ ಅತ್ಯಧಿಕ ಪ್ರಕರಣಗಳು ಕಂಡು ಬರುತ್ತಿದೆ ಎಂದು ತಿಳಿಸಿದರು.

2 ಸಾವಿರ ದಾಟಿದ ಕೇಸ್: ರಾಜ್ಯದಲ್ಲಿ 2479 ಪ್ರಕರಣ ಪತ್ತೆಯಾಗಿದ್ದು, ಸೋಂಕಿನಿಂದ ಬಳಲುತ್ತಿದ್ದ 4 ಮಂದಿ ಮೃತಪಟ್ಟಿದ್ದಾರೆ. ಒಟ್ಟು ಪ್ರಕರಣದಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ 2,053 ಪ್ರಕರಣ ಪತ್ತೆಯಾಗುವ ಮೂಲಕ 24 ಗಂಟೆಯೊಳಗೆ ನಗರದಲ್ಲಿ ಸೋಂಕು ದ್ವಿಗುಣಗೊಂಡಿದೆ. 11,423 ಸಕ್ರಿಯ ಪ್ರಕರಣಗಳಿದ್ದು, 202 ಮಂದಿ ಸೋಂಕಿನಿಂದ ಗುಣಮುಖರಾಗಿದ್ದಾರೆ.

ಶಾಲಾ, ಕಾಲೇಜು ಬಂದ್: ಬೆಂಗಳೂರು ನಗರದಲ್ಲಿ ಎರಡು ವಾರಗಳವರೆಗೆ 10,11 ಹಾಗೂ 12ನೇ ತರಗತಿ ಹೊರತುಪಡಿಸಿ ಉಳಿದೆಲ್ಲಾ ಶಾಲೆಗಳು ಬಂದ್ ಆಗಲಿವೆ. ಹಾಗೆಯೇ ಮೆಡಿಕಲ್ ಮತ್ತು ಪ್ಯಾರ ಮೆಡಿಕಲ್ ಕಾಲೇಜು ಹೊರತುಪಡಿಸಿ ಉಳಿದೆಲ್ಲಾ ಕಾಲೇಜುಗಳು ಬಂದ್ ಆಗಲಿವೆ.

ಏನೇನು ಬದಲಾವಣೆ:

- ರಾತ್ರಿಯಿಂದಲೇ ವಾರಾಂತ್ಯ ಕರ್ಫ್ಯೂ
- ವೀಕೆಂಡ್ ಕರ್ಫ್ಯೂ ಅವಧಿಯಲ್ಲಿ ಅಗತ್ಯ ಸೇವೆ ಹೊರತುಪಡಿಸಿ ಎಲ್ಲ ಬಂದ್.
- ಚಿತ್ರಮಂದಿರ, ಬಾರ್ ಪಬ್, ಮಾಲ್ ಹೋಟೆಲ್‌ಗಳಲ್ಲಿ ಶೇ.50ರ ರೂಲ್.

- ಈಜುಕೊಳ, ಜಿಮ್, ಕ್ರೀಡಾ ಸಂಕೀರ್ಣಗಳಲ್ಲಿ ಶೇ.50ರ ಸಾಮರ್ಥ್ಯ.
- ಸರ್ಕಾರಿ ಕಛೇರಿಗಳಲ್ಲೂ ಶೇ.50ರ ಸಿಬ್ಬಂದಿ ಮಿತಿ ವಾರಕ್ಕೆ 5 ದಿನ ಕೆಲಸ
- ವಿದೇಶದಿಂದ ಬರುವ ಪ್ರಯಾಣಿಕರಿಗೆ ಸಾಂಸ್ಥಿಕ ಕ್ವಾರಂಟೈನ್
- ಮದುವೆ ಹೊರಾಂಗಣದಲ್ಲಿ 200 ಮಂದಿ ಒಳಾಂಗಣದಲ್ಲಿ 100 ಮಿತಿ.
- ಧಾರ್ಮಿಕ ಕೇಂದ್ರಗಳಲ್ಲಿ ದರ್ಶನಕ್ಕೆ ಮಾತ್ರ ಅವಕಾಶ 50 ಜನರ ಮಿತಿ
- ಪ್ರತಿಭಟನೆ, ರ್‍ಯಾಲಿ ರಾಜಕೀಯ ಧಾರ್ಮಿಕ ಕಾರ್ಯಕ್ರಮಗಳಿಗೆ ನಿರ್ಬಂಧ

ಆಧಾರ: ಉದಯವಾಣಿ, ದಿನಾಂಕ:05.01.2022

9. ಯಾತ್ರೆ ಸಂಘರ್ಷ ಸ್ವರೂಪ

ಮೇಕೆದಾಟು ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ ಕಾಂಗ್ರೆಸ್ ಹಮ್ಮಿಕೊಂಡಿರುವ ಪಾದಯಾತ್ರೆ ಸಂಘರ್ಷದ ಸ್ವರೂಪ ಪಡೆಯುವ ಲಕ್ಷಣಗಳು ಕಂಡುಬರುತ್ತವೆ.

ಸರ್ಕಾರದ ಮಾರ್ಗಸೂಚಿ ಉಲ್ಲಂಘಿಸಿ ಪಾದಯಾತ್ರೆ ಅಥವಾ ಬೇರೆ ರೀತಿಯ ಯಾತ್ರೆ ಮಾಡಿದರೆ ಕಾನೂನು ತನ್ನದೇ ಆದ ಕ್ರಮ ಕೈಗೊಳ್ಳಲಿದೆ ಎಂದು ಸಚಿವ ಡಾ:ಸುಧಾಕರ್ ಎಚ್ಚರಿಕೆ ನೀಡಿದ್ದಾರೆ. ಕೊರೋನಾ ನಿಯಮಾವಳಿ ಪಾಲಿಸಿ ಸುರಕ್ಷತಾ ಕ್ರಮಗಳೊಂದಿಗೆ ನಾವು ನೀರಿಗಾಗಿ ನಡಿಗೆ ಮಾಡಿಯೆ ತೀರುತ್ತೇವೆ ಪಾದಯಾತ್ರೆ ನಿಲ್ಲುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಆಡಳಿತಾರೂಢ ಬಿಜೆಪಿ ಹಾಗೂ ಪ್ರತಿಪಕ್ಷ ಕಾಂಗ್ರೆಸ್ ಮುಖಂಡರು ಪಾದಯಾತ್ರೆ ವಿಚಾರದಲ್ಲಿ ಆರೋಪ ಪ್ರತ್ಯಾರೋಪಗಳಲ್ಲೂ ತೊಡಗಿದ್ದು ರಾಜಕೀಯ ಸೋಂಕು ತಾಕಿದಂತಾಗಿದೆ.

ಸುಧಾಕರ್ ಹೇಳಿದ್ದೇನು: ಕಾಂಗ್ರೆಸ್ ಕಾರ್ಯಕ್ರಮದ ಕುರಿತು ಪ್ರತಿಕ್ರಿಯಿಸಿದ ಸಚಿವ ಡಾ:ಕೆ. ಸುಧಾಕರ್ ಕೊರೋನಾ ಮಾರ್ಗಸೂಚಿ ಎಲ್ಲರಿಗೂ ಅನ್ವಯ ಯಾವುದೇ ರೀತಿಯ ಪ್ರತಿಭಟನೆ, ಸಮಾವೇಶ, ಪಾದಯಾತ್ರೆ ಸೇರಿ ಯಾತ್ರೆಗಳಿಗೂ ಅವಕಾಶ ಇಲ್ಲ. ಉಲ್ಲಂಘನೆ ಮಾಡಿದರೆ ಕಾನೂನು ತನ್ನದೇ ಆದ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು. ಕಾಂಗ್ರೆಸ್ನವರು ಪಾದಯಾತ್ರೆ ಮಾಡಿಯೇ ತೀರುತ್ತಾರೆ ಎಂದರೆ ಜನರು ತೀರ್ಮಾನ ಮಾಡುತ್ತಾರೆ. ಅವರು ಎಲ್ಲವನ್ನೂ ನೋಡುತ್ತಿದ್ದಾರೆ ನಾವು ದುರುದ್ದೇಶದಿಂದ ಮಾರ್ಗಸೂಚಿ ಅಥವಾ ಕಾನೂನು ತರಲಿಲ್ಲ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಜನರ ಹಿತ ಕಾಯುವ ಮನಸ್ಸಿದೆ ಎಂದುಕೊಂಡಿದ್ದೇನೆ. ಮಹಾರಾಷ್ಟ್ರ ದೆಹಲಿಯ ಪರಿಸ್ಥಿತಿ ನೋಡಲಿ. ಆ ಪಕ್ಷದಲ್ಲಿ ಮುಖ್ಯಮಂತ್ರಿಯಾಗಿದ್ದವರು, ಹಲವಾರು ಖಾತೆ ನಿಭಾಯಿಸಿದ ಮಾಜಿ ಸಚಿವರು ಇದ್ದಾರೆ. ಅವರಿಗೆಲ್ಲಾ ಕನಿಷ್ಠ ತಿಳುವಳಿಕೆ ಇದೆ ಎಂದುಕೊಂಡಿದ್ದೇನೆ ಎಂದು ಹೇಳಿದರು.

ಸಿದ್ದು/ಡಿಕೆಶಿ ಹೇಳಿದ್ದೇನು: ಪಾದಯಾತ್ರೆ ವಿಚಾರದಲ್ಲಿ ಸಿದ್ದರಾಮಯ್ಯ ಅವರ ಜೊತೆ ಸಮಾಲೋಚನೆ ನಡೆಸಿದ ಡಿ.ಕೆ. ಶಿವಕುಮಾರ್ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ನಮ್ಮ ಯಾತ್ರೆ ನಿಲ್ಲದು ನಾವು ಸರ್ಕಾರ ನಡೆಸಿದವರು, ನಮಗೂ ಅರಿವಿದೆ. ಎಲ್ಲ ರೀತಿಯ ಕೊರೋನಾ ಮಾರ್ಗಸೂಚಿ ಅನುಸರಿಸಿ ನೀರಿಗಾಗಿ ನಡಿಗೆ ಮಾಡುತ್ತೇವೆ ಎಂದು ತಿಳಿಸಿದರು.

ನಮ್ಮ ನಡಿಗೆ ಕಾರ್ಯಕ್ರಮಕ್ಕೆ ಆಗಮಿಸುವ ಪ್ರತಿಯೊಬ್ಬರೂ ಮಾಸ್ಕ್ ಕಡ್ಡಾಯವಾಗಿ ಧರಿಸಲಿದ್ದಾರೆ. ಸಾಮಾಜಿಕ ಅಂತರ ಕಾಪಾಡಲಿದ್ದಾರೆ. ಸ್ಯಾನಿಟೈಸ್ ಸಹಿತ ಎಲ್ಲ ಸುರಕ್ಷತಾ ಕ್ರಮ ಅನುಸರಿಸಲಿದ್ದಾರೆ ಎಂದು ಹೇಳಿದರು

ಬಿಜೆಪಿಯವರು ಬೇಕಂತಲೇ ನಮ್ಮ ಪಾದಯಾತ್ರೆ ಹತ್ತಿಕ್ಕಲು.. ಷಡ್ಯಂತ್ರ ನಡೆಸಿದ್ದಾರೆ. ಎರಡುವರೆ ವರ್ಷದಿಂದ ಮೇಕೆದಾಟು ಯೋಜನೆ ವಿಚಾರದಲ್ಲಿ ಏನು ಮಾಡಿಲ್ಲ ಎಂಬುದು ಬಯಲಾಗುತ್ತದೆ. ಜನರ ಮುಂದೆ ಬೆತ್ತಲಾಗಬೇಕಾಗುತ್ತದೆ ಎಂದು ಪಾದಯಾತ್ರೆ ಹತ್ತಿಕ್ಕಲು ನಾನಾ ತಂತ್ರಕ್ಕೆ ಮೊರೆ ಹೋಗಿದ್ದಾರೆ ಎಂದು ತಿಳಿಸಿದರು. ಬಿಜೆಪಿಯವರು ಸಭೆ ಸಮಾರಂಭ ಯಾತ್ರೆ ಮಾಡುವಾಗ ಕೊರೋನಾ ಬಗ್ಗೆ ಚಕಾರ ಎತ್ತಲಿಲ್ಲ. ನಾವು ಪಾದಯಾತ್ರೆ ಮಾಡುತ್ತೇವೆ ಎಂದಾಕ್ಷಣ ಪ್ರತಿಯೊಬ್ಬರು ನೀಡಿದ ಹೇಳಿಕೆಗಳು ನಂತರ ಕೈಗೊಂಡ ತೀರ್ಮಾನ ನೋಡಿದರೆ ಇದು ವ್ಯವಸ್ಥಿತ ಷಡ್ಯಂತ್ರ ಎಂಬುದು ಸಾಬೀತಾಗಿವೆ ಎಂದು ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ:06.01.2022

10.ರಾಜಕಾರಣಕ್ಕಿಳಿದ ಮೇಲೆ ಅರ್ಹತೆ ಗಿಟ್ಟಿಸುವ ಗುಣ ಬೆಳೆಸಿಕೊಳ್ಳಿ : ಸಿಎಂ

ಜಗತ್ತಿನಲ್ಲಿ ನಿವೃತ್ತಿ ಮತ್ತು ಅರ್ಹತೆ ಪರಿಗಣನೆಗೆ ಬಾರದ ಯಾವುದಾದರೂ ಕ್ಷೇತ್ರವಿದೆ ಎಂದರೆ ಅದು ರಾಜಕಾರಣ, ಆದ್ದರಿಂದ ರಾಜಕಾರಣಕ್ಕೆ ಬಂದ ಮೇಲೆ ಅರ್ಹತೆ ಗಿಟ್ಟಿಸಿಕೊಳ್ಳುವ ಗುಣಧರ್ಮ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

ವಿಕಾಸಸೌಧದಲ್ಲಿ ವಿಧಾನ 'ಪರಿಷತ್ತಿನಿಂದ ನಿವೃತ್ತರಾಗುತ್ತಿರುವ 19 ಸದಸ್ಯರಿಗೆ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು ರಾಜಕಾರಣದಲ್ಲಿ ನಮಗೆ ನಾವೇ ಶಿಸ್ತು ಬದ್ಧ ಪರಿಮಿತಿ ಹಾಕಿಕೊಂಡು ಸಮಾಜ ನಿಮಿತ್ತ ಮತ್ತು ವೈಯಕ್ತಿಕ ಗುಣಧರ್ಮವನ್ನು ರೂಢಿಸಿಕೊಂಡು ಕೆಲಸ ಮಾಡಿದಾಗ ರಾಜಕಾರಣದಲ್ಲಿ ಮೇಲೆ ಬರಲು ಸಾಧ್ಯ ಎಂದರು.

ಹಿರಿಯರ ಮನೆ ಎಂದು ಕರೆಸಿಕೊಳ್ಳುವ ವಿಧಾನ ಪರಿಷತ್ ಸದಸ್ಯರು ತಮ್ಮ ಪಾತ್ರದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ವಿವಿಧ ಕ್ಷೇತ್ರಗಳಲ್ಲಿ ಪ್ರತಿನಿಧಿಸುವವರು ಇಲ್ಲಿರುವುದರಿಂದ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿ ಮೇಲ್ಮನೆಯ ಮಹತ್ವ ಹೆಚ್ಚಿಸಬೇಕು ಎಂದು ಹೇಳಿದರು.

ವಿಧಾನ ಪರಿಷತ್ತಿಗೆ ತನ್ನದೇ ಆದ ಇತಿಹಾಸವಿದೆ. ವಿವಿಧ ಕ್ಷೇತ್ರಗಳ ಪರಿಣಿತರು ವಿಧಾನಸಭೆ ಅಥವಾ ಲೋಕಸಭೆಗೆ ಆರಿಸಿ ಬರುವುದು ಕಷ್ಟ ಎಂಬ ಕಾರಣಕ್ಕೆ ರಾಜ್ಯಸಭೆ ಮತ್ತು ವಿಧಾನ ಪರಿಷತ್ ಸ್ಥಾಪಿಸಲಾಯಿತು. ವಿಷಯ ಪರಿಣಿತರು ಇಲ್ಲಿ ಆಯ್ಕೆಯಾಗಿ ಕಾನೂನು ರೂಪಿಸುವಲ್ಲಿ ಮಹತ್ವದ ಸಲಹೆಗಳನ್ನು ನೀಡಿದ್ದರು. ಇದರಿಂದ ಕಾಯ್ದೆಗಳಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿದ ಉದಾಹರಣೆಗಳು ಇವೆ. ವಿಧಾನ ಪರಿಷತ್ತಿನ ಸದಸ್ಯರು ತಮ್ಮ ಪಾತ್ರದ ಬಗ್ಗೆ ಆತ್ಮಾವಲೋಕನ ಮಾಡಿಕೊಂಡು ಕೆಲಸ ಮಾಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಬದಲಾದ ಪರಿಸ್ಥಿತಿಯಲ್ಲಿ ವಿಧಾನ ಪರಿಷತ್ ಅಗತ್ಯವಿದೆಯೇ ಎಂಬ ಪ್ರಶ್ನೆ ಉದ್ಭವವಾಗಿದೆ. ಆದರೆ ಹಿಂದೆ ಅಲ್ಲಿ ಅತ್ಯಂತ ಮಹತ್ವದ ಚರ್ಚೆಗಳು ನಡೆದಿದ್ದವು. ಅದರ ಇತಿಹಾಸ, ಪರಂಪರೆಯನ್ನು ಉಳಿಸಿಕೊಂಡು ಮುಂದುವರಿಯಬೇಕಾದ ಅಗತ್ಯವಿದೆ ಎಂದು ಹೇಳಿದರು.

ಸಭಾಪತಿ ಬಸವರಾಜ ಹೊರಟ್ಟಿ ವಿಧಾನ ಪರಿಷತ್ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಸಭಾಪತಿಗಳಾದ ಬಿ.ಎಲ್. ಶಂಕರ್. ಡಿ.ಎಚ್ ಶಂಕರಮೂರ್ತಿ, ವಿಧಾನ ಪರಿಷತ್ ಕಾರ್ಯದರ್ಶಿ ಕೆ. ಆರ್. ಮಹಾಲಕ್ಷ್ಮಿ, ವಿಧಾನ ಪರಿಷತ್ತಿನ ಸದಸ್ಯರು ಇದ್ದರು.

- ವಿಧಾನ ಪರಿಷತ್ತಿನಿಂದ ನಿವೃತ್ತರಾಗುತ್ತಿರುವ 19 ಮಂದಿಗೆ ಬೀಳ್ಕೊಡುಗೆ
- ಹಿರಿಯರ ಮನೆ ಸದಸ್ಯರು ತಮ್ಮ ಪಾತ್ರದ ಬಗ್ಗೆ ಆತ್ಮಾಲೋಕನ ಮಾಡಿಕೊಳ್ಳಲಿ
- ಮೇಲ್ಮನೆ ಇತಿಹಾಸ, ಪರಂಪರೆ ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡಲಿ ಮುಖ್ಯಮಂತ್ರಿ ಸಲಹೆ.

ಆಧಾರ: ವಿಶ್ವವಾಣಿ, ದಿನಾಂಕ:06.01.2022

11. ಬೆಂಗಳೂರಿಗೆ ಸರ್ಕಾರದ ಮಹಾ ಭರವಸೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗೆ ಮುನ್ನ ಮಹಾನಗರದ ಜನರ ಮುಂದೆ ರಾಜ್ಯ ಸರ್ಕಾರ ಭರವಸೆಗಳ ಮಳೆಯನ್ನೇ ಸುರಿಸಿದೆ.

ಮುಖ್ಯಮಂತ್ರಿ ಅಮೃತ ಯೋಜನೆಯಡಿ ವರ್ಷಕ್ಕೆ ರೂ.2 ಸಾವಿರ ಕೋಟಿಯಂತೆ ಮುಂದಿನ ಮೂರು ವರ್ಷಗಳಲ್ಲಿ ರೂ.ಆರು ಸಾವಿರ ಕೋಟಿ ಖರ್ಚು ಮಾಡುವ ನಿರ್ಣಯವನ್ನು ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಹೆಬ್ಬಾಳ ಜಂಕ್ಷನ್, ಕೆ.ಆರ್. ಪುರ , ವಿಮಾನ ನಿಲ್ದಾಣ ರಸ್ತೆಯ ಸಂಚಾರ ದಟ್ಟಣೆ ಕಡಿಮೆ ಮಾಡಲು ಫ್ಲೈಓವರ್, ರಸ್ತೆ ವಿಸ್ತರಣೆಯಂತಹ ಯೋಜನೆ ಕೈಗೆತ್ತಿಕೊಳ್ಳುವುದಾಗಿ ಘೋಷಿಸಿದೆ. ಆದರೆ, ಇದಕ್ಕೆ ಅನುದಾನದ ಲಭ್ಯತೆ ಬಗ್ಗೆ ಹೇಳಿಲ್ಲ ಇದು ನಮ್ಮ ವಿಜನ್ ಎಂದು ಸರ್ಕಾರ ಹೇಳಿಕೊಂಡಿದೆ.

ಸಂಪುಟ ಸಭೆ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಮುಖ್ಯಮಂತ್ರಿಯವರು 75ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಶೈಕ್ಷಣಿಕ, ಪಂಚಾಯತಿ, ಆರೋಗ್ಯ ಸೇರಿ ವಿವಿಧ ಕ್ಷೇತ್ರಕ್ಕೆ ವಿಶೇಷ ಯೋಜನೆ ರೂಪಿಸಿದ್ದರು, ಅದೇ ರೀತಿ ಬಿಬಿಎಂಪಿ ಮೂಲಸೌಕರ್ಯ ಅಭಿವೃದ್ಧಿಗೆ ನಗರೋತ್ಥಾನ ಯೋಜನೆಗೆ ಅನುಮೋದನೆ ನೀಡಿದ್ದಾರೆ. ಇದಕ್ಕಾಗಿ ಸರ್ಕಾರ ಪ್ರತ್ಯೇಕ ಅನುದಾನ ಬಳಸಲಿದೆ ಎಂದು ತಿಳಿಸಿದರು.

ಸಂಚಾರ ಸಮಸ್ಯೆ ಪರಿಹಾರಕ್ಕೆ ಸೂತ್ರ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿಬಿಎಂಪಿ, ಬಿಎಂಟಿಸಿ, ಬೆಸ್ಕಾಂ, ಬೆಂಗಳೂರು ಜಲಮಂಡಳಿ ಮತ್ತು ಕ್ರೆಡೈನೊಂದಿಗೆ ಪರಸ್ಪರ ಸಂವಾದ ಮತ್ತು ಐದು ವಿಭಿನ್ನ ಆಯ್ಕೆ ಪರಿಶೀಲಿಸಿ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬರಲಾಗಿದೆ ಆ ಪ್ರಕಾರ ಹೆಬ್ಬಾಳ ಸೇರಿ ವಿವಿಧ ಪ್ರಮುಖ ರಸ್ತೆಗಳ ಸಂಚಾರ ಸಮಸ್ಯೆ ಪರಿಹಾರಕ್ಕೆ ಪ್ರಸ್ತಾವನೆ ಸಿದ್ಧವಾಗಿದೆ.

- ನಗರದಿಂದ ವಿಮಾನ ನಿಲ್ದಾಣಕ್ಕೆ ಅಸ್ತಿತ್ವದಲ್ಲಿರುವ ಮೇಲುರಸ್ತೆಯ ಪಶ್ಚಿಮಕ್ಕೆ ಹೊಸ 4 ಪಥದ ಮೇಲುರಸ್ತೆ ಹಾಗೂ ಈ ಮೇಲುರಸ್ತೆಯ 3 ಪಥಗಳು ವಿಮಾನ ನಿಲ್ದಾಣದ ಕಡೆಗೆ ಮುಂದುವರಿಯುತ್ತದೆ. 2 ಪಥಗಳು ತುಮಕೂರು ರಸ್ತೆ ಕಡೆಗೆ ಇಳಿಯುವುದು.
- ತುಮಕೂರು ರಸ್ತೆಯಿಂದ ಕೆ.ಆರ್. ಪುರದ ಕಡೆಗೆ 3 ಪಥದ ಹೊಸ ಕೆಳಸೇತುವೆ
- ಕೆ.ಆರ್. ಪುರದಿಂದ ನಗರಕ್ಕೆ 2 ಪಥದ ಹೊಸ ಮೇಲು ಸೇತುವೆ.
- ಕೆ. ಆರ್. ಪುರದಿಂದ ವಿಮಾಣ ನಿಲ್ದಾಣಕ್ಕೆ ಎರಡು ಪಥದ ಹೊಸ ಮೇಲು ಸೇತುವೆ
- ಅಸ್ತಿತ್ವದಲ್ಲಿರುವ ಹೆಬ್ಬಾಳ ಮೆಲ್ಸೇತುವೆಯ ಪೂರ್ವಕ್ಕೆ ಹೊಸ 3 ಪಥದ ಮೇಲ್ಸೇತುವೆಯನ್ನು ವಿಮಾನ ನಿಲ್ದಾಣದಿಂದ ನಗರದ ಕಡೆ ಪ್ರಸ್ತಾಪಿಸಲಾಗಿದೆ. ಕೆ. ಆರ್. ಪುರದಿಂದ ನಗರಕ್ಕೆ ಎರಡು ಪಥದ ಮೇಲ್ಸೇತುವೆಯ ಹೊಸ ಮೇಲು ಸೇತುವೆಯಲ್ಲಿ ವಿಲೀನಗೊಳ್ಳಲಿದೆ ಮತ್ತು 4 ಪಥ ಇರಲಿವೆ.

- ವಿಮಾಣ ನಿಲ್ದಾಣದಿಂದ ಕೆ.ಆರ್. ಪುರ ಕಡೆಗೆ ಅಸ್ತಿತ್ವದಲ್ಲಿರುವ ಸರ್ವೀಸ್ ರಸ್ತೆಯನ್ನು 2 ಪಥದಿಂದ 3 ಪಥವಾಗಿ ಅಗಲೀಕರಣ ಮಾಡಲಾಗುತ್ತದೆ.
- ವಿಮಾನ ಇಲ್ದಾಣದಿಂದ ತುಮಕೂರು ರಸ್ತೆ ಕಡೆಗೆ ಹಾಲಿ ಇರುವ 2 ಪಥದ ರಸ್ತೆಗೆ ಸಮಾನಾಂತರವಾಗಿ ಹೊಸ 4 ಪಥದ ನೆಲಮಟ್ಟದ ರಸ್ತೆ ನಿರ್ಮಾಣ.
- ಕೆ.ಆರ್. ಪುರದಿಂದ ತುಮಕೂರು ರಸ್ತೆ ಕಡೆಗೆ ಈಗಿರುವ ನೇರರಸ್ತೆಯನ್ನು 4 ಪಥದ ರಸ್ತೆಯಾಗಿ ಅಗಲೀಕರಣಗೊಳಿಸುವುದು.
- ತುಮಕೂರು ರಸ್ತೆಯಿಂದ ಕೆ.ಆರ್ ಪುರ ಕಡೆಗೆ ಹೊಸ ಎರಡು ಪಥಗಳ ಯು–ಟರ್ನ್ ಅಂಡರ್ ಪಾಸ್ ನಿರ್ಮಾಣ.

ಸಂಪುಟದ ತೀರ್ಮಾನಗಳು:

- ಬೆಂಗಳೂರು ಪೂರ್ವ ತಾಲೂಕಿನ 22 ಕೆರೆಗಳಿಗೆ ಕೆ.ಆರ್.ಪುರ ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ಯೋಜನೆ ಹಾಗೂ ಹೊಸಕೋಟೆ ತಾಲ್ಲೂಕಿನ ದೊಡ್ಡಕೆರೆಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ಪುನರುಜ್ಜೀವನ ಕಾಮಗಾರಿಗೆ ಒಟ್ಟಾರೆ ರೂ.93.50 ಕೋಟಿ ಅಂದಾಜಿನಲ್ಲಿ ಕೈಗೊಳ್ಳಲು ಅವಕಾಶ.
- ತೊರೆಕಾಡನಹಳ್ಳಿ ಹಾರೋಹಳ್ಳಿ ತಾತಗುಣಿಯ ಕಾವೇರಿ 1ನೇ ಹಂತ, 2ನೇ ಹಂತ ಹಾಗೂ 3ನೇ ಹಂತ ಜಲರೇಚರ (ಮೋಟರ್) ಯಂತ್ರಾಗಾರದಲ್ಲಿ ವಿದ್ಯುತ್ ಸ್ವಿಚ್‌ಗೇರ್‌ಗಳ ಪುನರ್ ನಿರ್ಮಾಣ ಕಾಮಗಾರಿ ಮಾಡಲು ರೂ.44.50 ಕೋಟಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ.
- ಬೆಂಗಳೂರಿನಲ್ಲಿ ಹಂಸಧ್ವನಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಸಿಬ್ಬಂದಿಗೆ ಅವರ ನೇಮಕಾತಿಯಲ್ಲಿ ಒಂದು ಬಾರಿಗೆ ಅನ್ವಯವಾಗುವಂತೆ ರೋಸ್ಟರ್ ಅಳವಡಿಸುವುದರಿಂದ ವಿನಾಯಿತಿ. ಒನ್ ಟೈಮ್ ರೀತಿ ಪಿಂಚಣಿ ನೀಡಲು ನಿರ್ಧಾರ.

ಬನಶಂಕರಿಯಲ್ಲಿ ವರ್ತುಲ ಸ್ಕೈಲ್ ವಾಕ್: ಬನಶಂಕರಿ ಮೆಟ್ರೋ ನಿಲ್ದಾಣ, ಬನಶಂಕರಿ ಬಸ್ ನಿಲ್ದಾಣ ಮತ್ತು ಬನಶಂಕರಿ ದೇವಸ್ಥಾನವೂ ಒಂದು ಪ್ರದೇಶದಲ್ಲಿ ಬರುವುದರಿಂದ ಸಂಚಾರ ದಟ್ಟಣೆ ಕಡಿಮೆ ಮಾಡಲು ಬಿಎಂಆರ್‌ಸಿಎಲ್ ಅಧ್ಯಯನ ಕೈಗೊಂಡಿದೆ. ಎತ್ತರಿಸಿದ ಸ್ಕೈವಾಕ್ ಪ್ರಸ್ತಾವನೆಯಲ್ಲಿ ಎಲ್ಲ ದಿಕ್ಕುಗಳಲ್ಲಿ ಪಾದಚಾರಿಗಳ ಸುರಕ್ಷತೆಗೆ ಒತ್ತು ನೀಡುವ ಜೊತೆಗೆ ಬಿಎಂಟಿಸಿ ಸರಾಗ ಸಂಚಾರ ಸುಗಮಗೊಳಿಸಲಿದೆ.

300 ಎಲೆಕ್ಟ್ರಿಕ್ ಬಸ್ ಸೇವೆಗೆ ಸಮ್ಮತಿ: ಬಿಎಂಟಿಸಿ ರಾಜ್ಯ ಸರ್ಕಾರದ ರೂ.100 ಕೋಟಿ ನೆರವಿನೊಂದಿಗೆ ಕೇಂದ್ರ ಸರ್ಕಾರ ಪ್ರತೀ ಬಸ್ಸಿಗೆ ನೀಡುವ ಗರಿಷ್ಠ ಪ್ರೋತ್ಸಾಹಧನ ಸೇರಿಸಿ 300 ನಾನ್ ಎ.ಸಿ. ಎಲೆಕ್ಟ್ರಿಕ್ ಬಸ್‌ಗಳ ಸೇವೆ ಬಳಸಿಕೊಳ್ಳಲು ಸಂಪುಟ ಒಪ್ಪಿಗೆ ನೀಡಿದೆ. ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್ ಬಿಲ್ಡಿಂಗ್ ಮೂಲಕ ಒಪೆಕ್ಸ್ ಮಾದರಿಯಲ್ಲಿ ಕಾರ್ಯಾಚರಣೆ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕೋವಿಡ್ ಬಳಿಕ ಎ.ಸಿ. ವಾಹನಕ್ಕೆ ಬೇಡಿಕೆ ಇಲ್ಲದ ಕಾರಣ ನಾನ್ ಎ.ಸಿ. ಬಸ್ ಬಳಸಲು ನಿರ್ಧರಿಸಲಾಗಿದೆ. ಹಾಗೆಯೇ ಮೂರು ಕೆಟಗರಿ ದರ ನಿಗದಿ ಮಾಡಿಕೊಂಡೂ ಸೇವೆ ಪಡೆದುಕೊಳ್ಳಲಾಗುತ್ತದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ರೂ.238 ಕೋಟಿ ಭೂ ಸಾರಿಗೆ ಸೆಸ್ ಮನ್ನಾ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಯಂಘೋಷಣೆ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ 2016–17 ಸಾಲಿನಿಂದ ಕೆಲವು ತೆರಿಗೆದಾರರು ವಲಯ ವರ್ಗೀಕರಣವನ್ನು ತಪ್ಪಾಗಿ ಘೋಷಿಸಿಕೊಂಡಿರುವ ಪ್ರಕರಣದ ಬಗ್ಗೆ ಸಂಪುಟದಲ್ಲಿ ಚರ್ಚೆ ನಡೆಯಿತು.

ತಪ್ಪಾಗಿ ತೆರಿಗೆ ಕಟ್ಟಿದ ರೂ.78 ಸಾವಿರ ಪ್ರಕರಣ ಗುರುತಿಸಿದ್ದು, 11 ಸಾವಿರ ಮಂದಿಗೆ ನೋಟೀಸ್ ಜಾರಿ ಮಾಡಿ ಪಾವತಿ ಮಾಡಬೇಕಾದ ವ್ಯತ್ಯಾಸದ ಮೊತ್ತಕ್ಕೆ ದುಪ್ಪಟ್ಟು ದಂಡ ಮತ್ತು ಬಡ್ಡಿಯನ್ನು ತೆರಿಗೆದಾರರು ಪಾವತಿಸುವಂತೆ ಸೂಚಿಸಲಾಗಿತ್ತು. ಈ ಬಗ್ಗೆ ಚರ್ಚೆ ನಡೆದು ವಲಯ ಗುರುತಿಸುವಲ್ಲಿ ವ್ಯತ್ಯಾಸವಾಗಿ ವಿವಾದವಾಗಿತ್ತು.

ಈಗಾಗಲೇ ದಂಡ ಕಟ್ಟಿದವರಿಗೆ ಹೆಚ್ಚುವರಿಯಾಗಿ ತೆರಿಗೆ ಕಟ್ಟಿದವರಿಗೆ ಮುಂದಿನ ತೆರಿಗೆ ವೇಳೆ ಹೆಚ್ಚುವರಿ ಮೊತ್ತ ಹೊಂದಾಣಿಕೆ ಮಾಡುವುದು ಮತ್ತು ಕಡಿಮೆ ಕಟ್ಟಿದವರಿದ್ದರೆ ಬ್ಯಾಂಕ್ ಬಡ್ಡಿ ದರ (ಸರಳ ದರ) ದಂಡ ಕಟ್ಟಿಸಿಕೊಳ್ಳಲು ಸಮ್ಮತಿಸಲಾಗಿದೆ. ಹಾಗೆಯೆ ಬಿಬಿಎಂಪಿಯ ಸ್ವತ್ತುಗಳ 2013–14ನೇ ಸಾಲಿನಲ್ಲಿ ಶೇ.2 ಭೂಸಾರಿಗೆಗೆ ಸೆಸ್ ಹಾಕಲಾಗಿತ್ತು. ಆಗ ಬಿಬಿಎಂಪಿ ಒಪ್ಪದೇ ನಿರ್ಣಯ ಮಾಡಿತ್ತು. ಆದರೆ ಇದು ಕಡ್ಡಾಯ ಎಂದು ಸರ್ಕಾರ ಪುನ: ಹೇಳಿದರೂ ಸೆಸ್ ಸಂಗ್ರಹಿಸಲಿಲ್ಲ. ಅದನ್ನು ಕಟ್ಟಲಿಲ್ಲ. ಆ ಮೊತ್ತ ರೂ.238 ಕೋಟಿ ಆಗುತ್ತದೆ. ಸೆಸ್ ಸಂಗ್ರಹ ಮಾಡಿಲ್ಲ ಎಂದು ಸಿಎಜಿ ಕೂಡ ಆಕ್ಷೇಪಿಸಿತ್ತು. ಇದೀಗ ಈ ಮೊತ್ತವನ್ನು ಸರ್ಕಾರ ಮನ್ನಾ ಮಾಡಲು ನಿರ್ಧರಿಸಿದೆ.

ಆಧಾರ: ವಿಜಯವಾಣಿ, ದಿನಾಂಕ:07.01.2022

12.1924ರಲ್ಲೇ ಒಪ್ಪಿಗೆ ನೀಡಿದ್ದ ತಮಿಳುನಾಡು

ವಿದ್ಯುತ್ ಯೋಜನೆಗಾಗಿ ಮೇಕೆದಾಟು ಬಳಿ ಜಲಾಶಯ ನಿರ್ಮಿಸಲು 1924ರಲ್ಲಿ ತಮಿಳುನಾಡು ಒಪ್ಪಿಗೆ ನೀಡಿತ್ತು ಆದರೆ, ರಾಜ್ಯ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸುಪ್ರೀಂಕೋರ್ಟ್ ಮುಂದೆ ವಾದ ಮಂಡಿಸಿಲ್ಲ ಎಂದು ನೀರಾವರಿ ತಜ್ಞ ಕ್ಯಾಪ್ಟನ್ ಎಸ್. ರಾಜಾರಾವ್ ಅಭಿಪ್ರಾಯಪಟ್ಟರು.

ಮೇಕೆದಾಟು ಸಮತೋಲನ ಜಲಾಶಯ ನಿಮಾಣ – ಬೆಂಗಳೂರು ನಗರ ಮತ್ತು ಇತರ ಜಿಲ್ಲೆಗಳಿಗೆ ವರದಾನವೇ ಕುರಿತು ದಿ ಇನ್ಸ್ಟಿಟ್ಯೂಷನ್ ಅಫ್ ಎಂಜಿನಿಯರ್ಸ್ ನಗರದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು ಅಂದಿನ ಮೈಸೂರು ದರ್ಬಾರ್ ಜೊತೆ ಮದ್ರಾಸ್ ಸರ್ಕಾರ ಮಾಡಿಕೊಂಡ ಒಪ್ಪಂದದ ಬಗ್ಗೆ 1924ರ ಜುಲೈ 3 ರಂದು ಅಲ್ಲಿನ ಸರ್ಕಾರದ ಲೋಕೋಪಯೋಗಿ ಇಲಾಖೆಯ ಜಂಟಿ ಕಾರ್ಯದರ್ಶಿ ಪಿ. ಹಾಕಿನ್ಸ್ ಅವರೇ ಪತ್ರಿಕಾ ಪ್ರಕಟಣೆ ನೀಡಿದ್ದರು ಎಂದು ದಾಖಲೆ ಸಮೇತ ವಿವರಿಸಿದರು.

ಕಾವೇರಿ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳು ಸುದೀರ್ಘ ಅವಧಿ ವಿಚಾರಣೆ ನಡೆಸಿವೆ. ಅಂತರರಾಜ್ಯ ಜಲ ಕಾಯ್ದೆಯನ್ನು ವಿಶ್ಲೇಷಿಸಿದಾಗ ಕರ್ನಾಟಕಕ್ಕೆ ಸುಪ್ರೀಂಕೋರ್ಟ್‌ನಿಂದಲೂ ಅನ್ಯಾಯವಾಗಿದೆ. ನೀರಿನ ಕೊರತೆಯಾದಾಗ ರಾಜ್ಯಗಳಿಗೆ ಪರಿಹಾರ ಸೂತ್ರವನ್ನು ನೀಡಲಾಗಿದೆ. ಆದರೆ, ಹೆಚ್ಚುವರಿ ನೀರು ಲಭ್ಯವಿದ್ದಾಗ ಏನು ಮಾಡಬೇಕು ಎನ್ನುವುದನ್ನು ಕಾವೇರಿ ನ್ಯಾಯಾಮಂಡಳಿ ತಿಳಿಸಿಲ್ಲ. ಹೆಚ್ಚುವರಿ ನೀರನ್ನು ಸಹ ನಾವೇಕೆ ಬಳಸಿಕೊಳ್ಳಬಾರದು ಈ ಬಗ್ಗೆ ರಾಜ್ಯದ ಪರ ವಕೀಲರು ಸಹ ಪ್ರಶ್ನಿಸಿಲ್ಲ ಎಂದು ಹೇಳಿದರು.

ಮೇಕೆದಾಟು ಯೋಜನೆ ಅನುಷ್ಠಾನದಿಂದ ವನ್ಯಜೀವಿಗಳಿಗೆ ಆಗುವ ತೊಂದರೆಗಳ ಬಗ್ಗೆ ಸರ್ಕಾರ ಗಮನ ನೀಡಲೇಬೇಕು ಅಳಿವಿನ ಅಂಚಿನಲ್ಲಿ ವನ್ಯ ಜೀವಿಗಳನ್ನು ರಕ್ಷಿಸಬೇಕು ಎಂದು ಸಲಹೆ ನೀಡಿದರು.

ತಮಿಳುನಾಡಿಗೆ ಹೆಚ್ಚು ಅನುಕೂಲ: ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಹೆಚ್ಚು ಅನುಕೂಲಗಳಿದ್ದರೂ ವಿರೋಧ ವ್ಯಕ್ತಪಡಿಸುತ್ತಿದೆ ಎಂದು ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ ಅಧ್ಯಕ್ಷ ಮತ್ತು ಕೆಪಿಸಿಸಿ ವಕ್ತಾರ ಎಂ. ಲಕ್ಷಣ್ ಹೇಳಿದ್ದಾರೆ.

1991 ರಿಂದ 2021ರವರೆಗೆ ಹೆಚ್ಚುವರಿ ನೀರನ್ನು ತಮಿಳುನಾಡಿಗೆ ಹರಿಸಲಾಗಿದೆ. ಈ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳದ ಕಾರಣ 85 ರಿಂದ 90 ಟಿಎಂಸಿ ಅಡಿ ನೀರು ಸಮುದ್ರಕ್ಕೆ ಹರಿದು ಹೋಗಿದೆ ಎಂದರು. ಮೇಕೆದಾಟು ಯೋಜನೆಯಿಂದ ಬೆಂಗಳೂರು ಸೇರಿದಂತೆ ಸುತ್ತಮುತ್ತ ಜಿಲ್ಲೆಗಳ 2.5 ಕೋಟಿ ಜನರಿಗೆ ಅನುಕೂಲವಾಗಲಿದೆ. ಆದರೆ, ರಾಜ್ಯದಲ್ಲಿ ಜಲಾಶಯ ನಿರ್ಮಿಸಲು ತೊಡಕಗಳು ಹೆಚ್ಚು. ಕರ್ನಾಟಕದಲ್ಲೇ ಕಡಿಮೆ ಜಲಾಶಯ ನಿರ್ಮಿಸಲು ತೊಡಕುಗಳು ಹೆಚ್ಚು. ಕರ್ನಾಟಕದಲ್ಲೇ ಕಡಿಮೆ ಜಲಾಶಯಗಳಿವೆ. ದೇಶದಲ್ಲಿ 5386 ಜಲಾಶಯಗಳಿವೆ. ಮಹಾರಾಷ್ಟ್ರದಲ್ಲಿ 1857 ಮತ್ತು ಕೇರಳದಲ್ಲಿ 56 ಹಾಗೂ ಕರ್ನಾಟಕದಲ್ಲಿ ಕೇವಲ 26 ಅಣೆಕಟ್ಟುಗಳಿವೆ ಎಂದು ವಿವರಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:08.01.2022

13.ಮೇಕೆದಾಟು ಪಾದಯಾತ್ರೆ : ಭರ್ಜರಿ ಶುರು

ಸಂಗಮ (ರಾಮನಗರ ಜಿಲ್ಲೆ) ಮೇಕೆದಾಟು ಜೈ ಎಂದು ಗರ್ಜಿಸಿ ಅಧಿಕಾರಕ್ಕಾಗಿ ಅಲ್ಲ ನೀರಿಗಾಗಿ ಎನ್ನುತ್ತಲೇ ಕೈ ನಾಯಕರು ಬಿಜೆಪಿ ಜೆಡಿಎಸ್ ವಿರುದ್ಧ ತೊಡೆತಟ್ಟಿ ಇಲ್ಲಿ ಹೋರಾಟದ ನಗಾರಿ ಬಾರಿಸಿದರು.

ಆ ಮೂಲಕ ಇನ್ನು ಒಂದು ವರ್ಷ ಮೂರು ತಿಂಗಳು ದೂರ ಇರುವ ರಾಜ್ಯ ವಿಧಾನಸಭೆ ಚುನಾವಣೆಗೆ ಜನಾಭಿಪ್ರಾಯ ರೂಪಿಸಲು ರಾಜಕೀಯ ಅಸ್ತ್ರವಾಗಿ ಮೇಕೆದಾಟು ಪಾದಯಾತ್ರೆಯನ್ನು ಬಳಸುವ ಮುನ್ಸೂಚನೆ ನೀಡಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾವೇರಿ ಅರ್ಕಾವತಿಯ ಸಂಗಮದಿಂದ ಆರಂಭಿಸಿದ 10 ದಿನಗಳ ಪಾದಯಾತ್ರೆಯನ್ನು ನಾಡಿನ ಅಭಿವೃದ್ಧಿಗಾಗಿ ಪಕ್ಷಾತೀತ ಹೋರಾಟ ಎಂದು ಘೋಷಿಸಿದ ಕಾಂಗ್ರೆಸ್ ನಾಯಕರು, ಯೋಜನೆ ವಿಳಂಬಕ್ಕೆ ರಾಜ್ಯ ಬಿಜೆಪಿ ಸರ್ಕಾರವೇ ಕಾರಣವೆಂದು ಗುಡುಗಿದರು.

ಅದರ ಜೊತೆಯಲ್ಲೇ ಕೋವಿಡ್ ನಿಯಮ ಪಾಲಿಸಿಯೇ ಪಾದಯಾತ್ರೆ ಮಾಡುತ್ತೇವೆ ಎಂದು ಮಾತು ನೀಡಿದ್ದ ಈ ನಾಯಕರು ಸರ್ಕಾರ ವಿಧಿಸಿರುವ ಎಲ್ಲ ನಿರ್ಬಂಧಗಳನ್ನು ಗಾಳಿಗೆ ತೂರಿದರು. ಕಾರ್ಯಕ್ರಮಕ್ಕೆ ಬಂದ ನಾಯಕರೂ ಸೇರಿದಂತೆ ಸಾವಿರಾರು ಜನರು ಮಾಸ್ಕ್ ಇಲ್ಲದೆ ಅಂತರ ಕಾಪಾಡದೇ ನಿಯಮಗಳನ್ನು ಉಲ್ಲಂಘಿಸಿದರು. ಪಾದಯಾತ್ರೆಯ ಅಬ್ಬರಕ್ಕೆ ಭದ್ರತೆಗಾಗಿ ನಿಯೋಜಿಸಿದ್ದ ಪೊಲೀಸರು ಮೂಕಪ್ರೇಕ್ಷಕರಾದರು.

ಸಂಗಮದಲ್ಲಿ ನಿರ್ಮಿಸಿದ್ದ ಬೃಹತ್ ವೇದಿಕೆಯಲ್ಲಿ ಎಐಸಿಸಿ ಪ್ರತಿನಿಧಿಯಾಗಿ ಬಂದಿದ್ದ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಗಾರಿ ಬಾರಿಸಿ ಪಾದಯಾತ್ರೆಗೆ ಚಾಲನೆ ನೀಡಿದರು. ಬಳಿಕ ಸಿದ್ದರಾಮಯ್ಯ ಅವರ ಕೈಹಿಡಿದು ಡಿ.ಕೆ. ಶಿವಕುಮಾರ್ ನಗಾರಿ ಬಾರಿಸಿದ್ದು ಗಮನ ಸೆಳೆಯಿತು.

ಮಲ್ಲಿಕಾರ್ಜುನ ಖರ್ಗೆ ಮಾತನಾಡಿ ರೂ.9 ಸಾವಿರ ಕೋಟಿ ಮೊತ್ತದ ಈ ಬೃಹತ್ ಯೋಜನೆಗೆ ಇಡೀ ರಾಜ್ಯದ ಜನರ ಬೆಂಬಲವಿದೆ. ಕುಡಿಯುವ ನೀರಿಗಾಗಿ ಪದೇ ಪದೇ ಕಚ್ಚಾಡುತ್ತಿದ್ದೇವೆ. ಯೋಜನೆ ಅನುಷ್ಠಾನದ ಮೂಲಕ 67 ಟಿಎಂಸಿ ಅಡಿ ನೀರು ಸಂಗ್ರಹಿಸುವ ಗುರಿ ಈಡೇರುವವರೆಗೂ ಹೋರಾಟ

ಮುಂದುವರಿಯಬೇಕು. ಸರ್ಕಾರ, ಜೆಡಿಎಸ್ ಅಷ್ಟೇ ಅಲ್ಲದೇ ಬೇರೆಯವರೂ ಕಾಲೆಳೆಯುವ ಪ್ರಯತ್ನ ಮಾಡುತ್ತಾರೆ. ಎಚ್ಚರ ಮಹಿಸಬೇಕು ಎಂದು ಸಲಹೆ ನೀಡಿದರು.

ಮೇಕೆದಾಟು ಯೋಜನೆ ವಿಳಂಬಕ್ಕೆ ಡಬ್ಬಲ್ ಎಂಜಿನ್ ಸರ್ಕಾರವೇ ಕಾರಣ ಎಂದು ಮತ್ತೆ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ ಯೋಜನೆಗೆ ಚಾಲನೆ ನೀಡದೆ ನಾಡಿನ ಜನರಿಗೆ ಬಿಜೆಪಿ ಸರ್ಕಾರ ವಿಳಂಬ ದ್ರೋಹ ಮಾಡಿದೆ. ತಮಿಳುನಾಡಿನಲ್ಲಿ ಪಕ್ಷಕ್ಕೆ ನೆಲೆ ಕಲ್ಪಿಸಿ ಶಕ್ತಿ ವಿಸ್ತರಿಸಬೇಕೆಂಬ ಕಾರಣಕ್ಕೆ ಪರಿಸರ ಇಲಾಖೆಯಿಂದ ಕೇಂದ್ರ ಸರ್ಕಾರ ಅನುಮೋದನೆ ನೀಡುತ್ತಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಆಗಿದೆ. ಈಗ ಈ ಎರಡು ದೋಷಗಳನ್ನು ಮುಚ್ಚಿಕೊಳ್ಳಲು ಯಾವುದೇ ಕಾರಣಕ್ಕೂ ಪಾದಯಾತ್ರೆ ನಡೆಯಬಾರದೆಂದು ರಾಜ್ಯ ಸರ್ಕಾರ ಶೂರಯತ್ನ ಮಾಡಿದೆ ಎಂದರು.

ತಮ್ಮ ಅಧಿಕಾರಾವಧಿಯಲ್ಲಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ನಡೆದ ಕೆಲಸಗಳನ್ನು ಸ್ಮರಿಸಿದ ಅವರು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಜಾಹೀರಾತು ನೀಡುವ ಮೂಲಕ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಕೇಂದ್ರ ಸರ್ಕಾರದ ಮುಂದೆ ಬಾಕಿ ಇರುವ ಪರಿಸರ ನಿರಾಕ್ಷೇಪಣಾ ಪತ್ರ ಪಡೆದು ಯೋಜನೆ ಆರಂಭಿಸದೆ ವಿಳಂಬ ದ್ರೋಹ ಮಾಡಿದೆ. ಬಿಜೆಪಿ ತನ್ನ ಶಕ್ತಿಯನ್ನು ತಮಿಳುನಾಡಿನಲ್ಲಿ ವಿಸ್ತರಿಸಲು ಕೇಂದ್ರ ಸರ್ಕಾರ ನಿರಾಕ್ಷೇಪಣಾ ಪತ್ರ ಕೊಡುತ್ತಿಲ್ಲ. ಬಿಜೆಪಿ ಎಷ್ಟೇ ತಡೆಯುವ ಪ್ರಯತ್ನ ಮಾಡಿದರೂ ಪಾದಯಾತ್ರೆ ನಿಲ್ಲಲ್ಲ. ಯೋಜನೆ ನಮ್ಮ ಕೂಸು ಎಂದು ಹೇಳಿದರು.

ಬೆಂಗಳೂರಿನ ಶೇ.30 ಕ್ಕಿಂತ ಹೆಚ್ಚು ಜನರಿಗೆ ಕುಡಿಯಲು ಕಾವೇರಿ ನೀರು ಸಿಗುತ್ತಿಲ್ಲ ಇದಕ್ಕಾಗಿ ಈ ಪಾದಯಾತ್ರೆ ಯೋಜನೆ ಮಾಡಿದರೆ 50 ವರ್ಷ ಕುಡಿಯುವ ನೀರಿನ ಸಮಸ್ಯೆ ಇರಲ್ಲ. ರಾಜ್ಯದ ಜನರಿಗೆ ಅನುಕೂಲ ಆಗುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

ಯೋಜನೆಯ ಬಗ್ಗೆ ಕಾರಜೋಳ ಅನಾಮಧೇಯ ಜಾಹೀರಾತು ನೀಡಿದ್ದಾರೆ. ಆ ಮೂಲಕ ಕೀಳುಮಟ್ಟದ ರಾಜಕಾರಣ ಮಾಡುತ್ತಿದ್ದಾರೆ. ನಾವು ಕೂಡ ಸದ್ಯದಲ್ಲೇ ಜಾಹೀರಾತು ಮೂಲಕವೇ ಉತ್ತರ ನೀಡುತ್ತೇವೆ ಎಂದು ಕಾಂಗ್ರೆಸ್ ಶಾಸಕ ಎಂ.ಬಿ. ಪಾಟೀಲ್ ಹೇಳಿದರು.

ಆಧಾರ: ಪ್ರಜಾವಾಣಿ, ದಿನಾಂಕ:10.01.2022

14.ಮೊದಲ ದಿನ ಕಾಂಗ್ರೆಸ್ ಉತ್ಸಾಹದ ಹೆಜ್ಜೆ

ಹಲವು ಅಡ್ಡಿ ಆತಂಕಗಳನ್ನು ಮೀರಿ ಮೇಕೆದಾಟು ಪಾದಯಾತ್ರೆಯ ಮೊದಲ ದಿನ ಸುಸೂತ್ರವಾಗಿ ನಡೆದಿದ್ದು, ಕಾಂಗ್ರೆಸ್ ಪಾಳೆಯದಲ್ಲಿ ಉತ್ಸಾಹ ಇಮ್ಮಡಿಗೊಂಡಿದೆ.

ಬೆಳಿಗ್ಗೆ 11.30ಕ್ಕೆ ವೇದಿಕೆ ಕಾರ್ಯಕ್ರಮ ಮುಕ್ತಾಯದ ಬಳಿಕ ಪಾದಯಾತ್ರೆ ಆರಂಭಗೊಂಡಿದ್ದು ಕಾಂಗ್ರೆಸ್ ನಾಯಕರು ಉತ್ಸಾಹದಿಂದಲೇ ಹೆಜ್ಜೆ ಹಾಕಿದರು. ಆದರೆ, ನಂತರದಲ್ಲಿ ಏರುಮುಖವಾದ ಹಾದಿ, ನೆತ್ತಿ ಸುಡುವ ಬಿಸಿಲಿನ ಕಾರಣಕ್ಕೆ ಪಾದಯಾತ್ರಿಕರು ಬಳಲಿದ್ದು, ಕಂಡುಬಂದಿತು. ಅಲ್ಲಲ್ಲಿ ಪಾನೀಯ, ನೀರು ಕುಡಿಯುತ್ತಲೇ ನೀರಿಗಾಗಿ ನಡಿಗೆ ಮುಂದುವರಿಯಿತು ಡಿ.ಕೆ. ಶಿವಕುಮಾರ್ ಜೊತೆಗೆ ಆರ್.ವಿ. ದೇಶಪಾಂಡೆ, ಹೆಚ್.ಕೆ ಪಾಟೀಲ್, ಎಂ.ಬಿ. ಪಾಟೀಲ, ಜಿ.ಪರಮೇಶ್ವರ, ಡಿ.ಕೆ. ಸುರೇಶ್, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ನಾಯಕರು ಒಂದಿಷ್ಟು ದೂರ ನಡೆದರು.

ಮಧ್ಯಾಹ್ನ 2.50ರ ಸುಮಾರಿಗೆ ಏಳು ಕಿ.ಮೀ. ಕ್ರಮಿಸಿ ಹೆಗ್ಗನೂರಿಗೆ ತಲುಪಿದ ಪಾದಯಾತ್ರೆಗಳು ಅಲ್ಲಿ ಕೆಲ ಕಾಲ ವಿಶ್ರಾಂತಿ ಪಡೆದರು. ಶಿವಕುಮಾರ್ ಸ್ವಲ್ಪ ಬಳಲಿದಂತೆ ಕಂಡುಬಂದಿದ್ದು, ಕಣ್ಣುಗಳು ಅದಾಗಲೇ ಕೆಂಪಾಗಿದ್ದವು. ಊಟದ ಬಳಿಕ ಕೆಲ ಹೊತ್ತು ನಿದ್ರೆಯ ಮೊರೆ ಹೋದರು. ಸಂಜೆ 5ರ ನಂತರ ಮತ್ತೆ ಪಾದಯಾತ್ರೆ ಆರಂಭಗೊಂಡಿದ್ದು, ರಾತ್ರಿ ಹೊತ್ತಿಗೆ ಶಿವಕುಮಾರ್ ಅವರ ತವರೂರು ದೊಡ್ಡಾಲಹಳ್ಳಿ ತಲುಪಿತು. ಅಲ್ಲಿ ಗ್ರಾಮಸ್ಥರು ಅವರಿಗೆ ಭವ್ಯ ಸ್ವಾಗತ ಕೋರಿದರು. ಮೊದಲ ದಿನ 14

ಕಿ.ಮೀ.ವರೆಗೆ ಪಾದಯಾತ್ರಿಗಳು ಹೆಜ್ಜೆ ಹಾಕಿದರು. ಅಲ್ಲಲ್ಲಿ ಗ್ರಾಮಸ್ಥರು ಪುಷ್ಪಾರ್ಚನೆ ಮೂಲಕ ಪಾದಯಾತ್ರಿಗಳನ್ನು ಬರಮಾಡಿಕೊಂಡಿದ್ದು, ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು.

ಪಾದಯಾತ್ರೆ ನಿಲ್ಲಿಸುವಂತೆ ನಗರ ಜಿಲ್ಲಾಧಿಕಾರಿ ಕೆಪಿಸಿಸಿ ಅಧ್ಯಕ್ಷರಿಗೆ ನೋಟಿಸ್ ಜಾರಿ ಮಾಡಿದರು. ನಿಯಮ ಉಲ್ಲಂಘಿಸಿ ಪಾದಯಾತ್ರೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ನೀಡಿದರು. ಆದರೆ ಅಂತಹ ಯಾವುದೇ ಅನಿರೀಕ್ಷಿತ ಘಟನೆಗಳು ನಡೆಯಲಿಲ್ಲ.

10 ಸಾವಿರ ಮಂದಿ ಭಾಗಿ: ಮೊದಲ ದಿನವೇ ಕಾರ್ಯಕ್ರಮಕ್ಕೆ ಸುಮಾರು 10 ಸಾವಿರದಷ್ಟು ಜನರು ಬಂದಿದ್ದರು. ಹೊರ ಜಿಲ್ಲೆಗಳಿಂದಲೂ ಸಾಕಷ್ಟು ಮಂದಿ ಭಾಗಿಯಾಗಿದ್ದರು. ಆದರೆ, ರಸ್ತೆಯಲ್ಲಿ ಹೆಜ್ಜೆ ಹಾಕುವವರಿಗಿಂತ ಕುತೂಹಲಕ್ಕೆ ಬಂದು ಹೋದವರ ಸಂಖ್ಯೆಯೇ ದುಪ್ಪಟ್ಟು ಇತ್ತು. ಆಯೋಜಕರು ಮಾಸ್ಕ್ ಹಾಗೂ ಸ್ಯಾನಿಟೈಸರ್ ವಿತರಿಸಿದರು. ತಪ್ಪದೇ ಮಾಸ್ಕ್ ಧರಿಸಿ ಓಡಾಡಿ ಎಂದು ಸಿದ್ದರಾಮಯ್ಯ ಮನವಿ ಮಾಡಿದರು. ಆದರೆ ಸ್ವತ: ಡಿ.ಕೆ. ಶಿವಕುಮಾರ್ ಸೇರಿದಂತೆ ಸಾಕಷ್ಟು ಮಂದಿ ಮಾಸ್ಕ್ ಧರಿಸದೇ ಓಡಾಡಿದರು. ಪೊಲೀಸರು ಈ ಬಗ್ಗೆ ಮೌನವಾಗಿದ್ದರು. ವಾಹನಗಳ ಸಂಚಾರ ನಿಯಂತ್ರಣವಷ್ಟೇ ಅವರ ಕೆಲಸವಾಗಿತ್ತು.

ರಾಗಿಮುದ್ದೆ, ಮೈಸೂರು ಪಾಕ್ ಆತಿಥ್ಯ: ಪಾದಯಾತ್ರೆಗೆ ಬಂದ ಅಷ್ಟೂ ಜನರಿಗೆ ಕಾಂಗ್ರೆಸ್ ಊಟೋಪಚಾರದ ವ್ಯವಸ್ಥೆ ಮಾಡಿತ್ತು. ಬೆಳಿಗ್ಗೆ ಕಾರ್ಯಕ್ರಮದ ವೇದಿಕೆ ಬಳಿ ಉಪ್ಪಿಟ್ಟು–ಕೇಸರಿಬಾತ್ ರೈಸ್ ಬಾತ್ ಉಪಾಹಾರ ದೊರೆಯಿತು. ಮಧ್ಯಾಹ್ನ ಹೆಗ್ಗನೂರಿನಲ್ಲಿ ರಾಗಿಮುದ್ದೆ, ಕಾಳು ಸಾಂಬಾರ್, ಪೂರಿ, ರೈಸ್ ಪಲಾವ್ ಜೊತೆಗೆ ವಡೆ ಹಾಗೂ ಮೈಸೂರು ಪಾಕ್ ಉಣಬಡಿಸಲಾಯಿತು. ಇದಲ್ಲದೆ ದಾರಿಯುದ್ದಕ್ಕೂ ಜನರಿಗೆ ಬೆಲ್ಲದ ಪಾನಕ, ನಿಂಬೆ ಷರಬತ್ತು, ಕಬ್ಬಿನ ಜ್ಯೂಸ್, ಕಿತ್ತಳೆ ಹಣ್ಣು ನೀಡಲಾಯಿತು.

ಆಧಾರ: ಪ್ರಜಾವಾಣಿ, ದಿನಾಂಕ:11.01.2022

15.ಜನಸ್ನೇಹಿ ಆಡಳಿತ : ಇಲಾಖೆಗಳಿಗೆ ಶ್ರೇಯಾಂಕ

ಜನಸ್ನೇಹಿ ಆಡಳಿತದ ದೃಷ್ಟಿಯಿಂದ ಎಲ್ಲ ಇಲಾಖೆಗಳಿಗೂ ಶ್ರೇಯಾಂಕ ನೀಡುವುದಕ್ಕೆ ಪೂರಕವಾಗಿ ಮಾನದಂಡಗಳನ್ನು ನಿಗದಿಪಡಿಸಲು ಮುಂದಿನ ವರದಿಯಲ್ಲಿ ಸಲಹೆಗಳನ್ನು ನೀಡುವಂತೆ ರಾಜ್ಯ ಆಡಳಿತ ಸುಧಾರಣಾ ಆಯೋಗಕ್ಕೆ ಮುಖ್ಯಮಂತ್ರಿಯವರು ಸೂಚಿಸಿದರು.

ಆಡಳಿತ ಸುಧಾರಣೆ ಕುರಿತು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಟಿ.ಎಂ. ವಿಜಯಭಾಸ್ಕರ್, ವಿವಿಧ ಸಚಿವರು ಮತ್ತು ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದ ಅವರು ಆಯೋಗದ ಮುಂದಿನ ವರದಿಯಲ್ಲಿ ಕೇಂದ್ರೀಕರಿಸಬೇಕಾದ ವಿಷಯಗಳ ಬಗ್ಗೆ ಸಮಾಲೋಚಿಸಿದರು.

ಕಡತ ವಿಲೇವಾರಿಯ ಹಂತಗಳನ್ನು ಕಡಿಮೆ ಮಾಡಬೇಕು ಕಡತ ವಿಲೇವಾರಿಯಲ್ಲಿ ಕೇಂದ್ರೀಕೃತ ವ್ಯವಸ್ಥೆ ರೂಪಿಸುವಂತೆ ಸಲಹೆ ನೀಡಬೇಕು ಸಾರ್ವಜನಿಕರಿಗೆ ಸುಲಭವಾಗಿ ಸರ್ಕಾರಿ ಸೇವೆಗಳನ್ನು ಒದಗಿಸುವುದಕ್ಕೆ ಪೂರಕವಾಗಿ ನಿರ್ಧಾರ ಕೈಗೊಳ್ಳುವ ಹಂತಗಳನ್ನು ಕಡಿಮೆ ಮಾಡಬೇಕು. ಕೆಳಹಂತದ ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ನೀಡಬೇಕು. ಕಂದಾಯ ಇಲಾಖೆಯ ಕೆಲವು ಹೊಣೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕು ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

ಜಂಟಿ ಕಾರ್ಯದರ್ಶಿಗಳು ಮತ್ತು ಉಪ ಕಾರ್ಯದರ್ಶಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು. ಬೃಹತ್ ನೀರಾವರಿ ಮತ್ತು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ಅಧಿಕಾರವನ್ನು ಪ್ರಾದೇಶಿಕ

ಆಯುಕ್ತರಿಗೆ ನೀಡಬೇಕು. ಲೋಕೋಪಯೋಗಿ, ಜಲ ಸಂಪನ್ಮೂಲ ಇಲಾಖೆಯ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಬದಲಾವಣೆಗಳನ್ನು ತರಬೇಕು ಎಂದರು.

ಕಾಯ್ದೆಗಳಲ್ಲಿ ಬದಲಾವಣೆ ತರುವುದು ಪುನರಾವರ್ತಿತ ಕಾಯ್ದೆಗಳನ್ನು ಗುರುತಿಸುವುದು ಸರ್ಕಾರಿ ಯೋಜನೆಗಳು ಮತ್ತು ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದ್ದು, ಬ್ಯಾಂಕ್ ಖಾತೆಗಳಲ್ಲೇ ಉಳಿದಿರುವ ಮೊತ್ತವನ್ನು ತ್ವರಿತವಾಗಿ ಬಳಕೆ ಮಾಡುವುದಕ್ಕೂ ಸಲಹೆಗಳನ್ನು ನೀಡಬೇಕು ಎಂದು ಸೂಚಿಸಿದರು.

ಸಚಿವರಾದ ಅರಗ ಜ್ಞಾನೇಂದ್ರ, ಭೈರತಿ ಬಸವರಾಜ, ಡಾ:ಕೆ.ಸುಧಾಕರ್, ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ, ಯೋಜನಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿ, ಪಿ ಹೇಮಲತಾ, ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ, ಮುನೀಶ್ ಮೌದ್ಗಿಲ್ ಸಭೆಯಲ್ಲಿದ್ದರು.

ಆಧಾರ: ಪ್ರಜಾವಾಣಿ, ದಿನಾಂಕ:11.01.2022

16.ತಿಂಗಳು ಪೂರ್ತಿ ನಿರ್ಬಂಧ

ರಾಜ್ಯದಲ್ಲಿ ಕೊರೋನಾ 3ನೇ ಅಲೆ ಹಾವಳಿ ಹೆಚ್ಚುತ್ತಿರುವಂತೆಯೇ ಮೇಲಿಂದ ಮೇಲೆ ಸಭೆ ಸಮಾಲೋಚನೆ ನಡೆಸುತ್ತಿರುವ ರಾಜ್ಯ ಸರ್ಕಾರ ಸದ್ಯ ಜಾರಿಯಲ್ಲಿರುವ ನಿರ್ಬಂಧ ಕ್ರಮಗಳನ್ನೇ ಜನವರಿ ಅಂತ್ಯದವರೆಗೆ ವಿಸ್ತರಿಸಲು ಮುಂದಾಗಿದೆ. ಇದರ ಜೊತೆಯಲ್ಲೇ ವಿದ್ಯಾರ್ಥಿಗಳಲ್ಲಿ ಸೋಂಕು ಹರಡುತ್ತಿರುವುದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಶಾಲೆಗಳಿಗೆ ರಜೆ ಕೊಡುವ ಹೊಣೆಗಾರಿಕೆಯನ್ನು ಆಯಾ ಜಿಲ್ಲಾಧಿಕಾರಿಗಳ ಹೆಗಲೇರಿಸಿದೆ. ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳು ಜಂಟಿಯಾಗಿ ಎಲ್ಲ ಶಾಲೆಗಳಲ್ಲಿ 15 ದಿನಗಳಿಗೊಮ್ಮೆ ಮಕ್ಕಳ ಆರೋಗ್ಯ ತಪಾಸಣೆ ಮಾಡುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಕಳೆದ 10 ದಿನಗಳಲ್ಲಿ ಸೋಂಕಿತರ ಸಂಖ್ಯೆ 12,000ಕ್ಕೇರಿದ್ದರೆ ಸೋಂಕು ದೃಢತೆಯ ದರ (ಪಾಸಿಟಿವಿಟಿ ರೇಟ್) ಶೇ.10.25ಕ್ಕೆ ತಲುಪಿದೆ. ಪರಿಸ್ಥಿತಿ ಕಠಿಣವಾಗಿದ್ದರೂ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ಕಡಿಮೆಯಿದೆ. ಹಾಸಿಗೆಗಳು ಹಾಗೂ ಆಮ್ಲಜನಕಕ್ಕೆ ಬೇಡಿಕೆ ಏರಿಲ್ಲವೆಂಬುದು ಸಂಕಷ್ಟದ ಕಾಲದಲ್ಲಿ ಸರ್ಕಾರಕ್ಕೆ ದಕ್ಕಿರುವ ಕೊಂಚ ಸಮಾಧಾನ. ಸ್ವತ: ಸೋಂಕಿಗೆ ಸಿಲುಕಿದ್ದರೂ ಮುಖ್ಯಮಂತ್ರಿಯವರು ಸಭೆ ನಡೆಸಿದರು.

ಮೂರನೇ ಅಲೆಯ ವೇಗ ಹೆಚ್ಚಿದ್ದರೂ ಲಾಕ್‌ಡೌನ್ ನಂತಹ ಕಠಿಣ ನಿರ್ಧಾರ ಬೇಕಾಗಿಲ್ಲ ಎಂಬ ತಾಂತ್ರಿಕ ತಜ್ಞರ ಸಲಹೆಯನ್ನು ನಿರ್ದಾಕ್ಷಣ್ಯವಾಗಿ ಜಾರಿಗೆ ತರುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.

ಅಲ್ಲಲ್ಲಿ ಹಾಸ್ಟೆಲ್, ಶಾಲಾ ವಿದ್ಯಾರ್ಥಿಗಳಲ್ಲಿ ಸಮೂಹ ಸೋಂಕು ಪ್ರಕರಣಗಳ ವರದಿ, ಕೊರೋನಾ ನಿಯಮಗಳ ಉಲ್ಲಂಘನೆ ಬಗ್ಗೆ ಸಭೆಯಲ್ಲಿ ಕಳವಳ ವ್ಯಕ್ತವಾಗಿದೆ ಈಗಿರುವ ನಿರ್ಬಂಧನಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದರೆ ಪರಿಸ್ಥಿತಿ ನಿಭಾಯಿಸಬಹುದು ಎಂಬ ವಿಶ್ವಾಸವನ್ನು ಮುಖ್ಯಮಂತ್ರಿ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಮುಖ್ಯಮಂತ್ರಿಯವರು ಸಚಿವರಾದ ಅರಗ ಜ್ಞಾನೇಂದ್ರ, ಡಾ: ಕೆ. ಸುಧಾಕರ್, ಬಿ.ಸಿ. ನಾಗೇಶ್, ತಾಂತ್ರಿಕ ಸಲಹಾ ಸಮಿತಿ ಸದಸ್ಯರು, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಮಕ್ಕಳ ಬಗ್ಗೆ ವಿಶೇಷ ಕಾಳಜಿ: ಶಾಲಾ ಮಕ್ಕಳಲ್ಲಿ ಸೋಂಕು ಪ್ರಕರಣ ಹೆಚ್ಚಳವಾಗುತ್ತಿರುವತ್ತ ಸಭೆ ಹೆಚ್ಚಿನ ಗಮನ ಕೇಂದ್ರಿಕರಿಸಿದ್ದು, ಜಿಲ್ಲಾವಾರು ಮಾಹಿತಿ ಆಧರಿಸಿ ಚರ್ಚಿಸಿದೆ. ಮಕ್ಕಳ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ ಮೂರು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ.

ಕೊರೋನಾ ಸೋಂಕಿತ ಮಕ್ಕಳಿಗೆ ಚಿಕಿತ್ಸೆ ನೀಡಲು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಮಕ್ಕಳ ವಾರ್ಡ್ ಹಾಗೂ ಐಸಿಯುಗಳ ಮೀಸಲಿಡುವ, ಸೋಂಕಿತ ಮಕ್ಕಳ ಚಿಕಿತ್ಸೆಗೆ ಅಗತ್ಯವಿರುವ ಔಷಧಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗೆ ಸೂಚನೆ ನೀಡಲು ತೀರ್ಮಾನಿಸಲಾಯಿತು.

ವಾರಾಂತ್ಯ ಕರ್ಫ್ಯೂ: ಸರ್ಕಾರ ಘೋಷಣೆ ಮಾಡಿರುವ ವಾರಾಂತ್ಯ ಕರ್ಫ್ಯೂ ಶುಕ್ರವಾರ ರಾತ್ರಿ 10 ಗಂಟೆಯಿಂದ ಸೋಮವರ ಬೆಳಿಗ್ಗೆ 5 ಗಂಟೆಯ ತನಕ ಇರುತ್ತದೆ. ಸರ್ಕಾರ ಘೋಷಣೆ ಮಾಡಿರುವ ನಿಯಮಗಳು ಜನವರಿ 31ರ ತನಕ ಜಾರಿಯಲ್ಲಿರುತ್ತವೆ.

ಮುಖ್ಯಾಂಶಗಳು:

- ಸಾರ್ವಜನಿಕ ಸ್ಥಳಗಳಲ್ಲಿ ಕೊರೋನಾ ಮುಂಜಾಗ್ರತೆಗಾಗಿ ವಿಧಿಸಿರುವ ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಜವಾಬ್ದಾರಿ.
- 3ನೇ ಅಲೆಯಲ್ಲಿ ಸೋಂಕಿತರು ಹೆಚ್ಚಾಗಿ ಹೋಮ್ ಐಸೋಲೇಷನ್‌ಲ್ಲಿದ್ದು ಆಂತಹವರ ಆರೋಗ್ಯ ಸ್ಥಿತಿ ನಿಯಮಿತವಾಗಿ ಮೇಲ್ವಿಚಾರಣೆ ಹಾಗೂ ಔಷಧ ಕಿಟ್ ಪೂರೈಕೆ.
- ಪರೀಕ್ಷಾ ವರದಿ ಬಂದ ಕೂಡಲೇ ಸೋಂಕಿತರ ಆರೋಗ್ಯ ಸ್ಥಿತಿ ಪರಿಶೀಲಿಸಿ ಆಸ್ಪತ್ರೆಗೆ ದಾಖಲಿಸುವ ಅಗತ್ಯವಿದೆಯೇ ಇಲ್ಲವೆ ಎಂದು ನಿರ್ಧರಿಸಿರುವ ಟ್ರಯಾಜಿಂಗ್ ಕೇಂದ್ರಗಳ ಬಲವರ್ಧನೆ.
- ಯಾವುದೇ ರೀತಿಯ ಸಾರ್ವಜನಿಕ ಸಮಾವೇಶಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ.
- ಹೋಮ್ ಐಸೋಲೇಷನ್ ಟ್ರಯಾಜಿಂಗ್ ಹೌಸ್ ಸರ್ಜನ್ ವೈದ್ಯರು ಹಾಗೂ ಅಂತಿಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳ ಬಳಕೆ.
- ಸಂಕ್ರಾಂತಿ , ವೈಕುಂಠ ಏಕಾದಶಿ ಮತ್ತಿತರ ಹಬ್ಬಗಳಿಗಾಗಿ ಮುಜರಾಯಿ ಮತ್ತು ಕಂದಾಯ ಇಲಾಖೆಗಳಿಗೆ ಮಾರ್ಗಸೂಚಿ ಹೊರಡಿಸುವ ಹೊಣೆ
- ಕೊರೋನಾ ಲಸಿಕೆ ಎರಡು ಪಡೆದು ಒಂಬತ್ತು ತಿಂಗಳು ಪೂರೈಸಿದ ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆಯ ಮೇಲೆ ಮೂರನೇ ಡೋಸ್ ವಿತರಣೆ.
- ಬೆಂಗಳೂರಿನಲ್ಲಿ ಕೂಡಲೇ 27 ಕೊರೋನಾ ಆರೈಕೆ ಕೇಂದ್ರಗಳ ಪ್ರಾರಂಭ
- ಬಿಬಿಎಂಪಿ ವ್ಯಾಪ್ತಿಯಲ್ಲಿ ಪರೀಕ್ಷಾ ಪ್ರಮಾಣ ದಿನಕ್ಕೆ 1.30 ಲಕ್ಷಕ್ಕೆ ಏರಿಕೆ.
- ಮಾರುಕಟ್ಟೆ ಪ್ರದೇಶಗಳಲ್ಲಿ ಜನದಟ್ಟಣೆ ತಗ್ಗಿಸಲು ವಸ್ತುಸ್ಥಿತಿ ಆಧರಿಸಿ ಕ್ರಮ.

ಹೊಸ ಮಾರ್ಗಸೂಚಿ:

- ರಾತ್ರಿ 10 ರಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ಎಲ್ಲ ವಿಧದ ರ್‍ಯಾಲಿ ಪ್ರತಿಭಟನೆ ಧರಣಿಗಳು ನಿಷಿದ್ಧ
- ಮದುವೆಗೆ ಒಳಾಂಗಣದಲ್ಲಿ 100 ಹೊರಾಂಗಣದಲ್ಲಿ 200 ಜನರ ಮಿತಿ.
- ಪರಿಸ್ಥಿತಿ ಅವಲೋಕಿಸಿ ಹೆಚ್ಚುವರಿ ನಿರ್ಬಂಧ ವಿಧಿಸಲು ಆಯಾ ಡಿಸಿಗಳು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಅಧಿಕಾರ.

- ಮಹಾರಾಷ್ಟ್ರ ಕೇರಳ ಮತ್ತು ಗೋವಾದಿಂದ ಬರುವವರ ಮೇಲೆ ಗಡಿಗಳಲ್ಲಿ ತೀವ್ರ ನಿಗಾ.
- ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ತಾಲ್ಲೂಕು ಒಂದು ಘಟಕವಾಗಿ ಪರಿಗಣಿಸಿ ಪರಿಸ್ಥಿತಿ ಅವಲೋಕಿಸಿ ಶಾಲೆ–ಕಾಲೇಜು ಬಂದ್ ಅಥವಾ ತೆರೆದಿಡುವ ಬಗ್ಗೆ ಶಿಕ್ಷಣ ಆರೋಗ್ಯ ಇಲಾಖೆಗಳ ಜೊತೆಗೆ ಜಿಲ್ಲಾಧಿಕಾರಿ ಚರ್ಚಿಸಿ ತೀರ್ಮಾನಿಸುವುದು.

ಆಧಾರ: ವಿಜಯವಾಣಿ, ದಿನಾಂಕ:12.01.2022

17.ಒಂದು ಕೇಸ್‌ಗೂ ಶಾಲೆ ಮುಚ್ಚಿಬಿಡಿ

ರಾಜ್ಯಾದ್ಯಂತ ಮಕ್ಕಳಿಗೆ ಕೊರೋನಾ ಸೋಂಕು ಹೆಚ್ಚಾಗುತ್ತಿದ್ದು ಸುಮಾರು 7,500ಕ್ಕೂ ಹೆಚ್ಚಿನ ಮಕ್ಕಳಿಗೆ ಸೋಂಕು ಕಾಣಿಸಿಕೊಳ್ಳುವ ಭೀತಿ ಎದುರಾಗಿದೆ. ಪರಿಣಾಮ, ರಾಜಧಾನಿ ಬೆಂಗಳೂರು, ಮೈಸೂರು, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕೊರೋನಾ ಸೋಂಕು ಹೆಚ್ಚಳವಾದ ಜಿಲ್ಲೆಯಲ್ಲಿ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸಲಾಗಿದೆ.

ಸೋಂಕು ಭೀತಿ ಹೆಚ್ಚಳವಾಗುತ್ತಿರುವುದು ಪೋಷಕರಲ್ಲಿ ಆತಂಕ ಮೂಡಿಸಿದ್ದು ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ. ಕೊರೋನಾ ಸೋಂಕು ಪ್ರಕರಣಗಳು ಹೆಚ್ಚಳವಾಗುತ್ತಿರುವ ಬೆನ್ನಲ್ಲೇ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಶಾಲೆ ಮತ್ತು ಕಾಲೇಜುಗಳಲ್ಲಿ ಮುನ್ನೆಚ್ಚರಿಕೆ ವಹಿಸುವಂತೆ ಸೂಚನೆ ನೀಡಿದ್ದಾರೆ.

ಕೊರೋನಾ ಸಂಖ್ಯೆ ಪಾಸಿಟಿವಿಟಿ ಪ್ರಮಾಣ ಆಧರಿಸಿ ತಾಲ್ಲೂಕು, ಸ್ಥಳೀಯ ಮಟ್ಟದಲ್ಲಿ ಶಾಲೆ, ಪಿಯು ತರಗತಿಗಳ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸಿ ಆನ್ ಲೈನ್ /ಪರ್ಯಾಯ ಬೋಧನಾ ವಿಧಾನದ ತರಗತಿ ನಡೆಸಲು ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಿ ಜಿಲ್ಲಾಧಿಕಾರಿಗಳು ಹಾಗೂ ತಹಸೀಲ್ದಾರ್‌ಗಳು ನಿರ್ಧಾರ ತೆಗೆದುಕೊಳ್ಳಲು ಅಧಿಕಾರ ನೀಡಲಾಗಿದೆ.

ಪ್ರಮುಖವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆ. ಪಿಯು ಕಾಲೇಜುಗಳಲ್ಲಿ ಕೇವಲ ಒಂದು ಪ್ರಕರಣಗಳು ಪತ್ತೆಯಾದರೂ ಎಲ್ಲಾ ಮಕ್ಕಳಿಗೆ ಪರೀಕ್ಷೆ ಮಾಡಿಸಬೇಕು. ಮಕ್ಕಳಿಗೆ ಅಗತ್ಯ ಚಿಕಿತ್ಸೆ ಕೊಡಿಸುವುದು ಮತ್ತು ಶಾಲೆಯನ್ನು ಸ್ವಚ್ಛಗೊಳಿಸಿ ನಿಯಮದಂತೆ ಭೌತಿಕ ತರಗತಿಗಳಿಗೆ ರಜೆ ನೀಡಬೇಕು. ಈ ನಿಟ್ಟಿನಲ್ಲಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಕರು ಹೆಚ್ಚಿನ ಗಮನ ಹರಿಸುವಂತೆ ಸೂಚನೆ ನೀಡಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:13.01.2022

18.ಪಾದಯಾತ್ರೆಗೆ ತಡೆ

ಮೇಕೆದಾಟು ಪಾದಯಾತ್ರೆ ವಿಚಾರದಲ್ಲಿ ಹೈಕೋರ್ಟ್ ಛೀಮಾರಿ ಹಾಕಿದ ಬೆನ್ನಲ್ಲೇ ರಾಜ್ಯ ಸರ್ಕಾರ ಯಾತ್ರೆಗೆ ನಿರ್ಬಂಧ ಹೇರಿದೆ.

ಈ ಸಂಬಂಧ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರು ಪಾದಯಾತ್ರೆಯಲ್ಲಿ ವಾಹನ ಸಂಚಾರ ಹಾಗೂ ಜನರು ಪಾಲ್ಗೊಳ್ಳುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ ಎಂದು ಆದೇಶ ಹೊರಡಿಸಿದ್ದಾರೆ. ಹೈಕೋರ್ಟ್ ತಪರಾಕಿ ಹಿನ್ನೆಲೆಯಲ್ಲಿ ನ್ಯಾಯಾಲಯ ಸೂಚಿಸಿದರೆ ಪಾದಯಾತ್ರೆ ನಿಲ್ಲಿಸುತ್ತೇವೆ ಎಂದು ಹೇಳಿದ ಕಾಂಗ್ರೆಸ್ ನಾಯಕರು ಇದೀಗ ರಾಜ್ಯ ಸರ್ಕಾರದ ಆದೇಶದ ಬಗ್ಗೆ ಏನು ಮಾಡುತ್ತಾರೆ ಎಂಬುದು ಕುತೂಹಲ ಮೂಡಿಸಿದೆ.

ರಾಜ್ಯ ಸರ್ಕಾರವು ಸಂಬಂಧಪಟ್ಟ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಈ ಬಗ್ಗೆ ಕ್ರಮ ವಹಿಸುವುದು ಎಂದು ಸೂಚನೆ ನೀಡುತ್ತಿದ್ದಂತೆ ಅತ್ತ ರಾಮನಗರದಲ್ಲಿ ಯಾತ್ರೆ ತಡೆಯೊಡ್ಡುವ ಸಂಬಂಧ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ಸಹಿತ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ವಿಪತ್ತು ನಿರ್ವಹಣಾ ಕಾಯ್ದೆ 2005 ಪ್ರಕಾರ ರಾಜ್ಯದೊಳಗಿನ ಅಂತರ ಜಿಲ್ಲಾ ಹಾಗೂ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಪಾದಯಾತ್ರೆಗೆ ಸಂಬಂಧಿಸಿದ ವಾಹನ ಸಂಚಾರ ಹಾಗೂ ಜನರ ಓಡಾಟಕ್ಕೆ ನಿರ್ಬಂಧ ಹಾಕಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆದೇಶದಲ್ಲಿ ಏನಿದೆ: ರಾಜ್ಯಾದ್ಯಂತ ಪ್ರತಿಭಟನೆ, ಧರಣಿ ಮತ್ತು ರ್ಯಾಲಿಗಳಿಗೆ ನಿರ್ಬಂಧ ಹಾಕಲಾಗಿದ್ದರೂ ಕೆಲವು ಗುಂಪುಗಳು ನಮ್ಮ ನೀರು ನಮ್ಮ ಹಕ್ಕು ಎಂಬ ಹೆಸರಿನಲ್ಲಿ ಮೇಕೆದಾಟುವಿನಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸುತ್ತಿದೆ. ಈ ಪಾದಯಾತ್ರೆಯಲ್ಲಿ ಜನ ಹೆಚ್ಚಾಗಿ ಸೇರುವುದರಿಂದ ರಾಜ್ಯದಲ್ಲಿ ಈಗಾಗಲೇ ಹೆಚ್ಚಾಗಿರುವ ಕೊರೋನಾ, ಮತ್ತಷ್ಟು ಏರಿಕೆಯಾಗುವ ಸಂಭವವಿದೆ. ಜಿಲ್ಲೆಗಳಿಂದ ಜಿಲ್ಲೆಗಳಿಗೆ ಮತ್ತು ರಾಮನಗರ ಜಿಲ್ಲೆಗಳ ಒಳಗೆ ನಮ್ಮ ನೀರೂ ನಮ್ಮ ಹಕ್ಕು ಉದ್ದೇಶಕ್ಕಾಗಿ ವಾಹನಗಳ ಸಂಚಾರವನ್ನು ತಕ್ಷಣದಿಂದಲೇ ನಿಷೇಧಿಸಲಾಗಿದೆ.

ಹೈಕೋರ್ಟ್‌ನಿಂದ ಛೀಮಾರಿ: ರಾಜಕೀಯವಾಗಿ ಭಾರೀ ಆರೋಪ–ಪ್ರತ್ಯಾರೋಪಗಳಿಗೆ ವೇದಿಕೆಯಾಗಿರುವ ಮೇಕೆದಾಟು ಪಾದಯಾತ್ರೆ ಸಂಬಂಧ ಹೈಕೋರ್ಟ್ ರಾಜ್ಯ ಸರ್ಕಾರ ಮತ್ತು ಕಾಂಗ್ರೆಸ್ ವಿರುದ್ಧ ಭಾರೀ ಆಕ್ರೋಶ ವ್ಯಕ್ತಪಡಿಸಿದೆ. ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ನಮ್ಮ ನೀರು ನಮ್ಮ ಹಕ್ಕು ಘೋಷಣೆಯಡಿ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಪಾದಯಾತ್ರೆ ಪ್ರಶ್ನಿಸಿ ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ಎ.ವಿ. ನಾಗೇಂದ್ರ ಪ್ರಸಾದ್ ಎಂಬುವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ಹಾಗೂ ನ್ಯಾ.ಸೂರಜ್ ಗೋವಿಂದರಾಜ್ ಅವರಿದ್ಧ ವಿಭಾಗೀಯ ನ್ಯಾಯಪೀಠ ತುರ್ತು ವಿಚಾರಣೆಗೆ ಕೈಗೆತ್ತಿಕೊಂಡಿತು.

ಆಧಾರ: ಉದಯವಾಣಿ, ದಿನಾಂಕ:13.01.2022

19. ನಬಾರ್ಡ್‌ನಿಂದ ರೂ.3.32 ಲಕ್ಷ ಕೋಟಿ ಸಾಲದ ಗುರಿ

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ಕೃಷಿ ಸೇರಿ ರಾಜ್ಯದ ಆದ್ಯತಾ ವಲಯಗಳಿಗೆ ನೀಡುವ ಸಾಲದ ಮೊತ್ತವನ್ನು ಈ ಬಾರಿ ಶೇ.12.45 ರಷ್ಟು ಹೆಚ್ಚಳ ಮಾಡಿದ್ದು, ಈ ಮೂಲಕ 2022–23ನೇ ಹಣಕಾಸು ವರ್ಷದಲ್ಲಿ ರೂ.3.32 ಲಕ್ಷ ಕೋಟಿ ಸಾಲದ ರೂಪದಲ್ಲಿ ವಿವಿಧ ವಲಯಗಳಿಗೆ ನೀಡಲು ಉದ್ದೇಶಿಸಿದೆ.

2021–22ರ ಹಣಕಾಸು ವರ್ಷದಲ್ಲಿ ರಾಜ್ಯದ ಆದ್ಯತಾ ವಲಯಗಳಿಗೆ ರೂ.2.96 ಲಕ್ಷ ಕೋಟಿ ಹಂಚಿಕೆ ಮಾಡಲು ಗುರಿ ನಿಗದಿಪಡಿಸಿತ್ತು. ಈ ಪೈಕಿ ಶೇ.96 ಗುರಿ ಸಾಧನೆ ಅಂದರೆ ರೂ.2.45 ಸಾಲ ಯೋಜನೆಯಲ್ಲಿ ವಿತರಿಸಲಾಗಿದೆ. 2022–23ನೇ ಸಾಲಿಗೆ ಯೋಜನೆಯ ಮೊತ್ತವನ್ನು ರೂ.3.32.915.80 ಕೋಟಿಗೆ ಹೆಚ್ಚಿಸಲಾಗಿದ್ದು. ಈ ಪೈಕಿ ಕೃಷಿ ಮತ್ತು ಸಂಬಂಧಿತ ವಲಯಗಳಿಗೆ ಶೇ.48.59 ರಷ್ಟು (ರೂ.1.61 ಲಕ್ಷ ಕೋಟಿ) ಮೀಸಲಿಡಲಾಗಿದೆ ಎಂದು ನಬಾರ್ಡ್ ತಿಳಿಸಿದೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ನಬಾರ್ಡ್ ಹಮ್ಮಿಕೊಂಡಿದ್ದ ರಾಜ್ಯ ಸಾಲ ಗೋಷ್ಠಿಯಲ್ಲಿ 2022–23ನೇ ಸಾಲಿನ ಸ್ಟೇಟ್ ಫೋಕಸ್ ಪೇಪರ್ ಬಿಡುಗಡೆಗೊಳಿಸಿದರು. ಅದರಲ್ಲಿ ಈ ಅಂಶಗಳನ್ನು ತಿಳಿಸಿದೆ. ಕೃಷಿ ಮತ್ತು ಸಂಬಂಧಿತ ವಲಯಗಳಿಗೆ ಮೀಸಲಿಟ್ಟ ರೂ.1.61 ಲಕ್ಷ ಕೋಟಿಯಲ್ಲಿ ಬೆಳೆ ಸಾಲ ವಿತರಣೆಗೆ ರೂ.89,449.83 ಕೋಟಿ ಮೀಸಲಿಡಲಾಗಿದೆ. ಉಳಿದಂತೆ ಜಲಸಂಪನ್ಮೂಲಕ್ಕೆ ರೂ.4,227.88 ಕೋಟಿ ಕೃಷಿ ಯಾಂತ್ರೀಕರಣ ರೂ.5,776.87 ಕೋಟಿ, ತೋಟಗಾರಿಕೆ (ರೇಷ್ಮೆ ಸೇರಿ) ರೂ.10,728.76 ಪಶುಸಂಗೋಪನೆ (ಹೈನುಗಾರಿಕೆ)ಗೆ ರೂ.7,349.47 ಕೋಟಿ ಕುಕ್ಕುಟೋದ್ಯಮ ರೂ.2,247.95 ಕೋಟಿ

ಮೀನುಗಾರಿಕೆ ರೂ.1.102.34 ಕೋಟಿ ಕುರಿ, ಮೇಕೆ, ಹಂದಿ ಇತ್ಯಾದಿ ಸಾಕಾಣಿಕೆಗೆ ರೂ.2,482.57 ಕೋಟಿ ನೀಡುವ ಗುರಿ ಹೊಂದಲಾಗಿದೆ. 2021–2022ರಲ್ಲಿ ರೂ.71,923.31 ಕೋಟಿ ಬೆಳೆ ಸಾಲದ ಗುರಿ ಹೊಂದಲಾಗಿತ್ತು. ಹಾಗೂ ರೂ.54,068.76 ಕೋಟಿ ಕೃಷಿ ಅವಧಿ ಸಾಲಗಳ ಗುರಿ ಇತ್ತು ಎಂದು ಸಾಲದ ಯೋಜನೆ ಕುರಿತು ಬಿಡುಗಡೆ ಮಾಡಿದ ಕಿರುಹೊತ್ತಿಗೆಯಲ್ಲಿ ವಿವರಿಸಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮಾ ಕೃಷಿ ಮತ್ತು ಸಂಬಂಧಿತ ಹಾಗೂ ಗ್ರಾಮೀಣಾಭಿವೃದ್ಧಿಗೆ ನಬಾಡ್ ಆರ್ಥಿಕ ನೆರವು ನೀಡುವ ಮೂಲಕ ಸಾಕಷ್ಟು ಕೊಡುಗೆ ನೀಡುತ್ತಿದೆ. ಆದರೆ, ತನ್ನ ಆದ್ಯತಾ ವಲಯಗಳ ಪಟ್ಟಿಗೆ ರೈತ ಉತ್ಪಾದಕ ಸಂಘ (ಎಫ್‌ಪಿಒ) ಗಳನ್ನು ಪರಿಗಣಿಸಬೇಕು. ಯಾಕೆಂದರೆ ಭವಿಷ್ಯದ ಕೃಷಿ ಬೆಳವಣಿಗೆಯಲ್ಲಿ ಈ ಎಫ್‌ಪಿಒಗಳು ಕ್ರಾಂತಿಯನ್ನು ಮಾಡಲಿವೆ ಎಂದು ಹೇಳಿದರು.

ರಾಜ್ಯದಲ್ಲಿ ಕಳೆದ ಒಂದು ದಶಕದಲ್ಲಿ ಎಂಟು ಬರಗಾಲಗಳು ಮತ್ತು ಎರಡು ನೆರೆಗಳು ಹಾಗೂ ಕೊರೋನಾ ರೈತರಿಗೆ ಬಂದು ಅಪ್ಪಳಿಸಿವೆ. ಈ ಎಲ್ಲ ಸವಾಲುಗಳ ನಡುವೆಯೂ ಕೃಷಿಯಲ್ಲಿ ರಾಜ್ಯದ ಒಟ್ಟಾರೆ ಆಂತರಿಕ ವೃದ್ಧಿ ದರ (ಜಿಎಸ್‌ಡಿಪಿ) ಏರಿಕೆ ಕಂಡಿದೆ. ಉಳಿದ ಯಾವ ಕ್ಷೇತ್ರಗಳು ಕೊರೋನಾ ಅವಧಿಯಲ್ಲಿ ಪ್ರಗತಿ ಸಾಧಿಸಿಲ್ಲ. ಈ ನಿಟ್ಟಿನಲ್ಲಿ ಸಾಧ್ಯವಾದಷ್ಟು ಹೆಚ್ಚು ಆರ್ಥಿಕ ನೆರವನ್ನು ರೈತರಿಗೆ ನೀಡುವುದು ಸರ್ಕಾರ ಮತ್ತು ನಬಾರ್ಡ್ ಹಾಗೂ ಬ್ಯಾಂಕ್‌ಗಳ ಕರ್ತವ್ಯ ಎಂದು ತಿಳಿಸಿದರು.

ಕೃಷಿ ಮತ್ತು ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ನಬಾರ್ಡ್ ಮುಖ್ಯ ಮಹಾ ವ್ಯವಸ್ಥಾಪಕ ನೀರಜ್ ಕುಮಾರ್ ವರ್ಮ ವಿವಿಧ ಬ್ಯಾಂಕ್‌ಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಆಧಾರ: ಉದಯವಾಣಿ, ದಿನಾಂಕ:13.01.2022

20. ಎರಡೂವರೆ ದಿನಕ್ಕೆ ಕೊರೋನಾ ಪ್ರಕರಣ ದುಪ್ಪಟ್ಟು

ರಾಜ್ಯದಲ್ಲಿ ವ್ಯಾಪಕವಾಗುತ್ತಿರುವ ಕೊರೋನಾ ಪ್ರಕರಣಗಳು ಎರಡರಿಂದ ಎರಡೂವರೆ ದಿನದಲ್ಲಿ ದುಪ್ಪಟ್ಟಾಗುತ್ತಿದ್ದು, ಎರಡನೇ ಡೋಸ್ ಲಸಿಕೆ ಪಡೆಯದವರು ಶೀಘ್ರ ಪಡೆಯಬೇಕು ಎಂದು ಆರೋಗ್ಯ ಸಚಿವ ಡಾ: ಕೆ. ಸುಧಾಕರ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ10–12 ದಿನಕ್ಕೆ ದುಪ್ಪಟ್ಟಾದ್ದರೆ ಎರಡನೇ ಅಲೆಯಲ್ಲಿ 8 ದಿನಕ್ಕೆ ದುಪ್ಪಟ್ಟಾಗುತ್ತಿತ್ತು. ಮೂರನೇ ಅಲೆಯಲ್ಲಿ ತೀವ್ರತೆ ಅಧಿಕವಾಗಿದೆ. ನಿತ್ಯ 2 ರಿಂದ 2.5 ಲಕ್ಷ ಕೋವಿಡ್ ಪರೀಕ್ಷೆ ಗುರಿ ನೀಡಿದ್ದು, ತ್ವರಿತ ಫಲಿತಾಂಶ ನೀಡಲು ಪ್ರಯತ್ನ ನಡೆದಿದೆ. ಬೆಂಗಳೂರಿನಲ್ಲಿ 1 ಲಕ್ಷ ಪರೀಕ್ಷೆ ಮಾಡಲಾಗುತ್ತಿದೆ. ರಾಜ್ಯದಲ್ಲಿ 265 ಪರೀಕ್ಷೆ ಲ್ಯಾಬ್ ಸ್ಥಾಪಿಸಿದ್ದು, ಮೊದಲ ಬಾರಿಗೆ 5 ಜೀನೋಮಿಕ್ ಸೀಕ್ವೆನ್ಸ್ ಲ್ಯಾಬ್ ಆರಂಭಿಸಲಾಯಿತು. ಕೇಂದ್ರ ಸರ್ಕಾರದ 4 ಸೇರಿ ಒಟ್ಟು 9 ಜೀನೋಮಿಕ್ ಸೀಕ್ವೆನ್ಸ್ ಲ್ಯಾಬ್ ಇದೆ. 1,875 ಮಾದರಿ ಒಂದು ಬ್ಯಾಚ್‌ನಲ್ಲಿ ಸೀಕ್ವೇನಿಂಗ್ ಮಾಡುವ ಸೌಲಭ್ಯವಿದೆ ಎಂದು ತಿಳಿಸಿದರು. ಡಿಸೆಂಬರ್ 28 ರಂದು ಬೆಂಗಳೂರಿನಲ್ಲಿ 269 ಹಾಗೂ ಉಳಿದ ಭಾಗದಲ್ಲಿ 87 ಸೇರಿ ಒಟ್ಟು 356 ಪ್ರಕರಣ ಇತ್ತು. ಜನವರಿ11 ರಂದು ಬೆಂಗಳೂರಿನಲ್ಲೇ 10,800 ಪ್ರಕರಣ ಹಾಗೂ ರಾಜ್ಯದ ಉಳಿದೆಡೆ 3,673 ಪ್ರಕರಣ ಕಂಡುಬಂದವು. 15 ದಿನಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ.32.64, ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ.32.65, ರಾಜ್ಯದಲ್ಲಿ ಶೇ.36.44 ಪ್ರಕರಣದ ಸರಾಸರಿ ಏರಿಕೆ ವೇಗ ಕಂಡುಬಂದಿದೆ ಎಂದರು.

25 ಸಾವಿರ ಗಡಿ ದಾಟಿದ ಕೇಸ್: ರಾಜ್ಯದಲ್ಲಿ 25,005 ಸೋಂಕು ಪ್ರಕರಣಗಳು ದೃಢಪಟ್ಟಿದ್ದು, ದಿನದ ಸೋಂಕು ಪ್ರಮಾಣ ದರ ಶೇ.12.39 ತಲುಪಿದೆ. ಒಂದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ ಒಂದು ಲಕ್ಷ (1.15.733) ಗಡಿ ದಾಟಿದ್ದು, ಒಟ್ಟು ಸೋಂಕಿತರ ಸಂಖ್ಯೆ 31.24 ಲಕ್ಷಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರದಲ್ಲಿ ಸೋಂಕು ತೀವ್ರಗೊಂಡಿದ್ದು, 18,374 ಪ್ರಕರಣಗಳು ವರದಿಯಾಗಿವೆ. ಮೈಸೂರು 695, ದಕ್ಷಿಣ ಕನ್ನಡ 625, ತುಮಕೂರು 547, ಹಾಸನ 490, ಮಂಡ್ಯ 406, ಧಾರವಾಡ 399, ಬೆಂಗಳೂರು ಗ್ರಾಮಾಂತರ 390, ಉಡುಪಿ 379 ಕಲಬುರಗಿ 346, ಕೋಲಾರ 293, ಬೆಳಗಾವಿ 276, ಉತ್ತರಕನ್ನಡ 250, ಶಿವಮೊಗ್ಗ 212, ಬಳ್ಳಾರಿ 185, ಚಾಮರಾಜನಗರ 176, ರಾಯಚೂರು 122, ಚಿಕ್ಕಬಳ್ಳಾಪುರ 119, ರಾಮನಗರ 112 ಸೋಂಕು ಪ್ರಕರಣಗಳು ದೃಢಪಟ್ಟಿವೆ. ಉಳಿದಂತೆ 10 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಎರಡಂಕಿ ಇದ್ದು, ಬಾಗಲಕೋಟೆಯಲ್ಲಿ ಮಾತ್ರ 5 ಪ್ರಕರಣಗಳು ವರದಿಯಾಗಿವೆ.

ಕಳೆದ 24 ಗಂಟೆಗಳಲ್ಲಿ ಬೆಂಗಳೂರು ನಗರದಲ್ಲಿ ಮೂವರು ಬೆಳಗಾವಿ, ಕಲಬುರಗಿ, ಮೈಸೂರು ತುಮಕೂರು ಮತ್ತು ವಿಜಯಪುರದಲ್ಲಿ ತಲಾ ಒಬ್ಬರಂತೆ ಎಂಟು ಮಂದಿ ಮೃತಪಟ್ಟಿದ್ದು, ಒಟ್ಟು ಸಾವಿನ ಸಂಖ್ಯೆ38,397ಕ್ಕೆ ಏರಿಕೆಯಾಗಿದೆ. 2,363 ಮಂದಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು, ಗುಣಮುಖರ ಒಟ್ಟು ಸಂಖ್ಯೆ 29.70 ಲಕ್ಷ ಮೀರಿದೆ.

2.01 ಲಕ್ಷ ಕೋವಿಡ್ ಪರೀಕ್ಷೆ: ರಾಜ್ಯದಲ್ಲಿ 42,563 ರ್‍ಯಾಪಿಡ್ ಆ್ಯಂಟಿಜಿನ್ ಟೆಸ್ಟ್ ಹಾಗೂ 1,59,141 ಆರ್‌ಟಿಪಿಸಿಆರ್ ಪರೀಕ್ಷೆ ಸೇರಿ ಒಟ್ಟು 2,01,704 ಕೋವಿಡ್ ಮಾದರಿಗಳ ಪರೀಕ್ಷೆ ನಡೆಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:14.01.2022

21. ಸಂಘರ್ಷದ ಆತಂಕ : ಪೋಲೀಸ್ ಬಂದೋಬಸ್ತ್

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಪಾದಯಾತ್ರೆ ನಿಲ್ಲಿಸುವಂತೆ ಸೂಚನೆಕೊಟ್ಟ ನಂತರವು ಡಿ.ಕೆ. ಸಹೋದರರು ಪಾದಯಾತ್ರೆ ಎಂದಿನಂತೆ ನಡೆಯುತ್ತದೆ ಎಂದು ಕರೆ ನೀಡಿದ್ದರು. ಇದರಿಂದಾಗಿ ಕಾಂಗ್ರೆಸ್ ಹಾಗೂ ಸರ್ಕಾರದ ನಡುವೆ ಸಂಘರ್ಷ ನಡೆಯಬಹುದು ಎಂಬ ಭಾವನೆ ಜನರಲ್ಲಿ ಮೂಡಿತ್ತು.

ಇದರ ಬೆನ್ನಲ್ಲೇ ರಾತ್ರಿಯಿಂದಲೇ ಮುನ್ನೆಚ್ಚರಿಕೆ ಕ್ರಮವಾಗಿ ನಗರದಲ್ಲಿ ಪೊಲೀಸ್ ಬಂದೋಬಸ್ತ್ ಹೆಚ್ಚಿಸಲಾಗಿತ್ತು. ಕೆ.ಎಸ್.ಆರ್.ಪಿ ತುಕಡಿಗಳನ್ನು ನಿಯೋಜಿಸಲು ಪೊಲೀಸ್ ಇಲಾಖೆ ನಿರ್ಧರಿಸಿತ್ತು. ಇವೆಲ್ಲ ಬೆಳವಣಿಗೆಗಳು ಕ್ಷಣಕ್ಷಣಕ್ಕೂ ಕುತೂಹಲಕ್ಕೆ ಕಾರಣವಾಗಿತ್ತು. 5ನೇ ದಿನದ ಪಾದಯಾತ್ರೆ ಜಿಲ್ಲಾ ಕೇಂದ್ರ ರಾಮನಗರದಿಂದ ಆರಂಭವಾಗಿ ಮಂಚನಾಯ್ಕನ ಹಳ್ಳಿಯಲ್ಲಿ ಮಧ್ಯಾಹ್ನ ಭೋಜನ ಸ್ವೀಕರಿಸಿ, ಬಿಡದಿ ಪಟ್ಟಣ ತಲುಪಲು ನಿಗದಿಯಾಗಿತ್ತು. ಒಟ್ಟು 13 ಕಿ.ಮೀ. ಪಾದಯಾತ್ರೆಗೆ ನಿರ್ಧಾರ ಮಾಡಲಾಗಿತ್ತು.

ಮಂಡ್ಯ ಜಿಲ್ಲೆಯಿಂದ ಅಗಮಿಸಬೇಕಿದ್ದ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಆ ಜಿಲ್ಲೆಯ ಗಡಿಯಲ್ಲೇ ತಡೆದಿದ್ದರು. ಇತ್ತ ಜಿಲ್ಲಾ ಕಾಂಗ್ರೆಸ್ ಕಚೇರಿ ಬಳಿ ಕಾಂಗ್ರೆಸ್ ಕಾರ್ಯಕರ್ತರ ದೊಡ್ಡ ಗುಂಪು ನೆರೆದಿತ್ತು.

ಇನ್ನೊಂದೆಡೆ ಐಜೂರು ವೃತ್ತದಲ್ಲಿ ಪೊಲೀಸ್ ಕೋಟೆಯೆ ನಿರ್ಮಾಣವಾಗಿತ್ತು. ಜಲ ಪಿರಂಗಿ, ಟಿಯರ್ ಗ್ಯಾಸ್ ಸಿಡಿಸುವ ವಾಹನ ಇತ್ಯಾದಿಗಳನ್ನು ನಿಯೋಜಿಸಲಾಗಿತ್ತು. ನಗರದ ಮೂಲಕ ಹಾದು ಹೋಗಿರುವ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಬೆಳವಣಿಗೆಗಳು ನಡೆದಿದ್ದವು. ಹೆದ್ದಾರಿ ಬದಲು ಪರ್ಯಾಯ ಮಾರ್ಗಗಳ ಮೂಲಕ ವಾಹನಗಳು ಸಂಚರಿಸಲು ಪೊಲೀಸರು ವ್ಯವಸ್ಥೆ ಮಾಡಿದ್ದರು.

ಪಾದಯಾತ್ರೆ ತಡೆಯುವಂತೆ ರಾಜ್ಯ ಸರ್ಕಾರದ ಆದೇಶ ಪಾಲನೆಗೆ ಇಡೀ ಪೊಲೀಸ್ ಇಲಾಖೆ ಫೀಲ್ಡಿಗಿಳಿದಿತ್ತು. ಎಡಿಜಿಪಿ ಪ್ರತಾಪ್ ರೆಡ್ಡಿ ಎಸ್ಪಿ ಗಿರೀಶ್, ಹಿರಿಯ ಅಧಿಕಾರಿಗಳಾದ ಅನೂಪ್ ಶೆಟ್ಟಿ, ಮಿಥುನ್ ಕುಮಾರ್, ಐವರು ಡಿವೈಎಸ್ಪಿ 16 ಇನ್ಸ್‌ಪೆಕ್ಟರ್, 27 ಪಿಎಸ್‌ಐ, 176 ಎಎಸ್‌ಐ 800 ಕಾನ್ಸ್‌ಟೇಬಲ್‌ಗಳು 4 ಡಿಎಆರ್, 8 ಕೆಎಸ್‌ಆರ್‌ಪಿ ತುಕಡಿ ಸೇರಿ 1,200 ಸಿಬ್ಬಂದಿಯನ್ನು ನಿಯೋಜಿಸಲಾಯಿತು.

ಕಾಂಗ್ರೆಸ್ ಕಚೇರಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಆಗಮಿಸಿದಾಗ ಹಿರಿಯ ಪೊಲೀಸ್ ಅಧಿಕಾರಿಗಳ ತಂಡ ಅವರನ್ನು ಭೇಟಿ ಮಾಡಿ ಪಾದಯಾತ್ರೆ ಕೈಬಿಡುವಂತೆ ತಿಳಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗಮಿಸಿದ ನಂತರ ಕಾಂಗ್ರೆಸ್ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಪ್ರಮುಖ ನಾಯಕರ ಸಭೆ ಆರಂಭಗೊಂಡಿತ್ತು. ಒಂದು ಗಂಟೆಗೂ ಹೆಚ್ಚು ಕಾಲ ಕಾಂಗ್ರೆಸ್ ನಾಯಕರು ಕ್ಲೋಸ್ಡ್ ಡೋರ್ ಸಭೆ ನಡೆಸಿದರು.

ತಾತ್ಕಾಲಿಕ ಸ್ಥಗಿತದ ಘೋಷಣೆ: ಅಂತಿಮವಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಜಂಟಿ ಪತ್ರಿಕಾಗೋಷ್ಠಿ ನಂತರ ಬಹಿರಂಗ ಸಭೆಯಲ್ಲಿ ಮೇಕೆದಾಟು ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವುದಾಗಿ ಘೋಷಿಸಿದರು. ಕೋವಿಡ್ ಸೋಂಕು ಕಡಿಮೆಯಾಗುತ್ತಲೇ ಪುನ: ಪಾದಯಾತ್ರೆ ಆರಂಭಿಸುವುದಾಗಿ ಕಾಂಗ್ರೆಸ್ ನಾಯಕರು ತಿಳಿಸಿದ ನಂತರ ಕಾರ್ಯಕರ್ತರ ಗುಂಪು ಕರಗಿತು.

ಆಧಾರ: ವಿಜಯವಾಣಿ, ದಿನಾಂಕ:14.01.2022

22. ಲಾಕ್ ಡೌನ್ ಬೇಡ

ಕೊರೋನಾ ನಿಯಂತ್ರಣಕ್ಕೆ ದಯವಿಟ್ಟು ಲಾಕ್‌ಡೌನ್ ಮಾಡಬೇಡಿ. ಸೋಂಕಿನ ನಿಯಂತ್ರಣಕ್ಕಾಗಿ ಹಿಂದಿನ ಕ್ರಮಗಳನ್ನೇ ಅನುಸರಿಸಿದರೆ ಉದ್ದಿಮೆ ಜನರ ಜೀವನಕ್ಕೆ ವಹಿವಾಟಿಗೆ ತೊಂದರೆ ಖಚಿತ ಹೀಗೆಂದು ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರು ವಾಣಿಜ್ಯ ಮತ್ತು ಕೈಗಾರಿಕೆ ವಲಯದ ಪ್ರಮುಖರು ಒಕ್ಕೊರಲ ಆಗ್ರಹ ಮಾಡಿದ್ದಾರೆ.

ಮುಖ್ಯಮಂತ್ರಿಗಳ ಜೊತೆಗೆ ಪ್ರಧಾನಿ ನರೇಂದ್ರ ಮೋದಿಯವರು ನಡೆಸಿದ ಪರಾಮರ್ಶೆ ಸಭೆಯಲ್ಲಿಯೂ ಕೂಡ ಸ್ಥಳೀಯವಾಗಿ ಸೋಂಕು ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಿ ಎಂದೂ ಸೂಚನೆ ನೀಡಿದ ಬೆನ್ನಲ್ಲೇ ಈ ಹಕ್ಕೊತ್ತಾಯ ವ್ಯಕ್ತವಾಗಿದೆ. ಕಾರ್ಮಿಕ ಮತ್ತು ಶ್ರಮಿಕ ವರ್ಗವು ಲಾಕ್‌ಡೌನ್ ವಿರೋಧ ಮಾಡಿದ್ದು ಇದರಿಂದ ಉಂಟಾದ ಆಘಾತದಿಂದ ಇನ್ನು ಚೇತರಿಕೆ ಆಗಿಲ್ಲ ಎಂಬ ಆಗ್ರಹ ಪ್ರಬಲವಾಗಿ ವ್ಯಕ್ತವಾಗಿದೆ.

ಈ ಎಲ್ಲಾ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಮಾತನಾಡಿದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ: ಕೆ. ಸುಧಾಕರ್, ಲಾಕ್‌ಡೌನ್ ಮಾಡುವುದಿಲ್ಲ. ಅದರಿಂದ ಸೋಂಕು ನಿಯಂತ್ರಣ ಮಾಡುವುದು ಸಾಧ್ಯವಾಗಲಾರದು ಎಂದು ಮನವರಿಕೆಯಾಗಿದೆ. ಬಿಗಿ ಕ್ರಮಗಳನ್ನು ಮಾತ್ರ ಅನುಷ್ಠಾನ ಮಾಡಲಾಗುತ್ತದೆ ಎಂದು ನಿಯಂತ್ರಣಕ್ಕೆ 3 ವಾರ ಬೇಕು ನಂತರವಷ್ಟೇ ಆದರ ಫಲಿತಾಂಶ ದೊರೆಯಬಹುದು ಎಂದು ತಜ್ಞರು ಹೇಳಿದ್ದಾರೆ ಎಂದು ಆರೋಗ್ಯ ಸಚಿವ ಡಾ:ಕೆ. ಸುಧಾಕರ್ ತಿಳಿಸಿದ್ದಾರೆ.

ಕಟ್ಟುನಿಟ್ಟಿನ ಜಾರಿ: ಕೊರೋನಾ ಹಾಗೂ ರೂಪಾಂತರಿ ಒಮಿಕ್ರಾನ್ ನಿಯಂತ್ರಣ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ವಾರಾಂತ್ಯ ಕರ್ಫ್ಯೂ ಘೋಷಣೆ ಮಾಡಿದ ನಂತರ ಸತತ ಎರಡನೇ ವಾರದ ವಾರಾಂತ್ಯ ಕರ್ಫ್ಯೂ ಇದಾಗಿದ್ದು, ಜನವರಿ ತಿಂಗಳ ಅಂತ್ಯದವರೆಗೂ ಇದು ಮುಂದುವರಿಯಲಿದೆ. ಆಹಾರ ಧಾನ್ಯ, ತರಕಾರಿ, ಹಣ್ಣು ಹಾಲು ಔಷಧ, ಮೀನು–ಮಾಂಸ ಸೇರಿದಂತೆ ಅಗತ್ಯ ವಸ್ತುಗಳನ್ನು

ಹೊರತುಪಡಿಸಿ ಇತರೆ ಸೇವೆಗಳು ಇರುವುದಿಲ್ಲ. ಅನಗತ್ಯವಾಗಿ ಓಡಾಟ ನಡೆಸುವ ವಾಹನಗಳನ್ನು ಜಪ್ತಿ ಮಾಡಲು ಪೊಲೀಸರಿಗೆ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಆದೇಶ ನೀಡಿದೆ.

ವಾಣಿಜ್ಯ ಚಟುವಟಿಕೆಗೆ ಮಾರಕ: ಮತ್ತೆ ಲಾಕ್‌ಡೌನ್ ಆದರೆ ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಮಾರಕ ಹೊಡೆತ ನೀಡಲಿದೆ ಎಂದು ಉದ್ದಿಮೆ ಕ್ಷೇತ್ರದ ಪ್ರಮುಖರು ಆತಂಕ ವ್ಯಕ್ತಪಡಿಸಿದ್ದಾರೆ. ವಿನಾಯಿತಿಯೊಂದಿಗೆ ಲಾಕ್‌ಡೌನ್ ಮಾಡಿದರೂ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ದೊಡ್ಡ ಪೆಟ್ಟುಬೀಳಲಿದೆ ಎಂಬ ಆತಂಕವು ಅವರದ್ದು, ಜೊತೆಗೆ ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ತೊಂದರೆಯಾಗಲಿದೆ. ಈಗಾಗಲೇ ಎರಡು ಬಾರಿ ಲಾಕ್‌ಡೌನ್ ಎದುರಿಸಲಾಗಿದೆ. ಮೂರನೇ ಅಲೆಯು ಡಿಸೆಂಬರ್ ಅಂತ್ಯದಿಂದ ಶುರುವಾಗಿದೆ. ವರ್ಷಾಂತ್ಯ ಮತ್ತು ಸಂಕ್ರಾಂತಿಯಲ್ಲಿ ಅತಿ ಹೆಚ್ಚು ವ್ಯಾಪಾರ–ವಹಿವಾಟು ನಡೆಯುತ್ತೆ. ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂನಿಂದ ಹೋಟೇಲ್, ಆಟೋಮೊಬೈಲ್, ಎಲೆಕ್ಟ್ರಾನಿಕ್ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಭಾರಿ ಹಿನ್ನಡೆ ಉಂಟಾಗಿದೆ. ರಾಜ್ಯದ ಕೈಗಾರಿಕೆ, ವಾಣಿಜ್ಯ ಸೇರಿದಂತೆ ವಿವಿಧ ಕ್ಷೇತ್ರಗಳ ಒಟ್ಟಾರೆ ಆಂತರಿಕ ವೃದ್ಧಿ ದರ 2021–22 ರ ಪ್ರಕಾರ ರೂ.17 ಲಕ್ಷ ಕೋಟಿ ಆಗಿದೆ. ಹದಿನೈದು ದಿನಗಳಲ್ಲೇ ಐದುವರೆ ಸಾವಿರ ಕೋಟಿ ರೂಪಾಯಿ ನಷ್ಟ ಉಂಟಾಗುತ್ತದೆ ಎಂದು ಎಐಎಂಒ ಕರ್ನಾಟಕ ಘಟಕದ ಅಧ್ಯಕ್ಷ ಸಂಪತ್ ರಾಮನ್ ಒತ್ತಾಯಿಸಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ:15.01.2022

23. ನಿವೇಶನ ರಹಿತರ ಸಮೀಕ್ಷೆಗೆ ಒಪ್ಪಿಗೆ

ರಾಜ್ಯದ ಗ್ರಾಮೀಣ ಭಾಗದಲ್ಲಿ ವಸತಿ ರಹಿತರು ಮತ್ತು ನಿವೇಶನ ರಹಿತರ ಕುರಿತು 2018ರಲ್ಲಿ ರಾಜ್ಯ ಸರ್ಕಾರ ಮಾಡಿದ್ದ ಸಮೀಕ್ಷಾ ವರದಿಯನ್ನು ಕೇಂದ್ರ ಸರ್ಕಾರ ಪರಿಗಣಿಸಿದೆ. ಇದರಿಂದ ರಾಜ್ಯದಲ್ಲಿರುವ ವಸತಿ ರಹಿತರು ಮತ್ತು ನಿವೇಶನ ರಹಿತರಿಗೆ ಪ್ರಧಾನಮಂತ್ರಿ ಆವಾಸ್ (ಗ್ರಾಮೀಣ) ಯೋಜನೆಯಡಿ ವಸತಿ ಸೌಲಭ್ಯಕ್ಕೆ ಕೇಂದ್ರದಿಂದ ನೆರವು ಸಿಗಲಿದೆ.

ರಾಜ್ಯ ಸರ್ಕಾರದ ಸಾಫ್ಟವೇರ್ ಬಳಸಿ 2018ರಲ್ಲಿ ವಸತಿ ಮತ್ತು ನಿವೇಶನ ರಹಿತರ ಸಮೀಕ್ಷೆ ನಡೆಸಿ ಅಪ್‌ಡೇಟ್ ಮಾಡಿದ್ದ 18,78,671 ವಸತಿ ರಹಿತರು ಮತ್ತು 6,61,535 ನಿವೇಶನ ರಹಿತರ ಪಟ್ಟಿಯನ್ನು ಕೇಂದ್ರ ಸರ್ಕಾರದ ಆವಾಸ್+ಡಾಟಾಬೇಸ್‌ನಲ್ಲಿ ನಮೂದಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿ ಐದು ವರ್ಷಗಳಿಗೊಮ್ಮೆ ವಸತಿ ರಹಿತರು ಮತ್ತು ನಿವೇಶನ ರಹಿತರ ಪಟ್ಟಿ ಮಾಡಿ, ಆ ಸಂಖ್ಯೆಗೆ ತಕ್ಕಂತೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮತ್ತು ರಾಜ್ಯ ಸರ್ಕಾರಗಳ ನೆರವಿನೊಂದಿಗೆ ವಸತಿ ಕಲ್ಪಿಸಲು ಕಾರ್ಯಕ್ರಮ ರೂಪಿಸುತ್ತವೆ. ಆದರೆ, 2018ರಲ್ಲಿ ರಾಜ್ಯ ಸರ್ಕಾರದ ಸಮೀಕ್ಷೆ ಪಟ್ಟಿಯನ್ನು ಕೇಂದ್ರ ಸರ್ಕಾರ ಸ್ವೀಕರಿಸದ ಕಾರಣ ಕೇಂದ್ರದಿಂದ ಸೂಕ್ತ ರೀತಿಯ ನೆರವು ಸಿಗುತ್ತಿರಲಿಲ್ಲ.

ಸಮಸ್ಯೆ ಏನಾಗಿತ್ತು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ ದೇಶದ ಗ್ರಾಮೀಣ ಭಾಗದಲ್ಲಿ ಮನೆ ಅಥವಾ ನಿವೇಶನಗಳಿಲ್ಲದ ಎಲ್ಲರಿಗೂ ಮನೆಗಳನ್ನು ಒದಗಿಸುವ ಉದ್ದೇಶದಿಂದ ಪ್ರಧಾನಮಂತ್ರಿ ಅವಾಸ್ (ಗ್ರಾಮೀಣ)ಯೋಜನೆ ಜಾರಿಗೆ ಬಂದಿತ್ತು. ಅದರಂತೆ 2018ರಲ್ಲಿ ಸಾಫ್ಟವೇರ್ ಒಂದನ್ನು ಸಿದ್ಧಪಡಿಸಿದ್ದ ಕೇಂದ್ರ ಸರ್ಕಾರ ಈ ಸಾಫ್ಟವೇರ್ ಆಧಾರವಾಗಿಟ್ಟುಕೊಂಡು ಸಮೀಕ್ಷೆ ನಡೆಸಿ, ಅದನ್ನು ಕೇಂದ್ರ ಸರ್ಕಾರದ ಆವಾಸ್+ಡಾಟಾಬೇಸ್‌ನಲ್ಲಿ ನಮೂದಿಸಲು ತಿಳಿಸಿತ್ತು.

ಆದರೆ, ರಾಜ್ಯ ಸರ್ಕಾರ ತನ್ನದೇ ಆದ ಸಾಫ್ಟ್‌ವೇರ್ ಬಳಸಿ ಮನೆ ಹಾಗೂ ನಿವೇಶನ ಇಲ್ಲದವರ ಸಮೀಕ್ಷೆ ಮಾಡಿ 18,78,671 ವಸತಿ ರಹಿತರು ಮತ್ತು 6,61,535 ನಿವೇಶನರಹಿತರ ಪಟ್ಟಿ ಸಿದ್ಧಪಡಿಸಿತ್ತು.

ಆದರೆ, ಇದು ತನ್ನ ಸಾಫ್ಟ್‌ವೇರ್‌ಗೆ ಹೊಂದಾಣಿಕೆಯಾಗದ ಕಾರಣ ಕೇಂದ್ರ ಸರ್ಕಾರ ಈ ಪಟ್ಟಿಯನ್ನು ಅಂಗೀಕರಿಸಿರಲಿಲ್ಲ.

ಹೀಗಾಗಿ ಕಳೆದ ಎರಡು ವರ್ಷಗಳಿಂದ ರಾಜ್ಯ ಸರ್ಕಾರದ ಪಟ್ಟಿಯನ್ನು ಕೇಂದ್ರ ಸರ್ಕಾರದ ಆವಾಸ್+ಡಾಟಾಬೇಸ್‌ನಲ್ಲಿ ನಮೂದಿಸುವಂತೆ ಅನೇಕ ಪತ್ರ ವ್ಯವಹಾರಗಳನ್ನು ನಡೆಸಿತ್ತು. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಮೇಲೆ ಈ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ವಸತಿ ಸಚಿವ ವಿ.ಸೋಮಣ್ಣ ಕೂಡ ಹಲವು ಬಾರಿ ಈ ಬಗ್ಗೆ ಕೇಂದ್ರಕ್ಕೆ ಪತ್ರ ಬರೆದಿದ್ದರು. ಅಲ್ಲದೆ, ಇತ್ತೀಚೆಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರನ್ನು ಭೇಟಿಯಾಗಿ ಒತ್ತಡ ಹೇರಿದ್ದರು. ಅದಕ್ಕೆ ಸಚಿವರು ಸಮ್ಮತಿಸಿದ್ದರು. ಅದರಂತೆ ಇದೀಗ ರಾಜ್ಯ ಸರ್ಕಾರ 2018ರಲ್ಲಿ ಸಿದ್ಧಪಡಿಸಿದ್ದ ವಸತಿ ಮತ್ತು ನಿವೇಶನರಹಿತರ ಪಟ್ಟಿಯನ್ನು ಆವಾಸ್+ಡಾಟಾಬೇಸ್‌ನಲ್ಲಿ ನಮೂದಿಸಲು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ.

ಆಧಾರ: ವಿಶ್ವವಾಣಿ, ದಿನಾಂಕ:16.01.2022.

24. ಸಂಪನ್ಮೂಲ ಸಮಾಧಾನ

ಬಿಟ್ಟುಬಿಡದೇ ಕೊರೊನಾ ಸಂಕಷ್ಟದ ನಡವೆಯೂ ಸಂಪನ್ಮೂಲ ಕ್ರೋಡೀಕರಣದಲ್ಲಿ ಕರ್ನಾಟಕ ಸಮಧಾನಕರ ಹೆಜ್ಜೆ ಇಡುತ್ತಿದೆ. ಏಪ್ರಿಲ್‌ನಿಂದ ಆರಂಭಗೊಂಡು ಡಿಸೆಂಬರ್‌ವರೆಗೆ ಕಳೆದ ಬಜೆಟ್‌ನಲ್ಲಿ ಹಾಕಿಕೊಳ್ಳಲಾಗಿದ್ದ ಗುರಿಯ ಶೇ.75 ರಷ್ಟು ಸಂಪನ್ಮೂಲ ಸಂಗ್ರಹವಾಗಿದ್ದು, ಆರ್ಥಿಕ ಚೇತರಿಕೆಯಲ್ಲಿ ಗಮನಾರ್ಹ ಪ್ರಗತಿ ಕಂಡಿದೆ.

ಅದೃಷ್ಟವೆಂದರೆ, ಪ್ರಸಕ್ತ ಆರ್ಥಿಕ ವರ್ಷದ ಆರಂಭದಲ್ಲೇ ಕೊರೊನಾ ಎರಡನೇ ಅಲೆ ಕರ್ನಾಟಕವನ್ನು ಬಾಧಿಸಿತ್ತು. ಆದರೆ, ಈ ಅಲೆಯ ಸಂಕಷ್ಟವನ್ನು ಯಶಸ್ವಿಯಾಗಿ ದಾಟಿರುವ ಕರ್ನಾಟಕ, ಪ್ರಸಕ್ತ ಆರ್ಥಿಕ ವರ್ಷದ ಬಜೆಟ್ ಗುರಿ ಮುಟ್ಟುವ ನಿಟ್ಟಿನಲ್ಲಿ ಮುನ್ನಡೆದಿದೆ.

ವಾಣಿಜ್ಯ ತೆರಿಗೆ, ಅಬಕಾರಿ ನೋಂದಣಿ, ಮುದ್ರಾಂಕ ಮತ್ತು ಮೋಟಾರು ವಾಹನಗಳ ತೆರಿಗೆ ಸಂಗ್ರಹದಲ್ಲಿ ತೃಪ್ತಿದಾಯಕ ಸಾಧನೆ ಮಾಡಲಾಗಿದೆ. ಅಂದರೆ, ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದ್ದ ಶೇ.70ರಿಂದ ಶೇ.80ರಷ್ಟು ಆದಾಯ ಸಂಗ್ರಹ ಮಾಡಲಾಗಿದೆ ಎಂದು ರಾಜ್ಯ ಸರ್ಕಾರವೇ ತಿಳಿಸಿದೆ. ಪ್ರಸಕ್ತ ಆರ್ಥಿಕ ವರ್ಷ ಮುಗಿಸಲು ಇನ್ನೂ ಮೂರು ತಿಂಗಳು ಬಾಕಿ ಇದ್ದು, ಈ ಹೊತ್ತಿಗೆ ಮತ್ತಷ್ಟು ಸಂಪನ್ಮೂಲ ಕ್ರೋಡೀಕರಣವಾಗಬಹುದು ಎಂದು ರಾಜ್ಯ ಸರ್ಕಾರ ಅಂದಾಜಿಸಿದೆ.

ನೋಂದಣಿ ಮತ್ತು ಮುದ್ರಾಂಕ: ರಾಜ್ಯದ ಆರ್ಥಿಕತೆಗೆ ಹೆಚ್ಚಿನ ಆದಾಯ ಕೊಟ್ಟಿರುವುದು ನೋಂದಣಿ ಮತ್ತು ಮುದ್ರಾಂಕ ಇಲಾಖೆ. ಅಂದರೆ, ಈ ವರ್ಷದಲ್ಲಿ ರಿಯಲ್ ಎಸ್ಟೇಟ್ ಉದ್ಯಮ ಸಾಕಷ್ಟು ಚೇತರಿಸಿಕೊಂಡಿದೆ ಎಂಬುದು ಈ ವಲಯದ ತಜ್ಞರ ಮಾತು. ಪ್ರಸಕ್ತ ಆರ್ಥಿಕ ವರ್ಷದ ಮೊದಲ 9 ತಿಂಗಳಲ್ಲಿ ಈ ವಲಯದಲ್ಲಿ ರೂ.9500 ಕೋಟಿ ಆದಾಯ ಸಂಗ್ರಹ ಗುರಿ ಹೊಂದಲಾಗಿತ್ತು. ವಿಶೇಷವೆಂದರೆ, ಈ ಗುರಿಗಿಂತಲೂ ರೂ.250 ಕೋಟಿ ಹೆಚ್ಚೇ ಸಂಪನ್ಮೂಲ ಸಂಗ್ರಹವಾಗಿದೆ. ಇಡೀ ವರ್ಷಕ್ಕೆ ಹೇಳುವುದಾದರೆ, ರೂ.12,655 ಕೋಟಿ ಗುರಿ ಇರಿಸಿಕೊಳ್ಳಲಾಗಿದೆ. ಈ ಲೆಕ್ಕಚಾರದಲ್ಲಿ ಶೇ.75ಕ್ಕಿಂತ ಅಧಿಕ ಆದಾಯ ಸಂಗ್ರಹವಾಗಿದೆ. ಉಳಿದ ಮೂರು ತಿಂಗಳಲ್ಲಿ ಇನ್ನೂ ಹೆಚ್ಚು ಸಂಪನ್ಮೂಲ, ಅಂದರೆ ಶೇ.85 ಕ್ಕಿಂತಲೂ ಹೆಚ್ಚು ಹರಿದು ಬರಬಹುದು ಎಂದು ತಜ್ಞರು ಹೇಳುತ್ತಾರೆ.

ಈ ವಲಯ ಮೊದಲ ಮೂರು ತಿಂಗಳು ಕೊಂಚ ಹಿನ್ನಡೆಯಲ್ಲಿತ್ತು. ಆದರೆ, ಕೊರೊನಾ ಎರಡನೇ ಅಲೆ ನಂತರದಲ್ಲಿ ಸಾಕಷ್ಟು ಚೇತರಿಸಿಕೊಂಡಿದೆ. ಈ ಆರು ತಿಂಗಳಲ್ಲೇ ರೂ.7 ಸಾವಿರ ಕೋಟಿ

ಬಂದಿದೆ. ಬೆಂಗಳೂರು ಮತ್ತು ಮೈಸೂರಿನಲ್ಲೇ ಹೆಚ್ಚು ಆಸ್ತಿಗಳ ನೋಂದಣಿಯಾಗಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಮುದ್ರಾಂಕ ಮತ್ತು ನೋಂದಣಿ ಇಲಾಖೆ ವಿಚಾರದಲ್ಲಿ ಇನ್ನೊಂದು ಖುಷಿ ವಿಷಯವೂ ಇದೆ. ಜನವರಿ 1ರಿಂದ ಗೈಡೆನ್ಸ್ ವ್ಯಾಲ್ಯೂವನ್ನು ಶೇ.10ರಷ್ಟು ಕಡಿಮೆ ಮಾಡಲಾಗಿದ್ದು, ಇದರಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಸ್ತಿ ನೋಂದಣಿಯಾಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಬಕಾರಿ ಇಲಾಖೆ: ಕೊರೊನಾ ಕಾಲದಲ್ಲಿಯೂ ಉತ್ತಮ ಸಾಧನೆ ಮಾಡಿರುವ ಮತ್ತೊಂದು ಇಲಾಖೆಯೆಂದರೆ ಅದು ಅಬಕಾರಿ. ಇಲ್ಲಿ ಪ್ರಸಕ್ತ ಆರ್ಥಿಕ ವರ್ಷದ ಮೊದಲ 9 ತಿಂಗಳು ರೂ.19,306.44 ಕೋಟಿ ಸಂಗ್ರಹವಾಗಿದೆ. ಇದು ಬಜೆಟ್ ಗುರಿಯ ಶೇ.78.55 ರಷ್ಟು ಪ್ರಸಕ್ತ ಸಾಲಿನಲ್ಲಿ ರೂ.24,580 ಕೋಟಿ. ಆದಾಯ ಸಂಗ್ರಹದ ಗುರಿ ಹೊಂದಲಾಗಿದೆ. ಅಂದರೆ, 2020–21ರ ಆರ್ಥಿಕ ವರ್ಷದ ಮೊದಲ 9 ತಿಂಗಳಿಗೆ ಹೊಲಿಕೆ ಮಾಡಿದರೆ, ಈಗ ಶೇ. 15 ರಷ್ಟು ಹೆಚ್ಚಳವಾಗಿದೆ. ಅಬಕಾರಿ ಇಲಾಖೆಯ ದತ್ತಾಂಶಗಳ ಪ್ರಕಾರ, ಏಪ್ರಿಲ್–ಡಿಸೆಂಬರ್ ವರೆಗೆ 41.72 ದಶಲಕ್ಷ ಕಾರ್ಟನ್ ಬಾಕ್ಸ್ ಲಿಕ್ಕರ್ ಮಾರಾಟವಾಗಿದೆ. ಒಂಭತ್ತು ತಿಂಗಳಿಗೆ ಹೋಲಿಸಿದರೆ ಶೇಕಡವಾರು ಅಬಕಾರಿ ತೆರಿಗೆ ಸಂಗ್ರಹ ಸುಧಾರಣೆಯಾಗಿದೆಯಾದರೂ ಡಿಸೆಂಬರ್ ಸಂಬಂಧಿಸಿದಂತೆ ಗುರಿ ಸಾಧನೆಯಲ್ಲಿ ಹಿನ್ನಡೆಯಾಗಿದೆ.

ಜಿಎಸ್‌ಟಿ ಸಂಗ್ರಹ: ಡಿಸೆಂಬರ್‌ನಲ್ಲಿ ರೂ.6,075.10 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ. ಐದಾರು ತಿಂಗಳ ಸರಾಸರಿ ಸಂಗ್ರಹಕ್ಕೆ ಹೋಲಿಸಿದರೆ ಇಲ್ಲೂ ಚೇತರಿಕೆ ಕಂಡಿದೆ. ಮೋಟಾರು ವಾಹನ ತೆರಿಗೆ ಬಾಬ್ತಿನಿಂದ ಡಿಸೆಂಬರ್ ವರೆಗೆ ರೂ. 5,635.10 ಕೋಟಿ ಗುರಿ ಹಾಕಿಕೊಳ್ಳಲಾಗಿತ್ತು. ಈ ಪೈಕಿ ರೂ.4,575 ಕೋಟಿ. ಸಂಗ್ರಹವಾಗಿ ಶೇ. 81 ರಷ್ಟು ಸಾಧನೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ರೂ.7515.00 ಕೋಟಿ ತೆರಿಗೆ ಸಂಗ್ರಹ ಗುರಿ ನಿಗದಿಪಡಿಸಲಾಗಿತ್ತು. ಇತ್ತೀಚಿಗೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಣಕಾಸು ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಒಂಭತ್ತು ತಿಂಗಳ ಪ್ರಗತಿಗೂ ಮುಂದಿನ ಮೂರು ತಿಂಗಳಲ್ಲಿ ಬಜೆಟ್ ಗುರಿ ಮೀರಿ ಸಾಧನೆ ಮಾಡುವಂತೆ ಸೂಚನೆ ನೀಡಿದ್ದರು. ಸೋರಿಕೆ ತಡೆಗಟ್ಟುವಂತೆಯೂ ನಿರ್ದೇಶನ ನೀಡಿದ್ದರು.

ನೋಂದಣಿ ಮತ್ತು ಮುದ್ರಾಂಕ: ರೂ.9,759.49 ಕೋಟಿ

ಅಬಕಾರಿ: ರೂ.19,306.44 ಕೋಟಿ

ಜಿಎಸ್‌ಟಿ ಸಂಗ್ರಹ: ರೂ.6,075.10 ಕೋಟಿ

ಮೋಟಾರು ವಾಹನ ತೆರಿಗೆ: ರೂ.4,575 ಕೋಟಿ

ಆಧಾರ: ಉದಯ ವಾಣಿ, ದಿನಾಂಕ:16.01.2022.

25. ಆರ್ಥಿಕತೆಗೆ ಗುರುತರ ಕೊಡುಗೆ: ಬೊಮ್ಮಾಯಿ ಆಶಯ

ಭವಿಷ್ಯದಲ್ಲಿ ದೇಶದ ಆರ್ಥಿಕತೆಯಲ್ಲಿ ಕರ್ನಾಟಕ ದೊಡ್ಡ ಪಾತ್ರವನ್ನು ವಹಿಸಲಿದೆ. ದೇಶದ 54 ಸಾವಿರ ಸ್ಟಾರ್ಟ್ ಅಪ್‌ಗಳಲ್ಲಿ 13 ಸಾವಿರ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗಿರುವುದು ಹೆಮ್ಮೆಯ ವಿಷಯ. ಸ್ಟಾರ್ಟ್ ಅಪ್‌ಗಳ ಸ್ಥಾಪನೆ ಉತ್ತೇಜನಕ್ಕಾಗಿ ರಾಜ್ಯ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದು, ಸ್ಟಾರ್ಟ್ ಅಪ್ ಸೆಲ್ ಮೂಲಕ ಮಾರ್ಗದರ್ಶನ, ವೈಜ್ಞಾನಿಕ ಬೆಂಬಲ ನೀಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಭಾನುವಾರ ಸ್ಟಾರ್ಟ್ ಅಪ್ ದಿನಾಚರಣೆಯ ಅಂಗವಾಗಿ ಆನ್‌ಲೈನ್ ಮೂಲಕ ಸಂದೇಶ ನೀಡಿದರು. ನವಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣದ ಪರಿಕಲ್ಪನೆಯನ್ನು ಸಾಕಾರ

ಗೊಳಿಸಲಾಗುವುದು. ಪ್ರಧಾನಮಂತ್ರಿಯವರ ಅಭಿಲಾಷೆಯಂತೆ ಸ್ಟಾರ್ಟ್ ಅಪ್ ದಿನಾಚರಣೆಯನ್ನು ರಾಜ್ಯದಲ್ಲಿ ಅರ್ಥ ಪೂರ್ಣವಾಗಿ ಆಚರಿಸಲಾಗಿದೆ. ಬರುವ ವರ್ಷದಲ್ಲಿ ಸರ್ಕಾರ ನವೋದ್ಯಮಗಳಿಗೆ, ಉದ್ಯಮಶೀಲತೆಗೆ, ವೈಜ್ಞಾನಿಕ ಚಿಂತನೆಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಪ್ರಧಾನ ಮಂತ್ರಿಯವರ ದೂರದೃಷ್ಟಿಯ ಫಲವಾಗಿ ದೇಶದಲ್ಲಿ 500ರ ಆಸುಪಾಸಿನಲ್ಲಿದ್ದ ಸ್ಟಾರ್ಟ್ ಅಪ್‌ಗಳು ಇಂದು 54 ಸಾವಿರದ ಗಡಿ ದಾಟಿದೆ. ಸರ್ಕಾರದ ಕಟ್ಟುಪಾಡುಗಳಿಂದ ಮುಕ್ತಿಗೊಳಿಸಿ ಇನ್ನೋವೇಶನ್, ನವೋದ್ಯಮಗಳಿಗೆ ಸಹಾಯ ಒದಗಿಸಲು ಒಂದು ವೇದಿಕೆಯನ್ನು ಸೃಷ್ಟಿ ಮಾಡುವ ಮೂಲಕ ಸ್ಟಾರ್ಟ್ ಅಪ್‌ಗಳ ಸ್ಥಾಪನೆಗೆ ಪ್ರೋತ್ಸಾಹಿಸಿದ್ದಾರೆ. ಕರ್ನಾಟಕದಲ್ಲಿ ಅತೀ ಹೆಚ್ಚು ಸ್ಟಾರ್ಟ ಅಪ್‌ಗಳ ಬೆಳವಣಿಗೆಗೆ ಪ್ರಧಾನ ಮಂತ್ರಿಗಳೇ ಪ್ರೇರಣೆಯಾಗಿದ್ದಾರೆ ಎಂದು ಸ್ಟಾರ್ಟ್ ಅಪ್‌ಗಳಲ್ಲಿ ತೊಡಗಿರುವ ರಾಜ್ಯದ ಎಲ್ಲ ಯುವಕರ ಪರವಾಗಿ ಪ್ರಧಾನಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಕರ್ನಾಟಕ ಐಟಿಬಿಟಿ ಕ್ಷೇತ್ರದಲ್ಲಿ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. 80ರ ದಶಕದಲ್ಲಿ ಮೊದಲ ಸಾಫ್ಟ್‌ವೇರ್ ಕಂಪನಿ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಅಂದಿನಿಂದ ಇಂದಿನವರೆಗೂ ರಾಜ್ಯದಲ್ಲಿ ಈ ಕ್ಷೇತ್ರದಲ್ಲಿ ಬೆಳೆದಿದ್ದು, ಐಟಿಬಿಟಿಗಳ ರಫ್ತು ಕರ್ನಾಟಕದಿಂದ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದೆ. ಎಲಿವೇಟ್ 100, ಎಸ್‌ಸಿಎಸ್ಟಿಯವರಿಗೆ ಡೆಲಿವೇಟ್ ಉನ್ನತಿ ಕಾರ್ಯಕ್ರಮಗಳ ಮೂಲಕ ನವೋದ್ಯಮಿಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ. ಅಮೃತ ನವೋದ್ಯಮ ಯೋಜನೆಯಡಿ ಓಬಿಸಿ ಹಾಗೂ ಅಲ್ಪ ಸಂಖ್ಯಾತರ 75 ಸ್ಟಾರ್ಟ್ ಅಪ್‌ಗಳಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಮಹಿಳಾ ನವೋದ್ಯಮಿಗಳಿಗೆ ಉತ್ತೇಜಿಸಲು ಎಲಿವೇಟ್ 25 ಸ್ಟಾರ್ಟ್ ಅಪ್‌ಳಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ರಾಜ್ಯದಲ್ಲಿ 482 ಸ್ಟಾರ್ಟ್ ಅಪ್‌ಗಳಿಗೆ ರೂ.120 ಕೋಟಿಗಳ ಆರ್ಥಿಕ ನೆರವು ನೀಡಲಾಗಿದೆ ಎಂದು ತಿಳಿಸಿದರು.

ಬಿಯಾಂಡ್ ಬೆಂಗಳೂರು ಯೋಜನೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನವೋದ್ಯಮ, ಐಟಿಬಿಟಿ, ಸ್ಟಾರ್ಟ್ ಅಪ್‌ಗಳನ್ನು ಪ್ರಾರಂಭಿಸುವ ಚಿಂತನೆಯಿದೆ. ರಾಜ್ಯದಲ್ಲಿ ನೂತನ ಆರ್‌ಎಂಡ್‌ಡಿ ನೀತಿಯನ್ನು ರಚಿಸಿ, ಸಣ್ಣ ಮಟ್ಟದ ಗ್ಯಾರೇಜಿನಿಂದ ಹಿಡಿದು ದೊಡ್ಡ ಕೈಗಾರಿಕೆವರೆಗೂ ವೈಜ್ಞಾನಿಕ ಶಾಲೆಗಳಲ್ಲಿ ವೈಜ್ಞಾನಿಕ ಸಂಶೋಧನೆಗೆ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಚಿಂತನೆ, ಉದ್ಯಮಶೀಲತೆಗೆ ಉತ್ತೇಜನ ನೀಡಲು ಶಾಲೆಗಳ ಪಠ್ಯ ಪುಸ್ತಕದಲ್ಲಿ ಈ ವಿಷಯಗಳನ್ನು ಸೇರಿಸಲು ತೀರ್ಮಾನಿಸಲಾಗಿದೆ. 150 ಐಟಿಐಗಳನ್ನು ಉನ್ನತೀಕರಿಸಲಾಗಿದೆ. ಡಿಪ್ಲೋಮಾ ಕಾಲೇಜುಗಳನ್ನು ಉನ್ನತೀಕರಿಸಲು ಯೋಜಿಸಲಾಗಿದೆ. ಶಾಲೆ ಕಾಲೇಜುಗಳಲ್ಲಿ ವೈಜ್ಞಾನಿಕ ಚಿಂತನೆ ಸಂಶೋಧನೆ ಹಾಗೂ ನವೋದ್ಯಮಕ್ಕೆ ಭದ್ರ ಬುನಾದಿ ಹಾಕುವ ಮಹಾತ್ವಾಕಾಂಕ್ಷೆಯ ಯೋಜನೆಯನ್ನು ಸರ್ಕಾರ ತರಲಿದೆ ಎಂದು ತಿಳಿಸಿದರು.

ಬೆಂಗಳೂರು ನಗರದಲ್ಲಿ 180ಕ್ಕೂ ಹೆಚ್ಚು ವಿವಿಧ ಕ್ಷೇತ್ರಗಳಲ್ಲಿ ಸಂಶೋಧನಾ ಕೇಂದ್ರಗಳಿವೆ. ಕೃಷಿ, ತೋಟಗಾರಿಕೆ, ರೇಷ್ಮೆ ಉದ್ಯಮ, ಹೆಚ್ಚು ಉದ್ಯೋಗ ಸೃಜಿಸುವಂತಹ ಕ್ಷೇತ್ರಗಳಲ್ಲಿ ಸ್ಟಾರ್ಟ ಅಪ್‌ಗಳು ಬರಬೇಕೆನ್ನುವ ಚಿಂತನೆ ಸರ್ಕಾರ ಹೊಂದಿದೆ. ಸಾಮಾಜಿಕ ಜವಾಬ್ದಾರಿಯಿಂದ ಶಿಕ್ಷಣ, ಆರೋಗ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕ್ಷೇತ್ರಗಳಲ್ಲಿ ಸ್ಟಾರ್ಟ್ ಅಪ್‌ಗಳು ಹೆಚ್ಚು ಬರಬೇಕೆನ್ನುವ ಆಶಯ ವ್ಯಕ್ತಪಡಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:17.01.2022.

26. ರುಬೆಲ್ಲಾ ಅಡ್ಡ ಪರಿಣಾಮ ಶಂಕೆ, 3 ಕಂದಮ್ಮಗಳ ನಿಗೂಢ ಸಾವು

ಮೈಲಿಬೇನೆ ನಿಯಂತ್ರಣಕ್ಕಾಗಿ ರುಬೆಲ್ಲಾ ಚುಚ್ಚು ಮದ್ದು ನೀಡಲಾಗಿದ್ದ ಮೂವರು ಮಕ್ಕಳು ಅಸ್ವಸ್ಥಗೊಂಡು ಇಲ್ಲಿಯ ಜಿಲ್ಲಾಸ್ಪತ್ರೆಯಲ್ಲಿ ಮೃತಪಟ್ಟ ಘಟನೆ ನಡೆದಿದೆ. ರಾಮದುರ್ಗ ತಾಲ್ಲೂಕಿನ ಬೋಚಬಾಳ ಗ್ರಾಮದ ಪವಿತ್ರಾ ಹುಲಗೂರ (13 ತಿಂಗಳು), ಮಧು ಉಮೇಶ ಕುರಗುಂದಿ (14

ತಿಂಗಳು) ಹಾಗೂ ರಾಮದುರ್ಗ ತಾಲೂಕಿನ ಮಲ್ಲಾಪುರ ಗ್ರಾಮದ ಚೇತನ (15 ತಿಂಗಳು)ಮೃತ ಕಂದಮ್ಮಗಳು ಸಾಲಹಳ್ಳಿ ಪ್ರಾಥಮಿಕ ಆರೋಗ್ಯ ಕೆಂದ್ರದ ಸಿಬ್ಬಂದಿ ಒಟ್ಟು 17 ಮಕ್ಕಳಿಗೆ ಜನವರಿ 13 ರಂದು ಮೈಲಿಬೇನೆ ನಿಯಂತ್ರಣದ ರುಬೆಲ್ಲ ಚುಚ್ಚುಮದ್ದು ನೀಡಿದ್ದರು. ಆ ಬಳಿಕ ನಾಲ್ಕು ಮಕ್ಕಳು ಅಸ್ವಸ್ಥಗೊಂಡಿದ್ದವು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಂದು ಮಗು ಮೃತ ಪಟ್ಟಿತು. ಮೂವರು ಮಕ್ಕಳನ್ನು ಜಿಲ್ಲಾಸ್ಪತ್ರೆಗೆ ರವಾನಿಸಲಾಗಿತ್ತು. ಭಾನುವಾರ 2 ಮಕ್ಕಳು ಮೃತಪಟ್ಟಿದ್ದು, ಇನ್ನೊಂದು ಮಗು ಸಾವು ಬದುಕಿನ ಮಧ್ಯೆ ಹೋರಾಡುತ್ತಿದೆ.

ಎರಡು ಗಂಟೆಯಲ್ಲೇ ರಿಯಾಕ್ಷನ್: ರುಬೆಲ್ಲಾ ಲಸಿಕೆ ಪಡೆದ 2 ಗಂಟೆಯಲ್ಲೇ ಅಡ್ಡ ಪರಿಣಾಮವಾಗಿದೆ ಎನ್ನಲಾಗಿದೆ. ಲಸಿಕೆ, ರಕ್ತದ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಮಕ್ಕಳ ಮರಣಕ್ಕೆ ಕಾರಣ ತಿಳಿಯಲಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಎಸ್.ವಿ.ಮುನ್ಯಾಳ ಪ್ರತಿಕ್ರಿಯೆ ನೀಡಿದ್ದಾರೆ.

ವರದಿ ಕೇಳಿದ ಸಚಿವ ಸುಧಾಕರ್: ಮೂರು ಮಕ್ಕಳ ನಿಗೂಢವಾಗಿ ಮೃತಪಟ್ಟ ಘಟನೆಗೆ ಸಂಬಂಧ ಪಟ್ಟಂತೆ ಸಂಪೂರ್ಣ ವರದಿ ನೀಡುವಂತೆ ಬೆಳಗಾವಿ ಡಿಎಚ್ಒಗೆ ಆರೋಗ್ಯ ಸಚಿವ ಸುಧಾಕರ್ ಸೂಚನೆ ನೀಡಿದ್ದಾರೆ. ಡಿಎಚ್ಒಗೆ ಕರೆ ಮಾಡಿದ್ದ ಸಚಿವರು, ಲಸಿಕೆಯಿಂದ ಮಕ್ಕಳು ಮೃತಪಟ್ಟಿವೆಯೇ? ಅಥವಾ ಇಲಾಖೆ ಸಿಬ್ಬಂದಿಯ ಬೇಜವಾಬ್ದಾರಿ ಇದೆಯೇ ಎಂಬ ಬಗ್ಗೆ ವಿಚಾರಿಸಿದ್ದಾರೆ. ಜೊತೆಗೆ ವರದಿ ನೀಡುವಂತೆ ಸೂಚನೆ ನೀಡಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ:17.01.2022.

27. ಆಸ್ತಿ ತೆರಿಗೆ ಸಂಗ್ರಹ ಸೋರಿಕೆ

ಆಸ್ತಿ ತೆರಿಗೆ ಸಂಗ್ರಹಕ್ಕೆ ರಾಜ್ಯದಲ್ಲಿ ನಿರ್ದಿಷ್ಟ ಮಾನದಂಡವಿಲ್ಲದೆ ಪ್ರತಿ ವರ್ಷ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂ. ನಷ್ಟ ಉಂಟಾಗುತ್ತಿದೆ. ತೆರಿಗೆ ವಸೂಲಿಗೆ ಸಮರ್ಪಕ ಕೋಷ್ಟಕ ಇಲ್ಲದಿರುವುದರಿಂದ ನಗರ, ಪಟ್ಟಣ ಪಂಚಾಯತ್, ಪುರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಭಾರಿ ಭ್ರಷ್ಟಾಚಾರ ತಾಂಡವವಾಡುತ್ತಿದೆ.

ಸಾವಿರಾರು ಕೋಟಿ ರೂ. ತೆರಿಗೆ ಸಂಗ್ರಹವಾಗುತ್ತಿದ್ದರೂ ಹತ್ತಾರು ಕೋಟಿಗಳಷ್ಟು ಮಾತ್ರ ಸರ್ಕಾರಕ್ಕೆ ಲೆಕ್ಕ ತೋರಿಸಲಾಗುತ್ತಿದೆ. ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಂದ ವಸೂಲಿ ಮಾಡಿದ ತೆರಿಗೆಯನ್ನು ಸ್ಥಳೀಯ ಸಂಸ್ಥೆಗಳಲ್ಲಿರುವ ಹೆಗ್ಗಣಗಳು ನುಂಗಿ ಹಾಕುತ್ತಿವೆ. ಅಭಿವೃದ್ಧಿಗೆ ಮುನ್ನುಡಿ ಬರೆಯಬೇಕಿದ್ದ 'ಆಸ್ತಿ ತೆರಿಗೆ ಸಂಗ್ರಹ' ಎಂಬ ಮಾಯಾಜಾಲದಲ್ಲಿ ಸ್ಥಳೀಯ ಜನಪ್ರತಿನಿಧಿಗಳು/ಅಧಿಕಾರಿಗಳು ಉಂಡಿದೆಷ್ಟೋ ಜೇಬಿಗೆ ಇಳಿಸಿದ್ದೆಷ್ಟೊ ಎಂಬುದೇ ಲೆಕ್ಕಕ್ಕೆ ಸಿಗುತ್ತಿಲ್ಲ, ಬೆಟ್ಟದಷ್ಟು ಸಂಗ್ರಹವಾಗಬೇಕಿದ್ದ ತೆರಿಗೆ ಪ್ರಮಾಣ ಸಾಸಿವೆಯಷ್ಟೂ ಬೊಕ್ಕಸಕ್ಕೆ ಬರುತ್ತಿಲ್ಲ ಎಂಬುದು ಇಲಾಖೆಗಳ ಆರೋಪ. ಪೌರಾಡಳಿತ ಮತ್ತು ಕೈಗಾರಿಕಾ ಇಲಾಖೆ ಅಧಿಕಾರಿಗಳೇ ಈ ಅಕ್ರಮಗಳ ಬಗ್ಗೆ ಸಚಿವಾಲಯದಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಗ್ರಹಿಸುತ್ತಿರುವ ಆಸ್ತಿ ತೆರಿಗೆಯನ್ನು ಸ್ಥಳೀಯ ಅಭಿವೃದ್ಧಿಗಾಗಿಯೇ ಬಳಸಿಕೊಳ್ಳಬೇಕು. ಹಾಗಾಗಿ, ಸ್ಥಳೀಯ ಸಂಸ್ಥೆಗಳಾದ ನಗರ ಮತ್ತು ಮಹಾನಗರ ಪಾಲಿಕೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಿಂದ ಪ್ರತಿ ಆರ್ಥಿಕ ವರ್ಷದಲ್ಲಿ ಆಸ್ತಿ ಹಕ್ಕುದಾರರಿಂದ ಆಸ್ತಿ ತೆರಿಗೆ ವಸೂಲಿ ಮಾಡುತ್ತವೆ. ಈ ಹಣವನ್ನು ಸ್ಥಳೀಯ ಅಭಿವೃದ್ಧಿಗೆ ಬಳಸಿ ಕೊಳ್ಳಲು ಅಲ್ಲಿನ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಯೋಜನೆ ರೂಪಿಸಬೇಕು. ಆದರೆ, ರಾಜ್ಯದ ನಾನಾ ಕಡೆ ವಸೂಲಿಯಾದ ತೆರಿಗೆ ಕುರಿತ ಮಾಹಿತಿಯನ್ನು ಸಂಸ್ಥೆಗಳು ತಮ್ಮ ಮೂಲ ನೋಂದಣಿಯಲ್ಲಿ (ರಿಜಿಸ್ಟರ್) ದಾಖಲಿಸುತ್ತಿಲ್ಲ. ಗ್ರಾಹಕರಿಗೆ ಬೋಗಸ್ ಬಿಲ್‌ಗಳನ್ನು ನೀಡಿ ವಂಚಿಸುತ್ತಿವೆ. ಹೀಗೆ, ಸಂಸ್ಥೆಗಳ ಆರ್ಥಿಕ ಬಲವರ್ಧನೆಗೆ

ಪೂರಕವಾಗಬೇಕಿದ್ದ 'ಆಸ್ತಿ ತೆರಿಗೆ'ಯು ಅಧಿಕಾರಿಗಳ ಬಲವರ್ಧನೆಗೆ ದುರುಪಯೋಗವಾಗುತ್ತಿದೆ ಎಂಬ ಆರೋಪ ಕೇಳಿ ಬರುತ್ತಿದೆ.

ಸ್ಥಳೀಯ ಸಂಸ್ಥೆಗಳು ಸ್ವತಂತ್ರವೇ: ಸ್ವತ್ತಿನ ಮೌಲ್ಯ ನಿರ್ಧಾರವು ಸ್ಥಳೀಯ ಸಂಸ್ಥೆಗಳ ಅಧಿಕಾರವಲ್ಲ ಮೌಲ್ಯ ನಿರ್ಧಾರಕ್ಕೆ ಸ್ವಾತಂತ್ರ್ಯ ಕೂಡ ಈ ಸಂಸ್ಥೆಗಳಿಗಿಲ್ಲ. ಆದರೂ ಈ ಸಂಸ್ಥೆಗಳೇ ಸ್ವತ್ತಿನ ಮೌಲ್ಯವನ್ನು ನಿರ್ಧರಿಸಿ ತೆರಿಗೆ ವಿಧಿಸುತ್ತಿವೆ. ತಜ್ಞರನ್ನೊಳಗೊಂಡ ರಾಜ್ಯ ಮೌಲ್ಯಮಾಪನ ಸಮಿತಿಯು ಕರ್ನಾಟಕ ಸ್ಟಾಂಪುಗಳ ಅಧಿನಿಯಮ 45(ಬಿ) ಅಡಿಯಲ್ಲಿ ಮೌಲ್ಯ ನಿರ್ಧರಿಸುತ್ತದೆ. ಪೌರಾಡಳಿತ ಇಲಾಖೆ ತೆರಿಗೆ ದರ ನಿಗದಿ ಪಡಿಸುತ್ತದೆ. ಸ್ಥಳೀಯ ಸಂಸ್ಥೆಗಳು ತೆರಿಗೆ ವಸೂಲಿ ಮಾಡುವ ಅಧಿಕಾರವನ್ನು ಮಾತ್ರ ಹೊಂದಿರುತ್ತವೆ. ಸಮಿತಿ ಸೂಚಿಸಿದ ಮೌಲ್ಯವನ್ನು ಸ್ಥಳೀಯ ಉಪ ನೋಂದಣಿ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳು ಅಳವಡಿಸಿಕೊಳ್ಳಬೇಕು.

ನಮೂನೆ –2 ಮಹತ್ವವೇನು:

- ಆಸ್ತಿ ತೆರಿಗೆ ಪಾವತಿ ಸಕ್ರಮವೆಂದು ತಿಳಿಸುವುದು.
- ತೆರಿಗೆ ಬಾಕಿ ಇಲ್ಲ ಎಂದು ತಿಳಿಯುವುದು.
- ಬ್ಯಾಂಕ್‌ಗಳಲ್ಲಿ ಆಸ್ತಿ ಮೇಲಿನ ಸಾಲ ಪಡೆಯಲು 'ನಮೂನೆ–2' ಕಡ್ಡಾಯ.
- ಆಸ್ತಿ ವರ್ಗಾವಣೆ, ನೋಂದಣಿ ಮತ್ತು ಅಡಮಾನಕ್ಕೆ ಅಗತ್ಯವಾದ ದಾಖಲೆ.

ಗ್ರಾಹಕರು ಹೇಳುವುದೇನು:

- ನಿಯಮಾನುಸಾರ ಪ್ರತಿ ಆಸ್ತಿಗೂ ಗುರುತಿನ ಸಂಖ್ಯೆ(ಪ್ರಾಪರ್ಟಿ ಐಡಿ) ನೀಡುತ್ತಿಲ್ಲ.
- ಗುರುತಿನ ಸಂಖ್ಯೆ ಮೂಲಕವೇ ಆಸ್ತಿ ಪಾವತಿಸಿಕೊಳ್ಳಬೇಕು ಮತ್ತು ನೋಂದಣಿ ಪುಸ್ತಕದಲ್ಲಿ ತೆರಿಗೆ ಪಾವತಿ ದಾಖಲಿಸಬೇಕು.
- ಆಸ್ತಿ ತೆರಿಗೆ ಪಾವತಿಗೆ ಆನ್‌ಲೈನ್ ವೇದಿಕೆ ಕಲ್ಪಿಸುವುದು. ಪಾವತಿ ನಂತರ 'ನಮೂನೆ–2' ಡಿಜಿಟಲ್ ಚಲನ್ ನೀಡಬೇಕು.

ಆನ್‌ಲೈನ್ ಪಾವತಿ ಏಕಿಲ್ಲ: ಜಿಎಸ್‌ಟಿ ಮತ್ತು ಇತರೆ ತೆರಿಗೆ ಪಾವತಿಸುವಂತೆ ಆಸ್ತಿ ತೆರಿಗೆ ಪಾವತಿಗೆ ತಂತ್ರಾಂಶ ಏಕಿಲ್ಲ ಎಂಬ ಆರೋಪ ಕೇಳಿ ಬಂದಿದೆ. ಟ್ಯಾಕ್ಸ್ ಕ್ಯಾಲ್ಕುಲೇಟರ್ ಎಂಬ ತಂತ್ರಾಂಶಗಳನ್ನು ಸ್ಥಳೀಯ ಸಂಸ್ಥೆಗಳು ಬಳಸುತ್ತಿದ್ದರೂ ಗ್ರಾಹಕರು ಖುದ್ದಾಗಿ ತೆರಳಿ ಪಾವತಿಸಬೇಕು. ಅಲ್ಲದೆ, ನಮೂನೆ–2 ಪಡೆಯಲು ಹರಸಾಹಸ ಪಡಬೇಕು. ವಿದ್ಯುತ್, ನೀರು, ಜಿಎಸ್‌ಟಿ ಪಾವತಿಗೆ ಆನ್‌ಲೈನ್ ವೇದಿಕೆ ಮುಕ್ತವಾಗಿರಿಸಿದಂತೆ ಆಸ್ತಿ ತೆರಿಗೆ ಪಾವತಿಯನ್ನೂ ಮುಕ್ತವಾಗಿರಿಸಲು ತಜ್ಞರು ಆಗ್ರಹಿಸಿದ್ದಾರೆ. ಆದರೆ, ಕೆಲ ಹಿತಾಸಕ್ತಿಗಳು ಈ ವ್ಯವಸ್ಥೆ ಜಾರಿಗೆ ಅಡ್ಡಗಾಲು ಹಾಕುತ್ತಿವೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:17.01.2022.

28. ಗತಿಶಕ್ತಿ ಕಾರ್ಯಕ್ರಮದಿಂದ ಅಭಿವೃದ್ಧಿಯ ನೂತನ ಪರ್ವ

ಗತಿಶಕ್ತಿ ಕಾರ್ಯಕ್ರಮದ ಮೂಲಕ ದೇಶದ ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ಹೊಸ ಶಕೆ ಆರಂಭವಾಗಲಿದೆ ಎಂದು ಮುಖ್ಯಮಂತ್ರಿಯವರು ಅಭಿಪ್ರಾಯಪಟ್ಟಿದ್ದಾರೆ.

ಪ್ರಧಾನ ಮಂತ್ರಿ ಗತಿಶಕ್ತಿ ಯೋಜನೆಯ ದಕ್ಷಿಣ ವಲಯ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು ಗತಿ ಶಕ್ತಿ ಯೋಜನೆ ರಾಷ್ಟ್ರ ನಿರ್ಮಾಣದ ದೃಷ್ಟಿಯಿಂದ ರೂಪಿತವಾದ

ಕಾರ್ಯಕ್ರಮ. ಸಮಸ್ಯೆಗಳನ್ನು ಬಗೆಹರಿಸಲು ಒಟ್ಟಾಗಿ ಕೆಲಸ ಮಾಡುವ, ಒಂದೇ ಗುರಿಯತ್ತ ಸಾಗಲು, ದೇಶ ಕಟ್ಟುವ ಕಾಯಕಕ್ಕೆ ಅನುಕುಲವಾಗುವ ಸಂಪನ್ಮೂಲಗಳನ್ನು ಕ್ರೂಢಿಕರಿಸಲು ಇರುವ ಸಾಧನ. ಈ ಬಹು ಉದ್ದೇಶಗಳನ್ನು ಹೊಂದಿರುವ ಗತಿ ಶಕ್ತಿ ಯೋಜನೆ ಪ್ರಧಾನಿಯವರ ಕನಸಿನ ಕೂಸು. ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿಯಾಗಿ ಕೆಲಸ ಮಾಡಿರುವ ಅವರ ಅನುಭವ, ಯೋಜನೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಸಾಧಿಸಲು ಸಹಕಾರಿಯಾಗಿದೆ ಎಂದರು.

ರಸ್ತೆ ಸಾರಿಗೆಯಲ್ಲಿ ಗತಿ ಮತ್ತು ಶಕ್ತಿ ಎರಡನ್ನೂ ಸಾಧಿಸಿರುವ ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ, ರಾಷ್ಟ್ರೀಯ ಹೆದ್ದಾರಿಗಳನ್ನು ಕಳೆದ 7 ವರ್ಷಗಳಲ್ಲಿ ಹತ್ತು ಪಟ್ಟು ಹೆಚ್ಚಿಸಿದ್ದಾರೆ. ಅವರು ರಾಷ್ಟ್ರೀಯ ಹೆದ್ದಾರಿ ಕೇವಲ ರಸ್ತೆ ಸಾರಿಗೆ ಮತ್ತು ಲಾಜಿಸ್ಟಿಕ್‌ಗಳಿಗೆ ಮಾತ್ರ ಸೀಮಿತವಾಗಿರಿಸದೆ, ರಾಷ್ಟ್ರೀಯ ಅಭಿವೃದ್ಧಿಯನ್ನು ಸಾಧ್ಯವಾಗಿಸಬಲ್ಲದು ಎಂಬುದನ್ನು ತೋರಿಸಿದ್ದಾರೆ ಎಂದು ತಿಳಿಸಿದರು.

ಮೂಲಸೌಕರ್ಯ ಇಲಾಖೆ ಸ್ಥಾಪಿಸಿದ್ದು ಕರ್ನಾಟಕ: ಮೂಲ ಸೌಕರ್ಯ ಇಲಾಖೆಯನ್ನು ಸ್ಥಾಪಿಸಿದ ಮೊದಲ ರಾಜ್ಯ ಕರ್ನಾಟಕ. ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ಅಂಶಗಳೂ ರಾಜ್ಯದಲ್ಲಿದ್ದು, ರಸ್ತೆ, ರೈಲ್ವೆ ಬಂದರುಗಳನ್ನು ಅಭಿವೃದ್ಧಿಪಡಿಸಲಾಗಿದೆ. 5 ವಿಮಾನ ನಿಲ್ದಾಣಗಳು, ಒಳನಾಡು ಜಲಸಾರಿಗೆ, ಕೆ–ರೈಡ್ ಮುಂತಾದವುಗಳನ್ನು ಹೊಂದಿದೆ. ರೈಲು ಉತ್ಪಾದನೆಯಲ್ಲಿ 50–50 ಪಾಲುದಾರಿಕೆಯನ್ನು ಹೊಂದಿದ ಮೊದಲ ರಾಜ್ಯ ನಮ್ಮದು ಎಂದರು.

ರೈಲ್ವೆ ಯೋಜನೆಗಳಿಗೆ ಭೂ ಸ್ವಾಧೀನ ಹಾಗೂ ಬಂಡವಾಳ ಮೂಲಕ ರಾಜ್ಯ ಸರ್ಕಾರ ಸಹಕಾರ ನೀಡುತ್ತಿದ್ದು, ಈ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸಬೇಕಿದೆ. ಬೆಂಗಳೂರು–ಮೈಸೂರು–ಹೈದರಾಬಾದ್‌ಗೆ ಹೈಸ್ಪೀಡ್ ರೈಲು ಪ್ರಮುಖ ಯೋಜನೆಯಾಗಿದೆ. 453ಕಿ.ಮೀ. ಉದ್ದದ ಈ ಯೋಜನೆಯನ್ನು ಮೇಲ್ದರ್ಜೆಗೇರಿಸುವುದರಿಂದ ಎರಡೂ ರಾಜ್ಯಗಳ ನಡುವಿನ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಆಧಾರ: ವಿಶ್ವವಾಣಿ, ದಿನಾಂಕ:18.01.2022.

29. ಶಾಲೆ ಕಾಲೇಜುಗಳಲ್ಲಿ ಬೋಸ್ ಜಯಂತಿ

ಅಪ್ರತಿಮ ದೇಶ ಭಕ್ತ, ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ ನೇತಾಜಿ ಸುಭಾಷ್ ಚಂದ್ರಬೋಸ್ ಅವರ ಜೀವನ ಸಾಧನೆ ಸ್ಮರಣೀಯ ಹಾಗೂ ಯುವ ಜನರಿಗೆ ಪ್ರೇರಣೆ. ಹೀಗಾಗಿ ಸುಭಾಷ್ ಚಂದ್ರಬೋಸ್ ಅವರ 125ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ನೇತಾಜಿ ಸುಭಾಷ್‌ಚಂದ್ರ ಬೋಸ್ ಜಯಂತಿ (ಜನವರಿ 23)ರ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆಗಳ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ವರ್ಚುವಲ್ ಮೂಲಕ ನಡೆಸಿದ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

ಬೆಂಗಳೂರಿನ ಜಕ್ಕೂರಿನ ವೈಮಾನಿಕ ತರಬೇತಿ ಶಾಲೆಯ ಆವರಣದಲ್ಲಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮ ದಿನಾಚರಣೆಯನ್ನು ಮಾಡಲು ನಿರ್ಧರಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ನೂರು ಜನ ಎನ್‌ಸಿಸಿ ಕೆಡೆಟ್ ಮತ್ತು ಕಮಾಂಡರ್‌ಗಳು ಭಾಗಿಯಾಗಲಿದ್ದಾರೆ. ಕೇಂದ್ರ ಸಚಿವ ರಾಜು ಚಂದ್ರಶೇಖರ್ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲು ನಿರ್ಧರಿಸಲಾಗಿದೆ. ಇದು ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮ ದಿನ. ಹೀಗಾಗಿ ರಾಜ್ಯದ ಎಲ್ಲಾ ಶಾಲೆ ಮತ್ತು ಕಾಲೇಜುಗಳಲ್ಲಿ ವರ್ಷವಿಡಿ ಸುಭಾಷ್‌ಚಂದ್ರ ಬೋಸ್ ಅವರ ಕುರಿತಾದ ಕಾರ್ಯಕ್ರಮಗಳನ್ನು ಆಚರಣೆ ಮಾಡಲು

ತೀರ್ಮಾನಿಸಲಾಗಿದೆ. ಇದಕ್ಕಾಗಿ ವಿಶೇಷವಾದ ಹಾಗೂ ಅರ್ಥಪೂರ್ಣ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮರ್, ಸಿಎಂ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ, ಕರ್ನಾಟಕ ಗೋವಾ ಎನ್‌ಸಿಸಿ ನಿರ್ದೇಶನಾಲಯದ ಮುಖ್ಯಸ್ಥ ಏರ್ ಕಮಾಂಡರ್ ಬಿಎಸ್ ಕನ್ವರ್ ವರ್ಚುವಲ್ ಸಭೆಯಲ್ಲಿ ಭಾಗವಹಿಸಿದ್ದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:19.01.2022.

30. ಜಲ ಯೋಜನೆಗೆ ಸಿಎಂ ಚುರುಕು

ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಮೇಕೆದಾಟು ಬಳಿಕ ಉತ್ತರ ಕರ್ನಾಟಕದ ಮಹದಾಯಿ ಯೋಜನೆ ಜಾರಿಗೆ ಒತ್ತಾಯಿಸಿ ಪಾದಯಾತ್ರೆ ನಡೆಸುವ ಚಿಂತನೆ ನಡೆಸಿದ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಅಂತರರಾಜ್ಯ ಜಲ ವಿವಾದ ಪ್ರಕರಣಗಳ ಬಗ್ಗೆ ಗಂಭೀರವಾಗಿದ್ದಾರೆ.

ಅಂತರ್‌ರಾಜ್ಯ ಜಲ ವಿವಾದಗಳ ಕುರಿತಂತೆ ಚರ್ಚಿಸುವ ಸಂಬಂಧ ಮುಖ್ಯಮಂತ್ರಿಗಳು ಉನ್ನತ ಮಟ್ಟದ ಸಭೆ ಕರೆದಿದ್ದಾರೆ. ಅಂದು ಬೆಳಗ್ಗೆ 10.30ಕ್ಕೆ ವರ್ಚುವಲ್ ಸಭೆ ನಡೆಯಲಿದ್ದು, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಸೇರಿದಂತೆ ಸರ್ಕಾರದ ಅಡ್ವೋಕೇಟ್ ಜನರಲ್, ಸುಪ್ರೀಂಕೋರ್ಟ್‌ನಲ್ಲಿ ರಾಜ್ಯದ ಅಂತರರಾಜ್ಯದ ಜಲ ವಿವಾದಗಳ ಪ್ರಕರಣಗಳನ್ನು ನಿಭಾಯಿಸುವ ಹಲವು ಹಿರಿಯ ನ್ಯಾಯವಾದಿಗಳು ಪಾಲ್ಗೊಳ್ಳಲಿದ್ದಾರೆ.

ಇತ್ತೀಚೆಗಷ್ಟೇ ಕಾಂಗ್ರೆಸ್ ಪಕ್ಷ ಮೇಕೆದಾಟು ಜಲಯೋಜನೆ ಜಾರಿಗೆ ಆಗ್ರಹಿಸಿ ಪಾದಯಾತ್ರೆ ಹಮ್ಮಿಕೊಂಡಿತ್ತು. ಈ ವೇಳೆ ರಾಜ್ಯದ ಜಲ ಯೋಜನೆಗಳ ಬಗ್ಗೆ ಸಾಕಷ್ಟು ವಾದ–ಪ್ರತಿವಾದ ಕೇಳಿಬಂದಿದ್ದವು. ಕೋವಿಡ್ ಹೆಚ್ಚಳ ಹಿನ್ನೆಲೆಯಲ್ಲಿ ಮೇಕೆದಾಟು ಯೋಜನೆಯನ್ನು ಅರ್ಧಕ್ಕೆ ಮೊಟಕುಗೊಳಿಸಿರುವ ಕಾಂಗ್ರೆಸ್ ಪಕ್ಷ ಕೋವಿಡ್ ಸೋಂಕು ಕಡಿಮೆಯಾದ ಬಳಿಕ ಮತ್ತೆ ಮುಂದುವರೆಸಲಿದೆ.

ಜೊತೆಗೆ ಉತ್ತರ ಕರ್ನಾಟಕ ಭಾಗದ ಅದರಲ್ಲು ಮುಖ್ಯಮಂತ್ರಿ ಅವರ ಅಖಂಡ ಧಾರವಾಡ ಭಾಗದಲ್ಲಿ ಪ್ರಮುಖವಾಗಿರುವ ಮಹದಾಯಿ ಯೋಜನೆ ಕೈಗೆತ್ತಿಕೊಂಡು ಪಾದಯಾತ್ರೆ ನಡೆಸಲು ಕಾಂಗ್ರೆಸ್ ರಣತಂತ್ರ ರೂಪಿಸುತ್ತಿದೆ. ಎರಡೂ ಜಲ ವಿವಾದಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿವೆ.

ಹೀಗಾಗಿ ಈ ಮೇಕೆದಾಟು, ಮಹದಾಯಿ ಸೇರಿದಂತೆ ನ್ಯಾಯಾಲಯದಲ್ಲಿರುವ ರಾಜ್ಯದ ಎಲ್ಲ ಜಲ ವಿವಾದಗಳನ್ನು ಅದಷ್ಟು ಬೇಗ ಇತ್ಯರ್ಥಗೊಳಿಸಿ ಅವುಗಳ ಜಾರಿಗೆ ಕ್ರಮ ಕೈಗೊಳ್ಳಬೇಕು ಎಂಬ ಉದ್ದೇಶವನ್ನು ಹಿಂದೆ ಜಲಸಂಪನ್ಮೂಲ ಖಾತೆ ಹೊತ್ತ ಅನುಭವ ಹೊಂದಿರುವ ಮುಖ್ಯಮಂತ್ರಿ ಬೊಮ್ಮಾಯಿ ಅವರು ಹೊಂದಿದ್ದಾರೆ ಎನ್ನಲಾಗಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ:20.01.2022.

31. ಕಟ್ಟಡ ಕಾರ್ಮಿಕರ ಮಕ್ಕಳಿಗೆ ಆನ್‌ಲೈನ್‌ನಲ್ಲಿ ಸ್ಕಾಲರ್ ಶಿಪ್

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಆನ್‌ಲೈನ್ ಮೂಲಕ ವಿದ್ಯಾರ್ಥಿ ವೇತನ ವಿತರಣೆಗೆ ಮುಖ್ಯಮಂತ್ರಿಯವರು ಚಾಲನೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ರಾಜ್ಯದ ಉದ್ಯೋಗ ನೀತಿಯಿಂದ ರಾಜ್ಯದ ಯುವಕರ ಬದುಕು ಹಸನಾಗಲಿದೆ. ಕೆಳಸ್ತರದ ದುಡಿಯುವ ವರ್ಗಕ್ಕೆ ಸಹಾಯಧನ ಬಹಳ ದೊಡ್ಡ ಆಸರೆಯಾಗಿದೆ. ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಈ ಕಾರ್ಯಕ್ರಮದಿಂದ ಮಕ್ಕಳು ಉತ್ತಮ ಶಿಕ್ಷಣ ಪಡೆದು ವಿವಿಧ ಉದ್ಯೋಗಗಳಲ್ಲಿ ತೊಡಗಿಕೊಂಡು ರಾಜ್ಯದ ಆರ್ಥಿಕತೆಯ ಅಭಿವೃದ್ಧಿಗೆ ಕೊಡುಗೆ ನೀಡುವಂತಾಗಬೇಕು ಎಂದು ಹೇಳಿದರು.

ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಮಾತನಾಡಿ, ಪ್ರಸ್ತುತ ಪೋರ್ಟಲ್ ಮೂಲಕ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ 92,061 ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನಕ್ಕೆ 1,45,524 ಅರ್ಜಿಗಳು ಸ್ವೀಕೃತವಾಗಿದೆ. ಸುಮಾರು 39 ಸಾವಿರ ಮೆಟ್ರಿಕ್ ಪೂರ್ವ ಮತ್ತು 50 ಸಾವಿರ ಮೆಟ್ರಿಕ್ ನಂತರ ಸ್ವೀಕೃತ ಅರ್ಜಿಗಳ ದಾಖಲಾತಿಗಳು ಅಧಾರ್ ಮತ್ತು ಬ್ಯಾಂಕ್ ಲಿಂಕ್ ಆಗಿರುವುದು ಸರಿಯಾಗಿದೆ. 89 ಸಾವಿರ ಅರ್ಜಿಗಳಿಗೆ ಮಂಜೂರಾತಿ ನೀಡಿ ನೇರ ನಗದು ವರ್ಗಾವಣೆ(ಡಿಬಿಟಿ) ಮೂಲಕ ಫಲಾನುಭವಿಗಳ ಖಾತೆಗೆ ನೇರವಾಗಿ ಸುಮಾರು ರೂ.1.50 ಕೋಟಿ ಮೊತ್ತವನ್ನು ವರ್ಗಾವಣೆ ಮಾಡುವ ಪ್ರಕ್ರಿಯೆಗೆ ಮುಖ್ಯಮಂತ್ರಿಗಳು ಚಾಲನೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಬಾಕಿ ಉಳಿದಿರುವ ವಿದ್ಯಾರ್ಥಿ ವೇತನ ಅರ್ಜಿಗಳಿಗೆ ಫೆಬ್ರವರಿ ಅಂತ್ಯದೊಳಗೆ ಫಲಾನುಭವಿಗಳ ಆಧಾರ್ ಮತ್ತು ಬ್ಯಾಂಕ್ ಖಾತೆಗೆ ಲಿಂಕ್ ಒದಗಿಸಿ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿಗಳ ಸಾಂಸ್ಥಿಕ ಪರಿಶೀಲನೆ ನಂತರ ಅರ್ಹ ಫಲಾನುಭವಿಗಳ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ಸಹಾಯಧನವನ್ನು ವರ್ಗಾಯಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು. ಶಾಸಕ ಎಸ್.ರಾಮದಾಸ್, ಕಾರ್ಮಿಕ ಆಯುಕ್ತ ಅಕ್ರಂ ಪಾಷಾ, ಕಾರ್ಮಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಜಿ.ಕಲ್ಪನಾ ಇತರರು ಉಪಸ್ಥಿತರಿದ್ದರು.

ಆಧಾರ: ಕನ್ನಡ ಪ್ರಭ, ದಿನಾಂಕ:21.01.2022.

32. ಜಲಯೋಜನೆ : ಫೆಬ್ರವರಿಯಲ್ಲಿ ಸರ್ವಪಕ್ಷ ಸಭೆ ನಡೆಸಿ ರಣತಂತ್ರ

ಕೃಷ್ಣಾ, ಕಾವೇರಿ ಹಾಗೂ ಮಹದಾಯಿ ನದಿಗಳ ವ್ಯಾಪ್ತಿಗೆ ಬರುವ ಅಂತರ್‌ರಾಜ್ಯ ಜಲ ವಿವಾದಗಳ ಬಗ್ಗೆ ಮುಂದಿನ ಹೋರಾಟದ ರೂಪು ರೇಷೆ ಕುರಿತು ನಿರ್ಧರಿಸಲು ಫೆಬ್ರವರಿ ಮೊದಲ ವಾರದಲ್ಲಿ ಸರ್ವಪಕ್ಷಗಳ ಸಭೆ ನಡೆಸಲು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಡೆದ ವರ್ಚುವಲ್ ಸಭೆಯಲ್ಲಿ ನಿರ್ಧರಿಸಲಾಗಿದೆ.

ಇದೇ ವೇಳೆ ಹೊಗೇನಕಲ್ ಬಳಿ ಎರಡನೇ ಹಂತದ ಯೋಜನೆ ಕೈಗೆತ್ತಿಕೊಂಡಿರುವ ತಮಿಳುನಾಡು ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರ, ಕೇಂದ್ರ ಜಲ ಆಯೋಗಕ್ಕೆ ದೂರು ನೀಡಲು ಹಾಗೂ ಸುಪ್ರೀಂಕೋರ್ಟ್ ಮೆಟ್ಟಿಲೇರುವ ಮೂಲಕ ರಾಜಕೀಯ, ಕಾನೂನಾತ್ಮಕ ಎರಡೂ ರೀತಿಯ ಹೋರಾಟಕ್ಕೆ ತೀರ್ಮಾನಿಸಲಾಗಿದೆ.

ನಿರ್ಣಾಯಕ ಘಟ್ಟಗಳಲ್ಲಿರುವ ಅಂತರ್ ರಾಜ್ಯ ಜಲ ವಿವಾದಗಳ ಕುರಿತು ಕಾನೂನು ಸಚಿವರು, ಜಲಸಂಪನ್ಮೂಲ ಸಚಿವರು ಹಾಗೂ ಕಾನೂನು ತಜ್ಞರು, ರಾಜ್ಯ ಸರ್ಕಾರವನ್ನು ಪ್ರತಿನಿಧಿಸುತ್ತಿರುವ ಹಿರಿಯ ವಕೀಲರೊಂದಿಗೆ ಮುಖ್ಯಮಂತ್ರಿಗಳು ಶನಿವಾರ ಮಧ್ಯಾಹ್ನ ಮಹತ್ವದ ಚರ್ಚೆ ನಡೆಸಿದರು.

ಈ ವೇಳೆ ಫೆಬ್ರವರಿ 16 ರಂದು ಮೇಕೆದಾಟು ಯೋಜನೆ ಕುರಿತು ಸುಪ್ರೀಂಕೋರ್ಟ್‌ನಲ್ಲಿರುವ ಪ್ರಕರಣಗಳ ವಿಚಾರಣೆಗೆ ಬರಲಿದ್ದು, ಅದಕ್ಕೂ ಮೊದಲು ಜನವರಿ ಅಂತ್ಯಕ್ಕೆ ಮತ್ತೊಮ್ಮೆ ವರ್ಚುವಲ್

ಸಭೆ ಕರೆದು ವಿಸ್ತೃತವಾಗಿ ಚರ್ಚಿಸುವುದು. ಫೆಬ್ರವರಿ ಮೊದಲ ವಾರದಲ್ಲಿ ಸರ್ವಪಕ್ಷಗಳ ಸಭೆ ಕರೆದು ವಿಪಕ್ಷಗಳ ನಾಯಕರ ಸಲಹೆ ಪಡೆದು ಹೋರಾಟ ರೂಪಿಸಲು ತೀರ್ಮಾನಿಸಲಾಯಿತು.

ಕಾಂಗ್ರೆಸ್ ಪಕ್ಷವು ಮೇಕೆದಾಟು ಪಾದಯಾತ್ರೆಯನ್ನು ರಾಮನಗರದವರೆಗೆ ಕೈಗೊಂಡು ತಾತ್ಕಲಿಕವಾಗಿ ಮೊಟಕುಗೊಳಿಸಿದ್ದು, ಮತ್ತೆ ಪ್ರಾರಂಭಿಸುವ ಚಿಂತನೆಯಲ್ಲಿದೆ. ಈ ಹಂತದಲ್ಲಿ ಮೇಕೆದಾಟು ಯೋಜನೆ, ಮಹದಾಯಿ, ಹೊಗೆನಕಲ್ ಯೋಜನೆಗಳ ಕುರಿತು ಚರ್ಚಿಸಲು ಕಾಂಗ್ರೆಸ್ ಸೇರಿದಂತೆ ಸರ್ವಪಕ್ಷಗಳ ಸಭೆ ಕರೆಯುವ ಮೂಲಕ ರಾಜ್ಯ ಸರ್ಕಾರ ಜಾಣ ನಡೆ ಅನುಸರಿಸಿದೆ.

ಒಟ್ಟಾಗಿ ಕೆಲಸ ಮಾಡಲು ತೀರ್ಮಾನ: ಈ ಬಗ್ಗೆ ಸಭೆ ಬಳಿಕ ಖುದ್ದು ಮಾಹಿತಿ ನೀಡಿದ ಬಸವರಾಜ್ ಬೊಮ್ಮಾಯಿ, ನೆಲ, ಜಲ ವಿಚಾರ ಬಂದಾಗ ಎಲ್ಲಾ ಪಕ್ಷಗಳವರೂ ಹಿಂದಿನಿಂದಲೂ ಒಟ್ಟಾಗಿ ಕೆಲಸ ಮಾಡಿದ್ದೇವೆ. ನಾವು ವಿಪಕ್ಷದಲ್ಲಿದ್ದಾಗಲೂ ಅಂದಿನ ಸರ್ಕಾರಗಳಿಗೆ ಸಹಕಾರ ಕೊಡುತ್ತಾ ಬಂದಿದ್ದೇವೆ. ಇದೀಗ ಕೆಲವು ಅಂತರ್ ರಾಜ್ಯ ಜಲ ವಿವಾದಗಳ ಪ್ರಕರಣಗಳು ಘಟ್ಟದಲ್ಲಿವೆ, ಹೀಗಾಗಿ ವಿರೋಧಪಕ್ಷದ ನಾಯಕರು, ಕಾನೂನು ಪರಿಣಿತರ ಜತೆಗೂಡಿ ಸರ್ವಪಕ್ಷಗಳ ಸಭೆ ಕರೆಯಲು ನಿರ್ಧರಿಸಲಾಗಿದೆ ಎಂದು ಹೇಳಿದರು. ಕೃಷ್ಣಾ ಕಾವೇರಿ, ಮಹದಾಯಿ ಯೋಜನೆಗಳ ಬಗ್ಗೆ ಚರ್ಚೆ ಆಗಿದೆ. ನ್ಯಾಯಾಲಯದ ವಿವಿಧ ಹಂತದಲ್ಲಿರುವ ವಿಚಾರಣೆಗಳ ಬಗ್ಗೆ ಮಾಹಿತಿ ಪಡೆದಿದ್ದೇವೆ. ಜನವರಿ ಅಂತ್ಯಕ್ಕೆ ಮತ್ತೊಂದು ಸುತ್ತು ವಿಡಿಯೋ ಸಂವಾದ ನಡೆಸಿ ನ್ಯಾಯವಾದಿಗಳು, ಹಿರಿಯ ಸಚಿವರೊಂದಿಗೆ ಚರ್ಚಿಸಲಾಗಿದೆ. ಈ ಸಭೆಯಲ್ಲಿ ಚರ್ಚೆಯಾದ ವಿಚಾರಗಳನ್ನು ಮುಂದಿಟ್ಟುಕೊಂಡು ಸರ್ವಪಕ್ಷಗಳ ನಾಯಕರ ಸಭೆ ನಡೆಸಿ ಅಂತಿಮ ತೀರ್ಮಾನ ಮಾಡಲಾಗುವುದು. ಇನ್ನು ಹೊಗೇನಕಲ್ ಎರಡನೇ ಹಂತದ ಯೋಜನೆ ವಿರುದ್ಧ ರಾಜಕೀಯ ಹಾಗೂ ಕಾನೂನಾತ್ಮಕ ಎರಡೂ ರೀತಿಯಲ್ಲಿ ಹೋರಾಟ ಮಾಡಲು ನಿರ್ಧರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಆಧಾರ: ಕನ್ನಡ ಪ್ರಭ, ದಿನಾಂಕ:23.01.2022.

33. ಗ್ರಾಮ ಒನ್ ಕೇಂದ್ರಕ್ಕೆ ಇಂದು ಚಾಲನೆ

ಗ್ರಾಮೀಣ ಭಾಗದ ಜನರು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಿಗೆ ಅಲೆಯುವುದನ್ನು ತಪ್ಪಿಸಲು ಮುಂದಾಗಿರುವ ರಾಜ್ಯ ಸರ್ಕಾರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿದ್ದು, ಪದವೀಧರ ಯುವಜನತೆ ಕೇಂದ್ರ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರ ಸೇವೆಗಳನ್ನು ಪಡೆಯಲು ಗ್ರಾಮೀಣ ಭಾಗದ ಜನರು ತಾಲ್ಲೂಕು ಅಥವಾ ಜಿಲ್ಲಾ ಕೇಂದ್ರಗಳಿಗೆ ಹೋಗಿಬರಬೇಕಾದ ಪರಿಸ್ಥಿತಿಯಿದೆ. ಆ ಹಿನ್ನೆಲೆಯಲ್ಲಿ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಗ್ರಾಮ ಒನ್ ಕೇಂದ್ರ ತೆರಯುತ್ತಿದ್ದು, ನೂರಾರು ಸರ್ಕಾರಿ ಸೇವೆಗಳು ಜನರಿಗೆ ಗ್ರಾಮಗಳಲ್ಲಿಯೇ ಲಭ್ಯವಾಗುವ ಸೇವೆಗಳನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಪ್ರಯಾಣಿಸುವ ಸಮಯ ಮತ್ತು ಹಣ ಖರ್ಚು ಮಾಡುವುದನ್ನು ಈ ಕೇಂದ್ರಗಳು ತಪ್ಪಿಸಲಿದ್ದು, ಸರತಿ ಸಾಲಿನಲ್ಲಿ ಸೇವೆಗಳಿಗಾಗಿ ಕಾಯುವುದನ್ನು ತಪ್ಪಿಸುತ್ತದೆ. ಇನ್ನು ಮಧ್ಯವರ್ತಿಗಳ ಹಾವಳಿ ತಪ್ಪಿಸಿ ಸರ್ಕಾರಿ ಸೇವೆಗಳು ನೇರವಾಗಿ ಜನರಿಗೆ ತಲುಪಿಸುವ ಉದ್ದೇಶವನ್ನು ಕೇಂದ್ರಗಳು ಹೊಂದಿವೆ. ಅದರಲ್ಲಿಯೂ ಪ್ರಮುಖವಾಗಿ ನಾಗರೀಕರ ಅನುಕೂಲಕ್ಕಾಗಿ ಗ್ರಾಮ ಒನ್ ಕೇಂದ್ರಗಳು ಬೆಳಿಗ್ಗೆ 8 ರಿಂದ ರಾತ್ರಿ 8ರವರೆಗೆ ತೆರದಿರುವುದರಿಂದ ಜನರು ಬಿಡುವಿನ ಸಮಯದಲ್ಲಿ ಕೇಂದ್ರಗಳಿಗೆ ಹೋಗಿ ತಮಗೆ ಬೇಕಾದ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಗ್ರಾಮ ಒನ್ ಕೇಂದ್ರಗಳು ಜನರಿಗೆ ನೂರಾರು ಸರ್ಕಾರಿ ಸೇವೆಗಳನ್ನು ಒದಗಿಸುವ ಜೊತೆ ಜೊತೆಗೆ ಸಾವಿರಾರು ಉದ್ಯೋಗಗಳನ್ನು ಸಹ ಸೃಷ್ಟಿಸುತ್ತಿದೆ. ಅದರಂತೆ ಪದವೀಧರ ಯುವಕರು ಗ್ರಾಮಪಂಚಾಯಿತಿ ಮಟ್ಟದಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕೇಂದ್ರ ಹೊಂದಿರಬೇಕಾದ ತಾಂತ್ರಿಕ ಸೌಲಭ್ಯಗಳು: ಫ್ರಾಂಚೈಸ್ ಮೂಲಕ ಸ್ಥಾಪಿಸಲಾಗುವ ಗ್ರಾಮ ಒನ್ ಕೇಂದ್ರವು ಒಂದು ವಿಶೇಷ (ಪ್ರತ್ಯೇಕ) ಪ್ರವೇಶವುಳ್ಳ ವಿಶೇಷ ವಿಭಜನೆ (ಪಾರ್ಟಿಷನ್) ಹೊಂದಿರಬೇಕು. ಒಂದು ಕೌಂಟರ್‌ವುಳ್ಳ ಗ್ರಾಮ ಒನ್ ಕೇಂದ್ರಗಳು ಕನಿಷ್ಠ 100 ಚದರ ಅಡಿಗಳ ಅಳತೆ ಹೊಂದಿರಬೇಕು. ಗ್ರಾಹಕರು ಕುಳಿತುಕೊಳ್ಳಲು ನಾಲ್ಕು ಕುರ್ಚಿಗಳು ಇರಬೇಕು. ವಾಹನ ನಿಲುಗಡೆ ವ್ಯವಸ್ಥೆ, ಕೌಂಟರ್ ಟೇಬಲ್, ಆಪರೇಟರ್ ಕುರ್ಚಿ, ಪ್ರಿಂಟರ್ ಟೇಬಲ್, ಗ್ರಾಹಕರು ಕಾಯುವ ಕುರ್ಚಿ ಇರಬೇಕು. ಇದರೊಂದಿಗೆ ಸಿಸಿಟಿವಿ ಹಾಗೂ ಎಲ್‌ಸಿಡಿ ಟಿವಿ ಹೊಂದಿರಬೇಕು. ಕೇಂದ್ರದಲ್ಲಿ ಡೆಸ್ಕಟಾಪ್/ಲ್ಯಾಪ್ ಟಾಪ್(ಐ3 ಸಂರಚನೆಗಿಂತಲೂ ಹೆಚ್ಚಿನದ್ದು), ವಿವಿಧ ಕಾರ್ಯಕಾರಿ ಪ್ರಿಂಟರ್, ಬಯೋಮೇಟ್ರಿಕ್ ಸ್ಕ್ಯಾನರ್, ವೆಬ್ ಕ್ಯಾಮೆರಾ, ವೈ–ಫೈ ರಿಸೀವರ್ ಹಾಗೂ ಎರಡು ಸಂಸ್ಥೆಗಳ ಅಂತರ್ಜಾಲ ಸೇವೆ ಹೊಂದಿರಬೇಕಾಗುತ್ತದೆ.

ಸಿಗುವ ಸೌಲಭ್ಯ:

- ಸೇವಾ ಸಿಂಧುವಿನಲ್ಲಿ ಬರುವ ಎಲ್ಲ 750 ಸೇವೆಗಳು
- ಸಕಾಲ ಸೇವೆಗಳು
- ಮಾಹಿತಿ ಹಕ್ಕು ಸೇವೆಗಳು
- ಮುಖ್ಯಮಂತ್ರಿಗಳ ಪರಿಹಾರ ನಿಧಿ
- ಸಣ್ಣ ಬ್ಯಾಂಕಿಂಗ್ ಸೇವೆಗಳು

ಅನುಕೂಲಗಳೇನು?

- ಜನರ ಸಮಯ ಹಾಗೂ ಹಣ ಉಳಿಸುತ್ತದೆ.
- ಸರತಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸುತ್ತದೆ.
- ಮಧ್ಯ ವರ್ತಿಗಳ ಹಾವಳಿ ಇರುವುದಿಲ್ಲ.
- ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಸೇವೆ ನೀಡುತ್ತವೆ.

ಕೇಂದ್ರ ಸ್ಥಾಪಿಸಲು ಬೇಕಾದ ಅರ್ಹತೆಗಳು:

- ಪದವಿಯೊಂದಿಗೆ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.
- ಆಸಕ್ತರು ರೂ.1 ರಿಂದ 2 ಲಕ್ಷ ಬಂಡವಾಳ ಹೂಡಿಕೆ ಸಾಮರ್ಥ್ಯ ಹೊಂದಿರಬೇಕು.
- ಪೊಲೀಸ್ ತಪಾಸಣಾ ಪ್ರಮಾಣ ಪತ್ರ ಸಲ್ಲಿಸಬೇಕು.
- ಗ್ರಾಮ ಒನ್ ಕೇಂದ್ರ ಪ್ರಮುಖ ಗ್ರಾಮಪಂಚಾಯಿತಿಯ ಕೇಂದ್ರ ಸ್ಥಾನದಲ್ಲಿರಬೇಕು ಹಾಗೂ ಜನರಿಗೆ ಸುಲಭವಾಗಿ ದೊರೆಯುವಂತಿರಬೇಕು.

ಆಧಾರ: ವಿಜಯ ಕರ್ನಾಟಕ, ದಿನಾಂಕ:26.01.2022.

34. ಬಲಾಢ್ಯ ಭಾರತ ಅನಾವರಣ

ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷಾಚರಣೆ ಹಾಗೂ ಕರೊನಾ ಸಾಂಕ್ರಾಮಿಕತೆಯ ಆತಂಕದ ನಡುವೆ ಬುಧವಾರ ಇಡೀ ದೇಶ 73ನೇ ಗಣರಾಜ್ಯೋತ್ಸವದ ಸರಳ ಸಂಭ್ರಮದಲ್ಲಿ ಮಿಂದೆದ್ದಿತು. ದೆಹಲಿಯ ರಾಷ್ಟ್ರಪತಿ ಭವನದ ಮುಂಭಾಗ ರಾಜಪಥದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ ಧ್ವಜಾರೋಹಣ ನೆರವೇರಿಸುವ ಮೂಲಕ ಪಥಸಂಚಲನಕ್ಕೆ ಚಾಲನೆ ನೀಡಿದರು. ಗಣತಂತ್ರ ದಿನಾಚರಣೆ ಆರಂಭಕ್ಕೆ ಮುನ್ನ ಪ್ರಧಾನಿ ಮೋದಿ ಅವರು ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ತೆರಳಿ ಗೌರವ ಸಲ್ಲಿಸಿದರು. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ನಿಮಿತ್ತ ರಾಜಪಥದ ಬಾನಂಗಳದಲ್ಲಿ ಅದ್ದೂರಿ ಮತ್ತು ಅತಿದೊಡ್ಡ ಮಟ್ಟದ ವೈಮಾನಿಕ ಪ್ರದರ್ಶನ ನಡೆಯಿತು. 75 ಯದ್ಧ ವಿಮಾನಗಳು ಇದರಲ್ಲಿ ಭಾಗಿಯಾಗಿದ್ದವು. ಗಣತಂತ್ರ ದಿನಾಚರಣೆ ಪರೇಡ್‌ನಲ್ಲಿ ಪ್ರದರ್ಶನಗೊಂಡ ವಾಯುಪಡೆಯ ಸ್ತಬ್ಧಚಿತ್ರದಲ್ಲಿ ರಫೇಲ್ ಫೈಟರ್ ಜೆಟ್‌ನ್ ಮೊದಲ ಮಹಿಳಾ ಪೈಲಟ್ ಶಿವಾಂಗಿ ಸಿಂಗ್ ಉಪಸ್ಥಿತರಿದ್ದರು. ಗಣತಂತ್ರ ದಿನಚರಣೆ ಪರೇಡ್‌ನಲ್ಲಿ ವಾಯುಪಡೆಯ ಸ್ತಬ್ಧಚಿತ್ರದಲ್ಲಿ ಭಾಗಿಯಾದ ಎರಡನೇ ಮಹಿಳಾ ಪೈಲಟ್ ಇವರು. ಪರೇಡ್‌ನಲ್ಲಿ ಕರ್ನಾಟಕದಿಂದ ಜಾಗತಿಕ ಮಾನ್ಯತೆಗಳಿಸಿದ ವಸ್ತುಗಳನ್ನು ಸ್ತಬ್ಧ ಚಿತ್ರದಲ್ಲಿ ಪ್ರದರ್ಶಿಸಲಾಯಿತು. ಶಶಿಧರ ಅಡಪ ಕೈಚಳಕದಲ್ಲಿ ಸಿದ್ಧಗೊಂಡಿರುವ ಈ ಸ್ತಬ್ಧ ಚಿತ್ರವನ್ನು 'ಸಾಂಪ್ರದಾಯಿಕ ಕರಕುಶಲ ವಸ್ತುಗಳ ತೊಟ್ಟಿಲು' ಎಂಬ ವಿಷಯದ ಆಧಾರದ ಮೇಲೆ ರೂಪಿಸಲಾಗಿದೆ.

ವಿಶೇಷಗಳು:

- ವಾಯುಪಡೆ ಸ್ತಬ್ಧ ಚಿತ್ರದಲ್ಲಿ ರಫೇಲ್ ಫೈಟರ್ ಜೆಟ್‌ನ ಮೊದಲ ಮಹಿಳಾ ಪೈಲಟ್ ಶಿವಾಂಗಿ ಸಿಂಗ್ ಉಪಸ್ಥಿತರಿದ್ದರು. ಗಣತಂತ್ರ ದಿನಾಚರಣೆ ಪರೇಡ್‌ನಲ್ಲಿ ವಾಯುಪಡೆಯ ಸ್ತಬ್ಧಚಿತ್ರದಲ್ಲಿ ಭಾಗಿಯಾದ 2ನೇ ಮಹಿಳಾ ಪೈಲಟ್ ಇವರು.
- ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಅಮೃತ ಮಹೋತ್ಸವದ ಸಂಭ್ರಮಕ್ಕೆ ಸಾಕ್ಷಿಯಾಗಿ ರಾಜಪಥದ ಮೇಲ್ಭಾಗದಲ್ಲಿ 75ರ ಆಕೃತಿ ರಚಿಸಲಾಗಿತ್ತು.
- ಪರೇಡ್ ಮಾರ್ಗವನ್ನು ಈ ಹಿಂದೆ ಇದ್ದ 8.3 ಕಿ.ಮೀನಿಂದ 3.3 ಕಿಮೀ ಗೆ ಇಳಿಸಲಾಗಿತ್ತು.
- 1965 ಮತ್ತು 1971ರ ಭಾರತ್–ಪಾಕ್ ಯುದ್ಧದಲ್ಲಿ ಬಳಸಿದ ಶಸ್ತ್ರಾಸ್ತ್ರಗಳು ಉಪಕರಣ, ಹಳೆಯ ಶಸ್ತ್ರಸಜ್ಜಿತ ವಾಹನ, ಫಿರಂಗಿಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.
- ಕರೊನಾ ಕಾರಣದಿಂದ ಎರಡೂ ಡೋಸ್ ಲಸಿಕೆ ಪಡೆದವರಿಗಷ್ಟೇ ಪರೇಡ್‌ನಲ್ಲಿ ಅವಕಾಶ ಕಲ್ಪಿಸಲಾಗಿತ್ತು. 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳ ಪೈಕಿ ಮೊದಲ ಡೋಸ್ ಲಸಿಕೆ ಪಡೆದಿದ್ದವರಿಗೆ ಅವಕಾಶ ನೀಡಲಾಗಿತ್ತು.

ಆಧಾರ: ವಿಜಯ ವಾಣಿ, ದಿನಾಂಕ:27.01.2022.

35. 200 ಕೋಟಿ ಹೆಚ್ಚು ತೆರಿಗೆ ಸಂಗ್ರಹ

ಬಿಬಿಎಂಪಿಯ 2020–21ನೇ ಸಾಲಿಗಿಂತ ಈ ವರ್ಷ (2021–22) ಇದುವರೆಗೆ ರೂ.201.92 ಕೋಟಿಗಳಷ್ಟು ಹೆಚ್ಚು ಆಸ್ತಿ ತೆರಿಗೆ ಸಂಗ್ರಹಿಸಿದೆ.

ಕಳೆದ ವರ್ಷ ಈ ವೇಳೆಗೆ(ಜನವರಿ 25ರವರೆಗೆ)ರೂ.2,465.85 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿತ್ತು. ಈ ಸಾಲಿನಲ್ಲಿ ಇದುವರೆಗೆ ರೂ.2,667,77 ಕೋಟಿ ತೆರಿಗೆ ಸಂಗ್ರಹವಾಗಿದೆ.

'ಬಿಬಿಎಂಪಿಯು ಆಸ್ತಿ ತೆರಿಗೆ ಸಂಗ್ರಹ ಗುರಿಯನ್ನು ಸಮರ್ಥವಾಗಿ ಸಾಧಿಸಬೇಕು. ಅದಕ್ಕಾಗಿ, ಎಲ್ಲ ವಲಯಗಳಲ್ಲೂ ಕಂದಾಯ ಅಧಿಕಾರಿಗಳೂ ಸುಧಾರಿತ ತಂತ್ರಜ್ಞಾನದ ಸಹಾಯ ಪಡೆದುಕೊಂಡು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಸೂಚನೆ ನೀಡಿದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹಣೆಯ ಪ್ರಗತಿ ಪರಿಶೀಲನೆ ಸಲುವಾಗಿ ಬುಧವಾರ ವರ್ಚುವಲ್ ರೂಪದಲ್ಲಿ ನಡೆದ ಸಭೆಯಲ್ಲಿ ಅವರು ತೆರಿಗೆ ವಸೂಲಾತಿ ಚುರುಕುಗೊಳಿಸುವ ಕುರಿತು ಸಲಹೆ ಸೂಚನೆ ನೀಡಿದರು.

'ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ನೋಟೀಸ್ ನೀಡಿ, ವಸೂಲಿಗೆ ಕ್ರಮವಹಿಸಬೇಕು. ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದ ಆಸ್ತಿಗಳನ್ನು ಪತ್ತೆ ಮಾಡಿ, ಅವುಗಳನ್ನು ತೆರಿಗೆ ವ್ಯಾಪ್ತಿಗೆ ತರಬೇಕು' ಎಂದು ನಿರ್ದೇಶನ ನೀಡಿದರು.

ಪಾಲಿಕೆಗೆ ಹೆಚ್ಚು ಮೊತ್ತ ಬಾಕಿ ಉಳಿಸಿಕೊಂಡಿರುವವರ ಪಟ್ಟಿ ಸಿದ್ಧಪಡಿಸಿ, ಅದರ ಅನುಸಾರ ವಸೂಲಾತಿಗೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಬಿಬಿಎಂಪಿಯು ರೂ.4,000 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದೆ. ಇದುವರೆಗೆ ರೂ.2,667.77ಕೋಟಿ ತೆರಿಗೆ ಸಂಗ್ರಹವಾಗಿದೆ ಸಭೆಯಲ್ಲಿ ವಿಶೇಷ ಆಯುಕ್ತ (ಕಂದಾಯ) ಡಾ.ದೀಪಕ್ ಆರ್.ಎಲ್, ಕಂದಾಯ ವಿಭಾಗದ ಜಂಟಿ ಆಯುಕ್ತರು ಹಾಗೂ ಎಲ್ಲಾ ವಲಯಗಳ ಆಯುಕ್ತರು, ಜಂಟಿ ಆಯುಕ್ತರು, ಕಂದಾಯ ಉಪ ಆಯುಕ್ತರು, ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು ಭಾಗವಹಿಸಿದ್ದರು.

ವಲಯವಾರು ಆಸ್ತಿ ತೆರಿಗೆ ಸಂಗ್ರಹದ ವಿವರ (ರೂ. ಕೋಟಿಗಳಲ್ಲಿ)		
(ಕಳೆದ ವರ್ಷ ಹಾಗೂ ಈ ವರ್ಷದ ಮಾಹಿತಿ)		
ವಲಯ	**2021ರ ಜನವರಿ 25ರವರೆಗೆ**	**2022ರ ಜನವರಿ 25ರವರೆಗೆ**
ಯಲಹಂಕ	205.77	265.98
ಮಹದೇವಪುರ	688.41	683.07
ದಾಸರಹಳ್ಳಿ	67.45	73.78
ಆರ್.ಆರ್.ನಗರ	161.64	182.00
ಬೊಮ್ಮನಹಳ್ಳಿ	249.61	285.04
ಪಶ್ಚಿಮ	256.33	272.11
ದಕ್ಷಿಣ	369.57	398.54
ಪೂರ್ವ	467.06	507.26

ಆಧಾರ: ಪ್ರಜಾವಾಣಿ, ದಿನಾಂಕ:27.01.2022.

36. ಗ್ರಾಮಗಳಲ್ಲೇ ಸಿಗಲಿವೆ 100 ಸೇವೆ

ಸರ್ಕಾರದ ಯೋಜನೆಗಳು, ತಹಸೀಲ್ದಾರ್ ಕಚೇರಿಯಲ್ಲಿ ಸಿಗುವ ಪ್ರಮಾಣ ಪತ್ರಗಳು ಹಾಗೂ ವಿವಿಧ ಸೇವೆಗಳು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿಯೇ ಸಿಗುವ ಗ್ರಾಮ ಒನ್ ಯೋಜನೆಗೆ ಮುಖ್ಯಮಂತ್ರಿಯವರಾದ ಬಸವರಾಜ್ ಬೊಮ್ಮಾಯಿಯವರು ಗಣರಾಜ್ಯೋತ್ಸವ ಕೊಡುಗೆಯಾಗಿ ಬುಧವಾರ ಚಾಲನೆ ನೀಡಿದರು. 4 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಿದ್ದ ಯೋಜನೆ ಯಶಸ್ವಿಯಾದ ಹಿನ್ನೆಲೆಯಲ್ಲಿ 12 ಜಿಲ್ಲೆಗಳಿಗೆ ವಿಸ್ತರಣೆ ಮಾಡಲಾಗುತ್ತಿದೆ. ಬೀದರ್, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಹಾವೇರಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ತುಮಕೂರು ಚಿಕ್ಕಮಗಳೂರು, ಉಡುಪಿ ಹಾಗೂ ಕೊಡಗು ಜಿಲ್ಲೆಗಳ 3024 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಒನ್ ಆರಂಭವಾಗುತ್ತಿದೆ. ಗ್ರಾಮೀಣ ಭಾಗದ ಜನ ಇನ್ನು ಮುಂದೆ ತಾಲ್ಲೂಕು ಕಚೇರಿ ಅಥವಾ ಜಿಲ್ಲಾಧಿಕಾರಿ ಕಛೇರಿಗೆ ಅಲೆಯುವ ಅಗತ್ಯ ಇರುವುದಿಲ್ಲ. ಬಳಿಕ ಮಾತನಾಡಿದ್ದ ಮುಖ್ಯಮಂತ್ರಿಗಳು ಜನರಿಂದ ಜನರಿಗಾಗಿ ಇರುವ ಜನರ ಸರ್ಕಾರ ಜನ ಸ್ಪಂದನೆಗಾಗಿ ತಾಂತ್ರಿಕತೆಯಿಂದ ಕೂಡಿದ ಗ್ರಾಮ ಒನ್ ಸೇವೆಯನ್ನು ಆರಂಭಿಸಿದ್ದೇವೆ. ತಹಶೀಲ್ದಾರ್ ಕಚೇರಿಯಲ್ಲಿ ಬಹಳಷ್ಟು ಜನದಟ್ಟಣೆ ಇರುತ್ತದೆ ಎಂದರು.

ಮುಖ್ಯಾಂಶಗಳು:

- ಗ್ರಾಮ ಪಂಚಾಯಿತಿಯಲ್ಲಿ ಕೇಂದ್ರ ಸ್ಥಾಪನೆ
- ಬೆಳಿಗ್ಗೆ 8ರಿಂದ ರಾತ್ರಿ 8 ರ ತನಕ ಕಾರ್ಯನಿರ್ವಹಣೆ
- ಹಣಪಾವತಿಸಿ ವಿವಿಧ ಪ್ರಮಾಣ ಪತ್ರ ಪಡೆಯಬಹುದು
- ಜಾತಿ, ನಿವಾಸಿ, ಆದಾಯ ಪ್ರಮಾಣಪತ್ರಗಳು, ಆಧಾರ್ ಕಾರ್ಡ್, ಆಯುಷ್ಮಾನ್ ಕಾರ್ಡ್ ಹೀಗೆ ವಿವಿಧ ಸೌಲಭ್ಯಗಳೂ ಲಭ್ಯ, ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಸೇವೆಯು ಲಭ್ಯ.

ಆಧಾರ: ವಿಜಯ ವಾಣಿ, ದಿನಾಂಕ:27.01.2022.

37. ಜಿಲ್ಲೆಗಳ ಉಸ್ತುವಾರಿ ಮಂತ್ರಿಗಿರಿಗೆ ಸರ್ಜರಿ

ಕೂತೂಹಲಕರ ಬೆಳವಣಿಗೆಯಲ್ಲಿ ಮುಖ್ಯಮಂತ್ರಿಯವರು ಇದೇ ಮೊದಲ ಬಾರಿಗೆ ತಮ್ಮ ಸಚಿವ ಸಂಪುಟದ ಸದಸ್ಯರಿಗೆ ಜಿಲ್ಲಾ ಉಸ್ತುವಾರಿಕೆಯನ್ನು ಅಧಿಕೃತವಾಗಿ ಹಂಚಿಕೆ ಮಾಡಿದ್ದು, ಕೋವಿಡ್ ಜವಾಬ್ದಾರಿ ಜೊತೆಗೆ ಜಿಲ್ಲೆಯ ಹೊಣೆಯನ್ನು ನೀಡಿದ್ದಾರೆ. ಆ ಮೂಲಕ ಕೆಡಿಪಿ ಸಭೆ ನಡೆಸಲು ಆಗುತ್ತಿಲ್ಲ ಎಂಬ ಸಚಿವರ ಅಳಲಿಗೆ ಕೊನೆ ಹಾಡಿದ್ದಾರೆ. ಆದರೆ ಉಸ್ತುವಾರಿ ಹಂಚಿಕೆಯಲ್ಲಿ ಸಿಎಂ ಬೊಮ್ಮಾಯಿ ಭಾರಿ ಚಾಣಾಕ್ಷತೆ ಪ್ರದರ್ಶಿಸಿದ್ದಾರೆ.

ಸಚಿವರಾದ ಆರ್.ಅಶೋಕ್, ವಿ.ಸೋಮಣ್ಣ, ಡಾ.ಅಶ್ವತ್ ನಾರಾಯಣ, ಬೈರತಿ ಬಸವರಾಜು ಹಾಗೂ ಮುನಿರತ್ನ ಅವರೆಲ್ಲ ಕಣ್ಣಿಟ್ಟಿದ್ದ ಬೆಂಗಳೂರು ನಗರ ಜಿಲ್ಲೆಯನ್ನು ಮುಖ್ಯಮಂತ್ರಿಯವರು ತಾವೇ ಇರಿಸಿಕೊಳ್ಳುವ ಮೂಲಕ ಬೆಂಗಳೂರು ಶಾಸಕರ ಜಗಳಕ್ಕೆ ಕಾರಣವಾದ ಮಹತ್ವದ ಉಸ್ತುವಾರಿಯ ವಿವಾದ ಶಮನ ಮಾಡಿದ್ದಾರೆ.

ಕಳೆದ ಕೆಲವು ದಿನಗಳಿಂದ ಬೆಂಗಳೂರು ನಗರ ಉಸ್ತುವಾರಿಯಂತೆ ವರ್ತಿಸುತ್ತಿದ್ದ ಆರ್.ಅಶೋಕ ಅವರಿಗೆ ಮುಖ್ಯಮಂತ್ರಿಯವರು ಭಾರಿ ನಿರಾಸೆ ಉಂಟು ಮಾಡಿದ್ದಾರೆ. ಮುಂಬರುವ ಬಿಬಿಎಂಪಿ ಚುನಾವಣೆಯನ್ನು ಬಿಜೆಪಿ ಸುಗಮವಾಗಿ ಎದುರಿಸುವ ದೃಷ್ಟಿಯಿಂದ ಯಾವುದೇ ಆಂತರಿಕ ಭಿನ್ನಾಭಿಪ್ರಾಯಕ್ಕೆ ಅವಕಾಶ ಕೊಡಬಾರದೆಂದು ಮುಖ್ಯಮಂತ್ರಿಯವರು ಈ ಸೂತ್ರ ಅನುಸರಿಸಿದ್ದಾರೆ. ಹಿಂದೆ ಬಿ.ಎಸ್.ಯಡಿಯೂರಪ್ಪ ಕೂಡ ಇದೆ ತಂತ್ರ ಅನುಸರಿಸಿದ್ದರು.

ಸಚಿವ ಸಂಪುಟದ ಹಿರಿಯ ಸಚಿವರಲ್ಲಿ ಒಬ್ಬರಾದ ಗೋವಿಂದ ಕಾರಜೋಳ ಅವರು ಜನವರಿ 25 ರಂದು 72 ವರ್ಷಗಳನ್ನು ಪೊರೈಸುತ್ತಿರುವ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಜನ್ಮದಿನದ ಉಡುಗೊರೆಯಾಗಿ ಬೆಳಗಾವಿ ಜಿಲ್ಲೆಯನ್ನೇ ಮತ್ತೇ ಕೊಟ್ಟಿದ್ದಾರೆ. ಆ ಮೂಲಕ ಬೆಂಗಳೂರು ನಂತರದ ಬಹುದೊಡ್ಡ ಜಿಲ್ಲೆಯ ಉಸ್ತುವಾರಿಯಾಗಿ ಕಾರಜೋಳ ಕಾರ್ಯನಿರ್ವಹಿಸಲಿದ್ದಾರೆ. ಸಚಿವ ಸಂಪುಟದಿಂದ ಕೈಬಿಡಲಾಗುತ್ತದೆ ಎಂಬ ವದಂತಿಗಳ ನಡುವೆಯೇ ಬೃಹತ್ ಕೈಗಾರಿಕ ಸಚಿವ ಮುರುಗೇಶ ನಿರಾಣಿ ಅವರಿಗೆ ಕಲಬುರಗಿ ಜಿಲ್ಲಾ ಉಸ್ತುವಾರಿ ಪಟ್ಟ ಆಭಾಧಿತವಾಗಿದೆ.

ಇನ್ನು ಕಳೆದ ಎರಡೂವರೆ ವರ್ಷಗಳಿಂದ ಬಳ್ಳಾರಿ ಜಿಲ್ಲಾ ಉಸ್ತುವಾರಿ ಪಟ್ಟಕ್ಕಾಗಿ ಹೆಣಗಾಡುತ್ತಿದ್ದ ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರಿಗೆ ಕೊನೆಗೂ ಬಳ್ಳಾರಿ ಜಿಲ್ಲೆಯೇ ದಕ್ಕಿದೆ. ಆದರೆ ವಿಭಜಿತ ವಿಜಯನಗರ ಜಿಲ್ಲೆಯಿಂದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್‌ಗೆ ಕೋಕ್ ನೀಡಲಾಗಿದ್ದು, ಶಶಿಕಲಾ ಜೊಲ್ಲೆ ಅವರ ಪಾಲಾಗಿದೆ. ಆನಂದ್ ಸಿಂಗ್‌ಗೆ ಪಕ್ಕದ ಕೊಪ್ಪಳ ಜಿಲ್ಲೆಯ ಜವಾಬ್ದಾರಿ ನೀಡಲಾಗಿದೆ. ಇದನ್ನು ಸಚಿವ ಆನಂದ್ ಸಿಂಗ್ ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ವಿಜಯನಗರ ಜಿಲ್ಲೆ ರಚನೆಯ ರುವಾರಿಯೂ ಆಗಿರುವ ಸಿಂಗ್ ಈಗಾಗಲೇ ಖಾತೆ ಹಂಚಿಕೆ ವಿಚಾರದಲ್ಲೇ ಸಾಕಷ್ಟು ಅಸಮಾಧಾನ ಹೊಂದಿರುವುದು ಜಗಜ್ಜಾಹೀರು. ಬೆಂಕಿಗೆ ತುಪ್ಪ ಸುರಿದಂತೆ ಮುಖ್ಯಮಂತ್ರಿಯವರು ತೆಗೆದುಕೊಂಡಿರುವ ನಿರ್ಧಾರದ ಪರಿಣಾಮ ಎನೆಂಬುದು ಸದ್ಯದ ಕುತೂಹಲ.

ಇನ್ನು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಆಪ್ತರಾದ ಸಕ್ಕರೆ ಮತ್ತು ಜವಳಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಅವರನ್ನು ಧಾರವಾಡದಿಂದ ಎತ್ತಂಗಡಿ ಮಾಡಲಾಗಿದೆ. ಇತ್ತೀಚೆಗೆ ಶಾಸಕ ಅರವಿಂದ ಬೆಲ್ಲದ್ ಅವರು ಮಹಾನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಜಿಲ್ಲೆಯ ಪಕ್ಷದ ಆಂತರಿಕ ಭಿನ್ನಮತ ತಾರಕಕ್ಕೇರಿದೆ. ಅದನ್ನು ಶಮನ ಮಾಡುವ ಭಾಗವಾಗಿ ಬೊಮ್ಮಾಯಿ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದಿದ್ದಾರೆ. ಒಂದೆಡೆ ಶೆಟ್ಟರ್ ಬಲವು ಕುಗ್ಗಿದಂತಾಗಿದ್ದು, ಮತ್ತೊಂದೆಡೆ ಬೆಲ್ಲದ್ ಸಮಾಧಾನವೂ ಆದಂತಾಗಿದೆ. ಎರಡೂ ಬಣಗಳಿಗೆ ಅಷ್ಟೇನೂ ಪರಿಚಿತರಲ್ಲದ ಗಣಿ ಸಚಿವ ಹಾಲಪ್ಪ ಆಚಾರ್ ಅವರನ್ನು ಧಾರವಾಡ ಜಿಲ್ಲೆಗೆ ಕರೆಸುವ ಮೂಲಕ ಸಿಎಂ ಬೊಮ್ಮಾಯಿ ಇಡೀ ಜಿಲ್ಲೆಯನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಮತ್ತೊಂದೆಡೆ ಸ್ವಂತ ಜಿಲ್ಲೆ ಹಾವೇರಿಗೆ ಶಿವರಾಮ್ ಹೆಬ್ಬಾರ್ ಅವರಿಗೆ ಕೊಟ್ಟು ಸುರಕ್ಷಿತ ನಡೆ ತೋರಿದ್ದಾರೆ.

ಹಿರಿಯ ಸಚಿವ ಕೆ.ಎಸ್.ಈಶ್ವರಪ್ಪ ಅವರಿಗೆ ಚಿಕ್ಕಮಗಳೂರು ಕೊಡುವ ಮೂಲಕ ಶಿವಮೊಗ್ಗ ಜಿಲ್ಲೆಯನ್ನು ಕೆ.ಸಿ.ನಾರಾಯಣಗೌಡ ಅವರಿಗೆ ಧಾರೆ ಎರೆದಿದ್ದಾರೆ. ಇದರಿಂದ ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರನ್ನು ಸಮಾಧಾನ ಮಾಡಲು ಪ್ರಯತ್ನಸಿರುವಂತಿದೆ. ಏಕೆಂದರೆ ನಾರಾಯಣ ಗೌಡ ಸದಾ ವಿಜಯೇಂದ್ರ ಜತೆ ಸಂಪರ್ಕದಲ್ಲಿರುವ ಸಚಿವ. ಶಿವಮೊಗ್ಗ ಜಿಲ್ಲೆಯ ಯಾವುದೇ ಸಮಸ್ಯೆ ಬೆಂಗಳೂರು ತನಕ ಬರಲೇಬಾರದು ಎಂಬ ಜಾಣ ನಡೆ ಇಲ್ಲಿ ಎದ್ದು ಕಾಣುತ್ತಿದೆ. ಆ ಮೂಲಕ ಈಶ್ವರಪ್ಪ ಅವರನ್ನು ಸ್ವಂತ ಜಿಲ್ಲೆಯಿಂದ ದೂರ ಮಾಡಲಾಗಿದೆ.

ಬಹುತೇಕ ಸಚಿವರಿಗೆ ಸ್ವಂತ ಜಿಲ್ಲೆಯ ಉಸ್ತುವಾರಿ ಜವಾಬ್ದಾರಿ ಕೊಡದೇ ಇರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರ ಆಪ್ತ ಸಚಿವರೆಂದೇ ಹೇಳಲಾದ ಸಿ.ಸಿ.ಪಾಟೀಲ್ ಅವರಿಗೂ ಸ್ವಂತ ಜಿಲ್ಲೆ ಗದಗನಿಂದ ಬಾಗಲಕೋಟೆಗೆ ಸ್ಥಳಾಂತರಿಸಲಾಗಿದೆ. ಸಚಿವ ಬಿ.ಸಿ.ಪಾಟೀಲ್‌ಗೆ ಗದಗ ಮತ್ತು ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಹಂಚಿಕೆ ಮಾಡಲಾಗಿದೆ. ಸಚಿವ ಸುನೀಲ್‌ಕುಮಾರ್‌ಗೆ ದಕ್ಷಿಣ ಕನ್ನಡ ಹಾಗೂ ಕೋಟಾ ಶ್ರೀನಿವಾಸ್ ಪೂಜಾರಿಗೆ ಉತ್ತರ ಕನ್ನಡ ನೀಡಲಾಗಿದೆ. ಕರಾವಳಿ ಬಿಜೆಪಿ ರಾಜಕಾರಣದಲ್ಲಿ ಎಸ್.ಅಂಗಾರ ಉಡುಪಿ ಜಿಲ್ಲೆ ಪಡೆದಿದ್ದಾರೆ. ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಈಚೆಗೆ ತುಮಕೂರು ಸಂಸದ ಜಿ.ಎಸ್.ಬಸವರಾಜು ಜೊತೆ ಕಿತ್ತಾಟ ಮಾಡಿಕೊಂಡಿರುವ ಹಿನ್ನಲೆಯಲ್ಲಿ ಗೃಹ

ಸಚಿವ ಅರಗ ಜ್ಞಾನೇಂದ್ರ ಅವರಿಗೆ ತುಮಕೂರು ಜಿಲ್ಲೆ ಉಸ್ತುವಾರಿ ನೀಡಿ, ಸಮಸ್ಯೆ ಶಮನಕ್ಕೆ ಯತ್ನಿಸಲಾಗಿದೆ. ಆದರೆ ಮಾಧುಸ್ವಾಮಿ ಪ್ರತಿಕ್ರಿಯೆ ಏನೆಂದು ಗೊತ್ತಾಗಿಲ್ಲ.

ಇನ್ನು ಬೆಂಗಳೂರು ಗ್ರಾಮಂತರ ಜಿಲ್ಲೆಯ ಉಸ್ತುವಾರಿಗೆ ಪಟ್ಟು ಹಿಡಿದಿದ್ದ ಎಂಟಿಬಿ ನಾಗರಾಜ್‌ಗೆ ನಿರಾಸೆಯಾಗಿದ್ದು, ಚಿಕ್ಕಬಳ್ಳಾಪುರ ಉಸ್ತುವಾರಿ ವಹಿಸಲಾಗಿದೆ. ಡಾ.ಸುಧಾಕರ್‌ಗೆ ಬೆಂಗಳೂರು ಗ್ರಾಮಂತರ ಜಿಲ್ಲೆಯನ್ನು ವಹಿಸಲಾಗಿದೆ. ಈ ಬದಲಾವಣೆ ಕೆಲಮಟ್ಟಿಗೆ ಸಮಸ್ಯೆ ಉಂಟು ಮಾಡುವ ಸಾಧ್ಯತೆ ಇದೆ. ಹೀಗೆ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಲೆಕ್ಕಾಚಾರ ಅನುಸರಿಸಲಾಗಿದ್ದು, ಇದು ಮುಂದಿನ ದಿನಗಳಲ್ಲಿ ಸರ್ಕಾರ ಮತ್ತು ಪಕ್ಷದ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ಕಾದು ನೋಡಬೇಕಾಗಿದೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:28.01.2022.

38. 30.26ಲಕ್ಷ ರೈತರಿಗೆ ರೂ.19,370 ಕೋಟಿ ಸಾಲ

ರಾಜ್ಯದ 30.26 ಲಕ್ಷ ರೈತರಿಗೆ 2021–22ನೇ ಸಾಲಿನಲ್ಲಿ ರೂ.19,370 ಕೋಟಿ ಅಲ್ಪಾವಧಿ ಬೆಳೆ ಸಾಲ 0.60 ಲಕ್ಷ ರೈತರಿಗೆ ರೂ.1,440 ಕೋಟಿ ಮಧ್ಯಮಾವಧಿ/ದೀರ್ಘಾವಧಿ ಸಾಲ ವಿತರಿಸಲಾಗಿದೆ ಎಂದು ಸಹಕಾರ ಸಚಿವ ಎಸ್. ಟಿ.ಸೋಮಶೇಖರ್ ತಿಳಿಸಿದರು. ಒಟ್ಟು 30.86 ಲಕ್ಷ ರೈತರಿಗೆ ರೂ.20,810 ಕೋಟಿ ಸಾಲ ನೀಡಿಕೆ ಗುರಿ ಹೊಂದಲಾಗಿತ್ತು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಸಾಲ ಮನ್ನಾ ಬಗ್ಗೆ ಯೋಚಿಸಿಲ್ಲ. ಶೂನ್ಯ ಬಡ್ಡಿದರ ಸಾಲ ಶೇ.100 ಗುರಿ ಸಾಧಿಸಲು ಪ್ರಯತ್ನಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಡಿಸೆಂಬರ್ 31ರವರೆಗೆ 19.27 ಲಕ್ಷ ರೈತರಿಗೆ ರೂ. 13,295 ಕೋಟಿ ಅಲ್ಪಾವಧಿ ಕೃಷಿ ಸಾಲ, 0.31 ಲಕ್ಷ ರೈತರಿಗೆ ರೂ.893 ಕೋಟಿ ಮಧ್ಯಮಾವಧಿ/ದೀರ್ಘಾವಧಿ ಸಾಲ ಸೇರಿ ಒಟ್ಟು 19.58 ಲಕ್ಷ ರೈತರಿಗೆ ರೂ.14,188 ಕೋಟಿ ಕೃಷಿ ಸಾಲ ನೀಡಲಾಗಿದೆ. ಮೂರು ತಿಂಗಳಲ್ಲಿ ಉಳಿದ ಗುರಿ ಸಾಧಿಸಲು ಸಂಬಂಧಿಸಿದ ಡಿಸಿಸಿ ಬ್ಯಾಂಕಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಲಾಗಿದೆ ಎಂದರು.

ಬಡ್ಡಿ ಸಹಾಯಧನಕ್ಕೆ ರೂ.1012 ಕೋಟಿ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮತ್ತು ಡಿಸಿಸಿ ಬ್ಯಾಂಕಿನ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲ ವಸೂಲಾತಿ ಕ್ರಮವಾಗಿ ಶೇ.94.93 ಹಾಗೂ ಶೇ.76.29 ಆಗಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ಈ ವರ್ಷದಲ್ಲಿ ಸಹಕಾರ ಸಂಸ್ಥೆಗಳಿಗೆ ರೂ.1,012 ಕೋಟಿಗಳ ಬಡ್ಡಿ ಸಹಾಯಧನ ನೀಡಲು ಅನುದಾನ ಕಲ್ಪಿಸಿದ್ದು, ಈವರೆಗೆ ರೂ.757.21 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಸ್ವಸಹಾಯ ಗುಂಪುಗಳಿಗೆ ಸಾಲ ವಿತರಣೆ: ಡಿಸೆಂಬರ್ 31 ರವರೆಗೆ ಸಾಲ ವಿತರಣೆ 19,196 ಸ್ವಸಹಾಯ ಗುಂಪುಗಳಿಗೆ ರೂ.689 ಕೋಟಿ ನೀಡಲಾಗಿದೆ. ಈ ಸಾಲಿನಲ್ಲಿ ವಸೂಲಾಗುವ ಸಾಲಗಳಿಗೆ ಬಡ್ಡಿ ಸಹಾಯಧನಕ್ಕಾಗಿ ಆಯವ್ಯಯದಲ್ಲಿ ರೂ.90.41 ಕೋಟಿ ಒದಗಿಸಲಾಗಿದ್ದು, ಡಿಸಿಸಿ ಬ್ಯಾಂಕುಗಳಿಗೆ ಇದುವರೆಗೆ ರೂ.36.01 ಕೋಟಿ ಬಡ್ಡಿ ಸಹಾಯಧನ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಅಡಮಾನ ಸಾಲ ವಿತರಣೆ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ತಮ್ಮ ಗೋದಾಮುಗಳಲ್ಲಿ ಶೇಖರಣೆ ಮಾಡಿ ಶೇ.7ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಯೋಜನೆಯಲ್ಲಿ ಈ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ 18,958 ರೈತರಿಗೆ ರೂ.306 ಕೋಟಿ ಸಾಲ ವಿತರಿಸಲಾಗಿದೆ.

ಸಹಕಾರ ಬ್ಯಾಂಕುಗಳ ಮಾಹಿತಿ: ರಾಜ್ಯದಲ್ಲಿ ಒಟ್ಟು 264 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, ಇವು ಡಿಸೆಂಬರ್ ಅಂತ್ಯಕ್ಕೆ ರೂ.45,580.09 ಕೋಟಿ ಠೇವಣಿ,

ರೂ.52,593.94 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ರೂ.29,219.38 ಕೋಟಿ ಸಾಲ ಮತ್ತು ಮುಂಗಡ ನೀಡಿವೆ. ಜೊತೆಗೆ ರೂ.301.34 ಕೋಟಿ ಲಾಭಗಳಿಸಿರುತ್ತವೆ. 18 ಪಟ್ಟಣ ಬ್ಯಾಂಕುಗಳನ್ನು ದುರ್ಬಲ ಸಹಕಾರ ಬ್ಯಾಂಕುಗಳೆಂದು ಗುರುತಿಸಲಾಗಿದೆ ಎಂದು ಸೋಮಶೇಖರ್ ತಿಳಿಸಿದರು.

ಆಧಾರ: ವಿಜಯ ವಾಣಿ, ದಿನಾಂಕ:28.01.2022.

39. ಫೆಬ್ರವರಿ14–25 ರವರೆಗೆ ಜಂಟಿ ಅಧಿವೇಶನ

ಕರೋನಾ ಮೂರನೆ ಅಲೆ ಫೆಬ್ರವರಿ ಮೂರನೇ ವಾರದಿಂದ ತಗ್ಗಲಿದೆ ಎಂಬ ಮುನ್ಸೂಚನೆ ಹಿನ್ನಲೆಯಲ್ಲಿ ಸರ್ಕಾರ ನಿರಾಳವಾಗಿದ್ದು, ಮಹತ್ವದ ವಿಧಾನ ಮಂಡಲ ಜಂಟಿ ಅಧಿವೇಶನ ಫೆಬ್ರವರಿ 14 ರಿಂದ 25 ರವರೆಗೆ ನಡೆಸಲು ತೀರ್ಮಾನಿಸಿದೆ.

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಮೊದಲ ಬಾರಿಗೆ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲಿದ್ದು, ಮುಖ್ಯಮಂತ್ರಿಯವರ ನೇತೃತ್ವದ ಸರ್ಕಾರದ ಸಾಧನೆ ಹಾಗೂ ದಿಕ್ಸೂಚಿಯನ್ನು ಜನರ ಮುಂದಿಡಲಿದ್ದಾರೆ. ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ಬಳಿಕ ಆಡಳಿತ ಮತ್ತು ಪ್ರತಿಪಕ್ಷಗಳ ಸವಾಲು–ಜವಾಬು ವೇದಿಕೆ ಅಣಿಯಾಗಲಿದ್ದು, ವಿಧಾನ ಸಭೆಯಲ್ಲಿ ಅಂಗೀಕಾರವಾದ ಮತಾಂತರ ನಿಷೇಧ (ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣೆ) ವಿಧೇಯಕ ವಿಧಾನ ಪರಿಷತ್‌ನಲ್ಲಿ ಮಂಡನೆಯಾಗುವ ಸಾಧ್ಯತೆಯಿದೆ. ಅಧಿವೇಶನ ಅವಧಿ ವಿಸ್ತರಿಸಬೇಕೆಂಬ ಮನವಿಗೆ ಕಳೆದ ಅಧಿವೇಶನದಲ್ಲಿ ಬೊಮ್ಮಾಯಿ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಈ ಬಗ್ಗೆ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಭರವಸೆ ನೀಡಿದ್ದರಾದರು ಕರೋನಾ ಮೂರನೇ ಅಲೆ ಅಡ್ಡಗಾಲು ಹಾಕಿತು.

ಬಜೆಟ್ ಅಧಿವೇಶನ: ಮಾರ್ಚ್ ಮೊದಲ ವಾರದಲ್ಲಿ ಬಜೆಟ್ ಅಧಿವೇಶನ ನಡೆಸಲು ತೀರ್ಮಾನಿಸಿದ್ದರೂ ದಿನಾಂಕ ಅಂತಿಮವಾಗಿಲ್ಲ. ಹೀಗಾಗಿ ಅವಧಿ ವಿಸ್ತರಿಸಬೇಕೆಂಬ ಬೇಡಿಕೆಯನ್ನು ಸಿಎಂ ಪರಿಗಣಿಸಲು ಮತ್ತು ಪ್ರತಿಪಕ್ಷಗಳು ಧ್ವನಿ ಎತ್ತಲು ಮತ್ತೊಂದು ಅವಕಾಶ ದೊರೆತಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನ, ನಂತರವೂ ಹೊಸ ಯೋಜನೆಗಳನ್ನು ಪ್ರಕಟಿಸಿ ವರ್ಚಸ್ಸು ವೃದ್ಧಿ ಮತ್ತು ಜನಾಭಿಪ್ರಾಯ ರೂಪಿಸಲು ಬೊಮ್ಮಾಯಿ ಕಸರತ್ತು ನಡೆಸಿದ್ದಾರೆ. ಬಿ.ಎಸ್. ಯಡಿಯೂರಪ್ಪ ಮಂಡಿಸಿದ್ದ ಬಜೆಟ್ ಅನುಷ್ಠಾನಕ್ಕೆ ತಂದಿದ್ದರು. ಇದೀಗ ಚೊಚ್ಚಲ ಬಜೆಟ್ ಮಂಡನೆಗೆ ಸಜ್ಜಾಗುತ್ತಿರುವ ಬೊಮ್ಮಾಯಿ ತಮ್ಮದೆ ಆದ ಛಾಪು–ಹೊಳಪು ಮೂಡಿಸುವ ನಿರೀಕ್ಷೆ ಗರಿಗೆದರಿದೆ. ಜನರ ಒಲವು ಗೆಲ್ಲುವ ಜೊತೆಗೆ ಪಕ್ಷದ ವರಿಷ್ಠರು ಮತ್ತು ಸಂಘ–ಪರಿವಾರವನ್ನು ಸಂಪ್ರೀತರನ್ನಾಗಿ ಮಾಡುವ ಜವಾಬ್ದಾರಿ, ಐದು ಟ್ರಿಲಿಯನ್ ಆರ್ಥಿಕತೆಗೆ ರಾಜ್ಯದಿಂದ ಅರ್ಧಪಾಲು ಭರಿಸಿಕೊಡುವ ರೀತಿ ಈ ಬಜೆಟ್‌ನಲ್ಲಿ ಬಿಂಬಿಸಬೇಕಾದ ಸವಾಲು ಬೊಮ್ಮಾಯಿ ಮುಂದಿದೆ.

ಮತ್ತೊಂದು ವರದಿ ನಿರೀಕ್ಷೆ: ಕರೋನಾ ಸ್ಥಿತಿಗತಿ ಅವಲೋಕಿಸಿ ಮತ್ತೊಂದು ವರದಿ ಸಲ್ಲಿಸಲು ತಜ್ಞರ ತಾಂತ್ರಿಕ ಸಲಹಾ ಸಮಿತಿಗೆ ಕೇಳಿಕೊಳ್ಳಲಾಗಿದ್ದು, ವರದಿ ಕೈಸೇರಿದ ಬಳಿಕ ಸರ್ಕಾರದ ಮುಂದಿನ ನಡೆ ಬಗ್ಗೆ ಸಭೆ ಕರೆದು ಚರ್ಚಿಸಿ ನಿರ್ಧರಿಸಲಾಗುವುದು.

ಆಧಾರ: ವಿಜಯ ವಾಣಿ, ದಿನಾಂಕ:28.01.2022.

40. ಭೂಮಿ ಹಕ್ಕು, ದಾಖಲೆಗೆ ಡ್ರೋನ್ ಸರ್ವೆ

ಭೂಮಿ ಹಕ್ಕು ದಾಖಲೆಗಳನ್ನು ಜನರಿಗೆ ಕ್ರಮಬದ್ಧವಾಗಿ ಶೀಘ್ರದಲ್ಲಿ ದೊರಕುವಂತಾಗಲು ಸಮರೋಪಾದಿಯಲ್ಲಿ ಅರ್ಹ ಖಾಸಗಿ ಏಜೆನ್ಸಿಗಳಿಂದ ಡ್ರೋನ್ ಸರ್ವೆ ನಡೆಸಲು ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಸಭೆ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ಖಾತೆ ಸಚಿವ ಜೆ.ಸಿ.ಮಾಧುಸ್ವಾಮಿ, ಸ್ವಾಮಿತ್ವ ಯೋಜನೆಯಡಿ ಗ್ರಾಮೀಣ ವಸತಿ ಹಕ್ಕು

ದಾಖಲೆಗಳು, ಕೃಷಿ ಭೂಮಿಯ ಹಕ್ಕು ದಾಖಲೆಗಳನ್ನು ಹಾಗೂ ಪಟ್ಟಣ/ನಗರ ಆಸ್ತಿಗಳ ದಾಖಲೆ ಸಿದ್ಧಪಡಿಸಲು ಕೆಟಿಪಿಪಿ ಕಾಯಿದೆಯಡಿ ಸರ್ವೆ ನಡೆಸಲಾಗುತ್ತದೆ," ಎಂದರು.

"ಅರ್ಹ ಖಾಸಗಿ ಎಜೆನ್ಸಿಗಳಿಂದ ಡ್ರೋನ್ ಒಂದು-ಸೇವೆ ಅಥವಾ ವೈಮಾನಿಕ ಸಮೀಕ್ಷೆ ಕೈಗೊಳ್ಳಲು ನಿರ್ಧರಿಸಲಾಗಿದೆ. ಕೇಂದ್ರ ಸರ್ಕಾರ ಆರಂಭಿಸಿದ್ದ ಯೋಜನೆಯಡಿ ಹಿಂದೆ 5 ಡ್ರೋನ್ ಒದಗಿಸಿತ್ತು. ಉಳಿದ ಡ್ರೋನ್‌ಗಳನ್ನು ನಾವೇ ಹೊಂದಿಸಿಕೊಂಡು ಸರ್ವೆ ಮಾಡಿಸಬೇಕಿದ್ದು, ರೂ.287 ಕೋಟಿ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ," ಎಂದು ವಿವರಿಸಿದರು.

ಪಶುವೈದ್ಯರ ನೇಮಕ: ಪಶುಸಂಗೋಪನಾ ಇಲಾಖೆಯಲ್ಲಿ 800 ಪಶುವೈದ್ಯರ ಕೊರತೆಯಿದ್ದು, 400 ಪಶುವೈದ್ಯರ ನೇಮಕಕ್ಕೆ ನಿರ್ಧರಿಸಲಾಗಿದೆ. ಇಲಾಖೆಯೇ ನೇಮಕಾತಿ ನಿಯಮಗಳ ಮೂಲಕ ಭರ್ತಿ ಮಾಡಿಕೊಳ್ಳಲು ಒಪ್ಪಿಗೆ ನೀಡಲಾಗಿದೆ.

ಸಮವಸ್ತ್ರ ವಿತರಣೆಗೆ ರೂ.73.63 ಕೋಟಿ: ಮುಂದಿನ 2022-23ನೇ ಶೈಕ್ಷಣಿಕ ಸಾಲಿಗೆ ವಿದ್ಯಾ ವಿಕಾಸ ಪ್ರೋತ್ಸಾಹದಾಯಕ ಕಾರ್ಯಕ್ರಮದಡಿ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದಿಂದ 60 ಲಕ್ಷ ಮೀಟರ್ ಬಟ್ಟೆಯನ್ನು ರೂ.73.63 ಕೋಟಿ ವೆಚ್ಚದಲ್ಲಿ ಖರೀದಿಸಿ ಸಮವಸ್ತ್ರ ವಿತರಿಸಲು ತಿರ್ಮಾನಿಸಲಾಗಿದೆ.

600 ಸ್ಮಾರ್ಟ್ ತರಗತಿ : ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 14 ಎಂಜಿನಿಯರಿಂಗ್ ಕಾಲೇಜು ಮತ್ತು 87 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಡಿಜಿಟಲ್ ಕಲಿಕೆ ಭಾಗವಾಗಿ 6000 ಸ್ಮಾರ್ಟ್ ತರಗತಿಗಳನ್ನು ಆರಂಭಿಸಲು ರೂ.97.50 ಕೋಟಿ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ.

166 ಶಿಕ್ಷಾ ಬಂದಿ ಬಿಡುಗಡೆ: ರಾಜ್ಯದ ನಾನಾ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷಾ ಬಂಧಿಗಳ ಪೈಕಿ 166 ಮಂದಿಯನ್ನು ಸನ್ನಡತೆ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆ ಮಾಡಲು ಒಪ್ಪಿಗೆ ನೀಡಲಾಗಿದೆ.

ಮೂರು ನಿಗಮ ವಿಲೀನ: ಅರಣ್ಯ ಅಭಿವೃದ್ಧಿ ನಿಗಮ, ರಾಜ್ಯ ಅರಣ್ಯ ಕೈಗಾರಿಕಾ ನಿಗಮ ಹಾಗೂ ಗೇರು ಅಭಿವೃದ್ಧಿ ನಿಗಮವನ್ನು ಒಟ್ಟುಗೂಡಿಸಿ ಒಂದೇ ನಿಗಮವಾಗಿ ವಿಲೀನಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಚಾಮುಂಡೇಶ್ವರಿಯಲ್ಲಿ ಮೂಲ ಸೌಕರ್ಯ: ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗುವ ಭಕ್ತರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ರೂ.92.81 ಕೋಟಿ ಪರಿಷ್ಕೃತ ಮೊತ್ತ ಕಾಮಗಾರಿಗೆ ಒಪ್ಪಿಗೆ ನೀಡಲಾಗಿದೆ.

ಲೋಕಾ, ಕೋವಿಡ್ ಚರ್ಚೆ ಆಗಿಲ್ಲ: "ಕೋವಿಡ್ ಸ್ಥಿತಿ ಗತಿ, ನಿರ್ಬಂಧ ಸಡಿಲಿಕೆ, ವಿಸ್ತರಣೆ ಬಗ್ಗೆ ಸಂಪುಟ ಸಭೆಯಲ್ಲಿ ಯಾವುದೇ ಚರ್ಚೆಯಾಗಿಲ್ಲ. ಕೆಲ ಸಚಿವರು ಮಾತನಾಡಿರಬಹುದು. ಆದರೆ ಕ್ಯಾಬಿನೆಟ್‌ನಲ್ಲಿ ಕೋವಿಡ್ ಬಗ್ಗೆ ಚರ್ಚೆಯಾಗಿಲ್ಲ. ಲೋಕಾಯುಕ್ತರ ನೇಮಕದ ಬಗ್ಗೆಯೂ ಚರ್ಚೆ ನಡೆದಿಲ್ಲ". ಎಂದು ಮಾಧುಸ್ವಾಮಿ ಹೇಳಿದರು.

ಸಂಪುಟದ ಪ್ರಮುಖ ನಿರ್ಣಯಗಳು:

- ಉಡುಪಿ ತಾಲ್ಲೂಕಿನ ಉದ್ಯಾವರ ನಡಿ ಪಡುಕೆರೆ ಸಮೀಪ ಮೀನುಗಾರಿಕೆ ಜೆಟ್ಟಿ ನಿರ್ಮಾಣಕ್ಕೆ ರೂ.10.52 ಕೋಟಿ

- ರಾಮನಗರ ಚನ್ನಪಟ್ಟಣ ಹೈಟೆಕ್ ರೇಷ್ಮೇ ಗೂಡು ಮಾರುಕಟ್ಟೆಯನ್ನು ರೂ. 75 ಕೋಟಿ ವೆಚ್ಚದಲ್ಲಿ ನಿರ್ಮಾಣ.
- ಕಲಬುರಗಿ ನಗರದ ಸೇಡಂ ವರ್ತುಲ ರಸ್ತೆ ಎನ್ ಎಸ್– 50ರಲ್ಲಿ ಫ್ಲೈ ಓವರ್ ನಿರ್ಮಾಣಕ್ಕಾಗಿ ರೂ.49 ಕೋಟಿ.
- ಗುಂಡ್ಲು ಪೇಟೆ ತಾಲ್ಲೂಕಿನ 131 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಚಾಮರಾಜನಗರ ಜಿಲ್ಲೆಯ 32 ಗ್ರಾಮಗಳಿಗೆ ವಿಸ್ತರಿಸುವ ರೂ.22 ಕೋಟಿ ಮೊತ್ತಕ್ಕೆ ಅನುಮೋದನೆ.
- ಚಿತ್ರದುರ್ಗ ಮತ್ತು ಹಿರಿಯೂರು ತಾಲೂಕುಗಳಲ್ಲಿ ಬಾಕಿಯಿರುವ 300 ಜನವಸತಿಗಳಿಗೆ ಕುಡಿಯುವ ನೀರು ಪೂರೈಕೆಗೆ ರೂ.392.08 ಕೋಟಿ ವೆಚ್ಚ.
- ಮಂಗಳೂರು ತಾಲ್ಲೂಕು, ಚೇಳ್ಯಾರು, ಪದವು ಮತ್ತು ಮಧ್ಯ ಗ್ರಾಮಗಳಲ್ಲಿ ಮಂಗಳೂರು ಪ್ರಾಧಿಕಾರದ ವತಿಯಿಂದ 200 ಎಕರೆಯಲ್ಲಿ 72 ಎಕರೆಗೆ ಹಣ ಪಾವತಿಯಾಗಿತ್ತು. ಈ ಪೈಕಿ ಒಂದೇ ಭಾಗದಲ್ಲಿರುವ 45 ಏಕರೆಯಲ್ಲಿ ವಸತಿ ಬಡಾವಣೆ ಯೋಜನೆಗೆ ಅಭಿವೃದ್ಧಿಪಡಿಸಲು ರೂ.30.50 ಕೋಟಿ ವರದಿಗೆ ಒಪ್ಪಿಗೆ.
- ಹುಬ್ಬಳ್ಳಿ – ಧಾರವಾಡ ಪಾಲಿಕೆಯ ಅಮರಗೋಳ ಗ್ರಾಮದ ಬ್ಲಾಕ್ ನಂ 89ರಲ್ಲಿ ಸ್ಥಾಪಿಸಲಾದ ಆರ್ಯಭಟ ಐಟಿ ಪಾರ್ಕ್‌ನಲ್ಲಿ ಬಾಕಿ ಉಳಿದ 3 ಎಕರೆ 3ಐಟಿ/ಬಿಟಿ ಕಂಪನಿಗಳಿಗೆ ಹಂಚಿಕೆಗೆ ನಿರ್ಧಾರ.
- ಯಾದಗಿರಿ ಜಿಲ್ಲೆಯ ಗುರಮಿಠಕಲ್ ವ್ಯಾಪ್ತಿಯಲ್ಲಿ ಭೀಮಾನದಿ ಪಾತ್ರದಿಂದ 20 ಕೆರೆಗಳಿಗೆ ನೀರು ತುಂಬಿಸುವ ರೂ.165 ಕೋಟಿ ಯೋಜನೆಯನ್ನು ಸಂಪುಟ ಸಭೆ ಮುಂದೆ ತರಲು ಸೂಚನೆ.
- ಚಿಕ್ಕೋಡಿ ತಾಲೂಕಿನ ಕಲ್ಲೋಳ ಯಡೂರು ರಸ್ತೆಯಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ಮರು ನಿರ್ಮಾಣಕ್ಕೆ ರೂ.35 ಕೋಟಿ
- ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪಲವನಹಳ್ಳಿ ಹೊಸಕೊಪ್ಪ ಇತರೆ 59 ಜನವಸತಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ರೂ.830.11 ಕೋಟಿ ಮೊತ್ತಕ್ಕೆ ಅನುಮೋದನೆ.
- ಧಾರವಾಡದಲ್ಲಿನ ಐಐಟಿ ಕ್ಯಾಂಪಸ್‌ಗೆ ಕುಡಿಯುವ ನೀರು ಪೂರೈಕೆ ಸೌಲಭ್ಯಕ್ಕಾಗಿ ರೂ.11.21 ಕೋಟಿ ವೆಚ್ಚಕ್ಕೆ ಒಪ್ಪಿಗೆ.

ಆಧಾರ: ವಿಜಯ ವಾಣಿ, ದಿನಾಂಕ:28.01.2022.

41. ಫೆಬ್ರವರಿ 14 ರಿಂದ ಜಂಟಿ ಅಧಿವೇಶನ ಮಾರ್ಚ್ ಮೊದಲ ವಾರ ಬಜೆಟ್

2022ನೇ ಸಾಲಿನ ಜಂಟಿ ಅಧಿವೇಶನವನ್ನು ಫೆಬ್ರವರಿ 14 ರಿಂದ 25 ರವರೆಗೆ ನಡೆಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅಲ್ಲದೆ, ಮಾರ್ಚ್ ಮೊದಲ ವಾರ 2022–23ನೇ ಸಾಲಿನ ಬಜೆಟ್ ಮಂಡನೆಗೂ ನಿರ್ಧರಿಸಲಾಗಿದೆ.

ಗುರುವಾರ ಮುಖ್ಯಮಂತ್ರಿ ಶ್ರೀ ಬಸವರಾಜ್ ಬೊಮ್ಮಾಯಿಯವರು ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಫೆಬ್ರವರಿ 14 ರಿಂದ 25 ರವರೆಗೆ ಜಂಟಿ ಅಧಿವೇಶನ ನಡೆಸಲು ತೀರ್ಮಾನಿಸಲಾಯಿತು. ಅಧಿವೇಶನದ ಮೊದಲ ದಿನ ರಾಜ್ಯಪಾಲರು ವಿಧಾನ ಮಂಡಲದ ಉಭಯ

ಸದನವನವನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮಾರ್ಚ್ ಮೊದಲ ವಾರದಲ್ಲಿ ಬಜೆಟ್ ಅಧಿವೇಶನ ಆರಂಭಿಸಲು ತೀರ್ಮಾನಿಸಲಾಗಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ದಿನಾಂಕ ನಿಗದಿ ಮಾಡಲಾಗುತ್ತದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಂಸದೀಯ ವ್ಯವಹಾರಗಳ ಸಚಿವ ಮಧುಸ್ವಾಮಿ ಈ ಕುರಿತು ಮಾಹಿತಿ ನೀಡಿದ್ದು, ಜಂಟಿ ಅಧಿವೇಶನಕ್ಕೆ ಸಂಬಧಿಸಿದಂತೆ ರಾಜ್ಯಪಾಲರಿಗೆ ಮನವಿ ಮಾಡಲಿದ್ದೇವೆ ಎಂದರು.

2021–22ನೇ ಶೈಕ್ಷಣಿಕ ಸಾಲಿಗೆ ವಿದ್ಯಾವಿಕಾಸ ಪ್ರೋತ್ಸಾಹದಾಯಕ ಕಾರ್ಯಕ್ರಮದಡಿ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿಗಳ ವಿದ್ಯಾರ್ಥಿಗಳಿಗೆ ರೂ.93.27 ಕೋಟಿಗಳ ಅಂದಾಜು ವೆಚ್ಚದಲ್ಲಿ ಉಚಿತವಾಗಿ ಸಮವಸ್ತ್ರ ಬಟ್ಟೆ ವಿತರಿಸುವ ಬಗ್ಗೆ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಡಾ.ಕೆ.ಶಿವರಾಂ ಕಾರಂತ ಬಡಾವಣೆಗಾಗಿ ಹೊರಡಿಸಿರುವ ಅಧಿಸೂಚನೆಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕು ವ್ಯಾಪ್ತಿಯ ಹಲವು ಗ್ರಾಮಗಳ 66.17 ಎಕರೆ ಸರ್ಕಾರಿ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮಂಜೂರು ಮಾಡಲು ನಿರ್ಧರಿಸಲಾಗಿದೆ ಎಂದು ಹೇಳಿದರು.

166 ಕೈದಿಗಳಿಗೆ ಬಿಡುಗಡೆ ಭಾಗ್ಯ: ಸನ್ನಡತೆ ಆಧಾರದಲ್ಲಿ ರಾಜ್ಯದ ವಿವಿಧ ಕೇಂದ್ರ ಕಾರಗೃಹಗಳಲ್ಲಿರುವ 166 ಕೈದಿಗಳನ್ನು ಅವಧಿ ಪೂರ್ವ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ. ಜೀವಿತಾವಧಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳ ನಡತೆ ಗಮನಿಸಿ ಈ ಕುರಿತು ವರದಿ ಸಿದ್ಧಪಡಿಸಲಾಗಿದೆ ಎಂದರು.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ಮತ್ತು ಕರ್ನಾಟಕ ಗೇರು ಅಭಿವೃದ್ಧಿ ನಿಗಮಗಳನ್ನು ವಿಲೀನಗೊಳಿಸಿ ಒಂದೇ ನಿಗಮ ರಚಿಸಲು ಸಂಪುಟ ಒಪ್ಪಿಗೆ ನೀಡಿದೆ ಎಂದು ತಿಳಿಸಿದರು.

ಇತರ ಪ್ರಮುಖಾಂಶಗಳು:

- ಚನ್ನಪಟ್ಟಣದ ಸರ್ಕಾರಿ ರೇಷ್ಮೆ ತರಬೇತಿ ಸಂಸ್ಥೆ ಆವರಣದಲ್ಲಿ ರೂ.75 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ರೇಷ್ಮೇ ಗೂಡು ಮಾರುಕಟ್ಟೆ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ.
- ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳ ಪರಿಷ್ಕೃತ ಅಂದಾಜು 92.81 ಕೋಟಿಗೆ ಅನುಮೋದನೆ.
- ಬೇಗೂರು ಹೋಬಳಿಯ ಹುಳಿಮಾವು ಗ್ರಾಮದಲ್ಲಿ 4 ಎಕರೆ 19 ಗುಂಟೆ ಸರ್ಕಾರಿ ಜಮೀನನ್ನು ರಾಜ್ಯ ಗುಪ್ತ ವಾರ್ತೆ ಘಟಕದ ತರಬೇತಿ ಅಕಾಡೆಮಿಗೆ ಮಂಜೂರು.
- 400 ಪಶು ವೈದ್ಯರ ನೇಮಕಾತಿಗೆ ಅನುಮತಿ.
- ವರ್ತೂರು ಎಲೆವೇಟೆಡ್ ಕಾರಿಡಾರ್ ಅನ್ನು 1.3 ಕಿ.ಮೀ ರಿಂದ .1.99 ಕಿ.ಮೀಗೆ ವಿಸ್ತರಿಸಲು ರೂ.488 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ.
- ಗುಂಡ್ಲು ಪೇಟೆ ತಾಲ್ಲೂಕಿನ ಪ್ರಸ್ತುತ ಚಾಲನೆಯಲ್ಲಿರುವ 131 ಗ್ರಾಮಗಳ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಇತರ 32 ಗ್ರಾಮಗಳಿಗೆ ವಿಸ್ತರಿಸುವ ರೂ.22 ಕೋಟಿ ಅಂದಾಜು ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.

- ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಬಾಕಿ ಇರುವ 300 ಜನವಸತಿಗಳಿಗೆ ಕುಡಿಯುವ ನೀರು ಒದಗಿಸಲು ರೂ.392.08 ಕೋಟಿ ಅಂದಾಜು ಆಡಳಿತಾತ್ಮಕ ಅನುಮೋದನೆ.

- ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿರುವ ಆರ್ಯಭಟ ಐಟಿ ಪಾರ್ಕಿನಲ್ಲಿ ಬಾಕಿರುವ ಮೂರು ಎಕರೆ ಜಮೀನನ್ನು 3ಐಟಿ /ಬಿಟಿ ಕಂಪನಿಗಳಿಗೆ ಹಂಚಿಕೆ ಮಾಡಲು ಒಪ್ಪಿಗೆ.

ಆಧಾರ: ವಿಶ್ವ ವಾಣಿ, ದಿನಾಂಕ:28.01.2022.

42. ಜನಾಶೀರ್ವಾದ ಮುಖ್ಯಮಂತ್ರಿಯವರ ಮುದ

'ಸಾಧನೆಗೆ ಕೊನೆ ಇಲ್ಲ. ಗುರಿ ದೊಡ್ಡದಿದೆ ಹಲವಾರು ಸವಾಲೂ ಮುಂದಿದೆ ಅದನ್ನು ಎದುರಿಸುವ ಆತ್ಮ ವಿಶ್ವಾಸ ಕಳೆದ ಆರು ತಿಂಗಳಲ್ಲಿ ನಮ್ಮ ತಂಡಕ್ಕೆ ಬಂದಿದೆ. ಹೀಗಾಗಿ ಬರುವ ದಿನಗಳಲ್ಲಿ ಭದ್ರ ಭವಿಷ್ಯದ ಭರವಸೆಯ ಆಡಳಿತ ನೀಡುತ್ತೇವೆ.

ವಿಧಾನ ಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರು ತಮ್ಮ ಆರು ತಿಂಗಳ ಅವಧಿಯ ರಿಪೋರ್ಟ್ ಕಾರ್ಡನ್ನು ರಾಜ್ಯದ ಜನತೆಯ ಮುಂದಿಡುವ ಜೊತೆಯಲ್ಲಿ ಇಂಥದ್ದೊಂದು ಸಂಕಲ್ಪ ತೊಟ್ಟರು. ಕಠಿಣ ವಾತಾವರಣದ ನಡುವೆಯೂ ಹೊಸ ಯೋಜನೆಗಳನ್ನು ಜಾರಿ ಮಾಡಿ ಮನೆಮನ ಮುಟ್ಟಿದ್ದೇವೆ, ಹಲವು ಸವಾಲು ಮೆಟ್ಟಿ ನಿಂತಿದ್ದೇವೆ, ದಕ್ಷ ಆಡಳಿತ ಇನ್ನಷ್ಟು ವೇಗದಲ್ಲಿ ಮುಂದುವರಿಯಲಿದೆ, ಅದರ ಫಲ ಜನಾಶೀರ್ವಾದ ರೂಪದಲ್ಲಿ ಸಿಗಲಿದೆ ಎಂದು ಮುಖ್ಯಮಂತ್ರಿಯವರು ಆಶಯ ವ್ಯಕ್ತಪಡಿಸಿದರು. ಅತ್ಯಂತ ವಿಶ್ವಾಸ ಭರಿತ ಹಾವ–ಭಾವ, ವಾಗ್ಝರಿಯ ಹೇಳಿಕೆಗಳಿಂದ ಮುಂದಿನ ತಮ್ಮ ಆಡಳಿತ ಅವಧಿಯ ಕಾರ್ಯವೈಖರಿ ಹೇಗಿರುತ್ತದೆ ಎಂಬುದನ್ನು ಸೂಕ್ಷ್ಮವಾಗಿ ತೆರೆದಿಟ್ಟರು. ಇದು ವೇದಿಕೆಯ ಮೇಲಿದ್ದ ಸಂಪುಟ ಸಹೋದ್ಯೋಗಿಗಳು, ಎದುರು ಆಸೀನರಾಗಿದ್ದ ಇಲಾಖೆ ಮುಖ್ಯಸ್ಥ ಹಿರಿಯ ಅಧಿಕಾರಿಗಳಿಗೂ ತಟ್ಟಿದಂತ್ತಿತ್ತು. 'ನಾವು ತೆಗೆದುಕೊಳ್ಳುವ ಪ್ರತಿ ನಿರ್ಣಯಕ್ಕೂ ಸಾರ್ವತ್ರಿಕ ಹಿತವೇ ಕೇಂದ್ರ ಬಿಂದುವಾಗಿರುತ್ತದೆ. ಕಳೆದ ಆರು ತಿಂಗಳಲ್ಲಿ ಯಾವುದೇ ರೀತಿ ವೈಯುಕ್ತಿಕ ಹಿತಾಸಕ್ತಿಗೆ ಅವಕಾಶ ಕೊಟ್ಟಿಲ್ಲ. ಸಂಪುಟದಲ್ಲಿ ಚರ್ಚೆ ಮಾಡುತ್ತೇವೆ, ಭಿನ್ನಾಭಿಪ್ರಾಯ ಇರುತ್ತದೆ. ವಿಷಯ ಮಂಥನವಾಗಿ ಕೊನೆಯಲ್ಲಿ ಜನ ಹಿತಕ್ಕಾಗಿ ನಿರ್ಣಯ ತೆಗೆದುಕೊಂಡಿದ್ದೇವೆ' ಎಂದು ಮಾರ್ಮಿಕವಾಗಿ ಹೇಳಿದರು.

ಸಾಧನೆಯ ವಿವರಣೆ: ನಮ್ಮ ಸರ್ಕಾರದ ಇನ್ನೊಂದು ಗುಣಲಕ್ಷಣವೆಂದರೆ ಅಂತಃಕರಣ. ಎಂತಹ ಕಷ್ಟ ಬಂದರೂ ಮಾನವೀಯತೆಯ ಗುಣವನ್ನು ಸಚಿವ ಸಂಪುಟ ಮತ್ತು ಸರ್ಕಾರ ಬಿಟ್ಟುಕೊಟ್ಟಿಲ್ಲ. ನಾನು ಮುಖ್ಯಮಂತ್ರಿಯಾಗಿ ನಡೆಸಿದ ಮೊದಲ ಸಂಪುಟ ಸಭೆಯಲ್ಲಿ ಸಾಮಾಜಿಕ ಪಿಂಚಣಿ ಯೋಜನೆ ಫಲಾನುಭವಿಗಳಿಗೆ ರೂ.200–300 ಹೆಚ್ಚು ಮಾಡಲಾಯಿತು.

ಈ ಹಣ ಸಣ್ಣದೆನಿಸುತ್ತದೆ, ಆದರೂ, ಬಡವರಿಗೆ ನೆರವಾಗಿದೆ. 58 ಲಕ್ಷ ವೃದ್ಧರು, ಅಂಗವಿಕಲ ಬಂಧುಗಳಿಗೆ ನೆರವಾಗಿದ್ದೇವೆ. ಇದು ನಾವು ಅವರಿಗೆ ಕೊಟ್ಟಿರುವ ಆಶ್ರಯ, ಊರುಗೋಲು ಎಂದರು.

ಸೂಕ್ಷ್ಮತೆಯಿಂದ ಸರ್ಕಾರ ನಡೆಸಬೇಕಾಗುತ್ತದೆ. ರೈತರಿಗೆ ನಾವು ಎಷ್ಟು ಕೊಟ್ಟರೂ ಕಡಿಮೆಯೇ. ರೈತಾಪಿ ಯುವಕರಿಗೆ ವಿದ್ಯೆ ಹಾಗೂ ಉದ್ಯೋಗ ನೀಡಲು ರೈತ ವಿದ್ಯಾನಿಧಿ ಯೋಜನೆ ಜಾರಿ ಮಾಡಲಾಗಿದೆ. ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳಿಗೂ ಈ ಯೋಜನೆ ವಿಸ್ತರಿಸಲಾಗಿದ್ದು, 4.50 ಲಕ್ಷ ಮಕ್ಕಳು ರೈತ ವಿದ್ಯಾನಿಧಿಯ ಲಾಭ ಪಡೆದಿದ್ದಾರೆ. ಕಾರ್ಮಿಕರ ಮಕ್ಕಳಿಗೂ ವಿದ್ಯಾರ್ಥಿ ವೇತನ ನೀಡಲಾಗಿದ್ದು, 5 ಲಕ್ಷಕ್ಕೂ ಹೆಚ್ಚು ಮಕ್ಕಳು ಈ ಯೋಜನೆಯ ಲಾಭ ಪಡೆದಿದ್ದಾರೆ ಎಂದರು.

ಮಹಿಳೆಯರ ಸಬಲೀಕರಣಕ್ಕಾಗಿ 7500 ಸ್ತ್ರೀ ಶಕ್ತಿ ಸಂಘಕ್ಕೆ ತಲಾ ಒಂದು ಲಕ್ಷ ರೂ. ನಂತೆ ಒಟ್ಟು ರೂ.75 ಕೋಟಿಗಳ ಧನ ಸಹಾಯ ಒದಗಿಸಲಾಗಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ ರಚಿಸಲಾಗಿದೆ, ಕಾರ್ಮಿಕರ ಕಲ್ಯಾಣ ಯೋಜನೆಯಡಿ 89 ಸಾವಿರ ಕಟ್ಟಡ ಕಾರ್ಮಿಕರ ಮಕ್ಕಳಿಗೆ ರೂ.150 ಕೋಟಿ ವಿದ್ಯಾರ್ಥಿ ವೇತನ ವರ್ಗಾವಣೆ ಮಾಡಲಾಗಿದೆ. ನಾಗರೀಕ ಸ್ನೇಹಿ ಸೇವೆಗಳ ಯೋಜನೆಗಳಾದ ಗ್ರಾಮ ಒನ್ ಸೇವೆಯಲ್ಲಿ ಮಹತ್ತರ ಕ್ರಾಂತಿಯಾಗಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಹಣ ಮಂಜೂರು ಮಾಡಲಾಗಿದೆ. ಮನೆಮನೆಗೆ ಗಂಗೆ ರಾಜ್ಯದಲ್ಲಿ ಕಳೆದ 6 ತಿಂಗಳಲ್ಲಿ 11.27 ಲಕ್ಷ ಮನೆಗಳಿಗೆ ಹೊಸದಾಗಿ ನಲ್ಲಿ ನೀರು ಸಂಪರ್ಕ ವ್ಯವಸ್ಥೆ ಮಾಡಲಾಗಿದೆ ಎಂದು ವಿವರಣೆ ನೀಡಿದರು.

ಮುಖ್ಯಮಂತ್ರಿಯವರ ಮಾತಿನ ಮುಖ್ಯಾಂಶ:

- ಆರು ತಿಂಗಳ ಆಡಳಿತ ಉತ್ಸಾಹ ಕೊಟ್ಟಿದೆ. ಜನರಿಂದ ಸಾಕಷ್ಟು ನಿರೀಕ್ಷೆಯು ಇದೆ. ಅದಕ್ಕೆ ಚ್ಯುತಿ ಬಾರದಂತೆ ಕೆಲಸ ಮಾಡುತ್ತೇವೆ.
- ವಸ್ತುಸ್ಥಿತಿಯನ್ನು ಜನರ ಮುಂದಿಡುವ ಸಂದರ್ಭವಿದು. ಜನರ ಪರವಾಗಿ ಕೆಲಸ ಮಾಡುವ ಸರ್ಕಾರ ಬಂದಿದೆ ಎಂದು ಜನರು ಹರಸುತ್ತಾರೆ.
- ನಮ್ಮ ಗುರಿ ದೊಡ್ಡದು ಇದರೊಂದಿಗೆ ಸವಾಲುಗಳೂ ಇವೆ. ಅದರೆ ಸವಾಲು ಎದುರಿಸುವ ಆತ್ಮಸ್ಥೈರ್ಯವೂ ನಮಗಿದೆ. ಭವಿಷ್ಯದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಲಾಗಿದೆ.
- ನಮ್ಮದು ಸ್ಪಂದನಾಶೀಲ, ಸರ್ವವ್ಯಾಪಿ, ಸರ್ವಸ್ಪರ್ಶಿ ಸರ್ಕಾರ. ಜನತೆಯ ಹಿತ ಕಾಪಾಡುವುದೇ ನಮ್ಮ ಸರ್ಕಾರದ ಪ್ರಮುಖ ಉದ್ದೇಶ. ಜನ ಕಲ್ಯಾಣವೇ ನಮ್ಮ ಧ್ಯೇಯ.
- ಸದೃಢ ಕರ್ನಾಟಕ ಕಟ್ಟಲು 24 ಗಂಟೆಗಳ ಕಾಲ ಕೆಲಸ ಮಾಡುತ್ತೇವೆ. ಪ್ರತಿ ಹೆಜ್ಜೆಯನ್ನೂ ಆತ್ಮವಿಶ್ವಾಸದಿಂದ ಇಟ್ಟು ಜನರ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ಕೆಲಸ ಮಾಡುತ್ತೇವೆ.
- ದುಡಿಯುವ ವರ್ಗದಿಂದಲೇ ಆರ್ಥಿಕತೆಯ ಬೆಳವಣಿಗೆ ಸಾಧ್ಯ. ದುಡಿಮೆಯೇ ದೊಡ್ಡಪ್ಪ ಎಂಬುದು ಸರ್ಕಾರದ ಧ್ಯೇಯ.

ಆಧಾರ: ವಿಜಯ ವಾಣಿ, ದಿನಾಂಕ:29.01.2022.

43. ಮಹಾತ್ಮ ಗಾಂಧಿ ವಿಶ್ವದ ನಾಯಕರು

ಮಹಾತ್ಮ ಗಾಂಧೀಜಿಯವರ ಆದರ್ಶಗಳು ಸ್ವತಂತ್ರ ಹಾಗೂ ಗಣತಂತ್ರ ಭಾರತದ ಆಧಾರ ಸ್ತಂಭಗಳಾಗಿವೆ ಎಂದು ಮುಖ್ಯಮಂತ್ರಿಯವರು ಹೇಳಿದರು. ಹುತಾತ್ಮರ ದಿನಾಚರಣೆಯ ಅಂಗವಾಗಿ ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದ ನಂತರ ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ತಮ್ಮ ಪ್ರಾಣವನ್ನು ಬಲಿದಾನ ಮಾಡಿದ ದಿನವನ್ನು ಹುತಾತ್ಮರ ದಿನವನ್ನಾಗಿ ಆಚರಿಸುತ್ತೇವೆ ಎಂದರು.

ಮಹಾತ್ಮ ಗಾಂಧಿ ವಿಶ್ವದ ನಾಯಕರು. ಸತ್ಯ ಮತ್ತು ಅಹಿಂಸೆಯ ಪ್ರತಿಪಾದಕರು. ಸತ್ಯ ಅಹಿಂಸೆ ಮತ್ತು ಶಾಂತಿಯಿಂದಲೇ ಸ್ವಾತಂತ್ರ್ಯ ಪಡೆಯುವ ಛಲ ತೊಟ್ಟವರು, ಜೈಲು ವಾಸ, ಲಾಠಿ ಏಟು ಮುಂತಾದ ಹಲವಾರು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿಯೂ ತಮ್ಮ ಸತ್ಯ, ಅಹಿಂಸೆ ಸಿದ್ಧಾಂತವನ್ನು ಎಂದೂ ಬಿಟ್ಟುಕೊಡಲಿಲ್ಲ ಎಂದು ತಿಳಿಸಿದರು.

ನನ್ನ ಜೀವನವೇ ಒಂದು ಸಂದೇಶ ಎಂದ ಅವರು, ತಮ್ಮ ಆತ್ಮ ಚರಿತ್ರೆ ಸತ್ಯಾನ್ವೇಷಣೆಯ ಮಾತನ್ನುಹೇಳಲು ನೈತಿಕವಾಗಿ ಬಹಳ ದೊಡ್ಡ ಶಕ್ತಿ ಇರಬೇಕು. ಅಂಥ ವ್ಯಕ್ತಿಗಳು ಮಾತ್ರ ಇದನ್ನು

ಹೇಳಲು ಸಾಧ್ಯ. ಅವರ ಜೀವನ ಅತ್ಯಂತ ಪರಿಶುದ್ಧ ಹಾಗೂ ಸತ್ಯದಿಂದ ಕೂಡಿರುವಂಥದ್ದು. ರಾಷ್ಟ್ರಪಿತ ಗಾಂಧಿ ಹೀಗಾಗಿಯೇ ಅತ್ಯಂತ ಆದರ್ಶ ಪ್ರಾಯವಾಗಿದ್ದಾರೆ. ಅವರ ಬದುಕು ಮತ್ತು ವಿಚಾರಗಳು ನಮಗೆ ಸದಾ ದಾರಿದೀಪವಾಗಿದೆ ಎಂದರು.

ಆಧಾರ: ಉದಯವಾಣಿ, ದಿನಾಂಕ:31.01.2022.

44. ಸಂತ್ರಸ್ತ ಕುಟುಂಬಗಳ ಜೊತೆ ನಾವಿದ್ದೇವೆ

ಕರೊನದಿಂದ ಕುಟುಂಬಕ್ಕೆ ಆಸರೆಯಾಗಿದ್ದವರನ್ನು ಕಳೆದುಕೊಂಡು ಸಂಕಷ್ಟಕ್ಕೆ ಒಳಗಾದ ಸಂತ್ರಸ್ತ ಕುಟುಂಬಗಳ ಜೊತೆಗೆ ನಾವಿದ್ದೇವೆ ಎಂದು ತಿಳಿಸುವ ಉದ್ದೇಶದಿಂದ ಪರಿಹಾರ ಚೆಕ್ ವಿತರಣೆ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಕೆ.ಆರ್.ಪುರದ ಪ್ರಥಮ ದರ್ಜೆ ಕಾಲೇಜು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೋವಿಡ್‌ನಿಂದ ಮೃತಪಟ್ಟ 95 ಕುಟುಂಬಗಳಿಗೆ ಪರಿಹಾರ ಚೆಕ್ ವಿತರಣೆ, ರೂ.8.5 ಕೋಟಿ ವೆಚ್ಚದ ನೆಲಮಟ್ಟದ ಜಲ ಸಂಗ್ರಹಣಾಗಾರ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕರೋನಾ ಮೊದಲ ಮತ್ತು ಎರಡನೇ ಅಲೆಯಲ್ಲಿ ಕೆಲವರು ತಮ್ಮ ಕುಟುಂಬದ ಸದಸ್ಯರನ್ನು ಕಳೆದುಕೊಂಡು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಸಹಾಯದ ಮೂಲಕ ಸಾಂತ್ವನ ಹೇಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿರ್ಧರಿಸಿವೆ. ಚೆಕ್ ವಿತರಣೆ ಮಾನವೀಯತೆ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು.

ಜಲ ಸಂಗ್ರಹಣಾಗಾರ ಯೋಜನೆಯಿಂದ 9 ಬಡಾವಣೆಗಳಿಗೆ ನೀರನ್ನು ಒದಗಿಸಲಾಗುವುದು. ಜನರು ನೀರಿನ ಸದ್ಬಳಕೆ ಮಾಡಿಕೊಳ್ಳಬೇಕು. ಕೆ.ಆರ್.ಪುರದ ಸಮಗ್ರ ಅಭಿವೃದ್ಧಿಗೆ ಸಚಿವ ಬೈರತಿ ಬಸವರಾಜ ಹಲವು ಕೆಲಸಗಳನ್ನು ಮಾಡಿದ್ದಾರೆ. ಆ ಪೈಕಿ ಜಿ,ಎಲ್,ಆರ್ ಕೆಲಸವೂ ಒಂದಾಗಿದೆ ಜನಪರ ಕಾಳಜಿ ಮೂಲಕ ಜನರ ಸೇವಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಬಣ್ಣಿಸಿದರು.

ಸಚಿವ ಎಸ್.ಟಿ.ಸೋಮಶೇಖರ್, ವಿಧಾನಪರಿಷತ್ ಸದಸ್ಯ ಎಚ್.ಎಸ್.ಗೋಪಿನಾಥ್ ರೆಡ್ಡಿ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ಬಿಬಿಎಂಪಿ ಮಾಜಿ ಸದಸ್ಯರಾದ ಎಸ್.ಜಿ. ನಾಗರಾಜ್, ವಿ.ಸುರೇಶ್, ಜಯಪ್ರಕಾಶ್, ಎಂ.ಎನ್.ಶ್ರೀಕಾಂತ್, ಅಂತೋಣಿ ಸ್ವಾಮಿ ಮತ್ತಿತರರಿದ್ದರು.

ಸಂಕಷ್ಟದಲ್ಲಿದ್ದವರಿಗೆ ಸಹಾಯ:– ಕೋವಿಡ್‌ನಿಂದ ಮೃತಪಟ್ಟು ಸಂಕಷ್ಟಕ್ಕೆ ಸಿಲುಕಿದ್ದ ಕುಟುಂಬಗಳಿಗೆ ಕೆಲ ತಿಂಗಳ ಹಿಂದೆ ವೈಯುಕ್ತಿಕವಾಗಿ ರೂ.1.15 ಕೋಟಿ ಪರಿಹಾರ ವಿತರಣೆ ಮಾಡಲಾಗಿತ್ತು. ಮೊದಲ ಹಾಗೂ 2ನೇ ಅಲೆ ವೇಳೆ 1 ಲಕ್ಷ ಕುಟುಂಬಗಳಿಗೆ ಆಹಾರ ಪದಾರ್ಥಗಳ ಪ್ಯಾಕೆಟ್ ನೀಡಲಾಗಿತ್ತು ಎಂದು ನಗರಾಭಿವೃದ್ಧಿ ಸಚಿವ ಬಿ.ಎ.ಬಸವರಾಜ ತಿಳಿಸಿದರು. ಈಗ 7.50 ದಶಲಕ್ಷ ಲೀಟರ್ ಸಾಮರ್ಥ್ಯದ ಜಲ ಸಂಗ್ರಹಾಗಾರ ಲೋಕಾರ್ಪಣೆ ಮಾಡಲಾಗಿದೆ. 100 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ರೂ.30 ಕೋಟಿ ವೆಚ್ಚದಲ್ಲಿ ನಿರ್ಮಾಣ ಆಗುತ್ತಿರುವ ಆಸ್ಪತ್ರೆ ಮೇಲ್ದರ್ಜೆಗೇರಿಸಲು ಹೆಚ್ಚುವರಿ ರೂ.20 ಕೋಟಿ ನೀಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಾವು ಕಂಕಣಬದ್ಧವಾಗಿ ದುಡಿಯುತ್ತಿದ್ದೇವೆ ಎಂದರು.

ಆಧಾರ: ವಿಜಯವಾಣಿ, ದಿನಾಂಕ:01.02.2022.

45. ಇನ್ನಷ್ಟು ಕಾಲೇಜುಗಳಿಗೆ ವಿಸ್ತರಿಸಿದ ಹಿಜಾಬ್

ಉಡುಪಿ ಸರ್ಕಾರಿ ಕಾಲೇಜಿನಲ್ಲಿ ಹಿಜಾಬ್ ಧರಿಸಿಯೇ ಪಾಠ ಕೇಳಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಆರು ವಿದ್ಯಾರ್ಥಿನಿಯರು ನಡೆಸುತ್ತಿರುವ ಪ್ರತಿಭಟನೆಗೆ ತಿಂಗಳು ತುಂಬುತ್ತಿರುವ ನಡುವೆಯೇ ಅದು ಕುಂದಾಪುರದ ಕೆಲವು ಕಾಲೇಜುಗಳಿಗೂ ವಿಸ್ತರಿಸಿದೆ.

ಕುಂದಾಪುರದ ಜೂನಿಯರ್ ಕಾಲೇಜಿನಲ್ಲಿ ವಸ್ತ್ರಸಂಹಿತೆ ಪಾಲನೆ ಕಡ್ಡಾಯವೆಂದು ಸ್ಪಷ್ಟಪಡಿಸಿದ್ದರೂ 22 ವಿದ್ಯಾರ್ಥಿನಿಯರು ಮತ್ತೆ ಹಿಜಾಬ್ ಧರಿಸಿಯೇ ಬಂದಾಗ ಕಾಲೇಜಿನ ಪ್ರಾಂಶುಪಾಲರು ಗೇಟಿನಲ್ಲೇ ತಡೆದಿದ್ದಾರೆ. ಭಾರಿ ಸಂಖ್ಯೆಯ ವಿದ್ಯಾರ್ಥಿಗಳಿರುವ ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿಗೆ ಹಿಜಾಬ್ ಧರಿಸಿಕೊಂಡ ವಿದ್ಯಾರ್ಥಿನಿಯರು ಮತ್ತು ಕೇಸರಿ ಧರಿಸಿದವರಿಬ್ಬರಿಗೂ ತರಗತಿ ಪ್ರವೇಶ ನಿರ್ಬಂಧಿಸಲಾಯಿತು. ಎರಡೂ ಕಡೆಗಳಲ್ಲಿ ತಮಗೆ ಹಿಜಾಬ್ ಧರಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದರು.

ಡಿಡಿಪಿಐ ಭೇಟಿ: ಹಿಜಾಬ್ ವಿವಾದ ಕಂಡುಬಂದಿರುವ ಕಾಲೇಜುಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾರುತಿ ಭೇಟಿ ನೀಡಿ ಪ್ರತಿಭಟನಾ ನಿರತ ವಿದ್ಯಾರ್ಥಿಗಳ ಮನವೊಲಿಕೆಗೆ ಪ್ರಯತ್ನ ನಡೆಸಿದರಾದರೂ ಫಲ ನೀಡಿಲ್ಲ. ಹಿಜಾಬ್ ಧರಿಸುವುದು ನಮ್ಮ ಸಂಪ್ರದಾಯ. ನಮಗೆ ಹಿಂದಿನಂತೆ ತರಗತಿ ಪ್ರವೇಶಿಸಲು ಅನುಮತಿ ನೀಡಿ ಇಲ್ಲವಾದಲ್ಲಿ ಪ್ರತಿಭಟನೆ ಮುಂದುವರಿಸುವುದಾಗಿ ಎಚ್ಚರಿಸಿದರು.

ಬಿಗು ಬಂದೋಬಸ್ತ್: ಇಲ್ಲಿನ ಕಾಲೇಜುಗಳಲ್ಲಿ ಭುಗಿಲೆದ್ದಿರುವ ಹಿಜಾಬ್ ವಿವಾದ ಮತ್ತು ವಿದ್ಯಾರ್ಥಿಯೊಬ್ಬನ ಮೇಲೆ ಮುಸ್ಲಿಂ ಯುವಕರು ನಡೆಸಿದ್ದರೆನ್ನಲಾದ ಹಲ್ಲೆ ಪ್ರಕರಣ ಹಿನ್ನೆಲೆಯಲ್ಲಿ ಕುಂದಾಪುರ ಉಪವಿಭಾಗೀಯ ಪೋಲೀಸ್ ಠಾಣೆ ವ್ಯಾಪ್ತಿಯ ಸೂಕ್ಷ್ಮ ಪ್ರದೇಶಗಳಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿದೆ.

ವಿದ್ಯಾರ್ಥಿಯ ಮೇಲೆ ಹಲ್ಲೆ: ಹಿಜಾಬ್ ವಿವಾದ ಭುಗಿಲೆದ್ದ ನಡುವೆಯೇ ತಾಲ್ಲೂಕಿನ ಬಿದ್ಕಲ್ ಕಟ್ಟೆ ಎಂಬಲ್ಲಿ ಬಸ್ಸಿನಲ್ಲಿ ಕಾಲೇಜಿಗೆ ಬರುತ್ತಿದ್ದ ವಿದ್ಯಾರ್ಥಿ ಶಶಾಂಕ ಎಂಬಾತನ ಮೇಲೆ ಹಲ್ಲೆ ನಡೆದಿದೆ. ಪರಿಚಯದ ಮುಸ್ಲಿಂ ವಿದ್ಯಾರ್ಥಿನಿಯೊಂದಿಗೆ ಬಸ್‌ನಲ್ಲಿ ಮಾತನಾಡಿದ್ದಾನೆ ಎಂಬ ಕಾರಣಕ್ಕೆ ಬಸ್ಸಿನಲ್ಲಿದ್ದ ಮೂವರು ಮುಸ್ಲಿಂ ಯುವಕರು ಹಲ್ಲೆ ನಡೆಸಿದ್ದಾರೆ. ಗಾಯಾಳು ವಿದ್ಯಾರ್ಥಿ ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ದಾಖಲುಗೊಂಡಿದ್ದಾನೆ. ಘಟನೆಯಿಂದ ಕುಂದಾಪುರದಲ್ಲಿ ಕೆಲ ಹೊತ್ತು ಬಿಗುವಿನ ವಾತವರಣ ಮೂಡಿಸಿದ್ದು ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಎಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

22 ವಿದ್ಯಾರ್ಥಿನಿಯರಿಂದ ಆಕ್ರೋಶ: ಕುಂದಾಪುರದ ಜೂನಿಯರ್ ಕಾಲೇಜಿನಲ್ಲಿ 28 ಮುಸ್ಲಿಂ ವಿದ್ಯಾರ್ಥಿನಿಯರಿದ್ದು ಅವರಲ್ಲಿ ನಾಲ್ವರು ಬಹು ಸಮಯದಿಂದ ಗೈರಾಗಿದ್ದಾರೆ. 24 ಮಂದಿಯೂ ಈ ಹಿಂದೆ ಹಿಜಾಬ್ ಧರಿಸಿ ಬರುತ್ತಿದ್ದರು. ಸರ್ಕಾರದ ಆದೇಶದಂತೆ ಈ ಕಾಲೇಜಿನಲ್ಲಿ ವಸ್ತ್ರ ಸಂಹಿತೆಯನ್ನು ಕಡ್ಡಾಯಗೊಳಿಸಿ, ಹಿಜಾಬ್ ಧರಿಸದಂತೆ ಸೂಚಿಸಲಾಗಿತ್ತು. ಹಿಜಾಬ್‌ಗೆ ಪ್ರತಿಯಾಗಿ ಕೆಲವು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದಾಗ ಘರ್ಷಣೆಯ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಹೀಗಾಗಿ ಕಾಲೇಜು ಆಡಳಿತ ಮಂಡಳಿ ಯಾವ ಕಾರಣಕ್ಕೂ ಇನ್ನು ಹಿಜಾಬ್‌ಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿತು. 24 ವಿದ್ಯಾರ್ಥಿನಿಯರ ಪೈಕಿ 22 ಮಂದಿ ಹಿಜಾಬ್ ಧರಿಸಿ ಬಂದಾಗ ಸ್ವಯಂ ಕಾಲೇಜಿನ ಪ್ರಾಂಶುಪಾಲ ರಾಮಕೃಷ್ಣ ಬಿ.ಜಿ ಅವರೇ ಗೇಟಿನಲ್ಲೇ ನಿಂತು ತಡೆದರು. ಅಸಮಾಧಾನಗೊಂಡ ವಿದ್ಯಾರ್ಥಿಗಳು ಕಾಲೇಜಿನ ಗೇಟ್‌ನಲ್ಲಿ ಸಂಜೆವರೆಗೂ ಪ್ರತಿಭಟನೆ ನಡೆಸಿದರು.

ಕಾಲೇಜಲ್ಲಿ ಸಮವಸ್ತ್ರವೇ ಕಡ್ಡಾಯ: ಶಿಕ್ಷಣ ಸಂಸ್ಥೆಗಳಲ್ಲಿ ವಿವಾದ ಬೇಡ. ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿರುವ ಸಮವಸ್ತ್ರ ಹೊರತುಪಡಿಸಿ ಕೇಸರಿ ಶಾಲು ಆಗಲಿ, ಹಿಜಾಬ್ ಆಗಲಿ ಧರಿಸಬಾರದು. ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ಕಡ್ಡಾಯವೇ ಹೊರತು ಬೇರೇನೂ ಅಲ್ಲ ಎಂದು ಸಚಿವ ಅರಗ ಜ್ಞಾನೇಂದ್ರ ಹೇಳಿದರು.

"ಶಿಕ್ಷಣ ಸಂಸ್ಥೆಗಳಲ್ಲಿ ಮತೀಯತೆ ಬಿಟ್ಟು ವಿಶಾಲ ಮನೋಭಾವವಿರಬೇಕು. ಶಿಕ್ಷಣ ಸಂಸ್ಥೆಯಲ್ಲಿ ಧರ್ಮ, ಜಾತಿ ಮೀರಿ ಎಲ್ಲರೂ ಒಂದೇ ಎಂಬ ಭಾವನೆ, ಭಾರತ ಮಾತೆಯ ಮಕ್ಕಳು ಎಂಬ ರಾಷ್ಟ್ರ ಪ್ರೇಮ ಇರಬೇಕು" ಎಂದು ತಿಳಿಸಿದರು.

ಪೂಜೆ, ಧಾರ್ಮಿಕ ಕಾರ್ಯಗಳು ದೇವಾಲಯ, ಮಸೀದಿಗಳಲ್ಲಿರಲಿ. ಶಾಲೆಗಳಲ್ಲಿ ದೇಶದ ಏಕತೆ, ಸಮಗ್ರತೆ ಬಗ್ಗೆ ಸಂಸ್ಕಾರವಿರಬೇಕು. ಮತೀಯ ಸಂಘಟನೆಗಳ ಬಗ್ಗೆ ಗಮನ ಹರಿಸಲು ಪೊಲೀಸರಿಗೆ ಸೂಚಿಸಲಾಗಿದ್ದು, ಏಕತೆಗೆ ಭಂಗ ತರುವ ಶಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹೈಕೋರ್ಟ್‌ನಲ್ಲಿ 8 ಕ್ಕೆ ವಿಚಾರಣೆ: ಉಡುಪಿ ಸರ್ಕಾರಿ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಲು ನಿರ್ಬಂಧ ವಿಧಿಸಿರುವುದನ್ನು ಪ್ರಶ್ನಿಸಿ ವಿದ್ಯಾರ್ಥಿನಿ ಹಾಗೂ ಅವರ ಪೋಷಕರು ಸಲ್ಲಿಸಿರುವ ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆ ಹೈಕೋರ್ಟ್‌ನಲ್ಲಿ ಫೆಬ್ರವರಿ 8 ರಂದು ನಡೆಯಲಿದೆ.

ವಿದ್ಯಾರ್ಥಿನಿ ರೇಷ್ಮಾ ಫಾರೂಕ್ ಅವರ ತಾಯಿ ರಹ್ಮತ ಫಾರೂಕ್ ಹಾಗೂ ಆಯೇಷಾ ಹಾಜಿತಾ ಅಲ್ಮಾಸ್ ಅವರ ತಾಯಿ ಸಾದಿಯಾ ಬಾನು ಸೇರಿ ಐವರು ವಿದ್ಯಾರ್ಥಿನಿಯರ ಪೋಷಕರು ಸಲ್ಲಿಸಿರುವ ಪ್ರತ್ಯೇಕ ಎರಡು ಅರ್ಜಿಗಳು ನ್ಯಾಯಾಧೀಶರಾದ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕ ಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದವು.

ಸರ್ಕಾರಿ ವಕೀಲರು, "ಈ ಅರ್ಜಿಗಳ ವಿಚಾರಣೆಯಲ್ಲಿ ಸ್ವತಃ ಅಡ್ವೋಕೇಟ್ ಜನರಲ್‌ವಾದ ಮಂಡಿಸಬೇಕಾಗಿದೆ. ಆದ್ದರಿಂದ ಕಾಲಾವಕಾಶ ಬೇಕು," ಎಂದು ಮನವಿ ಮಾಡಿದರು. ಅದಕ್ಕೆ ಆಕ್ಷೇಪ ಎತ್ತಿದ ಅರ್ಜಿದಾರರ ಪರ ವಕೀಲ ಅರ್ನವ್ ಬಾಗಲವಾ, "ವಿದ್ಯಾರ್ಥಿನಿಯರಿಗೆ ತರಗತಿಗೆ ಸೇರಿಸುತ್ತಿಲ್ಲ. ಹಾಗಾಗಿ ಅವರ ಕಲಿಕೆಗೆ ತೊಂದರೆ ಆಗುತ್ತಿದೆ. ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸಬೇಕು," ಎಂದು ಮನವಿ ಮಾಡಿದರು. ಕೊನೆಗೆ ಪೀಠ, ಫೆಬ್ರವರಿ 8 ರಂದು ಅರ್ಜಿಗಳ ವಿಚಾರಣೆ ನಡೆಸುವುದಾಗಿ ಹೇಳಿ ವಿಚಾರಣೆ ಮುಂದೂಡಿತು.

ಆಧಾರ: ವಿಜಯ ಕರ್ನಾಟಕ, ದಿನಾಂಕ:04.02.2022.

46. ಪಂಚ ನದಿಗಳ ಜೋಡಣೆ ಪ್ರಸ್ತಾಪದ ಬಗ್ಗೆ ರಾಜ್ಯದಲ್ಲಿ ಆತಂಕ

ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪವಾಗಿರುವ ಪಂಚ ನದಿಗಳ ಜೋಡಣೆ ಯೋಜನೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಲಿದ್ದು, ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಚರ್ಚಿಸಲು ಮುಖ್ಯಮಂತ್ರಿಯವರು ಮುಂದಾಗಿದ್ದಾರೆ. ಹಾಗೆಯೇ ಯೋಜನೆ ಆರಂಭಕ್ಕೂ ಮುನ್ನವೇ ಇದರಲ್ಲಿ ಕರ್ನಾಟಕಕ್ಕೆ ಸಿಗುವ ಪಾಲೇನು ಎಂಬ ಬಗ್ಗೆ ಖಚಿತ ಪಡಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಕೇಳಲಿದ್ದಾರೆ.

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಪೆನಿನ್ಸುಲಾರ್ ನದಿಗಳ ಜೋಡಣೆ ಬಗ್ಗೆ ಘೋಷಣೆ ಮಾಡಿದ್ರು. ಈ ಸಂದರ್ಭದಲ್ಲಿ ಐದು ದಿನಗಳ ಜೋಡಣೆ ಬಗ್ಗೆ ಪ್ರಸ್ತಾಪವಾಗಿದ್ದು, ಇದರಲ್ಲಿ ಕರ್ನಾಟಕವನ್ನು ಸಂಪೂರ್ಣವಾಗಿ ಹೊರಗಿಡಲಾಗಿದೆ. ರಾಜ್ಯದ ಕಾವೇರಿ ಮತ್ತು ಕೃಷ್ಣಾ ನದಿಯ ನೀರನ್ನು ಬಳಸಿಕೊಳ್ಳಲಿದ್ದರೂ, ರಾಜ್ಯಕ್ಕೆ ಒಂದೇ ಒಂದು ಟಿಎಂಸಿ ನೀರು ಸಿಗದೇ ಇರುವುದು ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ.

ಬಜೆಟ್‌ನಲ್ಲಿ ಈ ಯೋಜನೆ ಘೋಷಿಸುವ ಮುನ್ನ ಕರ್ನಾಟಕವೂ ಸೇರಿ ಎಲ್ಲ ರಾಜ್ಯಗಳ ಜೊತೆ ಚರ್ಚಿಸಬೇಕಾಗಿತ್ತು ಎಂಬುದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಆಕ್ಷೇಪ. ರಾಜ್ಯ ಸರ್ಕಾರವೂ ಇದೇ ಅಭಿಪ್ರಾಯ ಹೊಂದಿದ್ದು, ಮುಖ್ಯಮಂತ್ರಿಯವರು ದೆಹಲಿಗೆ ಭೇಟಿ ನೀಡಲಿದ್ದು, ಕೇಂದ್ರದ ಜೊತೆ ಮಾತುಕತೆ ನಡೆಸುವ ಸಾಧ್ಯತೆ ಇದೆ. ಈಗಾಗಲೇ ಆಗಿರುವ ಡಿಪಿಆರ್ ಅನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಲಿದ್ದಾರೆ ಎಂದು ಹೇಳಲಾಗಿದೆ. ಇನ್ನೊಂದೆಡೆ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು, ನಮ್ಮ ಪಾಲಿನ ನೀರು ಸಿಗದೇ ಹೋದರೆ ಯೋಜನೆಗೆ ಒಪ್ಪಿಗೆ ನೀಡುವುದಿಲ್ಲ ಎಂದಿದ್ದಾರೆ.

ಸಿದ್ದು ಎಚ್ಚರಿಕೆ : ರಾಜ್ಯಗಳ ಸಮ್ಮತಿ ಪಡೆಯದೆ ಈ ಯೋಜನೆ ಆರಂಭಿಸಿದರೆ ಮತ್ತೆ ಸಂಘರ್ಷ ಉಂಟಾಗಬಹುದು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಈ ಸಂಬಂಧ ಪತ್ರಿಕಾಗೋಷ್ಠಿ ನಡೆಸಿದ ಅವರು, ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಸರ್ವಪಕ್ಷಗಳ ಸಭೆ ಕರೆದು ಯಾವ ನದಿಯಿಂದ ಎಷ್ಟು ನೀರು ಸಿಗುತ್ತದೆ, ಯಾವ ರಾಜ್ಯಗಳಿಗೆ ಎಷ್ಟು ನೀರು ಲಭ್ಯವಾಗುತ್ತದೆ ಎಂಬ ಮಾಹಿತಿ ನೀಡಬೇಕು ಎಂದು ಆಗ್ರಹಿಸಿದರು.

ಎರಡು ಹಂತದಲ್ಲಿ ಯೋಜನೆ ಜಾರಿ ಮಾಡ್ತೇವೆ, ಮೊದಲ ಹಂತದಲ್ಲಿ ಕರ್ನಾಟಕಕ್ಕೆ ಅನುಕೂಲ ಆಗಲ್ಲ, 2ನೇ ಹಂತದಲ್ಲಿ ಸ್ವಲ್ಪ ಅನುಕೂಲ ಆಗಬಹುದು ಎಂದ ಕೇಂದ್ರ ಸರ್ಕಾರ ಹೇಳುತ್ತದೆ. ನನ್ನ ಪಕ್ರಾರ ಶೇ.90 ತಮಿಳುನಾಡಿಗೆ ಅನುಕೂಲವಾಗುತ್ತದೆ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಜೊತೆ ಚರ್ಚಿಸದೇ ಕೇಂದ್ರದ ನಿರ್ಧಾರ: ಅಂತರರಾಜ್ಯ ಜಲ ವಿವಾದದ ವಸ್ತು ಸ್ಥಿತಿ ಹಾಗೂ ಸುತ್ತಲಿನ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿರುವ ಎಲ್ಲ ನದಿಗಳ ಸ್ಥಿತಿ, ನದಿ ಜೋಡಣೆಯಿಂದ ಕರ್ನಾಟಕದ ಮೇಲೆ ಆಗುವ ಪರಿಣಾಮ ಕುರಿತು ಸಮಗ್ರ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ತಿಳಿದು ಬಂದಿದೆ. ಕೇಂದ್ರ ಸರ್ಕಾರ ರಾಜ್ಯಗಳ ಜೊತೆ ಚರ್ಚಿಸದೇ ಈ ನಿರ್ಧಾರ ಕೈಗೊಂಡಿರುವುದು ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ವಿಚಾರದಲ್ಲಿ ಗಂಭೀರ ಯೋಚನೆ ಮಾಡುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ಕೃಷ್ಣಾ–ಪೆನ್ನಾರ್ ಹಾಗೂ ಪೆನ್ನಾರ್–ಕಾವೇರಿ ನದಿ ಜೋಡಣೆ ಕುರಿತು ರಾಜ್ಯದ ಜೊತೆ ಮಾತನಾಡಿಲ್ಲ. ಆದರೆ, ಕೇಂದ್ರ ಸರ್ಕಾರ ಈ ಬಗ್ಗೆ ಪಕ್ಕದ ರಾಜ್ಯಗಳಾದ ಆಂಧ್ರ, ತಮಿಳುನಾಡು, ಕೇರಳದಿಂದ ಮಾಹಿತಿ ಪಡೆದು ಯೋಜನೆ ಘೋಷಣೆ ಮಾಡಿದೆ ಎಂಬ ಮಾಹಿತಿ ರಾಜ್ಯ ಸರ್ಕಾರಕ್ಕೆ ಲಭ್ಯವಾಗಿದೆ ಎಂದು ತಿಳಿದು ಬಂದಿದೆ.

ಆಧಾರ: ಉದಯವಾಣಿ, ದಿನಾಂಕ:05.02.2022.

47. ಗ್ರಾಮ ಒನ್‌ನಲ್ಲೇ ಪಡಿತರ ಕಾರ್ಡ್ ವಿತರಣೆ

ರಾಜ್ಯದಲ್ಲಿ ಸುಮಾರು ನಾಲ್ಕು ಲಕ್ಷ ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ಗಳಿಗೆ ಮಂಜೂರಾತಿ ನೀಡಲಾಗಿದ್ದು, ಇವುಗಳನ್ನು 'ಗ್ರಾಮ್ ಒನ್' ಕೇಂದ್ರಗಳ ಮೂಲಕ ವಿತರಿಸಲಾಗುವುದು ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಗ್ರಾಮ ಒನ್' ಯೋಜನೆ ಕುರಿತು ಗೃಹ ಕಚೇರಿ ಕೃಷ್ಣಾದಲ್ಲಿ ಜಿಲ್ಲಾಡಳಿತ ಮತ್ತು ಗ್ರಾಮ ಒನ್ ಕಂಪ್ಯೂಟರ್ ಆಪರೇಟ್‌ಗಳೊಂದಿಗೆ ನಡೆದ ವಿಡಿಯೋ ಸಂವಾದದಲ್ಲಿ ಮಾತನಾಡಿದ ಅವರು, ಸರ್ಕಾರ ತನ್ನ ಅಧಿಕಾರ ಮತ್ತು ಜವಬ್ದಾರಿಗಳನ್ನು ಗ್ರಾಮ ಒನ್ ಆಪರೇಟರ್ಸ್‌ಗಳಿಗೆ ವಹಿಸಿದೆ. ಹಾಗಾಗಿ ಜನರ ಬಳಿ ಸೌಜನ್ಯದಿಂದ ವರ್ತಿಸಿ, ಅವರ ಸಮಸ್ಯೆಗಳನ್ನು ಆಲಿಸಿ, ಪರಿಹಾರವನ್ನು ನೀಡಬೇಕು ಎಂದು ಸಲಹೆ ನೀಡಿದರು.

ಜನರು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಿ ತ್ವರಿತವಾಗಿ ಸರ್ಕಾರದ ಸೇವೆಯನ್ನು ನೀಡಬೇಕು. ಮಾಹಿತಿ ಕೊರತೆ ಇದ್ದರೆ ಸ್ಪಷ್ಟೀಕರಣ ನೀಡಬೇಕು, ಪಿಡಿಒ, ತಹಶೀಲ್ದಾರ್‌ಗಳು ಸಿಬ್ಬಂದಿಗಳೊಂದಿಗೆ ಸೌಹಾರ್ದತೆಯಿಂದ ಇರಬೇಕು. ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಮೀರಿದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಸೇವೆಗಳನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಮಾಡುವ ಅರಿವು ಇರಬೇಕು ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ:06.02.2022.

48. ನಿಗದಿತ ಸಮವಸ್ತ್ರ ಕಡ್ಡಾಯ

ಪದವಿ ಪೂರ್ವ ಕಾಲೇಜುಗಳಲ್ಲಿ ಭುಗಿಲೆದ್ದಿರುವ ಹಿಜಾಬ್ ಮತ್ತು ಕೇಸರಿ ಶಾಲು ವಿವಾದಕ್ಕೆ ತಾತ್ಕಾಲಿಕ ತೆರೆ ಎಳೆಯಲು ಮುಂದಾಗಿರುವ ರಾಜ್ಯ ಸರ್ಕಾರ "ವಿದ್ಯಾರ್ಥಿಗಳು ಕಾಲೇಜು ಅಭಿವೃದ್ಧಿ ಸಮಿತಿ (ಸಿಡಿಸಿ) ಅಥವಾ ಕಾಲೇಜು ಆಡಳಿತ ಮಂಡಳಿಯ ಮೇಲ್ವಿಚಾರಣಾ ಸಮಿತಿ ನಿರ್ಧರಿಸಿರುವ ಸಮವಸ್ತ್ರಧರಿಸಬೇಕು," ಎಂದು ಆದೇಶ ಹೊರಡಿಸಿದೆ.

"ಒಂದು ವೇಳೆ ಕಾಲೇಜು ಆಡಳಿತ ಮಂಡಳಿ ಸಮವಸ್ತ್ರ ನಿಗದಿಪಡಿಸದೆ ಇದ್ದಲ್ಲಿ, ಸಮಾನತೆ ಮತ್ತು ಐಕ್ಯತೆಯನ್ನು ಕಾಪಾಡಿಕೊಂಡು ಹಾಗೂ ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಭಂಗ ಬರದಂತೆ ಉಡುಪುಗಳನ್ನು ಧರಿಸಬೇಕು," ಎಂದು ಶಿಕ್ಷಣ ಇಲಾಖೆ (ಪದವಿ ಪೂರ್ವ) ಅಧೀನ ಕಾರ್ಯದರ್ಶಿ ಎಸ್.ಎನ್.ಪದ್ಮಿನಿ ಆದೇಶದಲ್ಲಿ ತಿಳಿಸಿದ್ದಾರೆ.

"ಸುಪ್ರೀಂ ಕೋರ್ಟ್ ಮತ್ತು ನಾನಾ ರಾಜ್ಯಗಳ ಹೈಕೋರ್ಟ್‌ಗಳು ನೀಡಿರುವ ತೀರ್ಪುಗಳ ಅನ್ವಯ ಶಿರವಸ್ತ್ರ (ಹೆಡ್ ಸ್ಕಾರ್ಫ್)ಹಾಕಿಕೊಂಡು ಅಥವಾ ತಲೆಯನ್ನು ಮುಚ್ಚಿಕೊಂಡು ಶಾಲೆಗೆ ಬರದಂತೆ ತಡೆಯುವುದು ಸಂವಿಧಾನದ ಉಲ್ಲಂಘನೆ ಅಲ್ಲ. ಆದ್ದರಿಂದ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಸರ್ಕಾರ ನಿಗದಿಪಡಿಸಿರುವ ಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸಬೇಕು," ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ. ಹಿಜಾಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ವಿದ್ಯಾರ್ಥಿನಿಯರು ಹೈಕೋರ್ಟ್ ಮೆಟ್ಟಿಲೇರಿದ್ದು ವಿಚಾರಣೆ ಆರಂಭಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಈ ಆದೇಶ ಮಹತ್ವದ್ದಾಗಿದೆ.

ನ್ಯಾಯಾಲಯಗಳ ಆದೇಶ ಪ್ರಸ್ತಾಪ: ವೈಯುಕ್ತಿಕ ವಸ್ತ್ರ ಸಂಹಿತೆಗಿಂತ ಏಕರೂಪ ವಸ್ತ್ರ ಸಂಹಿತೆಗೆ ಒತ್ತು ನೀಡುವ ಸಂಬಂಧ ಸುಪ್ರೀಂ ಕೋರ್ಟ್ ಸೇರಿದಂತೆ ನಾನಾ ರಾಜ್ಯಗಳ ಹೈಕೋರ್ಟ್ ನೀಡಿರುವ ತೀರ್ಪುಗಳನ್ನು ಸರ್ಕಾರ ಪ್ರಸ್ತಾಪಿಸಿದೆ.

ಬಿಹಾರದ ಆಶಾ ರೆಂಜನ್ ಪ್ರಕರಣದಲ್ಲಿ "ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳ ನಡುವಿನ ಉತ್ತಮ ಬಾಂಧವ್ಯದ ದೃಷ್ಟಿಯಿಂದ ವೈಯುಕ್ತಿಕ ಹಿತಾಸಕ್ತಿಗಿಂತ ಸಾರ್ವಜನಿಕ ಹಿತಾಸಕ್ತಿಗೆ ಒತ್ತು ನೀಡಬೇಕು," ಎಂಬ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಕೇರಳ ಹೈಕೋರ್ಟ್ ಸಹ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಉಲ್ಲೇಖಿಸಿರುವುದನ್ನು ಆದೇಶದಲ್ಲಿ ವಿವರಿಸಲಾಗಿದೆ.

ಫಾತಿಮಾ ಸೈಯದ್ ವಿರುದ್ಧ ಭಾರತ್ ಎಜುಕೇಷನ್ ಸೊಸೈಟಿ ಪ್ರಕರಣದಲ್ಲಿ ಶಾಲೆಯ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಶಿರವಸ್ತ್ರ ಹಾಕಿಕೊಂಡು ಅಥವಾ ತಲೆಯನ್ನು ಮುಚ್ಚಿಕೊಂಡು ಶಾಲೆಗೆ ಬರದಂತೆ ನಿರ್ದೇಶಿಸುವುದು ಸಂವಿಧಾನದ ಅನುಚ್ಛೇಧ 25ರ ಉಲ್ಲಂಘನೆಯಲ್ಲ ಎಂದು ಬಾಂಬೆ ಹೈಕೋರ್ಟ್ ತೀರ್ಪು ನೀಡಿದೆ. ಕಮಲಮ್ಮ ವಿರುದ್ಧ ಡಾ.ಎಂ.ಜಿ.ಆರ್.ಮೆಡಿಕಲ್ ವಿಶ್ವವಿದ್ಯಾಲಯ ಪ್ರಕರಣಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯ ಮಾರ್ಪಾಡು ಮಾಡಿ ನಿಗದಿಪಡಿಸಿದ್ದ ವಸ್ತ್ರ ಸಂಹಿತೆಯ ನಿರ್ಧಾರವನ್ನು ಮದ್ರಾಸ್ ಹೈಕೋರ್ಟ್ ಎತ್ತಿ ಹಿಡಿದಿರುವುದನ್ನು ಸಹ ತನ್ನ ಆದೇಶದಲ್ಲಿ ಸರ್ಕಾರ ಉಲ್ಲೇಖಿಸಿದೆ.

ಆದೇಶದ ವಿವರ ಏನು?

- ರಾಜ್ಯ ಸರ್ಕಾರ ಜಾರಿಗೆ ತಂದಿರುವ 1983 ರ ಶಿಕ್ಷಣ ಕಾಯಿದೆ (1–1995)ಕಲಂ 7(2)(5) ರ ಅನ್ವಯ ರಾಜ್ಯದ ಎಲ್ಲಾ ಶಾಲೆಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಒಂದೇ ಕುಟುಂಬದ ರೀತಿಯಲ್ಲಿ ನಡೆದುಕೊಳ್ಳಬೇಕು. ಕಾಯಿದೆಯ ಕಲಂ–133ರ ಅಡಿಯಲ್ಲಿ ಶಾಲೆ ಮತ್ತು ಕಾಲೇಜುಗಳಿಗೆ ಈ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡುವ ಅಧಿಕಾರ ಸರ್ಕಾರಕ್ಕಿದೆ.

- ಪಿಯು ಶಿಕ್ಷಣವು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖ ಘಟ್ಟ ಸರ್ಕಾರ ನೀಡುವು ಸುಚನೆಗೆ ಅನುಗುಣವಾಗಿ ಮತ್ತು ಬಿಡುಗಡೆ ಮಾಡುವ ಅನುದಾನವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದು, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಮಿತಿಯ ನಿರ್ಣಯಗಳ ಪ್ರಕಾರ ಕಾರ್ಯ ನಿರ್ವಹಿಸಬೇಕು.

- ರಾಜ್ಯದ ಎಲ್ಲ ಶಾಲೆ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಏಕರೂಪ ಕಲಿಕಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಆದರೆ ಕೆಲವು ವಿದ್ಯಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಧರ್ಮದ ಅನುಸಾರ ಆಚರಣೆಗಳನ್ನು ಪಾಲಿಸುತ್ತಿರುವುದು ಕಂಡುಬರುತ್ತಿರುವುದನ್ನು ಶಿಕ್ಷಣ ಇಲಾಖೆ ಗಮನಿಸಿದೆ.

ಆಧಾರ: ವಿಜಯಕರ್ನಾಟಕ, ದಿನಾಂಕ:06.02.2022.

49. ಕೆಪಿಎಸ್‌ಸಿ: ಅಕ್ರಮ 'ಸಕ್ರಮ' ಕ್ಕೆ ಮಸೂದೆ

ಹೈಕೋರ್ಟ್ ರದ್ದುಪಡಿಸಿದ್ದ 2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಪಟ್ಟಿಯನ್ನು ಊರ್ಜಿತಗೊಳಿಸಿ, ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ನಿರ್ಧರಿಸಿದೆ. ಈ ಉದ್ದೇಶದಿಂದ ರಾಜ್ಯ ಸರ್ಕಾರ, 'ಕರ್ನಾಟಕ ನಾಗರಿಕ ಸೇವೆಗಳು (ಆಯ್ಕೆಯ ಊರ್ಜಿತಗೊಳಿಸುವಿಕೆ ಮತ್ತು 2011 ಗೆಜೆಟೆಡ್ ಪ್ರೊಬೇಷನರಿಗಳ ನೇಮಕಾತಿ) ಮಸೂದೆ–2022' ಸಿದ್ಧಪಡಿಸಿದೆ.

ಆ ಮೂಲಕ, ಅಕ್ರಮವಾಗಿ ನೇಮಕಗೊಂಡವರೆಂದು ಸಿಐಡಿ ತನಿಖೆಯಲ್ಲಿ ಗುರುತಿಸಿಕೊಂಡವರಿಗೂ ಹುದ್ದೆ ನೀಡಿ, ಇಡೀ ಪಟ್ಟಿಯನ್ನು 'ಸಕ್ರಮ' ಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಅಕ್ರಮ ಸಾಬೀತಾಗಿದೆ ಎಂಬ ಕಾರಣಕ್ಕೆ ಆಯ್ಕೆ ಪಟ್ಟಿಯನ್ನು ರದ್ದುಪಡಿಸಿ 2018ರ ಮಾರ್ಚ್ 9 ರಂದು ಹೈಕೋರ್ಟ್ ನೀಡಿದ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು. ಅಲ್ಲದೆ, ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಗಳನ್ನು ವಜಾಗೊಳಿಸಿತ್ತು.

ಆಯ್ಕೆ ಪಟ್ಟಿ ರದ್ದುಗೊಂಡಿದ್ದರಿಂದ ಆಗ ಆಯ್ಕೆಯಾಗಿದ್ದವರಿಗೆ ಅನ್ಯಾಯವಾಗಿದ್ದು, ನ್ಯಾಯ ಒದಗಿಸಬೇಕೆಂಬ ಬೇಡಿಕೆ ವಿಧಾನಮಂಡಲದ ಒಳಗೆ, ಹೊರಗೆ ವ್ಯಕ್ತವಾಗಿತ್ತು. ವಿವಿಧ ಸಮುದಾಯಗಳ ಸ್ವಾಮೀಜಿಗಳು, ದೇವೇಗೌಡರು, ಸಿದ್ಧರಾಮಯ್ಯ ಸೇರಿ ಪಕ್ಷಾತೀತವಾಗಿ ನಾಯಕರು ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಇದೀಗ, ಕಾನೂನು ಮತ್ತು ಸಂಸದೀಯ ಇಲಾಖೆ ಸಿದ್ಧಪಡಿಸಿರುವ ಮಸೂದೆಗೆ ಇದೇ 9ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅಂಗೀಕಾರ ಸಿಗುವ ಸಾಧ್ಯತೆ ಇದೆ. ಇದೇ 14 ರಿಂದ ನಡೆಯಲಿರುವ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲು ಸರ್ಕಾರ ಮುಂದಾಗಿದೆ.

ಶಾಸಕರ ಹಕ್ಕುಚ್ಯುತಿ ಪ್ರಸ್ತಾವ: ಈ ಮಧ್ಯೆ 'ಈ ಸಾಲಿನ ನೇಮಕಾತಿ ಅಧಿಸೂಚನೆಯನ್ನು ಈ ಹಿಂದೆ ಸರ್ಕಾರ ವಾಪಸ್ಸು ಪಡೆದಿದ್ದ ಪ್ರಕರಣದಲ್ಲಿ ಸಂವಿಧಾನದ ಅನುಚ್ಛೇದ 323(2) ಉಲ್ಲಂಘನೆಯಾಗಿದ್ದು, ಹಕ್ಕುಬಾಧ್ಯತೆ ಪ್ರಶ್ನೆಗಳು ಉದ್ಭವಿಸಿವೆ. ಶಾಸಕರ ಹಕ್ಕುಚ್ಯುತಿ ಉಂಟಾಗಿದೆ' ಎಂದು

ಕಾಂಗ್ರೆಸ್ ಸದಸ್ಯ ಪಿ.ಆರ್.ರಮೇಶ್ ಸೇರಿ ಒಂಭತ್ತು ಸದಸ್ಯರು ವಿಧಾನ ಪರಿಷತ್ ಕಾರ್ಯದರ್ಶಿಗೆ ಸೂಚನಾ ಪತ್ರ ನೀಡಲು ಮುಂದಾಗಿದ್ದಾರೆ.

ಸೂಚನ ಪತ್ರದ ಪ್ರತಿಗೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ಸದಸ್ಯರಾದ ನಜೀರ್ ಅಹ್ಮದ್, ಎಸ್.ರವಿ, ಯು.ಬಿ.ವೆಂಕಟೇಶ್, ಮೋಹನ್ ಕುಮಾರ್ ಕೊಂಡಜ್ಜಿ, ಸಲೀಂ ಅಹ್ಮದ್, ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ, ಭೋಜೇಗೌಡ ಸಹಿ ಹಾಕಿದ್ದಾರೆ.

'ಸಂವಿಧಾನದ ಅನುಚ್ಛೇದ 323 (2)ಅನ್ನು ಪಾಲಿಸಲಾಗಿದೆ ಎಂದು ಅಡ್ವೊಕೇಟ್ ಜನರಲ್ ನೀಡಿದ್ದ ತಪ್ಪು ಹೇಳಿಕೆ ಆಧರಿಸಿ, ಈ ಸಾಲಿನ ಆಯ್ಕೆ ರದ್ದುಪಡಿಸಿ ಹೈಕೋರ್ಟ್ ತೀರ್ಪು ನೀಡಿತ್ತು. ಇಲ್ಲಿ ಶಾಸಕಾಂಗದ ಸದಸ್ಯರ ಹಕ್ಕುಚ್ಯುತಿ ಆಗಿದೆ. ಅಲ್ಲದೆ, ಸಂವಿಧಾನಾತ್ಮಕ ಮತ್ತು ಶಾಸಕಾಂಗದ ಸದಸ್ಯರ ಹಕ್ಕುಚ್ಯುತಿ ಆಗಿದೆ. ಸಂವಿಧಾನಾತ್ಮಕ ಮತ್ತು ಶಾಸಕಾಂಗದ ನಿಂದನೆಯೂ ಆಗಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ಸರ್ಕಾರವು ಸಂವಿಧಾನದ ಅನುಚ್ಛೇಧ 323(2) ರಂತೆ ಭಾಗಶಃ ಅಂದರೆ, ಕೇವಲ 2014–15ನೇ ಸಾಲಿನ ಕೆಪಿಎಸ್‌ಸಿಯ ವಾರ್ಷಿಕ ವರದಿಯನ್ನು ಮಾತ್ರ ವಿಧಾನಸಭೆಯಲ್ಲಿ ಮಂಡಿಸಿದೆ. ವರದಿಯ ಭಾಗವಾದ ಟಿಪ್ಪಣಿಯಲ್ಲಿ ಪ್ರಕರಣವು ಕೆಎಟಿ ವಿಚಾರಣೆಯಲ್ಲಿದೆ ಎಂದು ಮಾತ್ರ ವಿವರಿಸಲಾಗಿದೆ. ಈ ಅನುಚ್ಛೇದದ ಪ್ರಕಾರ, ಕೆಪಿಎಸ್‌ಸಿಯ ಸಲಹೆಯನ್ನು (ಆಯ್ಕೆ ಪಟ್ಟಿ) ಸರ್ಕಾರ ಒಪ್ಪದೇ ಇದ್ದರೆ ಅದಕ್ಕೆ ಕಾರಣವೇನೆಂದು ವಿವರಿಸುವ ವಿವರಣಾ ಪತ್ರದೊಂದಿಗೆ ಎರಡೂ ಸದನಗಳಲ್ಲಿ ವಾರ್ಷಿಕ ವರದಿ ಮಂಡಿಸಬೇಕಿತ್ತು. ಈ ಅನುಚ್ಛೇದದ ಮಹತ್ವವನ್ನು ಹಲವು ನ್ಯಾಯಾಲಯಗಳು ಒತ್ತಿ ಹೇಳಿವೆ. ಆದರೆ, ವಿಧಾನಸಭೆಯಲ್ಲಿ 2017ರಲ್ಲಿ ಮಂಡಿಸಿದ್ದ ವರದಿಯನ್ನು 2019 ರಲ್ಲಿ ವಿಧಾನಪರಿಷತ್‌ನಲ್ಲಿ ಕಾಟಾಚಾರಕ್ಕೆ ಎಂಬಂತೆ ಮಂಡಿಸಲಾಗಿದೆ. ಇದರಿಂದ ಶಾಸಕರ ಹಕ್ಕುಚ್ಯುತಿ ಆಗಿದೆ' ಎಂದು ಸೂಚನಾ ಪತ್ರದಲ್ಲಿ ವಾದಿಸಲಾಗಿದೆ.

'ಅನುಚ್ಛೇಧನ ಉಲ್ಲಂಘನೆಯ ಬಗ್ಗೆ ಎರಡೂ ಸದನಗಳ ಶಾಸಕರು ಈ ಹಿಂದೆ ಬರೆದಿದ್ದ ಪತ್ರವನ್ನು ಪರಿಗಣಿಸಿದ್ದ ರಾಜ್ಯಪಾಲರು, ಈ ವಿಷಯದಲ್ಲಿ ಗಮನಹರಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದರು. ಆದರೆ, ನಾವು ಅನೇಕ ಬಾರಿ ಮನವಿ ಸಲ್ಲಿಸಿದರೂ ಮುಖ್ಯ ಕಾರ್ಯದರ್ಶಿ ಸ್ಪಂದಿಸಿಲ್ಲ. ಆಯ್ಕೆ ಪಟ್ಟಿ ರದ್ದುಪಡಿಸಿ, ನೇಮಕಾತಿಗೆ ಮರು ಅಧಿಸೂಚನೆ ಹೊರಡಿಸುವ ಮೊದಲು ಅನುಚ್ಛೇಧ 323(2) ಪಾಲನೆ ಕಡ್ಡಾಯ ಅಲ್ಲವೇ? ತಪ್ಪು ಮಾಹಿತಿ ಪಡೆದ ಹೈಕೋರ್ಟ್ ತೀರ್ಪನ್ನು ಸರ್ಕಾರ ಜಾರಿ ಮಾಡಬಹುದೇ? ಹೀಗೆ ಹಲವು ಪ್ರಶ್ನೆಗಳನ್ನು ಸೂಚನಾ ಪತ್ರದಲ್ಲಿ ಕೇಳಲಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ:07.02.2022.

50. ರಾಜ್ಯಾದ್ಯಂತ ಹಬ್ಬಿದ ಹಿಜಾಬ್ ಗದ್ದಲ

ಉಡುಪಿ ಪದವಿ ಪೂರ್ವ ಕಾಲೇಜಿನಲ್ಲಿ ಹೊತ್ತಿ ಕೊಂಡ ಹಿಜಾಬ್–ಕೇಸರಿ ಕಿಡಿ ಇದೀಗ ಉತ್ತರ ದಕ್ಷಿಣವೆನ್ನದೇ ರಾಜ್ಯವ್ಯಾಪಿ ವ್ಯಾಪಿಸಿಕೊಂಡಿದೆ. ಮುಸ್ಲಿಂ ವಿದ್ಯಾರ್ಥಿನಿಯರು ಏನೇ ಆದರೂ ನಾವು ಹಿಜಾಬ್ ಧರಿಸಿಯೇ ಸಿದ್ಧ ಎಂದು ಪಟ್ಟುಹಿಡಿದಿದ್ದರೆ, ಅವರು ಹಿಜಾಬ್ ಧರಿಸಿದರೆ ನಾವೂ ಕೇಸರಿ ಶಾಲು ಧರಿಸಿ ಬರುವುದಾಗಿ ಇತರೆ ವಿದ್ಯಾರ್ಥಿಗಳು ಹಠ ಹಿಡಿದ ಪ್ರಸಂಗಗಳು ಗದಗ, ಹಾವೇರಿ, ಉಡುಪಿ, ಮಡಿಕೇರಿ, ತುಮಕೂರು, ದಾವಣಗೆರೆ, ಮಂಡ್ಯ, ಹಾಸನ, ಶಿವಮೊಗ್ಗ, ರಾಯಚೂರು, ಬೀದರ್ ಸೇರಿದಂತೆ ಅನೇಕ ಶಾಲಾ ಕಾಲೇಜುಗಳಿಂದ ವರಿದಿಯಾಗಿದೆ. ಇದೇ ವೇಳೆ ಚಿಕ್ಕಮಗಳೂರಿನ ಕಾಲೇಜೊಂದರಲ್ಲಿ ಕೇಸರಿ ಶಾಲಿಗೆ ಪ್ರತಿಯಾಗಿ ದಲಿತ ವಿದ್ಯಾರ್ಥಿಗಳು ನೀಲಿ ಶಾಲು ಧರಿಸಿ ಕಾಲೇಜು ಪ್ರವೇಶಿಸಿದ್ದರಿಂದ ಪರಿಸ್ಥಿತಿ ಬಿಗುವಾಗಿದ್ದರಿಂದ ಮುಂಜಾಗ್ರತಾ ಕ್ರಮವಾಗಿ ಪ್ರಾಂಶುಪಾಲರು ಕಾಲೇಜಿಗೆ ರಜೆ ಘೋಷಿಸಿದ ಘಟನೆಯೂ ನಡೆದಿದೆ. ಬಳ್ಳಾರಿ ಜಿಲ್ಲೆಯ ಕೊಟ್ಟೂರು ಕೊಟ್ಟೂರೇಶ್ವರ ಪದವಿ

ಕಾಲೇಜು, ಗದಗ ಸರ್ಕಾರಿ ಪದವಿ ಕಾಲೇಜು, ಹಾವೇರಿ ಜಿಲ್ಲೆಯ ಮೂರು ಕಾಲೇಜು, ವಿಜಯಪುರ ಜಿಲ್ಲೆಯ ಇಂಡಿ, ನಿಡಗುಂದಿ, ಬಸವನಬಾಗೇವಾಡಿ, ಬಾಗಲಕೋಟೆ ಜಿಲ್ಲೆಯ ಗುಡೂರಗಳಲ್ಲಿ ವಿದ್ಯಾರ್ಥಿಗಳು ಹಿಜಾಬ್ ಮತ್ತು ಕೇಸರಿ ಶಾಲು ಧರಿಸಿ ಶಾಲೆಗಳಿಗೆ ಆಗಮಿಸಿದ್ದರೆ. ಇವರಿಗೆ ಕಾಲೇಜಿಗೆ ಪ್ರವೇಶ ನಿರಾಕರಿಸಲಾಯಿತು. ಈ ವೇಳೆ ಮಾತಿನ ಚಕಮಕಿ ನಡೆಯಿತು. ರಾಣೆಬೆನ್ನೂರಿನಲ್ಲಿ ಪೋಲಿಸರ ಮಧ್ಯ ಪ್ರವೇಶದಿಂದ ಪರಿಸ್ಥಿತಿ ತಣ್ಣಗಾಗಿದೆ. ಗುಡಾರ ಕಾಲೇಜಿನ ಆವರಣದಲ್ಲೂ ಪೊಲೀಸರು ಬೀಡು ಬಿಟ್ಟಿದ್ದಾರೆ.

ಇನ್ನು ಹುಬ್ಬಳ್ಳಿ, ಹೊಸಪೇಟೆ, ಕೊಪ್ಪಳ, ಬೆಳಗಾವಿ, ಯಾದಗಿರಿ, ರಾಯಚೂರು, ಕೋಲಾರ, ಚಿಕ್ಕಮಗಳೂರು, ವಿಜಯಪುರ, ಮಡಿಕೇರಿಗಳಲ್ಲಿ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕ, ಎಐಎಂ ಐಎಂ, ದಲಿತ ಸಂಘಟನೆಗಳು ಸೇರದಂತೆ ಹಲವಾರು ಮುಸ್ಲಿಂ ಸಂಘಟನೆಗಳು ಪ್ರತಿಭಟನೆ ನಡೆಸಿ ಹಿಜಾಬ್ ಬೇಕು ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಿವೆ, ಇದೇ ವೇಳೆ ಕಲಬುರಗಿಯಲ್ಲಿ ಶ್ರೀರಾಮ ಸೇನೆ ಹಿಜಾಬ್ ಧರಿಸುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಿತು.

ವಸ್ತ್ರ ಸಂಹಿತೆ ಸುತ್ತೋಲೆ ಪಾಲಿಸಿ: ವಿದ್ಯಾರ್ಥಿಗಳಿಗೆ ಸಿಎಂ ತಾಕೀತು

ಶಾಲಾ ಕಾಲೇಜುಗಳಲ್ಲಿ ವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆಯನ್ನು ಎಲ್ಲರು ಪರಿಪಾಲಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಶಾಲಾ ಕಾಲೇಜುಗಳಲ್ಲಿ ಯಾವ ರೀತಿಯ ವಸ್ತ್ರಸಂಹಿತೆ ಇರಬೇಕೆನ್ನುವುದನ್ನು ಸಂವಿಧಾನ ಹೇಳಿದೆ. ಸರ್ಕಾರವೂ ಈಗಾಗಲೇ ಸುತ್ತೋಲೆ ಹೊರಡಿಸಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಮುಖ್ಯ. ಪರೀಕ್ಷೆಯೂ ಹತ್ತಿರ ಬರುತ್ತಿರುವುದರಿಂದ ಸರ್ಕಾರದ ಸುತ್ತೋಲೆಯನ್ನು ಎಲ್ಲರೂ ಪರಿಪಾಲಿಸಿ ಶಾಂತಿ ಕಾಪಾಡಬೇಕು ಎಂದು ಹೇಳಿದರು.

ಸಂಸತ್ತಲ್ಲೂ ಹಿಜಾಬ್ ಪ್ರಸ್ತಾಪ:

ಕರ್ನಾಟಕದ ಕಾಲೇಜುಗಳಲ್ಲಿ ಉಂಟಾಗಿರುವ ಹಿಜಾಬ್–ಕೇಸರಿ ಶಾಲು ವಿವಾದ ಈಗ ಲೋಕಸಭೆಯಲ್ಲೂ ಪ್ರತಿಧ್ವನಿಸಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಕೇರಳ ಸಂಸದರು ಒತ್ತಾಯಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:08.02.2022.

51. ಕಲ್ಯಾಣ ಕರ್ನಾಟಕಕ್ಕೆ ರೂ.5000 ಕೋಟಿಗೆ ಮೊರೆ

ರಾಜ್ಯದ ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಕೇಂದ್ರ ಪುರಸ್ಕೃತ ಯೋಜನೆಗಳಡಿ ವಿಶೇಷವಾಗಿ ಆ ಭಾಗಕ್ಕೆ ರೂ.5,030 ಕೋಟಿ ಅನುದಾನ ಒದಗಿಸಬೇಕೆಂದು ಮುಖ್ಯಮಂತ್ರಿಯವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ನಿರ್ಮಲಾ ಸಿತಾರಾಮನ್ ಅವರನ್ನು ಭೇಟಿ ಮಾಡಿದ ವೇಳೆ ಈ ಬಗ್ಗೆ ಮನವಿ ಸಲ್ಲಿಸಿದರು. ಇತ್ತೀಚಿಗೆ ತಿರುಪತಿಯಲ್ಲಿ ನಡೆದ ದಕ್ಷಿಣ ವಲಯ ರಾಜ್ಯಗಳ ಮಂಡಳಿ ಸಭೆಯಲ್ಲಿ ಚರ್ಚಿಸಿದಂತೆ ಆಂದ್ರಪ್ರದೇಶವು ತನ್ನ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ಒದಗಿಸುವಂತೆ ಮನವಿ ಮಾಡಿತ್ತು. ಅಂತೆಯೇ ಕರ್ನಾಟಕ ರಾಜ್ಯದಲ್ಲಿಯೂ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ದೇಶದಲ್ಲಿಯೇ ಹಿಂದುಳಿದ ಜಿಲ್ಲೆಗಳ ಸಾಲಿನಲ್ಲಿ ಸೇರಿವೆ. 371(ಜೆ) ವಿಧಿಯನ್ವಯ ಸಂವಿಧಾನ ತಿದ್ದುಪಡಿಯ ಮೂಲಕ ಈ ಭಾಗಕ್ಕೆ ವಿಶೇಷ ಸ್ಥಾನ ನೀಡಲಾಗಿದ್ದು, ಉದ್ಯೋಗ ಮತ್ತು ಶಿಕ್ಷಣದಲ್ಲಿ

ಮೀಸಲಾತಿ ಒದಗಿಸಲಾಗಿದೆ. ಆದರೆ ಈ ಭಾಗವು ಅಭಿವೃದ್ಧಿಯಲ್ಲಿ ಬಹಳ ಹಿಂದುಳಿದಿರುವುದರಿಂದ ವಿಶೇಷ ಗಮನ ನೀಡುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ನೀತಿ ಆಯೋಗದ ಬಹು ಆಯಾಮದ ಬಡತನ ಸೂಚ್ಯಂಕದಲ್ಲಿಯೂ ಈ ಜಿಲ್ಲೆಗಳು ಹಿಂದುಳಿದಿರುವುದರಿಂದ ಕಲ್ಯಾಣ ಕರ್ನಾಟಕ ಭಾಗಕ್ಕೆ ವಿವಿಧ ಕೇಂದ್ರ ಪುರಸ್ಕೃತ ಯೋಜನೆಗಳಡಿ ರೂ.5030 ಕೋಟಿ ಅನುದಾನ ಒದಗಿಸಬೇಕು ಎಂದು ಮನವಿ ಮಾಡಿದರು.

ಆಧಾರ: ಕನ್ನಡಪ್ರಭ, ದಿನಾಂಕ:08.02.2022.

52. ಕೆಪಿಎಸ್ಸಿ 2011 ರ ಬ್ಯಾಚ್‌ಗೆ ಕಾನೂನಿನ ಮುಕ್ತಿ

ರಾಜಕೀಯ ಹಾಗೂ ಧಾರ್ಮಿಕ ನಾಯಕರ ಬಲವಾದ ಒತ್ತಡಕ್ಕೆ ಸಿಲುಕಿದ ರಾಜ್ಯ ಸರ್ಕಾರ ಕೊನೆಗೂ ಕರ್ನಾಟಕ ಲೋಕಸೇವಾ ಆಯೋಗದ 2011 ರ ಪತ್ರಾಂಕಿತ ಹುದ್ದೆಗೆ ನಡೆದ 'ವಿವಾದಿತ' ಆಯ್ಕೆ ಪ್ರಕ್ರಿಯೆಯ ಪಟ್ಟಿಯನ್ನು ಒಪ್ಪಿಕೊಂಡಿದೆ. ಜೊತೆಗೆ ಮುಂಬರುವ ವಿಧಾನಸಭೆ ಅಧಿವೇಶನದಲ್ಲೇ ವಿಶೇಷ ವಿಧೇಯಕ ಮಂಡಿಸಿ ಅಕ್ರಮವನ್ನು ಸಕ್ರಮಗೊಳಿಸಲು ಬಯಸಿದೆ.

ಸಂಪುಟ ಸಭೆಯಲ್ಲಿ ಕಾನೂನು ಸಚಿವರ ಪ್ರಸ್ತಾಪಕ್ಕೆ ಚರ್ಚೆ ಇಲ್ಲದೆ ಸರ್ವಸಮ್ಮತ ಎಂಬಂತೆ ಸಚಿವರೆಲ್ಲರೂ ತಲೆದೂಗಿ ಸಮ್ಮತಿ ನೀಡಿದ್ದಾರೆ. ಸಭೆ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಕೆಪಿಎಸ್ಸಿ 2011ರ ಬ್ಯಾಚ್‌ಗೆ ಸಂಬಂಧಿಸಿದಂತೆ ಹೊರಡಿಸಿದ ಅಧಿಸೂಚನೆ ಒಪ್ಪಲು ಸಂಪುಟ ಸಭೆ ನಿರ್ಧರಿಸಿದೆ. ಈ ಮೂಲಕ ಅವರೆಲ್ಲರಿಗೂ ನೇಮಕ ಆದೇಶ ನೀಡಲು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಂಡಿಸುತ್ತಿದ್ದೇವೆ ಎಂದರು. ಸ್ಥಳ ನಿಯೋಜನೆ, ಜ್ಯೇಷ್ಠತೆ ಕುರಿತು ನಿಯಮದಲ್ಲಿ ತೀರ್ಮಾನ ಮಾಡಲು ನಿರ್ಧರಿಸಲಾಗಿದೆ. ಈ ಹಿಂದೆ ಪ್ರಕರಣ ಕೋರ್ಟ್‌ನಲ್ಲಿತ್ತು, ಈಗ ಕೋರ್ಟ್‌ನಲ್ಲಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು. ಈ ಹಿಂದೆ ಪಟ್ಟಿಯನ್ನು ಕೋರ್ಟ್ ಒಪ್ಪಿರಲಿಲ್ಲ. ಆದರೆ, ನಮ್ಮ ಸಮಜಾಯಿಷಿ ಏನು ಎಂಬುದನ್ನು ವಿಧೇಯಕದಲ್ಲಿ ಹೇಳಿದ್ದೇವೆ. ನಾನು ಅದರ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಹೆಚ್ಚು ಹೇಳಲು ಬರುವುದಿಲ್ಲ. ಮಸೂದೆ ಮಂಡಿಸಿದಾಗ ವ್ಯಾಪಕವಾಗಿ ಮಾತನಾಡುತ್ತೇನೆ ಎಂದರು. ಅಂದು ಸಿಐಡಿ ಅಂತಿಮ ವರದಿ ಬರುವ ಮುನ್ನವೇ ತಡೆ ಹಾಕಲಾಗಿತ್ತು. ಮಧ್ಯಂತರ ವರದಿ ಆಧಾರದಲ್ಲೇ ಸರ್ಕಾರ ನಿರ್ಧಾರ ಕೈಗೊಂಡಿತ್ತು. ಈ ರೀತಿ ಪಟ್ಟಿಯನ್ನು ನಿಷ್ಕ್ರಿಯಗೊಳಿಸಲು ಬರುವುದಿಲ್ಲ. ಇನ್ನು 2015ರಲ್ಲಿ ಸರ್ಕಾರ ಪಟ್ಟಿಯನ್ನೂ ಅಂಗೀಕರಿಸಿತ್ತು. ಅದನ್ನು ನಾವು ಪರಿಗಣಿಸಿದ್ದೇವೆ. ಇನ್ನೊಂದು ಪ್ರಮುಖ ಸಂಗತಿ ಎಂದರೆ ಪಟ್ಟಿಯನ್ನು ರದ್ದು ಮಾಡುವಾಗ ಶಾಸನ ಸಭೆಯ ಗಣನೆ ಬಳಿಕವೇ ತೀರ್ಮಾನ ಆಗಬೇಕಿತ್ತು, ಈ ಕೆಲಸ ಆಗಿಲ್ಲ. ಇದರಿಂದ ಶಾಸನ ಸಭೆ ಅಧಿಕಾರ ಮೊಟಕು ಮಾಡಿದಂತಾಗುತ್ತದೆ. ಹೀಗಾಗಿ ನಾವು ಶಾಸನಸಭೆ ಮುಂದೆ ತರುತ್ತೇವೆ, ಅಲ್ಲಿ ಏನು ತೀರ್ಮಾನ ಆಗುತ್ತದೋ ಅದನ್ನು ಪಾಲಿಸುತ್ತೇವೆ ಎಂದು ಪತ್ರಕರ್ತರ ಪ್ರಶ್ನೆಗೆ ಮಾಧುಸ್ವಾಮಿ ವಿವರಣೆ ನೀಡಿದರು.

ಸರ್ಕಾರದ ತನಿಖಾ ಸಂಸ್ಥೆಯೇ ಆಯ್ಕೆ ಪರೀಕ್ಷೆ ಮತ್ತು ಸಂದರ್ಶನದ ಅಕ್ರಮವನ್ನು ಬಯಲಿಗೆಳೆದಿತ್ತು, ಹೀಗಿದ್ದೂ ಆ ಪಟ್ಟಿಯನ್ನು ಸರ್ಕಾರ ಒಪ್ಪಿಕೊಳ್ಳುತ್ತದೆಯೇ ಎಂಬ ಪ್ರಶ್ನೆಗೆ, ಫೆಬ್ರವರಿ 15–16 ರ ಬಳಿಕ ಮಾತನಾಡೋಣ ಎಂದರು.

ಸಂಪುಟ ಸಭೆ ತೀರ್ಮಾನಗಳು:

- ಫೆಬ್ರವರಿ 14ರಂದು ವಿಧಾನಮಂಡಲ ಉಭಯ ಸದಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡುವ ಭಾಷಣಕ್ಕೆ ಅನುಮೋದನೆ.

- ಮುಧೋಳ ತಾಲ್ಲೂಕು ಸಕ್ಕರೆ ಕಾರ್ಖಾನೆಯನ್ನು ರೂ.320ಕೋಟಿಗೆ 40 ವರ್ಷಕ್ಕೆ ಟೆಂಡರ್ ಆಧಾರದ ಮೇಲೆ ಗುತ್ತಿಗೆ ನೀಡಲು ಸಮ್ಮತಿ.
- ಉತ್ತರ ಕನ್ನಡ ಜಿಲ್ಲೆ ಕುಮಟಾ ಮಿನಿ ವಿಧಾನ ಸೌಧ ಮೂರನೇ ಮಹಡಿಯಲ್ಲಿ ಕೊಠಡಿಗಳನ್ನು ನಿರ್ಮಿಸಲು ರೂ.16.28 ಕೋಟಿ.
- ಕೋಲಾರ ಜಿಲ್ಲೆ ಮಾಸ್ತಿ ವಸತಿ ಶಾಲೆಯ ಕಟ್ಟಡ, ಮೂಲಸೌಕರ್ಯಕ್ಕೆ ರೂ.17 ಕೋಟಿ.
- ವಿಜಯಪುರದಲ್ಲಿ 30 ವರ್ಷಕ್ಕಿಂತ ದೀರ್ಘಾವಧಿಗೆ ಗುತ್ತಿಗೆ ಕೊಡಲಾದ ಜಾಗವನ್ನು ಗುತ್ತಿಗೆ ನೀಡಿದಲ್ಲಿಂದಲೇ ಬಡ್ಡಿ ಸಹಿತ ಸೇರಿ ಮಾರಾಟಕ್ಕೆ ಒಪ್ಪಿಗೆ.
- ಕಂಪನಿಗಳ ವಿಲೀನ ಅಥವಾ ಬೇರ್ಪಟ್ಟ ಸಂದರ್ಭದಲ್ಲಿ ನಡೆಯುವ ನೋಂದಣಿ ಪ್ರಕ್ರಿಯೆ ವೇಳೆ ಅಗುತ್ತಿದ್ದ ಸ್ಟ್ಯಾಂಪ್ ಡ್ಯೂಟಿ ಹೊರೆ ತಪ್ಪಿಸಲು ಕಾನೂನಿನಲ್ಲಿ ತಿದ್ದುಪಡಿ.
- ಬಸವಕಲ್ಯಾಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅನುಭವ ಮಂಟಪಕ್ಕೆ ರೂ.560ಕೋಟಿ ಅಂದಾಜಿಗೆ ಅನುಮೋದನೆ. ಕಂದಾಯ ಇಲಾಖೆ ಹೆಚ್ಚುವರಿಯಾಗಿ ರೂ.60 ಕೋಟಿಗೆ ಪ್ರಸ್ತಾವನೆ ಸಲ್ಲಿಸಿತ್ತು.
- ಬೆಂಗಳೂರಿನ ಸಂಚಾರ ಒತ್ತಡ ಕಡಿಮೆ ಮಾಡಲು ನಿರ್ಮಿಸಲು ಉದ್ದೇಶಿಸಿರುವ ಬಹುಕಾಲದ ಚರ್ಚಿತ ಪೆರಿಫರಲ್ ರಿಂಗ್ ರಸ್ತೆಗೆ ಅನುಮೋದನೆ.

ಆಧಾರ: ವಿಜಯವಾಣಿ, ದಿನಾಂಕ:10.02.2022.

53. ನಿಷೇಧಾಜ್ಞೆ ನಡುವೆ ಶಾಲೆಗಳಲ್ಲಿ ಪಾಠ

ಹಿಜಾಬ್–ಕೇಸರಿ ಶಾಲು ವಿವಾದ ಹಿನ್ನೆಲೆಯಲ್ಲಿ ಫೆಬ್ರವರಿ 9 ರಿಂದ ಬಂದ್ ಆಗಿದ್ದ 9,10ನೇ ತರಗತಿಗಳು ರಾಜ್ಯಾದ್ಯಂತ ಪುನಾರಂಭವಾಗಲಿವೆ. ಯಾವುದೇ ಕಾರಣಕ್ಕೂ ಅಹಿತಕರ ಘಟನೆಗಳು ನಡೆಯದಂತೆ ರಾಜ್ಯ ಸರ್ಕಾರ ಮುಂಜಾಗ್ರತಾ ಕ್ರಮ ಕೈಗೊಂಡಿದೆ. ಉಡುಪಿ, ದಾವಣಗೆರೆ, ಶಿವಮೊಗ್ಗ ಮಂಡ್ಯ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಶಾಲೆಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಯಾಗಿದೆ. ಸೂಕ್ಷ್ಮ ಪ್ರದೇಶದ ಶಾಲೆಗಳಲ್ಲಿ ಪೊಲೀಸ್ ಭದ್ರತೆಯೊಂದಿಗೆ ಆರಂಭವಾಗಲಿವೆ.

ಪ್ರೌಢಶಾಲೆಗಳಿಗೆ ಭದ್ರತೆ ಕಲ್ಪಿಸುವಂತೆ ಮತ್ತು ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ವಸ್ತುಸ್ಥಿತಿ ತಿಳಿದುಕೊಳ್ಳುವಂತೆ ಈಗಾಗಲೇ ಮುಖ್ಯಮಂತ್ರಿಗಳು ಡಿಸಿಗಳು, ಎಸ್ಪಿಗಳಿಗೆ ಸೂಚನೆ ನೀಡಿದ್ದಾರೆ. ಶಿಕ್ಷಣ ಇಲಾಖೆ ಜಿಲ್ಲಾ ಉಪ ನಿರ್ದೇಶಕರು ಹಾಗೂ ಶಾಲಾ ಆಡಳಿತ ಮಂಡಳಿಗಳು ಶಾಂತಿ ಸಭೆ ನಡೆಸುವಂತೆಯೂ ನಿರ್ದೇಶನ ನೀಡಿದ್ದಾರೆ.

ಈ ಕುರಿತು ಹುಬ್ಬಳ್ಳಿಯಲ್ಲಿ ಮಾತನಾಡಿದ ಮುಖ್ಯಮಂತ್ರಿಯವರ, ಮೊದಲ ರೀತಿಯಲ್ಲಿ ಸೌಹಾರ್ದಯುತವಾಗಿ ಶಾಲೆ–ಕಾಲೇಜುಗಳನ್ನು ಆರಂಭಿಸುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ. ಶಾಲೆಗಳು ಆರಂಭವಾದ ನಂತರ ಪರಿಸ್ಥಿತಿ ನೋಡುಕೊಂಡು ಕಾಲೇಜುಗಳನ್ನು ಆರಂಭಿಸಲಾಗುತ್ತದೆ ಎಂದರು.

ಶಾಂತಿ ಕದಡುವವರ ಮೇಲೆ ನಿಗಾ: ಹಿಜಾಬ್ ವಿಚಾರದಲ್ಲಿ ವಿವಾದ ಸೃಷ್ಟಿಸಲು ಯತ್ನಿಸಿದವರ ಬಗ್ಗೆ ನಿಗಾ ವಹಿಸಲಾಗುತ್ತದೆ. ಸಾಮಾಜಿಕ ತಾಣಗಳಲ್ಲಿ ಪ್ರಚೋದನೆ ನೀಡುವ, ಸುಳ್ಳು ಸಂದೇಶಗಳನ್ನು ಹರಿಬಿಡುವವರ ಮೇಲೆ ಅಧಿಕಾರಿಗಳು ಕಣ್ಣಿಟ್ಟಿದ್ದಾರೆ. ಅಂತಹವರ ವಿರುದ್ಧ ನಿರ್ದಾಕ್ಷಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಹಾಸನದಲ್ಲಿ ಮಾತನಾಡಿದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಶಾಲೆಗಳಿಗೆ ಹಿಜಾಬ್, ಕೇಸರಿ ಶಾಲು ಹಾಕಿಕೊಂಡು ಬರಬಾರದು ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕೆ ಕರ್ನಾಟಕ ಸರ್ಕಾರ ಕೂಡ ಬದ್ಧವಾಗಿದೆ ಎಂದರು.

ನಿಷೇಧಾಜ್ಞೆ ಜಾರಿ: ಬೆಂಗಳೂರು, ಉಡುಪಿ, ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಸೆಕ್ಷನ್ 144 ಜಾರಿಗೊಳಿಸಲಾಗಿದೆ. ಸಂಘಟನೆಗಳು ಗಲಾಟೆ ಮಾಡದಂತೆ ಪೋಲೀಸ್ ಇಲಾಖೆ ನಿಗಾ ವಹಿಸಿದೆ. ಮೈಸೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಸಾರ್ವಜನಿಕರಲ್ಲಿ ಧೈರ್ಯ ಮೂಡಿಸುವ ನಿಟ್ಟಿನಲ್ಲಿ ಪೊಲೀಸರು ಪಥಸಂಚಲನ ನಡೆಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:14.02.2022.

54. ದೇಗುಲದ ಗಂಟೆಗೆ ಸರ್ಕಾರದ ಸೈಲೆನ್ಸರ್

ದೇಗುಲಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿ ಗಂಟೆ ಶಬ್ದ ಕೇಳುವಂತಿಲ್ಲ. ಹೀಗೆಂದು ಬೆಂಗಳೂರಿನ ದೊಡ್ಡಗಣಪತಿ ದೇವಸ್ಥಾನದ ಸಮೂಹದಲ್ಲಿರುವ ದೇವಾಲಯಗಳಿಗೆ ನೋಟಿಸ್ ನೀಡಲಾಗಿದೆ. ಈ ಕುರಿತ ಮಾಹಿತಿ ಲಭ್ಯವಾಗಿದ್ದು, ನ್ಯಾಯಾಲಯದ ಆದೇಶದ ಮೇರೆಗೆ ಈ ನೋಟಿಸ್ ನೀಡಲಾಗಿದೆ. ನಿಗದಿತ ಶಬ್ದದೊಳಗೆ ಗಂಟೆ ಬಾರಿಸಲು ಧ್ವನಿವರ್ಧಕ ಬಳಕೆ ಮಾಡಲು ಯಾರಿಗೂ ನಿರ್ಬಂಧ ವಿಧಿಸಿಲ್ಲ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿಯಮ ಪಾಲಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ಮುಜರಾಯಿ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ: ಪೂಜೆ ಮತ್ತು ಇತರ ಸಂದರ್ಭಗಳಲ್ಲಿ ದೇಗುಲಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಢಮರುಗ, ಧ್ವನಿವರ್ಧಕ ಹಾಗೂ ಯಂತ್ರಗಳಿಂದ ಶಬ್ದ ಉಪಯೋಗಿಸಬಾರದು ಎಂದು ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ ಅಧಿಕಾರಿಗಳು, ದೊಡ್ಡಗಣಪತಿ ದೇವಾಲಯದ ಪ್ರಧಾನ ಅರ್ಚಕರಿಗೆ ಸೂಚನೆ ನೀಡಿದ್ದಾರೆ. ಈ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಜೊತೆಗೆ ಚರ್ಚೆಗೆ ಕೂಡ ಗ್ರಾಸವಾಗಿದೆ.

ದೊಡ್ಡಗಣಪತಿ ಮತ್ತು ಸಮೂಹದ ದೇವಾಲಯಗಳಲ್ಲಿ ನಿಗದಿತ ಡೆಸಿಬಲ್ ಶಬ್ದಕ್ಕಿಂತಲೂ ಅಧಿಕ ಪ್ರಮಾಣದ ಸದ್ದು ಮಾಡುತ್ತಿವೆ ಎಂದು ಬಸವನಗುಡಿ ಠಾಣೆಗೆ ದೂರು ಸಲ್ಲಿಕೆಯಾಗಿತ್ತು. ಹೀಗಾಗಿ ಪೊಲೀಸರು ಇಲಾಖೆಗೆ ನೋಟಿಸ್ ನೀಡಿದ್ದರು. ಈ ನೋಟಿಸ್ ಅನ್ನು ಪ್ರಸ್ತಾಪಿಸಿರುವ ದೇಗುಲದ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಾಲಯಗಳಿಗೆ ಮಾಹಿತಿ ನೀಡಿದ್ದಾರೆ ಜೊತೆಗೆ ಅಗತ್ಯಕ್ಕಿಂತ ಹೆಚ್ಚು ಶಬ್ದ ಬಂದರೆ ಧ್ವನಿ ಮಾಲಿನ್ಯ ನಿಯಂತ್ರಣ ಕಾಯ್ದೆಯ ಅನ್ವಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸೂಚನೆ ಬಂದಿರುವುದಾಗಿಯೂ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪರಿಸರ ಸಚಿವ ಆನಂದ ಸಿಂಗ್, ಪರಿಸರ ಇಲಾಖೆಯಿಂದ ದೇವಸ್ಥಾನಕ್ಕೆ ನೊಟೀಸ್ ನೀಡಿಲ್ಲ. ಅದು ಗೃಹ ಇಲಾಖೆಯದ್ದು ಎಂದು ಹೇಳಿದ್ದಾರೆ.

ನಿಯಮ ಪಾಲನೆ ಕರ್ತವ್ಯ: ನೋಟಿಸ್ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ' ನಿಯಮ ಪಾಲಿಸುವುದು ದೇವಾಲಯ, ಚರ್ಚ್, ಮಸೀದಿಗಳ ಕರ್ತವ್ಯ. ಪ್ರಧಾನ ಅರ್ಚಕರಿಗೆ ನೀಡಿರುವ ನೋಟಿಸ್ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದೇನೆ. ಕೋರ್ಟ್ ನಿರ್ದೇಶನ ಪಾಲಿಸಲು ದೇವಸ್ಥಾನ, ಚರ್ಚ್, ಮಸೀದಿಗಳಿಗೆ ತಿಳುವಳಿಕೆ ಮೂಡಿಸಲು ಪೋಲೀಸ್ ಇಲಾಖೆ ನೋಟೀಸ್ ನೀಡಿದೆ ಎಂದರು. ಶಬ್ದ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಕಾಯ್ದೆ ಮಿತಿಯೊಳಗೆ ಧ್ವನಿವರ್ಧಕಗಳನ್ನು ಬಳಸಿಕೊಳ್ಳುವುದಕ್ಕೆ ನಿರ್ಬಂಧ ಹೇರಲಾಗಿಲ್ಲ. ಸಾರ್ವಜನಿಕರಿಗೆ ತೊಂದರೆ ಆಗದಂತೆ

ನಿಯಮ ಪಾಲನೆ ಕರ್ತವ್ಯವಾಗಿದೆ. ಇದನ್ನು ದೇವಸ್ಥಾನ, ಮಸೀದಿ, ಚರ್ಚ್‌ಗಳು ಕೂಡ ಪಾಲಿಸಲಿವೆ ಎಂದರು.

ವಲಯ / ಪ್ರದೇಶ	ಶಬ್ದದ ಮಿತಿ(ಡೆಸಿಬಲ್ ಗಳಲ್ಲಿ)	
	ಹಗಲು	ರಾತ್ರಿ
ಕೈಗಾರಿಕೆ	75	70
ವಾಣಿಜ್ಯ	63	55
ವಸತಿ	55	45
ನಿಶ್ಯಬ್ದ	50	40

ಆಧಾರ: ಉದಯವಾಣಿ, ದಿನಾಂಕ:16.02.2022.

55. 8 ಹೊಸ ಕೈಗಾರಿಕಾ ಪ್ರದೇಶಗಳ ನಿರ್ಮಾಣ

ರಾಜ್ಯದಲ್ಲಿ 2022–23ನೇ ಸಾಲಿನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ) ವತಿಯಿಂದ ಹೊಸದಾಗಿ ಎಂಟು ಕೈಗಾರಿಕಾ ಪ್ರದೇಶಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಕೈಗಾರಿಕ ಸಚಿವ ಮುರಗೇಶ ನಿರಾಣಿ ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಎಚ್.ಎಂ.ರಮೇಶಗೌಡ ಪ್ರಶ್ನೆಗೆ ಉತ್ತರಿಸಿ, ಕೆಎಐಡಿಬಿ ವತಿಯಿಂದ ರಾಜ್ಯದಲ್ಲಿ ಇಲ್ಲಿಯವರೆಗೆ 188 ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಎಂಟು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದರು. ಹೊಸದಾಗಿ ನಿರ್ಮಿಸಲು ಉದ್ದೇಶಿಸಲಾಗಿರುವ ಕೈಗಾರಿಕಾ ಪ್ರದೇಶಗಳೆಂದರೆ ರಾಮನಗರ, ಹಾರೋಹಳ್ಳಿ 5ನೇ ಹಂತ, ಚಿಕ್ಕಬಳ್ಳಾಪುರದ ಗೌರಿಬಿದನೂರು 3ನೇ ಹಂತ, ತುಮಕೂರಿನ ಮಧುಗಿರಿ ಕೈಗಾರಿಕಾ ಪ್ರದೇಶ, ಕೋಲಾರದ ಜಕ್ಕಸಂದ್ರ 2ನೇ ಹಂತ, ಮಂಡ್ಯದ ಕುದುರೆಗುಂಡಿ ಕೈಗಾರಿಕಾ ಪ್ರದೇಶ, ಹಾಸನದ ಅರಸೀಕೆರೆ ಕೈಗಾರಿಕಾ ಪ್ರದೇಶ, ಯಾದಗಿರಿಯ ಕಡೇಚೂರು 2ನೇ ಹಂತ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಓಬಳಾಪುರ ಕೈಗಾರಿಕಾ ಪ್ರದೇಶ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಹೊಸ ಕೈಗಾರಿಕಾ ಪ್ರದೇಶಗಳ ನಿರ್ಮಾಣದಿಂದ ಕೈಗಾರಿಕಾ ವಲಯ ಬೆಂಗಳೂರಿನಿಂದ ಹೊರಗೂ ವಿಸ್ತಾರಗೊಳ್ಳಲಿದೆ. ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಸಿಗಲಿದ್ದು, ಉದ್ಯೋಗ ಸೃಷ್ಟಿಗೂ ಇದು ಅನುಕೂಲವಾಗಲಿದೆ ಎಂದು ಸಚಿವರು ತಿಳಿಸಿದರು.

ಈಗಾಗಲೇ ನಿರ್ಮಿಸಲಾಗಿರುವ ಕೈಗಾರಿಕಾ ಪ್ರದೇಶಗಳಲ್ಲಿ ಉದ್ಯಮಿಗಳಿಗೆ ರಸ್ತೆ, ಚರಂಡಿ, ಬೀದಿದೀಪ ಇತ್ಯಾದಿ ಮೂಲ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಕಳೆದ 10 ವರ್ಷಗಳಲ್ಲಿ ರೂ.525 ಕೋಟಿ ಅನುದಾನವನ್ನು ಕೆಐಎಡಿಬಿಗೆ ಬಿಡುಗಡೆ ಮಾಡಲಾಗಿದೆ. ಹಳೆಯ ಕೈಗಾರಿಕಾ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಕೈಗಾರಿಕಾ ಸಂಘಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಇದರ ಹೊರತಾಗಿ ಹೊಸದಾಗಿ ಎಂಟು ಕೈಗಾರಿಕಾ ಪ್ರದೇಶಗಳನ್ನು ನಿರ್ಮಿಸಲಾಗುತ್ತಿದೆ ಎಂದರು.

ಆಧಾರ: ಉದಯವಾಣಿ, ದಿನಾಂಕ:16.02.2022.

56. ಶಾಲೆ ಬಳಿಕ ಕಾಲೇಜಲ್ಲಿ ಹಿಜಾಬ್ ಕಲಹ ತೀವ್ರ

ದಿನದಿಂದ ದಿನಕ್ಕೆ ರಾಜ್ಯಾದ್ಯಂತ ಹಿಜಾಬ್ ಗದ್ದಲ ಹೆಚ್ಚಾಗುತ್ತಿದ್ದು, ಶಾಲೆಗಳ ಬಳಿಕ ಇದೀಗ ಪ್ರಾರಂಭವಾಗದ ಕಾಲೇಜುಗಳಿಗೂ ವಿಸ್ತರಿಸಿದೆ. ಸಮವಸ್ತ್ರ ನಿಯಮವಿರುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಉಡುಗೆ–ತೊಡುಗೆಗಳನ್ನು ಧರಿಸುವಂತಿಲ್ಲ ಎಂಬ ಹೈಕೋರ್ಟ್‌ನ ಕಡ್ಡಾಯ ಆದೇಶವನ್ನು ಉಲ್ಲಂಘಿಸಿದ ಪರಿಣಾಮ 22 ಜಿಲ್ಲೆಗಳ 78ಕ್ಕೂ ಅಧಿಕ ಶಾಲಾ–ಕಾಲೇಜುಗಳಲ್ಲಿ ಗೊಂದಲವೇರ್ಪಟ್ಟಿದೆ. ಶಿಕ್ಷಕರು, ಪೊಲೀಸರು ಮಾತ್ರವಲ್ಲದೆ ಸ್ಥಳಕ್ಕೆ ತಹಶೀಲ್ದಾರ್, ಜಿಲ್ಲಾಧಿಕಾರಿ, ಎಸ್ಪಿಗಳೇ ತೆರಳಿ ತಿಳುವಳಿಕೆ ಹೇಳಿದರೂ ಕ್ಯಾರೇ ಎನ್ನದೆ ಕೆಲ ವಿದ್ಯಾರ್ಥಿನಿಯರು ಪ್ರಾಣ ಬಿಟ್ಟರೂ ಹಿಜಾಬ್ ಬಿಡುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತಿದ್ದಾರೆ. 1078 ಕ್ಕೂ ಅಧಿಕ ವಿದ್ಯಾರ್ಥಿಗಳು ತರಗತಿಗಳಿಗೆ, ಪರೀಕ್ಷೆಗಳಿಗೆ ಗೈರು ಹಾಜರಾಗಿದ್ದಾರೆ.

ಮಂಗಳವಾರದಂತೆಯೇ ಬುಧವಾರವೂ 8 ಜಿಲ್ಲೆಗಳ 22 ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು, ಪೋಷಕರು ಪ್ರತಿಭಟನೆ ನಡೆಸಿದ್ದು ಕಾಂಗ್ರೆಸ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು, ಮುಸ್ಲಿಂ ಸಂಘಟನೆಗಳು ಸಾಥ್ ನೀಡಿವೆ. ಈ ವೇಳೆ ಹಲವೆಡೆ ಶಿಕ್ಷಕರು ಮತ್ತು ಪ್ರತಿಭಟನಾಕಾರರ ನಡುವೆ ವಾಗ್ವಾದ ನಡೆದರೆ, ರಾಮನಗರದಲ್ಲಿ ವಿದ್ಯಾರ್ಥಿಗಳು ಪೊಲೀಸರೊಂದಿಗೂ ಮಾತಿನ ಚಕಮಕಿ ನಡೆಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಉತ್ತರ ಕನ್ನಡ, ಹುಬ್ಬಳ್ಳಿ, ಶಿವಮೊಗ್ಗ ಜಿಲ್ಲೆಗಳ ಒಟ್ಟು 5 ಶಾಲೆಗಳಲ್ಲಿ ರಜೆ ಘೋಷಿಸಲಾಗಿತ್ತು.

ಧಾರವಾಡ, ಗದಗ, ಹಾವೇರಿ, ಬಳ್ಳಾರಿ, ವಿಜಯನಗರ, ಕೊಡಗು, ದಕ್ಷಿಣ ಕನ್ನಡ, ಮಂಡ್ಯ, ಶಿವಮೊಗ್ಗ, ರಾಮನಗರ, ಚಿಕ್ಕಮಗಳೂರು, ಮೈಸೂರು, ತುಮಕೂರು, ಉತ್ತರ ಕನ್ನಡ, ಬೆಳಗಾವಿ, ವಿಜಯಪುರ, ಚಿತ್ರದುರ್ಗ, ಕೊಪ್ಪಳ, ದಾವಣಗೆರೆ, ಹಾವೇರಿ, ಮೈಸೂರು, ಕಲಬರಗಿಯ ಹಲವು ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿ ಪ್ರವೇಶಕ್ಕೆ ಪಟ್ಟು ಹಿಡಿದಿದ್ದಾರೆ. ಕಲಬುರಗಿ ಜಿಲ್ಲೆಯ ಚಿಂಚೋಳಿಯ ಸರ್ಕಾರಿ ಕಾಲೇಜಿನಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ತರಗತಿಗಳಲ್ಲಿ ಕೂರಲು ಅವಕಾಶ ನೀಡಿದ್ದನ್ನು ವಿರೋಧಿಸಿ ಕೆಲ ವಿದ್ಯಾರ್ಥಿಗಳು ತಮಗೂ ಕೇಸರಿ ಶಾಲು ಹಾಕಲು ಅವಕಾಶ ನೀಡಬೇಕು ಎಂದು ವಾದ ಮಾಡಿದ್ದಾರೆ.

ಹಿಜಾಬೇ ಮುಖ್ಯ ಎಂದು ಹೈಡ್ರಾಮಾ: ಶಿಕ್ಷಣಕ್ಕಿಂತ ನಮಗೆ ಹಿಜಾಬ್ ಮುಖ್ಯ ಎಂದು ವಿದ್ಯಾರ್ಥಿಗಳು ವಾದಿಸಿದ್ದು ಹಲವೆಡೆ ಹೈಡ್ರಾಮಗಳು ನಡೆದಿವೆ. ಶಿವಮೊಗ್ಗದಲ್ಲಿ ಒಬ್ಬ ವಿದ್ಯಾರ್ಥಿನಿ ಪ್ರಾಣ ಹೋದರು ಸರಿ ಹಿಜಾಬ್ ಧರಿಸಿಯೇ ಸಿದ್ಧ ಎಂದು ಘೋಷಣೆ ಕೂಗಿದ್ದರೆ, ಓದು ಬಿಟ್ಟೇನು ಹಿಜಾಬ್ ಬಿಡೆನು ಎಂದು ವಿದ್ಯಾರ್ಥಿನಿಯೊಬ್ಬಳು ಪಾಲಕರೊಂದಿಗೆ ಆಗಮಿಸಿ ಶಾಲೆಯಲ್ಲಿ ವರ್ಗಾವಣೆ ಪ್ರಮಾಣ ಪತ್ರ (ಟಿಸಿ) ನೀಡುವಂತೆ ಆಗ್ರಹಿಸಿದ ಘಟನೆ ದಾವಣಗೆರೆಯಲ್ಲಿ ನಡೆದಿದೆ. ಇನ್ನು ತರಗತಿಗೆ ಅವಕಾಶ ನಿರಾಕರಿಸಿದ್ದಕ್ಕೆ ಮನೆಗೆ ಮರಳಿದ್ದ ಹಿಜಾಬ್ ಪರ ವಿದ್ಯಾರ್ಥಿನಿಯರು ಮತ್ತೆ ಕಾಲೇಜಿಗೆ ಬಂದು ಹಿಜಾಬ್ ಸಹಿತ ತರಗತಿ ಪ್ರವೇಶಿಸಲು ಅನುಮತಿ ನೀಡಿ ಎಂದು ಕಣ್ಣೀರು ಹಾಕಿದ ಪ್ರಸಂಗ ಶಿವಮೊಗ್ಗದ ಕಾಲೇಜೊಂದರಲ್ಲಿ ನಡೆದಿದೆ. ಏತನ್ಮಧ್ಯೆ ಶಿಕ್ಷಕರು, ಪೊಲೀಸರು, ಅಧಿಕಾರಿಗಳ ಮನವೊಲಿಕೆ ಬಳಿಕ ವಿದ್ಯಾರ್ಥಿಗಳು ಹಿಜಾಬ್ ತೆಗೆದಿಟ್ಟು ತರಗತಿ ಪ್ರವೇಶಿಸಿರುವ ಘಟನೆ ನಂಜನಗೂಡು, ಮಂಡ್ಯ, ರಾಮನಗರ, ಚಿಕ್ಕಮಗಳೂರು, ಕಲಬುರಗಿ ಜಿಲ್ಲೆಗಳ ಕೆಲವೊಂದು ಶಾಲೆಗಳಲ್ಲಿ ನಡೆದಿದೆ.

ಎಲ್ಲಿ ಏನಾಯ್ತು:

- 'ಪ್ರಾಣ ಹೋದರೂ ಸರಿ ಹಿಜಾಬ್ ಧರಿಸುತ್ತೇನೆ' ಎಂದು ಶಿವಮೊಗ್ಗದಲ್ಲಿ ವಿದ್ಯಾರ್ಥಿನಿ ಘೋಷಣೆ
- 'ಓದು ಬಿಟ್ಟೇನು, ಹಿಜಾಬ್ ಬಿಡೆನು' ಎಂದು ಕೂಗಿ ಟಿ.ಸಿ.ಕೇಳಿದ ದಾವಣಗೆರೆ ವಿದ್ಯಾರ್ಥಿನಿ.

- ರಾಮನಗರ, ಚಿಕ್ಕಮಗಳೂರು, ಮಂಡ್ಯ, ಕಲಬುರಗಿಯ ವಿವಿದೆಡೆ ಹಿಜಾಬ್ ತೆಗೆದ ವಿದ್ಯಾರ್ಥಿನಿಯರು.
- ಯಾದಗಿರಿ ಹುಣಸಗಿ ಶಾಲೆಯಲ್ಲಿ 75% ಮುಸ್ಲಿಂ ವಿದ್ಯಾರ್ಥಿನಿಯರೇ ಇದ್ದರೂ ಕೋರ್ಟ್ ಆದೇಶ ಪಾಲನೆ.
- ಚಿಂಚೋಳಿಯಲ್ಲಿ ಹಿಜಾಬ್ ಧರಿಸಿ ತರಗತಿಗೆ ಹಾಜರು. ಕೇಸರಿ ಶಾಲು ಧರಿಸಲು ಅವಕಾಶ ಕೋರಿದ ಇತರರು.

ಆಧಾರ: ಕನ್ನಡಪ್ರಭ, ದಿನಾಂಕ:17.02.2022.

57. ಆಡಳಿತ ಸುಧಾರಣೆಗೆ 1,165 ಶಿಫಾರಸು

ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2ರ ಎರಡು ಮತ್ತು ಮೂರನೇ ವರದಿಗಳನ್ನು ಆಯೋಗದ ಅಧ್ಯಕ್ಷ, ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯ ಭಾಸ್ಕರ್ ಅವರು ಸಿಎಂ ಬೊಮ್ಮಾಯಿ ಅವರಿಗೆ ಸಲ್ಲಿಸಿದರು. ಶೀಘ್ರ ಜಾರಿಗೊಳಿಸಲು ಸಾಧ್ಯವಿರುವ ಅಂಶಗಳನ್ನು ಅನುಷ್ಠಾನಕ್ಕೆ ತರಲು ಕ್ರಮವಹಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸಿಎಂ ಸೂಚಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ಇಂಧನ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಅಭಿವೃದ್ಧಿ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ಒಳಾಡಳಿತ ಇಲಾಖೆಗಳಿಗೆ ಸಂಬಂಧಿಸಿದ 1,165 ಶಿಫಾರಸುಗಳನ್ನು ವರದಿಯು ಒಳಗೊಂಡಿದೆ.

- **ಗ್ರಾಮೀಣ ಭಾಗದಲ್ಲಿ ದಂಡ ಹೆಚ್ಚಳ**
- **ಮದುವೆ ನೋಂದಣ ಅಧಿಕಾರ ಪಿಡಿಒಗೆ ನೀಡಲು ಆಯೋಗ ಅಭಿಮತ**

ಮೊದಲ ವರದಿಯಲ್ಲಿ ಕಂದಾಯ, ಆಹಾರ ಇಲಾಖೆ ಮತ್ತು ಸಾರಿಗೆ ಇಲಾಖೆಗಳಿಗೆ ಸಂಬಂಧಿಸಿದಂತೆ 856 ಶಿಫಾರಸು ಹೊಂದಿರುವ ವರದಿಯನ್ನು ಸಲ್ಲಿಸಲಾಗಿತ್ತು.

ಗ್ರಾಮೀಣಾಭಿವೃದ್ಧಿ

- ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ ಜೊತೆ ಗ್ರಾಮೀಣಾಭಿವೃದ್ಧಿ ರಸ್ತೆ ಅಭಿವೃದ್ಧಿ ಸಂಸ್ಥೆ ವಿಲೀನಗೊಳಿಸಲು ಶಿಫಾರಸು.
- ಅನಧಿಕೃತ, ಅಕ್ರಮ ನಿವೇಶನ ಮತ್ತು ಕಟ್ಟಡಗಳಿಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆಯ ಎರಡು ಪಟ್ಟು ದಂಡ ವಿಧಿಸುವಂತೆ ಗ್ರಾಮೀಣ ಭಾಗದಲ್ಲಿ ದಂಡ ವಿಧಿಸಲು ಸಲಹೆ.
- ಹಿಂದೂ ವಿವಾಹ ಕಾಯಿದೆಯಡಿ ನೋಂದಣಿಗಾಗಿ ಪಿಡಿಒಗಳನ್ನು ಪ್ರಾಧಿಕಾರಗಳಾಗಿ ಪರಿವರ್ತನೆ ಮಾಡಬೇಕು.
- ಗ್ರಾಪಂ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಿಂಚಣಿ ಅರ್ಜಿಗಳನ್ನು ಪಡೆದು ಶಿಫಾರಸ್ಸು ಮಾಡುವ ಅಧಿಕಾರ ನೀಡಲು ಸೂಚನೆ.

ನಗರಾಭಿವೃದ್ಧಿ ಇಲಾಖೆ

ಕೆಟಿಸಿಪಿ ಕಾಯಿದೆ ಸೆಕ್ಷನ್ 76/ಎಫ್ ಅಡಿ ವಿಶೇಷ ಆದೇಶ ನೀಡುವುದರ ಮೂಲಕ ಬಿ–ಖಾತಾ ನಿವೇಶನಗಳ ಭೂ ಪರಿವರ್ತನೆಗೆ ಶುಲ್ಕ ಹಾಗೂ ದಂಡ, ಯೋಜನಾ ಪ್ರಾಧಿಕಾರಕ್ಕೆ ಕಾಂಪೌಂಡಿಂಗ್ ಶುಲ್ಕ, ಕಟ್ಟಡ ಯೋಜನಾ ಮಂಜೂರಾತಿ ಶುಲ್ಕ ಹಾಗೂ ದಂಡ ಇತ್ಯಾದಿಗಳನ್ನು ಪಾವತಿಸಿಕೊಂಡು ಎ–ಖಾತಾಗಳಾಗಿ ಪರಿವರ್ತಿಸಬಹುದು. 2,400 ಚದರ ಅಡಿವರೆಗಿನ ನಿವೇಶನಗಳಲ್ಲಿ ಭೂ ಮಾಲೀಕರ ಸ್ವಯಂ ಘೋಷಣೆ ಮತ್ತು ಪ್ರಮಾಣೀಕರಣ ಕಡತ ಆಧಾರದ ಮೇಲೆ ಆನ್‌ಲೈನ್‌ನಲ್ಲಿ ಶುಲ್ಕ ಪಾವತಿಸಿಕೊಂಡು ಕಟ್ಟಡ ಯೋಜನೆಗೆ ಮಂಜೂರಾತಿ ನೀಡುವುದೂ ಸೇರಿದಂತೆ ನಗರಾಭಿವೃದ್ಧಿ ಇಲಾಖೆಗೆ ಅನೇಕ ಶಿಫಾರಸ್ಸು ಮಾಡಲಾಗಿದೆ.

ಪ್ರಮುಖ ಶಿಫಾರಸುಗಳೇನು

- ಸಾರ್ವಜನಿಕ ಉದ್ದೇಶಕ್ಕೆ ಸರಕಾರಿ ಜಮೀನನ್ನು ನಾಲ್ಕು ಹೆಕ್ಟೇರ್ ಮತ್ತು 5 ಕೋಟಿ ರೂ. ಮೌಲ್ಯದ ಜಮೀನಿಗೆ ಒಳಪಟ್ಟು ಮ್ಯುಟೇಷನ್ (ವರ್ಗಾವಣೆ) ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗೆ ನೀಡುವುದು.
- ನಾನಾ ಇಲಾಖೆ/ಮಂಡಳಿ ಇತ್ಯಾದಿಗಳಲ್ಲಿ ಆಗುವ ಅನುಪಯುಕ್ತ ವೆಚ್ಚ ತಡೆಯುವ ಕುರಿತು ಸಲಹೆ ನೀಡಲು ಸಲಹಾ ಸಮಿತಿ ರಚನೆ.
- ಸರಕಾರದ ಕಡತಗಳು ಇಲಾಖೆಯಿಂದ ಇಲಾಖೆಗೆ 5 ರಿಂದ 10 ಬಾರಿ ಚಲಾವಣೆಯಾಗುತ್ತಿವೆ. ಕಡತಗಳು ನಾಲ್ಕು ಹಂತಗಳಿಗಿಂತ ಹೆಚ್ಚು ಚಲಾವಣೆಯಾಗದಂತೆ ಕ್ರಮವಹಿಸುವುದು.
- ಗ್ರೂಪ್ 'ಸಿ' ಮತ್ತು 'ಡಿ' ನೌಕರರ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಜಾರಿ.
- ಅಂಚೆ ಕಚೇರಿಯನ್ನು ರಾಜ್ಯ ಸರಕಾರಿ ಸೇವೆ ಬಳಕೆಗೆ ಶಿಫಾರಸು,
- ಸಕಾಲದಲ್ಲಿ ಭೂಸ್ವಾಧೀನಕ್ಕೆ ಪರಿಹಾರ ನೀಡಬೇಕು. ವಿಳಂಬವಾದರೆ ಹೆಚ್ಚುವರಿ ಪರಿಹಾರ ಧನ ಕೂಡಬೇಕು. ಆಧಾರ್ ಸಂಖ್ಯೆ ಆಧಾರಿತ ಪಾವತಿ ಜಾರಿ.
- ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲೂ ಮೀಸಲಾತಿಗೆ ಸೂಚನೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ: 19.02.2022

58. ಪಾದಯಾತ್ರೆಗೆ ಜನಸಾಗರ

ಕೋವಿಡ್ ಕಾರಣಕ್ಕೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಮೇಕೆದಾಟು ಪಾದಯಾತ್ರೆಯ 2ನೇ ಇನಿಂಗ್ಸ್‌ಗೆ ರಾಮನಗರದಲ್ಲಿ ಕಾಂಗ್ರೆಸ್ ನಾಯಕರು ಮರು ಚಾಲನೆ ನೀಡಿದ್ದಾರೆ. ಮೇಕೆದಾಟು 2.0ಗೆ ಸಾವಿರಾರು ಮಂದಿ ಹೆಜ್ಜೆ ಹಾಕಿದ್ದು, 'ನಮ್ಮ ನೀರು–ನಮ್ಮ ಹಕ್ಕು' ಎಂಬ ಘೋಷವಾಕ್ಯಕ್ಕೆ ಧ್ವನಿಯಾದರು.

ಜೆಡಿಎಸ್‌ನ ಭದ್ರಕೋಟೆಯಾಗಿರುವ ರಾಮನಗರದಲ್ಲಿ ಮಂಡ್ಯ ಜಿಲ್ಲೆಯ ಜನರನ್ನು ಒಗ್ಗೂಡಿಸಿದ ಕೈ ನಾಯಕರು ತಮ್ಮ ಶಕ್ತಿ ಪ್ರದರ್ಶಿಸಿದರು. ತಮಿಳುನಾಡಿಗೆ ಹೆಚ್ಚುವರಿಯಾಗಿ ಹರಿಯುತ್ತಿರುವ ನೀರನ್ನು ಶೇಖರಿಸಿ, ರಾಜ್ಯದ ಜನರಿಗೆ ಕುಡಿಯುವ ನೀರು ಪೂರೈಸಲು ಕಾವೇರಿ ನದಿಗೆ ಅಡ್ಡಲಾಗಿ ಸಮತೋಲನ ಜಲಾಶಯ ನಿರ್ಮಿಸುವ ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ, ಜನವರಿ 9 ರಿಂದ 12 ರವರೆಗೆ (4

ದಿನ 60.5 ಕಿಲೋ ಮೀಟರ್) ಮೊದಲ ಹಂತದ ಪಾದಯಾತ್ರೆಯನ್ನು ಕಾಂಗ್ರೆಸ್ ಯಶಸ್ವಿಯಾಗಿ ನಡೆಸಿತ್ತು. ಕೋವಿಡ್ ನಿಯಮ ಮತ್ತು ಕೋರ್ಟ್ ಎಚ್ಚರಿಕೆ ಕಾರಣಕ್ಕೆ ಹೋರಾಟ ಸ್ಥಗಿತಗೊಳಿಸಲಾಗಿತ್ತು.

ಈ ಹಂತದಲ್ಲಿ 7 ದಿನದ 109 ಕಿ.ಮೀ ಬದಲಾಗಿ 5 ದಿನಗಳ ಕಾಲ 80 ಕಿಲೋ ಮೀಟರ್ ಪಾದಯಾತ್ರೆಗೆ ರಾಮನಗರದ ಟಿ.ಆರ್.ಮಿಲ್‌ನಲ್ಲಿ ಆದಿಚುಂಚನಗಿರಿ ಶಾಖ ಮಠದ ಕಾರ್ಯದರ್ಶಿ ಅನ್ನದಾನೇಶ್ವರ ಸ್ವಾಮೀಜಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ನಾಯಕ ಸಿದ್ದರಾಮಯ್ಯ, ಎಐಸಿಸಿ ಕಾರ್ಯದರ್ಶಿ ರಣ್‌ದೀಪ್ ಸಿಂಗ್ ಸುರ್ಜೇವಾಲಾ, ಬಿ.ಕೆ.ಹರಿಪ್ರಸಾದ್ ಸೇರಿದಂತೆ ಕಾಂಗ್ರೆಸ್ ನಾಯಕರು ಚಾಲನೆ ನೀಡಿದರು.

ಎಲ್ಲೆಡೆ ಸಂಚಾರ ದಟ್ಟಣೆ : ವೇದಿಕೆ ಕಾರ್ಯಕ್ರಮ 9 ಗಂಟೆಗೆ ಆರಂಭಗೊಂಡು ಒಂದು ಗಂಟೆ ಅವಧಿಯಲ್ಲಿ ಮುಗಿಸುವ ಯೋಜನೆ ಇತ್ತು. ಆದರೆ ಕಾರ್ಯಕ್ರಮ ಮುಗಿದ ಮಧ್ಯಾಹ್ನ ಸುಮಾರು 12 ಗಂಟೆ ಆಗಿತ್ತು. ಬಿಸಿಲು ಕಮ್ಮಿ ಇದ್ದಾಗಲೇ ಆರಂಭಗೊಳ್ಳಬೇಕಿದ್ದ ಪಾದಯಾತ್ರೆ ಸೂರ್ಯ ನೆತ್ತಿಗೆ ಏರುವ ವೇಳೆಗೆ ಚಾಲನೆ ಕಂಡಿತು. ಆದರೆ ಸುಮಾರು 3 ಗಂಟೆಗಳ ಕಾಲ ಪಾದಯಾತ್ರಿಗಳು ನಗರದ ಟಿ.ಆರ್‌ಮಿಲ್ ಆವರಣದಲ್ಲಿಯೇ ಕಾದು ಕುಳಿತರು. ಒಮ್ಮೆಲೆ ಪಾದಯಾತ್ರಿಗಳು ರಸ್ತೆಗೆ ಇಳಿದ ಪರಿಣಾಮವಾಗಿ ಟ್ರಾಫಿಕ್ ಜಾಮ್ ಉಂಟಾಯಿತು.

ಪ್ರಾರ್ಥನೆ: ಶನಿವಾರವೇ ನಗರಕ್ಕೆ ಆಗಮಿಸಿದ್ದ ಡಿ.ಕೆ ಶಿವಕುಮಾರ್ ಬಿಜಿಎಸ್ ಅಂಧರ ಶಾಲೆ ಆವರಣದಲ್ಲಿ ತಂಗಿದ್ದರು. ಬೆಳಗ್ಗೆ ಮಠದಲ್ಲಿನ ಗವಿಗಂಗಾಧರೇಶ್ವರ, ಶಕ್ತಿ ದೇವತೆ ಶ್ರೀ ಚಾಮುಂಡೇಶ್ವರಿ, ಪೀರನ್ ಷಾ ವಲಿ ಷಾ ದರ್ಗಾಕ್ಕೆ ತೆರಳಿ ಪಾರ್ಥನೆ ಸಲ್ಲಿಸಿದರು. ದಾರಿ ಉದ್ದಕ್ಕೂ ನೃತ್ಯ ಮಾಡಿದ ಕಲಾ ತಂಡಗಳನ್ನೂ ಉತ್ತೇಜಿಸುವ ಕೆಲಸವನ್ನು ಡಿಕೆಶಿ ಮಾಡಿದರು. ಪೂರ್ಣಕುಂಭ ಸ್ವಾಗತದೊಂದಿಗೆ ಡಿಕೆಶಿ ವೇದಿಕೆ ಏರಿದರು.

ಸಿದ್ದು, ಸುರ್ಜೇವಾಲಗೆ ಕಾದರು: ವೇದಿಕೆ ಬೆಳಿಗ್ಗೆ 10 ಗಂಟೆ ಸುಮಾರಿಗೆ ಬಂದ ಡಿ.ಕೆ.ಶಿವಕುಮಾರ್ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ರಾಜ್ಯ ಉಸ್ತುವಾರಿ ಸುರ್ಜೇವಾಲಾ ಅವರಿಗಾಗಿ ಸುಮಾರು ಅರ್ಧಗಂಟೆ ಕಾಲ ಕಾಯ್ದರು. 10.30ರ ವೇಳೆಗೆ ಇಬ್ಬರೂ ವೇದಿಕೆಗೆ ಬರುತ್ತಿದ್ದಂತೆ ವೇದಿಕೆಯಿಂದ ಇಳಿದ ಡಿ.ಕೆ.ಶಿ ಕಾರ್ಯಕರ್ತರ ಮಧ್ಯ ಸೇರಿಕೊಂಡು ಸುಮಾರು ಹೊತ್ತು ವೇದಿಕೆ ಹತ್ತಿರ ಸುಳಿಯಲೇ ಇಲ್ಲ. ವೇದಿಕೆಯಲ್ಲಿದ್ದ ಸಂಸದ ಡಿ.ಕೆ.ಸುರೇಶ್, ಅಧ್ಯಕ್ಷರು ವೇದಿಕೆಗೆ ಬರಬೇಕು ಎಂದು ಪದೇ ಪದೆ ಮೈಕ್ ಮೂಲಕ ಹೇಳಬೇಕಾಯಿತು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 28.02.2022

59. ರಷ್ಯಾ ದಾಳಿಗೆ ರಾಜ್ಯದ ವಿದ್ಯಾರ್ಥಿ ಸಾವು

ರಷ್ಯಾ–ಉಕ್ರೇನ್ ಯುದ್ಧದಲ್ಲಿ ಭಾರತೀಯ ವಿದ್ಯಾರ್ಥಿ, ಹಾವೇರಿ ಜಿಲ್ಲೆ ಚಳ್ಳಗೇರಿಯ ನವೀನ್ ಗ್ಯಾನಗೌಡರ (21) ಮೃತಪಟ್ಟಿದ್ದಾರೆ. ಯುದ್ಧದ ಆರನೇ ದಿನವಾದ ಉಕ್ರೇನ್ನ ಕಾರ್ಕಿವ್ ನಗರದ ಮೇಲೆ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಯಲ್ಲಿ ನವೀನ್ ಬಲಿಯಾಗಿದ್ದಾರೆ. ಇದರೊಂದಿಗೆ ಯುದ್ಧದ ಪರಿಣಾಮ ನೇರವಾಗಿ ಭಾರತಕ್ಕೂ ತಟ್ಟಿದಂತಾಗಿದೆ.

ನಾಲ್ಕನೇ ವರ್ಷದ ಮೆಡಿಕಲ್ ವಿದ್ಯಾರ್ಥಿಯಾಗಿದ್ದ ನವೀನ್ ಕಾರ್ಕಿವ್‌ನಲ್ಲಿ ಐವರು ಸ್ನೇಹಿತರೊಂದಿಗೆ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಿದ್ದರು. ಯುದ್ಧದ ಹಿನ್ನೆಲೆಯಲ್ಲಿ ನಾಲ್ಕು ದಿನಗಳಿಂದ ಬಂಕರ್‌ನಲ್ಲಿ ತಂಗಿದ್ದ ಅವರು ಬೆಳಗ್ಗೆ 7 ಗಂಟೆ ಸುಮಾರಿಗೆ ಅಗತ್ಯ ವಸ್ತುಗಳ ಖರೀದಿಗಾಗಿ

ಮಳಿಗೆಗೆ ಹೋಗಿದ್ದರು. ಈ ವೇಳೆ ರಷ್ಯಾ ಪಡೆಗಳು ಆ ಕಟ್ಟಡದ ಮೇಲೆ ಶೆಲ್ ದಾಳಿ ನಡೆಸಿವೆ. ಸರತಿ ಸಾಲಿನಲ್ಲಿ ನಿಂತಿದ್ದ ನವೀನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಭಾರತದ ವಿದೇಶಾಂಗ ಸಚಿವಾಲಯವು ನವೀನ್ ಸಾವಿನ ವಿಷಯವನ್ನು ಖಚಿತಪಡಿಸಿದೆ. ಕಾರ್ಕಿವ್‌ನ ಶವಾಗಾರದಲ್ಲಿ ನವೀನ್ ಮೃತದೇಹ ಇರಿಸಲಾಗಿದೆ. ಮೃತ ನವೀನ್ ಪೋಲೆಂಡ್ ಮೂಲಕ ಭಾರತಕ್ಕೆ ಸ್ಥಳಾಂತರಗೊಳ್ಳಲು ಸಿದ್ಧತೆ ನಡೆಸಿದ್ದರು. ಸಾವಿಗೆ ಕೆಲವೇ ಗಂಟೆಗಳ ಮುನ್ನ ಕುಟುಂಬ ಸದಸ್ಯರೊಂದಿಗೆ ವೀಡಿಯೊ ಕಾಲ್ ಮೂಲಕ ಮಾತನಾಡಿದ್ದರು

ವಿದ್ಯಾರ್ಥಿ ತಂದೆಗೆ ಪ್ರಧಾನಿ ಫೋನ್

ಪ್ರಧಾನಿ ಮೋದಿ ಅವರು ನವೀನ್ ತಂದೆ ಶೇಖರಪ್ಪ ಅವರಿಗೆ ಕರೆ ಮಾಡಿ ಸಾಂತ್ವನ ಹೇಳಿದ್ದಾರೆ. ನವೀನ್ ಸಾವಿನ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ, ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನೂ ಭೇಟಿ ಮಾಡಿರುವ ಪ್ರಧಾನಿ, ಉಕ್ರೇನ್ ಬಿಕ್ಕಟ್ಟಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಉಕ್ರೇನ್‌ನಲ್ಲಿ ಶೆಲ್ ದಾಳಿಗೆ ಹಾವೇರಿ ಜಿಲ್ಲೆಯ ವಿದ್ಯಾರ್ಥಿ ನವೀನ್ ಮೃತಪಟ್ಟಿರುವುದು ದುರಂತದ ಸಂಗತಿ.ನವೀನ್ ತಂದೆ ಅವರಿಗೆ ಕರೆ ಮಾಡಿ, ಸಾಂತ್ವನ ಹೇಳಿದ್ದೇನೆ. ನವೀನ ಅವರ ಮೃತದೇಹವನ್ನು ಭಾರತಕ್ಕೆ ತರಿಸಿಕೊಳ್ಳುವ ಎಲ್ಲ ಪ್ರಯತ್ನ ನಡೆಸಲಾಗುವುದು. ಯುದ್ಧಪೀಡಿತ ಪ್ರದೇಶವಾಗಿರುವುದರಿಂದ, ದೇಹ ಯಾವ ಸ್ಥಿತಿಯಲ್ಲಿ ಇದೆ ಮತ್ತು ಹೇಗೆ ತರಬೇಕು ಎಂಬ ಬಗ್ಗೆ ಚರ್ಚೆ ನಡೆದಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ: 02.03.2022

60. ನೀರಿಗಾಗಿ ನಡಿಗೆ ನಿರಂತರ

ಮೇಕೆದಾಟು ಪಾದಯಾತ್ರೆ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಕಾಂಗ್ರೆಸ್ ಪಕ್ಷದ ನೀರಿಗಾಗಿ ನಡಿಗೆ ರಾಜ್ಯದ ಇತರ ಭಾಗಗಳಲ್ಲೂ ಮುಂದುವರಿಯಲಿದೆ. ಮುಂದಿನ ದಿನಗಳಲ್ಲಿ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, ಕರಾವಳಿ, ಮಲೆನಾಡು ಕರ್ನಾಟಕದಲ್ಲಿ ಮೇಕೆದಾಟು ಮಾದರಿಯ ಹೋರಾಟ ಮಾಡುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಘೋಷಿಸಿದರು.

ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಮೇಕೆದಾಟು ಪಾದಯಾತ್ರೆಯ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪಾದಯಾತ್ರೆಯನ್ನು ಸಹಿಸದ ರಾಜ್ಯ ಸರ್ಕಾರ 10 ಪ್ರಕರಣ ದಾಖಲಿಸಿದೆ. ಜೈಲಿಗೆ ಕಳುಹಿಸಲೂ ಪಣ ತೊಟ್ಟಿತ್ತು. ಆದರೆ, ಕಾರ್ಯಕರ್ತರ ಬೆಂಬಲದಿಂದ ಅಡೆತಡೆ ದಾಟಿ ಯಶಸ್ವಿಯಾಗಿ ಪಾದಯಾತ್ರೆ ಮುಗಿದಿದೆ ಎಂದು ಹೇಳಿದರಲ್ಲದೆ, ಶ್ರಮಿಸಿದ ಎಲ್ಲರನ್ನೂ ಡಿಕೆಶಿ ಸ್ಮರಿಸಿದರು.

ಮುಖ್ಯಮಂತ್ರಿಗಳೇ, ನಿಮ್ಮ ಕೇಸ್‌ಗೆ ನಾವು ಸಿದ್ಧರಿದ್ದೇವೆ. ಇದು ಕಾಂಗ್ರೆಸ್ ಸಂಘಟನೆ ಯಾತ್ರೆ ಆಗಿರಲಿಲ್ಲ. ನೀರು ನಮ್ಮ ಹಕ್ಕು, ಅದಕ್ಕಾಗಿ ನಡಿಗೆ. ಆದರೂ ಕೇಸ್ ಹಾಕಿದೀರಿ, ಜೈಲಿಗೆ ಹೋಗಲೂ ಹೆದರಲ್ಲ. ಹೃದಯದಲ್ಲೊಂದು ಸಾಕ್ಷಿಗುಡ್ಡೆ ಇದಾಗಿದೆ ಎಂದು ಮಾತಲ್ಲೇ ಚುಚ್ಚಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಮಾತನಾಡಿ, ಈ ಪಾದಯಾತ್ರೆ ರಾಜಕೀಯಕ್ಕಾಗಿ ಅಲ್ಲ. ರಾಜಕೀಯ ಉದ್ದೇಶವನ್ನೂ ಹೊಂದಿಲ್ಲ. ಯಾವುದೇ ರಾಜಕೀಯ ಪಕ್ಷದ ವಿರುದ್ಧವೂ ಅಲ್ಲ. ಇದು ಬೆಂಗಳೂರಿಗರ ದಾಹ ನೀಗಿಸುವ ಕುಡಿಯುವ ನೀರಿಗಾಗಿ ಮಿಷನ್ ಎಂದರು. ಇತಿಹಾಸ ಬದಲಿಸುವ ಮತ್ತು ಬರೆಯುವ ಕಾಲ ಇದು. ಡಬಲ್ ಇಂಜಿನ್ ಸರ್ಕಾರ ರಾಜ್ಯದ ಜನರಿಗೆ

ಡಬಲ್ ದ್ರೋಹ ಮಾಡಿದೆ ಎಂದು ಟೀಕಿಸಿದ ಸುರ್ಜೆವಾಲ, ಪ್ರಧಾನಿ ಹಾಗೂ ಮುಖ್ಯಮಂತ್ರಿ ಅವರನ್ನು ಯೋಜನೆಗೆ ಏಕೆ ಅನುಮತಿ ಕೊಡುತ್ತಿಲ್ಲ ಎಂದು ಪ್ರಶ್ನಿಸುವ ಕೆಲಸ ಆಗಬೇಕು ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಜಾಗತಿಕ ಟೆಂಡರ್ ಮಾಡಿದ್ದರು. ಕೇಂದ್ರದಲ್ಲಿ ಮನಮೋಹನ್ ಸಿಂಗ್ ಹೋಗಿ ಮೋದಿ ಬಂದರು, ಯೋಜನೆಗೆ ಅನುಮೋದನೆ ಸಿಗಲಿಲ್ಲ. ಇದು ದೌರ್ಭಾಗ್ಯ. ಸಮುದ್ರ ಸೇರುವ ಕಾವೇರಿ ನೀರನ್ನು ನಮ್ಮ ದಾಹ ನೀಗಿಸಿಕೊಳ್ಳಲು ಬಳಸಿಕೊಳ್ಳುವ ಯೋಜನೆ ಇದು. ಇದಕ್ಕಾಗಿ ಕಾಂಗ್ರೆಸ್ ಹೋರಾಡುತ್ತಿದೆ. ಈ ಹೋರಾಟ ಮುಗಿದಿಲ್ಲ, ಶುರುವಾಗುತ್ತಿದೆ ಎಂದು ತಿಳಿಸಿದರು. ಬಿಜೆಪಿ ಈ ಯೋಜನೆ ಮಾಡಲ್ಲ. ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ಮೊದಲು ಈ ಯೋಜನೆ ಜಾರಿ ಮಾಡಲಿದೆ ಎಂದು ಹೇಳಿದರಲ್ಲದೆ, ಜನರ ಆಶೀರ್ವಾದ ಬೇಕು. ಕೈಗೆ ಕೈ ಜೋಡಿಸಿ ನಡೆಯಿರಿ ಎಂದು ವೇದಿಕೆಯಲ್ಲಿದ್ದ ನಾಯಕರಿಗೆ ಕೊನೆಯಲ್ಲಿ ಮೆದು ದನಿಯಲ್ಲಿ ಸುರ್ಜೇವಾಲ ಬುದ್ಧಿ ಹೇಳಿದರು.

ಆಧಾರ: ವಿಜಯವಾಣಿ, ದಿನಾಂಕ: 04.03.2022

61. ಶಾಲೆಗಳಿಗೆ ಹೈಟೆಕ್ ಭೋಜನಾಲಯ

ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ 'ಹೈಟೆಕ್ ಭೋಜನಾಲಯ' ನಿರ್ಮಾಣವಾಗಲಿವೆ. ಪ್ರತಿ ಭೋಜನಾಲಯಕ್ಕೆ ಸರ್ಕಾರ ರೂ. 10 ರಿಂದ 15 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ.

ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 52 ಸಾವಿರಕ್ಕೂ ಅಧಿಕ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಲಕ್ಷಾಂತರ ಮಕ್ಕಳು ಓದುತ್ತಿದ್ದಾರೆ. ಆದರೆ, ಅಕ್ಷರ ದಾಸೋಹ ಯೋಜನೆ ಅಡಿಯಲ್ಲಿ ಮಕ್ಕಳು ಶಾಲೆಯ ಆವರಣದಲ್ಲಿರುವ ಮರದ ಕೆಳಗೆ ಇಲ್ಲವೇ ತರಗತಿಯ ಕೊಠಡಿಯಲ್ಲೇ ನೆಲದ ಮೇಲೆ ಕುಳಿತುಕೊಂಡು ಊಟ ಮಾಡುತ್ತಿದ್ದಾರೆ. ಈ ಸಮಸ್ಯೆ ತಪ್ಪಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನರೇಗಾ ಯೋಜನೆಯಲ್ಲಿ ಪ್ರತಿ ಶಾಲೆಯಲ್ಲಿ 300 ಮಕ್ಕಳು ಒಟ್ಟಿಗೆ ಕುಳಿತು ಊಟ ಮಾಡುವ ಹೈಟೆಕ್ ಭೋಜನಾಲಯ ನಿರ್ಮಾಣಕ್ಕೆ ಕ್ರಮ ಕೈಗೊಂಡಿದೆ.

2021–22ನೇ ಸಾಲಿನಲ್ಲಿಯೇ ಸರ್ಕಾರಿ ಶಾಲೆಗಳಲ್ಲಿ ಭೋಜನಾಲಯ ನಿರ್ಮಾಣದ ಕ್ರಿಯಾ ಯೋಜನೆಗಳಿಗೆ ಸರ್ಕಾರವು ಒಪ್ಪಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ, 2022 ಜನವರಿಯಿಂದಲೇ ರಾಜ್ಯದ 6,021 ಗ್ರಾಪಂಗಳ ವ್ಯಾಪ್ತಿಯಲ್ಲಿ ಪ್ರತಿಯೊಂದು ಸರ್ಕಾರಿ ಶಾಲೆಗೆ ಅಡುಗೆ ಕೊಠಡಿ, ಭೋಜನಾಲಯ ನಿರ್ಮಾಣದ ಕಾಮಗಾರಿಯನ್ನು ನರೇಗಾ ಯೋಜನೆಯಲ್ಲಿ ಆರಂಭಗೊಂಡಿವೆ. ಕೆಲವೆಡೆ ಕಾಮಗಾರಿಗಳು ಅಂತಿಮ ಹಂತಕ್ಕೆ ಬಂದಿವೆ.

ಈಗಾಗಲೆ ನರೇಗಾ ಸರ್ಕಾರಿ ಶಾಲೆಗಳಿಗೆ ಆಟದ ಮೈದಾನ, ಕಾಂಪೌಂಡ್, ಶೌಚಗೃಹ, ಗ್ರಂಥಾಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಅಲ್ಲದೆ, ಮಕ್ಕಳಿಗೆ ಸತ್ವಭರಿತ ಊಟಕ್ಕಾಗಿ ಶಾಲೆಗಳಲ್ಲಿ ಕೈತೋಟ ನಿರ್ಮಿಸಿ ತರಕಾರಿ, ಹಣ್ಣು ಬೆಳೆಯಲಾಗುತ್ತಿದೆ. ಇದೀಗ ಅಡುಗೆ ಕೋಣೆ, ಭೋಜನಾಲಯ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದಾಗಿ ಮಕ್ಕಳ ಹಾಜರಾತಿ ಸಂಖ್ಯೆ ಕೂಡ 2025ರ ವೇಳೆಗೆ ಎಲ್ಲ ಸರ್ಕಾರಿ ಶಾಲೆಗಳಿಗೆ ಹೈಟೆಕ್ ಸೌಲಭ್ಯ ಕಲ್ಪಿಸುವ ಗುರಿ ಹಾಕಿಕೊಳ್ಳಲಾಗಿದೆ. ಕೇಂದ್ರ ಮತ್ತು ಸರ್ಕಾರದ ವಿವಿಧ ಯೋಜನೆಯಲ್ಲಿ ರಾಜ್ಯದಲ್ಲಿ 2009 ರಿಂದ 2014ರ ವರೆಗೆ 40,477 ಅಡುಗೆ ಕೋಣೆಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ, ವಿದ್ಯುತ್, ಕುಡಿಯುವ ನೀರು ಸೌಲಭ್ಯಗಳನ್ನು ಕಲ್ಪಿಸದಿರುವ

ಹಿನ್ನೆಲೆಯಲ್ಲಿ ಬಹುತೇಕ ಕಡೆ ಶಾಲೆಗಳಲ್ಲಿ ಅಡುಗೆ ಕೋಣೆಗಳು ಹಾಳಾಗಿವೆ. ಇದೀಗ ಸರ್ಕಾರ ಶಾಲೆಗಳ ನಿರ್ವಹಣೆ, ಕಾಮಗಾರಿಗಳ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿರುವುದರಿಂದ ಶಾಲೆಗಳಲ್ಲಿ ಅಭಿವೃದ್ಧಿ ಕೆಲಸಗಳು ವೇಗ ಪಡೆದುಕೊಂಡಿವೆ ಎಂದು ಜಿಪಂ, ತಾಪಂನ ನರೇಗಾ ಯೋಜನೆ ಅಧಿಕಾರಿಗಳು ತಿಳಿಸಿದ್ದಾರೆ.

ಬಿಸಿಯೂಟ ವಂಚಿತರಿಗೆ ಪೌಷ್ಟಿಕ ಪದಾರ್ಥ

ಕರೋನಾ ಸಮಯದಲ್ಲಿ ಶಾಲೆ ಇದ್ದ ಕಾರಣಕ್ಕೆ ಮಧ್ಯಾಹ್ನದ ಬಿಸಿಯೂಟ ಯೋಜನೆಯಿಂದ ವಂಚಿತರಾಗಿದ್ದ ರಾಜ್ಯದ 276 ಕರ್ನಾಟಕ ಪಬ್ಲಿಕ್ ಶಾಲೆಗಳ (ಕೆಪಿಎಸ್) 16560 ಮಕ್ಕಳಿಗೆ ಪೌಷ್ಟಿಕ ಆಹಾರ ಪದಾರ್ಥ ನೀಡಲು ಸರ್ಕಾರ ಮುಂದಾಗಿದೆ. ಕಳೆದ ವರ್ಷ ಏಪ್ರಿಲ್‌ನಲ್ಲಿ 15 ದಿನ, ಜುಲೈನಲ್ಲಿ 36 ದಿನ, ಆಗಸ್ಟ್‌ನಲ್ಲಿ 26, ಸೆಪ್ಟೆಂಬರ್‌ನಲ್ಲಿ 25 ದಿನ, ಅಕ್ಟೋಬರ್‌ನಲ್ಲಿ 16 ದಿನ ಮತ್ತು ನವೆಂಬರ್‌ನಲ್ಲಿ 3 ದಿನ ಸೇರಿ ಒಟ್ಟು 111 ದಿನಗಳ ಮಧ್ಯಾಹ್ನದ ಬಿಸಿಯೂಟ ನೀಡಿರಲಿಲ್ಲ. ಅದರ ಬದಲಿಗೆ ಆಹಾರ ಭದ್ರತಾ ಕಾಯ್ದೆಯಡಿ ಪೌಷ್ಟಿಕ ಆಹಾರ ಪದಾರ್ಥಗಳನ್ನು ವಿತರಿಸಲು ನಿರ್ಧರಿಸಲಾಗಿದೆ. ಈ ಕುರಿತು ಈಗಾಗಲೇ ಕೆಪಿಎಸ್ ಶಾಲೆಗಳ ಮುಖ್ಯಸ್ಥರಿಗೆ ಇಲಾಖೆ ಸೂಚನೆ ನೀಡಿದೆ.

ಯಾವ್ಯಾವ ಪದಾರ್ಥ: ಪ್ರತಿ ಮಗುವಿಗೆ ಒಂದು ಕೆಜಿ ತುಪ್ಪ, ಅರ್ಧ ಕೆಜಿ ಶೇಂಗಾ, ಅರ್ಧ ಕೆಜಿ ಬೆಲ್ಲ, ಅರ್ಧ ಕೆಜಿ ತೊಗರಿ, ಅರ್ಧ ಕೆಜಿ ಹೆಸರುಕಾಳು ನೀಡಲಾಗುತ್ತಿದ್ದು, ಪ್ರತಿ ಮಗುವಿಗೆ 851ರೂ. ಖರ್ಚು ಮಾಡಲು ಇಲಾಖೆ ಸೂಚನೆ ನೀಡಿ ಅನುದಾನವನ್ನು ಬಿಡುಗಡೆಗೊಳಿಸಿದೆ. ಕೆಎಂಎಫ್‌ನಿಂದ ತುಪ್ಪವನ್ನು ಖರೀಧಿಸಬೇಕು, ಗುಣಮಟ್ಟದ ಪದಾರ್ಥಗಳನ್ನು ಖರೀದಿಸಿ ಮಕ್ಕಳಿಗೆ ವಿತರಿಸಬೇಕು ಎಂದು ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

16560 ಮಕ್ಕಳಿಗೆ ಪ್ರಯೋಜನ

ರಾಜ್ಯದಲ್ಲಿರುವ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್‌ಕೆಜಿ 8280, ಯುಕೆಜಿ 8280 ಸೇರಿ 16560 ಮಕ್ಕಳು ಇದರ ಪ್ರಯೋಜನ ಪಡೆಯಲಿದ್ದಾರೆ. ಬೆಂಗಳೂರು ಉತ್ತರ 11, ಬೆಂಗಳೂರು ದಕ್ಷಿಣ 17, ಚಿತ್ರದುರ್ಗ 7, ದಾವಣಗೆರೆ 11, ಶಿವಮೊಗ್ಗ 10, ಬೆಂಗಳೂರು ಗ್ರಾಮಾಂತರ 4, ರಾಮನಗರ 6, ಕೋಲಾರ 7, ಚಿಕ್ಕಬಳ್ಳಾಪುರ 6, ತುಮಕೂರು 11, ಮಧುಗಿರಿ 7, ಮೈಸೂರು 12, ಮಂಡ್ಯ 9, ಚಾಮರಾಜನಗರ 4, ಕೊಡಗು 3, ಹಾಸನ 10, ಚಿಕ್ಕಮಗಳೂರು 8, ದಕ್ಷಿಣ ಕನ್ನಡ 9, ಉಡುಪಿ 8, ಧಾರವಾಡ 8, ಉತ್ತರ ಕನ್ನಡ 9, ಶಿರಸಿ 5, ಹಾವೇರಿ 7, ಗದಗ 7, ಬೆಳಗಾವಿ 8, ಚಿಕ್ಕೋಡಿ 10, ಬಾಗಲಕೋಟೆ 8, ವಿಜಯಪುರ 10, ಬೀದರ 6, ಬಳ್ಳಾರಿ 8, ಕಲಬುರಗಿ 10, ಕೊಪ್ಪಳ 8, ರಾಯಚೂರು 9 ಹಾಗೂ ಯಾದಗಿರಿ 3 ಸೇರಿ 276 ಶಾಲೆಗಳ 16560 ಮಕ್ಕಳು ಇದರ ಪ್ರಯೋಜನ ಪಡೆಯಲಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ: 04.03.2022

62. 2000 ಕೋಟಿ ಹೂಡಿಕೆಯ 48 ಯೋಜನೆಗೆ ಅಸ್ತು

ಕೈಗಾರಿಕಾ ಬೆಳವಣಿಗೆಗೆ ರಾಜ್ಯದಲ್ಲಿ ಇನ್ನಷ್ಟು ಉತ್ತೇಜನ ನೀಡುವ ಮೂಲಕ ಕರ್ನಾಟಕ ಸರ್ಕಾರವು ರೂ. 2,062.21 ಕೋಟಿ ಮೌಲ್ಯದ 48 ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿದೆ.

ಇದರಿಂದಾಗಿ ರಾಜ್ಯದಲ್ಲಿ 6,393ಕ್ಕೂ ಹೆಚ್ಚು ಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ್ ನಿರಾಣಿ ನೇತೃತ್ವದಲ್ಲಿ ನಡೆದ 130ನೇ ರಾಜ್ಯ ಮಟ್ಟದ ಏಕ ಗವಾಕ್ಷಿ ತೆರವು ಸಮಿತಿ ಸಭೆಯಲ್ಲಿ ಈ ಯೋಜನೆಗಳಿಗೆ ಅನುಮೋದನೆ ನೀಡಿದೆ.

ಸಮಿತಿಯು 50 ಕೋಟಿಗಿಂತ ಹೆಚ್ಚಿನ ಹೂಡಿಕೆಯೊಂದಿಗೆ 7 ಪ್ರಮುಖ ಬೃಹತ್ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಯೋಜನೆಗಳನ್ನು ಪರಿಗಣಿಸಿ ಅನುಮೋದನೆ ನೀಡಿದೆ.

1275.67 ಕೋಟಿ ಮೌಲ್ಯದ ಈ ಯೋಜನೆಗಳು ರಾಜ್ಯದಲ್ಲಿ 3181 ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ ಎಂದು ಸಚಿವ ನಿರಾಣಿ ತಿಳಿಸಿದ್ದಾರೆ. 15 ಕೋಟಿಗಿಂತ ಹೆಚ್ಚು ಮತ್ತು 50 ಕೋಟಿಗಿಂತ ಕಡಿಮೆ ಹೂಡಿಕೆಯ 40 ಹೊಸ ಯೋಜನೆಗಳನ್ನು ಅನುಮೋದಿಸಲಾಯಿತು. 124.87 ಕೋಟಿ ಮೌಲ್ಯದ ಈ ಯೋಜನೆಗಳು ರಾಜ್ಯದಲ್ಲಿ 3212 ಜನರಿಗೆ ಉದ್ಯೋಗಗಳನ್ನು ನೀಡಲಿದೆ. 61.67 ಕೋಟಿ ಹೂಡಿಕೆಯ ಮತ್ತೊಂದು ಯೋಜನೆಗೆ ಅನುಮೋದನೆ ನೀಡಲಾಗಿದೆ. ಒಟ್ಟು ರೂ. 2,062.21 ಕೋಟಿಗಳ ಹೂಡಿಕೆ ಯೊಂದಿಗೆ 6,393 ಜನರಿಗೆ ಉದ್ಯೋಗಾವಕಾಶವಿರುವ ಒಟ್ಟು 48 ಯೋಜನೆಗಳಿಗೆ ಅನುಮತಿ ನೀಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಭೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಇ.ವಿ.ರಮಣ ರೆಡ್ಡಿ, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಎನ್.ಶಿವಶಂಕರ, ಕರ್ನಾಟಕ ಉದ್ಯೋಗ ಮಿತ್ರದ ವ್ಯವಸ್ಥಾಪಕ ನಿರ್ದೇಶಕ ದೊಡ್ಡಬಸವರಾಜ್ ಸೇರಿ ಮತ್ತಿತರರು ಭಾಗವಹಿಸಿದ್ದರು.

ಹೊಸ ಯೋಜನೆಗಳು

- ರಾಕ್ಕೊಲಿನ್ ಇಂಡಿಯಾ ಎಂಟರ್‌ಪ್ರೈಸಸ್ ಲಿ. (ರಾಯ್ತಾನ್ ಗ್ರೂಪ್) 253.75 ಕೋಟಿ, ಉದ್ಯೋಗ 1306 ವ್ಯಕ್ತಿಗಳಿಗೆ.
- ನಿತಿನ್ ಸಾಯಿ ಅಗ್ರೋಟೆಕ್ ಪೈವೇಟ್ ಲಿಮಿಟೆಡ್‌ನಿಂದ 231.82 ಕೋಟಿ ಯೋಜನೆಯು 965 ವ್ಯಕ್ತಿಗಳಿಗೆ ಉದ್ಯೋಗಾವಕಾಶವನ್ನು ಹೊಂದಿದೆ.
- 165 ಉದ್ಯೋಗಗಳೊಂದಿಗೆ ಬೈಟ್ ಪ್ಲಕ್ಸಿ ಇಂಟರ್ ನ್ಯಾಷನಲ್ ಪೈವೇಟ್ ಲಿಮಿಟೆಡ್‌ನಿಂದ 89.10 ಕೋಟಿ ಹೂಡಿಕೆ.
- 85 ಜನರಿಗೆ ಉದ್ಯೋಗ ಸೃಷ್ಟಿಯೊಂದಿಗೆ ಕುಕ್ಸನ್ ಇಂಡಿಯಾ ಪೈವೇಟ್ ಲಿಮಿಟೆಡ್ ನಿಂದ 75 ಕೋಟಿ ಯೋಜನೆ.
- ಅಡೋಕ್ ಎನ್‌ಗ್ರಾಮ್ ಫಾರ್ಮ ಲಿಮಿಟೆಡ್‌ನಿಂದ 74.52 ಕೋಟಿ ಯೋಜನೆ, 115 ಜನರಿಗೆ ಉದ್ಯೋಗ ಸೃಷ್ಟಿ.
- 84 ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿರುವ ಸ್ಟರ್ಲಿಂಗ್ ಪೈವೇಟ್ ಲಿ., ನಿಂದ ರೂ.61.86 ಕೋಟಿ ಹೂಡಿಕೆ.

ಆಧಾರ: ಉದಯವಾಣಿ, ದಿನಾಂಕ: 07.03.2022

63. ಕೃಷಿ ಪಂಪ್‌ಸೆಟ್‌ಗೆ ಸೌರವಿದ್ಯುತ್ : ಸಂಪುಟ ಅಸ್ತು

ರಾಜ್ಯದಲ್ಲಿ ಜಾಲಮುಕ್ತ ಸೌರಪಂಪ್‌ಸೆಟ್ ಯೋಜನೆ ಜಾರಿಗೊಳಿಸುವ ಸಂಬಂಧ ಪಿಎಂ–ಕುಸುಮ್–ಬಿ (ಕಿಸಾನ್ ಊರ್ಜಾ ಸುಕರ್ಷಾ ಏವಂ ಉತ್ಥಾನ್ ಮಹಾ ಅಭಿಯಾನ್) ಯೋಜನೆಗೆ ರಾಜ್ಯ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿ ಮಹತ್ವದ ನಿರ್ಧಾರ ಕೈಗೊಂಡಿದೆ. ವಿಧಾನಸೌಧದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಗೆ ಒಪ್ಪಿಗೆ ನೀಡಲಾಗಿದ್ದು, ರಾಜ್ಯದಲ್ಲಿ 10 ಸಾವಿರ ರೈತ ಫಲಾನುಭವಿಗಳಿಗೆ ಈ ಸೌಲಭ್ಯ ನೀಡಲಾಗುತ್ತದೆ. ರೈತರ ಹೊಲದಲ್ಲಿ ಸೋಲಾರ್ ಪ್ಯಾನಲ್ ಅಳವಡಿಸಿ, ಅಲ್ಲಿ ಉತ್ಪಾದನೆಯಾದ ವಿದ್ಯುತ್ ಅನ್ನು ಪಂಪ್‌ಸೆಟ್‌ಗಳಿಗೆ ಬಳಕೆ ಮಾಡಲಾಗುತ್ತದೆ. ಈ ಯೋಜನೆಯಿಂದ ಯಾವುದೇ ವಿದ್ಯುತ್ ಜಾಲದಿಂದ ಸಂಪರ್ಕ ಪಡೆಯಬೇಕಾದ ಅಗತ್ಯ ಇರುವುದಿಲ್ಲ. ಒಟ್ಟು ರೂ. 307.23 ಕೋಟಿ ವೆಚ್ಚವಾಗಲಿದ್ದು, ರಾಜ್ಯ ಸರ್ಕಾರವು ರೂ. 106.97 ಕೋಟಿ ಭರಿಸಲಿದೆ. ಉಳಿದ ಮೊತ್ತವನ್ನು ಕೇಂದ್ರ ಸರ್ಕಾರವು ಭರಿಸಲಿದೆ.

ಪಿಎಂ–ಕುಸುಮ್–ಬಿ ಯೋಜನೆ ಹೊಸ ಪಂಪ್‌ಸೆಟ್‌ಗೆ ಮಾತ್ರ ಅನ್ವಯವಾಗುತ್ತದೆ. 3 ಎಚ್‌ಪಿ ಹೊಂದಿರುವ 250, 5 ಎಚ್‌ಪಿ ಹೊಂದಿರುವ 750 ಮತ್ತು 7.5 ಎಚ್‌ಪಿ ಪಂಪ್ ಸೆಟ್ ಹೊಂದಿರುವ 10 ಸಾವಿರ ರೈತರಿಗೆ ಈ ಸೌಲಭ್ಯ ಲಭ್ಯವಾಗಲಿದೆ. ಫಲಾನುಭವಿ ರೈತರನ್ನು ಕ್ರೆಡೆಲ್ ಸಂಸ್ಥೆಯ ಮೂಲಕ ಅನ್‌ಲೈನ್ ಮೂಲಕ ಆಯ್ಕೆ ಮಾಡಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಆರ್ಥಿಕ ಹೊಣೆಗಾರಿಕೆ ತಿದ್ದುಪಡಿ ವಿಧೇಯಕಕ್ಕೆ ಸಮ್ಮತಿ

ಇದೇ ವೇಳೆ ಆರ್ಥಿಕ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಸಚಿವ ಸಂಪುಟ ಸಭೆಯು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಮಸೂದೆ–2022 ಅನ್ನು ಅನುಮೋದಿಸಿದೆ.

ಹಣಕಾಸಿನ ಕೊರತೆಯ ಮಿತಿಯನ್ನು ಶೇ.3 ರಿಂದ ಶೇ.3.5ಕ್ಕೆ ಹೆಚ್ಚಿಸುವ ಪ್ರಸ್ತಾಪ ಇದೆ. ಕೋವಿಡ್ ನಿಂದಾಗಿ ಆರ್ಥಿಕ ಸಂಕಷ್ಟ ಎದುರಾಗಿದ್ದು, ಸಾಲ ಹೆಚ್ಚಳದಿಂದ ಆರ್ಥಿಕ ಸವಾಲನ್ನು ಎದುರಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಹೀಗಾಗಿ ಹಣಕಾಸಿನ ಕೊರತೆಯ ಮಿತಿಯನ್ನು ಹೆಚ್ಚಿಸಲಾಗುತ್ತಿದೆ. ರಾಜ್ಯ ಸರ್ಕಾರವು ಕಳೆದ ಹಣಕಾಸು ವರ್ಷ ಮತ್ತು ಅದಕ್ಕೂ ಹಿಂದಿನ ವರ್ಷವೂ ಇದೇ ರೀತಿಯ ತಿದ್ದುಪಡಿಯನ್ನು ತಂದಿದ್ದು, ಇದು ಈ ಬಾರಿಯ ತಿದ್ದುಪಡಿಯಾಗಿರುತ್ತದೆ. 2022–23ನೇ ಆರ್ಥಿಕ ವರ್ಷಕ್ಕೆ ಈ ತಿದ್ದುಪಡಿ ಅನ್ವಯವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಕೈಗಾರಿಕೆಗೆ ಭೂಮಿ ಕೊಟ್ಟವರಿಗೆ ಹೆಚ್ಚಿನ ಪರಿಹಾರ: ಸಂಪುಟ ಒಪ್ಪಿಗೆ

ಕೈಗಾರಿಕಾ ಅಭಿವೃದ್ಧಿಗಾಗಿ ಭೂಮಿ ನೀಡುವವರಿಗೆ ಹೆಚ್ಚಿನ ಪರಿಹಾರ ನೀಡಲು ಮತ್ತು ಸಂಬಂಧಿಸಿದ ವ್ಯಾಜ್ಯಗಳನ್ನು ತಪ್ಪಿಸುವ ಸಂಬಂಧ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಗೆ ತಿದ್ದುಪಡಿ ತರಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ವಿಧಾನಸೌಧದಲ್ಲಿ ಸಿಎಂ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ– 2022ಕ್ಕೆ ಅನುಮೋದನೆ ನೀಡಲಾಗಿದೆ.

ಕೆಐಎಡಿಬಿ ಕಾಯ್ದೆ 1966ರ ಪ್ರಕಾರ ಕೈಗಾರಿಕಾ ಅಭಿವೃದ್ಧಿಗೆ ಭೂಮಿ ಮುಟ್ಟು ಗೋಲು ಹಾಕಿಕೊಳ್ಳುವ ಭೂ ಮಾಲೀಕರಿಗೆ ಸರ್ಕಾರ ಪರಿಹಾರ ನೀಡುತ್ತದೆ. ಆದರೂ ಒದಗಿಸಿದ ಪರಿಹಾರದ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತವಾಗಿ ಹಲವು ದಾವೆಗಳನ್ನು ಹೂಡಲಾಗುತ್ತಿದೆ. ಹೀಗಾಗಿ ತಿದ್ದುಪಡಿಗೆ ಸರ್ಕಾರ ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ನ್ಯಾಯಯುತ ಪರಿಹಾರದ ಹಕ್ಕು, ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವಸತಿ ಕಾಯ್ದೆ 2013ರ ಇತ್ತೀಚಿನ ಶಾಸನವು ಮಾಲೀಕರಿಗೆ ಹೆಚ್ಚಿನ ಪರಿಹಾರವನ್ನು ಒದಗಿಸುತ್ತದೆ ಎಂದು ಸರ್ಕಾರ ತಿಳಿಸಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ: 12.03.2022

64. ಕಂದಾಯ ಕ್ರಾಂತಿ

ರೈತರ ಮನೆಬಾಗಿಲಿಗೆ ಕಂದಾಯ ಇಲಾಖೆಯ ದಾಖಲೆಗಳನ್ನು ತಲುಪಿಸುವ ಮಹತ್ವಾಕಾಂಕ್ಷೆಯ 'ಮನೆ ಬಾಗಿಲಿಗೆ ಕಂದಾಯ ದಾಖಲೆ' ಯೋಜನೆಗೆ ರಾಜ್ಯದ 31 ಜಿಲ್ಲೆಗಳ 224 ಕ್ಷೇತ್ರಗಳಲ್ಲಿ ಚಾಲನೆ ನೀಡಲಾಯಿತು. ದೇಶದಲ್ಲೇ ಮೊದಲನೆಯದ್ದು ಎನ್ನಲಾದ ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಕುಗ್ರಾಮ ಗುಂಗೀರ್ಲಹಳ್ಳಿಯಲ್ಲಿ ಅಧಿಕೃತವಾಗಿ ಚಾಲನೆ ನೀಡಿದರು. ಈ ಕಾರ್ಯಕ್ರಮದ ಮೂಲಕ ಒಂದೇ ದಿನ ರಾಜ್ಯಾದ್ಯಂತ 55 ಲಕ್ಷ ರೈತರಿಗೆ 5 ಕೋಟಿಯಷ್ಟು ಕಂದಾಯ ದಾಖಲೆಗಳನ್ನು ಉಚಿತವಾಗಿ ವಿತರಿಸಲಾಯಿತು.

ಗುಂಗೀರ್ಲಹಳ್ಳಿಯಲ್ಲಿ 13 ಕುಟುಂಬಗಳಿಗೆ ಸಾಂಕೇತಿಕವಾಗಿ ಕಂದಾಯ ದಾಖಲೆಗಳನ್ನು ವಿತರಿಸಿದ ಬಳಿಕ ಮಾತನಾಡಿದ ಬೊಮ್ಮಾಯಿ, ಕಂದಾಯ ಇಲಾಖೆಯಲ್ಲಿ ಈ ಯೋಜನೆ ಹೊಸ ಕ್ರಾಂತಿ ಸೃಷ್ಟಿಸಲಿದೆ ಎಂದು ಬಣ್ಣಿಸಿದರು. ಈ ಕಾರ್ಯಕ್ರಮದಿಂದ ರೈತರು, ಸಾರ್ವಜನಿಕರು ದಾಖಲೆ ಪತ್ರಗಳಿಗಾಗಿ ಪದೇ ಪದೇ ಸರ್ಕಾರಿ ಕಚೇರಿಗೆ ಅಲೆದಾಡುವುದು ತಪ್ಪಲಿದೆ. ದೇಶ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಬಡವರು, ರೈತರು, ದೀನದಲಿತರು, ಹಿಂದುಳಿದ ವರ್ಗದವರ ಬಗ್ಗೆ ಕಾಂಗ್ರೆಸ್ಸಿಗರು ಮಾತನಾಡಿದ್ದೇ ಹೆಚ್ಚು. ಬಡವರು, ದೀನದಲಿತರೆಲ್ಲ ಉದ್ಧಾರವಾಗಿದ್ದರೆ, ಇಂದು ನಾವು ಕಂದಾಯ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಹೇಳಿದರು. ಭೂ ದಾಖಲೆಯನ್ನು ಪಡೆಯುವುದು ಪ್ರತಿಯೊಬ್ಬರ ಹಕ್ಕು.

ಆ ಹಕ್ಕನ್ನು ಅತ್ಯಂತ ಸರಳ ರೀತಿಯಲ್ಲಿ ಪಡೆಯಲು ಈ ಮಹತ್ವದ ಯೋಜನೆ ಸಹಕಾರಿಯಾಗಲಿದೆ. ಕಂದಾಯ ದಾಖಲೆಗಳನ್ನು ಫಲಾನುಭವಿಗಳ ಮನೆಬಾಗಿಲಿಗೆ ವಿತರಿಸುವ ಈ ವಿನೂತನ ಯೋಜನೆ 224 ಕ್ಷೇತ್ರಗಳಲ್ಲಿ ಪಲ್ಸ್ ಪೋಲಿಯೋ ಕಾರ್ಯ ರೀತಿ ನಡೆಯುತ್ತಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು.

ರೈತರ ಹಕ್ಕನ್ನು ನಿರ್ಧರಿಸುವ ದಾಖಲೆಗಳಾದ ಪಹಣಿ, ಅಟ್ಲಾಸ್, ಜಾತಿ ಹಾಗೂ ಆದಾಯ ಪ್ರಮಾಣ ಪತ್ರಗಳನ್ನು ಮುದ್ರಿಸಿ ಕುಟುಂಬವಾರು, ಗ್ರಾಮವಾರು ವಿಂಗಡಿಸಿ ಪೂರ್ವ ಮುದ್ರಿತ ಫೈಲ್ ಅಥವಾ ಫೋಲ್ಡರ್‌ನಲ್ಲಿ ಹಾಕಿ ಸಂಬಂಧಿಸಿದ ರೈತ ಕುಟುಂಬಕ್ಕೆ ತಲುಪಿಸುವ ವಿಶಿಷ್ಟ ಯೋಜನೆ ಇದಾಗಿದ್ದು, ಕಂದಾಯ ಇಲಾಖೆ ಸಿಬ್ಬಂದಿಯೇ ಖುದ್ದು ರೈತರ ಮನೆ ಬಾಗಿಲಿಗೆ ತೆರಳಿ ದಾಖಲೆಗಳನ್ನು ವಿತರಿಸುವರು.

ಹಬ್ಬದ ವಾತಾವರಣ: ಬೊಮ್ಮಾಯಿ ಆಗಮನದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಚಿಕ್ಕಬಳ್ಳಾಪುರ ನಗರದಿಂದ 15 ಕಿ.ಮೀ. ದೂರದಲ್ಲಿರುವ ಪರಿಶಿಷ್ಟ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕುಗ್ರಾಮದಲ್ಲಿ ಸಿಎಂಗೆ ಪೂರ್ಣ ಕುಂಭ ಸ್ವಾಗತ ನೀಡಲಾಯಿತು. ಕಾರ್ಯಕ್ರಮಕ್ಕೂ ಮೊದಲು ಮುಖ್ಯಮಂತ್ರಿ ಅವರು ಗ್ರಾಮಸ್ಥರ ಮನೆಗೆ ಹೋಗಿ ಅವರ ಅಹವಾಲು ಆಲಿಸಿದ್ದು ವಿಶೇಷವಾಗಿತ್ತು.

ಶಿಕಾರಿಪುದಲ್ಲಿ ಬಿಎಸ್‌ವೈ: ಮುಖ್ಯಮಂತ್ರಿ ಚಿಕ್ಕಬಳ್ಳಾಪುರದಲ್ಲಿ ಈ ಯೋಜನೆಗೆ ಚಾಲನೆ ನೀಡಿದರೆ, ಶಿವಮೊಗ್ಗದ ಶಿಕಾರಿಪುರದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಮೈಸೂರಲ್ಲಿ ಸಚಿವ ಎಸ್.ಟಿ.ಸೋಮಶೇಖರ್, ಬೆಳಗಾವಿಯಲ್ಲಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ದಕ್ಷಿಣ ಕನ್ನಡ ಜಿಲ್ಲೆಯ ಪಡುಮಾನ್ನಾಡು ಗ್ರಾಪಂನಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಬಂಟ್ವಾಳದ ಅಮ್ಮುಂಜೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿ ವಿವಿಧ ಸಚಿವರು, ಜನಪ್ರತಿನಿಧಿಗಳು, ಶಾಸಕರು ಕಾರ್ಯಕ್ರಮ ಉದ್ಘಾಟಿಸಿದರು.

ಆಧಾರ: ಕನ್ನಡ ಪ್ರಭ, ದಿನಾಂಕ: 13.03.2022

65. ಉದ್ಯೋಗದಲ್ಲಿ ಸ್ತ್ರೀ ಶಕ್ತಿ ಹೆಚ್ಚಳದ ಖಾತ್ರಿ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಸದ್ಯ ಕರ್ನಾಟಕದಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಸುಮಾರು ಶೇ.50 ರಷ್ಟಿದ್ದು, ಮುಂದಿನ ಆರ್ಥಿಕ ವರ್ಷದೊಳಗೆ ಶೇ.60ಕ್ಕೆ ಹೆಚ್ಚಿಸುವ ಗುರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹೊಂದಿದೆ.

ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಕಡಿಮೆ ಇದೆ. ಕೇರಳದಲ್ಲಿ ಶೇ.89.35, ತಮಿಳುನಾಡಿನಲ್ಲಿ ಶೇ.85.27, ಆಂಧ್ರಪ್ರದೇಶದಲ್ಲಿ ಶೇ.57.26, ತೆಲಂಗಾಣದಲ್ಲಿ ಶೇ.58.22 ಮಹಿಳೆಯರ ಪಾಲ್ಗೊಳ್ಳುವಿಕೆ ಇದೆ. ಆದರೆ, ಮಹಿಳಾ ಕಾಯಕ ಬಂಧುಗಳ ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ರಾಜ್ಯದ ಬೆಳಗಾವಿ ಜಿಲ್ಲೆಯ ಕಂಗ್ರಾಳಿ, ಬಿ.ಕೆ. ಬೆನಕನಹಳ್ಳಿ, ಮಂಡೋಳಿ ಮತ್ತಿತರ ಗ್ರಾಪಂಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣವು ಶೇ.90ಕ್ಕಿಂತಲೂ ಅಧಿಕವಿರುವುದು ಹೆಮ್ಮೆಯ ಸಂಗತಿಯಾಗಿದೆ.

ಪ್ರಸ್ತುತ ಆರ್ಥಿಕ ವರ್ಷಕ್ಕೆ ಕೇಂದ್ರ ಸರಕಾರ ನೀಡಿದ್ದ 13 ಕೋಟಿ ಮಾನವ ದಿನಗಳ ಉದ್ಯೋಗ ಸೃಜನೆ ಗುರಿಯನ್ನು ಡಿಸೆಂಬರ್‌ನಲ್ಲೇ ಪೂರ್ಣಗೊಳಿಸಿ ಹೆಚ್ಚುವರಿ ಗುರಿ ನೀಡುವಂತೆ ಕೋರಲಾಗಿತ್ತು. ಕೇಂದ್ರ ಸರಕಾರವು ರಾಜ್ಯದ ಮನವಿಯನ್ನು ಪುರಸ್ಕರಿಸಿ 14 ಕೋಟಿ ಮಾನವ ದಿನಗಳ ಹೆಚ್ಚುವರಿ ಉದ್ಯೋಗ ಸೃಜನೆಗೆ ಅವಕಾಶ ಮಾಡಿಕೊಟ್ಟಿತ್ತು. ಇದರಿಂದ ರಾಜ್ಯಕ್ಕೆ ರೂ. 715 ಕೋಟಿಗಳ ಅನುದಾನ ಹೆಚ್ಚುವರಿಯಾಗಿ ಲಭ್ಯವಾಗಿತ್ತು.

ರಾಜ್ಯಕ್ಕೆ ನೀಡಲಾಗಿದ್ದ 14 ಕೋಟಿ ಮಾನವ ದಿನಗಳ ಉದ್ಯೋಗ ಸೃಜನೆಯ ಪರಿಷ್ಕೃತ ಗುರಿಯನ್ನು ಜನವರಿ ತಿಂಗಳಿನಲ್ಲಿಯೇ ಪೂರ್ಣಗೊಳಿಸಿ ಪುನಃ ಗುರಿಯನ್ನು ಪರಿಷ್ಕರಿಸುವಂತೆ ಕೇಂದ್ರ ಸರಕಾರವನ್ನು ಕೋರಲಾಗಿತ್ತು. ರಾಜ್ಯದ ಕೋರಿಕೆಯನ್ನು ಪರಿಗಣಿಸಿ ಕೇಂದ್ರ ಸರಕಾರವು 16 ಕೋಟಿ ಮಾನವ ದಿನಗಳ ಉದ್ಯೋಗ ಸೃಜನೆಗೆ ಮಂಜೂರಾತಿ ನೀಡಿದ್ದು, ಇದರಿಂದ ರೂ. 816 ಕೋಟಿಗಳ ಅನುದಾನ ಹೆಚ್ಚುವರಿಯಾಗಿ ರಾಜ್ಯಕ್ಕೆ ಲಭ್ಯವಾಗುತ್ತದೆ. ಪ್ರಸ್ತುತ ಸಾಲಿನ ಪರಿಷ್ಕೃತ 16 ಕೋಟಿ ಮಾನವ

ದಿನಗಳ ಉದ್ಯೋಗ ಸೃಜನೆಯ ಗುರಿಯಲ್ಲಿ ಇಲ್ಲಿಯವರೆಗೂ 15.27 ಕೋಟಿ ಮಾನವ ದಿನಗಳ ಉದ್ಯೋಗ ಸೃಜನೆ ಮಾಡಲಾಗಿದೆ. ಇದರಲ್ಲಿ ಮಹಿಳೆಯರ ಉದ್ಯೋಗ ಸೃಜನೆ, ಪ್ರಮಾಣ ಶೇ.49.99ರಷ್ಟು ಇದೆ. ಅಂದರೆ, ಯೋಜನೆಯಡಿ ಪ್ರಸ್ತುತ ವರ್ಷದಲ್ಲಿ 30.81 ಲಕ್ಷ ಮಹಿಳೆಯರಿಗೆ ಉದ್ಯೋಗ ಒದಗಿಸಲಾಗಿದೆ.

ದೇಶದಲ್ಲೇ ಪ್ರಥಮ ಪ್ರಯತ್ನವಾಗಿ ರಾಜ್ಯದ 2,400ಕ್ಕೂ ಹೆಚ್ಚು ಗ್ರಾಪಂಗಳಿಗೆ ಪೂರ್ಣ ಪ್ರಮಾಣದಲ್ಲಿ ಮಹಿಳೆಯರನ್ನು ಗ್ರಾಮ ಕಾಯಕ ಮಿತ್ರರೆಂದು ನೇಮಕ ಮಾಡಲಾಗಿದೆ. ಜೊತೆಗೆ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ವಿಶೇಷ ಮಹಿಳಾ ಕಾಯಕೋತ್ಸವವನ್ನೂ ಹಮ್ಮಿಕೊಳ್ಳಲಾಗಿದೆ. ಗ್ರಾಪಂ ಮಟ್ಟದ (ಜಿಪಿಎಲ್‌ಎಫ್) ಮತ್ತು ಸಮೂಹ ಮಟ್ಟದ (ಸಿಎಲ್‌ಎಫ್) ಸ್ವ ಸಹಾಯ ಸಂಘಗಳ ಒಕ್ಕೂಟಗಳನ್ನು ನರೇಗಾ ಯೋಜನೆಯಡಿ ವೈಯಕ್ತಿಕ ಮತ್ತು ಜೀವನೋಪಾಯ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಕಾರ್ಯಕ್ರಮ ಅನುಷ್ಠಾನ ಏಜೆನ್ಸಿಗಳೆಂದು ಗುರುತಿಸಲು ಕ್ರಮವಹಿಸಲಾಗಿದೆ. ಅರಣ್ಯಕರಣ ಮತ್ತು ತೋಟಗಾರಿಕೆ ವಿಸ್ತರಣೆಗೆ ಅಗತ್ಯವಿರುವ ಸಸಿಗಳನ್ನು ಬೆಳೆಸಲು ಗ್ರಾಪಂ ಮಟ್ಟದ ಸ್ವ ಸಹಾಯ ಸಂಘಗಳ ಒಕ್ಕೂಟಗಳಿಗೆ ನರ್ಸರಿ ಬೆಳೆಸಲು ತರಬೇತಿ ನೀಡಿ, ಯೋಜನೆಯಡಿ ಆರ್ಥಿಕ ನೆರವು ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಪುರುಷರಿಗೆ ಹೋಲಿಸಿದಲ್ಲಿ ಮಹಿಳೆಯರಿಗೆ ದೊರೆಯುವ ಕೂಲಿ ಕಡಿಮೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಹಿಳೆಯರಿಗೂ ಪುರುಷರಷ್ಟೇ ಸಮಾನ ಕೂಲಿ ನೀಡುವುದರಿಂದ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಲಿದೆ. ಸ್ವ ಸಹಾಯ ಸಂಘಗಳ ಸದಸ್ಯರಲ್ಲಿ ಯೋಜನೆ ಕುರಿತು ಹೆಚ್ಚಿನ ಅರಿವು ಮೂಡಿಸಿ, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೌಶಲ್ಯಾಧಾರಿತವಲ್ಲದ ಕೆಲಸಗಳಲ್ಲಿ ಭಾಗವಹಿಸಲು ಮತ್ತು ವೈಯಕ್ತಿಕ ಕಾಮಗಾರಿಗಳ ಸೌಲಭ್ಯ ಪಡೆದುಕೊಳ್ಳಲು ಉತ್ತೇಜನ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಯೋಜನೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ನೀಡುವಲ್ಲಿ ಮಹಿಳಾ ಕಾಯಕ ಸಂಘಗಳು ಮತ್ತು ಮಹಿಳಾ ಕಾಯಕ ಬಂಧುಗಳ ಪಾತ್ರ ಪ್ರಮುಖವಾಗಿದೆ ಎಂಬುದು ಇಲಾಖೆ ಅಭಿಮತ.

ಆಧಾರ: ವಿಶ್ವವಾಣಿ, ದಿನಾಂಕ: 13.03.2022

66. ನರೇಗಾ ಅಸ್ತ್ರದಿಂದ ಬಡತನ ನಿರ್ಮೂಲನೆ

ಬಡತನದ ನಿರ್ಮೂಲನೆಯಲ್ಲಿ ನರೇಗಾ ಅಸ್ತ್ರ ಬಹಳ ದೊಡ್ಡ ಪಾತ್ರ ನಿರ್ವಹಿಸಲಿದೆ. ಹಾಗಾಗಿ, ನರೇಗಾದಡಿ ಹಲವಾರು ಯೋಜನೆಗಳನ್ನು ಸೇರ್ಪಡೆಗೊಳಿಸಬೇಕು. ವರ್ಷದ ದುಡಿಮೆಯನ್ನು ಸಂಭ್ರಮಿಸಲು ಆಚರಿಸುವ ನರೇಗಾ ಹಬ್ಬ ರಾಜ್ಯದ ಹಬ್ಬ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಆಯೋಜಿಸಿದ್ದ ನರೇಗಾ ಹಬ್ಬ 2022 ಉದ್ಘಾಟಿಸಿ ಮಾತನಾಡಿದ ಅವರು, ಮಹಾತ್ಮಾ ಗಾಂಧಿಯವರಿಂದ ಗ್ರಾಮ ಸ್ವರಾಜ್ಯ ಪರಿಕಲ್ಪನೆ ಮೂಡಿತು. ಅಟಲ್ ಬಿಹಾರಿ ವಾಜಪೇಯಿಯವರು ಗ್ರಾಮ ಸ್ವರಾಜ್ಯದ ಜೊತೆ ಸೌಕರ್ಯಗಳಿರುವ ಗ್ರಾಮ ಸುರಾಜ್ಯವಿರಬೇಕು, ಅಭಿವೃದ್ಧಿಶೀಲ ಗ್ರಾಮಗಳಾಗಬೇಕು ಎಂದರು. ಮೊದಲು ಸ್ವರಾಜ್ಯ, ನಂತರ ಸುರಾಜ್ಯದ ಕಲ್ಪನೆ ಮೂಡಿದೆ ಎಂದು ಹೇಳಿದರು.

ಅಧಿಕಾರ ವಿಕೇಂದ್ರೀಕರಣಗೊಳಿಸದಿದ್ದರೆ ಆಡಳಿತ ಹೆಪ್ಪುಗಟ್ಟುತ್ತದೆ. ಅಧಿಕಾರ ವಿಕೇಂದ್ರೀಕರಣ ಜೇನುತುಪ್ಪದಂತಿರಬೇಕು. ವಿಧಾನಸಭೆ ಬಿಟ್ಟರೆ ನೇರವಾಗಿ ಫಲಾನುಭವಿಗೆ ತಲುಪಬೇಕು. ಆದರೆ, ರಾಜಕೀಯ ವಿಕೇಂದ್ರೀಕರಣವಾಗಿದ್ದು, ಆಡಳಿತ ವಿಕೇಂದ್ರೀಕರಣವೂ ಸ್ವಲ್ಪಮಟ್ಟಿಗೆ ಆಗಿದೆ. ಅಭಿವೃದ್ಧಿಗೆ ಬೇಕಾಗಿರುವ ಆರ್ಥಿಕ ಸ್ವಾತಂತ್ರ್ಯ ನಮಗೆ ಅಗತ್ಯ ಎಂದರು.

ನರೇಗಾದಡಿ 16 ಕೋಟಿ ಮಾನವ ದಿನಗಳ ಗುರಿ ನಿಗದಿ ಮಾಡಿಕೊಂಡಿರುವುದಕ್ಕಾಗಿ ಶ್ಲಾಘನೀಯ. ಈ ಮೂಲಕ ತಳಹಂತದ ಜನರಿಗೆ ಬದುಕನ್ನು ಕೊಡಲಾಗುತ್ತಿದೆ. ಬದುಕಿಗೆ ನರೇಗಾ ಭರವಸೆಯಾಗಿದೆ. ದುಡಿಮೆ ಮುಖಾಂತರ ಬದುಕುವ ಏಕೈಕ ಯೋಜನೆ– ನರೇಗಾ ಎಂದರು. ಜನರನ್ನು ಗುರುತಿಸಿ, ಸ್ಥಳದಲ್ಲಿಯೇ ಕೆಲಸ ನೀಡಿ, ಆಸ್ತಿಯ ನಿರ್ವಹಣೆ ಮಾಡಿ, ಗ್ರಾಮಗಳ ಅಭಿವೃದ್ಧಿಯನ್ನೂ ಮಾಡುತ್ತಿರುವುದು ನರೇಗಾ ಎಂದರು. ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪನವರು ಶಾಲೆಗಳನ್ನು ಕಟ್ಟಲು ನರೇಗಾ ಅನುದಾನ ಬಳಕೆ ಮಾಡಬೇಕೆಂಬ ಬೇಡಿಕೆಯನ್ನು ಕೇಂದ್ರ ಸರಕಾರದ ಮುಂದಿಟ್ಟಿದ್ದಾರೆ. ಶಾಲೆಗಳ ದುರಸ್ತಿಗೆ ಈ ಯೋಜನೆಯಡಿ ಅವಕಾಶ ಮಾಡಿಕೊಟ್ಟರೆ ದೊಡ್ಡ ಪ್ರಮಾಣದಲ್ಲಿ ದುಸ್ಥಿತಿಯಲ್ಲಿರುವ ಶಾಲಾ ಕೊಠಡಿಗಳ ದುರಸ್ತಿ ಕೈಗೊಳ್ಳಬಹುದು. ನಮ್ಮ ಮನವಿಯನ್ನು ಪುರಸ್ಕರಿಸುವ ನಂಬಿಕೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನರೇಗಾದಡಿ ಉತ್ತಮ ಸಾಧನೆ ಮಾಡಿದ ಫಲಾನುಭವಿಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ, ಶಾಸಕ ರಿಜ್ವಾನ್ ಅರ್ಷದ್ ಮತ್ತಿತರರು ಹಾಜರಿದ್ದರು.

ಆಧಾರ: ವಿಶ್ವವಾಣಿ, ದಿನಾಂಕ: 15.03.2022

67. ಪಿ.ಎಚ್.ಡಿ.ಗೆ ಪದವಿ ಸಾಕು

ರಾಷ್ಟ್ರೀಯ ಶಿಕ್ಷಣ ನೀತಿಯ ಅನ್ವಯ ಜಾರಿಯಾಗಲಿರುವ ನಾಲ್ಕು ವರ್ಷಗಳ ಪದವಿ ಮುಕ್ತಾಯಗೊಳಿಸಿದರೆ ಪಿಎಚ್.ಡಿ. ಪದವಿಗೂ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಅದಕ್ಕಾಗಿ 7.5 ಕ್ಯುಮುಲೇಟಿವ್ ಗ್ರೇಡ್ ಪಾಯಿಂಟ್ ಆವರೇಜ್ (ಸಿಜಿಪಿಎ) ಅಂಕಗಳು ಬೇಕಾಗುತ್ತದೆ. ಯುಜಿಸಿ ಇಂಥ ಒಂದು ಸುವರ್ಣಾವಕಾಶ ಕಲ್ಪಿಸಿದೆ.

ಮತ್ತೊಂದು ಮಹತ್ವದ ಅಂಶವೆಂದರೆ, ಪಿಎಚ್.ಡಿಗೆ ನ್ಯಾಷನಲ್' ಎಲಿಜಿಬಿಲಿಟಿ ಟೆಸ್ಟ್ (ಎನ್ಇಟಿ) ಮತ್ತು ಜ್ಯೂನಿಯರ್ ರಿಸರ್ಚ್ ಫೆಲೋಶಿಪ್ ಜೊತೆಗೆ ಮತ್ತೊಂದು ಪ್ರವೇಶ ಪರೀಕ್ಷೆಯೂ ನಡೆಯಲಿದೆ. ಶೇ.60 ಸೀಟುಗಳನ್ನು ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಮೀಸಲಾಗಿ ಇರಿಸಲಾಗುತ್ತದೆ. ಉಳಿದ ಶೇ.40 ಸೀಟುಗಳನ್ನು ಆಯಾ ವಿವಿ ವ್ಯಾಪ್ತಿಯಲ್ಲಿ ಭರ್ತಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ.

ಮುಂದಿನ ಶೈಕ್ಷಣಿಕ ವರ್ಷದಿಂದ ದೇಶದ ಉನ್ನತ ಶಿಕ್ಷಣದಲ್ಲಿ ಈ ಬದಲಾವಣೆ ಬರುವ ಸಾಧ್ಯತೆ ಇದೆ. ಮಾರ್ಚ್ 10 ರಂದು ನಡೆದ ಯುಜಿಸಿ ಸಭೆಯಲ್ಲಿ ಕರಡು ನಿಯಮಗಳಿಗೆ ಸಮ್ಮತಿ ಸೂಚಿಸಲಾಗಿದೆ.

ಪದವಿ ಶಿಕ್ಷಣ ಹೇಗಿರಲಿದೆ?: ಜಾರಿಯಾಗಲಿರುವ ಹೊಸ ವ್ಯವಸ್ಥೆಯಲ್ಲಿ ಪದವಿ ಶಿಕ್ಷಣ ನಾಲ್ಕು ವರ್ಷ ಇರಲಿದೆ. ಏಳನೇ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಗಳಿಗೆ ಸಂಶೋಧನೆಗೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಅವರು ಪ್ರಧಾನ ಅಧ್ಯಯನ ವಿಷಯವಾಗಿ (ಸ್ಪೆಷಲೈಸೇಷನ್) ಆಯ್ಕೆ ಮಾಡಿಕೊಂಡ ವಿಚಾರಗಳಿಗೆ ಪೂರಕವಾಗಿ

ಸಂಶೋಧನೆ ನಡೆಸಬೇಕಾಗುತ್ತದೆ. ಎಂಟನೇ ಸೆಮಿಸ್ಟರ್‌ನಲ್ಲಿ ಸಂಶೋಧನಾತ್ಮಕ ಅಧ್ಯಯನಕ್ಕೆ ಹೆಚ್ಚು ಗಮನ ನೀಡಬೇಕಾಗುತ್ತದೆ. ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆನರ್ಸ್ ಪದವಿ ನೀಡಲಾಗುತ್ತದೆ. 7.5 ಕ್ಯುಮುಲೇಟಿವ್ ಗ್ರೇಡ್ ಪಾಯಿಂಟ್ ಆ್ಯವರೇಜ್ (ಸಿಜಿ ಪಿಎ) ಅಂಕಗಳಿದ್ದರೆ, ಪಿಎಚ್.ಡಿಗೆ ಅವಕಾಶ ಕಲ್ಪಿಸಲಾಗುತ್ತದೆ.

ಮೊದಲ ಮೂರು ಸೆಮಿಸ್ಟರ್‌ಗಳಲ್ಲಿ: ವಿಜ್ಞಾನ, ಮಾನವಿಕ ವಿಷಯಗಳು ಮತ್ತು ಸಾಮಾಜಿಕ ವಿಜ್ಞಾನಗಳಲ್ಲಿ ಪರಿಚಯಾತ್ಮಕ ಮತ್ತು ಆರಂಭಿಕ ಅಧ್ಯಯನಗಳು ಇರಲಿವೆ. ಜೊತೆಗೆ ಇಂಗ್ಲಿಷ್, ಕನ್ನಡ ಮತ್ತು 'ಭಾರತವನ್ನು ಅರಿತುಕೊಳ್ಳುವಿಕೆ' ಪರಿಸರ ವಿಜ್ಞಾನ, ಆರೋಗ್ಯ ಮತ್ತು ಕ್ಷೇಮಪಾಲನೆ ಅಥವಾ ಯೋಗ ಮತ್ತು ಕ್ರೀಡೆಗಳು, ಕೃತಕ ಬುದ್ಧಿಮತ್ತೆ (ಎಐ) ಮತ್ತು ಬಿಗ್ ಡೇಟಾ ಅನಾಲಿಸಿಸ್‌ಗಳನ್ನೂ ಕಲಿಯಬೇಕಾಗುತ್ತದೆ.

ನಾಲ್ಕನೇ ವರ್ಷದಲ್ಲಿ: ಅಂತಿಮ ವರ್ಷ ಅಥವಾ ನಾಲ್ಕನೇ ವರ್ಷದಲ್ಲಿ ಪ್ರಧಾನ ಆಯ್ಕೆಯ ವಿಷಯ (ಸ್ಪೆಷಲೈಸೇಷನ್)ದ ಅಧ್ಯಯನ ವಿದ್ಯಾರ್ಥಿಗಳು ಎರಡು ಪ್ರಧಾನ ವಿಷಯಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಬಹುದು. ಜೊತೆಗೆ ಎರಡು ವಿಭಿನ್ನ ವಿಷಯಗಳನ್ನು 'ಮೈನರ್ ಸಪ್ಲೆಕ್ಸ್' ಆಗಿ ಕಲಿಯಬಹುದು. ಉದಾಹರಣೆಗೆ ವಿಜ್ಞಾನ ವಿಷಯ ತೆಗೆದುಕೊಂಡ ವಿದ್ಯಾರ್ಥಿಗೆ ಮಾನವಿಕ ಅಥವಾ ಸಾಮಾಜಿಕ ವಿಜ್ಞಾನದ ವಿಷಯಗಳನ್ನು ಆಯ್ಕೆ ಮಾಡಬಹುದು.

ಭೌತಿಕ ಅಥವಾ ಆನ್‌ಲೈನ್: ಹೊಸ ವ್ಯವಸ್ಥೆಯಲ್ಲಿ ತರಗತಿಗಳಿಗೆ ಬಂದು ಅಭ್ಯಾಸ ನಡೆಸಲು ಅವಕಾಶ ಉಂಟು. ಇದರ ಜೊತೆಗೆ ಆನ್‌ಲೈನ್ ತರಗತಿಗಳ ಮೂಲಕವೂ ಅಭ್ಯಾಸಕ್ಕೆ ಅವಕಾಶ ಇದೆ. ಹೈಬ್ರಿಡ್ ಮಾದರಿ (ತರಗತಿಗೆ ಹಾಜರಾಗಿ ಮತ್ತು ಕೆಲವು ಸಂದರ್ಭದಲ್ಲಿ ಆನ್‌ಲೈನ್) ಮೂಲಕವೂ ಕಲಿಕೆ ವ್ಯವಸ್ಥೆ ಇದೆ. ಮತ್ತೊಂದು ವಿಶೇಷವಾಗಿರುವ ಅಂಶವೆಂದರೆ, ಎಂಟು ವಾರಗಳ ಬೇಸಿಗೆಯಲ್ಲಿ ಕೂಡ ಶೈಕ್ಷಣಿಕ ತರಬೇತಿಯನ್ನು ಅಳವಡಿಸಲು ಪ್ರಸ್ತಾಪಿಸಲಾಗಿದೆ. ಅದರಲ್ಲಿ ಬಾಕಿ ಇರುವ ವಿಷಯಗಳನ್ನು ಕ್ಷಿಪ್ರವಾಗಿ ಅಧ್ಯಯನ ನಡೆಸಿ ಪೂರ್ತಿಗೊಳಿಸಬಹುದು. ಉನ್ನತ ಶಿಕ್ಷಣ ಸಂಸ್ಥೆಗಳೇ ಬೇಸಿಗೆಯಲ್ಲಿ ಯಾವ ರೀತಿಯ ಕೋರ್ಸ್‌ಗಳನ್ನು ನೀಡಬಹುದು ಎಂಬುದನ್ನು ತೀರ್ಮಾನಿಸುವ ಆಯ್ಕೆ ಇದೆ. ಕೋರ್ಸ್‌ಗೆ ಅನುಗುಣವಾಗಿ ಪ್ರಾಯೋಗಿಕ ಇಂಟರ್ನ್‌ಶಿಪ್, ತರಬೇತಿಗೂ ಆ ಅವಧಿಯನ್ನು ಬಳಕೆ ಮಾಡಬಹುದು.

ಕೋರ್ಸ್ ತೊರೆಯಲು ಅವಕಾಶ: 4 ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿ ಕೋರ್ಸ್ ತ್ಯಜಿಸಲು ಅವಕಾಶ ಇದೆ. ಆತ ಗಳಿಸಿದ ಕ್ರೆಡಿಟ್ ಸ್ಕೋರ್ ಆಧಾರದಲ್ಲಿ ಸರ್ಟಿಫಿಕೇಟ್, ಡಿಪ್ಲೊಮಾ ಅಥವಾ ಪದವಿ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ ನೀಡಲಾಗುತ್ತದೆ. ಇದರ ಜೊತೆಗೆ ಒಂದು ಶಿಕ್ಷಣ ಸಂಸ್ಥೆಯಿಂದ ಮತ್ತೊಂದು ಶಿಕ್ಷಣ ಸಂಸ್ಥೆಗೆ ಪ್ರವೇಶ ಪಡೆಯಲೂ ಸಾಧ್ಯವಾಗಲಿದೆ. ಜತೆಗೆ ಆಸಕ್ತಿಯ ವಿಷಯ ಕಲಿಕೆಗೂ ಅವಕಾಶ ಇದೆ.

ಹೊಸ ವ್ಯವಸ್ಥೆಯಲ್ಲಿ ಪಿಎಚ್.ಡಿ.

ಪಿಎಚ್.ಡಿ ಅಧ್ಯಯನವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲೂ ಕೆಲವೊಂದು ಪರಿಷ್ಕಾರಗಳನ್ನು ಮಾಡಲಾಗಿದೆ. ಅದಕ್ಕಾಗಿ 60:40 ಅನುಪಾತ ನಿಯಮ ಅನುಸರಿಸಲಾಗುತ್ತದೆ. ನ್ಯಾಷನಲ್ ಎಲಿಜಿಬಿಟಿ ಟೆಸ್ಟ್/ಜ್ಯೂನಿಯರ್ ರಿಸರ್ಚ್ ಫೆಲೋಶಿಪ್ (ನೆಟ್/ಜೆಆರ್ ಎಫ್) ಪರೀಕ್ಷೆಯ ಜತೆಗೆ ಇನ್ನೊಂದು ಪ್ರವೇಶ ಪರೀಕ್ಷೆಯನ್ನೂ ಬರೆಯ ಬೇಕಾಗುತ್ತದೆ. ಶೇ.60 ಸೀಟುಗಳನ್ನು ಈ ವಿಧಾನದಲ್ಲಿ ಭರ್ತಿ ಮಾಡಲಾಗುತ್ತದೆ. ಉಳಿದ ಶೇ.40 ಸೀಟುಗಳನ್ನು ಆಯಾ ವಿವಿಗಳೇ ಭರ್ತಿ ಮಾಡಲು ಸ್ವಾತಂತ್ರ್ಯ ಕಲ್ಪಿಸಿಕೊಡಲಾಗಿದೆ. ಅದಕ್ಕಾಗಿ ಆಯಾ ಸಂಸ್ಥೆಗಳು ಪ್ರವೇಶ ಪರೀಕ್ಷೆಯನ್ನೂ ನಡೆಸಬಹುದು. ನೆಟ್/ಜೆಆರ್

ಎಫ್ ಉತ್ತೀರ್ಣರಾದವರನ್ನು ಪಿಎಚ್.ಡಿಗಾಗಿ ಸಂದರ್ಶನ ಅಥವಾ ವೈವಾದ ಮೂಲಕ ಆಯ್ಕೆ ಮಾಡಲಾಗುತ್ತದೆ. ಅದಕ್ಕಾಗಿ ಲಿಖಿತ ಪರೀಕ್ಷೆಯಲ್ಲಿ 70 ಅಂಕ ಮತ್ತು ಸಂದರ್ಶನದಲ್ಲಿ 30 ಅಂಕ ಪಡೆಯಬೇಕಾಗುತ್ತದೆ. ಎಸ್‌ಸಿ, ಎಸ್‌ಟಿ, ಒಬಿಸಿ, ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ.5 ಅಂಕ ರಿಯಾಯಿತಿಯೂ ಇದೆ.

ಹೊಸ ನಿಯಮ ಏನು?

- ಸಂಶೋಧನೆಯ ಆಯ್ಕೆಯ ವಿಷಯಗಳ ಬಗ್ಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ.
- ಸಾಮಾಜಿಕವಾಗಿ, ಸ್ಥಳೀಯವಾಗಿ ಅಗತ್ಯವಿರುವ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಹತ್ವಪಡೆದಿರುವ ಮತ್ತು ಅದರಿಂದ ಸಮಾಜಕ್ಕೆ ಹೆಚ್ಚು ಮೌಲ್ಯ ನೀಡುವ ವಿಷಯಗಳನ್ನು ಆಯ್ಕೆ ಮಾಡಿದರೆ ಪ್ರೋತ್ಸಾಹ ನೀಡಲಾಗುತ್ತದೆ.
- ಸಂಶೋಧನಾ ವಿದ್ಯಾರ್ಥಿ ಮತ್ತು ಮಾರ್ಗದರ್ಶಕ (ಗೈಡ್) ನಡುವೆ ಉತ್ತಮ ಕಲಿಕಾ ಬಾಂಧವ್ಯ ಕಲ್ಪಿಸಲು ಪರಸ್ಪರ ಒಪ್ಪಂದಕ್ಕೆ ಬರಲೂ ಅವಕಾಶ ಕಲ್ಪಿಸಲಾಗಿದೆ.
- ಸಂಶೋಧನಾ ವಿದ್ಯಾರ್ಥಿಗೆ ಹೆಚ್ಚು ಅನುಕೂಲವಾಗುವಂತೆ ಗೈಡ್ ಕೋರ್ಸ್‌ನಲ್ಲಿ ಹೆಚ್ಚಿನ ರೀತಿಯ ಮಾರ್ಗದರ್ಶನಗಳನ್ನೂ ನೀಡಬೇಕು.

ಆಧಾರ: ಉದಯವಾಣಿ, ದಿನಾಂಕ: 18.03.2022

ಭಾಗ – 5

ರಾಜ್ಯ ನೆಲ, ಜಲ, ಭಾಷೆ ಸುದ್ದಿಗಳು

1. ಮೇಕೆದಾಟು ಕೈ ವಿಳಂಬಕ್ಕೆ ದಾಖಲೆ

ಮೇಕೆದಾಟು ಯೋಜನೆ ಜಾರಿಯಲ್ಲಿ ಹಿಂದೆ ಕಾಂಗ್ರೆಸ್ ಸರ್ಕಾರ ವಿಳಂಬ ಧೋರಣೆ ತೋರಿದೆ. 2013–18ರ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ಏನನ್ನೂ ಮಾಡಲಿಲ್ಲ. ಕೇಂದ್ರ ಜಲ ಆಯೋಗಕ್ಕೆ ಡಿಪಿಆರ್ ಸಲ್ಲಿಸಲು ಮಾಜಿ ಸಿ.ಎಂ. ಹೆಚ್.ಡಿ.ಕುಮಾರಸ್ವಾಮಿ ಬರಬೇಕಾಯಿತು ಎಂದು ಸಚಿವ ಗೋವಿಂದ ಕಾರಜೋಳ ಕುಟುಕಿದ್ದಾರೆ.

ಮೇಕೆದಾಟು ಯೋಜನೆ ಅನುಷ್ಠಾನದಲ್ಲಿ ಕಾಂಗ್ರೆಸ್‌ನ ವಿಳಂಬ ನಿಲುವಿಗೆ ಸಂಬಂಧಪಟ್ಟಂತೆ ಕೆಲ ದಾಖಲೆಗಳನ್ನು ವಿಕಾಸಸೌಧದಲ್ಲಿ ಗುರುವಾರ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಈ ಹಿಂದೆ 2013ರ ನವೆಂಬರ್ 5ರಂದು 4ಜಿ ವಿನಾಯ್ತಿ ನೀಡುವಂತೆ ಕಾವೇರಿ ನೀರಾವರಿ ನಿಗಮವು ಸರ್ಕಾರಕ್ಕೆ ಪತ್ರ ಬರೆದಿತ್ತು. 2014ರ ಏಪ್ರಿಲ್ 7ರಂದು ಸರ್ಕಾರ ಅದನ್ನು ತಿರಸ್ಕರಿಸಿ ಟೆಂಡರ್ ಕರೆಯುವಂತೆ ಸೂಚಿಸಿತ್ತು. 2018ರ ಡಿಸೆಂಬರ್‌ನಲ್ಲಿ 4ಜಿ ವಿನಾಯ್ತಿ ನೀಡುವಂತೆ ನಿಗಮ ಮತ್ತೊಮ್ಮೆ ಮನವಿ ಮಾಡಿತ್ತು. 2019ರ ಫೆಬ್ರವರಿಯಲ್ಲಿ 4ಜಿ ವಿನಾಯ್ತಿಗೆ ಅನುಮತಿ ನೀಡುತ್ತಾರೆ. ಇದು ಆಗಿದ್ದು ಸಮ್ಮಿಶ್ರ ಸರ್ಕಾರದಲ್ಲಿ. ಆಗ ಸಿ.ಎಂ.ಆಗಿದ್ದವರು ಹೆಚ್.ಡಿ.ಕುಮಾರಸ್ವಾಮಿ, ಜಲಸಂಪನ್ಮೂಲ ಸಚಿವರಾಗಿದ್ದವರು ಡಿ.ಕೆ.ಶಿವಕುಮಾರ್ ಎಂದು ಹೇಳಿದರು.

2013 ರಿಂದ 2018ರ ವರೆಗೆ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದ್ದರೂ ಯಾವುದೇ ಕೆಲಸ ಮಾಡಲಿಲ್ಲ. ಅವರೇ ವಿಳಂಬದ ಹೊಣೆ ಹೊರಬೇಕು. ಕೇವಲ 4ಜಿ ವಿನಾಯಿತಿ ನೀಡಲು ಐದು ವರ್ಷ ಅಗತ್ಯವಿದೆಯೇ? ದಾಖಲೆಗಳೆಲ್ಲಾ ಇಲ್ಲೇ ಇದ್ದು, ಟೆಂಡರ್ ಕರೆಯಲು ಐದು ವರ್ಷ ಬೇಕಾಗಿತ್ತೇ ಎಂದು ಪ್ರಶ್ನಿಸಿದರು.

"ಡಿಪಿಆರ್ ಸಿದ್ಧಪಡಿಸಲು ಐದು ವರ್ಷ ತೆಗೆದುಕೊಳ್ಳಲಾಗಿದ್ದು, ಇಷ್ಟು ಸುದೀರ್ಘ ಸಮಯ ತೆಗೆದುಕೊಂಡಿದ್ದು ಏಕೆ ? ಆದರೆ ಡಿಪಿಆರ್ ಸಿದ್ಧಪಡಿಸಲು ಹೆಚ್.ಡಿ.ಕುಮಾರಸ್ವಾಮಿ ಬರಬೇಕಾಯಿತು. ಅವರು ಕೇಂದ್ರ ಜಲ ಆಯೋಗಕ್ಕೆ ಡಿಪಿಆರ್ ಸಲ್ಲಿಸುತ್ತಾರೆ. ಸದ್ಯ ನಾನಾ ಹಂತದಲ್ಲಿ ಪರಿಶೀಲನೆಯಾಗುತ್ತಿದೆ. ಕಾಂಗ್ರೆಸ್‌ನವರು ಈಗ ರಾಜಕೀಯ ಗಿಮಿಕ್ ಮಾಡುವುದನ್ನು ಬಿಟ್ಟು ವಿಳಂಬ ಮಾಡಲು ಕಾರಣವೇನು ಎಂಬುದಕ್ಕೆ ಉತ್ತರ ನೀಡಲಿ. ಯೋಜನೆ ಜಾರಿಗೆ ಯಾವುದೇ ಕ್ರಮ ಕೈಗೊಳ್ಳದವರು ಈಗ ಕಾವೇರಿಗಾಗಿ ಕಣ್ಣೀರು ಸುರಿಸುತ್ತಿದ್ದಾರೆ" ಎಂದು ಕುಟುಕಿದರು.

ಡಬಲ್ ಎಂಜಿನ್ ಏನು ಮಾಡಿದೆ? ಕಾರಜೋಳ ಅವರು ದಾಖಲೆ ಬಿಡುಗಡೆಗೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಗುರುವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿ ತಿರುಗೇಟು ನೀಡಿದರು.

"ಸಿದ್ದರಾಮಯ್ಯ ಡಿಪಿಆರ್ ಸಿದ್ದಪಡಿಸಲು 5 ವರ್ಷ ತೆಗೆದುಕೊಂಡಿದೆ ಎಂದು ಸಚಿವರು ಹೇಳಿದ್ದಾರೆ. 2019ರ ಜುಲೈ 22ಕ್ಕೆ ಬಿಜೆಪಿಯವರು ಅಧಿಕಾರಕ್ಕೆ ಬಂದರು. ಕೇಂದ್ರ ಹಾಗೂ ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರವಿದ್ದು, 2 ವರ್ಷದಲ್ಲಿ ಮೇಕೆದಾಟು ವಿಚಾರವಾಗಿ ಏನು ಮಾಡಿದ್ದಾರೆ" ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

"ಬಿಳಿಗುಂಡ್ಲು ಬಳಿ ಯೋಜನೆ ಆರಂಭಿಸಿದ್ದರು. ಅದನ್ನು ಪ್ರಶ್ನಿಸಿ ನಾವು ಪಿಐಎಲ್ ಸಲ್ಲಿಸಿದ್ದೆವು. ತಮಿಳುನಾಡಿನವರೂ ಪಿಐಎಲ್ ಹಾಕಿದ್ದರು. 2016ರ ಡಿಸೆಂಬರ್‌ನಲ್ಲಿ ಸುಪ್ರೀಂಕೋರ್ಟ್ ನಿರ್ದೇಶನ

ನೀಡಿತು. ಕೆಟಿಪಿಪಿ ಕಾಯಿದೆಯಡಿ ವಿನಾಯ್ತಿಗೆ ಯತ್ನಿಸಿದೆವು. ವಿಸ್ತೃತ ವರದಿಗೆ ಅನುಮೋದನೆಗಾಗಿ ಸಲ್ಲಿಸಿದಾಗ ಯೋಜನೆ ಕೈಗೊಳ್ಳಬಹುದು ಎಂದು ನ್ಯಾಯಾಲಯ ಹೇಳಿತ್ತು. 2014ರಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿದ್ದೇವೆ. 2014ರ ನಂತರ ಯೋಜನೆಯನ್ನು ನಾವು ಕೈಗೆತ್ತಿಕೊಂಡಿದ್ದೇವೆ" ಎಂದು ಹೇಳಿದರು.

"ಪ್ರಧಾನಿ ಮೋದಿಯವರಿಗೆ ನಾನೇ ಮನವಿ ಪತ್ರ ನೀಡಿದ್ದೇನೆ. 2015ರ ಆಗಸ್ಟ್ 17ರಂದು ತಾಂತ್ರಿಕ ಬಿಡ್ ಸಿದ್ದವಾಗಿದೆ. ನಂತರ ಜಾಗತಿಕ ಟೆಂಡರ್ ಆಹ್ವಾನಿಸಲಾಗಿತ್ತು. ಹೆಚ್ಚಿನ ಮೊತ್ತ ನಮೂದಿಸಿದ್ದರಿಂದ ಕರ್ನಾಟಕ ನೀರಾವರಿ ನಿಗಮ ತಿರಸ್ಕರಿಸಿತ್ತು. 2016ರಲ್ಲಿ 4ಜಿ ವಿನಾಯಿತಿ ಸಿಕ್ಕಿದೆ", ಎಂದು ವಿವರಿಸಿದರು.

"2016ರ ಫೆಬ್ರವರಿ 4 ರಲ್ಲಿ ರೂ.5,912 ಕೋಟಿ ಮೊತ್ತಕ್ಕೆ ಡಿಪಿಆರ್ ಸಿದ್ಧವಾಗಿತ್ತು. 2018ರ ಜನವರಿ 18ರಲ್ಲಿ ನಾವೇ ಡಿಪಿಆರ್ ಸಲ್ಲಿಸಿದ್ದೇವೆ. 2018ರ ಫೆಬ್ರವರಿ 16 ರಂದು ಸುಪ್ರೀಂ ಕೋರ್ಟ್ ಅಂತಿಮ ತೀರ್ಪು ನೀಡಿತು. 177.25 ಟಿಎಂಸಿ ನೀರು ಹರಿಸಲು ಆದೇಶಿಸಿತು. ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಬಿಡಲು ತೀರ್ಪು ನೀಡಿತು. ಅಲ್ಲಿಯವರೆಗಿದ್ದ ವಿವಾದ ಮುಗಿಯಿತು. ಜನರನ್ನು ತಪ್ಪುದಾರಿಗೆ ಎಳೆಯಲು ಗೋವಿಂದ ಕಾರಜೋಳ ಪ್ರಯತ್ನಿಸಿದ್ದಾರೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಧಾರ:–ವಿಜಯ ಕರ್ನಾಟಕ, ದಿನಾಂಕ:07.01.2022

2. ಮೇಕೆದಾಟು ಯೋಜನೆಗೆ 6000 ಹೆಕ್ಟೇರ್ ಅರಣ್ಯ ಭೂಮಿ

ಮೇಕೆದಾಟು ಯೋಜನೆಗೆ ಅರಣ್ಯ ಇಲಾಖೆಯ 6 ಸಾವಿರ ಹೆಕ್ಟೇರ್ ಭೂಮಿ ಬಳಕೆಯಾಗಲಿದ್ದು, ಅದಕ್ಕೆ ಪರ್ಯಾಯವಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಂದಾಯ ಜಮೀನು ನೀಡಲು ಕಂದಾಯ ಇಲಾಖೆ ಮುಂದಾಗಿದೆ. ಕರ್ನಾಟಕ ಹಾಗೂ ತಮಿಳುನಾಡು ಗಡಿಭಾಗದಲ್ಲಿರುವ ಹನೂರು ತಾಲ್ಲೂಕಿನ ಕಾವೇರಿ ವನ್ಯಜೀವಿ ವಲಯದ ದಟ್ಟ ಅರಣ್ಯ ಪ್ರದೇಶ 1.02 ಲಕ್ಷ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಅಣೆಕಟ್ಟು ಸೇರಿ ರಸ್ತೆ, ನೀರು ಶೇಖರಣೆ ಕಾಮಗಾರಿಗೆ ಒಟ್ಟು 6 ಸಾವಿರ ಹೆಕ್ಟೇರ್ ಮೇಕೆದಾಟು ಯೋಜನೆಗೆ ಬಳಕೆಯಾಗಲಿದೆ. ಹೀಗಾಗಿ ಅರಣ್ಯ ಇಲಾಖೆಗೆ ಪರ್ಯಾಯವಾಗಿ ಕಂದಾಯ ಇಲಾಖೆಯ ಜಮೀನು ನೀಡಬೇಕಾಗಿದೆ. ಅದರಂತೆ ಕಂದಾಯ ಇಲಾಖೆ ಅಧಿಕಾರಿಗಳು ಡಿಸೆಂಬರ್‌ನಲ್ಲಿ ಮಿಣ್ಯಂ ಭಾಗದ ಅರಣ್ಯದಂಚಿನಲ್ಲಿ 1500 ಎಕರೆ ಜಾಗ ಗುರುತಿಸಿದ್ದಾರೆ. ಚಾಮರಾಜನಗರ ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆಗೆ ಕಂದಾಯ ಇಲಾಖೆ ಅಧಿಕಾರಿಗಳು ಮಾಹಿತಿ ಸಹ ನೀಡಿದ್ದಾರೆ. ಉಳಿದಂತೆ ಮಳವಳ್ಳಿ, ರಾಮನಗರ, ಕನಕಪುರ ಭಾಗಗಳಲ್ಲಿಯೂ ಕಂದಾಯ ಜಮೀನು ನೀಡಲಿದ್ದು, ಇದು ಅರಣ್ಯ ಇಲಾಖೆಗೆ ಹಸ್ತಾಂತರವಾದ ಬಳಿಕವಷ್ಟೇ ಕೇಂದ್ರ ಸರ್ಕಾರ ಒಪ್ಪಿಗೆ ನೀಡಬಹುದು ಎಂಬ ಮಾಹಿತಿ ಅಧಿಕಾರಿಗಳಿಂದ ಬಂದಿದೆ.

ಯೋಜನೆಯಿಂದ ಅನೇಕ ಅನುಕೂಲ: ಮೇಕೆದಾಟು ಯೋಜನೆಗೆ ರಾಜ್ಯ ಸರ್ಕಾರ 2013ರಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಯೋಜನೆಯಿಂದ ಬೆಂಗಳೂರು, ರಾಮನಗರ, ಚನ್ನಪಟ್ಟಣ, ಕನಕಪುರ ಹಾಗೂ ಇನ್ನಿತರ ಭಾಗಗಳಿಗೆ ಕುಡಿಯುವ ನೀರು ಸಿಗಲಿದೆ. ಅಲ್ಲದೆ, ಹನೂರು ಭಾಗದ ಶಾಗ್ಯ, ಬಂಡಳ್ಳಿ ಸೇರಿ ಕೊಳ್ಳೇಗಾಲದ ಶಿವನಸಮುದ್ರದ ತನಕವೂ ಅಂತರ್ಜಲ ಹೆಚ್ಚಳವಾಗಲಿದೆ. ಯೋಜನೆಯಲ್ಲಿ ಸೇತುವೆ, ರಸ್ತೆ ನಿರ್ಮಾಣವಾದರೆ ಬೆಂಗಳೂರು ಹಾಗೂ ಹನೂರು ತಾಲ್ಲೂಕು ಕೇಂದ್ರದ ನಡುವಿನ ಅಂತರ ಕಡಿಮೆಯಾಗಲಿದೆ. ತಮಿಳುನಾಡು, ಬೆಂಗಳೂರು ಮಧ್ಯಭಾಗದಲ್ಲಿ ಹನೂರು ಇರುವುದರಿಂದ ವ್ಯಾಪಾರ–ವಹಿವಾಟಿಗೆ ಅನುಕೂಲವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಜತೆಗೆ ಹನೂರಿನಿಂದ ಬೆಂಗಳೂರು, ತಮಿಳುನಾಡು, ಮಲೆಮಹದೇಶ್ವರಬೆಟ್ಟ ದೇವಾಲಯ, ಆಂಧ್ರಪ್ರದೇಶದ ತಿರುಪತಿ ದೇವಾಲಯಕ್ಕೂ ಅಂತರ ಕಡಿಮೆಯಾಗಲಿದೆ.

ಆಧಾರ:–ವಿಜಯವಾಣಿ, ದಿನಾಂಕ:09.01.2022

3. Mekedatu project: What is it and where does it stand now?

The controversial Mekedatu balancing reservoir project is back in the limelight with the Congress Party launching a 100-km-long Padayatra (foot march) demanding its implementation. The project has been in the pipeline for years now, and the Congress party has blamed the BJP for not taking it forward despite ruling both at the Centre and the State. The BJP has in turn, blamed the Congress party for having done nothing on Mekedatu when it was in power between 2013 and 2018. The project has also faced stiff opposition from Tamil Nadu, which has vowed to get it scrapped. Here's what you need to know about the project:

What is the Mekedatu balancing reservoir project and what will it do? The project will come up at Ontigondlu, Mekedatu (literal meaning goat's leap) at the confluence of Cauvery and Arkavathi rivers, about 90 km southwest of Bengaluru and 4 km from the Tamil Nadu border. The project was first announced in 2013 by the then law minister T.B. Jayachandra during the Congress government. It's primarily aimed at supplying 4.75 tmcf (thousand million cubic feet) of drinking water to Bengaluru and surrounding areas but will also generate 400 MW of hydroelectric power. For this Karnataka wants to construct a concrete gravity dam at Mekedatu with a storage capacity of 67.16 tmcft.

What will be the project area? The project requires a total of 5,252 hectares of land. Of this, about 4,996 hectares will be submerged while the actual dam will be constructed in the remaining 256 hectares. Of the total land required 3,181 hectares fall in the Cauvery Wildlife Sanctuary 1,869 hectares in a reserve forest and 201 hectares is revenue land.

How much will it cost? While the project was previously estimated to cost Rs.5,000 crore, the cost has now escalated to Rs.9,000 crore. And considering that the project has still not been approved by the central government the actual cost will likely go up further depending on when the final approvals come.

What is the current status of the project? In January 2019, Karnataka submitted the Detailed Projects Report (DPR) to the Central Water Commission (CWC) and later to the Cauvery Water Management Authority (CWMA) to get the consent of the co-basin states. The CWMA is yet to approve the DPR because, Tamil Nadu, which is the co-basin state, has opposed the project. The lower riparian state has also approached the Supreme Court against Mekedatu and the matter is pending adjudication.

What's Karnataka argument? The Karnataka government has maintained that it is well within its rights to construct the dam as long as it makes sure that Tamil Nadu gets its annual share of water as prescribed by the Cauvery Water Disputes

Tribunal. And since the dam will come up within Karnataka the state is not violating any law officials argue. More than that the state sees Mekedatu as an opportunity to supply sufficient water to meet the ever-growing needs of Bengaluru and the surrounding districts. There is also an acute power shortage, Karnataka has told the Centre. The state also hopes that the dam will boost tourism in the area.

Are there any other hurdles to the project? Other than opposition from Tamil Nadu green activists have questioned the environmental price of the project. A major chunk of the land that will be submerged by the dam will be of the Cauvery Wildlife Sanctuary is also home to many endangered wildlife species. The sanctuary also acts as a buffer area for wildlife animals such as tigers in the nearby MM Hills and BR Hills. Activists fear that the loss of this space will only lead to more man-animal conflict.

Why is Tamil Nadu opposing Mekedatu? If the reservoir is constructed. Tamil Nadu fears, Karnataka will hoard water in the dam thereby cheating it of its share of the Cauvery water. The neighbouring state has argued that as per the Inter-State River Water Disputes Act, Karnataka cannot build the dam without the consent of the lower riparian state, which is Tamil Nadu in this case.

Courtesy:- Deccan Herald, Dated: 11.01.2022

4. ಎತ್ತಿನ ಹೊಳೆ ಶೀಘ್ರ ಪೂರ್ಣಗೊಳಿಸಿ

ಎತ್ತಿನ ಹೊಳೆ ಕಾಮಗಾರಿಯನ್ನು ಸೆಪ್ಟೆಂಬರ್ ಒಳಗಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ತಾಕೀತು ಮಾಡಿದ್ದಾರೆ.

ವಿಶ್ವೇಶ್ವರಯ್ಯ ಜಲ ನಿಗಮದ ನಿರ್ದೇಶಕರ ಸಭೆಯಲ್ಲಿ ಮಾತನಾಡಿದ ಅವರು ಎತ್ತಿನಹೊಳೆ ಕಾಮಗಾರಿ ವಿಳಂಬವಾಗಬಾರದು. ತ್ವರಿತವಾಗಿ ಪೂರ್ಣಗೊಳಿಸಲು ಬೇಕಾದ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಯಡಿ ಕೆರೆ ತುಂಬಿಸುವ ಯೋಜನೆಯ ಕಾಮಗಾರಿಗಳನ್ನು ನಿಗಮ ಬಿಟ್ಟು ಗ್ರಾಮೀಣಾಬಿವೃದ್ಧಿ ಮತ್ತಿತರ ಬೇರೆ ಬೇರೆ ಇಲಾಖೆಗೆ ವಹಿಸಿಕೊಟ್ಟಿರುವ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸರ್ಕಾರದ ಅನುಮೋದನೆ ಇಲ್ಲದೆ ಕೊಟ್ಟಿದ್ದರೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ನಿಗಮದ ಹಿರಿಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು ಎಂದು ಮೂಲಗಳು ಖಚಿತಪಡಿಸಿವೆ.

ಭದ್ರಾ ಮೇಲ್ದಂಡೆ ಯೋಜನೆಯಡಿ ಕೆರೆ ತುಂಬಿಸುವ ಕಾಮಗಾರಿ ಬೇರೆ ಬೇರೆ ಇಲಾಖೆಗೆ ಕೊಟ್ಟಿರುವ ಕುರಿತು ಸಮಗ್ರ ವರದಿ ಸಲ್ಲಿಸುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ನಿಗಮದ ಕಾಮಗಾರಿಗಳ ಬಗ್ಗೆ ಒಂದೊಂದಾಗಿ ಮಾಹಿತಿ ಕೇಳಿದ ಸಿಎಂ. ಯಾವ ಕಾಮಗಾರಿ ಟೆಂಡರ್ ಹಂತದಲ್ಲಿದೆ ? ಯಾವ ಕಾಮಗಾರಿ ಟೆಂಡರ್ ಕರೆಯಬೇಕಿದೆ ಎಂಬ ವಿವರ ಪಡೆದುಕೊಂಡರು. ಒಂದು ಹಂತದಲ್ಲಿ ಹಿರಿಯ ಅಧಿಕಾರಿಯೊಬ್ಬರಿಗೆ ನೀನು ಪ್ರಜ್ಞೆ ಇಟ್ಟುಕೊಂಡು ಮಾತನಾಡು ಎಂದು ರೇಗಿದರು ಎಂದು ಮೂಲಗಳು ತಿಳಿಸಿವೆ.

ಆಧಾರ:–ವಿಜಯವಾಣಿ, ದಿನಾಂಕ:25.01.2022

5. ಕಾವೇರಿ, ಕೃಷ್ಣಾ ಸೇರಿ 6 ನದಿ ಜೋಡಣೆಗೆ ನೆರವು

ಕೃಷಿ ಪ್ರದೇಶ ವಿಸ್ತರಣೆ, ನೀರಿನ ಲಭ್ಯತೆ ಹೆಚ್ಚಳ, ನೀರಿನ ಸದ್ಬಳಕೆ, ಅಂತರ್ಜಲ ಮರುನಿರ್ಮಾಣ ಮತ್ತು ವರ್ಷವಿಡೀ ಕುಡಿಯುವ ನೀರು ಪೂರೈಸುವ ನದಿ ಜೋಡಣಾ ಯೋಜನೆಗಳನ್ನು ತ್ವರಿತಗತಿಯಲ್ಲಿ ಜಾರಿಗೆ ತರಲು ಬದ್ಧವಾಗಿರುವುದಾಗಿ ಕೇಂದ್ರ ಸರ್ಕಾರ ಹೇಳಿದೆ.

ಈ ಕುರಿತು ಬಜೆಟ್‌ನಲ್ಲಿ ಮಾಹಿತಿ ನೀಡಿರುವ ಸರ್ಕಾರ, ಈಗಾಗಲೇ ಕೆನ್–ಬಿಟ್ವಾ ನದಿ ಜೋಡಣೆ ಯೋಜನೆಗೆ ಚಾಲನೆ ಸಿಕ್ಕಿದೆ. ದಮನ್‌ಗಂಗಾ–ಪಿಂಜಾಲ್, ಪರ್–ತಾಪಿ, ನರ್ಮದಾ, ಗೋದಾವರಿ–ಕೃಷ್ಣಾ, ಕೃಷ್ಣಾ–ಪೆನ್ನಾರ್ ಮತ್ತು ಪೆನ್ನಾರ್–ಕಾವೇರಿ ನದಿ ಜೋಡಣೆ ಯೋಜನೆಯ ವಿಸ್ತೃತ ಕರಡು ವರದಿ ಸಿದ್ಧವಾಗಿದೆ. ಯೋಜನೆ ಜಾರಿ ಸಂಬಂದ ರಾಜ್ಯಗಳ ಸಹಮತಿ ವ್ಯಕ್ತವಾಗುತ್ತಲೇ ಎಲ್ಲಾ ನೆರವುಗಳನ್ನು ನೀಡಲಿದೆ ಎಂದು ಹೇಳಿದೆ.

ಪರ್–ತಾಪಿ ನದಿ ಜೋಡಣೆ: ಮಹಾರಾಷ್ಟ್ರದ ಪರ್ ನದಿ ಪಾತ್ರದ ಹೆಚ್ಚುವರಿ ನೀರನ್ನು 395 ಕಿ.ಮೀ. ಉದ್ದದ ಕಾಲುವೆ ಮೂಲಕ ಗುಜರಾತ್‌ನ ಸೌರಾಷ್ಟ್ರ ಕಛ್ ಪ್ರಾಂತ್ಯಗಳಿಗೆ ಪೂರೈಸುವ ಉದ್ದೇಶವಿದೆ. ಇದಕ್ಕೆ 7 ಅಣೆಕಟ್ಟು ಕಟ್ಟಬೇಕಾಗಿ ಬರಲಿದೆ.

ಮಹಾರಾಷ್ಟ್ರದ ದಮನ್ ಗಂಗಾ–ಪಿಂಜಾಲ್: ಮಹಾರಾಷ್ಟ್ರದ ನಾಸಿಕ್ ದಮನ್ ನದಿಗೆ ಕಟ್ಟಲಾಗಿರುವ ಅಣೇಕಟ್ಟಿನ ಹೆಚ್ಚಿನ ನೀರನ್ನು ಪಿಂಜಾಲ್ ನದಿಗೆ ಕಟ್ಟಿರುವ ಅಣೆಕಟ್ಟಿಗೆ ಸಾಗಿಸಿ ಅಲ್ಲಿಂದ ಮುಂಬೈಗೆ ಸಾಗಿಸುವ ಉದ್ದೇಶ ಇದೆ. ಇದು ಮುಂಬೈ ಮಹಾನಗರಿಯ 2060ರ ವರೆಗಿನ ಕುಡಿಯುವ ನೀರಿನ ಅಗತ್ಯವನ್ನು ಪೂರೈಸುವ ಸಾಮರ್ಥ್ಯ ಹೊಂದಿದೆ. ಇದಕ್ಕೆ ರೂ.40,000 ಕೋಟಿ ವೆಚ್ಚವಾಗುವ ನಿರೀಕ್ಷೆ ಇದೆ.

ಕನ್–ಬೆಟ್ವಾ ಜೋಡಣೆ: ಮಧ್ಯಪ್ರದೇಶದ ಕೆನ್ ನದಿಯನ್ನು ಉತ್ತರ ಪ್ರದೇಶ ಬೆಟ್ವಾ ನದಿಗೆ ಜೋಡಿಸುವ ಮೂಲಕ ಬುಂದೇಲ್ ಖಂಡ್ ಪ್ರದೇಶವನ್ನು ನೀರಾವರಿಗೆ ಒಳಪಡಿಸುವ ಉದ್ದೇಶವನ್ನು ಹೊಂದಿದೆ. ಒಟ್ಟಾರೆ ರೂ.44,605 ಕೋಟಿ ವೆಚ್ಚದ ಅಂದಾಜು ಮಾಡಲಾಗಿದೆ. ಯೋಜನೆಯು 9.08 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರು ಪೂರೈಸುವ ಗುರಿ ಇದೆ.

ಗೋದಾವರಿ–ಕೃಷ್ಣಾ: ಆಂಧ್ರಪ್ರದೇಶದ ಗೋದಾವರಿ ನದಿಯ ಹೆಚ್ಚುವರಿ ನೀರನ್ನು 124.ಕಿ.ಮೀ. ದೂರದಲ್ಲಿರುವ ಕೃಷ್ಣಾ ನದಿಗೆ ಕಟ್ಟಲಾಗಿರುವ ಪ್ರಕಾಶಂ ಬ್ಯಾರೇಜ್‌ಗೆ ವರ್ಗಾಯಿಸುವ ಮೂಲಕ ಹೆಚ್ಚುವರಿ ನೀರನ್ನು ಸದ್ಬಳಕೆ ಮಾಡುವ ಉದ್ದೇಶವಿದೆ.

ಕೃಷ್ಣಾ–ಪೆನ್ನಾರ್: ಆಂದ್ರಪ್ರದೇಶದ ಕೃಷ್ಣಾ ನದಿಯ ಹೆಚ್ಚುವರಿ ನೀರನ್ನು 393 ಕಿ.ಮೀ. ಕಾಲುವೆ ಮೂಲಕ ಪೆನ್ನಾರ್ ನದಿಗೆ ಪೂರೈಸುವ ಉದ್ದೇಶವಿದೆ.

ಆಧಾರ:–ಕನ್ನಡ ಪ್ರಭ, ದಿನಾಂಕ:02.02.2022

6. ನದಿ ಜೋಡಣೆ, ನೆರೆ ರಾಜ್ಯಕ್ಕೆ ಲಾಭ

ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ನದಿಗಳ ಜೋಡಣೆ ವಿಚಾರದಿಂದ ಕರ್ನಾಟಕಕ್ಕೆ ಹೆಚ್ಚಿನ ಪ್ರಯೋಜನವಿಲ್ಲ ಎಂಬ ಮಾತು ವ್ಯಾಪಕವಾಗಿ ಕೇಳಿಬರಲಾರಂಭಿಸಿದೆ. ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ಯೋಜನೆಯ ಸಾಧಕ–ಬಾಧಕ ಅವಲೋಕಿಸಿದ ನಂತರವಷ್ಟೇ ಈ ವಿಚಾರದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ಬಗ್ಗೆ ಚಿಂತನೆ ನಡೆಸಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಕೇಂದ್ರ ಬಜೆಟ್‌ನಲ್ಲಿ ಗೋದಾವರಿ–ಕೃಷ್ಣಾ, ಪೆನ್ನಾರ್ ಹಾಗೂ ಕಾವೇರಿ ನದಿ ಜೋಡಣೆ ಯೋಜನೆ ಘೋಷಿಸಿದ್ದಾರೆ.

ಒಂದೊಮ್ಮೆ ಈ ಯೋಜನೆ ಕಾರ್ಯಗತವಾಗಿದ್ದೇ ಆದರೆ ಅತಿ ಹೆಚ್ಚಿನ ಪ್ರಯೋಜನೆ ಆಗುವುದು ತಮಿಳುನಾಡಿಗೆ, ಜೊತೆಗೆ ಆಂಧ್ರ ಪ್ರದೇಶ ಹಾಗೂ ತೆಲಂಗಾಣಗಳು ಸ್ವಲ್ಪ ಪ್ರಯೋಜನ ಪಡೆಯಬಹುದು. ಆದರೆ ರಾಜ್ಯಕ್ಕೆ ಯಾವುದೇ ರೀತಿಯ ಪ್ರಯೋಜನವಾಗದು ಎಂಬುದು ನೀರಾವರಿ ತಜ್ಞರ ಅಭಿಮತ.

ಗೋದಾವರಿ ನದಿ ನೀರನ್ನು ಮೀರಜ್–ಸಾಂಗ್ಲಿ ಮಾರ್ಗವಾಗಿ ಧಾರವಾಡಕ್ಕೆ ತಂದರಷ್ಟೇ ರಾಜ್ಯಕ್ಕೆ ಸ್ವಲ್ಪ ಅನುಕೂಲವಾಗಬಹುದು. ಆದರೆ ಇದಕ್ಕೆ ನೆರೆ ಮಹಾರಾಷ್ಟ್ರ ಒಪ್ಪುವುದೇ ಎಂಬ ಪ್ರಶ್ನೆ ಮೂಡುತ್ತದೆ. ಏಕೆಂದರೆ ಯೋಜನೆ ಕಾರ್ಯಗತವಾಗಬೇಕಾದರೆ ರಾಜ್ಯ ಸರ್ಕಾರಗಳ ಅನುಮತಿ ಅಗತ್ಯ. ಇಲ್ಲದಿದ್ದರೆ ಅಂತರರಾಜ್ಯ ಜಲವಿವಾದ ಸೃಷ್ಟಿಯಾಗುವ ಸಾಧ್ಯತೆಗಳಿದ್ದು, ಪ್ರಕರಣಗಳು ನ್ಯಾಯಾಲಯದ ಮುಂದೆ ಹೋಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಈ ಬಗ್ಗೆ ನೀರಾವರಿ ತಜ್ಞ ಪ್ರೊ.ಸಿ.ನರಸಿಂಹಪ್ಪ ಅವರು ವಿಜಯ ಕರ್ನಾಟಕದೊಂದಿಗೆ ಮಾಹಿತಿ ಹಂಚಿಕೊಂಡಿದ್ದು, ಗೋದಾವರಿಯು ದೇಶದ ಮೂರನೇ ಅತಿ ದೊಡ್ಡ ನದಿ ಎಂಬುದನ್ನು ಒಪ್ಪೋಣ. ಆದರೆ ತೆಲಂಗಾಣದಲ್ಲಿ ಕಾಳೇಶ್ವರಂ ಯೋಜನೆ, ಅದರ ಮೇಲ್ಭಾಗದಲ್ಲಿ ರಾಮಪಾದ ಸಾಗರ ಯೋಜನೆ ಜಾರಿಯಾಗಿದೆ. ಹಾಗಿದ್ದರೂ ನೀರಿನ ಲಭ್ಯತೆ ಇದೆ. ಅಲ್ಲಿಂದ ಕೃಷ್ಣಾ ನದಿಗೆ ಜೋಡಿಸಬೇಕಾಗುತ್ತದೆ. ಕೃಷ್ಣಾ ನದಿಯಿಂದ ಕಾವೇರಿಗೆ ಸಂಪರ್ಕಿಸಬೇಕಾದರೆ ಮಧ್ಯ ಪೆನ್ನಾರ್ ನದಿ ಹರಿಯುತ್ತದೆ. ಕೃಷ್ಣಾ–ಪೆನ್ನಾರ್ ನದಿ ಜೋಡಣೆ ಮುಳಬಾಗಿಲಿನಿಂದ 25 ಕಿ.ಮೀ. ಅಂತರದಲ್ಲಿ ಆಗಲಿದೆ. ಪೆನ್ನಾರ್ ನದಿ ರಾಜ್ಯದಲ್ಲಿ 30 ಕಿ.ಮೀ. ಮಾತ್ರ ಹರಿಯಲಿದ್ದು, ಅದರಿಂದ ರಾಜ್ಯಕ್ಕೆ ಯಾವುದೇ ಪ್ರಯೋಜನವಾಗದು ಎಂದು ಹೇಳಿದರು.

ಗೋದಾವರಿ ನದಿಯನ್ನು ನಾಸಿಕ್‌ನಿಂದ ಮೀರಜ್–ಸಾಂಗ್ಲಿ ಮಾರ್ಗವಾಗಿ ಧಾರವಾಡದ ಕಡೆಗೆ ಹರಿಸಿದರೆ ರಾಜ್ಯಕ್ಕೆ ಸ್ವಲ್ಪ ಅನುಕೂಲವಾಗಲಿದೆ. ಬೀದರ್ ಕಡೆಗೆ ಹರಿಸಿದರೆ ರಾಜ್ಯದ ಪೂರ್ವ ಭಾಗದ ಕೆಲ ಪ್ರದೇಶಗಳಿಗೆ ನೆರವಾಗಲಿದೆ. ಗೋದಾವರಿಯನ್ನು ನಾಸಿಕ್‌ನಿಂದ ತುಂಗಭದ್ರ, ಭದ್ರಾ, ವೇದಾವತಿ ನದಿಗೆ ಸಂಪರ್ಕಿಸಿ ನಂತರ ಕಾವೇರಿ ತಲುಪಿಸಬಹುದು. ಬೆಳಗಾವಿಯಲ್ಲಿ ಪಂಚಗಂಗಾ, ದೂದ್‌ಗಂಗಾಗೆ ಹರಿಸಿದರೂ ಅನುಕೂಲವಾಗಲಿದೆ. ಆದರೆ ಇವೆಲ್ಲಾ ಕಷ್ಟಸಾಧ್ಯ ಎಂದು ತಿಳಿಸಿದರು.

ಬಜಾವತ್ ನ್ಯಾಯಾಧಿಕರಣದಡಿ ಈಗಾಗಲೇ ಕರ್ನಾಟಕಕ್ಕೆ 911 ಟಿಎಂಸಿ, ಆಂಧ್ರ ಪ್ರದೇಶಕ್ಕೆ 1000 ಟಿಎಂಸಿಗೂ ಹೆಚ್ಚು ಹಾಗೂ ಮಹಾರಾಷ್ಟ್ರಕ್ಕೆ 468 ಟಿಎಂಸಿ ಅಡಿ ನೀರು ಹಂಚಿಕೆಯಾಗಿದ್ದು ರಾಜ್ಯಕ್ಕೆ ಹೆಚ್ಚುವರಿ ನೀರಿನ ಲಭ್ಯತೆ ಇಲ್ಲ. ಕೃಷ್ಣಾ ನದಿ ನೀರನ್ನು ಪೆನ್ನಾರ್ ನದಿಗೆ ಹರಿಸುವುದು ಸವಾಲು. ಹರಿಸಿದರೂ ಅದು ಆಂಧ್ರಪ್ರದೇಶಕ್ಕೆ ಹೋಗಲಿದೆ. ಒಟ್ಟಾರೆ ಈ ನದಿಗಳ ತಿರುವು ಯೋಜನೆಯಿಂದ ತಮಿಳುನಾಡಿಗೆ ಅತಿ ಹೆಚ್ಚಿನ ಅನುಕೂಲವಾಗಲಿದೆ. ಕೃಷ್ಣಾ ಪೆನ್ನಾರ್ ನದಿ ಜೋಡಣೆ ಮುಳಬಾಗಿಲಿಗೆ 10–12 ಕಿ.ಮೀ. ಮುಂದೆ ಆಗಲಿದ್ದು, ಅದನ್ನು ರಾಜ್ಯದ ಗಡಿಗೆ ಸಂಪರ್ಕಿಸಿ ಕರ್ನಾಟಕಕ್ಕೂ ಪ್ರಯೋಜನ ಸಿಗುವಂತೆ ಮಾಡುವ ವಿಶ್ವಾಸವೂ ಇಲ್ಲ ಎಂದು ಹೇಳಿದರು.

ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವ ನದಿಗಳ ಜೋಡಣೆ ವಿಚಾರದಿಂದ ಕರ್ನಾಟಕಕ್ಕೆ ಹೆಚ್ಚಿನ ಪ್ರಯೋಜನವಿಲ್ಲ. ನೀರಿನ ಲಭ್ಯತೆ ಆಧರಿಸಿ ಡಿಪಿಆರ್ ಬಗ್ಗೆ ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿಯವರು ಹೇಳಿರುವುದು ಸೂಕ್ತವಾಗಿದೆ ಎಂದು ಪ್ರೊ.ನರಸಿಂಹಪ್ಪ ಅವರು ತಿಳಿಸಿದರು.

ಆಧಾರ:–ವಿಜಯ ಕರ್ನಾಟಕ, ದಿನಾಂಕ:03.02.2022

7. Dropping farmland from special courts' ambit kills forests

The government's assurance of removing farmland from the jurisdiction of the Special Court for Prohibition of Land Grabbing has come as a jolt for officials trying to evict encroachments at a time when the department is facing the challenge of recovering more than 2 lakh hectares of forest land under encroachment.

The government's latest move has also come at a time when the department has barely used the provisions of the Land Grabbing Prohibition Act. The Act came into force in 2014 with provisions of up to six months of imprisonment or penalty.

Senior officials said the provisions have not been used. "There are no cases where such a punishment has been awarded. The cases ended after recovering the land in instances where the encroachers were caught. In a majority of the cases, political pressure was enough to make the foresters back off. The Act was effective only in the sense that it gave some level of confidence to the district-level officers to initiate action" a senior official said.

A major portion of the 2.04 lakh acres of encroached forest land is spread across three Western Ghats districts of Shivamogga (81,502 acres), Chikkamagaluru (30,641 acres) and Uttara Kannada (28,344 acres).

Political connection: A deputy conservator of forests said most of the encroachment was done through clearing forest in a short time and converting it into farmland.

"There are instances where trees and shrubs are cleared overnight. Unless a forest guard or an RFO notices it and brings it to the notice of the higher-ups, it is impossible to detect. Encroachers come up with fake documents to claim ownership or undocumented farmer status which will help them to drag the case or get the support of a politician" he said.

Cases in courts: Another senior officer said removing farmland from the ambit of the Act means the forest encroachment cases will now go to the JMFC (Judicial Magistrate) courts where officials have to rely on Karnataka Forest Act 1962 and Forest Conservation Act 1980.

Though these two Acts provide for criminal procedure against encroachers they do not match the weight and power of the Land Grabbing Act which deterred many encroachers. Considering that farmland constitutes 90% of the forest encroachment, its removal from the Act comes as the last straw he added.

Sources in the department said about 3 lakh applications have been received claiming forest land under the Forest Rights Act. Of this nearly 2 lakh applications have been rejected and another 85,000 are pending the source said.

Former PCCFBK Singh said the figure of 2.04 lakh acres was an underestimation that was also outdated. “The department has been giving these figures since 2010. Removing the farmlands from the ambit of Land Grabbing.

Prohibition Courts will take away the only deterrence. A scientific survey that has to measure the occupation with historical data needs to be done. If the state is serious about protecting the livelihood of people, it has to protect forests from encroachment” he added.

Courtesy:- Deccan Herald, Dated: 13.03.2022

8. ಮೇಕೆದಾಟು ಮತ್ತೆ ತಮಿಳುನಾಡು ಕ್ಯಾತೆ

ಕಾವೇರಿ ವಿಚಾರದಲ್ಲಿ ತಮಿಳುನಾಡು ತನ್ನ ಕ್ಯಾತೆ ಮುಂದುವರಿಸಿದ್ದು, ಮೇಕೆದಾಟು ಯೋಜನೆ ವಿರೋಧಿಸಿ ವಿಧಾನಸಭೆಯಲ್ಲಿ ಸರ್ವಾನುಮತದ ನಿರ್ಣಯ ಕೈಗೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿದ 2022–23ನೇ ಸಾಲಿನ ಬಜೆಟ್‌ನಲ್ಲಿ ಮೇಕೆದಾಟು ಯೋಜನೆಗೆ ರೂ.1,000 ಕೋಟಿ ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ತಮಿಳುನಾಡು ವಿಧಾನಸಭೆ ಈ ನಿರ್ಣಯ ಕೈಗೊಂಡಿದ್ದು, ಕರ್ನಾಟಕ ಸರ್ಕಾರ ಕಾವೇರಿ ನ್ಯಾಯಾಧೀಕರಣದ ತೀರ್ಪು ಮತ್ತು ಸುಪ್ರೀಂಕೋರ್ಟ್ ಆದೇಶಗಳನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದೆ.

ಅಲ್ಲದೆ, ಮೇಕೆದಾಟು ಯೋಜನೆಗೆ ತಾಂತ್ರಿಕ ಅಥವಾ ಪರಿಸರ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನು ಹಾಗೂ ಕರ್ನಾಟಕ ಸಿದ್ದಪಡಿಸಿರುವ ಮೇಕೆದಾಟು ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಅನುಮತಿ ಕೊಡಬಾರದು ಎಂದು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರವನ್ನು ಒತ್ತಾಯಿಸಿ ನಿರ್ಣಯ ಕೈಗೊಂಡಿದ್ದು, ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಿದೆ.

ತಮಿಳುನಾಡು ನೀರಾವರಿ ಸಚಿವ ದೊರೈ ಮುರುಗನ್ ಮಂಡಿಸಿದ ನಿರ್ಣಯಕ್ಕೆ ಆಡಳಿತಾರೂಢ ಡಿಎಂಕೆ, ಮಿತ್ರಪಕ್ಷ ಕಾಂಗ್ರೆಸ್, ಪ್ರತಿಪಕ್ಷಗಳಾದ ಎಐಎಡಿಎಂಕೆ, ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳ ಬೆಂಬಲ ಸೂಚಿಸಿವೆ.

ಜೊತೆಗೆ ಮೇಕೆದಾಟು ವಿಚಾರವಾಗಿ ಕರ್ನಾಟಕ ಕೈಗೊಳ್ಳುವ ಯಾವುದೇ ನಿರ್ಧಾರವನ್ನು ವಿರೋಧಿಸಿ, ಯಾವುದೇ ಹೋರಾಟಕ್ಕೂ ಸರ್ಕಾರಕ್ಕೆ ಸ್ವಾತಂತ್ರ್ಯ ನೀಡುವ ಬಗ್ಗೆಯೂ ನಿರ್ಣಯದಲ್ಲಿ ಪ್ರಸ್ತಾಪಿಸಲಾಗಿದೆ.

ವಿರೋಧ ಹೊಸದೇನೂ ಅಲ್ಲ: ರಾಜ್ಯ ಸರ್ಕಾರ ಮೇಕೆದಾಟು ಯೋಜನೆ ಪ್ರಸ್ತಾಪಿಸುವಾಗಲೇ ತಮಿಳುನಾಡು ವಿರೋಧ ವ್ಯಕ್ತಪಡಿಸಿತ್ತು. ಹೀಗಾಗಿ ಮೊದಲ ಬಾರಿ ವಿದ್ಯುತ್ ಉತ್ಪಾದನೆ ಉದ್ದೇಶದಿಂದ ಮೇಕೆದಾಟು ಅಣೆಕಟ್ಟೆ ನಿರ್ಮಿಸುವ ಯೋಜನೆ ಕೈಬಿಟ್ಟು ಬಳಿಕ ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟು ಯೋಜನೆ ಡಿಪಿಆರ್ ಸಿದ್ಧಪಡಿಸಿತ್ತು. ಇದಕ್ಕೆ ಚೆನ್ನೈ ಹಸಿರು ಪೀಠದಿಂದ ತಡೆಯಾಜ್ಞೆಯನ್ನೂ ತಂದಿತ್ತು. ಆದರೆ, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಈ ತಡೆಯಾಜ್ಞೆ

ತೆರವುಗೊಳಿಸಿದ್ದು, ಇದನ್ನು ಪ್ರಶ್ನಿಸಿ ತಮಿಳುನಾಡು ಸುಪ್ರೀಂಕೋರ್ಟ್ ಮೆಟ್ಟಿಲೇರಿದೆ. ಆದರೆ, ಸುಪ್ರೀಂಕೋರ್ಟ್ ಯೋಜನೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿದೆ.

ಇದೀಗ ಕರ್ನಾಟಕದಲ್ಲಿ ಮೇಕೆದಾಟು ಯೋಜನೆಗೆ ಹೋರಾಟ ನಡೆದು, ಸರ್ಕಾರ ರೂ.1000 ಕೋಟಿ ಬಜೆಟ್‌ನಲ್ಲಿ ಮೀಸಲಿಟ್ಟಿದೆ. ಜೊತೆಗೆ ಯೋಜನೆಯ ಡಿಪಿಆರ್ ಮತ್ತು ಪರಿಸರ ಅನುಮತಿಗಾಗಿ ಶತಪ್ರಯತ್ನ ಮಾಡುತ್ತಿದೆ. ಆದರೆ, ಇದು ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ ನ್ಯಾಯಾಲಯ ತಮಿಳುನಾಡಿನ ಆಕ್ಷೇಪ ಪರಿಗಣಿಸುವ ಸಾಧ್ಯತೆ ಇಲ್ಲ. ಈ ಹಿನ್ನೆಲೆಯಲ್ಲಿ ವಿಧಾನಸಭೆಯಲ್ಲಿ ನಿರ್ಣಯ ಕೈಗೊಂಡು ಕೇಂದ್ರದ ಮೇಲೆ ಒತ್ತಡ ಹೇರಲು ಮುಂದಾಗಿದೆ.

ನಿರ್ಣಯದಲ್ಲಿ ಏನಿದೆ: ಕರ್ನಾಟಕ ಸರ್ಕಾರವು ಕಾವೇರಿ ನ್ಯಾಯಾಧೀಕರಣ 2007ರ ಫೆಬ್ರವರಿ 5ರಂದು ನೀಡಿರುವ ತೀರ್ಪು ಮತ್ತು ಸುಪ್ರೀಂಕೋರ್ಟ್ 2018ರ ಫೆಬ್ರವರಿ 16ರಂದು ನೀಡಿದ ಆದೇಶಗಳನ್ನು ಉಲ್ಲಂಘಿಸಿ ಹಾಗೂ ಕಾವೇರಿ ಕೊಳ್ಳದ ರಾಜ್ಯಗಳು ಮತ್ತು ಕೇಂದ್ರ ಸಕಾರದ ಅನುಮತಿ ಪಡೆಯದೆ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟೆ ನಿರ್ಮಿಸಲು ಮುಂದಾಗಿದೆ. ಅಲ್ಲದೆ, ಯೋಜನೆಗಾಗಿ ಅನುದಾನವನ್ನೂ ಮೀಸಲಿಟ್ಟಿದ್ದು, ಇದನ್ನು ಸಹಿಸಲು ಸಾಧ್ಯವಿಲ್ಲ. ಹೀಗಾಗಿ ಕರ್ನಾಟಕ ಸರ್ಕಾರದ ನಡೆಯನ್ನು ಸದನ ಬಲವಾಗಿ ಖಂಡಿಸುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರದ ಪ್ರಸ್ತಾಪಿತ ಮೇಕೆದಾಟು ಯೋಜನೆಗೆ ತಾಂತ್ರಿಕ ಮತ್ತು ಪರಿಸರ ಅನುಮತಿಯನ್ನು ನೀಡಬಾರದು ಎಂದು ಈ ಸದನವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ.

ಕಾವೇರಿ ನದಿ ನೀರು ಹಂಚಿಕೆ ವಿವಾದವು ಸುದೀರ್ಘ ಅವಧಿಯಾಗಿದೆ. ಇದಕ್ಕೆ ಪರಿಹಾರವಾಗಿ ಸುಪ್ರೀಂಕೋರ್ಟ್ 2018ರ ಫೆಬ್ರವರಿ 16ರಂದು ಆದೇಶವೊಂದನ್ನು ಹೊರಡಿಸಿದ್ದು, ಅದನ್ನು ಪಾಲಿಸಬೇಕಾಗುತ್ತದೆ. ಎರಡು ರಾಜ್ಯಗಳ ಮಧ್ಯೆ ಇದು ಸೂಕ್ಷ್ಮ ವಿವಾದವಾಗಿರುವುದರಿಂದ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ, ಕಾವೇರಿ ಕೊಳ್ಳದ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲದೆ, ಮೇಕೆದಾಟು ಅಣೆಕಟ್ಟೆ ಸೇರಿದಂತೆ ಕಾವೇರಿ ಕೊಳ್ಳದಲ್ಲಿ ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳದಂತೆ ಕರ್ನಾಟಕಕ್ಕೆ ಸಲಹೆ ನೀಡಬೇಕು.

ಸುಪ್ರೀಂಕೋರ್ಟ್ ಆದೇಶದಂತೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ರಚಿಸಲಾಗಿದೆ. ಈ ಪ್ರಾಧಿಕಾರವು ಮೇಕೆದಾಟು ಯೋಜನೆ ಕುರಿತ ಡಿಪಿಆರ್‌ಗೆ ಅನುಮತಿ ನೀಡಬಾರದು. ಈ ಎಲ್ಲ ವಿಚಾರಗಳಲ್ಲಿ ಹೋರಾಟ ನಡೆಸಲು ತಮಿಳುನಾಡು ಸರ್ಕಾರಕ್ಕೆ ಸದನ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ದೊರೈ ಮುರುಗನ್ ಮಂಡಿಸಿದ ನಿರ್ಣಯಕ್ಕೆ ವಿಧಾನಸಭೆ ಸರ್ವಾನುಮತದ ಅಂಗೀಕಾರ ನೀಡಿದೆ.

ಆಧಾರ:–ವಿಶ್ವವಾಣಿ, ದಿನಾಂಕ:22.03.2022

9. ಎಲೆರಾಂಪುರ ಗ್ರಾಮ ಪಂಚಾಯಿತಿಗೆ ಜಲ ಪ್ರಶಸ್ತಿ

ಕೊರಟಗೆರೆ ತಾಲ್ಲೂಕಿನ ಎಲೆರಾಂಪುರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗಂಗಾದೇವಿ ದೆಹಲಿಯಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ ಅವರಿಂದ ಕೇಂದ್ರ ಸರ್ಕಾರದ ಜಲ ಪ್ರಶಸ್ತಿ ಸ್ವೀಕರಿಸಿದ್ದಾರೆ.

ಡಿ.ನಾಗೇನಹಳ್ಳಿಯಲ್ಲಿ ಹಿರೇಹಳ್ಳಿಯ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ)ದ ಸಹಯೋಗದಲ್ಲಿ 300 ಎಕರೆ ಪ್ರದೇಶದಲ್ಲಿ ನಡೆಸಿರುವ 'ಜಲಕ್ರಾಂತಿಗೆ' ಗ್ರಾಮಪಂಚಾಯಿತಿಗೆ ಜನವರಿ 7 ರಂದು ರಾಷ್ಟ್ರೀಯ ಪ್ರಶಸ್ತಿ ಘೋಷಿಸಲಾಗಿತ್ತು.

ಹರಿಯುವ ಮಳೆ ನೀರಿಗೆ 5 ಚೆಕ್ ಡ್ಯಾಂ, 85 ಕೃಷಿ ಹೊಂಡ ಅಂತರ್ಜಲ ವೃದ್ಧಿ ಜೊತೆಗೆ ಕೊಳವೆಬಾವಿಗಳ ಮರುಪೂರಣ, ಗೋಕಟ್ಟೆಗಳ ಅಭಿವೃದ್ಧಿ ಹೀಗೆ ಇಡೀ ಗ್ರಾಮದಲ್ಲಿ ಹನಿ ನೀರನ್ನು

ವ್ಯರ್ಥಗೊಳಿಸದೆ ಭೂಮಿಗೆ ಇಂಗಿಸುವ ಕೆಲಸ ಮಾದರಿ ಎನಿಸಿದೆ. 'ಮಳೆ ನೀರು ಕೊಯ್ಲು' ನೈಸರ್ಗಿಕವಾಗಿ ಮಾಡುವ ಮೂಲಕ ಪಾತಾಳಕ್ಕೆ ಸೇರಿದ್ದ ಅಂತರ್ಜಲ ವೃದ್ಧಿ ಜೊತೆಗೆ ಹಸಿರು ನಳನಳಿಸುವ ಕೃಷಿ ಕಾಯಕದ ಶ್ರಮವೂ ರೈತರ ಕೈಹಿಡಿದಿದೆ. 10*20 ಅಡಿಯ ಚೆಕ್ ಡ್ಯಾಂಗಳನ್ನು ನಿರ್ಮಿಸಿ ವ್ಯರ್ಥವಾಗಿ ಹರಿದು ಹೋಗುವ ಮಳೆ ನೀರು ಹಿಡಿದಿಟ್ಟು ಕೃಷಿಗೆ ಬಳಸಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಇದರ ಜೊತೆಗೆ ರೈತರ ಹೊಲ, ತೋಟಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ ಕೃಷಿಗೆ ಬಳಸಿಕೊಳ್ಳಲಾಗಿದೆ. ಗೋಕಟ್ಟೆಗಳನ್ನು ಅಭಿವೃಧಿಪಡಿಸಿ ದನ, ಕರುಗಳಿಗೆ ಕುಡಿಯುವ ನೀರು ಸಂಗ್ರಹಿಸಿಡಲಾಗಿದೆ. ಒಟ್ಟಾರೆ ಇಡೀ ಗ್ರಾಮದಲ್ಲೀಗ ಅಂತರ್ಜಲ ಅಭಿವೃದ್ಧಿ ಆಗಿದ್ದು 1200–1300 ಅಡಿ ಕೊಳವೆಬಾವಿ ಕೊರೆಯಬೇಕಿತ್ತು. ಈಗ 200–300 ಅಡಿಗೆಲ್ಲಾ ನೀರು ಸಿಗುತ್ತಿರುವುದು ವಿಶೇಷವೆನಿಸಿದೆ. ಮಳೆ ನೀರನ್ನು ಬಳಸಿ ಸಾಂಪ್ರದಾಯಿಕ ಕೃಷಿ ಜೊತೆ ವಾಣಿಜ್ಯ ಬೆಳೆಗಳನ್ನು ಬೆಳೆಯಲು ರೈತರನ್ನು ಪ್ರೋತ್ಸಾಹಿಸುತ್ತಿರುವ ಕೆವಿಕೆ ವಿಜ್ಞಾನಿ ರಮೇಶ್ ಜಲಕಾಯಕವು ಮಾದರಿ ಎನಿಸಿದೆ. ಕೇಂದ್ರ ಜಲ ಮಂತ್ರಾಲಯದ ಅಧಿಕಾರಿಗಳು ಡಿ.ನಾಗೇನಹಳ್ಳಿಗೆ ಕಳೆದ ವರ್ಷ ಭೇಟಿ ನೀಡಿ ಹಳ್ಳಿಯಲ್ಲಿ ಅಲ್ಲಿ ನಡೆದಿರುವ ಜಲಕ್ರಾಂತಿಯ ಮಾಹಿತಿಯನ್ನು ಕಲೆಹಾಕಿ ಪ್ರಶಸ್ತಿಗೆ ಶಿಫಾರಸ್ಸು ಮಾಡಿದ್ದರು. ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗಂಗಾಬಾಯಿ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ:ಲೋಗನಂದನ್ ರಾಷ್ಟ್ರಪತಿಗಳಿಂದ ಪ್ರತಿಷ್ಠಿತ ಪ್ರಶಸ್ತಿ ಸ್ವೀಕರಿಸಿದರು.

ಆಧಾರ:–ವಿಜಯವಾಣಿ, ದಿನಾಂಕ:30.03.2022

ಭಾಗ – 6

ನ್ಯಾಯಾಲಯ ಸುದ್ದಿಗಳು

1. ಲೋಪ ತನಿಖೆ : 'ಸುಪ್ರೀಂ' ಸಮಿತಿ

ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಕಳೆದ ವಾರ ಭೇಟಿ ನೀಡಿದ್ದಾಗ ಭದ್ರತೆಯಲ್ಲಿ ಉಂಟಾಗಿದ್ದ ಲೋಪದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ಶೀಘ್ರ ರಚಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಕೇಂದ್ರ ಸರ್ಕಾರ ಮತ್ತು ಪಂಜಾಬ್ ಸರ್ಕಾರ ಆರಂಭಿಸಿದ್ದ ತನಿಖೆಯನ್ನು ಸ್ಥಗಿತಗೊಳಿಸುವಂತೆಯೂ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು ಸೂಚಿಸಿದೆ.

ಪೀಠವು ಪ್ರಕರಣದ ವಿವರವಾದ ವಿಚಾರಣೆ ನಡೆಸಿತು. ಶೀಘ್ರವೇ ಆದೇಶ ಹೊರಡಿಸುವುದಾಗಿ ತಿಳಿಸಿತು. 'ಪ್ರಧಾನಿಯ ಭದ್ರತೆಯಲ್ಲಿ ಆಗಿರುವ ಲೋಪವನ್ನು ನ್ಯಾಯಾಲಯವು ಗಂಭೀರವಾಗಿ ಪರಿಗಣಿಸಿದೆ' ಎಂದು ಪೀಠವು ಹೇಳಿದೆ.

ಅತ್ಯಂತ ಅಲ್ಪ ಅವಧಿಯಲ್ಲಿ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಲಾಗುವುದು ಎಂದು ಪೀಠವು ತಿಳಿಸಿದೆ. ಪ್ರತಿಭಟನಕಾರರು ರಸ್ತೆ ತಡೆ ನಡೆಸಿದ್ದ ಕಾರಣ, ಪಂಜಾಬ್ನ ಫಿರೋಜ್‌ಪುರ ಸಮೀಪದ ಫ್ಲೈಓವರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸುಮಾರು 20 ನಿಮಿಷ ಸಿಲುಕಿಕೊಂಡಿದ್ದರು. ಅಲ್ಲಿ ಆಯೋಜಿಸಲಾಗಿದ್ದ ರ್‍ಯಾಲಿಯಲ್ಲಿ ಭಾಗವಹಿಸದೆಯೇ ಪ್ರಧಾನಿ ಹಿಂದಿರುಗಿದ್ದರು. ಪಂಜಾಬ್ ಪೊಲೀಸರ ಜೊತೆಗಿನ ಸಮನ್ವಯದಲ್ಲಿ ಭದ್ರತೆಯನ್ನು ಒದಗಿಸಲಾಗಿತ್ತು. ಇದರಲ್ಲಿ ಲೋಪ ಆಗಿದೆ ಎಂದು ಲಾಯರ್ಸ್ ವಾಯ್ಸ್ ಸಂಸ್ಥೆಯು ಸಲ್ಲಿಸಿದ ಅರ್ಜಿಯಲ್ಲಿ ಹೇಳಲಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ: 11.01.2022

2. ವಿಧಾನಸಭೆಯಿಂದ ಶಾಸಕರ ಅಮಾನತ್ತು ಆರು ತಿಂಗಳಿಗಿಂತ ಹೆಚ್ಚಿಸಬಾರದು

ಮಹಾರಾಷ್ಟ್ರ ವಿಧಾನಸಭೆಯಿಂದ ಬಿಜೆಪಿಯ 12 ಶಾಸಕರನ್ನು ಒಂದು ವರ್ಷ ಕಾಲ ಅಮಾನತ್ತುಗೊಳಿಸಿರುವ ಕ್ರಮ ಉಚ್ಚಾಟನೆಗಿಂತಲೂ ಭೀಕರವಾದುದು. ಸಂವಿಧಾನದತ್ತವಾಗಿ ಚುನಾಯಿತ ಜನಪ್ರತಿನಿಧಿಗಳಿಗೆ ಇರುವ ಹಕ್ಕುಗಳನ್ನು ಸ್ಪೀಕರ್ ಮೊಟಕುಗೊಳಿಸಲು ಆಗದು. ಶಾಸಕರ ಅಮಾನತ್ತು ಗರಿಷ್ಠ ಆರು ತಿಂಗಳಿಗಿಂತ ಹೆಚ್ಚು ಇರಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ. ಸಾಂವಿಧಾನಿಕವಾಗಿ ಅನೂರ್ಜಿತಗೊಳಿಸುವ ಮೂಲಕ ಯಾವುದೇ ವಿಧಾನಸಭಾ ಕ್ಷೇತ್ರವನ್ನು ನಿರ್ಲಕ್ಷಿಸಲಾಗದು. ಎಲ್ಲ ಕ್ಷೇತ್ರಗಳಿಗೂ ಸಮಾನ ಪ್ರಾತಿನಿಧ್ಯವಿದೆ ಎಂಬುದನ್ನು ಮರೆಯಬಾರದು. ವಿಧಾನಸಭೆಗೆ ಶಾಸಕರ ಅಮಾನತ್ತು ಅವಧಿಯನ್ನು ನಿರ್ಧರಿಸುವ ಅಧಿಕಾರ ಇದೆ ಎಂಬ ಮಹಾರಾಷ್ಟ್ರ ಪರ ವಕೀಲರ ವಾದವನ್ನು ಮಧ್ಯದಲ್ಲೇ ತಡೆದ ನ್ಯಾಯಪೀಠ, ಶಾಸಕ 60 ದಿನ ಸದನಕ್ಕೆ ಗೈರು ಹಾಜರಾದರೆ, ಆತನ ಸ್ಥಾನ ಖಾಲಿ ಇದೆ ಭಾವಿಸಲಾಗುತ್ತದೆ. ಅಂಥದರಲ್ಲಿ ಒಂದು ವರ್ಷ ಅಮಾನತ್ತು ಮಾಡುವುದು ಪ್ರಜಾತಂತ್ರ ವ್ಯವಸ್ಥೆಗೆ ವಿರುದ್ಧ ಅಲ್ಲವೆ. ಯಾವುದೇ ಕ್ಷೇತ್ರ ಆರು ತಿಂಗಳಿಗಿಂತ ಹೆಚ್ಚು ಕಾಲ ಖಾಲಿ ಇರಬಾರದು ಎಂಬ ಕಾನೂನೇ ಇದೆಯಲ್ಲ ಎಂದು ಹೇಳಿತು. ಪ್ರಕರಣದ ವಿಚಾರಣೆಯನ್ನು ಜನವರಿ 18ಕ್ಕೆ ಮುಂದೂಡಿತು.

ದುರ್ಬಲ ಸಾಕ್ಷಿಗಳ ವ್ಯಾಖ್ಯಾನ ವಿಸ್ತರಿಸಿದ ಸುಪ್ರೀಂ: ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಹಾಜರಾಗುವ 'ದುರ್ಬಲ ಸಾಕ್ಷಿ'ಯ (ವಲ್ನರೇಬಲ್ ವಿಟ್ನೆಸ್) ವ್ಯಾಖ್ಯಾನವನ್ನು ವಿಸ್ತರಿಸುವ ಮಹತ್ವದ ಆದೇಶವನ್ನು ಸುಪ್ರೀಂ ಕೋರ್ಟ್ ಹೊರಡಿಸಿದೆ. ಇದುವರೆಗೆ 18 ವರ್ಷದೊಳಗಿನ ಮಕ್ಕಳನ್ನು ಮಾತ್ರವೇ 'ದುರ್ಬಲ ಸಾಕ್ಷಿ' ಎಂದು ಪರಿಗಣಿಸಲಾಗುತ್ತಿತ್ತು. ಹೊಸ ಆದೇಶದ ಪ್ರಕಾರ ವಯಸ್ಸು ಹಾಗೂ ಲಿಂಗ ತಾರತಮ್ಯವಿಲ್ಲದೆ ಲೈಂಗಿಕ ದೌರ್ಜನ್ಯದ ಸಂತ್ರಸ್ತರು ಮತ್ತು ಮಾನಸಿಕ ರೋಗಗಳಿಂದ ಬಳಸಲುತ್ತಿರುವವರನ್ನು ಈ ವಿಭಾಗಕ್ಕೆ ಸೇರಿಸಲಾಗಿದೆ. ವಲ್ನರೇಬಲ್ ವಿಟ್ನೆಸ್ ಡಿಸ್‌ಪೊಸಿಷನ್ ಸೆಂಟರ್‌ನ (ವಿಡಬ್ಲ್ಯುಡಿಸಿ) ತರಬೇತಿ ಕಾರ್ಯಕ್ರಮ ರೂಪಿಸಲು ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ಗೀತಾ ಮಿತ್ತಲ್ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದೆ.

ಆಧಾರ: ವಿಜಯವಾಣಿ, ದಿನಾಂಕ: 12.01.2022

3. ಸುಪ್ರೀಂ ಕೋರ್ಟ್ ವಕೀಲರಿಗೆ ಬೆದರಿಕೆ ಕರೆ

ಸುಪ್ರೀಂ ಕೋರ್ಟ್ ಹಲವು ವಕೀಲರಿಗೆ ಅಂತರರಾಷ್ಟ್ರೀಯ ಕರೆಯೊಂದು ಬಂದಿದೆ. ಈ ಕರೆಯಲ್ಲಿ, ಪ್ರಧಾನಿಯವರ ಭದ್ರತೆಯಲ್ಲಿ ಆಗಿರುವ ಲೋಪ ಪ್ರಕರಣವನ್ನು ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡು, 'ಮೋದಿ ಸರ್ಕಾರಕ್ಕೆ ನೆರವು' ನೀಡಬಾರದು ಎಂಬ ಧ್ವನಿ ಮುದ್ರಿತ ಸಂದೇಶ ಇತ್ತು ಎಂದು ವಕೀಲರು ಹೇಳಿದ್ದಾರೆ.

ವಕೀಲರಾದ ದೀಪಕ್ ಪ್ರಕಾಶ್, ದಿವ್ಯಾಂಗ ಮಲಿಕ್, ನಚಿಕೇತ ವಾಜಪೇಯಿ ಅವರು ದೆಹಲಿಯ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ರಾಷ್ಟ್ರೀಯ ತನಿಖಾ ಸಂಸ್ಥೆಗೂ ದೂರು ಕೊಡಲಾಗಿದೆ.

ಈ ಧ್ವನಿಮುದ್ರಿತ ಸಂದೇಶವನ್ನು ಕಳುಹಿಸಿದವರೇ ಪ್ರಧಾನಿಯು ಫ್ಲೈಓವರ್‌ನಲ್ಲಿ ಸಿಲುಕಿಕೊಂಡಿದ್ದರ ಹೊಣೆಗಾರರು ಎಂದು ಸಂದೇಶದಲ್ಲಿ ಹೇಳಲಾಗಿದೆ. 1984ರ ದಂಗೆಯಲ್ಲಿ ಹತ್ಯೆಗೊಳಗಾದ ಸಿಖ್ ಸಮುದಾಯದ ಜನರ ಬಗ್ಗೆ ಸುಪ್ರೀಂ ಕೋರ್ಟ್ ಅಗತ್ಯ ಕ್ರಮ ಕೈಗೊಂಡಿಲ್ಲ ಎಂದು ಸಂದೇಶದಲ್ಲಿ ಅಸಮಾಧಾನ ವ್ಯಕ್ತಪಡಿಸಲಾಗಿದೆ.

ಸಂದೇಶದ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂದು ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ ಒತ್ತಾಯಿಸಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ: 15.01.2022

4. ಧರಣ, ರ್‍ಯಾಲಿಗೆ ಇನ್ನು ಅವಕಾಶವಿಲ್ಲ: ಹೈಕೋರ್ಟ್

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕೈಗೊಂಡಿದ್ದ ಪಾದಯಾತ್ರೆಯನ್ನು ಅಮಾನತ್ತಿನಲ್ಲಿಟ್ಟಿದ್ದೇವೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ), ನೀಡಿದ ಮಾಹಿತಿಯನ್ನು ಒಪ್ಪಿದ ಹೈಕೋರ್ಟ್, ಕೊರೋನಾ ನಿಯಂತ್ರಿಸಲು ಜಾರಿಗೊಳಿಸಿರುವ ಪ್ರಮಾಣೀಕೃತ ಕಾರ್ಯಸೂಚಿ (ಎಸ್‌ಒಪಿ) ಜಾರಿಯಲ್ಲಿರುವ ಅವಧಿವರೆಗೆ ರಾಜ್ಯದಲ್ಲಿ ಯಾವುದೇ ರ್‍ಯಾಲಿ, ಧರಣಿ ಅಥವಾ ರಾಜಕೀಯ ಸಮಾವೇಶಕ್ಕೆ ಅನುಮತಿಸದಂತೆ ಸರ್ಕಾರಕ್ಕೆ ತಾಕೀತು ಮಾಡಿದೆ.

ಕೋವಿಡ್ ಹೊಸ ತಳಿ ಒಮಿಕ್ರಾನ್ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮೇಕೆದಾಟು ಯೋಜನೆಗೆ ಆಗ್ರಹಿಸಿ ಕೆಪಿಸಿಸಿ ನಡೆಸುತ್ತಿರುವ ಪಾದಯಾತ್ರೆಯನ್ನು ನಿರ್ಬಂಧಿಸಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಬೆಂಗಳೂರಿನ ತಿಂಡ್ಲು ನಿವಾಸಿ ಎ.ವಿ.ನಾಗೇಂದ್ರ ಪ್ರಸಾದ್ ಸಲ್ಲಿಸಿದ್ದ ಸಾರ್ವಜನಿಕ

ಹಿತಾಸಕ್ತಿ ಅರ್ಜಿ ಇತ್ಯರ್ಥಪಡಿಸಿದ ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ನಿರ್ದೇಶನ ನೀಡಿತು.

ಸರ್ಕಾರದ ವಿರುದ್ಧ ಕಾಂಗ್ರೆಸ್ ದೂರು: ಇದಕ್ಕೂ ಮುನ್ನ ಕೆಪಿಸಿಸಿ ಹಿರಿಯ ವಕೀಲ, ಜ.12 ರಂದು ಹೈಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯ ಮತ್ತು ಕೊರೋನಾ ಉಲ್ಬಣ ಸನ್ನಿವೇಶ ಪರಿಗಣಿಸಿ ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ಅಮಾನತ್ತುಪಡಿಸಲಾಗಿದೆ. ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಬಂದ ಮೇಲೆ ಪಾದಯಾತ್ರೆ ಮುಂದುವರಿಸಲಾಗುವುದು. ಮೇಕೆದಾಟು ಯೋಜನೆಯಿಂದ ಬೆಂಗಳೂರಿಗೆ 16 ಟಿಎಂಸಿ ನೀರು ಸಿಗಲಿದೆ ಎಂದು ಮಾಹಿತಿ ನೀಡಿದರು. ಜೊತೆಗೆ, ಸರ್ಕಾರವು ಕೆಪಿಸಿಸಿಯ ಪಾದಯಾತ್ರೆಯನ್ನು ಮಾತ್ರ ನಿಷೇಧಿಸಿದೆ. ಉಳಿದ ರಾಜಕೀಯ ಪಕ್ಷದವರು ಎಸ್‌ಒಪಿ ಉಲ್ಲಂಘಿಸಿದ ಬಗ್ಗೆ ಚಕಾರವೆತ್ತಿಲ್ಲ. ಜನವರಿ 4ರಂದು ಎಸ್‌ಒಪಿ ಜಾರಿಗೆ ಬಂದ ಬಳಿಕ ಸರ್ಕಾರದ ಆದೇಶ ಉಲ್ಲಂಘಿಸಿದ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಪೀಠದ ಗಮನಕ್ಕೆ ತಂದರು.

ಸರ್ಕಾರದ ವಾದಕ್ಕೆ ಕೋರ್ ಒಪ್ಪಿಗೆ: ಸರ್ಕಾರದ ಪರ ಹೆಚ್ಚುವರಿ ಅಡ್ವೋಕೇಟ್ ಜನರಲ್ ಸುಬ್ರಹ್ಮಣ್ಯ, ರಾಜ್ಯದಲ್ಲಿ ಎಲ್ಲಾ ಧರಣಿ, ರ್‍ಯಾಲಿ, ಪ್ರತಿಭಟನೆ ನಿಷೇಧಿಸಿ 2022ರ ಜನವರಿ 4 ರಂದು ಆದೇಶಿಸಲಾಗಿದೆ. ಜನವರಿ 12 ರಂದು ಹೈಕೋರ್ಟ್ ಆದೇಶ ಹೊರಡಿಸಿದ ನಂತರ ಕೆಪಿಸಿಸಿ ಪಾದಯಾತ್ರೆ ನಿಷೇಧಿಸಲಾಯಿತು. ರಾಮನಗರ ಜಿಲ್ಲೆಯೂ ಸೇರಿ ಅಂತರ್ ಜಿಲ್ಲೆಯಲ್ಲಿ ಪಾದಯಾತ್ರೆ ಅಥವಾ ಮೆರವಣಿಗೆಗೆ ಅವಕಾಶ ಕಲ್ಪಿಸದಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನಿರ್ದೇಶಿಸಲಾಯಿತು. ಪಾದಯಾತ್ರೆ ತಡೆಯಲು ಅಗತ್ಯ ವ್ಯವಸ್ಥೆ ಮಾಡಲಾಯಿತು ಎಂದು ವಿವರಿಸಿದರು. ಇದನ್ನು ಒಪ್ಪಿಕೊಂಡ ನ್ಯಾಯಪೀಠ, ಪಾದಯಾತ್ರೆ ನಿಷೇಧಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಕೆಪಿಸಿಸಿ ಕೂಡ ಪಾದಯಾತ್ರೆ ನಿಲ್ಲಿಸಿದೆ. ಹೀಗಾಗಿ ಅರ್ಜಿ ವಿಚಾರಣೆ ಮುಂದುವರೆಸುವ ಅಗತ್ಯವಿಲ್ಲ ಎಂದು ಹೇಳಿ ಅರ್ಜಿ ಇತ್ಯರ್ಥಪಡಿಸಿತು.

ಸರ್ಕಾರ, ಕೆಪಿಸಿಸಿಗೆ ತಿವಿದಿದ್ದ ಕೋರ್ಟ್: ಅರ್ಜಿಯನ್ನು ಜನವರಿ 12ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್, ರಾಜ್ಯದಲ್ಲಿ ಧರಣಿ, ಮೆರವಣಿಗೆಗಳನ್ನು ನಿರ್ಬಂಧಿಸಿದ್ದರೂ ಹಾಗೂ ಪಾದಯಾತ್ರೆಗೆ ರಾಮನಗರ ಜಿಲ್ಲಾಡಳಿತ ಅನುಮತಿ ನಿರಾಕರಿಸಿದ್ದರೂ ಪಾದಯಾತ್ರೆ ಮುಂದುವರಿಸಲು ಕೆಪಿಸಿಸಿಗೆ ಅವಕಾಶ ಮಾಡಿಕೊಟ್ಟಿರುವುದೇಕೆ? ಪಾದಯಾತ್ರೆ ನಡೆಸುವವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ ಸರ್ಕಾರ ಅಷ್ಟೊಂದು ಅಸಹಾಯಕವಾಗಿದೆಯೇ? ನಿಯಮಗಳ ಉಲ್ಲಂಘನೆಯಾಗುತ್ತಿದ್ದರೂ ಕ್ರಮ ಜರುಗಿಸದಿರುವಷ್ಟು ಅಸಮರ್ಥವಾಗಿದೆಯೇ ಎಂದು ಚಾಟಿ ಬೀಸಿತ್ತಲ್ಲದೆ, ಜನವರಿ 4ರ ಎಸ್‌ಒಪಿ ಜಾರಿಗೆ ಕೈಗೊಂಡಿರುವ ಕ್ರಮಗಳನ್ನು ವಿವರಿಸುವಂತೆ ಸರ್ಕಾರಕ್ಕೆ ತಾಕೀತು ಮಾಡಿತ್ತು.

ಸರ್ಕಾರ ಅನುಮತಿಸದಿದ್ದರೂ, ಕೊರೋನಾ ಪರಿಸ್ಥಿತಿ ಉಲ್ಬಣಿಸಿದ್ದರೂ ಪಾದಯಾತ್ರೆಯನ್ನು ಹೇಗೆ ನಡೆಸಲಾಗುತ್ತಿದೆ? ಪಾದಯಾತ್ರೆ ನಡೆಸಲು ಯಾವ ಪ್ರಾಧಿಕಾರದಿಂದ ಅನುಮತಿ ಪಡೆಯಲಾಗಿದೆ? ಪಾದಯಾತ್ರೆಯಲ್ಲಿ ಎಸ್‌ಒಪಿ ಪಾಲನೆ ಮಾಡಲಾಗುತ್ತಿದೆಯೇ ಎಂಬ ಬಗ್ಗೆ ವಿವರಣೆ ನೀಡುವಂತೆ ಕೆಪಿಸಿಸಿಗೂ ನಿರ್ದೇಶಿಸಿತ್ತು.

ಆಧಾರ: ಕನ್ನಡಪ್ರಭ, ದಿನಾಂಕ: 15.01.2022

5. Legislature can't suspend members indefinitely : SC

Observing that a legislative body does not have "untrammelled power" to suspend its members for an indefinite period, the Supreme Court questioned the

Maharashtra assembly's decision to suspend 12 BJP MLAs for one year, observing that it is "against democracy" and could be misused any ruling party having thin majority.

A bench of Justices A M Khanwilkar, Dinesh Maheshwari and C T Ravikumar expressed disapproval over the suspension of members for more than six months and observed that anything beyond it would be "irrational and unconstitutional". It said a constituency cannot go unrepresented beyond six months as per constitutional provisions. It said that the Election Commission can conduct fresh elections in case of expulsion but the Commission would have no role to play if members are suspended.

"It can be very dangerous to democracy also. In cases where the government has a very slender lead and if few members are suspended for a long time then what would be the fallout... The assembly cannot provide any additional ground for disqualification for members which is not provided in law," the bench said.

The bench said if a member of assembly is suspended, it is done for the purpose of carrying business of the House smoothly for session and the period suspension should be for the session.

"There should be some purpose of suspension and the purpose is with regard to session. It should not travel beyond one session and anything other than this would be irrational. The real issue is about the rationality of the decision. The decision of one year seems irrational. If the suspension is done beyond a session, it has to be examined also from rationality point of view," the bench said.

The court expressed apprehension that if the decision of Maharashtra assembly upheld, similar situations may arise in other states also and it would have "wider ramificationes democracy". "Legislature does not have untrammeled power and the constitutional court is supreme in this regard," the bench said after the state government contended that the court has a limited role while examining the validity of the decisions taken by the assembly. "You have power to expel members but it does not mean that you can suspend them for an indefinite period. Suspension is done to enable the House to complete the business in one session and the suspension has to be considered in that context," the bench said.

The court had earlier said that suspension of 12 BJP MLAS in Maharashtra for one year is worse than expulsion and as per the constitutional provision a constituency cannot go unrepresented for more than six months. It had referred to Article 190 (4) of the Constitution which says that if for a period of 60 days, a member of a House, without its permission, is absent from all meetings, the House may declare his or her seat vacant.

On December 14, the apex court had sought responses from the Maharashtra assembly and the state government on the pleas filed by the 12 BJP MLAs challenging the resolution passed by the House to suspend them for one year. The 12 suspended

members are Sanjay Kute, Ashish Shelar, Abhimanyu Pawar, Girish Mahajan, Atul Bhatkhalkar, Parag Alavani, Harish Pimpale, Yogesh Sagar, Jay Kumar Rawat, Narayan Kuche, Ram Satpute and Bunty Bhangdia.

Courtesy: Times of India, dated: 19.01.2022

6. Legislator's House conduct draws SC's disapproval

With scenes of unruly behavior in the House by members of legislative bodies, including Parliament, becoming frequent in recent times, the Supreme Court expressed deep concern over the deterioration as most of the time is spent "in jeering and personal attacks against each other instead of erudite constructive and educative debates consistent with the highest tradition of the august body".

Terming the legislature as the first place where justice is dispensed to the common man by a democratic process, a bench of Justices A M Khanwilkar, Dinesh Maheshwari and C T Ravikumar appealed to all stakeholders to take steps to restore the lost glory of the legislative bodies which used to be a forum for intellectual debates of the highest order. It said the legacy should become more prominent than the rumpus caused very often and elected members should display statesmanship and not brinkman ship inside the house.

"It is in public domain (through print, electronic and social media) that the members of the Parliament or assembly/council of the state, spend much of the time in a hostile atmosphere. The Parliament / Legislative Assembly (are becoming) more and more intransigent place. The philosophical tenet, one must agree to disagree is becoming a seldom scene or a rarity during the debates. It has become common to hear that the House could not complete its usual scheduled business and most of the time had been spent in jeering and personal attacks against each other instead of erudite constructive and educative debates. It is disheartening for the observers," it said.

"They earnestly feel that it is high time that corrective steps are taken by all concerned and the elected representatives would do enough to restore the glory and the standard of intellectual debates of the highest order," the bench added.

The court expressed the concern while passing order against the Maharashtra assembly resolution suspending 12 BJP MLAs for one year.

Courtesy: Times of India, dated: 29.01.2022

7. ಪರಿಶಿಷ್ಟರ ಬಡ್ತಿ ನಿರ್ಧಾರ ರಾಜ್ಯಗಳದ್ದು

ಸರಕಾರಿ ನೌಕರಿಯ ಬಡ್ತಿಯಲ್ಲಿ ಪರಿಶಿಷ್ಟ ಜಾತಿ (ಎಸ್.ಸಿ.) ಮತ್ತು ಪರಿಶಿಷ್ಟ ಪಂಗಡ (ಎಸ್.ಟಿ.) ದವರಿಗೆ ಮೀಸಲಾತಿ ನೀಡುವ ಸಂಬಂಧ ಮಾನದಂಡ ರೂಪಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಇದೇ ವೇಳೆ, ಹುದ್ದೆಗಳಲ್ಲಿ ಎಸ್.ಸಿ./ಎಸ್.ಟಿ. ಪ್ರಾತಿನಿಧ್ಯದ ಸಮರ್ಪಕತೆಯನ್ನು ಪ್ರಮಾಣೀಕರಿಸಬಹುದಾದ

ದತ್ತಾಂಶ ಸಂಗ್ರಹಿಸುವುದು ರಾಜ್ಯಗಳ ಕೆಲಸ ಎಂದು ನ್ಯಾ. ನಾಗೇಶ್ವರ ರಾವ್ ನೇತೃತ್ವದ ತ್ರಿಸದಸ್ಯರ ಪೀಠ ಹೇಳಿದೆ.

"ವಾದ–ಪ್ರತಿವಾದಗಳನ್ನು ಆಲಿಸಿದ ನಂತರ ನ್ಯಾಯಪೀಠವು ಅರ್ಜಿಯ ವಿಚಾರಗಳನ್ನು ಆರು ಅಂಶಗಳನ್ನಾಗಿ ವಿಭಜಿಸಿದೆ. ಈ ಪೈಕಿ 'ಮಾನದಂಡ'ವೂ ಒಂದಾಗಿದೆ. ಸುಪ್ರೀಂ ಕೋರ್ಟ್ ಈ ಹಿಂದೆ 2006 ಮತ್ತು 2018ರಲ್ಲಿ ಪ್ರತ್ಯೇಕ ಪ್ರಕರಣಗಳಲ್ಲಿ ನೀಡಿದ ತೀರ್ಪುಗಳ ಹಿನ್ನೆಲೆಯಲ್ಲಿ ಹೊಸ ಮಾನದಂಡಗಳನ್ನು ರೂಪಿಸಲು ಸಾಧ್ಯವಿಲ್ಲ" ಎಂದು ಸುಪ್ರೀಂ ಕೋರ್ಟ್ ಹೇಳಿದೆ.

"ಹುದ್ದೆಗಳ ಬಡ್ತಿಗೆ ಸಂಬಂಧಿಸಿದಂತೆ ಎಸ್‌ಸಿ/ಎಸ್‌ಟಿ ಪ್ರಾತಿನಿಧ್ಯವನ್ನು ಅರಿಯಲು ಮತ್ತು ಅದರಲ್ಲಿನ ಅಸಮರ್ಪಕತೆಯನ್ನು ನಿವಾರಿಸಲು ರಾಜ್ಯಗಳು ಅಗತ್ಯ ದತ್ತಾಂಶವನ್ನು ಸಂಗ್ರಹಿಸಬೇಕು," ಎಂದು ನ್ಯಾ. ಸಂಜೀವ್ ಖನ್ನಾ ಹಾಗೂ ಬಿ.ಆರ್.ಗವಾಯಿ ಅವರನ್ನೂ ಒಳಗೊಂಡ ನ್ಯಾಯಪೀಠ ಹೇಳಿದೆ.

ಶ್ರೇಣಿಯನ್ನು ಪರಿಗಣಿಸಿ: "ಬಡ್ತಿಯಲ್ಲಿ ಎಸ್‌ಸಿ/ಎಸ್‌ಟಿ ಪ್ರಾತಿನಿಧ್ಯವನ್ನು ಅಳೆಯಲು ಮಾಹಿತಿ ಸಂಗ್ರಹಿಸುವಾಗ, ಬಡ್ತಿ ಬಯಸುತ್ತಿರುವ ಹುದ್ದೆಗಳ ಶ್ರೇಣಿ/ವರ್ಗವನ್ನು ಮಾನ ದಂಡವಾಗಿ ಪರಿಗಣಿಸಬೇಕೇ ಹೊರತು ನೌಕರನ ಇಡೀ ಸೇವಾವಧಿಯನ್ನು ಅಲ್ಲ, ಪ್ರಾತಿನಿಧ್ಯವನ್ನು ನಿಗದಿತ ಅವಧಿಯಲ್ಲಿ ಮೌಲ್ಯ ಮಾಪನ ಮಾಡಬೇಕು. ಅವಧಿ ಎಷ್ಟು ಎಂಬುದನ್ನು ಕೇಂದ್ರ ಸರಕಾರವೇ ನಿರ್ಧರಿಸಬೇಕು" ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

"ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಎಸ್‌ಸಿ/ಎಸ್‌ಟಿಗೆ ಸೇರಿದವರನ್ನು ಹಿಂದುಳಿದ ವರ್ಗಗಳ ಅರ್ಹತೆಯ ಮಟ್ಟಕ್ಕೆ ತರಲಾಗಿಲ್ಲ. ಎಸ್‌ಸಿ/ಎಸ್‌ಟಿಗಳಿಗೆ ಬಡ್ತಿಯಲ್ಲಿ ಮೀಸಲಾತಿ ನೀಡಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಸರಿಸಬೇಕಾದ ಮಾನದಂಡಗಳನ್ನು ನಿಗದಿಪಡಿಸಬೇಕು," ಕೇಂದ್ರ ಸರಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿತ್ತು. "ಮಾನದಂಡಗಳನ್ನು ನಿಗದಿಪಡಿಸದಿದ್ದರೆ ಒಂದಲ್ಲಾ ಒಂದು ವ್ಯಾಜ್ಯಗಳು ಸತತವಾಗಿ ತಲೆ ಎತ್ತಿ ಮೀಸಲಾತಿ ತತ್ವಕ್ಕೆ ಧಕ್ಕೆಯಾಗಲಿದೆ," ಎಂದು ಸರಕಾರದ ಪರವಾಗಿ ವಾದ ಮಂಡಿಸಿದ್ದ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು ಹೇಳಿದ್ದರು.

ಈ ಅರ್ಜಿಯ ವಿಚಾರಣೆಯನ್ನು 2021ರ ಅಕ್ಟೋಬರ್ 26ರಂದು ಪೂರ್ಣಗೊಳಿಸಿದ್ದ ನ್ಯಾಯಪೀಠ, ತೀರ್ಪನ್ನು ಕಾಯ್ದಿರಿಸಿತ್ತು. ಎಸ್.ಸಿ./ಎಸ್.ಟಿ.ಗಳಿಗೆ ಬಡ್ತಿಯಲ್ಲಿ ಮೀಸಲಾತಿ ಸಂಬಂಧ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿರುವ ತೀರ್ಪಿನ ಪುನರ್ ಪರಿಶೀಲನೆ ಮಾಡುವುದಿಲ್ಲ. ಆ ತೀರ್ಪನ್ನು ಹೇಗೆ ಜಾರಿಗೆ ತರಬೇಕು ಎನ್ನುವುದು ರಾಜ್ಯಗಳಿಗೆ ಬಿಟ್ಟ ವಿಚಾರ," ಎಂದು ನ್ಯಾಯಪೀಠ ಸ್ಪಷ್ಟಪಡಿಸಿತ್ತು.

ಹಿಂದಿನ ತೀರ್ಪುಗಳೇನು:– 2006ರಲ್ಲಿ ನೀಡಿದ್ದ ತೀರ್ಪಿನಲ್ಲಿ – ಎಸ್‌ಸಿ/ಎಸ್‌ಟಿ ಬಡ್ತಿಯಲ್ಲಿ ಮೀಸಲಾತಿ ನೀಡುವ ಸಂಸತ್ ನಿರ್ಣಯವನ್ನು ಕೋರ್ಟ್ ಎತ್ತಿಹಿಡಿದಿತ್ತಲ್ಲದೆ, ಬಡ್ತಿ ವಿಚಾರದಲ್ಲಿ ಈ ವರ್ಗಗಳು ಹಿಂದುಳಿದಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಗತ್ಯ ದತ್ತಾಂಶ ಸಂಗ್ರಹಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಿತ್ತು. ಅಲ್ಲದೆ ಬಡ್ತಿಗಾಗಿ ಮೂರು ಷರತ್ತುಗಳನ್ನೂ ವಿಧಿಸಿತ್ತು. ಅವುಗಳೆಂದರೆ, ಎಸ್‌ಸಿ/ಎಸ್‌ಟಿ ಸಮುದಾಯಗಳು ಬಡ್ತಿ ವಿಚಾರದಲ್ಲಿ ಹಿಂದುಳಿದಿವೆ ಎನ್ನುವುದನ್ನು ರಾಜ್ಯಗಳು ಸಾಬೀತುಪಡಿಸಬೇಕು. ಹುದ್ದೆ ಮತ್ತು ಸೇವೆಗಳಲ್ಲಿ ಈ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಬಡ್ತಿಯು ಆಡಳಿತದಲ್ಲಿ ದಕ್ಷತೆ ತರುವ ಉದ್ದೇಶ ಹೊಂದಿದೆ ಎನ್ನುವುದನ್ನು ಖಚಿತಪಡಿಸಬೇಕು. 2018ರಲ್ಲಿ ಪಂಚ ಸದಸ್ಯರ ಪೀಠವು 2006ರ ತೀರ್ಪಿನ ಮರುಪರಿಶೀಲನೆ ಹೊಣೆಯನ್ನು ಏಳು ಸದಸ್ಯರ ಸಾಂವಿಧಾನಿಕ ಪೀಠಕ್ಕೆ ವಹಿಸಿದೆ.

ಆಧಾರ: ವಿಜಯಕರ್ನಾಟಕ, ದಿನಾಂಕ: 29.01.2022

8. Engage in debates in the House, not in ridiculing each other: SC

A nation aspiring to be a "world leader" should debate on the welfare of its citizens rather than make Parliament a stage to exchange jeers and launch personal attacks on one another, the Supreme Court said in a judgment.

To see Members of Parliament and Legislative Assemblies ridicule each other instead of engaging in constructive debates in Houses is hardly worthy of the claim that "we are the oldest civilisation on the planet and the world's largest democracy".

With the completion of 75 years of Independence and ambitions of becoming a world leader, elected members should at least know that they are expected to show statesmanship and not brinkmanship in the House.

"For becoming world leaders and self-dependent/reliant, quality of debates in the House ought be of highest order," a three-judge Bench led by Justice A.M. Khanwilkar said in the judgment. Legislature is the first place where justice is dispensed to common man through democratic process, it observed.

Intransigent place

The order dealt with the year-long suspension of 12 BJP MLAS from Maharashtra Legislative Assembly for disorderly conduct.

Parliament or the State legislatures are no places to create a ruckus. "It is a place where policies and laws are propounded for governing the citizenry. It is here that the entire range of activities concerning the masses until the last mile, are discussed and their destinies are shaped," Justice Khanwilkar, who authored the judgment, wrote. The goal of the House was to ensure the welfare and happiness of "we the people of this nation".

The court pointed out that Parliament and Assemblies were becoming more and more an intransigent place. "The philosophical tenet that one must agree to disagree is seldom seen during debates... It has become common to hear that the House could not complete its usual scheduled business and most of the time had been spent in jeering and personal attacks against each other," it noted.

The Bench, including Justices Dinesh Maheshwari and C.T. Ravikumar, said disheartened observers felt it was high time to take corrective steps.

Justice Khanwilkar observed, "Aggression during the debates has no place in the setting of country governed by the Rule of Law. Even a complex issue needs to be resolved in a congenial atmosphere by observing collegiality and showing full respect and deference towards each other."

Courtesy: The Hindu, dated: 29.01.2022

9. ವಿದ್ಯಾರ್ಥಿನಿಯರ ಹಕ್ಕು ಉಲ್ಲಂಘನೆ ಸಲ್ಲ

ರಾಜ್ಯಾದ್ಯಂತ ಭುಗಿಲೆದ್ದಿರುವ ಹಿಜಾಬ್ ಧರಿಸಲು ನಿರ್ಬಂಧ ಕುರಿತು ವಿಚಾರಣೆಯನ್ನು ಆರಂಭಿಸಿರುವ ಹೈಕೋರ್ಟ್, ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವಂತೆ ವಿದ್ಯಾರ್ಥಿ ಸಮುದಾಯ ಮತ್ತು ಸಾರ್ವಜನಿಕರಿಗೆ ಮನವಿ ಮಾಡಿಕೊಂಡಿತು.

ಸುಮಾರು 5 ಗಂಟೆಗಳ ಕಾಲ ವಾದ ಆಲಿಸಿದ ನ್ಯಾಯಮೂರ್ತಿ.ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ಪೀಠ ದಿನದ ಕೊನೆಗೆ ಜನರಿಗೆ ಸಂವಿಧಾನದ ಬಗ್ಗೆ ವಿಶ್ವಾಸವಿದೆ. ಬಹುಪಾಲು ಜನರು ಒಳ್ಳೆಯವರೇ ಯಾರೋ ಕೆಲವು ದುಷ್ಕರ್ಮಿಗಳು ವಿವಾದಕ್ಕೆ ಬೆಂಕಿ ಹಚ್ಚುತ್ತಿದ್ದಾರೆ. ಇವೆಲ್ಲಾ ಶೋಭೆ ತರುವುದಿಲ್ಲ. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬೀದಿಗಿಳಿದು ಪರ್ಯಾಯ ಪ್ರತಿಭಟನೆಗಳನ್ನು ನಡೆಸಬಾರದು, ಶಾಂತಿ ಮತ್ತು ಸುವ್ಯೆವಸ್ಥೆ ಕಾಯ್ದಕೊಳ್ಳಬೇಕು ಎಂದು ಆದೇಶಿಸಿತ್ತು. ಅರ್ಜಿದಾರರ ಪರ ಹಿರಿಯ ನ್ಯಾಯವಾದಿ ದೇವದತ್ ಕಾವತ್ ನ್ಯಾಯಪೀಠದ ಮುಂದೆ ಪ್ರಬಲವಾದ ಮಂಡಿಸಿದರು. ಅವರು ಮಂಡಿಸಿದ ವಾದದ ಪ್ರಮುಖಾಂಶಗಳು

ಹಿಜಾಬ್ ಧಾರಣೆ ಧಾರ್ಮಿಕ ಆಚರಣೆ: ಹಿಜಾಬ್ ಧರಿಸುವುದು ಇಸ್ಲಾಂನಲ್ಲಿ ಹೆಣ್ಣುಮಕ್ಕಳ ಧಾರ್ಮಿಕ ಆಚರಣೆಯಾಗಿದ್ದು, ಪವಿತ್ರ ಕುರಾನ್‌ನಲ್ಲೂ ಹೇಳಲಾಗಿದೆ. ಹಿಜಾಬ್ ಇಸ್ಲಾಂ ಧರ್ಮದವರ ಉಡುಗೆ ಧರಿಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ನಿರ್ಬಂಧ ಸಂವಿಧಾನದ ಪರಿಚ್ಛೇದ 21ರ ಉಲ್ಲಂಘನೆ.

ಶೈಕ್ಷಣಿಕ ಹಕ್ಕುಗಳ ಉಲ್ಲಂಘನೆ: ಧರ್ಮಪಾಲನೆ ಜನರ ಮೂಲಭೂತ ಹಕ್ಕು ಧಾರ್ಮಿಕ ಆಚರಣೆಗಳನ್ನು ಸರ್ಕಾರ ನಿರ್ಧರಿಸಲಾಗದು. ಧರ್ಮ ಪಾಲನೆಗೆ ಪೂರಕವಾದ ಆಚರಣೆಗಳು ಅಗತ್ಯ. ಧಾರ್ಮಿಕ ಆಚರಣೆ ಎನಿಸಿಕೊಂಡಿದ್ದು, ಅದೂ ಧರ್ಮದ ಅವಿಭಾಜ್ಯ ಅಂಗವು ಆಗಿರುತ್ತದೆ. ಸರ್ಕಾರದ ಆದೇಶದಿಂದ ವಿದ್ಯಾರ್ಥಿನಿಯರ ಮೂಲಭೂತ ಹಕ್ಕುಗಳ ಜೊತೆಗೆ ಅವರ ಶೈಕ್ಷಣಿಕ ಹಕ್ಕುಗಳು ಉಲ್ಲಂಘನೆ.

ತೀರ್ಪು ಸರ್ಕಾರದ ಪರ ಇಲ್ಲ: ಸಮವಸ್ತ್ರ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಉಲ್ಲೇಖಿಸಿರುವ ಯಾವ ತೀರ್ಪುಗಳು ಆದೇಶದ ಪರವಾಗಿಲ್ಲ. ಎಲ್ಲವೂ ಬೇರೆ ಬೇರೆ ಸನ್ನಿವೇಶದಲ್ಲಿ ನೀಡಿರುವ ತೀರ್ಪುಗಳು ಅವು ಇಲ್ಲಿ ಅನ್ವಯಿಸುವುದಿಲ್ಲ.

- ಧಾಮಿಕ ಸ್ವಾತಂತ್ರ್ಯ ವಿಸ್ತರಣೆಗೊಂಡಿದ್ದು, ಇದು ಇಮ್ಯಾನುಯಲ್ ವರ್ಸಸ್ ಸ್ಟೇಟ್ ಆಫ್ ಕೇರಳದಲ್ಲಿ ಉಲ್ಲೇಖವಾಗಿದ್ದು, ಕಾನೂನು ಮತ್ತು ಸುವ್ಯವಸ್ಥೆ ಕಾಯ್ದಕೊಳ್ಳುವುದು ರಾಜ್ಯಗಳ ಕರ್ತವ್ಯ.
- ಶಾಲೆಗಳಲ್ಲಿ ಕೆಲವು ವಿದ್ಯಾರ್ಥಿಗಳು ನಾಮ ಹಾಕಿಕೊಂಡು ಬರುತ್ತಾರೆ. ಕೆಲವರು ಹಿಜಾಬ್ ಧರಿಸುತ್ತಾರೆ. ಕೆಲವರು ಕ್ರಾಸ್ ಧರಿಸುತ್ತಾರೆ. ಇದೆಲ್ಲಾ ಸಾಕಾರಾತ್ಮಕ ಜಾತ್ಯತೀತತೆ, ಸರ್ಕಾರ ಎಲ್ಲ ಧರ್ಮದ ಆಚರಣೆಗಳಿಗೂ ಪೂರಕ ವಾತಾವರಣವನ್ನು ಸೃಷ್ಟಿಸಬೇಕು.
- ಹಿಜಾಬ್ ನಿರ್ಬಂಧ ಕರ್ನಾಟಕ ಶಿಕ್ಷಣ ಕಾಯಿದೆಗೆ ವಿರುದ್ಧವಾದದು.
- ಪರೀಕ್ಷೆಗಳು ಹತ್ತಿರವಾಗುತ್ತಿರುವ ಹಿನ್ನಲೆಯಲ್ಲಿ ಕೋರ್ಟ್ ಅರ್ಜಿದಾರರ ಹಕ್ಕುಗಳನ್ನು ರಕ್ಷಿಸಬೇಕು.
- ಹಿಜಾಬ್ ಧರಿಸುವುದರಿಂದ ಶಿಕ್ಷಕರಿಗೆ ಹಾಗೂ ಸಹ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ.

ಕುರಾನ್ ಏನು ಹೇಳುತ್ತದೆ: ಹಿಜಾಬ್ ಬಗ್ಗೆ ಕುರಾನ್ ಏನು ಹೇಳುತ್ತದೆ ಎಂದು ತಿಳಿಯಲು ನ್ಯಾಯಾಪೀಠ, ಹೈಕೋರ್ಟ್ ಲೈಬ್ರರಿಯಿಂದ ಕುರಾನ್ ಪ್ರತಿ ತರಿಸಿಕೊಂಡಿತ್ತು. ಅರ್ಜಿದಾರರ ಪರ ವಕೀಲರು ಇಸ್ಲಾಂ ಧರ್ಮದ ಮಹಿಳೆಯರು ಕೈ ಹಾಗೂ ಮುಖ ಹೊರತುಪಡಿಸಿ ದೇಹದ ಉಳಿದ ಯಾವ ಭಾಗಗಳು ಕಾಣದಂತೆ ಬಟ್ಟೆ ಧರಿಸಬೇಕು. ಖಾಸಗಿ ಅಂಗಗಳು ಸಂಪೂರ್ಣವಾಗಿ ಮುಚ್ಚುವಂತಿರಬೇಕು. ತಲೆಯನ್ನು ಬಟ್ಟೆಯಿಂದ ಮುಚ್ಚಬೇಕು. ಶಿರವಸ್ತ್ರಗಳು (ಹಿಜಾಬ್) ಎದೆಯವರೆಗೂ ಇರಬೇಕು ಎಂದು ಕುರಾನ್‌ನಲ್ಲಿ ಹೇಳಲಾಗಿದೆ. ತಂದೆ, ಪತಿ, ಮಕ್ಕಳು ಕುಟುಂಬದ ಆಪ್ತರ ಮುಂದೆ ಹಿಜಾಬ್‌ಗೆ ವಿನಾಯಿತಿ ಇದೆ ಎಂದು ತಿಳಿಸಿದರು. ಅಡ್ವೊಕೇಟ್ ಜನರಲ್ ಕುರಾನ್ ಅನುವಾದದ ಬಗ್ಗೆ ಆಕ್ಷೇಪ ಎತ್ತಿ ಕುರಾನ್ ಅನುವಾದ ಪರಿಶೀಲನೆಗೆ ಅವಕಾಶ ಕೋರಿದರು. ನ್ಯಾಯಾಲಯ ಅದಕ್ಕೆ ಒಪ್ಪಿಗೆ ಸೂಚಿಸಿತು.

ಧಾರ್ಮಿಕ ಆಚರಣೆ ಕಾನೂನು ಉಲ್ಲಂಘನೆಯಲ್ಲ: ವಿದ್ಯಾರ್ಥಿನಿಯರು ಸಮವಸ್ತ್ರ ಧರಿಸಿಯೇ ಶಾಲಾ–ಕಾಲೇಜಿಗೆ ಹೋಗುತ್ತಿದ್ದಾರೆ. ಧಾರ್ಮಿಕ ಆಚರಣೆಯ ಭಾಗವಾಗಿ ಹಿಜಾಬ್ ಧರಿಸುತ್ತಿದ್ದಾರೆ. ಇದರಿಂದ ಯಾವುದೇ ರೀತಿಯಲ್ಲೂ ಕಾನೂನು ಸುವ್ಯವಸ್ಥೆಗೆ ಅಡ್ಡಿಯಾಗಿಲ್ಲ. ಸಾರ್ವಜನಿಕ ಸುವ್ಯವಸ್ಥೆ ನೆಪದಲ್ಲಿ ಸರ್ಕಾರ ಆದೇಶ ಹೊರಡಿಸಿದೆ. ಧಾರ್ಮಿಕ ಆಚರಣೆ ನಿರ್ಬಂಧಿಸುವ ಅಧಿಕಾರ ಸರ್ಕಾರಕ್ಕಿಲ್ಲ. ಸಿಖ್ಖರೂ ಟರ್ಬನ್ ಧರಿಸುತ್ತಾರೆ. ಅದನ್ನು ಸಾರ್ವಜನಿಕ ಆದೇಶದ ಉಲ್ಲಂಘನೆ ಎನ್ನಬಹುದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:09.02.2022

10.ರಾಜ್ಯ ಹೊತ್ತಿ ಉರಿಯುತ್ತಿದೆ : ಹೈಕೋರ್ಟ್ ಆತಂಕ

ಕೋವಿಡ್ ನಿರ್ಬಂಧ ಸಡಿಲಿಕೆಯಾಗಿದ್ದರೂ ಹೈಕೋರ್ಟ್ ಪ್ರವೇಶಕ್ಕೆ ವಿಧಿಸಿರುವ ಸಾರ್ವಜನಿಕರು ಕಕ್ಷಿದಾರರ ಪ್ರವೇಶ ಮಿತಿಯಲ್ಲಿ ಅಷ್ಟೇನೂ ವ್ಯತ್ಯಾಸವಾಗಿಲ್ಲ. ಆದರು ಹೈಕೋರ್ಟ್‌ನ 10ನೇ ಸಂಖ್ಯೆಯ ಹಾಲ್‌ನಲ್ಲಿ ಹಿರಿ–ಕಿರಿಯ ವಕೀಲರು ಬೆಳಿಗ್ಗೆ 10.30ಕ್ಕೆ ಸರಿಯಾಗಿ ಕಿಕ್ಕಿರಿದು ಜಮಾಯಿಸಿದ್ದರು.

ಹಿಜಾಬ್ ಕುರಿತಾದ ರಿಟ್ ಅರ್ಜಿಗಳ ಸಂಖ್ಯೆ ಒಟ್ಟು ಏಳಕ್ಕೇರಿದೆ. ಈ ಎಲ್ಲ ರಿಟ್ ಅರ್ಜಿಗಳನ್ನು ನ್ಯಾಯಾಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ ವಿಚಾರಣೆಗೆ ಕೈಗೆತ್ತಿಕೊಂಡಿತ್ತು.

ಕಲಾಪ ಆರಂಭವಾಗುತ್ತಿದ್ದಂತೆಯೇ ದಿನದ ಕೇಸ್ ಲಿಸ್ಟ್‌ನಲ್ಲಿ ನಮೂದಿಸಲಾಗಿದ್ದ (ಹಿಜಾಬ್ ಹೊರತುಪಡಿಸಿ) ಇತರೆಲ್ಲಾ ಪ್ರಕರಣಗಳಿಗೆ ಮುದ್ದತ್ತು ನೀಡಿ ವಿಚಾರಣೆ ಮುಂದೂಡಲಾಯಿತು. ಕೆಲವು ವಕೀಲರು ನಮ್ಮ ಅರ್ಜಿಗಳ ತುರ್ತು ವಿಚಾರಣೆ ಅಗತ್ಯವಿದೆ ಎಂದು ಮನವಿ ಮಾಡಿದರು.

ಇದಕ್ಕೆ ನ್ಯಾಯಾಮೂರ್ತಿಗಳು ಇಡೀ ರಾಜ್ಯ ಹೊತ್ತಿ ಉರಿಯುತ್ತಿದೆ. ಮುಗ್ಧ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಎಲ್ಲೆಡೆ ಅಡಚಣೆಯಾಗುತ್ತಿದೆ ಅವರೆಲ್ಲಾ ರಸ್ತೆಗೆ ಇಳಿದಿದ್ದಾರೆ. ಇದ್ಯಾವುದೂ ಸಂತೋಷದ ವಿಷಯವಲ್ಲ. ಹಿಜಾಬ್ ಪ್ರಕರಣಕ್ಕೆ ಆದ್ಯತೆ ನೀಡಲಾಗುವುದು. ಸಂವಿಧಾನ ಏನು ಹೇಳುತ್ತದೆಯೋ ಹಾಗೆ ನಡೆಯೋಣ. ಈ ಅರ್ಜಿಗಳ ಕಾನೂನು ಪರಾಮರ್ಶೆ ನಡೆಸೋಣ ಎಂದರು.

ಸಂಖ್ಯೆ ಮುಖ್ಯವಲ್ಲ: ಅರ್ಜಿದಾರರ ಪರ ವಕೀಲರೊಬ್ಬರು ಸ್ವಾಮಿ ಈ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ಅರ್ಜಿಗಳು ದಾಖಲಾಗುತ್ತಿವೆ. ಆದ್ದರಿಂದ, ವಿಚಾರಣೆ ಮುಂದೂಡಬೇಕು ಎಂದು ಕೋರಿದರು.

ಇದಕ್ಕೆ ನ್ಯಾಯಮೂರ್ತಿಗಳು ಇದು ಕೆ.ಆರ್. ಮಾರ್ಕೆಟ್ ಅಲ್ಲ. ಹೈಕೋರ್ಟ್, ಅರ್ಜಿಗಳ ಸಂಖ್ಯೆ ಎಷ್ಟೇ ಇದ್ದರೂ ತೀರ್ಪು ಎಲ್ಲವಕ್ಕೂ ಒಂದೇ ಅನ್ವಯವಾಗುತ್ತದೆ ಅಲ್ಲವೇ ಎಂದು ಪ್ರಶ್ನಿಸಿದರು.

ಸಂಸ್ಕೃತಕ್ಕಿಂತ ಸುಂದರ ಕನ್ನಡ: ಅರ್ಜಿದಾರರ ಪರ ಹಿರಿಯ ವಕೀಲ ದೇವದತ್ತ ಕಾಮತ್ ಇಡೀ ದಿನದ ಕಲಾಪ ಅಂತ್ಯವಾಗುವ ತನಕ ವಾದ ಮಂಡಿಸಿದರು ಆರಂಭದಲ್ಲಿಯೇ ಸರ್ಕಾರದ ಸುತ್ತೋಲೆ ಆಕ್ಷೇಪಾರ್ಹವಾಗಿದೆ ಎಂದು ವಿವರಿಸುತ್ತಿದ್ದಂತೆಯೆ ನ್ಯಾಯಮೂರ್ತಿಗಳು ಸರಿ ಸರ್ಕಾರದ ಆದೇಶವನ್ನು ಎಲ್ಲ ವಕೀಲರು ಮತ್ತು ಕಕ್ಷಿದಾರರಿಗೆ ಕೇಳುವಂತೆ ಗಟ್ಟಿಯಾಗಿ ಓದಿ ಎಂದು ನಿರ್ದೇಶಿಸಿದರು. ಆಗ ಕಾಮತ್ ಸ್ವಾಮಿ ನನಗೆ ಕನ್ನಡ ಅಷ್ಟೊಂದು ಚೆನ್ನಾಗಿ ಬರುವುದಿಲ್ಲ ಕ್ಷಮಿಸಬೇಕು ಎಂದರು.

ಇದಕ್ಕೆ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು ಕಾಮತ್ ನೀವು ಕನ್ನಡಿಗರು ನಿಮಗೆ ಗೊತ್ತೇ ಸಂಸ್ಕೃತಕ್ಕಿಂತಲೂ ಕನ್ನಡ ಅತ್ಯಂತ ಸುಂದರವಾದ ಭಾಷೆ. ಈ ಮಾತನ್ನು ಡಿ.ವಿ. ಗುಂಡಪ್ಪನವರು ತಮ್ಮ ಸಾಹಿತ್ಯ ಮತ್ತು ಜೀವನ ಸೌಂದರ್ಯದಲ್ಲಿ ಉಲ್ಲೇಖಿಸಿದ್ದಾರೆ ಎಂದು ಗಮನ ಸೆಳೆದರು.

ಆಕ್ಷೇಪಣೆ ಸಿದ್ದ: ಸರ್ಕಾರದ ಪರ ಅಡ್ವೋಕೇಡ್ ಜನರಲ್ ಪ್ರಭುಲಿಂಗ ಕೆ. ನಾದವಗಿ ಹಾಜರಾಗಿ, ಸರ್ಕಾರದ ಆಕ್ಷೇಪಣೆ ಸಿದ್ಧವಿದೆ ಎಂದು ಅರುಹಿದರು. ವಾದ ಮಂಡನೆಯ ಮಧ್ಯದಲ್ಲಿ ಕಾಮತ್ ಕೆಲವೆಡೆ ವಿದ್ಯಾರ್ಥಿಗಳಿಗೆ ರಕ್ಷಣೆ ಬೇಕಾಗಿದೆ. ಸರ್ಕಾರ ಈ ಪ್ರಕರಣವನ್ನು ರಾಜಕೀಯಗೊಳಿಸುತ್ತಿದೆ. ಇನ್ನೆರಡು ತಿಂಗಳಲ್ಲಿ ವಾರ್ಷಿಕ ಪರೀಕ್ಷೆ ಎದುರಾಗಲಿವೆ. ಅಲ್ಲಿಯವರೆಗೂ ಯಥಾಸ್ಥಿತಿ ಕಾಪಾಡಿಕೊಂಡು ಹೋಗುವಂತೆ ಆದೇಶಿಸಬೇಕು ಎಂದರು. ರಾಜಕೀಯಗೊಳಿಸುವ ಪದವನ್ನು ಬಲವಾಗಿ ನಾವದಗಿ ಆಕ್ಷೇಪಿಸಿದರು.

ದೇವರ ನಾಡಿನ ವಕೀಲರು: ಕಲಾಪ ಮುಕ್ತಾಯಗೊಳಿಸುವ ಮುನ್ನ ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಿ ಈ ಪ್ರಕರಣದಲ್ಲಿ ನಾನು ವಾದ ಮಂಡಿಸಲಿದ್ದೇನೆ ಎಂದು ವಕೀಲ ಹಾಗೂ ಅಂಕಣಕಾರ ಕಾಳೇಶ್ವರಮ್ ರಾಜ್ ಕೋರಿದರು.

ನೀವು ಎಲ್ಲಿಂದ ಮಾತನಾಡುತ್ತಿದ್ದೀರಿ ಎಂದು ನ್ಯಾಯಮೂರ್ತಿಗಳು ಕಾಳೇಶ್ವರಮ್ ಅವರನ್ನು ಪ್ರಶ್ನಿಸಿದರು. ಆಗ ಅವರು ನಾನು ಕೇರಳದಿಂದ ಮಾತನಾಡುತ್ತಿದ್ದೇನೆ ಎಂದರು. ಓಹ್ ನೀವು ದೇವರ ನಾಡಿನವರು ತಾವು ಅವಶ್ಯವಾಗಿ ಮಧ್ಯಂತರ ಅರ್ಜಿ ಸಲ್ಲಿಸಿ ವಾದ ಮಂಡಿಸಬಹುದು ಎಂದು ನ್ಯಾಯಮೂರ್ತಿಗಳು ಅನುಮತಿ ನೀಡಿದರು.

ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ್ ಮುಖಾಂತರ ವೀಕ್ಷಿಸುತ್ತಿದ್ದವರ ಸಂಖ್ಯೆ ದಿನವಿಡೀ 500 ಇತ್ತು. ಈ ಸಂಖ್ಯೆ ಹೆಚ್ಚಾಗಲು ಅವಕಾಶ ನೀಡದ ಕೋರ್ಟ್ ಆಫೀಸರ್ ಮಧ್ಯದಲ್ಲಿ ಸೇರ್ಪಡೆಯಾಗಲು ಪ್ರಯತ್ನಿಸುತ್ತಿದ್ದವರ ಮನವಿಯನ್ನು ತಿರಸ್ಕರಿಸುತ್ತಿದ್ದರು. ಒಂದು ಹಂತದಲ್ಲಿ ಅಡ್ವೋಕೇಟ್ ಜನರಲ್ ಅವರಿಗೆ ಆನ್‌ಲೈನ್‌ನಲ್ಲಿ ಅವಕಾಶ ಇಲ್ಲದಂತಾಗಿತ್ತು.

ಆಧಾರ: ಪ್ರಜಾವಾಣಿ, ದಿನಾಂಕ:09.02.2022

11. ಹಿಜಾಬ್ ವಿಸ್ತೃತ ಪೀಠಕ್ಕೆ

ತೀವ್ರ ವಿವಾದಕ್ಕೆ ಕಾರಣವಾಗಿರುವ ಹಿಜಾಬ್ ವಿಚಾರದಲ್ಲಿ ವೈಯಕ್ತಿಕ ಕಾನೂನು ಮೂಲಭೂತ ಹಕ್ಕು ಸೇರಿದಂತೆ ಕೆಲ ಸಾಂವಿಧಾನಿಕ ಪ್ರಶ್ನೆಗಳು ಅಡಗಿರುವ ಹಿನ್ನೆಲೆಯಲ್ಲಿ ವಿಸ್ತೃತ ಪೀಠವೇ ವಿಚಾರಣೆ ನಡೆಸಬೇಕು ಎಂದು ಏಕ ಸದಸ್ಯ ಪೀಠ ಮುಖ್ಯ ನ್ಯಾಯಮೂರ್ತಿ ಅವರಿಗೆ ಶಿಫಾರಸ್ಸು ಮಾಡಿದೆ ಅದರ ಬೆನ್ನಲ್ಲೇ ಈ ಸಂಬಂಧಿ ಅರ್ಜಿಗಳ ವಿಚಾರಣೆಗೆ ಹೈಕೋರ್ಟ್ ತ್ರಿಸದಸ್ಯ ನ್ಯಾಯಾಪೀಠವೊಂದನ್ನು ರಚಿಸಿದೆ.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮತ್ತು ನ್ಯಾಯಮೂರ್ತಿ ಜೆ. ಎಂ. ಖಾಜಿ ಅವರಿರುವ ವಿಸ್ತೃತ ಪೀಠ ವಿವಾದಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಪ್ರತ್ಯೇಕ ಐದು ಅರ್ಜಿಗಳ ವಿಚಾರಣೆ ನಡೆಸಲಿದೆ.

ಉಡುಪಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಕುಂದಾಪುರದ ಭಂಡಾರ್ಕರ್ಸ್ ಕಲಾ ಮತ್ತು ವಿಜ್ಞಾನ ಕಾಲೇಜುಗಳಲ್ಲಿ ಹಿಜಾಬ್ ಧರಿಸಿದವರ ಪ್ರವೇಶ ನಿರ್ಬಂಧಿಸಿರುವ ಕ್ರಮ ಪ್ರಶ್ನಿಸಿ ಕೆಲ ವಿದ್ಯಾರ್ಥಿನಿಯರು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ಸಂಹಿತೆ ಜಾರಿಗೊಳಿಸಿ ಫೆಬ್ರವರಿ 5 ರಂದು ರಾಜ್ಯ ಸರ್ಕಾರ ಹೊರಡಿಸಿದ ಸುತ್ತೋಲೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಹಲವು ತಕರಾರು ಅರ್ಜಿಗಳನ್ನು ವಿಸ್ತೃತ ಪೀಠ ವಿಚಾರಣೆ ನಡೆಸುವುದು ಸೂಕ್ತ ಎಂದು ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ ಅವರಿದ್ದ ಏಕ ಸದಸ್ಯರ ನ್ಯಾಯಪೀಠ ಅಭಿಪ್ರಾಯ ವ್ಯಕ್ತಪಡಿಸಿತು.

ಅಲ್ಲದೆ, ಅರ್ಜಿಗಳ ವಿಚಾರಣೆಗೆ ವಿಸ್ತೃತ ಪೀಠ ರಚಿಸಬಹುದೇ ಎಂಬ ಬಗ್ಗೆ ಮುಖ್ಯ ನ್ಯಾಯಮೂರ್ತಿಗಳು ತೀರ್ಮಾನ ಕೈಗೊಳ್ಳಲಿ ಅದಕ್ಕಾಗಿ ಅರ್ಜಿಗೆ ಸಂಬಂಧಿಸಿದ ಕಡತ ಹಾಗೂ ದಾಖಲೆಗಳನ್ನು ಮುಖ್ಯ ನ್ಯಾಯಮೂರ್ತಿಗಳ ಮುಂದೆ ಇಡಬೇಕು ಎಂದು ರಿಜಿಸ್ಟ್ರಿಗೆ ನ್ಯಾಯಾಮೂರ್ತಿ ಕೃಷ್ಣ ದೀಕ್ಷಿತ್ ಅವರು ನಿರ್ದೇಶಿಸಿದರು.

ಅದರ ಬೆನ್ನಲ್ಲೇ ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ಅವರ ನೇತೃತ್ವದಲ್ಲಿ ತ್ರಿಸದಸ್ಯ ನ್ಯಾಯ ಪೀಠವನ್ನು ರಚನೆ ಮಾಡಲಾಗಿದೆ.

ಜಡ್ಜ್ ಹೇಳಿದ್ದೇನು:–

1. ಹಿಜಾಬ್ ವಿಷಯದಲ್ಲಿ ದೇಶದ ವಿವಿಧ ಕೋರ್ಟ್‌ಗಳು ನೀಡಿರುವ ತೀರ್ಪು ಪರಿಶೀಲಿಸಿದ್ದೇನೆ.
2. ವೈಯಕ್ತಿಕ ಕಾನೂನು ಅಥವಾ ಮೂಲ ಕಾನೂನು ಸಂಬಂಧ ಸಾಂವಿಧಾನಿಕ ಪ್ರಶ್ನೆಗಳು ಅಡಗಿವೆ.
3. ಪ್ರಕರಣದ ಸೂಕ್ಷ್ಮತೆ ಗಮನಿಸಿದರೆ ವಿಸ್ತೃತ ಪೀಠದಲ್ಲಿ ಅರ್ಜಿ ವಿಚಾರಣೆ ನಡೆಸುವುದು ಸೂಕ್ತ.
4. ಮಧ್ಯಂತರ ಆದೇಶ ನೀಡುವ ಕುರಿತು ವಿಸ್ತೃತ ಪೀಠವೇ ತೀರ್ಮಾನಿಸಲು ನ್ಯಾಯಾಮೂರ್ತಿ ಕೃಷ್ಣ ದೀಕ್ಷಿತ್

ಆಧಾರ: ಪ್ರಜಾವಾಣಿ, ದಿನಾಂಕ:10.02.2022

12.ಧಾರ್ಮಿಕ ಸಮವಸ್ತ್ರಕ್ಕೆ ಬಿಡುವು

ಹಿಜಾಬ್ ಧಾರಣೆ ಕುರಿತಂತೆ ನ್ಯಾಯಾಲಯ ತೀರ್ಮಾನ ಕೈಗೊಳ್ಳಲಿದ್ದು, ಅದಕ್ಕೂ ಮೊದಲು ಶಾಲಾ–ಕಾಲೇಜುಗಳನ್ನು ಆರಂಭಿಸಿ ಯಾವುದೇ ಧಾರ್ಮಿಕ ಗುರುತುಗಳ ಪ್ರದರ್ಶನವಿಲ್ಲದೇ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಬೇಕು ಎಲ್ಲಕ್ಕಿಂತ ಮುಖ್ಯವಾಗಿ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಗೊಳ್ಳಬೇಕು ಎಂದು ಹೈಕೋರ್ಟ್ ಮೌಖಿಕವಾಗಿ ಸೂಚನೆ ನೀಡಿದೆ.

ಉಡುಪಿಯ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಹಿಜಾಬ್ (ಶಿರವಸ್ತ್ರ) ಧಾರಣೆ ನಿರ್ಬಂಧಿಸಿರುವುದನ್ನು ಪ್ರಶ್ನಿಸಿ ಕಾಲೇಜಿನ ವಿದ್ಯಾರ್ಥಿನಿಯರ ಪೋಷಕರು ಸಲ್ಲಿಸಿರುವ ಆರು ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಾಮೂರ್ತಿ ರಿತುರಾಜ್ ಅವಸ್ಥಿ, ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಹಾಗೂ ನ್ಯಾಯಮೂರ್ತಿ ಎಂ.ಜೆ. ಖಾಜಿ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಅರ್ಜಿದಾರರ ಪರ ವಕೀಲರ ಸುದೀರ್ಘ ವಾದ ಮಂಡನೆ ನಂತರ ಫೆಬ್ರವರಿ 14ರಂದು ಅರ್ಜಿ ವಿಚಾರಣೆಯನ್ನು ಪ್ರತಿದಿನ ಆಧಾರದ ಮೇಲೆ ವಿಚಾರಣೆ ನಡೆಸಲಿದೆ. ಆದರೆ, ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆ ಆಗದಂತೆ ಶಾಲಾ – ಕಾಲೇಜು ಆರಂಭಿಸುವಂತೆ ನಿರ್ದೇಶನ ನೀಡಿತು.

ವಿದ್ಯಾರ್ಥಿನಿ ರೇಷ್ಮಾ ಫಾರೂಕ್ ಅವರ ತಾಯಿ ರಹ್ಮತ್ ಫಾರೂಕ್ ಹಾಗೂ ಆಯೇಷಾ ಹಾಜಿರಾ ಅಲ್ಮಾಸ್ ಅವರ ತಾಯಿ ಸಾದಿಯಾ ಬಾನು ಸೇರಿ ಆರು ಮಂದಿ ವಿದ್ಯಾರ್ಥಿನಿಯರ ಪೋಷಕರು ಸಲ್ಲಿಸಿರುವ ಪ್ರತ್ಯೇಕ ತಕರಾರು ಅರ್ಜಿಗಳು ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಂದಿದ್ದವು. ಏಕಸದಸ್ಯ ಪೀಠವು ವಿಭಾಗೀಯ ಪೀಠಕ್ಕೆ ವರ್ಗಾಯಿಸಿದ ಬೆನ್ನಲ್ಲೇ ಮುಖ್ಯ ನ್ಯಾಯಮೂರ್ತಿಗಳು ತ್ರಿಸದಸ್ಯ ಪೀಠ ರಚಿಸಿ ಇಂದು ವಿಚಾರಣೆಗೆ ನಿಗದಿಪಡಿಸಿದ್ದರು.

ಅರ್ಜಿದಾರರ ಪರ ಹಿರಿಯ ವಕೀಲ ಸಂಜಯ್ ಹೆಗಡೆ ವಾದ ಮಂಡಿಸಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದಕ್ಕೆ ತಾರತಮ್ಯ ಮಾಡಲಾಗುತ್ತಿದೆ. ಸಮವಸ್ತ್ರದ ಜೊತೆ ಹಿಜಾಬ್ ಧರಿಸುವುದು ಮೊದಲಿನಿಂದಲೂ ಜಾರಿಯಲ್ಲಿದೆ. ಆದರೆ, ಕಾಲೇಜು ಆಡಳಿತ ಮಂಡಳಿಯ ಅಸಮರ್ಪಕ ನಿರ್ವಹಣೆಯಿಂದ ಈ ವಿಚಾರ ವಿವಾದವಾಗಿ ಹಬ್ಬಿದೆ. ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರನ್ನು ಕಾಲೇಜಿನಿಂದ ಹೊರಹಾಕಲಾಗಿದೆ. ಇದರ ಬೆನ್ನಲ್ಲೇ ರಾಜಕೀಯ ಅಜೆಂಡಾ ಹುಟ್ಟಿಕೊಂಡಿದೆ. ಹಿಜಾಬ್ ಧರಿಸುವುದರ ವಿರುದ್ಧ ಕೇಸರಿ ಶಾಲು ಹುಟ್ಟು ಹಾಕಲಾಗಿದೆ. ಇದರಿಂದ ಸಮಾಜದಲ್ಲಿ ಗಂಭೀರ ಸಮಸ್ಯೆ ಉಲ್ಬಣಿಸಿದೆ. ವಿದ್ಯಾರ್ಥಿಗಳು ಈಗಲೂ ತರಗತಿಯಿಂದ ಹೊರಗೆ ಇದ್ದಾರೆ. ಇದೊಂದು ಗಂಭೀರ ಪ್ರಕರಣ. ಹಿಂದೆ ಕರ್ನಾಟಕ ಶಿಕ್ಷಣ ಕಾಯ್ದೆಯಡಿ ಸಮವಸ್ತ್ರ ಕುರಿತಂತೆ ನಿರ್ದಿಷ್ಟ ನಿಯಮ ಇರಲಿಲ್ಲ. ನಂತರ 1995ರಲ್ಲಿ ಶಾಲೆಗಳಿಗೆ ಸಮವಸ್ತ್ರ ಪರಿಚಯಿಸಲಾಯಿತು. 2006ರಲ್ಲಿ ಪದವಿಪೂರ್ವ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯಗೊಳಿಸಿ ನಿಯಮಾವಳಿ ರೂಪಿಸಲಾಗಿದೆ ಎಂದು ವಿವರಿಸಿದರು.

ಸದ್ಯ ವಿವಾದಕ್ಕೆ ಒಳಗಾದ ಕಾಲೇಜಿನಲ್ಲಿ ಚೂಡಿದಾರ್ ಪ್ಯಾಂಟ್ ಮತ್ತು ವೇಲ್ ಒಂದೆ ಬಣ್ಣದಿಂದ ಕೂಡಿರಬೇಕೆಂಬ ನಿಯಮವಿದೆ. ಅದೇ ವೇಲ್‌ನ್ನು ತಲೆಯ ಮೇಲೆ ಹಿಜಾಬ್‌ನಂತೆ ಬಳಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಲಾಗಿದೆ. ಹಿಜಾಬ್ ಧರಿಸುವುದು ಮೂಲಭೂತ ಹಕ್ಕು ಅದನ್ನು ಕಾಲೇಜು ಆಡಳಿತ ಮಂಡಳಿ ನಿರ್ಧರಿಸಲು ಯಾವುದೇ ಹಕ್ಕಿಲ್ಲ. ಸಂವಿಧಾನದ ಎಲ್ಲ ಆಶಯಗಳು ವ್ಯಕ್ತಿಯ ಘನತೆ ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದೆ. ಹಿಜಾಬ್ ಕೂಡ ಮಹಿಳೆಯ ಹಕ್ಕು ಮತ್ತು ಅಕೆಯ ಧಾರ್ಮಿಕ ಸ್ವಾತಂತ್ರ್ಯದ ಭಾಗವಾಗಿದೆ. ಇದನ್ನು ನಿರ್ಬಂಧಿಸುವುದು ಸಂವಿಧಾನ ವಿರೋಧ ಎಂದು ಪ್ರತಿಪಾದಿಸಿ ಬಿಜಯ್ ಇಮ್ಮಾನುಯೆಲ್ ಪ್ರಕರಣ ಸೇರಿದಂತೆ ಹಲವಾರು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಆದೇಶಗಳನ್ನು ಉಲ್ಲೇಖಿಸಿದರು.

ಅರ್ಜಿದಾರರ ಪರ ಮತ್ತೊಬ್ಬ ಹಿರಿಯ ವಕೀಲ ದೇವದತ್ತ ಕಾಮತ್ ವಾದ ಮಂಡಿಸಿ, ರಾಜ್ಯ ಸರ್ಕಾರ ಫೆಬ್ರವರಿ 4 ರಂದು ಹೊರಡಿಸಿದ ಅಧಿಸೂಚನೆಯು ಕಾನೂನು ಬಾಹಿರವಾಗಿದೆ. ಅರ್ಜಿದಾರರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ಬಳಿಕ ಸರ್ಕಾರ ಆದೇಶ ಜಾರಿ ಮಾಡಿದೆ. ಕೇರಳ, ಮದ್ರಾಸ್ ಹಾಗೂ ಬಾಂಬೆ ಹೈಕೋರ್ಟ್ ಆದೇಶಗಳನ್ನು ಸರ್ಕಾರ ತಮ್ಮ ಆದೇಶದಲ್ಲಿ ಉಲ್ಲೇಖಿಸಿದೆಯಾದರೂ ಈ ಆದೇಶಗಳಿಗೂ ಸರ್ಕಾರ ಸಮರ್ಥನೆಗೆ ತಾಳೆ ಆಗುವುದಿಲ್ಲ. ಕನಿಷ್ಠ ಮಟ್ಟದ ತಿಳಿವಳಿಕೆಯಿಂದಲೂ ಈ ಆದೇಶ ಕೂಡಿಲ್ಲ. ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳು ಹಾಗೂ ವ್ಯಕ್ತಿಯ ಧಾರ್ಮಿಕ ಹಕ್ಕುಗಳಿಗೆ ಸಂಬಂಧಿಸಿದ ಪ್ರಕರಣವನ್ನು ಆದೇಶದಲ್ಲಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ಬಲವಾದ ಪ್ರತಿಪಾದನೆ ಮಾಡಿದರು. ಹಿಜಾಬ್ ಧಾರಣೆ ಬಗ್ಗೆ ಪವಿತ್ರ ಕುರಾನ್‌ನ ಅಧ್ಯಾಯ 24 ಮತ್ತು 31ರಲ್ಲಿ ಸ್ಪಷ್ಟವಾದ ಉಲ್ಲೇಖವಿದೆ. ತಂದೆ ತಾಯಿ ಸೇರಿದಂತೆ ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಉಳಿದವರಿಗೆ ತನ್ನ ದೇಹದ ಭಾಗಗಳನ್ನು ತೋರದೆ ಇರಲು ಹಿಜಾಬ್ ಧರಿಸುವುದು ಆಕೆಯ ಕರ್ತವ್ಯವಾಗಿದೆ. ಆಕೆಯು ತನ್ನ ಕೂದಲು ಮತ್ತು ಮುಖದ ಭಾಗವನ್ನು ಮರೆಮಾಚುತ್ತಾಳೆ. ಅದೇ ರೀತಿ ಸಿಖ್ ಧರ್ಮದಲ್ಲೂ ಕೃಪಾಣ ಧರಿಸುವ ಪದ್ಧತಿ ಇದೆ. ಪ್ರಕರಣದಲ್ಲಿ ಮಧ್ಯಂತರ ಆದೇಶ ನೀಡುವಾಗ ಮಹಿಳೆಯ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಮನವಿ ಮಾಡಿದರು.

ಈ ಹಂತದಲ್ಲಿ ಅರ್ಜಿ ವಿಚಾರಣೆ ಮುಂದೂಡಿಕೆಯ ಬಗ್ಗೆ ಮುಖ್ಯ ನ್ಯಾಯಮೂರ್ತಿಗಳು ಇಂಗಿತ ವ್ಯಕ್ತಪಡಿಸಿ ಅರ್ಜಿಯ ವಿಚಾರಣೆ ನಡೆಸುತ್ತೇವೆ. ಅಲ್ಲಿಯ ತನಕ ಶಾಲಾ–ಕಾಲೇಜುಗಳು ಎಂದಿನಂತೆ ಆರಂಭವಾಗಲಿ. ಆದರೆ, ಯಾರೂ ಕೂಡ ಯಾವುದೇ ಧಾರ್ಮಿಕ ಗುರುತು ಪ್ರದರ್ಶಿಸದೇ ತರಗತಿಗೆ ಹಾಜರಾಗಬೇಕು. ಈ ಬಗ್ಗೆ ಮಧ್ಯಂತರ ಆದೇಶ ನೀಡುತ್ತೇವೆ ಎಂದು ಮೌಖಿಕವಾಗಿ ತಿಳಿಸಿದರು. ಇದಕ್ಕೆ ತೀವ್ರ ಅಕ್ಷೇಪ ವ್ಯಕ್ತಪಡಿಸಿದ ಹಿರಿಯ ವಕೀಲ ಕಾಮತ್, ಹಿಜಾಬ್ ಧರಿಸದೇ ತರಗತಿಗೆ ಹಾಜರಾಗುವುದು ಸಂವಿಧಾನದ ಪರಿಚ್ಛೇದ 25ರ ಸ್ಪಷ್ಟ ಉಲ್ಲಂಘನೆ ಆಗುತ್ತಿದೆ. ನ್ಯಾಯಾಲಯದ ಮೌಖಿಕ ಸೂಚನೆಗೆ ನನ್ನ ಆಕ್ಷೇಪ ದಾಖಲಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ನಂತರ ವಿಚಾರಣೆ ಮುಂದೂಡಲಾಯಿತು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:10.02.2022

13. ವಸ್ತ್ರ ಸಂಹಿತೆಗೆ ವಿದ್ಯಾರ್ಥಿಗಳು ಬದ್ಧರಾಗಲಿ

ವಿದ್ಯಾರ್ಥಿಗಳು ಸಮವಸ್ತ್ರ ಸಂಹಿತೆಗೆ ಬದ್ಧರಾಗಿರಬೇಕು. ಕಾನೂನು ಸುವ್ಯವಸ್ಥೆಯ ಹೊರತಾಗಿಯೂ ಕಾಲೇಜುಗಳಿಗೆ ಬರಬೇಕು ಎಂಬುದು ಸರ್ಕಾರದ ಕಾಳಜಿಯಾಗಿದೆ ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಹೈಕೋರ್ಟ್‌ನಲ್ಲಿ ವಾದ ಮಂಡಿಸಿದರು. ಕಾಲೇಜುಗಳಲ್ಲಿ ಹಿಜಾಬ್ ನಿರ್ಬಂಧಿಸಿರುವ ಕ್ರಮ ಪ್ರಶ್ನಿಸಿ ಕೆಲ ವಿದ್ಯಾರ್ಥಿನಿಯರು ಸಲ್ಲಿಸಿರುವ ಅರ್ಜಿಗಳು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ಸಂಹಿತೆ ಜಾರಿಗೊಳಿಸಿ ಸರ್ಕಾರ ಹೊರಡಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಸರ್ಕಾರದ ಪರ ವಾದ ಮಂಡಿಸಿದ ನಾವದಗಿ ಕಾಲೇಜುಗಳು ಆರಂಭವಾಗಬೇಕು, ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಬೇಕು ಎಂದೇ ಸರ್ಕಾರ ಬಯಸುತ್ತದೆ. ಆದರೆ, ಹಿಜಾಬ್ ವಿಚಾರ ಮುನ್ನೆಲೆಗೆ ಬಂದ ಬಳಿಕ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಇತ್ಯಾದಿ ಧರಿಸಿ ಕಾಲೇಜಿಗೆ ಬಂದಿದ್ದಾರೆ. ಇದರಿಂದ ಗಲಭೆ ವಾತಾವರಣ ಸೃಷ್ಟಿಯಾಗಿದೆ. ಆದ್ದರಿಂದಲೇ ಸರ್ಕಾರ 3 ದಿನಗಳ ಮಟ್ಟಿಗೆ ಕಾಲೇಜುಗಳಿಗೆ ರಜೆ ಘೋಷಿಸಿತ್ತು.

ಪ್ರತ್ಯೇಕತೆ ಬೇಡ: ಉಡುಪಿಯ ವಿದ್ಯಾರ್ಥಿಯೊಬ್ಬರ ಪರ ಹಿರಿಯ ವಕೀಲ ಸಂಜಯ್ ಹೆಗ್ಡೆ ವಾದ ಮಂಡಿಸಿ, ಕರ್ನಾಟಕ ಶಿಕ್ಷಣ ಕಾಯ್ದೆ ಅಡಿ ಸಮವಸ್ತ್ರದ ಬಗ್ಗೆ ಯಾವುದೇ ನಿರ್ದಿಷ್ಟ ನಿಬಂಧನೆಗಳಿಲ್ಲ. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ನಿಯಂತ್ರಣ) ನಿಯಮಗಳು 1995ರ ನಿಯಮಗಳು ಶಾಲೆಗಳಲ್ಲಿನ ಸಮವಸ್ತ್ರಕ್ಕೆ ಸಂಬಂಧಿಸಿದೆ. ಆದರೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ. ಸಮವಸ್ತ್ರ ಧರಿಸದೆ ಏಕರೂಪ ಸಂಹಿತೆ ಉಲ್ಲಂಘನೆಗೆ ದಂಡ ವಿಧಿಸಲು ಅವಕಾಶವಿಲ್ಲ. ಹೀಗಿದ್ದರೂ ಸರ್ಕಾರ ನಿಯಮ ಬಾಹಿರವಾಗಿ ಆದೇಶ ಹೊರಡಿಸಿದೆ ಎಂದು ದೂರಿದರು. ಹಿಜಾಬ್ ಧರಿಸಿದ ಕಾರಣಕ್ಕೆ ಹೆಣ್ಣು ಮಕ್ಕಳನ್ನು ತರಗತಿಯಿಂದ ಹೊರಗೆ ಕೂರಿಸಲಾಗಿದೆ. ಉಡುಗೆ–ತೊಡುಗೆ, ಆಹಾರ, ನಂಬಿಕೆ ಏನೇ ಇರಲಿ ಅವರೆಲ್ಲರೂ ವಿದ್ಯಾರ್ಥಿಗಳೇ ಹಿಜಾಬ್ ಧರಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಖಾಸಗಿತನ ಮತ್ತು ಆತ್ಮ ಸಾಕ್ಷಿಯ ವ್ಯಾಪ್ತಿಗೆ ಬರುತ್ತದೆ. ಅದು ಧಾರ್ಮಿಕ ಅಚರಣೆಯ ಭಾಗವು ಆಗಿದ್ದು, ಶಿಕ್ಷಣ ಹಕ್ಕುಗಳ ಪ್ರಕರಣವೂ ಆಗಿದೆ. ಈ ವಿಚಾರವನ್ನು ಕಾಲೇಜು ಅಭಿವೃದ್ಧಿ ಸಮಿತಿಗೆ (ಸಿಡಿಸಿ) ಬಿಡುವುದು ಸರಿಯಲ್ಲ ಎಂದು ಸಂಜಯ್ ಹೆಗ್ಡೆ ನ್ಯಾಯಪೀಠಕ್ಕೆ ವಿವರಿಸಿದರು. ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿಯಾಗಿದ್ದಾಗ ಶಾಲೆಯಲ್ಲಿ ಪ್ರತ್ಯೇಕವಾಗಿ ಕೂರಿಸಲಾಗಿತ್ತು. ದೇಶ ಗಣರಾಜ್ಯವಾದ ಹಲವು ವರ್ಷಗಳ ಬಳಿಕ ಆ ರೀತಿಯ ಪ್ರತ್ಯೇಕತೆ ಬೇಡ. ನಮ್ಮ ಸಂಪ್ರದಾಯವು ಸಹನೆ ಸಹಿಷ್ಣುತೆಯನ್ನು ಭೋದಿಸುತ್ತದೆ. ನಮ್ಮ ಸಂವಿಧಾನದಲ್ಲಿ ಸಹಿಷ್ಣುತೆ ಅಡಕಗೊಳಿಸಲಾಗಿದೆ. ನಾವು ಅದನ್ನು ದುರ್ಬಲಗೊಳಿಸಬಾರದು. ಅಂತಿಮವಾಗಿ ಸಂವಿಧಾನ ಎಲ್ಲ ಪ್ರಜೆಗಳನ್ನು ರಕ್ಷಿಸುತ್ತದೆ ಎಂದರು.

ಮಾಧ್ಯಮಗಳಿಗೆ ಸಿಜೆ ಮನವಿ: ವಿಚಾರಣೆ ವೇಳೆ ಮಾಧ್ಯಮಗಳನ್ನುದ್ದೇಶಿಸಿ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಗಳು ಪ್ರಕರಣಕ್ಕೆ ಸಂಬಂಧಿಸಿಂತೆ ನ್ಯಾಯಾಲಯ ನೀಡುವ ಆದೇಶವನ್ನು ಪರಿಶೀಲಿಸದೇ ಕಲಾಪದ ವೇಳೆ ನ್ಯಾಯಪೀಠ ವ್ಯಕ್ತಪಡಿಸುವ ಯಾವುದೇ ಅನಿಸಿಕೆ – ಅಭಿಪ್ರಾಯಗಳನ್ನು ವರದಿ ಮಾಡದಂತೆ ಮನವಿ ಮಾಡಿದರು.

60 ಸಾವಿರ ನೇರ ವೀಕ್ಷಣೆ: ಹಿಜಾಬ್ ಕುರಿತು ಅರ್ಜಿಗಳ ವಿಚಾರಣೆ ವೇಳೆ ಸರ್ಕಾರಿ ಪರ ವಕೀಲರು 2 ತಾಸು ವಾದ–ಪ್ರತಿವಾದ ಮಂಡಿಸಿದರು. ಕಲಾಪವನ್ನು ಹೈಕೋರ್ಟ್‌ನ ಯೂಟ್ಯೂಬ್ ಚಾನಲ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು. ವಿಚಾರಣೆ ಪೂರ್ಣಗೊಳ್ಳುವ ಹೊತ್ತಿಗೆ 60 ಸಾವಿರಕ್ಕೂ ಅಧಿಕ ಮಂದಿ ವೀಕ್ಷಿಸುತ್ತಿದ್ದರು. ಜೊತೆಗೆ ಮುಖ್ಯ ನ್ಯಾಯಾಮೂರ್ತಿಗಳ ಕೋರ್ಟ್ ಹಾಲ್‌ನಲ್ಲೂ ವಕೀಲರು ಕಿಕ್ಕಿರಿದು ತುಂಬಿದ್ದರು.

ವಿದ್ಯಾರ್ಥಿಗಳಿಗೆ ನೆರವು ಘೋಷಿಸಿದ ಶ್ರೀರಾಮಸೇನೆ: ಕೇಸರಿ ಶಾಲು ವಿವಾದ ವಿಚಾರವಾಗಿ ನಡೆಯುವ ಹೋರಾಟದಲ್ಲಿ ವಿದ್ಯಾರ್ಥಿಗಳು ಅಥವಾ ಹಿಂದು ಸಂಘಟನೆಗಳ ಕಾರ್ಯಕರ್ತರು ಸಂಕಷ್ಟಕ್ಕೆ ಸಿಲುಕಿದರೆ ಶ್ರೀರಾಮ ಸೇನೆ ನೆರವು ನೀಡಲಿದೆ ಎಂದು ಸೇನೆ ರಾಜ್ಯ ಕಾರ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ ವಿಡಿಯೋ ಸಂದೇಶದ ಮೂಲಕ ಘೋಷಿಸಿದ್ದಾರೆ. ವಿವಾದದಲ್ಲಿ ಗಾಯಗೊಂಡು ಆಸ್ಪತ್ರೆಗೆ ಸೇರಿದವರಿಗೆ ಪೊಲೀಸ್ ಪ್ರಕರಣ ದಾಖಲಾದರೆ ಕಾನೂನಿನ ನೆರವು ನೀಡಲು ಸೇನೆ ಸಿದ್ಧವಿದೆ. ಹೋರಾಟದಲ್ಲಿ ಏನೇ ಸಮಸ್ಯೆಯಾದರೂ ನಮ್ಮನ್ನು ಸಂಪರ್ಕಿಸಬೇಕು ಎಂದು ತಿಳಿಸಿದ್ದಾರೆ.

ರಾಷ್ಟ್ರ ಅಥವಾ ಧರ್ಮ ಯಾವುದು ಮುಖ್ಯ: ದೇಶದಲ್ಲಿ ಧಾರ್ಮಿಕ ಅಸಂಗತವನ್ನು ಹೆಚ್ಚಿಸುವ ಪ್ರಯತ್ನಗಳ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಮದ್ರಾಸ್ ಹೈಕೋರ್ಟ್, ಕೆಲವರು ಹಿಜಾಬ್ ಹಿಂದೆ ಹೋಗಿದ್ದಾರೆ. ಇನ್ನು ಕೆಲವರು ಟೋಪಿ ಹಿಂದೆ ಹೋಗ್ತಿದ್ದಾರೆ ಮತ್ತೆ ಕೆಲವರು ಇತರ ಧಾರ್ಮಿಕ ವಿಚಾರಗಳ ಬೆನ್ನು ಬಿದ್ದಿದ್ದಾರೆ. ಇದು ಒಂದು ದೇಶವಾ ಅಥವಾ ಧಾರ್ಮಿಕವಾಗಿ ವಿಭಜನೆ ಏನಾದರೂ ಆಗಿದೆಯಾ ನಿಜಕ್ಕೂ ಆಶ್ಚರ್ಯವಾಗುತ್ತಿದೆ. ದೇಶ ಅಥವಾ ಧರ್ಮ ಯಾವುದು ಮುಖ್ಯ ಎಂದು ಪ್ರಶ್ನಿಸಿದೆ. ದೇವಸ್ಥಾನಗಳಿಗೆ ಹಿಂದುಯೇತರರು ಪ್ರವೇಶಿಸದಂತೆ ವಸ್ತ್ರ ಸಂಹಿತೆ ಅನುಷ್ಠಾನಕ್ಕೆ ಕಠಿಣ ಆದೇಶ ನೀಡಬೇಕು ಎಂದು ಆಗ್ರಹಿಸಿ ತಿರುಚಿನಾಪಳ್ಳಿ ಜಿಲ್ಲೆಯ ಶ್ರೀರಂಗಂನ ರಂಗರಾಜನ್ ನರಸಿಂಹನ್ ಪಿಐಎಲ್ ಸಲ್ಲಿಸಿದ್ದರು. ಇದರ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಆಧಾರ: ವಿಜಯವಾಣಿ, ದಿನಾಂಕ:11.02.2022

14.ಸಮವಸ್ತ್ರ ಇರುವಲ್ಲಿ ಮಾತ್ರ ಧರ್ಮವಸ್ತ್ರ ನಿಷಿದ್ಧ

ಹಿಜಾಬ್/ಕೇಸರಿ ಶಾಲು ಸಂಬಂಧಿ ಮುಂದಿನ ಆದೇಶ ಹೊರ ಬೀಳುವವರೆಗೂ ಶಾಲೆ–ಕಾಲೇಜುಗಳಲ್ಲಿ ಧಾರ್ಮಿಕ ವಸ್ತ್ರ ಧರಿಸುವುದಕ್ಕೆ ನಿರ್ಬಂಧಿಸಿದ್ದು, ಈ ಆದೇಶವು ಕಾಲೇಜು ಅಭಿವೃದ್ಧಿ ಸಮಿತಿಯು ಸಮವಸ್ತ್ರ ನಿಗದಿಪಡಿಸಿ ವಸ್ತ್ರ ಸಂಹಿತೆ ವಿಧಿಸಿರುವ ಶಾಲೆಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು, ಹೈಕೋರ್ಟ್‌ನ ವಿಸ್ತೃತ ಪೀಠ ಮಧ್ಯಂತರ ಆದೇಶ ನೀಡಿದೆ.

ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತು ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥೆ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಮತ್ತು ಜೆ.ಎಂ. ಖಾಜಿ ಅವರಿದ್ದ ತ್ರಿದಸ್ಯ ನ್ಯಾಯಪೀಠ ಹೊರಡಿಸಿರುವ ಲಿಖಿತ ಆದೇಶ ಹೊರಬಿದ್ದಿದೆ.

ಈ ಆದೇಶದಲ್ಲಿ ಹಿಜಾಬ್ ವಿವಾದ ಕುರಿತಂತೆ ಸಲ್ಲಿಕೆಯಾಗಿರುವ ಎಲ್ಲಾ ಅರ್ಜಿಗಳಿಗೆ ಕುರಿತ ಮುಂದಿನ ಆದೇಶದವರೆಗೆ, ವಿದ್ಯಾರ್ಥಿಗಳು, ಅವರು ಯಾವುದೇ ಧರ್ಮ ಹಾಗೂ ನಂಬಿಕೆ

ಅನುಸರಿಸುತ್ತಿದ್ದವರಾದರೂ ಯಾವುದೇ ಧಾರ್ಮಿಕ ವಸ್ತ್ರ, ಅದು ಕೇಸರಿ ಶಾಲು, ಶಿರವಸ್ತ್ರ, ಹಿಜಾಬ್ ಮತ್ತು ಧಾರ್ಮಿಕ ಬಾವುಟಗಳನ್ನು ತರಗತಿಗಳಲ್ಲಿ ಧರಿಸುವುದನ್ನು ನಾವು ನಿರ್ಬಂಧಿಸಿದ್ದೇವೆ. ಕಾಲೇಜು ಅಭಿವೃದ್ಧಿ ಸಮಿತಿಯು ವಿದ್ಯಾರ್ಥಿಗಳಿಗೆ ವಸ್ತ್ರಸಂಹಿತೆ ಮತ್ತು ಸಮವಸ್ತ್ರ ನಿಗದಿಪಡಿಸಿರುವ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಈ ಆದೇಶವನ್ನು ಸೀಮಿತಗೊಳಿಸಲಾಗಿದೆ ಎಂದು ತಿಳಿಸಲಾಗಿದೆ.

ನೋವಿನ ಸಂಗತಿ: ಪ್ರಕರಣ ಸಂಬಂಧ ಸಂಸ್ಥೆಗಳು ಮುಚ್ಚಿರುವುದಕ್ಕೆ ಮತ್ತು ಪ್ರತಿಭಟನೆಗಳು ನಡೆಯುತ್ತಿರುವುದಕ್ಕೆ ಆದೇಶದಲ್ಲಿ ಹೈಕೋರ್ಟ್ ಬೇಸರ ವ್ಯಕ್ತಪಡಿಸಿದೆ. ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ. ಈ ವಿಚಾರದಲ್ಲಿ ಸಾಂವಿಧಾನಿಕ ಅಂಶಗಳು ಅಡಕವಾಗಿವೆ. ವೈಯಕ್ತಿಕ ಕಾನೂನು ಚರ್ಚೆಯಾಗುತ್ತಿದೆ. ಭಾರತ ಬಹುಸಂಸ್ಕೃತಿ, ಧರ್ಮ ಮತ್ತು ಭಾಷೆ ಹೊಂದಿರುವ ದೇಶ. ನಮ್ಮದು ಜಾತ್ಯಾತೀತ ರಾಜ್ಯವಾಗಿದ್ದು, ಯಾವುದೇ ಒಂದು ನಿರ್ದಿಷ್ಟ ಧರ್ಮದಿಂದ ಗುರುತಿಸಿಕೊಂಡಿಲ್ಲ. ಪ್ರತಿಯೊಬ್ಬ ನಾಗರಿಕನೂ ತನ್ನಿಚ್ಛೆ ಮತ್ತು ವೈಯಕ್ತಿಕ ನಂಬಿಕೆಗಳಿಗೆ ಅನುಗುಣವಾಗಿ ತನ್ನ ಧಾರ್ಮಿಕ ಆಚರಣೆಯ ಹಕ್ಕು ಹೊಂದಿದ್ದಾನೆ. ಆದಾಗ್ಯೂ ಈ ಸಂಗತಿಗಳು ಸಂವಿಧಾನದ ಚೌಕಟ್ಟಿನಲ್ಲಿರುವ ನಿರ್ಬಂಧಗಳಿಗೆ ಒಳಪಟ್ಟಿರಬೇಕಾಗುತ್ತದೆ ಎಂಬುದನ್ನು ಮರೆಯಬಾರದು ಎಂದು ನ್ಯಾಯಪೀಠ ಆದೇಶದಲ್ಲಿ ಪ್ರತಿಪಾದಿಸಿದೆ.

ತರಗತಿಯೊಳಗೆ ಹಿಜಾಬ್ ಧರಿಸುವುದು ಇಸ್ಲಾಂ ಧರ್ಮದ ಅಗತ್ಯ ಆಚರಣೆಯ ಭಾಗ ಎಂಬ ಪ್ರತಿಪಾದನೆಯು ಸಂವಿಧಾನದ ಆಶಯಕ್ಕೆ ಒಳಪಡುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಆಳವಾಗಿ ಪರೀಕ್ಷಿಸಬೇಕಿದೆ. ಅನಿರ್ದಿಷ್ಟಾವಧಿಗೆ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವುದು ಮತ್ತು ಪ್ರತಿಭಟನೆಗಳನ್ನು ನಡೆಸುವುದು ಸಂತಸದ ಸಂಗತಿಯಲ್ಲ ಎಂದ ನ್ಯಾಯಪೀಠ, ಅರ್ಜಿಗಳ ಮುಂದಿನ ವಿಚಾರಣೆಯನ್ನು ಇದೇ 14ಕ್ಕೆ ನಿಗದಿಪಡಿಸಿದೆ.

ಆಧಾರ: ಕನ್ನಡಪ್ರಭ, ದಿನಾಂಕ: 12.02.2022

15. Top court declines to hear plea on hijab row

The Supreme Court declined to intervene in the ongoing hijab row in Karnataka, saying the matter should not be brought to the national level. It also assured that if there is a violation of the constitutional rights of anyone, the top court would intervene at the appropriate time.

A bench presided over by Chief Justice N V Ramana orally told the counsel of the petitioner, challenging the Karnataka High Court's interim order in the hijab matter, to think whether is proper to bring the issue the national level.

Senior advocate Devadutt Kamat mentioned the plea challenging the Karnataka High Court's order restraining students from wearing religious attire to their schools and colleges.

Kamat submitted that High Court restrained the students from disclosing religious identities, which leads suspension of Article 25 and this will lead into larger consequences.

"The High Court is already hearing the matter," the bench, also comprising Justices A S Bopanna and Hima Kohli, however, pointed out.

Solicitor General Tushar Mehta, for his part, said that the High Court order has not come out so far and it should be allowed to decide the issue. He said that the matter should not be made religious and political.

On this, the Chief Justice told petitioners' counsel, "Don't spread these things to a larger level… we don't want to express anything on it."

"We are watching it and we know what is happening. Think if it is proper to bring it to the national level," he asked.

The Chief Justice also assured it is the court's responsibility to protect the constitutional rights of everyone.

In its plea, Dr J Halli Federation of Masjid Madaaris and Wakf Institutions contended that the High Court's interim order created a distinction between Muslim and non-Muslim female students and directly hit at secularism, a part of the basic structure of the Constitution.

"The right to wear hijab falls under the Right to Expression under Article 19(1)(a), right to privacy and freedom of conscience under Article 25. The same cannot be infringed upon without a valid law," the plea said.

It said the students concerned have to appear for practical examinations on February 15 and any interference on their access to institutions would impede on their right to education.

It asked the top court to stay the High Court's interim order till the disposal of the petition filed before it against the state government's decision.

A three-judge bench of Chief Justice RituRaj Awasthi, Justice Krishna S Dixit and Justice J M Khazi had passed the order and put a batch of petitions questioning ban on hijab for consideration.

A few students' insistence to wear hijab was resisted by the college administration, triggering reactions from others to wear saffron shawls.

A bench presided over by Chief Justice of India N V Ramana said, "why should we jump in? Let High Court first decide the matter" when a plea was made to transfer pending matters from the High Court to the top court.

Courtesy: Deccan Herald, dated: 12.02.2022

16. ಹಿಜಾಬ್ ಧರಿಸುವುದು ಸಾಂವಿಧಾನಿಕ ಹಕ್ಕೇ

'ಕುರಾನಿನಲ್ಲಿ ಹೇಳಿರುವುದೆಲ್ಲವೂ ಅಗತ್ಯ ಧಾರ್ಮಿಕ ಆಚರಣೆಯೇ? ಎಲ್ಲಾ ಕುರಾನಿನ ಆದೇಶಗಳು ಉಲ್ಲಂಘಿಸಲಾಗದ ಆದೇಶಗಳೇ? ಅಗತ್ಯ ಧಾರ್ಮಿಕ ಆಚರಣೆಗಳು ಪರಿಪೂರ್ಣ ಹಕ್ಕೇ ಅಥವಾ

ಕ್ರಮಗಳನ್ನು ತೆಗೆದುಕೊಂಡಿವೆ. ಆದರೆ, ಅದರ ಅನುಷ್ಠಾನಕ್ಕೆ ಅಗತ್ಯ ಕ್ರಮಗಳಿಗೆ ಕೇಂದ್ರ ಸರ್ಕಾರಕ್ಕೆ ಒತ್ತಡ ಹಾಕುವುದು ಮತ್ತು ಕಾನೂನಾತ್ಮಕ ಹೋರಾಟಗಳಿಗೆ ವೇಗ ನೀಡಿಲ್ಲ ಎಂಬುದು ಗಮನಾರ್ಹ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಯೋಜನೆ ಆರಂಭಿಸಲು ತೀರ್ಮಾನಿಸಲಾಯಿತು. ಡಿ.ಕೆ.ಶಿವಕುಮಾರ್ ಜಲಸಂಪನ್ಮೂಲ ಸಚಿವರಾಗಿದ್ದಾಗ ಮೈತ್ರಿ ಸರ್ಕಾರದ ಅವಧಿಯಲ್ಲಿ ರೂ.5925 ಕೋಟಿ ವೆಚ್ಚದಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿತ್ತು. ಆಗಿನ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರೂ.9500 ಕೋಟಿಗಳಿಗೆ ಯೋಜನಾ ವೆಚ್ಚವನ್ನು ಹೆಚ್ಚಳ ಮಾಡಿತ್ತು. ಹೀಗೆ ಎಲ್ಲ ಪಕ್ಷಗಳ ಸರ್ಕಾರಗಳಿದ್ದಾಗಲೂ ಯೋಜನೆಗೆ ಅನುಮತಿ ಸಿಕ್ಕಿದೆ, ಆದರೆ ವೇಗ ಸಿಕ್ಕಿಲ್ಲ. 2019ರ ಹಕ್ಕು, ಕರ್ನಾಟಕ ಸರ್ಕಾರ ಮೇಕೆದಾಟುವಿನಲ್ಲಿ ಜಲಾಶಯ ನಿರ್ಮಿಸುವ ತನ್ನ ಯೋಜನೆಯನ್ನು ತಿಳಿಸುವ ವರದಿಯನ್ನು ಕೇಂದ್ರ ಸರ್ಕಾರಕ್ಕೂ ಸಲ್ಲಿಸಿತ್ತು.

ಏನಿದು ಮೇಕೆದಾಟು ಯೋಜನೆ: ಮೇಕೆದಾಟು ಪ್ರದೇಶದಲ್ಲಿ ಜಲಾಶಯ ನಿರ್ಮಾಣ ಮಾಡಿ, ಮಳೆಗಾಲದ ಸಂದರ್ಭದಲ್ಲಿ ಸಮುದ್ರ ಪಾಲಾಗುವ ಅಂದಾಜು 65–66 ಟಿಎಮ್‌ಸಿ ಹೆಚ್ಚುವರಿ ನೀರನ್ನು ಸಂಗ್ರಹಿಸಬೇಕು ಎಂಬುದು ರಾಜ್ಯದ ಉದ್ದೇಶ. ಅಷ್ಟೇ ಅಲ್ಲದೆ ರಾಜ್ಯಕ್ಕೆ ಅಗತ್ಯ ವಿದ್ಯುತ್ ಉತ್ಪಾದನೆಗೂ ಯೋಜನೆ ಅನುಕೂಲ. ಈ ಮೂಲಕ ಕುಡಿಯುವ ನೀರಿನ ಪೂರೈಕೆ ಹಾಗೂ ವಿದ್ಯುತ್ ಉತ್ಪಾದನೆ ಯೋಜನೆ ಆರಂಭಿಸಲು ಸರ್ಕಾರ ತೀರ್ಮಾನಿಸಿತ್ತು. ಒಟ್ಟು 5252.40 ಹೆಕ್ಟೇರ್‌ನಲ್ಲಿ ನಿರ್ಮಿಸಲಾಗುವ ಯೋಜನೆ 3181.9 ಹೆಕ್ಟೇರ್ ಕಾವೇರಿ ವನ್ಯ ಜೀವಿ ಅಭಯಾರಣ್ಯದ ಪ್ರದೇಶ ಬೇಕಾಗಿದೆ. ಅಷ್ಟೇ ಅಲ್ಲದೆ 1869.5 ಹೆಕ್ಟೇರ್ ಅರಣ್ಯ ಭೂಮಿ ಸ್ವಾದೀನ ಪಡಿಸಬೇಕಾಗಿದೆ. 201 ಹೆಕ್ಟೇರ್ ಜಮೀನು ಕಂದಾಯ ಹಾಗೂ ಖಾಸಗಿ ಭೂಮಿಯಾಗಿದೆ. ಒಟ್ಟು 5 ಹಳ್ಳಿಗಳಾದ ಮಡವಾಳ, ಕೊಂಗೆದೊಡ್ಡಿ, ಸಂಗಮ, ಮುಥತ್ತಿ, ಬೊಮ್ಮಸಂದ್ರ ಯೋಜನೆಯಿಂದ ಮುಳುಗಡೆಯಾಗಲಿವೆ.

ವಿವಾದದ ಹಾದಿ:

- 1996ರಲ್ಲಿಯೇ ಯೋಜನೆ ನಿರ್ಮಾಣ ಸಂಬಂಧ ಚಿಂತನೆ
- 2019 ಜನವರಿ 21 ರಂದು ಕೇಂದ್ರ ಸರ್ಕಾರಕ್ಕೆ ಡಿಪಿಆರ್ ಸಲ್ಲಿಕೆ
- ತಮಿಳುನಾಡಿನಿಂದ ಸುಪ್ರೀಂ ಕೋರ್ಟ್‌ನಲ್ಲಿ ತಕರಾರು
- ಯೋಜನೆ ಕೈ ಬಿಡುವಂತೆ ಎನ್‌ಜಿಟಿ ದಕ್ಷಿಣ ವಿಭಾಗೀಯ ಪೀಠದಿಂದ ಹಸಿರು ನಿಶಾನೆ
- ಎನ್‌ಜಿಟಿ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ತಮಿಳುನಾಡು ಅರ್ಜಿ

ಯೋಜನೆಯ ಲಾಭಗಳೇನು:

- ಬೆಂಗಳೂರಿಗೆ ಹೆಚ್ಚುವರಿ ಕುಡಿಯುವ ನೀರಿನ ಲಭ್ಯತೆ
- 400 ಮೆ. ವ್ಯಾ ಹೆಚ್ಚುವರಿ ವಿದ್ಯುತ್ ಉತ್ಪಾದನೆ
- ಬೆಂಗಳೂರು ಗ್ರಾಮಂತರ ಜಿಲ್ಲೆಗಳಿಗೆ ಕುಡಿಯುವ ನೀರು
- ಗ್ರಾಮಾಂತರ ಭಾಗದ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಏರಿಕೆ
- ತಮಿಳುನಾಡಿಗೆ ನಿಗದಿಯಾದ ನೀರು ಸಂಗ್ರಹಿಸಿಡಲು ಅನುಕೂಲ
- ತಮಿಳುನಾಡಿನ ಅಗತ್ಯಕ್ಕೆ ತಕ್ಕಂತೆ ನೀರು ಹರಿಸಬಹುದು

ಪರಿಸರ ವಾದಿಗಳ ವಾದವೇನು:

- 3181.9 ಹೆಕ್ಟೇರ್ ಕಾವೇರಿ ವನ್ಯ ಜೀವಿ ಅಭಯಾರಣ್ಯದ ನಾಶ
- 1869.5 ಹೆಕ್ಟೇರ್ ಅರಣ್ಯ ಭೂಮಿಗೆ ಹಾನಿ
- ಹುಲಿ, ಆನೆ ಸೇರಿ ಇನ್ನಿತರ ವನ್ಯ ಸಂಕುಲಕ್ಕೆ ಸಂಕಷ್ಟ
- ತಮಿಳುನಾಡು–ಕರ್ನಾಟಕ ಆನೆ ಕಾರಿಡಾರ್‌ಗೆ ಧಕ್ಕೆ

ತಮಿಳುನಾಡಿನ ವಾದವೇನು:

- ಯೋಜನೆ ಕುಡಿಯುವ ನೀರಿಗಾಗಿ ಮಾತ್ರವೇ ಮಾಡುತ್ತಿಲ್ಲ
- ಬೆಂಗಳೂರಿಗೆ ಕುಡಿಯುವ ನೀರು ಒದಗಿಸಲು ಇಷ್ಟು ದೂರದಲ್ಲೇಕೆ ಯೋಜನೆ?
- ಕಾವೇರಿಯ ಅನಿಯಂತ್ರಿತ ನೀರಿನ ಹರಿವಿಕೆಗೆ ತಡೆ ಒಡ್ಡಿದಂತಾಗುತ್ತದೆ.
- 67.16 ಟಿಎಮ್‌ಸಿ ನೀರಿನ ಸಂಗ್ರಹ ನ್ಯಾಯಮಂಡಳಿ ಅಂತಿಮ ತೀರ್ಪಿನ ಉಲ್ಲಂಘನೆ
- ಕರ್ನಾಟಕವೂ ಸೇರಿ ತಮಿಳುನಾಡಿನ ವನ್ಯ ಸಂಕುಲಕ್ಕೆ ಹಾನಿಯಾಗುತ್ತದೆ.
- ಬೇಸಿಗೆಯಲ್ಲಿ ನೀರು ಬಿಡಲು ಕರ್ನಾಟಕದಿಂದ ಮತ್ತಷ್ಟು ತಕರಾರು.
- ಕೃಷಿ ಚಟುವಟಿಕೆಗೆ ನೀರು ಬಳಸುವ ಉದ್ದೇಶವನ್ನು ಕರ್ನಾಟಕ ಹೊಂದಿದೆ.

ರಾಜ್ಯದ ವಾದವೇನು: ಕರ್ನಾಟಕ ಇದನ್ನು ನಿರಾಕರಿಸಿದೆ. ಮೇಕೆದಾಟು ಯೋಜನೆ ನಮ್ಮ ರಾಜ್ಯದ ಹಕ್ಕು ಎಂದು ಪ್ರತಿಪಾದಿಸಿದೆ. ಸಾಮಾನ್ಯ ಸಂದರ್ಭಗಳಲ್ಲಿ ಕರ್ನಾಟಕವು ತಮಿಳುನಾಡಿಗೆ ಎಷ್ಟು ಟಿಎಂಸಿ ನೀರು ಬಿಡಬೇಕು ಎಂಬುವುದನ್ನು ಕಾವೇರಿ ತೀರ್ಪಿನಲ್ಲಿ ಸ್ಪಷ್ಟ ಪಡಿಸಲಾಗಿದ್ದು, ಸಂಕಷ್ಟದ ವರ್ಷದಲ್ಲಿ ಸಂಗ್ರಹವಾದ ನೀರನ್ನು ನಾವು ಬಳಸಬಹುದಾಗಿದೆ. ಮೇಕೆದಾಟು ಯೋಜನೆಯಿಂದ ಅಣೆಕಟ್ಟೆಯಲ್ಲಿ ಸಂಗ್ರಹಿಸಲಾಗುವ ನೀರಿನಲ್ಲಿ 400 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿದ ಬಳಿಕ ತಮಿಳುನಾಡಿಗೆ ನೀರು ಹರಿದು ಹೋಗುತ್ತದೆ. ಪ್ರವಾಹ ಮತ್ತು ಸಂಕಷ್ಟದ ವರ್ಷಗಳಲ್ಲಿ ನೀರು ಬಳಕೆಗೆ ಇದು ಕರ್ನಾಟಕ ಮತ್ತು ತಮಿಳುನಾಡು ಎರಡೂ ರಾಜ್ಯಗಳಿಗೆ ಅನುಕೂಲ.

ಆಧಾರ: ವಿಶ್ವವಾಣಿ, ದಿನಾಂಕ:07.01.2022.

2. Assemblies had fewer sittings than Parliament

After a low of 33 days in 2020, Parliament saw only a small improvement in 2021 by functioning for 58 days, keeping the Opposition outcry alive on the reduced number of working days.

Against this backdrop, an analysis by The Hindu on the functioning of nine State Assemblies, revealed that the situation was not very different from the working of Parliament.

In 2021, the State Assemblies of Gujarat, Maharashtra, Rajasthan, Odisha, Haryana, Punjab, Himachal Pradesh, West Bengal and Uttar Pradesh, worked for 11 to

43 days with Punjab lowest in the tally and Odisha at the top. These States have been randomly picked to have a judicious mix of States ruled by the BJP and various Opposition parties.

Both the Parliament and the State Assemblies cited restrictions imposed due to the COVID-19 pandemic as the primary reason for cutting back on scheduled sittings.

The Constitution does not prescribe a minimum number of sittings, said Chakshu Roy, Head of outreach, PRS Legislative Research. Article 174 of the Constitution only says that the State legislature has to meet within six months of the last session. Within this period, it is up to the State governments to call for the session.

"One would expect that with the COVID-19 pandemic, the legislature would sit for longer providing guidance and proposing solutions. But in fact, the very opposite happened. It was used as an excuse to further shorten the legislative sessions," Mr. Roy told *The Hindu* . All of last year, the Punjab Assembly sat only for 11 days, this included eight days of the Budget session. This was lower than its 2020 record of 15 days.

All the data of 2020 was sourced from PRS Legislative Research's report "Annual Review of State Laws 2020".

Uttar Pradesh — where a heated contest is on between the BJP and the Samajwadi Party — was no better. The Assembly, over four sessions, met only for 17 days, fulfilling the bare minimum. This was a minor improvement from its 2020 record of 13 days.

BJP-ruled States

The Opposition often cites Gujarat to criticise the Narendra Modi government's alleged disinterest in running the Parliament. Making the criticism valid, the Gujarat Assembly sat only for 25 days in 2021 (In 2020, it was in session for 23 days).

On the last day of the Budget session, the Assembly passed the controversial "Gujarat Freedom of Religion (Amendment) Bill, 2021" which has stringent provisions against forcible religious conversion through marriages. In the two-day September session, four Bills were hurriedly passed, without much of debate.

In Haryana, where the Manohar Lal Khattar government survived a no-confidence motion, the indifference towards the assembly's functioning continues. In the year 2021, the Haryana State Assembly held 18 sittings, which included 11 during Budget session, three during Monsoon session and four in the winter session. In 2020, it was in session for 13-days. In its limited time, the assembly passed the controversial legislation that allows authorities to recover compensation from violent protesters for damage to property. Besides, the Haryana Parivar Pehchan Bill, 2021, aimed at creating

a unique identification number for each family and preparing a database to allow easy access to government services was also passed.

The hill State of Himachal Pradesh has a relatively better track record. In 2021, it had 32 sittings, an improvement from 25 days in 2020. The key Bills passed in the Assembly included The Himachal Pradesh Lokayukta (Amendment) Bill, 2021, which provides for appointment of a High Court judge as Lokayukta. The Himachal Pradesh Abadi Deh (record of rights) Bill 2021 was also passed, which aims at giving ownership rights of land to people living in "Abadi Deh or Lal Dora" areas of villages as per the scheme notified by the Union government. No ordinance was passed during the year.

Opposition-ruled States

In 2021, the Maharashtra Assembly was in session for 15 days, three fewer than 18 days in 2020.

The pandemic not only shortened the legislative sessions in Maharashtra but also forced the State government to shift the venue of 2021's winter session to Mumbai from its usual destination of Nagpur. While the pandemic was one of the reasons to shorten the winter session, Chief Minister Uddhav Thackeray's spinal surgery was also reportedly one of the reasons cited by legislature sources for the shorter duration. In Maharashtra's Budget (March 1-10, 2021) and monsoon session (July 5-6, 2021), the question hour was suspended. The Opposition had complained that the ruling coalition was rushing through the legislation, not allowing them the space to ask questions or seek accountability.

Rajasthan had 26 sittings last year, while in 2020 they had 29 sittings. Out of the 26 sittings in 2021, 20 were in the Budget session, which saw Chief Minister Ashok Gehlot, who is also the Finance Minister for the State, present a universal health care scheme worth ₹3,500 crore. A total of 20 Bills were passed, including the contentious legislation amending the Rajasthan Compulsory Registration of Marriages Act, 2009. The government was forced to re-examine the law, after protests from the BJP-led Opposition, which pointed out that the Bill would validate child marriages as it provided for registration of marriage of minors. The West Bengal Assembly met for 19 days in 2021, a slight increase from 14 sittings in 2020. The 19 days were spread across Chief Minister's Mamata Banerjee's second term and re-election for a third term. In what was probably a first for the State Assembly, West Bengal governor Jagdeep Dhankhar had to cut short his address due to chaos in the House on July 2, 2021.

The Odisha Assembly was the best performer in terms of the number of sittings in 2021. It met for 43 days last year. But the State is seeing a decline in the number of sittings. Since 2005, it has functioned for over 60 days in a year only twice in 2006 and in 2010. Though, it may have trumped quantitatively, qualitatively it is on the same page

as the others. The last session of 2021, held between December 1 to December 31, was a complete washout. The session ran only nine days and no fruitful discussion could be held as a stalemate continued over the Mamita Meher murder case. As against 3,576 starred questions received, Ministers could respond to only 60 questions.

(With inputs from Sobhana K. Nair, Omar Rashid, Mahesh Langa, Alok Deshpande, Mohammed Iqbal, Satyasundar Barik, Vikas Vasudeva and Shiv Sahay Singh)

Courtesy: The Hindu, dated: 16.01.2022

3. Legislature can't suspend members indefinitely: SC

Observing that a legislative body does not have "untrammelled power" to suspend its members for an indefinite period, the Supreme Court questioned the Maharashtra assembly's decision to suspend 12 BJP MLAs for one year, observing that it is "against democracy" and could be misused any ruling party having thin majority.

A bench of Justices A M Khanwilkar, Dinesh Maheshwari and C T Ravikumar expressed disapproval over the suspension of members for more than six months and observed that anything beyond it would be "irrational and unconstitutional". It said a constituency cannot go unrepresented beyond six months as per constitutional provisions. It said that the Election Commission can conduct fresh elections in case of expulsion but the Commission would have no role to play if members are suspended.

"It can be very dangerous to democracy also. In cases where the government has a very slender lead and if few members are suspended for a long time then what would be the fallout... The assembly cannot provide any additional ground for disqualification for members which is not provided in law," the bench said.

The bench said if a member of assembly is suspended, it is done for the purpose of carrying business of the House smoothly for a session and the period of suspension should be for the session. "There should be some purpose of suspension and the purpose is with regard to a session. It should not travel beyond one session, and anything other than this would be irrational. The real issue is about the rationality of the decision. The decision of one year seems irrational. If the suspension is done beyond a session, it has to be examined also from rationality point of view," the bench said.

The court expressed apprehension that if the decision of the Maharashtra assembly is upheld, similar situations may arise in other states also and it would have "wider ramification for democracy". "Legislature does not have untrammeled power and the constitutional court is supreme in this regard," the bench said after the state government contended that the court has a limited role while examining the validity of the decisions taken by the assembly. "You have power to expel members but it does not mean that you can suspend them for an indefinite period. Suspension is done to enable

the House to complete the business in one session and the suspension has to be considered in that context," the bench said.

The court had earlier said that suspension of 12 BJP MLAs in Maharashtra for one year is worse than expulsion and as per the constitutional provision a constituency cannot go unrepresented for more than six months. It had referred to Article 190 (4) of the Constitution which says that if for a period of 60 days, a member of a House, without its permission, is absent from all meetings, the House may declare his or her seat vacant.

On December 14, the apex court had sought responses from the Maharashtra assembly and the state government on the pleas filed by the 12 BJP MLAs challenging the resolution passed by the House to suspend them for one year. The 12 suspended members are Sanjay Kute, Ashish Shelar, Abhimanyu Pawar, Girish Mahajan, Atul Bhatkhalkar, Parag Alavani, Harish Pimpale, Yogesh Sagar, Jay Kumar Rawat, Narayan Kuche, Ram Satpute and Bunty Bhangdia.

Courtesy: Times of India, dated: 19.01.2022

4. Egyptian mummy showcases keep our Constitution safe

A little rain in Delhi on January 24, 1950 did not dampen the spirits of the members of the Constituent assembly. Huddled together, in the Constitution (now Central) Hall of Parliament, they were anxiously waiting for assembly proceedings to begin at 11am for the last time. There were two critical items on the day's agenda. First was the election of the President of India. This one was momentous but straightforward because Dr. Rajendra Prasad was the only candidate for the position. The second item was more personal. That day, each member would sign a document that would guide independent India's destiny the Constitution of India.

Constituent assembly members signed three copies of the Constitution. PM Jawahar Lal Nehru was the first to sign since he had to leave early and Dr Prasad the last. One was a printed copy in English, and two were in English and Hindi hand-lettered by two expert calligraphers. Artists from Shantiniketanal- so decorated each page of the calligraphed versions. The two calligraphed Constitution copies are kept in the library of Parliament, and the institution shoulders the responsibility of preserving them for the nation. Their preservation is critical because written documents get damaged by prolonged environmental exposure. Inks and colours fade, plus air pollutants and insect infestation can irreparably damage paper.

In the mid-eighties, the Indian Parliament and the Egyptian government started looking for preservation solutions. The former for the two calligraphed Constitutions, and the latter for 27 royal mummies. The Egyptians reached out to the Getty Conservation Institute (GCI) in the United States. Dr Shin Maekawa, a Japanese-born

American, led GCI's project to design a storage and display case for the mummies. An engineer by training, Dr Maekawa had worked at the NASA-owned Jet Propulsion Lab before joining GCI. He laid stringent design parameters for the oxygen-free cases for the royal mummies. They had to be readily manufacturable, low maintenance and cost-effective.

The Parliament of India reached out to the National Physical Laboratory (NPL) in Delhi for developing a case for preserving the Constitution. The point man at NPL for this project was its scientist Dr Hari Kishan. He would later go on to head NPL's Quantum Phenomena and Applications division. Dr Kishan would work extensively to fabricate a glass case with some success. The missing piece of the problem was a seal on the edges of the display case that guaranteed it remained airtight and no oxygen could leak into it. While visiting France to develop a glass case, he would learn about GCI's efforts in designing similar cases for the Egyptian mummies.

Dr Maekawa and the GCI team had successfully made a sealed display case to ensure that minimal oxygen would leak into it over an extended period. In 1993, GCI and NPL agreed to collaboratively design, install and test GCI's her metrically sealed cases for the preservation and display of the Constitution. A year later, GCI would ship two display cases for the English and Hindi versions of the Constitution to India. And after a year of testing, the two copies of the Constitution were placed in the airtight nitrogen-filled cases in 1995. Since then, a team of NPL scientists has carried out annual checks on the working of the two display cases.

The work done by Dr. Shin Maekawa and Dr Hari Kishan has ensured the preservation of the calligraphed Constitutions that were signed 73 years ago for future generations. While their efforts protect the physical book, the people of India have to preserve the letter and spirit of the Constitution. As former Supreme Court Justice H R Khanna, who upheld civil liberties during the Emergency, wrote: "A constitution is not a parchment of paper; it is a way of life. Eternal vigilance is the price of liberty and, in the final analysis, its only keepers are the people."

(Roy is with the Centre for Policy Research)

Courtesy: Times of India, dated: 26.01.2022

5. ನದಿ ಜೋಡಣೆ ಹಲವು ಅಡಚಣೆ

ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ದಕ್ಷಿಣ ನದಿಗಳ ಜೋಡಣೆ ಪ್ರಸ್ತಾಪಿಸಿದ ಪರಿಣಾಮ ಈ ವಿಷಯ ಚರ್ಚೆಯ ಪಡಸಾಲೆಗೆ ಮತ್ತೆ ಬಂದಿದೆ. ಗೋದಾವರಿ ಕೃಷ್ಣಾ, ಪೆನ್ನಾರ್ ಮತ್ತು ಕಾವೇರಿ ನದಿ ಜೋಡಣೆಯಿಂದ ರಾಜ್ಯಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂಬ ಅಭಿಪ್ರಾಯ ತಜ್ಞರಿಂದ ಕೇಳಿ ಬಂದಿದೆ. ರಾಜ್ಯ ಸರ್ಕಾರವೂ ಧಾಟಿಯಲ್ಲಿ ಪ್ರತಿಕ್ರಿಯಿಸುತ್ತಿದೆ. ಹಾಗಾದರೆ

ಏನಿದು ನದಿ ಜೋಡಣೆ, ರಾಜ್ಯಕ್ಕೆ ಏಕೆ ನಷ್ಟ, ಒಟ್ಟಾರೆ ಯೋಜನೆಯಿಂದ ಲಾಭಗಳೇನು, ನಷ್ಟವೇನು ಇತ್ಯಾದಿ ಮಾಹಿತಿ ಇಲ್ಲಿದೆ...

ಈ ಬಾರಿಯ ಬಜೆಟ್‌ನಲ್ಲಿ ಮೋದಿ ಸರ್ಕಾರ ತನ್ನ ಮಹಾತ್ವಾಕಾಂಕ್ಷೆಯ ನದಿಗಳ ಜೋಡಣೆ ಕುರಿತು ಮತ್ತೆ ಕನಸು ಹರಿಯಬಿಟ್ಟಿದೆ. ದಕ್ಷಿಣ ಭಾರತದ ಗೋದಾವರಿ, ಕೃಷ್ಣಾ, ಪೆನ್ನಾರ್ ಮತ್ತು ಕಾವೇರಿ ನದಿ ಜೋಡಣೆ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ಅಂತಿಮಗೊಂಡಿದ್ದು, ಸಂಬಂಧಿಸಿದ ರಾಜ್ಯ ಸರ್ಕಾರಗಳು ಸಮ್ಮತಿಸಿದ ತಕ್ಷಣ ಯೋಜನೆ ಅನುಷ್ಠಾನಕ್ಕೆ ನೆರವು ನೀಡುವುದಾಗಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ಯಮುನೆಯ ಉಪನದಿಗಳಾದ ಕೆನ್–ಬಿಟ್ವಾ ನದಿ ಜೋಡಣೆಗೆ ರೂ.44,605 ಕೋಟಿ ಮೀಸಲಿಡುವ ಮೂಲಕ, ದಕ್ಷಿಣದ ಪಂಚನದಿಗಳ ಜೋಡಣೆಯ ಕನಸಿಗೆ ಕಸುವು ತುಂಬುವ ಯತ್ನವೂ ನಡೆದಿದೆ. ಆದರೆ, ಈ ಘೋಷಣೆ ಕರ್ನಾಟಕದ ಕೃಷ್ಣಾ ಕಾವೇರಿ–ಸೀಮೆಯ ಜನರಿಗೆ ಯಾವ ರೀತಿ ಅನುಕೂಲವಾಗುತ್ತದೆ? ಎರಡೂ ನದಿಗಳ ಜಲಾನಯನ ಪ್ರದೇಶ ಎಷ್ಟರ ಮಟ್ಟಿಗೆ ವಿಸ್ತರಣೆಯಾಗುತ್ತದೆ? ಜೋಡಣೆ ಬಳಿಕ ಹರಿಯುವ ನದಿಗಳು ನಮ್ಮ ಕಲ್ಯಾಣ ಕರ್ನಾಟಕ, ಕೋಲಾರ ಸೀಮೆಯ ಜನರಿಗೆ ಕುಡಿಯುವ ನೀರು ಪೂರೈಸಬಲ್ಲವೆ? ಇಂಥ ಯಾವ ಪ್ರಶ್ನೆಗಳಿಗೂ ಉತ್ತರವಿಲ್ಲ. ಕೇಂದ್ರ ಸರ್ಕಾರ ಸಿದ್ಧಪಡಿಸಿರುವ ಡಿಪಿಆರ್‌ನಲ್ಲಿ ಏನಿದೆ ಎಂಬುದರ ಬಗ್ಗೆಯೂ ಸ್ಪಷ್ಟ ಮಾಹಿತಿ ಇಲ್ಲ.

ಡಿಪಿಆರ್ ಅಸ್ಪಷ್ಟ: 2020ರಲ್ಲಿಯೇ ಗೋದಾವರಿ–ಕೃಷ್ಣಾ–ಕಾವೇರಿ ನದಿಗಳನ್ನು ಜೋಡಿಸಲು ಡಿಪಿಆರ್ ಸಿದ್ಧ ಎಂದು ಕೇಂದ್ರ ಸರ್ಕಾರ ಪ್ರಕಟಿಸಿತ್ತು. ಗೋದಾವರಿಯಿಂದ 247 ಟಿಎಂಸಿ ಅಡಿಯಷ್ಟು ಹೆಚ್ಚುವರಿ ನೀರನ್ನು ಕೃಷ್ಣಾ, ಕಾವೇರಿ, ಪೆನ್ನಾರ್ ಜಲಾನಯನ ಪ್ರದೇಶಗಳನ್ನು ಒಳಗೊಂಡಿರುವ ದಕ್ಷಿಣ ಪ್ರದೇಶಗಳಿಗೆ ತಿರುಗಿಸಬಹುದು. ಮೂರು ಹಂತದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಬಹುದು ಎಂದು ಅಂದಿನ ಕೇಂದ್ರ ಜಲಸಂಪನ್ಮೂಲ ಸಚಿವರು ಘೋಷಿಸಿದ್ದರು. ಮೊದಲ ಹಂತದಲ್ಲಿ ಈ ಯೋಜನೆಯಿಂದ ತನಗೆ 200 ಟಿಎಂಸಿ ಅಡಿ ನೀರು ಸಿಗಬೇಕು ಎಂದು ಕೋರಿಕೆ ಇಟ್ಟಿರುವ ತಮಿಳುನಾಡು ತನಗೆ ಸಿಂಹಪಾಲು ದೊರೆಯಲಿದೆ ಎಂಬ ಉತ್ಸಾಹದಲ್ಲಿ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸುವಂತೆ ಸಲಹೆ ನೀಡಿದೆ. ಈ ಯೋಜನೆಯಿಂದ ಕರ್ನಾಟಕಕ್ಕೆ ಎಷ್ಟು ನೀರು ಸಿಗಲಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ.

ಹೆಚ್ಚೇನೂ ಲಾಭವಿಲ್ಲ: ಪೆನ್ನಾರ್–ಕೃಷ್ಣಾ ನದಿ ಜೋಡಣೆ ವಿಷಯದಲ್ಲಿ ಕರ್ನಾಟಕಕ್ಕೆ ಹೆಚ್ಚು ಲಾಭ ಇಲ್ಲ ಎಂದೇ ನೀರಾವರಿ ತಜ್ಞರು ಹೇಳುತ್ತಾರೆ. ಕರ್ನಾಟಕದಲ್ಲಿ ಕೇವಲ 20 ಕಿ.ಮೀ. ಉದ್ದ ಹರಿಯುವ ಪೆನ್ನಾರ್ ನದಿಯನ್ನು ಕೃಷ್ಣಾ ನದಿಗೆ ಜೋಡಿಸಿದರು. ಈ ನದಿ ಮುಂದೆ ಆಂಧ್ರ, ತಮಿಳುನಾಡಿಗೆ ಹರಿಯುತ್ತದೆ. ಹಾಗಾಗಿ, ಇದರಿಂದ ಲಾಭ ಆಂಧ್ರಕ್ಕೆ ಹೊರತು ಕರ್ನಾಟಕಕ್ಕೆ ಅಲ್ಲ. ಜೊತೆಗೆ ಈ ಎರಡೂ ನದಿಗಳನ್ನು ಎಲ್ಲಿ ಜೋಡಿಸಲಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಹಾಗಾಗಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡಿಪಿಆರ್ ತಯಾರಿಸುವ ಹಂತದಲ್ಲಿಯೇ ರಾಜ್ಯಕ್ಕೆ ಸಿಗುವ ನೀರಿನ ಪಾಲು ಎಷ್ಟು ಎಂಬುದನ್ನು ತಿಳಿಸಬೇಕು ಎಂಬ ಮನವಿಯನ್ನು ಕೇಂದ್ರದ ಮುಂದಿಟ್ಟಿದ್ದಾರೆ. ಈ ಯೋಜನೆಯಿಂದ ಕರ್ನಾಟಕಕ್ಕೆ ಎಷ್ಟು ಲಾಭ ಎಂಬ ಪ್ರಶ್ನೆಯ ಜೊತೆಗೆ, ಕೇಳಲೇಬೇಕಾದ ಇನ್ನೂ ಎರಡು ಪ್ರಶ್ನೆಗಳಿವೆ. ಗೋದಾವರಿಯಲ್ಲಿ ಹೆಚ್ಚುವರಿ ನೀರು ಲಭ್ಯವಿದೆಯೇ ಹಾಗೂ ಈ ಯೋಜನೆಗೆ ಎಲ್ಲಾ ರಾಜ್ಯಗಳ ಸಮ್ಮತಿ ನೀಡುತ್ತವೆಯೇ?

ನದಿ ಜೋಡಣೆಯ ಹರಿವು:

- ಇಂಟರ್‌ಲಿಂಕಿಂಗ್ ಆಫ್ ರಿವರ್ಸ್ (ಐಎಲ್‌ಆರ್) ಯೋಜನೆ 3 ರೀತಿ ವಿಂಗಡಿಸಲಾಗಿದೆ. ಉತ್ತರ ಭಾರತದ ಹಿಮಾಲಯನ್ ನದಿಗಳು, ದಕ್ಷಿಣ ಭಾರತೀಯ ನದಿಗಳು ಹಾಗೂ ಅಂತರ ರಾಜ್ಯ ನದಿ ಜೋಡಣೆ.
- ಕೇಂದ್ರ ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿರುವ ರಾಷ್ಟ್ರೀಯ ಜಲ ಅಭಿವೃದ್ಧಿ ನಿಗಮ ಈ ಯೋಜನೆಯನ್ನು ನಿರ್ವಹಿಸಲಿದೆ.
- ಮಳೆಗಾಲದಲ್ಲಿ ತುಂಬಿ ಹರಿಯುವ ನದಿಗಳಿಗೆ ಅಣೆಕಟ್ಟು ಕಟ್ಟಿ, ನೀರನ್ನು ಸಂಗ್ರಹಿಸಿ, ಬೇಸಿಗೆಯಲ್ಲಿ ಒಣಗುವ ನದಿಗಳಿಗೆ ಕಾಲುವೆಗಳ ಮೂಲಕ ನೀರನ್ನು ಬಿಡುವುದು. ಈ ಕಾಲುವೆಗಳಿಗೂ, ಅಣೆಕಟ್ಟುಗಳಿಗೂ ಸಂಪರ್ಕಿಸಿದ ಉಪ ಕಾಲುವೆಗಳ ಮೂಲಕ ಕೃಷಿ ಭೂಮಿ, ವಿದ್ಯುದಾಗಾರಗಳಿಗೆ ನೀರು ಹರಿಸುವುದು ಜೋಡಣೆಯ ಉದ್ದೇಶ.
- 1970ರಲ್ಲಿ ನೀರಾವರಿ ಸಚಿವ ಡಾ:ಕೆ.ಎಲ್.ರಾವ್ ರಾಷ್ಟ್ರೀಯ ಜಲ ಗ್ರಿಡ್ ಪ್ರಸ್ತಾವನೆ ಮುಂದಿಟ್ಟರು. ಅದರಲ್ಲಿ ನದಿ ಜೋಡಣೆಯ ಪ್ರಸ್ತಾವನೆಗಳಿದ್ದವು. 1980ರಲ್ಲಿ ಜಲ ಸಂಪನ್ಮೂಲಗಳ ನಿರ್ವಹಣೆಗೆ ರಾಷ್ಟ್ರೀಯ ದೃಷ್ಟಿಕೋನ ಎಂಬ ವರದಿಯನ್ನು ಜಲಸಂಪನ್ಮೂಲ ಇಲಾಖೆ ಸಿದ್ಧಪಡಿಸಿತ್ತು.
- 2002ರಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಈ ಕನಸಿಗೆ ಮತ್ತೆ ಜೀವ ನೀಡಿದರು. ಈಗ ಮೋದಿ ಸರ್ಕಾರ ಇದನ್ನು ಕೈಗೆತ್ತಿಕೊಂಡಿದೆ.

ಗೋದಾವರಿ, ಮಹಾನದಿಯಲ್ಲಿ ಹೆಚ್ಚುವರಿ ನೀರು ಇದೆಯೇ? "ಗೋದಾವರಿ ಮತ್ತು ಮಹಾನದಿಯಲ್ಲಿಯೇ ಹೆಚ್ಚುವರಿ ನೀರಿಲ್ಲ. ಹೀಗಿರುವಾಗ ಈ ಎರಡೂ ನದಿಗಳಿಂದ ಕಾವೇರಿ, ಕೃಷ್ಣಾ, ಪೆನ್ನಾರ್ ನದಿಗಳಿಗೆ ನೀರು ಹರಿಸುವುದು ಹೇಗೆ"?

ಇದು ದಕ್ಷಿಣ ವಿಷ್ಯಾದ ನದಿ ಜೋಡಣೆ, ಅಣೆಕಟ್ಟು ನಿರ್ಮಾಣ ಕುರಿತು ಅಧ್ಯಯನ ನಡೆಸುತ್ತಿರುವ ಹಿಮಾಂಶು ಠಾಕೂರ್ ಅವರ ಪ್ರಶ್ನೆ. ಮಹಾರಾಷ್ಟ್ರದ ನಾಸಿಕ್ ಬಳಿ ಹುಟ್ಟಿ ಒಡಿಶಾ, ತೆಲಂಗಾಣ, ಆಂದ್ರ ಸೇರಿ 4 ರಾಜ್ಯಗಳಲ್ಲಿ 1465 ಕಿ.ಮೀ. ಹರಿಯುವ ಗೋದಾವರಿ ದಕ್ಷಿಣ ಭಾರತದ ದೊಡ್ಡನದಿ. ಈ ನದಿಗೆ ಛತ್ತಿಸಗಡ–ಒಡಿಶಾದಲ್ಲಿ ಹರಿಯುವ ಮಹಾನದಿಯಿಂದ ನೀರು ತರುವುದು. ಬಳಿಕ ಗೋದಾವರಿಯಿಂದ ಕೃಷ್ಣಾ, ಪೆನ್ನಾರ್, ಕಾವೇರಿ ನದಿ ಜೋಡಿಸುವುದು ನದಿ ಜೋಡಣೆಯ ತಿರುಳು. ಆದರೆ, ಠಾಕೂರ್ ಹೇಳುವ ಪ್ರಕಾರ, ಸದ್ಯ ಈ ಎರಡೂ ನದಿಗಳಲ್ಲಿ ಹೆಚ್ಚುವರಿ ನೀರೇ ಸಿಗುತ್ತಿಲ್ಲ. ಹಾಗೆ ನೋಡಿದರೆ, ಕರ್ನಾಟಕ ನೀರಾವರಿ ತಜ್ಞರು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಂಗತಿಯ ಕುರಿತು ಗಮನ ಸೆಳೆದಿದ್ದಾರೆ. ಗೋದಾವರಿ–ಮಹಾನದಿ ಜೋಡಣೆಯನ್ನು ಮೊದಲ ಬಾರಿಗೆ 1980ರಲ್ಲಿ ಪ್ರಸ್ತಾಪಿಸಲಾಯಿತು. ಉಭಯ ನದಿಗಳ ಬೆಸುಗೆಯಿಂದ ಸಿಗುವ 1300 ಟಿಎಂಸಿ ಅಡಿ ನೀರಿನಲ್ಲಿ ಕರ್ನಾಟಕಕ್ಕೆ 283 ಟಿಎಂಸಿ ಅಡಿ (ಕೃಷ್ಣಾ–196, ಕಾವೇರಿ 87) ನೀರು ಹಂಚಿಕೆಯಾಯಿತು. ಇದೇ ಯೋಜನೆಯನ್ನು 20 ವರ್ಷಗಳ ಬಳಿಕ, ಅಂದರೆ 2000ನೇ ಇಸ್ವಿಯಲ್ಲಿ ಪುನರ್ ಪರಿಶೀಲನೆ ಮಾಡಲಾಯಿತು. ಆಗ ಗೋದಾವರಿ–ಮಹಾನದಿಯಿಂದ ಹೆಚ್ಚುವರಿಯಾಗಿ ಸಿಗುವ 925 ಟಿಎಂಸಿ ಅಡಿ ನೀರಲ್ಲಿ ಕರ್ನಾಟಕಕ್ಕೆ 164 ಟಿಎಂಸಿ ಅಡಿ (ಕೃಷ್ಣೆ–107, ಕಾವೇರಿ–57) ನೀರು ನೀಡಬಹುದು ಎಂದು ಲೆಕ್ಕಾಚಾರ ಹಾಕಲಾಯಿತು. ಮುಂದೆ 2010ರಲ್ಲಿ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ (ಎನ್‌ಡಬ್ಲ್ಯುಡಿಎ) ಈ ಯೋಜನೆಯನ್ನು ಪುನರ್ ಪರಿಶೀಲಿಸಿ, ನದಿ ಜೋಡಣೆಯಿಂದ ಕೇವಲ 718 ಟಿಎಂಸಿ ಅಡಿ

ನೀರಷ್ಟೇ ಸಿಗುತ್ತದೆ ಎಂದು ಸಾರಿತು. ಸ್ವಾರಸ್ಯವೆಂದರೆ, ಈ ಬಾರಿ ಕರ್ನಾಟಕಕ್ಕೆ ಯಾವುದೇ ಪಾಲು ಇರಲೇ ಇಲ್ಲ.

ರಾಜ್ಯಗಳ ಸಮ್ಮತಿ ಸಿಗುತ್ತಾ: ನದಿ ಜೋಡಣೆ ಸಂಬಂಧ ವಿಸ್ತೃತ ಯೋಜನಾ ವರದಿ (ಡಿಪಿಆರ್) ಅಂತಿಮಗೊಂಡಿದ್ದು, ರಾಜ್ಯ ಸರ್ಕಾರಗಳು ಸಮ್ಮತಿಸಿದ ತಕ್ಷಣ ಯೋಜನೆ ಅನುಷ್ಠಾನಕ್ಕೆ ನೆರವು ನೀಡಲಾಗುವುದು ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಅಂದರೆ, ಸಂಬಂಧಿಸಿದ ಎಲ್ಲ ರಾಜ್ಯಗಳು ಒಪ್ಪಿಗೆ ಸೂಚಿಸುತ್ತವೆಯೇ ಎಂಬುದು ಪ್ರಶ್ನೆ ಎಲ್ಲ ರಾಜ್ಯಗಳಲ್ಲೂ ಒಂದೇ ಪಕ್ಷ ಅಧಿಕಾರದಲ್ಲಿದ್ದರೂ ಇದು ಕಷ್ಟ ಸಾಧ್ಯ. ಪ್ರಸ್ತುತ ನೀರಾವರಿ ವಿಷಯ ಸಂವಿಧಾನದ 7ನೇ ಅನುಸೂಚಿ ಪ್ರಕಾರ ರಾಜ್ಯ ಪಟ್ಟಿಯಲ್ಲಿದೆ. ನೀರಾವರಿಗೆ ಸಂಬಂಧಿಸಿದಂತೆ ಶಾಸನ ಮಾಡುವ ಅಧಿಕಾರ ರಾಜ್ಯಗಳಿಗೆ ಸೇರಿದೆ. ಹಾಗಾಗಿ, ನದಿ ಜೋಡಣೆಯಿಂದ ತನಗೆ ಲಾಭವಿಲ್ಲ ಅಥವಾ ನಷ್ಟವಾಗುತ್ತದೆ ಎಂದರೆ, ಅಂಥ ರಾಜ್ಯ ಸರ್ಕಾರ ಯೋಜನೆಗೆ ಒಪ್ಪುವುದಿಲ್ಲ. ಅಣೆಕಟ್ಟು ಕಟ್ಟಬೇಕಾದ ನದಿಗಳಲ್ಲಿ ಹೆಚ್ಚುವರಿ ನೀರು ಇದೆ ಎಂಬುದನ್ನು ಆಯಾ ರಾಜ್ಯಗಳು ಒಪ್ಪಿ ಅದರ ಮೇಲಿನ ಹಕ್ಕನ್ನು ಬಿಟ್ಟುಕೊಡಲು ಒಪ್ಪಬೇಕು. ಇದೆಲ್ಲವೂ ಸಾಧ್ಯವಾಗದ ಮಾತು. ಒಂದು ವೇಳೆ ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು, ನೀರಾವರಿ ವಿಷಯವನ್ನು ಸಮವರ್ತಿ ಪಟ್ಟಿಗೆ ಸೇರಿಸಿಕೊಂಡರೆ (ಶಾಸನ ಮಾಡುವ ಅಧಿಕಾರವನ್ನು ಹೊಂದುವುದು) ಅನುಷ್ಠಾನ ಸಾಧ್ಯ. ಹಾಗಾಗಿಯೇ, ಅಂತರರಾಜ್ಯ ನದಿ ಜೋಡಣೆ ಕಳೆದ 40 ವರ್ಷಗಳಿಂದಲೂ ಘೋಷಣೆಯಾಗಿಯೇ ಉಳಿದಿದೆ.

ಆಧಾರ:–ವಿಜಯ ಕರ್ನಾಟಕ, ದಿನಾಂಕ:09.02.2022

6. ಕಾಗೇರಿ ಪ್ರತಿಪಾದನೆಯ ರಾಜಕೀಯ ಸ್ವಚ್ಛತೆ ಅಗತ್ಯ

ರಾಜ್ಯ ವಿಧಾನಸಭೆಯ ಸ್ಪೀಕರ್ ಕಾಗೇರಿ ವಿಶ್ವೇಶ್ವರ ಹೆಗಡೆ ಸುಸಂಸ್ಕೃತ ರಾಜಕಾರಣಿ, ಗೌಜು ಗಲೀಜು, ವಿವಾದಗಳಿಂದ ದೂರ. ಘನತೆ ಕಾಯ್ದುಕೊಂಡವರು ಕಲಾಪಗಳಿಗೆ ಶಿಸ್ತು ತರಲು ಅವರು ಮಾಡುತ್ತಿರುವ ಪ್ರಯತ್ನಗಳೇ ಇದಕ್ಕೆ ಸಾಕ್ಷಿ. ಕಾಗೇರಿ ಕಳೆದ ಕಾಲು ಶತಮಾನದ ರಾಜಕೀಯವನ್ನು ಹತ್ತಿರದಿಂದ ಕಂಡವರು. ಅವರು ಸಾರ್ವಜನಿಕವಾಗಿ ಮಾತನಾಡುವುದು ಕಡಿಮೆ. ಅಂತಹ ಕಾಗೇರಿ ಇನ್ನು ಮೌನವಾಗಿರುವುದು ಸಾಧ್ಯವೇ ಇಲ್ಲ ಎನ್ನುವಂತೆ ಮಾತಾಡಿದ್ದಾರೆ. ಅದೂ ಕಣ್ಣೀರಿನೊಂದಿಗೆ ಮಾತ್ರವಲ್ಲ ತಾವು ಮಾತನಾಡಿ ವಿಷಯಗಳ ಕುರಿತು ಚರ್ಚೆ ನಡೆಯಬೇಕೆಂದು ಹೇಳಿದ್ದಾರೆ. (ಪತ್ರಿಕಾ ವರದಿ) ಖಂಡಿತಕ್ಕೂ ಪ್ರತಿಯೊಬ್ಬ ನಾಗರಿಕನೂ ಈ ಚರ್ಚೆಯಲ್ಲಿ ಭಾಗವಹಿಸಲೇಬೇಕಿದೆ.

ಕಾಗೇರಿ ಹೇಳಿದ್ದೇನೆಂದರೆ, ನಮ್ಮ ಪ್ರಜಾಪ್ರಭುತ್ವ ಕುಸಿದು ಹೋಗಿದೆ. ಲೋಕಸಭೆ, ವಿಧಾನಸಭೆ ಅಷ್ಟೇ ಅಲ್ಲ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳೂ ಕುಲಗೆಟ್ಟುಹೋಗಿದೆ. ಹಣವಿಲ್ಲದವರು ಸ್ಪರ್ಧಿಸಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಇದೆ. ಪಕ್ಷಗಳ ನಡುವೆಯೂ ಬಹುಶ: ಬಹಳ ವ್ಯತ್ಯಾಸವೇನೂ ಇಲ್ಲ. ಪಕ್ಷಗಳನ್ನು ಬಿಟ್ಟು ವ್ಯಕ್ತಿಯ ಅರ್ಹತೆಯನ್ನುನುಸರಿಸಿ ಆಯ್ಕೆಯಾಗಬಲ್ಲ ಮಾನದಂಡಗಳನ್ನು ಹುಡುಕಬೇಕಿದೆ. ಹಣ ತೋಳ್ಬಲ, ವಿಭಜಿಸಿ ಆಳುವ ತಂತ್ರ. ಆಮಿಷ ಮತ್ತು ಮತೀಯತೆ ಪ್ರಜಾಪ್ರಭುತ್ವವನ್ನು ಹಾಳುಗೆಡವಿದೆ. ಮಾತುಗಳು ಸೂಚಿಸಿರುವುದೆಂದರೆ ರಾಜಕೀಯ ಸಂಕಟದಲ್ಲಿದೆ. ದುಷ್ಟ ಶಕ್ತಿಗಳು ರಾಜಕೀಯವನ್ನು ಗುತ್ತಿಗೆ ಹಿಡಿಯುವ ಹಂತದಲ್ಲಿವೆ.

ಪ್ರಚಂಡ ಭ್ರಷ್ಟತೆ ಹಾಗೂ ಹಣದ ಮುಂದೆ ಬಹುಶ: ನಾವು ಅಸಹಾಯಕರಾಗುತ್ತ ಹೋಗುತ್ತಿದ್ದೇವೆ ಎನ್ನುವುದನ್ನು ಅವರ ಕಣ್ಣೀರು ಸಂಕೇತಿಸಿದೆ. ಪ್ರಶ್ನೆ ಎಂದರೆ ನಾವು ಇಲ್ಲಿಗೆ ಹೇಗೆ ಬಂದು ಮುಟ್ಟಿದೆವು ಮತ್ತು ಇಲ್ಲಿಂದ ಹೊರಬರುವುದು ಹೇಗೆ.

ಹಿಂದೆ ಸಾಮಾನ್ಯವಾಗಿ ನಾವು ಭಾವಿಸಿಕೊಂಡಿದ್ದೆಂದರೆ ಚುನಾವಣೆಗಳು ಕೆಟ್ಟಿವೆ. ಹಾಗಾಗಿ ತಪ್ಪು ಜನ ಆಯ್ಕೆಯಾಗುತ್ತಿದ್ದಾರೆ. ಅವನ್ನು ಸರಿ ಮಾಡಿದರೆ ಎಲ್ಲವೂ ಸರಿಯಾಗುತ್ತದೆ ಎಂಬ ಅಶಾಭಾವ

ಇತ್ತು. ಆ ಗ್ರಹಿಕೆಯ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಹಲವು ಒಳ್ಳೆಯ ಕ್ರಮಗಳನ್ನು ತೆಗೆದುಕೊಂಡಿದೆ. ಮತ್ತು ಚುನಾವಣಾ ಪ್ರಕ್ರಿಯೆಯನ್ನು ಅದ್ಭುತವಾಗಿ ಸ್ಟ್ರೀಮ್‌ಲೈನ್‌ಗೊಳಿಸಿದೆ. ಆದರೂ ಸಮಸ್ಯೆ ಪರಿಹಾರವಾಗಿಲ್ಲ. ಅಂದರೆ, ಕಾರಣಗಳು ಬೇರೆಯೇ ಇವೆ.

ಬಹುಶ: ಇಂತಹ ಮೂರು ಕಾರಣಗಳಿವೆ. ಮೊದಲನೆಯದು ಬದಲಾಗಿ ಹೋಗಿರುವ ಜನರು ಮತ್ತು ಅಭ್ಯರ್ಥಿಗಳ ನಡುವಿನ ಸಂಬಂಧ; ಚುನಾವಣೆಗಳ ಕುರಿತಾದ ಗ್ರಹಿಕೆ ಮತ್ತು ಚುನಾವಣಾ ತಂತ್ರಗಳು. ಎರಡನೇಯದು ವ್ಯವಸ್ಥೆಯೊಳಗೆ ಹುಟ್ಟಿಕೊಂಡ ಕೆಲವು ಸಮಸ್ಯೆಗಳಿಂದಾಗಿ ಬಹುಶ: ಕೆಲವು ಜನಪ್ರತಿನಿಧಿಗಳಿಗೆ ದೊರೆಯುತ್ತಿರುವ ಒಳ ಅವಕಾಶಗಳು ಮೂರನೆಯದು ಬಹುಶ: ದೇಶದಲ್ಲಿ ಹರಿಯುತ್ತಿರುವ ವಿಪರೀತ ಭ್ರಷ್ಟ ಹಣ.

ಒಂದನೆಯ ವಿಷಯ ಬಹುಶ: ಹಿಂದೆ ಇಂದಿರಾ, ವಾಜಪೇಯಿ, ರಾಮಕೃಷ್ಣ ಹೆಗಡೆ, ಎಂಜಿಆರ್ ಅವರಂಥ ನಾಯಕರು (ಅಂತವರು ಹಲವರಿದ್ದರು) ಮತ್ತು ಜನರ ನಡುವೆ ಒಂದು ಭಾವನಾತ್ಮಕ ಸಂಬಂಧವಿತ್ತು. ಈಗಲೂ ಪ್ರಧಾನಿ ಮೋದಿ ಮತ್ತು ಜನರ ನಡುವೆ ಅಂತಹ ಸಂಬಂಧವಿದೆ. ಹೀಗೆ ಸಂಬಂಧವಿರುವಲ್ಲಿ ಪ್ರೀತಿಸುತ್ತಾರೆ. ಹಣದ ಪ್ರಶ್ನೆ ಇರಲಿಲ್ಲ. ಇರುವುದು ಇಲ್ಲ, ಹಾಗಿದ್ದಾಗ ವೋಟ್ ಮಾಡುವುದು ಒಂದು ದಾರ್ಮಿಕ ಕ್ರಿಯೆಯಂತಹ ಸಂಗತಿ. ಜನ ತಮ್ಮ ದೇವರನ್ನು ಬಿಟ್ಟು ಬೇರೆಯವರಿಗೆ ವೋಟ್ ಹಾಕುವುದಿಲ್ಲ. ದುಡ್ಡಿನ ಪ್ರಶ್ನೆಯೇ ಇಲ್ಲ.

ಇಂದು ಅಂತಹ ಸಂಬಂಧ ಸಾಮಾನ್ಯವಾಗಿ ಇಲ್ಲ (ನಾಯಕ ಮತ್ತು ಜನ ಎರಡು ಕಡೆಯಿಂದ) ಸಂಬಂಧ ಮುರಿದು ಹೋಗಿ ಹೆಚ್ಚು ಕಡಿಮೆ ಚುನಾವಣೆ ಒಂದು ಅಪ್ಪಟ ಲೆಕ್ಕಾಚಾರದ ಸ್ವಾರ್ಥದ ವಿಷಯವಾಗಿದೆ. ಜನ ಸ್ಪರ್ಧಿಸುವುದು ತಮ್ಮ ವೈಯಕ್ತಿಕ ವ್ಯವಹಾರದ ಅಭಿವೃದ್ಧಿಯನ್ನು ಆಸಕ್ತಿಯಿಂದಾಗಿಯೇ ದುಡ್ಡಿಗಾಗಿಯೇ ಎಂಬ ಭಾವನೆ ಜನರಲ್ಲಿ ಮೂಡಿದಂತಿದೆ. ಅವರಿಗೆ ಗೆಲ್ಲುವುದು ಮುಖ್ಯ. ಎಷ್ಟು ಬೇಕಾದರೂ ಖರ್ಚು ಮಾಡುತ್ತಾರೆ ಎಂಬ ಭಾವನೆಯೂ ಮೂಡಿದೆ. ಆಭ್ಯರ್ಥಿಗಳ ಕುರಿತು ಜನರಲ್ಲಿ ಪ್ರೀತಿ ಇಲ್ಲ ಹೇಗಿದ್ದರೂ ಚುನಾವಣೆ ರಾಜಕಾರಣಿಗಳಿಗೂ ವ್ಯವಹಾರ ತಾವೂ ವ್ಯವಹಾರಕ್ಕೆ ಇಳಿದರೆ ತಪ್ಪೇನು ಎಂಬ ಭಾವನೆ ಬಂದಂತಿದೆ. ಆ ಸಂದರ್ಭಕ್ಕೆ ತಾವು ಬಂದಷ್ಟು ಬಡಿದುಕೊಂಡರೆ ತಪ್ಪೇನು ಎಂಬ ಭಾವನೆ ಬಂದಂತಿದೆ. ಇದೇ ನಿಲುವನ್ನು ಜನ ಬಹುತೇಕ ರಾಜಕಾರಣಿಗಳ ಕುರಿತು ತೆಗೆದುಕೊಂಡಂತಿದೆ. ಜನಪ್ರತಿನಿಧಿಯಾದ ವ್ಯಕ್ತಿ, ಇದ್ದಕ್ಕಿದ್ದ ಹಾಗೇ ಶ್ರೀಮಂತನಾಗುವಂತೆ (ಸಾಧಾರಣವಾಗಿ) ಕಾಣುವುದು ಜನ ಇಂತಹ ಮನಸ್ಥಿ:ತಿಗೆ ಬರಲು ಕಾರಣವಿರಬಹುದು. ಹಾಗೆಂದು ಜನ ಸುಬಗರೆಂದೇನೂ ಅಲ್ಲ. ಅವರ ನೈತಿಕತೆಯ ಮಟ್ಟ ಇಳಿದಿರುವುದು ಇದಕ್ಕೆ ಕಾರಣವೇ. ಒಟ್ಟಾರೆ ಹೆಚ್ಚಾಗಿ ಇಂದು ಚುನಾವಣೆಯೆಂದರೆ ಬಹುತೇಖ ದುಡ್ಡಿನ ವ್ಯವಹಾರ. ಎಷ್ಟರ ಮಟ್ಟಿಗೆ ಎಂದರೆ ಪ್ರಣಾಳಿಕೆ ಪ್ರಚಾರ ಇತ್ಯಾದಿಗಳಿಗೆ ಈಗ ಕಿಮ್ಮತ್ತಿಲ್ಲ. ಹೀಗೆ ಆಗಿರುವುದರಿಂದಲೇ ಇಂದಿನ ಚುನಾವಣೆಗಳು ಹಣ ಕೇಂದ್ರಿತವಾಗಿ ಹೋಗಿದ್ದು, ಹಣವಂತರೇ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಆಗಿಹೋಗಿದ್ದು, ಎರಡನೇ ವಿಷಯ ಹಣವಂತರನ್ನು ಬಿಟ್ಟು ಬೇರೆಯವರು ಚುನಾವಣೆಗೆ ಸ್ಪರ್ಧಿಸಲಾಗದ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಇನ್ನೂ ಒಂದು ಕಾರಣವಿದೆ. ಇತ್ತೀಚಿನ ವರ್ಷಗಳಲ್ಲಿ ಒಮ್ಮೆಲೇ ಶ್ರೀಮಂತರಿಗೆ ರಾಜಕೀಯ ವಿಶೇಷ, ವಿಪರೀತ ಆಕರ್ಷಣೆಯ ಕ್ಷೇತ್ರವಾಗಿ ಹೋಗಿದೆ. ಕೆಲವು ವರ್ಷಗಳ ಹಿಂದೆ ಹಾಗೆ ಇರಲಿಲ್ಲ. ಏಕೆಂದರೆ ಶ್ರೀಮಂತರಿಗೆ ಜನ ಮತ ಹಾಕುತ್ತಿರಲಿಲ್ಲ. ಅವರಿಂದ ಗೆಲ್ಲಲಾಗುತ್ತಿರಲಿಲ್ಲ. ಆದರೆ, ಇಂದು ಅದೆಲ್ಲ ಬದಲಾಗಿದೆ. ಮೇಲೆ ಹೇಳಿದ ಹಾಗೆ ದುಡ್ಡು ಇಂದು ಒಂದು ಮಾನದಂಡ. ಅಷ್ಟೇ ಅಲ್ಲ. ರಾಜಕೀಯ ಎಂತಹ ಶಕ್ತಿಯನ್ನು ತಂದುಕೊಡುತ್ತದೆ ಎಂಬುದರ ರುಚಿ ಶ್ರೀಮಂತರಿಗೆ ಗೊತ್ತಾಗಿ ಹೋಗಿದೆ. ಇಲ್ಲಿ ದುಡ್ಡು ಹಾಕಿ ದುಡ್ಡು ತೆಗೆಯಬಹುದು ಎಂಬುದು ಅವರ ಭಾವನೆ ಮತ್ತು ದೊಡ್ಡ ಪ್ರಮಾಣದ ಅಂದರೆ, ನೂರಾರು ಸಾವಿರಾರು ಕೋಟಿಯಲ್ಲಿ ಹಣ ಬರುವುದು ಅಧಿಕಾರವಿದ್ದರೆ ಮಾತ್ರ ಎಂದಾಗಿದೆ. ಹಿಂದೆ ಪರೋಕ್ಷವಾಗಿ ಅವರೇ

ಹಣ ನೀಡುತ್ತಿದ್ದರು. ಈಗ ತಾವೇ ಸ್ಪರ್ಧಿಸುವುದು ಹೆಚ್ಚು ಪ್ರಯೋಜನಕಾರಿ ಎಂಬ ಭಾವನೆ ಬಂದಿದೆ. ಹೇಗೊ ಹಣ ಖರ್ಚು ಮಾಡಿದರೆ ಗೆಲ್ಲಾಗುತ್ತದೆ. ಸರಿಯಾಗಿ ಬಳಸಿಕೊಂಡರೆ ಜನ ಪ್ರತಿನಿಧಿ ಹುದ್ದೆ ಹಲವು ರೀತಿಯಲ್ಲಿ ಕಾನೂನಾತ್ಮಕ ರಕ್ಷಣೆ ನೀಡುತ್ತದೆ. ಒಂದೊಮ್ಮೆ ಅಧಿಕಾರವಿರದಿದ್ದರೆ ಹಣ ಬರುವುದೂ ಇಲ್ಲ. ಬಂದರೂ ಅದನ್ನು ಇಟ್ಟುಕೊಳ್ಳಲಾಗುವುದಿಲ್ಲ ಎನ್ನು ಕೆಲವರಿಗೆ ಬೇರೆ ಬೆರೆ ರೀತಿಯ ಬಯಕೆಗಳೂ ಇರಬಹುದು. ಕೆಲ ಶ್ರೀಮಂತರು ಗೆಲ್ಲಲು ಏನು ಬೇಕಾದರೂ ಮಾಡುವುದು ಇದೇ ಕಾರಣಕ್ಕಿರಬಹುದು ಎಂಬ ಗುಮಾನಿಗಳಿವೆ. ಇವೆಲ್ಲವನ್ನು ಈ ಗಮನಿಸಿದಾಗ ದೋಷಪೂರಿತವಾಗಿರುವುದು ಕೇವಲ ನಮ್ಮ ಚುನಾವಣಾ ವ್ಯವಸ್ಥೆಯಲ್ಲ. ಅಧಿಕಾರ ವ್ಯವಸ್ಥೆ ಬೇರೆ ಬೇರೆ ಒಳಕಾರಣಗಳಿಂದಾಗಿ ದೊರೆಯುತ್ತಿರುವ ಯದ್ವಾತದ್ವಾ ಶಕ್ತಿ ಮತ್ತು ಅಧಿಕಾರ ಏನು ಬೇಕಾದರು ಮಾಡುವ ಶಕ್ತಿ. ಹಣಬಲ ಇರುವವರು, ತೋಳ್ಬಲ ಇರುವವರು ಹೆಚ್ಚು ಹೆಚ್ಚಾಗಿ ಚುನಾವಣೆಗಳಿಗೆ ನಿಲ್ಲುವ ಕಾರಣ ಇದೇ. ಇದೇ ಕಾರಣಕ್ಕೆ ಜನಪ್ರತಿನಿಧಿ ಹುದ್ದೆ ಸ್ವರ್ಗದ ಸುಪ್ಪತ್ತಿಗೆಯನ್ನು ಖಾತ್ರಿ ಪಡಿಸುತ್ತದೆ.

ಮೂರನೆಯ ಕಾರಣ ವಿಪರೀತವಾಗಿರುವ ಅಕ್ರಮ ಹಣದ ಚಲಾವಣೆ ಇಂದು ದೇಶದಲ್ಲಿ ದೊಡ್ಡ ಪ್ರಮಾಣದ ಹಣವಿದೆ. ಅಂತಹ ಹಣ ಎಲ್ಲಿಂದ ಬರುತ್ತದೆ ಎನ್ನುವುದನ್ನು ಕೂಡ ಅರಿಯಬೇಕು. ನೈಸರ್ಗಿಕ ಸಂಪನ್ಮೂಲಗಳ ಅಕ್ರಮ ಬಳಕೆ, ಕೋಟಿಗಳ ಟರ್ನ್‌ಓವರ್ ಇರುವ, ನಷ್ಟದಲ್ಲಿ ನಡೆಯುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಕೃಷಿ ಮಂಡಿಗಳು, ಡ್ರಗ್ ಮಾಫಿಯಾಗಳು ಹವಾಲಾ ಹಣ, ವಿದೇಶಿ ಹಣ ಎಲ್ಲವು ಇವುಗಳ ಮೂಲವೇ. ರಾಜಕೀಯದಲ್ಲಿ ಚಲಾವಣೆಗೊಳ್ಳುವುದು ಇಂತಹ ಹಣವೇ. ಸಾಧಾರಣ ಮೂಲಗಳಿಂದ ಬಂದ ಹಣ ಚುನಾವಣಾ ಖರ್ಚಿಗೆ ಸಾಲುವುದಿಲ್ಲ.

ಗಮನಿಸಬೇಕು, ಇಂತಹ ಪರಿಸ್ಥಿತಿ ಹುಟ್ಟಿಕೊಂಡಿರುವುದು ಒಂದು ವ್ಯವಸ್ಥೆಯಿಂದಾಗಿ ಆ ವ್ಯವಸ್ಥೆ ಬದಲಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬಹುದೇನೋ

1. ರಾಜಕೀಯ ಪಕ್ಷಗಳ ಹಣಕಾಸು ವ್ಯವಹಾರವನ್ನು ಸರ್ಕಾರಿ ಆಡಿಟ್ ಕೆಳಗಡೆ ಮತ್ತು ಮಾಹಿತಿ ಹಕ್ಕಿನ ಕೆಳಗೆ ತರಬಹುದು.
2. ಅತೀ ಮಹತ್ವದ ಶಾಸನಬದ್ಧ ಹುದ್ದೆಗಳಿಗೆ ಕನಿಷ್ಠ ಅವಧಿಯನ್ನು ನಿಗದಿ ಪಡಿಸಬಹುದು. ಅಂದರೆ ಮುಖ್ಯವಾಗಿ ಪ್ರಧಾನಿ ಮತ್ತು ಮುಖ್ಯಮಂತ್ರಿಯಂಥ ಹುದ್ದೆಗೆ ಒಮ್ಮೆ ಆಯ್ಕೆಯಾದರೆ ಕನಿಷ್ಠ ಮೂರು ವರ್ಷಗಳ ಅವಧಿ ನಿಗದಿಪಡಿಸುವುದು. ಹಾಗಾದಲ್ಲಿ ತಮ್ಮ ಹುದ್ದೆ ಭದ್ರತೆಗೆ ಹೆಣಗಾಡುವ ಅಥವಾ ಇದಕ್ಕಾಗಿ ಖರ್ಚು ಮಾಡುವ ಅಗತ್ಯವಿರುವುದಿಲ್ಲ.
3. ದೊಡ್ಡ ಪ್ರಮಾಣದ ಹಣಕಾಸಿನ ಡೀಲ್‌ಗಳನ್ನು ಹೊಂದಿರುವ ಸರ್ಕಾರಗಳ ನಿರ್ಧಾರಗಳನ್ನು ಲೋಕಪಾಲ್ ಮತ್ತು ಜುಡಿಶಿಯಲ್ ರಿವ್ಯೂ ಕೆಳಗಡೆ ತರಬಹುದು. ಅಂತಹ ಹುದ್ದೆಗಳ ನೇಮಕ ಅಧಿಕಾರವನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಪ್ರಧಾನಿ ಮತ್ತು ವಿರೋಧಿ ನಾಯಕರನ್ನೊಳಗೊಂಡ ಸಮಿತಿ ನಿರ್ಣಯಿಸಬಹುದು.
4. ಎಲ್ಲ ಜನಪ್ರತಿನಿಧಿ ಹುದ್ದೆಗಳನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಿ ಅವರನ್ನು ಸರ್ಕಾರಿ ನೌಕರರ ನಡವಳಿಕೆಯ ಕೋಡ್ ಆಫ್ ಕಂಡರ್ಕ್ಟ್‌ಕೆಳಗೆ ತರಬಹುದು.
5. ರಾಜ್ಯಸಭೆ ಮತ್ತು ವಿಧಾನ ಪರಿಷತ್ತುಗಳನ್ನು ಸಾರಾಸಗಟಾಗಿ ರದ್ದುಪಡಿಸಬಹುದು.
6. ಕ್ರಮೇಣ ಜನಪ್ರತಿನಿಧಿಗಳ ಕ್ಷೇತ್ರ ವ್ಯಾಪ್ತಿಗಳನ್ನು ಎರಡು ಪಟ್ಟು ದೊಡ್ಡಗೊಳಿಸಿ ಜನಪ್ರತಿನಿಧಿಗಳ ಸಂಖ್ಯೆಯನ್ನು ಅರ್ಧಕ್ಕೆ ಇಳಿಸಬಹುದು. ಇದರಿಂದಾಗಿ ಶಾಸನ ಸಭೆಗಳಲ್ಲಿನ ಚರ್ಚೆ ಗದ್ದಲಗಳಲ್ಲಿ ಮುಗಿಯದೆ ಉತ್ತಮ ಗುಣಮಟ್ಟದ ಡಿಬೇಟ್ ಸಾಧ್ಯವಾಗಬಹುದು.

7. ಚುನಾವಣೆಗಳ ಬಹಿರಂಗ ಸಭೆಗಳನ್ನು ಸಂಪೂರ್ಣ ರದ್ದುಗೊಳಿಸುವುದು ಅನ್‌ಲೈನ್ ಪ್ರಚಾರಗಳನ್ನು ಜಾರಿಗೊಳಿಸುವುದು.
8. ಪ್ರಚಾರದ ಅವಧಿಯನ್ನು ಇನ್ನು ಕಿರಿದುಗೊಳಿಸಬಹುದು.
9. ಪ್ರಕರಣದ ಗಂಭೀರತೆಯನ್ನು ಅವಲಂಭಿಸಿ ಸದಸ್ಯತ್ವವನ್ನು ರದ್ದು ಮಾಡುವ ವಿಧಿವಿಧಾನಗಳನ್ನು ಗುರುತಿಸಬೇಕು
10. ಆಯ್ಕೆಯಾದವರ ಸಾವಿನ ಕಾರಣವನ್ನು ಬಿಟ್ಟು ಬೇರೆ ಯಾವುದೇ ಕಾರಣಕ್ಕೂ ಮರು ಚುನಾವಣೆಗಳನ್ನು ನಡೆಸಕೂಡದು.
11. ಕೇವಲ ಎರಡು ಬಾರಿ ಮಾತ್ರ ಜನಪ್ರತಿನಿಧಿಗಳಾಗುವ ಅವಕಾಶ ನೀಡಬೇಕು.
12. ಅಧಿಕಾರಿಗಳ ವರ್ಗಾವಣೆಯನ್ನು ನೇರ ಮತ್ತು ಪಾರದರ್ಶಕಗೊಳಿಸಬಹುದು. ಅದು ಕೌನ್ಸೆಲಿಂಗ್ ಆಧಾರದ ಮೇಲೆ ನಡೆಯಬಹುದು ಮತ್ತು ಅವರಿಗೆ ನಿರ್ದಿಷ್ಟ ಅವಧಿ ನೀಡಬಹುದು.
13. ವಿಪರೀತ ಹಣ ಚಲನೆ ನಡೆಯುವ ದೊಡ್ಡ ದೊಡ್ಡ ಕ್ರೀಡಾಕೂಟಗಳ ಮತ್ತು ಒಮ್ಮೆಲೇ ಹಣಬರುವ ದಂಧೆಗಳ ಮೇಲೆ ಕಣ್ಣಿಡಬೇಕು.
14. ಧ್ವನಿಮತದಿಂದ ಯಾವುದೇ ವಿಧೇಯಕ ಪಾಸು ಮಾಡುವಂತಿಲ್ಲ ಎಂಬ ತಿದ್ದುಪಡಿ ತರಬೇಕು ಹಾಗೆಯೇ ಕೊನೆಯ ದಿನ ಹಲವು ವಿಧೇಯಕಗಳು ಪಾಸಾಗುವುದನ್ನು ಕೂಡ ತಡೆಹಿಡಿಯಬೇಕು.

ಒಂದು ಮಾತು ಎಲ್ಲ ರಾಜಕಾರಣಿಗಳು ಭ್ರಷ್ಟರಲ್ಲ, ಹಲವರು, ಹೆಚ್ಚು ಜನ ಒಳ್ಳೆಯವರಿದ್ದಾರೆ. ಇಲ್ಲವಾದರೆ ದೇಶ ಪ್ರಗತಿ ಸಾಧಿಸುತ್ತಿರಲಿಲ್ಲ. ಹಾಗೆ ನೋಡಿದರೆ ಇಂದಿನ ಹಲವು ರಾಜಕಾರಣಿಗಳ ಜನಸಂಪರ್ಕವು ಹೆಚ್ಚು ಮತ್ತು ಅವರ ಮೇಲೆಯೂ ಸಾಮಾಜದ ತೀವ್ರ ಒತ್ತಡವಿದೆ. ಒಳ್ಳೆಯವರ ಕೈಯನ್ನು ಸಮಾಜ ಹಿಡಿದೇಬಿಡುತ್ತದೆ ಎಂದು ಕೂಡ ಇಲ್ಲ ಆ ಸಮಸ್ಯೆಯೂ ಇದೆ. ನಮ್ಮ ಗುರಿ ಇರುವುದು ಕ್ರಿಮಿನಲ್‌ಗಳು ಒಳಪ್ರವೇಶ ಮಾಡದಂತೆ ತಡೆಯುವುದು ಮಾತ್ರ. ಮತ್ತೆ ರಾಜಕಾರಣಿಗಳನ್ನು ಪವರ್ ಲೆಸ್ ಮಾಡಿದರೆ ಅಧಿಕಾರಿಗಳನ್ನು ಹತೋಟಿಯಲ್ಲಿಡುವುದು ಕಷ್ಟವಾಗಬಹುದು ಕೂಡ. ಇವನ್ನೆಲ್ಲ ಗಮನಿಸಿ ಕ್ರಮ ತೆಗೆದುಕೊಳ್ಳಬೇಕು.

ಲೇಖಕರು: ಪ್ರೊ:ಆರ್.ಜಿ.ಹೆಗಡೆ

ಆಧಾರ:ವಿಶ್ವವಾಣಿ, ದಿನಾಂಕ:03.03.2022.

7. ಸಮರ ಅಲ್ಲ ಸದರ

ಬೇರೆ ಕಡೆಯ ಇತಿಹಾಸ ಪುರಾಣಗಳನ್ನು ನೋಡಿದರೆ, ಯುದ್ಧ ಮಾಡಬೇಕೇ ಬೇಡವೇ ಎಂಬ ಬಗ್ಗೆ ಹೆಚ್ಚಿನ ಗೊಂದಲ ಯಾರಿಗೂ ಇದ್ದಂತೆ ತೋರುವುದಿಲ್ಲ. ರೋಮನ್, ಗ್ರೀಕ್ ನಾಗರಿಕತೆಗಳಲ್ಲಿ ಯುದ್ಧಗಳು ಹಾಸು ಹೊಕ್ಕಾಗಿದ್ದವು. ನಮ್ಮಲ್ಲೂ ಆದಿಮ ನಾಗರಿಕತೆಗಳಲ್ಲಿ ಯುದ್ದವನ್ನು 'ಯಜ್ಞಕ್ಕೆ ಸಮಾನ' ಎಂದು ಹೇಳಲಾಗಿತ್ತು. ಕೃಷಿ ಭೂಮಿಗಳನ್ನು ಹೊಸದಾಗಿ ಸೃಷ್ಟಿಸಬೇಕಿದ್ದ, ನದಿ ಬದಿಗಳಲ್ಲಿ ನಗರಗಳನ್ನು ಆಗಷ್ಟೇ ಸ್ಥಾಪಿಸುತ್ತಿದ್ದ, ರಾಷ್ಟ್ರ ಪರಿಕಲ್ಪನೆ ಇನ್ನೂ ಮೊಳೆಯುತ್ತಿದ್ದ ಕಾಲದಲ್ಲಿ ಅದಕ್ಕಾಗಿ ಕದನಗಳು ಅನಿವಾರ್ಯವಾಗಿದ್ದವೇನೋ. ನಾಗರಿಕತೆಗಳು ಆಧುನಿಕವಾಗುತ್ತ ಬಂದಂತೆ, ಯುದ್ಧವೆಂದರೇನು, ಅದು ಯಾಕೆ ಬೇಡ, ಅದರಿಂದ ಆಗುವ ಭೌತಿಕ–ಮಾನಸಿಕ ಕಷ್ಟನಷ್ಟಗಳೇನು ಎಂಬ ಬಗ್ಗೆ ಹೆಚ್ಚಿನ ಚಿಂತನೆ ತೊಡಗಿತು. ರಾಮಾಯಣದಲ್ಲಿ ಈ ಬಗ್ಗೆ ಹೆಚ್ಚಿನ ಗೊಂದಲವಿಲ್ಲ. ಆದರೆ

ಮಹಾಭಾರತದಲ್ಲಿ ಇದೆ. ಅಲ್ಲಿ ಯುದ್ಧ ಮಾಡಿ ಪೀಠಗಳಿಸಬೇಕಾದ ಧರ್ಮರಾಯನೇ, 'ನನಗೆ ಯುದ್ಧ ಬೇಡ ಕೃಷ್ಣ' ಎನ್ನುತ್ತಾನೆ. ರಾಜಿಗಾಗಿ ನಾಲ್ಕಾರು ಹಂತದ ಸಂಧಾನಗಳು ನಡೆಯುತ್ತವೆ. ಕಡೆಗೂ ಕಲಹ ಅನಿವಾರ್ಯವಾದಾಗ ಎಲ್ಲರೂ ಪಾಲ್ಗೊಳ್ಳುತ್ತಾರೆ. ಸಮರದ ಆರಂಭದಲ್ಲೂ ಅರ್ಜುನ, 'ಬಂಧುಗಳನ್ನು ಕೊಲ್ಲುವ, ಕುಟುಂಬದವರನ್ನು ಅನಾಥವಾಗಿಸುವ ಈ ಯುದ್ಧ ಬೇಕೆ ಕೃಷ್ಣ? ಎನ್ನುತ್ತಾ ಕುಸಿಯುತ್ತಾನೆ. ಯುದ್ಧ ತಪ್ಪಿಸಲು ಸಂಧಾನದ ಪ್ರಯತ್ನ ಮಾಡಿದ ಕೃಷ್ಣನೇ ಈಗ ಕದನ ಯಾಕೆ ಅನಿವಾರ್ಯ ಎಂದು ಬೋಧಿಸುತ್ತಾನೆ. ಹೀಗೆ ನಾಗರಿಕತೆಗಳು ಹೊಸದಾಗುತ್ತ ಹೋದಂತೆ ಯುದ್ಧವನ್ನು ಸೃಷ್ಟಿಸುವ ಶಕ್ತಿಗಳೂ, ತಪ್ಪಿಸುವ ಶಕ್ತಿಗಳೂ ಹೆಚ್ಚು ಹೆಚ್ಚು ಕ್ರಿಯಾಶೀಲವಾಗುತ್ತ ಹೋದವು.

ಆದರೆ ಈಗ ನೋಡಿದರೆ ಅಂಥ ಯುದ್ಧ ಸೃಷ್ಟಿಸುವ ಶಕ್ತಿಗಳ ಕೈಯೇ ಮೇಲಾಗಿ, ತಪ್ಪಿಸುವವರ ದನಿ ಮಂಕಾದಂತೆ ಕಾಣಿಸುತ್ತದೆ. ರಷ್ಯಾ–ಯಕ್ರೇನ್ ಯುದ್ಧವನ್ನೇ ನೋಡಿದರೆ, ಅಲ್ಲಿ ಹತ್ತಾರು ಸಂಗತಿಗಳು ತಳಕು ಹಾಕಿಕೊಂಡಿವೆ. ಅಲ್ಲಿ ಉಕ್ರೇನ್ ನ್ಯಾಟೋ ಸೇರಿದರೆ ಶತ್ರುಗಳು ತನ್ನ ಮನೆ ಬಾಗಿಲಿಗೇ ಬಂದು ಕೂತಂತಾಗುತ್ತದೆ ಎಂಬ ರಷ್ಯಾದ ಆತಂಕವಿದೆ. ನ್ಯಾಟೋ ಸೇರದಿದ್ದರೆ ರಷ್ಯಾ ಯಾವಾಗ ಬೇಕಿದ್ದರೂ ತನ್ನನ್ನು ಕಬಳಿಸಬಹುದು ಎಂಬ ಉಕ್ರೇನ್‌ನ ಆತಂಕವಿದೆ.

ರಷ್ಯಾದ ಬಲಿಷ್ಠತೆಗೆ ಮೂಗುದಾರ ಹಾಕುವ ಅಮೇರಿಕದ ಆಕಾಂಕ್ಷೆಯೂ, ಸನ್ನೆಯಲ್ಲೇ ಜಗತ್ತನ್ನು ನಿಯಂತ್ರಿಸುವ ಅಮೆರಿಕ ಬಗ್ಗೆ ರಷ್ಯಾದ ಈರ್ಷ್ಯೆಯೂ, ಇದೆಲ್ಲದರ ಬೆಂಕಿಯಲ್ಲಿ ಬೇಳೆ ಬೇಯಿಸಿಕೊಳ್ಳುವ ಚೀನಾದ ಕುತಂತ್ರವೂ, ಏನಾದರೂ ಹಾಳುಬಿದ್ದುಹೋಗಲಿ ನಮ್ಮ ಎಣ್ಣೆ ಮಾರಾಟವಾದರೆ ಸಾಕು ಎಂಬ ಗಲ್ಫ್ ದೇಶಗಳ ವ್ಯಾಪಾರ ಬುದ್ಧಿಯೂ ಇದೆ. ಆದರೆ ಉಕ್ರೇನ್ ಮೇಲೆ ಸುರಿಯುತ್ತಿರುವ ಬಾಂಬ್ ಮಳೆಯಲ್ಲಿ ಆದೇಶ ಸರ್ವನಾಶವಾಗುತ್ತಿದೆಯಲ್ಲ ಎಂಬ ಆತಂಕ ಅಲ್ಲಿನವರಿಗೆ ಮಾತ್ರ ಇದ್ದಂತಿದೆ. ಯುದ್ಧ ನಡೆದರೆ ತಮ್ಮ ಶಸ್ತ್ರಾಸ್ತ್ರ ವ್ಯಾಪಾರ ಖಚಿತ, ಉಕ್ರೇನ್ ಭಸ್ಮವಾದರೆ ಅದನ್ನು ಮತ್ತೆ ಕಟ್ಟಲು ನಮ್ಮ ಕಂಪನಿಗಳಿಗೆ ರಹದಾರಿ ಉಚಿತ ಎಂಬ ಸಂಭ್ರಮದಲ್ಲಿ ದೊಡ್ಡ ದೇಶಗಳಿವೆ. ಮೊದಲ ಹಾಗೂ ಎರಡನೇ ಮಹಾಯುದ್ಧಗಳಲ್ಲಿ ಇಂಥದೇ ಸರ್ವನಾಶವನ್ನು ಎದುರಿಸಿ ಮೇಲೆದ್ದು ಬಂದ ದೇಶಗಳಲ್ಲಾದರೂ ಯದ್ಧದ ಭಯಂಕರತೆಗೆ ಬೆನ್ನು ತಿರುಗಿಸುವ ಸ್ಪಂದನವೊಂದು ಇದೆಯೇ ಎಂದು ಹುಡುಕಬೇಕಾಗಿದೆ.

ಒಂದು ಯುದ್ಧ ಮತ್ತೊಂದಕ್ಕೆ ಮುನ್ನುಡಿ: ಒಂದು ಯುದ್ಧ ಮತ್ತೊಂದು ಯುದ್ಧಕ್ಕೆ ಮುನ್ನುಡಿಯಾಗುತ್ತದೆ. ಮೊದಲ ಮಹಾಯುದ್ಧದಲ್ಲಿ ಸೋತ ಜರ್ಮನಿಯನ್ನು ತುಳಿಯಲು ಇತರ ದೇಶಗಳು ಹೇರಿದ ಕಠಿಣ ನಿರ್ಬಂಧಗಳು ಹಿಟ್ಲರ್‌ನಲ್ಲಿ ಕಹಿಯಾಗಿ ಶೇಖರಗೊಂಡು ಅದು ಎರಡನೇ ಮಹಾಯದ್ಧಕ್ಕೆ ಪೀಠಿಕೆ ಬರೆಯಿತು. ಅದು ಹಿಟ್ಲರ್‌ನ ಕೈಯಲ್ಲಿ ಸೋತು ಏಟು ತಿಂದ ರಷ್ಯಾ ಇಂದು ಮೂರನೇ ಮಹಾಸಮರದ ಪುಟಗಳಿಗೆ ಪರಿವಿಡಿ ಬರೆಯುತ್ತಿದೆ. 1937ರಲ್ಲಿ ಚೀನಾ–ಜಪಾನ್ ಯುದ್ಧದಲ್ಲಿ ಜಪಾನ್ ಪಡೆಯಿಂದ ಹೊಡೆಸಿಕೊಂಡು ಜರ್ಝರಿತವಾಗಿ, ನ್ಯಾನ್ ಜಿಂಗ್ ಪಟ್ಟಣದ ಬರ್ಬರ ಕ್ರೌರ್ಯಗಳಿಗೆ ಸಾಕ್ಷಿಯಾಗಿದ್ದ ಚೀನಾ, ಈಗ ಆ ಹಿಂಸೆಯ ನೆನಪಿನಲ್ಲಿ ಮತ್ತೆಮತ್ತೆ ಕುದಿಯುತ್ತ ಜಪಾನ್ ಸೇರಿದಂತೆ ಅಕ್ಕಪಕ್ಕದವರನ್ನು ಕೆಣುಕುತ್ತಿದೆ. ವಿಯೆಟ್ನಾಂ, ಅಫಘಾನಿಸ್ತಾನ, ಇರಾಕ್ ಮುಂತಾದ ಕಡೆ ಅಮೆರಿಕ ನಡೆಸಿದ ಯುದ್ಧಗಳಿಗೆ ಅದು ಎಂದು ಕಂದಾಯ ಕಟ್ಟ ಬೇಕಾಗುತ್ತದೋ ತಿಳಿಯದು. ಒದೆಸಿಕೊಂಡವರು ಒದೆಯುವ ಗಳಿಗೆಗಾಗಿ ಕಾಯುತ್ತಾರೆ. ಒದ್ದವರು ತನಗೆ ತಿರುಗಿ ಒದೆ ಬಿದ್ದಾವು ಎಂಬ ಭಯದಲ್ಲಿ ಮತ್ತೆ ಆಯುಧಗಳನ್ನು ಪ್ರೇರಿಸುತ್ತ ತಮ್ಮ ಮರ್ಯಾದೆಗೆ ಕಾವಲು ನಿಲ್ಲುತ್ತಾರೆ.

ರಾಜತಂತ್ರಜ್ಞರು, ನಾಯಕರು ಯುದ್ಧವನ್ನು ಒಂದು ಕಲೆಯಾಗಿ, ಅವಕಾಶವಾಗಿ ಕಾಣುತ್ತಾರೆ. 'ಎಲ್ಲ ಯುದ್ಧಕಲೆಯೂ ನಿಂತಿರುವುದು ಮೋಸಗೊಳಿಸುವುದು ಹೇಗೆ ಎಬುಂದರ ಮೇಲೆ. ಹೀಗಾಗಿ, ನಾವು ದಾಳಿ ಮಾಡಲು ಸಿದ್ಧರಾಗಿದ್ದಾಗ, ನಾವು ದುರ್ಬಲರಂತೆ ಕಾಣಿಸಬೇಕು. ನಮ್ಮ ಶಕ್ತಿಗಳನ್ನು ಪ್ರಯೋಗಿಸುವಾಗ, ನಾವು ನಿಷ್ಕ್ರಿಯರಂತೆ ಕಾಣಿಸಬೇಕು. ನಾವು ಹತ್ತಿರ ಇರುವಾಗ, ದೂರ ಇದ್ದೇವೆ ಎಂದು ಶತ್ರುವಿಗೆ ಭಾಸವಾಗುವಂತೆ ಇರಬೇಕು: ದೂರವಿದ್ದಾಗ, ನಾವು ಹತ್ತಿರವೇ ಇದ್ದೇವೆ ಎಂದು ಆತ

ನಂಬುವಂತಿರಬೇಕು.' ಈ ಮಾತುಗಳು ಇರುವುದು ಕ್ರಿಸ್ತಪೂರ್ವ 5ನೇ ಶತಮಾನದ ಸತ್ ತ್ಸು ಎಂಬ ಚೀನೀ ಸೇನಾ ತಂತ್ರಗಾರ ಬರೆದ 'ಆರ್ಟ್ ಆಫ್ ವಾರ್' ಎಂಬ ಪುಸ್ತಕದಲ್ಲಿ ಚೀನಾದ ಸೈನ್ಯಕ್ಕೆ ಕಲಿಸುವ ಪಾಠಗಳಲ್ಲಿ ಇದೂ ಒಂದು. ನಮ್ಮಲ್ಲಿ ಚಾಣಕ್ಯನ ರಾಜನೀತಿಯನ್ನು ಬಿಸ್ನೆಸ್ ನಿರ್ವಹಣೆಯಲ್ಲಿ ಕಲಿಸುವಂತೆ, ಅಲ್ಲಿ ಕ್ರಿಸ್ತ ಪೂರ್ವದ ಈ ಕೃತಿಯನ್ನು ಗಂಭೀರವಾಗಿ ಅಧ್ಯಯನ ಮಾಡಿಸಲಾಗುತ್ತದೆ. ಪೂರ್ವ ಏಷ್ಯಾದ ಹಲವು ರಾಷ್ಟ್ರಗಳು ಈ ಕೃತಿಯ ಹಲವು ಪಾಠಗಳನ್ನು ಯುದ್ಧಕಲೆಯಿಂದ ಹಿಡಿದು ರಾಜಕೀಯದವರೆಗೆ ಬಳಸುತ್ತವೆ. ಆದರೆ ಭಾರತದಲ್ಲಿ ಯುದ್ಧದ ಬಗ್ಗೆ ಬಂದ ಸಾಹಿತ್ಯದಲ್ಲಿ ಕಪಟಕ್ಕೆ ಪ್ರಾಧಾನ್ಯವಿಲ್ಲ. ಯುದ್ಧವನ್ನು 'ಕಲೆ' ಎಂದು ನೋಡುವುದಕ್ಕಿಂತಲೂ, 'ಯಜ್ಞ' ಎಂದು ನೋಡಿದ ಉದಾಹರಣೆಗಳೇ ನಮ್ಮಲ್ಲಿ ಹೆಚ್ಚು ಕೃಷ್ಣನೂ ಯುದ್ಧವನ್ನು ಕ್ಷತ್ರಿಯನು ಮಾಡಲೇಬೇಕಾದ ಯಜ್ಞ ಎಂದೇ ಪ್ರತಿಪಾದಿಸುತ್ತಾನೆ. ಯುದ್ಧ ಸೃಷ್ಟಿಸುವ ಭೀಭತ್ಸತೆ, ಕುಲನಾಶ, ದುರಂತದ ಬಗ್ಗೆ ವೇದವ್ಯಾಸರು ಹೆಚ್ಚು ಒತ್ತು ಕೊಡುತ್ತಾರೆ. ಕುರುಕ್ಷೇತ್ರ ಯುದ್ಧ ಮುಗಿದ ಬಳಿಕ ಮುಖಾಮುಖಿಯಾದ ಕೃಷ್ಣನನ್ನು ಗಾಂಧಾರಿ ವ್ಯಗ್ರವಾಗಿ ನಿಂದಿಸುತ್ತಾಳೆ. ಯಾದವರ ನಾಶದ ಶಾಪ ಕೊಡುತ್ತಾಳೆ. ಕುಲಕ್ಷಯಕ್ಕೆ ತನ್ನ ಮಗನೇ ಕಾರಣ ಎಂಬ ಸರಳ ವಿಚಾರ ಅವಳ ತಲೆಗೆ ಹೊಳೆಯುವುದಿಲ್ಲ ಯುದ್ಧ ವಿವೇಕಿಗಳ ಮನಸ್ಸನ್ನೂ ಮಬ್ಬುಗೊಳಿಸುತ್ತದೆ. ಪೂರ್ವಪರ ವಿವೇಚನೆ ಇಲ್ಲದಂತೆ ಮಾಡುತ್ತದೆ.

ವಿವೇಚನೆಯಿಲ್ಲದ ಯುದ್ಧೋನ್ಮಾದ:

ಯುದ್ಧಕ್ಕೂ ಒಂದು ನೀತಿಯಿರುತ್ತದೆ. ಆದರೆ, ಯುದ್ಧೋನ್ಮಾದ ಏರುತ್ತ ಹೋದಂತೆ ಆ ನೀತಿಯೆಲ್ಲ ಗಾಳಿಯಲ್ಲಿ ಆವಿಯಾಗುತ್ತದೆ. ಅಶ್ವತ್ಥಾಮ ನಡುರಾತ್ರಿ ಪಾಂಡವರ ಶಿಬಿರ ನುಗ್ಗಿ ನಿದ್ರಿಸುತ್ತಿದ್ದ ಪಾಂಡವರ ಮಕ್ಕಳ ತಲೆ ಕಡಿಯುತ್ತಾನೆ. ಉತ್ತರೆಯ ಗರ್ಭಕ್ಕೆ ನಾರಾಯಣಾಸ್ತ್ರ ಪ್ರಯೋಗ ಮಾಡುತ್ತಾನೆ. ಅವಳೇನು ತಪ್ಪು ಮಾಡಿದ್ದಳು? ಎನೂ ಇಲ್ಲ. ಆದರೆ ರಣಕಣ ಅಂಥ ಎಲ್ಲ ವಿವೇಚನೆಯನ್ನು ನಿರಾಕರಿಸುತ್ತದೆ. ರಷ್ಯಾ ಉಕ್ರೇನಿನ ಮನೆ, ಆಸ್ಪತ್ರೆ, ಶಾಲೆಗಳ ಮೇಲೆ ಬಾಂಬು ಸುರಿಯುತ್ತದೆ. ಜರ್ಮನಿಯ ಹಿಟ್ಲರ್ ಹೆಂಗಸರು. ಮಕ್ಕಳೆನ್ನದೆ ಒಂದು ಜನಾಂಗವನ್ನು ಗ್ಯಾಸ್ ಚೇಂಬರ್‌ಗಳಿಗೆ ಕೂಡಿಹಾಕಿ ಸಾಯಿಸುತ್ತಾನೆ.

ಯುದ್ಧ ಹದಿನೆಂಟು ದಿನಗಳಲ್ಲಿ ಮುಗಿಯಬಹುದು; ಆದರೆ ಯುದ್ಧದ ಕಲೆಗಳು ಶತಮಾನಗಳ ಕಾಲ ಉಳಿಯುತ್ತವೆ. ಇಂದು ನಾಶವಾದ ಉಕ್ರೇನನ್ನು ಮತ್ತೆ ಕಟ್ಟಲು ಎಷ್ಟು ವರ್ಷಗಳು ಬೇಕೋ! ಉಡಿಸ್ ಆಗಿರುವ ಆಫಘಾನಿಸ್ತಾನವನ್ನು ಮತ್ತೆ ನಾಗರಿಕ ಸಮಾಜ ಆಗಿಸಲು ಎಷ್ಟು ಕಾಲದ ತೆರೆಗಳು ಮಗುಚಬೇಕೋ ಎನೋ, ನಮಗಿನ್ನು ಸಮರ ಬೇಡ ಎಂಬ ವಿವೇಕ ಮೂಡಿದ ಸಮುದಾಯಗಳು ಬಹಳ ಬೇಗನೇ ಆರ್ಥಿಕವಾಗಿ ಮೇಲೆ ಬರಬಹುದು. ಜಪಾನ್‌ನ ಹಾಗೆ. ಆದರೆ ಅಲ್ಲಿನ ಹಿರೋಷಿಮಾ ತಲೆಮಾರು ಎಂದು ವಾಸಿಯಾಗದ ಗಾಯಳುಗಳನ್ನು ಎದೆಯಲ್ಲಿಟ್ಟುಕೊಂಡಿತ್ತು. ಯುದ್ಧವನ್ನು ಕಂಡ ತಲೆಮಾರು ಮಾಯವಾಗಿ ಹೊಸ ತಲೆಮಾರು ಬಂದಂತೆ ಹೊಸ ಚಿಗುರುಗಳು ಮೊಳೆಯಬಹುದು.

ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನಲ್ಲಿ ನಡೆದ ಒಂದು ಸಂಶೋಧನೆಯ ಪ್ರಕಾರ (ಇದನ್ನು ನಡೆಸಿದ ಮಾರ್ಗರೆಟ್ ಬೌರ್ಡೆಕ್ಸ್ ಎಂಬಾಕೆಯ ಉಪನ್ಯಾಸ ಟೆಡ್ ಟಾಕ್‌ನಲ್ಲಿದೆ), ಯುದ್ದದ ಅವಧಿಯಲ್ಲಿ ನಡೆಯುವ ನಾಶ ಒಂದು; ಯುದ್ಧ ಮುಗಿದ ಬಳಿಕ ಆಗುವ ಜೀವಹಾನಿ, ಆರೋಗ್ಯಹಾನಿ, ಮನೋವ್ಯಾಕುಲತೆ ಮತ್ತು ಆತ್ಮಹತ್ಯೆಗಳು, ಬದುಕಿನ ಸಾಧ್ಯತೆಗಳ ನಾಶ ಇದೆಲ್ಲ ಇನ್ನೊಂದೇ ತೂಕ. ಮಾಹಾಯುದ್ಧದ ಪರಿಣಾಮಗಳು ಎಷ್ಟೋ ವರ್ಷದ ನಂತರವೋ ಎಲ್ಲೆಲ್ಲೋ ಹೇಗೆ ಹೇಗೋ ಕಾಣಿಸಿಕೊಳ್ಳುತ್ತವೆ. ಕುರುಕ್ಷೇತ್ರದ ಯುದ್ಧ ನಡೆದು ಮೂರುವರೆ ದಶಕಗಳ ಬಳಿಕ ಯಾದವರು ಹೊಡೆದಾಡಿಕೊಳ್ಳುವಾಗ ಕುರುಕ್ಷೇತ್ರದಲ್ಲಿ ನಡೆಸಿದ ಕೃತ್ಯಗಳ ಕಹಿಯೆಲ್ಲ ಹೊರೆಗೆ ಬಂದು ಕೃತವರ್ಮನನ್ನು ಸಾತ್ಯಕಿ ಕೊಲ್ಲುತ್ತಾನೆ. ಒಡೆದು ಹೋದ ಜರ್ಮನಿ ಭೌತಿಕವಾಗಿ ಒಂದಾದರೂ ಮಾನಸಿಕವಾಗಿ ಒಂದಾಗಲು ಎಷ್ಟು ವರ್ಷಗಳು ಬೇಕೋ ತಿಳಿಯದು. ಎರಡನೇ ಮಹಾಯುದ್ಧದ ಬಳಿಕ ಯೂರೋಪಿನ

ಹಲವು ದೇಶಗಳ ಜನ ಹೊಟ್ಟೆ ತುಂಬಾ ಊಟ ಕಾಣಬೇಕಿದ್ದರೆ ಹಲವು ವರ್ಷಗಳೇ ಕಳೆದಿದ್ದವು. ಕಾಶ್ಮೀರದಲ್ಲಿ ಪಾಕಿಸ್ತಾನ ಸಾರಿದ ಛದ್ಮ ಸಮರಕ್ಕೆ ಅಲ್ಲಿನ ಪಂಡಿತರು ಈಗಲೂ ತೆರುತ್ತಿರುವ ಬೆಲೆ ಕಡಿಮೆಯೇ?

ಆಧಾರ: ವಿಜಯ ಕರ್ನಾಟಕ. ದಿ:13.03.2022.

8. ಹಿಜಾಬ್ ಅತ್ಯಗತ್ಯವಲ್ಲ, ಯಾಕೆಂದರೆ...

ದೇಶಾದ್ಯಂತ ಭಾರಿ ಸಂಚಲನಕ್ಕೆ ಕಾರಣವಾಗಿದ್ದ ಶಾಲಾ–ಕಾಲೇಜ್‌ಗಳಲ್ಲಿ ಹಿಜಾಬ್ ಧರಿಸುವ ವಿವಾದ ಹೈಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ಪರ–ವಿರೋಧ ಚರ್ಚೆಗಳು ಗರಿಗೆದರಿವೆ. ಹಿಜಾಬ್ ಧರಿಸುವುದು ಇಸ್ಲಾಂನ ಅಗತ್ಯ ಆಚರಣೆಯಲ್ಲ. ಹಾಗಾಗಿ, ಧಾರ್ಮಿಕ ಮತ್ತು ಮೂಲಭೂತ ಹಕ್ಕು ಉಲ್ಲಂಘನೆಯಾಗುವುದಿಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿದೆ. ಸಮವಸ್ತ್ರ ಜಾರಿಗೊಳಿಸುವ ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿದೆ. ಈ ಐತಿಹಾಸಿಕ ತೀರ್ಪಿನ ಸಂಪೂರ್ಣ ಮಾಹಿತಿ ಇಲ್ಲಿದೆ.

ಸಮವಸ್ತ್ರ ವಿಧಿಸುವ ಅಧಿಕಾರ: ನಿರ್ದಿಷ್ಟ ವಯೋಮಾನದವರೆಗೆ ಎಲ್ಲರಿಗೂ ಶಿಕ್ಷಣ ಕೊಡುವುದು ಸರ್ಕಾರದ ಕರ್ತವ್ಯ. ಇದರೊಂದಿಗೆ ಸಮವಸ್ತ್ರಕ್ಕೆ ಶಿಫಾರಸ್ಸು ಮಾಡುವ ಅಧಿಕಾರವೂ ಸರ್ಕಾರಕ್ಕೆ ಸಂವಿಧಾನದತ್ತವಾಗಿದೆ. ನಮ್ಮ ದೇಶದ ಎಲ್ಲ ಮಕ್ಕಳಿಗೂ ಸಂವಿಧಾನಾತ್ಮಕವಾಗಿ ಹಕ್ಕುಗಳಿವೆ. ಹಾಗೆಂದು ಶಾಲೆಗಳು ಶಿಫಾರಸ್ಸು ಮಾಡುವ ಸಮವಸ್ತ್ರಗಳು ಧಾರ್ಮಿಕ ತಾಟಸ್ಥ್ಯ ಮತ್ತು ಸರ್ವರಿಗೂ ಅನ್ವಯವಾಗುವ ರೀತಿಯಲ್ಲಿ ಇದ್ದಾಗ ಅದರಿಂದ ಯಾವುದೇ ಹಕ್ಕಿನ ಉಲ್ಲಂಘನೆ ಆಗುವುದಿಲ್ಲ.

ಅಂಬೇಡ್ಕರ್ ಭಾಷಣ ಉಲ್ಲೇಖ: ಹಿಜಾಬ್ ಧರಿಸುವುದು ಇಸ್ಲಾಂನ ಅತ್ಯಗತ್ಯ ಧಾರ್ಮಿಕ ಆಚರಣೆ ಭಾಗವಾಗುತ್ತದೆಯೇ ಎಂಬ ವಿಚಾರವನ್ನೂ ಹೈಕೋರ್ಟ್ ಪರಿಶೀಲಿಸಲಿದೆ. ಅತ್ಯಗತ್ಯ ಧಾರ್ಮಿಕ ಆಚರಣೆ ಎಂದರೆ ಏನು ಎಂದು ವಿವರಿಸಲು ಡಾ:ಬಿ.ಆರ್.ಅಂಬೇಡ್ಕರ್ ಅವರ ಭಾಷಣವನ್ನು ಕೋರ್ಟ್ ಉಲ್ಲೇಖಿಸಿದೆ. ಪರದಾಪದ್ಧತಿಯ ಬಗ್ಗೆ ಅವರು ಹೇಳಿದ್ದು ಹಿಜಾಬ್‌ಗೂ ಅನ್ವಯವಾಗುತ್ತದೆ. ಪರದಾ, ವೇಲ್ ಅಥವಾ ಶಿರವಸ್ತ್ರ ಧರಿಸುವುದು ಯಾವುದೇ ಸಮುದಾಯದ ಮಹಿಳೆಯರಲ್ಲೂ ವಿಶೇಷವಾಗಿ ಮುಸ್ಲಿಂ ಮಹಿಳೆಯರ ಸ್ವಾತಂತ್ರ್ಯ ಅಥವಾ ವಿಮೋಚನೆಗೆ ಅಡ್ಡಿಯಾಗುತ್ತದೆ. ಹಾಗಾಗಿಯೇ ಸಂವಿಧಾನದಲ್ಲಿ ಸಮಾನ ಅವಕಾಶಗಳ ಮೂಲಕ ಸಾರ್ವಜನಿಕವಾಗಿ ಭಾಗಿಯಾಗುವುದರೊಂದಿಗೆ ಸಕಾರಾತ್ಮಕ ಜಾತ್ಯಾತೀತತೆಗೆ ಅವಕಾಶ ನೀಡಿದೆ. ಜೊತೆಗೆ ಅಂಬೇಡ್ಕರ್ ಭಾಷಣದಲ್ಲಿನ ಭಾರತದಲ್ಲಿ ಹುಟ್ಟಿನಿಂದ ಸಾವಿನವರೆಗೆ ಎಲ್ಲವನ್ನೂ ಧರ್ಮ ಆವರಿಸಿಕೊಂಡಿದೆ. ಹೀಗಾಗಿ ಧರ್ಮದ ವ್ಯಾಖ್ಯಾನವನ್ನು ಸೀಮಿತಗೊಳಿಸುವ ಅಗತ್ಯವಿದೆ. ಎಲ್ಲ ನಂಬಿಕೆ ಮತ್ತು ರಿವಾಜುಗಳನ್ನು ಧರ್ಮದ ಅತ್ಯಗತ್ಯ ಭಾಗ ಎನ್ನಬೇಕಿಲ್ಲ ಎಂಬ ಅಂಶ ಉಲ್ಲೇಖಿಸಿದೆ.

ಸಾಂವಿಧಾನಿಕ ಮೌಲ್ಯ–ಧಾರ್ಮಿಕ ಆಚರಣೆ: ಅತ್ಯಗತ್ಯ ಧಾರ್ಮಿಕ ಆಚರಣೆಗಳು ಸಾಂವಿಧಾನಿಕ ಮೌಲ್ಯಗಳಿಗೆ ಅನುಗುಣವಾಗಿಯೇ ಇರಬೇಕು. ಕಾನೂನು ಎನ್ನುವುದು ಬಿಳಿ ಹಾಳೆಯ ಮೇಲಿರುವ ಕಪ್ಪು ಶಾಯಿ ಅಲ್ಲ. ಯಾವುದೇ ವ್ಯಕ್ತಿ ಧಾರ್ಮಿಕ ಹಕ್ಕಿನ ಆಧಾರದಲ್ಲಿ ಏನನ್ನಾದರೂ ಕೋರುವಾಗ ತಾನು ಕೋರುತ್ತಿರುವ ಅಂಶ ಸಂವಿಧಾನದ ಆಶಯಗಳಿಗೆ ಅನುಗುಣವಾಗಿಯೇ ಇದೆ ಎಂಬುದನ್ನು ಸಾಬೀತುಪಡಿಸಬೇಕು. ಹಿಜಾಬ್ ಧರಿಸುವುದು ಸಾಂವಿಧಾನಿಕ ಮೌಲ್ಯಕ್ಕೆ ಅನುಗುಣವಾಗಿಲ್ಲ.

ಹಿಜಾಬ್ ಎಂದರೇನು: ವಿಚಾರಣೆ ವೇಳೆ ಹಿಜಾಬ್ ಎಂದರೇನು ಎಂಬ ಬಗ್ಗೆ ಅರ್ಜಿದಾರರು ಸಾಕಷ್ಟು ವಿವರ ನೀಡರಲಿಲ್ಲ. ಆದರೆ ನ್ಯಾಯಪೀಠವೇ ಮಾಹಿತಿ ಸಂಗ್ರಹಿಸಿ ಅದರ ಮೂಲದ ಬಗ್ಗೆ ಮಾಹಿತಿ ನೀಡಿದೆ. ಹಿಜಾಬ್ ಎಂದರೆ–ವೇಲ್, ಇದನ್ನು ಮುಸ್ಲಿಂ ಮಹಿಳೆಯರು ಧರಿಸುತ್ತಾರೆನ್ನುವುದು ನಿಜ. ಇದರ ಮೂಲ ಅರೇಬಿಕ್‌ನಲ್ಲಿ ಹಜಾಬ್ ವ್ಯುತ್ಪತ್ತಿಯ ಹೋಲಿಕೆಗೆ ಸಮಾನವಾದುದು. ಅಂದರೆ ಬಚ್ಚಿಡು, ಹಿಜಾಬ್ ಅನುವಾದಿಸಿದರೆ ವಿಭಜನೆ, ಪರದಾ ಎನ್ನಬಹುದು. ದೃಶ್ಯ ರೂಪದಲ್ಲಿ,

ಪ್ರಾದೇಶಿಕವಾಗಿ, ನೈತಿಕವಾಗಿ ಬೇರೆ ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು. ಹಿಜಾಬ್ ಎಂದರೆ ರಕ್ಷಿಸುವುದು. ಇದು ಮುಸ್ಲಿಂ ಮಹಿಳೆಯ ಧಾರ್ಮಿಕ ಗುರುತು ಎನ್ನಲಾಗುತ್ತಿದೆ.

ಕುರಾನ್‌ನಲ್ಲೂ ಉಲ್ಲೇಖವಿಲ್ಲ: ಕುರಾನ್‌ನಲ್ಲೂ ಎಲ್ಲೂ ಹಿಜಾಬ್ ಉಲ್ಲೇಖವಾಗಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಆದರೆ, ವಿಶ್ಲೇಷಣೆಕಾರರು ಅದನ್ನು ಸೇರಿಸಿದ್ದಾರೆ. ಭಾರತೀಯ ನ್ಯಾಯಶಾಸ್ತ್ರಜ್ಞ ಅಬ್ದುಲ್ಲಾ ಯೂಸೆಫ್ ಆಲಿ 59ನೇ ಸರದಲ್ಲಿ ನೀಳವಾದ ಗೌನ್ ಧರಿಸುವ ಬಗ್ಗೆ ಹೇಳಿದ್ದಾರೆ. ಆದರೆ, 53ನೇ ಪದ್ಯದಲ್ಲಿ ಮುಸ್ಲಿಂ ಮಹಿಳೆಯರು ಹಿಜಾಬ್(ಪರದಾ) ಧರಿಸುವ ಬಗ್ಗೆ ಉಲ್ಲೇಖವಿಲ್ಲ. ಎದೆಯ ಭಾಗವನ್ನು ಮುಚ್ಚಿಕೊಳ್ಳಲು ವೇಲ್ ಧರಿಸುತ್ತಿದ್ದರು. ಸುರಾದಲ್ಲಿ ಹಿಜಾಬ್ ಅಪೇಕ್ಷಿತ. ಆದರೆ ಕಡ್ಡಾಯವಲ್ಲ. ಕುರಾನ್‌ನಲ್ಲಿ ಹಿಜಾಬ್ ಧರಿಸುವುದು ಕಡ್ಡಾಯವೆಂದು ಹೇಳಿಲ್ಲ.

ಪಾಪಿಗಳಾಗುತ್ತಾರೆನ್ನುವುದಕ್ಕೆ ಪುರಾವೆಯಿಲ್ಲ: ಹಿಜಾಬ್ ಧರಿಸದವರು ಪಾಪಿಗಳಾಗುತ್ತಾರೆ. ಇಸ್ಲಾಂ ಸೋಲುತ್ತದೆ ಹಿಜಾಬ್ ಧರಿಸುವುದು ಇಸ್ಲಾಂನಲ್ಲಿ ಉಲ್ಲಂಘಿಸಲಾಗದ ಧಾರ್ಮಿಕ ಆಚರಣೆಯಾಗಿದೆ ಮತ್ತು ಧಾರ್ಮಿಕ ಅತ್ಯಗತ್ಯವೂ ಆಗಿದೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ ಎಂದು ನ್ಯಾಯಪೀಠ ಹೇಳಿದೆ.

'ಕಾಣದ ಶಕ್ತಿ'ಯ ಕೈವಾಡದ ತನಿಖೆ: ಉಡುಪಿಯ ಪಪೂ ಕಾಲೇಜು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿದೆ. 2004ರಿಂದಲೂ ಸಮವಸ್ತ್ರ ಅಥವಾ ವಸ್ತ್ರ ಸಂಹಿತೆ ಜಾರಿಯಲ್ಲಿದೆ. ಆದರೆ ಈ ಹಿಜಾಬ್ ವಿವಾದ ಏಕಾಏಕಿ ಹೇಗೆ ಶುರುವಾಯಿತು? ಅದೂ ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಎಂಬುದು ಅರ್ಥವಾಗುತ್ತಿಲ್ಲ. ಅದು ಹೇಗೆ ಕೈ ಮೀರಿ ಹೋಯಿತು? ಹಿಜಾಬ್ ವಿವಾದ ಇಷ್ಟು ದೊಡ್ಡ ಪ್ರಮಾಣದಲ್ಲಿ ಭುಗಿಲೇಳಲು ಸಾಮಾಜಿಕ ಶಾಂತಿ ಮತ್ತು ಸೌಹಾರ್ದತೆಯನ್ನು ಕದಡಲು ಕಾಣದ ಕೈಗಳು (ಅನ್ ಸೀನ್ ಹ್ಯಾಂಡ್ಸ್) ಕೆಲಸ ಮಾಡಿವೆ ಎಂಬ ವಾದವನ್ನು ಪುಷ್ಟೀಕರಿಸುತ್ತವೆ. ಅದನ್ನು ದೃಢೀಕರಿಸಲು ಹೆಚ್ಚು ಹೇಳಬೇಕಿಲ್ಲ. ಸದ್ಯ ನಡೆಯುತ್ತಿರುವ ಪೊಲೀಸ್ ತನಿಖೆಯ ಬಗ್ಗೆ ನಾವು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಅದರ ಪಾಡಿಗೆ ಅದು ಮುಂದುವರಿಯಲಿ. ನಾವು ಮೊಹರು ಮಾಡಿದ ಲಕೋಟೆಯಲ್ಲಿದ್ದ ದಾಖಲೆಗಳನ್ನು ಪರಿಶೀಲಿಸಿ ಅನಂತರ ವಾಪಸ್ ನೀಡಿದ್ದೇವೆ. ಈ ಕುರಿತು ಯಾವುದೇ ವಿಳಂಬಕ್ಕೆ ಆಸ್ಪದ ಕೊಡದೆ ಆದಷ್ಟು ಶೀಘ್ರ ಮತ್ತು ಪರಿಣಾಮಕಾರಿ ತನಿಖೆ ಪೂರ್ಣಗೊಳ್ಳಬೇಕು ಮತ್ತು ತಪ್ಪಿತಸ್ಥರನ್ನು ನ್ಯಾಯಕ್ಕೆ ಒಳಪಡಿಸಬೇಕು ಎಂದು ಪೀಠ ಹೇಳಿದೆ.

ವಾದ ಮಂಡಿಸಿದವರಾರು: ಸರ್ಕಾರದ ಪರ: ಪ್ರಭುಲಿಂಗ ನಾವದಗಿ, ಅಡ್ವೋಕೇಟ್ ಜನರಲ್, **ಸಹಕಾರ:** ಅರುಣ್ ಶ್ಯಾಮ್, ಹೆಚ್ಚುವರಿ ಅಡ್ವೋಕೇಟ್ ಜನರಲ್ **ಕಾಲೇಜಿನ ಪರ:**ಎಸ್.ಎಸ್. ನಾಗಾನಂದ್, **ಶಾಸಕ ರಘುಪತಿಭಟ್ ಪರ:** ಸಜನ್ ಪೂವಯ್ಯ, **ಅರ್ಜಿದಾರರ ಪರ ವಾದ:** ದೇವದತ್ ಕಾಮತ್, ಸಂಜಯ್ ಹೆಗ್ಡೆ, ಪ್ರೊ.ರವಿವರ್ಮ ಕುಮಾರ್, ಯೂಸೆಫ್ ಮುಚ್ಚಾಲ, ಎ.ಎಂ.ಧರ್.

ಕುರಾನ್‌ನಲ್ಲಿ ಸ್ಪಷ್ಟ ಉಲ್ಲೇಖ: ಹಿಜಾಬ್ ಸಂಬಂಧ ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ವಕ್ಫ್‌ಬೋರ್ಡ್ ಅಧ್ಯಕ್ಷ ಎನ್.ಕೆ.ಮೊಹಮ್ಮದ್ ಶಫಿ ಸ ಅದಿ ತಿಳಿಸಿದ್ದಾರೆ. ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಯಾವ ಆಧಾರದಲ್ಲಿ ತೀರ್ಪು ಕೊಟ್ಟಿದೆ ಎಂಬುದು ಗೊತ್ತಿಲ್ಲ. ಆದರೆ ಸಂವಿಧಾನಬದ್ಧವಾಗಿ ಕಾನೂನು ಹೋರಾಟ ಮಾಡಲಾಗುವುದು. ಹೆಣ್ಣುಮಕ್ಕಳು ಹಿಜಾಬ್ ಧರಿಸುವ ಬಗ್ಗೆ ಕುರಾನ್‌ನಲ್ಲಿ ಸ್ಪಷ್ಟ ಉಲ್ಲೇಖವಿದೆ ಎಂದು ತಿಳಿಸಿದ್ದಾರೆ.

ಎನ್‌ಐಎ ತನಿಖೆ ಕೋರಿದ್ದ ಅರ್ಜಿ ವಜಾ: ಹಿಜಾಬ್ ವಿವಾದಕ್ಕೆ ಪಿಎಫ್‌ಐ, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ಸ್ಟೂಡೆಂಟ್ ಇಸ್ಲಾಮಿಕ್ ಆರ್ಗನೈಜೇಷನ್ ಆಫ್ ಇಂಡಿಯಾ, ಜಮಾತೇ ಇಸ್ಲಾಮಿಯಾ ಮೊದಲಾದ ಮೂಲಭೂತ ಸಂಘಟನೆಗಳೇ ಕಾರಣ, ಆ ಬಗ್ಗೆ ಎನ್‌ಐಎ ಅಥವಾ ಸಿಬಿಐ

ತನಿಖೆ ನಡೆಸಬೇಕೆಂದು ಕೋರಿ ಘನಶ್ಯಾಮ್ ಉಪಾಧ್ಯಾಯ ಸಲ್ಲಿಸಿದ್ದ ಅರ್ಜಿ ವಜಾ ಮಾಡಲಾಗಿದೆ. ಹುಬ್ಬಳ್ಳಿಯ ವೈದ್ಯ ಡಾ:ವಿನೋದ್ ಕುಲಕರ್ಣಿ, ಹಿಜಾಬ್‌ಗೆ ಅವಕಾಶ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನೂ ಸಹ ನ್ಯಾಯಾಲಯ ತಿರಸ್ಕರಿಸಿದೆ.

ತೀರ್ಪು ಸ್ವಾಗತಿಸಿದ ಎಜಿ ನಾವದಗಿ: "ಹಿಜಾಬ್ ಧರಿಸುವುದು ನಿರ್ಬಂಧಿಸಿರುವ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದಿರುವ ಹೈಕೋರ್ಟ್ ತೀರ್ಪು ಸ್ವಾಗತಾರ್ಹ ಎಂದು ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ಹೇಳಿದ್ದಾರೆ. ನಮ್ಮ ವಾದವನ್ನು ನ್ಯಾಯಪೀಠ ಸಾಂವಿಧಾನಿಕವಾಗಿ ಎತ್ತಿ ಹಿಡಿದಿದೆ. ತೀರ್ಪಿನಲ್ಲಿ ನಾಲ್ಕು ಪ್ರಮುಖ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆ. ಹಿಜಾಬ್ ಅತ್ಯವಶ್ಯಕ ಆಚರಣೆ ಅಲ್ಲ ಎಂದು ಹೇಳಿರುವ ನ್ಯಾಯಾಲಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಮವಸ್ತ್ರ ಕೆಲವೊಂದು ನಿರ್ಬಂಧಗಳನ್ನು ವಿಧಿಸಬಹುದೆಂದು ವಿವಾದಕ್ಕೆ ತೆರೆ ಎಳೆದಿದೆ. ಯಾವುದಾದರೂ ಒಂದು ಆಚರಣೆ ಅತ್ಯಗತ್ಯ ಆಚರಣೆ ಅನ್ನಬೇಕಾದರೆ ಅದಕ್ಕೆ ಪುರಾವೆ ಕೊಡಬೇಕಾಗುತ್ತದೆ. ಅದನ್ನೂ ಗಣನೆಗೆ ತೆಗೆದುಕೊಂಡು ಪುರಾವೆ ನೀಡದ ಹಿನ್ನೆಲೆಯಲ್ಲಿ ಈ ಪ್ರಕರಣ ವಜಾಗೊಳಿಸಲಾಗಿದೆ ಎಂದು ಅವರು ಹೇಳಿದರು.

ಅರ್ಜಿದಾರರ ವಾದ ಏನಾಗಿತ್ತು: ಸರ್ಕಾರದ ಸಮವಸ್ತ್ರ ಆದೇಶ ಸಂಪೂರ್ಣ ಕಾನೂನುಬಾಹಿರ ಸಂವಿಧಾನದ 25(1)ನೇ ವಿಧಿಯಡಿ ನೀಡಲಾದ ಧಾರ್ಮಿಕ ಸ್ವಾತಂತ್ರ್ಯ ರಕ್ಷಣೆಯ ಹೊಣೆ, ಕಾಲೇಜು ಅಭಿವೃದ್ಧಿ ಸಮಿತಿಗೆ ನೀಡಿರುವುದು ಸಂವಿಧಾನ ವಿರೋಧಿ.

ಹಿಜಾಬ್ ಧರಿಸುವುದು ಇಸ್ಲಾಂ ಧರ್ಮದ ಅತ್ಯಗತ್ಯ ಆಚರಣೆ ಸಂವಿಧಾನ ನೀಡಿರುವ ಸ್ವಾತಂತ್ರ್ಯವನ್ನು ಸಾರ್ವಜನಿಕ ಸುವ್ಯವಸ್ಥೆ ನೈತಿಕತೆ ಆರೋಗ್ಯದ ವಿಚಾರವಿದ್ದರೆ ಮಾತ್ರ ಸರ್ಕಾರ ನಿರ್ಬಂಧಿಸಬಹುದು. ಆದರೆ, ಸಂವಿಧಾನದ 19(1)(ಎ), 25(1) ಅಡಿ ಲಭ್ಯವಿರುವ ಹಕ್ಕು ಸಾರ್ವಜನಿಕ ಸುವ್ಯವಸ್ಥೆ ಹೆಸರಲ್ಲಿ ದಮನ ಸಲ್ಲ.

ಕುರಾನ್ ಪ್ರಕಾರ ಹಿಜಾಬ್ ಧರಿಸುವುದು ಕಡ್ಡಾಯ ಇಸ್ಲಾಂ ಧರ್ಮಕ್ಕೂ ಮುನ್ನವೇ ಹಿಜಾಬ್ ಚಾಲ್ತಿಯಲ್ಲಿತ್ತು. ಹಾಗಾಗಿ ಕುರಾನ್‌ನಲ್ಲಿ ಮಹಿಳೆಯರು ಹಿಜಾಬ್ ಧರಿಸಲೇಬೇಕೆಂಬ ಉಲ್ಲೇಖವಿದೆ. ಕೇಂದ್ರೀಯ ವಿದ್ಯಾಲಯಗಳಲ್ಲಿ ಈಗಲೂ ಹಿಜಾಬ್‌ಗೆ ಅವಕಾಶವಿದೆ.

ಸರ್ಕಾರದ ಪ್ರತಿವಾದ ಹೇಗಿತ್ತು: ಹಿಜಾಬ್ ಇಸ್ಲಾಂ ಧಾರ್ಮಿಕ ಆಚರಣೆಯ ಭಾಗವಲ್ಲ. ಶಬರಿಮಲೆ ಮತ್ತು ತ್ರಿವಳಿ ತಲಾಕ್ ಪ್ರಕರಣದಲ್ಲಿ ಸುಪ್ರೀಂ ನೀಡಿರುವ ತೀರ್ಪಿನಂತೆ, ಅದು ಸಂವಿಧಾನದ ನೈತಿಕತೆ ಹಾಗೂ ವೈಯಕ್ತಿಕ ಘನತೆ ಪರೀಕ್ಷೆಯಲ್ಲಿ ಪಾಸಾಗಬೇಕು.

ಹಿಜಾಬ್ ನಿರ್ಬಂಧದಿಂದ ಸಂವಿಧಾನದ ಕಲಂ 19(1)ರ ಪ್ರಕಾರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ದಕ್ಕೆಯಿಲ್ಲ. ಶಾಲಾಭಿವೃದ್ಧಿ ಮಂಡಳಿಗಳಿಗೆ ಸಮವಸ್ತ್ರ ನಿಗದಿ ಅಧಿಕಾರ ನೀಡಿ ಹೊರಡಿಸಿರುವ ಆದೇಶ ಸಂವಿಧಾನ ಬದ್ಧವಾಗಿದೆ.

ಹಿಜಾಬ್ ಧಾರಣೆ ಇಸ್ಲಾಂ ಧಾರ್ಮಿಕ ಹಕ್ಕಲ್ಲ ಮತ್ತು ಸಂವಿಧಾನದ 25(1) ಪರಿಪೂರ್ಣ ಹಕ್ಕಲ್ಲ. ಸರ್ಕಾರ ಕಾನೂನು ಮೂಲಕವೂ ಅದನ್ನು ನಿರ್ಬಂಧಿಸಬಹುದು.

ಹಿಜಾಬ್ ಕಡ್ಡಾಯ ಆಚರಣೆ ಎಂದು ಅರ್ಜಿದಾರರು ದೃಢಪಡಿಸಬೇಕು. ಆದರೆ, ಅರ್ಜಿದಾರರು ಅಂಥ ಯಾವುದೇ ದಾಖಲೆ ನೀಡಿಲ್ಲ. ಹಿಜಾಬ್ ಹಾಕದಿರುವುದೂ ಕೂಡ ಮುಸ್ಲಿಂ ಮಹಿಳೆಯರ ಅಭಿವ್ಯಕ್ತಿ ಸ್ವಾತಂತ್ರ್ಯ. ಹೀಗಾಗಿ, ಅವರ ವಾದದ ಪ್ರಕಾರವೇ ಹಿಜಾಬ್ ಕಡ್ಡಾಯವಲ್ಲ, ಆಯ್ಕೆ ಎಂದಾಗುತ್ತದೆ.

ಪೀಠ ಎತ್ತಿರುವ 4ಪ್ರಶ್ನೆ, ಉತ್ತರ:

- ಸಂವಿಧಾನದ ಪರಿಚ್ಛೇದ 25ರಡಿಯಲ್ಲಿ ರಕ್ಷಿಸಿದಂತೆ ಹಿಜಾಬ್ ಧಾರಣೆಯು ಇಸ್ಲಾಂ ಧಾರ್ಮಿಕ ನಂಬಿಕೆಯ ಅತ್ಯಗತ್ಯ ಆಚರಣೆಯ ಭಾಗವೇ?
- ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸುವುದು ಇಸ್ಲಾಂ ಧಾರ್ಮಿಕ ನಂಬಿಕೆಯ ಅಗತ್ಯ ಆಚರಣೆಯ ಭಾಗವಲ್ಲ. ಕುರಾನ್‌ನಲ್ಲಿ ಹಿಜಾಬ್ ಧರಿಸುವುದು ಕಡ್ಡಾಯಪಡಿಸಿಲ್ಲ. ಆ ಬಗ್ಗೆ ಯಾವುದೇ ಪ್ರಸ್ತಾಪವೂ ಇಲ್ಲ. ಕುರಾನ್‌ನ 256ನೇ ವಚನ ಧರ್ಮದಲ್ಲಿ ಒತ್ತಾಯ ಬೇಡವೆಂದು ಹೇಳಿದೆ. ಧರ್ಮ ನಂಬಿಕೆ ಹಾಗೂ ಇಚ್ಛೆಯ ಮೇಲೆ ನಿಂತಿದೆ. ಬಲವಂತದಿಂದ ಹೇರಿದರೆ ಅರ್ಥಹೀನವೆಂದು ಹೇಳಿದೆ. ಕುರಾನ್‌ನಲ್ಲಿ ಹಿಜಾಬ್ ಧರಿಸುವುದು ಕಡ್ಡಾಯವೆಂದು ಹೇಳಿಲ್ಲ. ಸುರಾದಲ್ಲಿ ಹಿಜಾಬ್ ಅಪೇಕ್ಷಿತ, ಆದರೆ, ಕಡ್ಡಾಯವಲ್ಲ ಎಂದಿದೆ.
- ಶಾಲಾ ಸಮವಸ್ತ್ರ ನಿಗದಿಯೂ ಕಾನೂನಿನಲ್ಲಿ ಅನುಮತಿಸಲು ಸಾಧ್ಯವಿಲ್ಲವೇ? ಸಂವಿಧಾನದ ಪರಿಚ್ಛೇದ 19(1) ಮತ್ತು 21ರಡಿ ಅರ್ಜಿದಾರರಿಗೆ ಸಂವಿಧಾನಬದ್ಧವಾಗಿ ಲಭ್ಯವಿರುವ ಮೂಲಭೂತ ಹಕ್ಕುಗಳಲ್ಲಿ ಒಂದಾದ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಖಾಸಗಿತನದ ಉಲ್ಲಂಘನೆಯೇ?
- ಶಾಲಾ ಸಮವಸ್ತ್ರದ ನಿಗದಿಯು ಸಾಂವಿಧಾನಿಕವಾಗಿ ಅನುಮತಿಸುವ ಸಮಂಜಸವಾದ ನಿರ್ಬಂಧವಾಗಿದೆ. ಸರ್ಕಾರಕ್ಕೆ ಅಂಥ ನಿರ್ಬಂಧಗಳನ್ನು ಹೇರುವ ಅಧಿಕಾರವೂ ಇದೆ. ಅದನ್ನು ವಿದ್ಯಾರ್ಥಿಗಳು ವಿರೋಧಿಸಲು ಸಾಧ್ಯವಿಲ್ಲ. ಸಮವಸ್ತ್ರ ನಿಗದಿಯಿಂದ ವಿದ್ಯಾರ್ಥಿಗಳ ಮೂಲಭೂತ ಮತ್ತು ಧಾರ್ಮಿಕ ಹಕ್ಕುಗಳಿಗೆ ಧಕ್ಕೆಯಾಗದು.
- ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ನಿಗದಿಪಡಿಸಿರುವ ಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸತಕ್ಕದ್ದು, ಖಾಸಗಿ ಶಾಲೆಗಳು ತಮ್ಮ ಆಡಳಿತ ಮಂಡಳಿಗಳು ನಿರ್ಧರಿಸುವಂಥ ಸಮವಸ್ತ್ರವನ್ನೇ ಧರಿಸತಕ್ಕದ್ದು ಎಂದು ನಿರ್ದೇಶಿಸಿ ಫೆಬ್ರವರಿ 5 ರಂದು ಸರ್ಕಾರ ಹೊರಡಿಸಿರುವ ಆದೇಶ ವಿವೇಚನಾ ರಹಿತ ಮತ್ತು ಏಕಪಕ್ಷೀಯವಾಗಿದೆಯೇ? ಆದೇಶ ಹೊರಡಿಸಲು ಸರ್ಕಾರಕ್ಕೆ ಅಧಿಕಾರವೇ ಇಲ್ಲವೇ? ಈ ಆದೇಶ ಸಂವಿಧಾನದ ಪರಿಚ್ಛೇದ 14 ಮತ್ತು 15ರ ಉಲ್ಲಂಘನೆಯೇ?
- ಫೆಬ್ರವರಿ 5ರ ಅದೇಶವನ್ನು ಹೊರಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಆ ಆದೇಶವನ್ನು ಅಸಿಂಧುಗೊಳಿಸುವ ಅಗತ್ಯವನ್ನು ಸೂಕ್ತ ಪುರಾವೆಗಳೊಂದಿಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿಲ್ಲ.
- ಆಯೆಷಾ ಹಜೀರಾ ಅಲ್ಮಾಸ್ ಸೇರಿ ಐವರು ಮುಸ್ಲಿಂ ವಿದ್ಯಾರ್ಥಿನಿಯರ ಅರ್ಜಿಯಲ್ಲಿ 6 ರಿಂದ 14ನೇ ಖಾಸಗಿ ಪ್ರತಿವಾದಿಗಳಾಗಿರುವ ಉಡುಪಿ ಬಾಲಕಿಯರ ಪಿಯು ಕಾಲೇಜಿನ ಪ್ರಾಂಶುಪಾಲರು, 6 ಉಪನ್ಯಾಸಕರು ಮತ್ತು ಒಬ್ಬ ಶಿಕ್ಷಕರ ವಿರುದ್ಧ ಶಿಸ್ತು ಕ್ರಮಕ್ಕಾಗಿ ವಿಚಾರಣೆ ನಡೆಸಲು ಸರ್ಕಾರಕ್ಕೆ ಆದೇಶಿಸಬೇಕೇ? ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಉಡುಪಿ ಶಾಸಕ ರಘುಪತಿಭಟ್ ಮತ್ತು ಸಮಿತಿ ಉಪಾಧ್ಯಕ್ಷ ಯಶ್‌ಪಾಲ್ ಆನಂದ್ ಸುವರ್ಣರನ್ನು ಹುದ್ದೆಯಿಂದ ವಜಾಗೊಳಿಸಲು ಆದೇಶಿಸಬೇಕೇ?
- ಪ್ರತಿವಾದಿಗಳಾದ ಪ್ರಾಂಶುಪಾಲರು, ಆರು ಉಪನ್ಯಾಸಕರು ಮತ್ತು ಒಬ್ಬ ಶಿಕ್ಷಕರ ವಿರುದ್ಧ ಶಿಸ್ತು ಕ್ರಮಕ್ಕಾಗಿ ವಿಚಾರಣೆ ನಡೆಸಲು ಮತ್ತು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ, ಉಪಾಧ್ಯಕ್ಷರನ್ನು

ಹುದ್ದೆಯಿಂದ ವಜಾಗೊಳಿಸುವ ಅಗತ್ಯತೆಯನ್ನು ಸೂಕ್ತ ದಾಖಲೆಗಳೊಂದಿಗೆ ಸಾಬೀತುಪಡಿಸಿಲ್ಲ. ಈ ಕುರಿತ ಮನವಿ ಮಾನ್ಯತೆ ಹೊಂದಿಲ್ಲ. ಆ ಕಾರಣ ಮನವಿ ತಿರಸ್ಕರಿಸಲಾಗುತ್ತಿದೆ.

ವಿವಾದದ ಹಿನ್ನೆಲೆ ಏನು?

- ಹಿಜಾಬ್ ಮುಸ್ಲಿಂ ಹೆಣ್ಣುಮಕ್ಕಳ ಮೂಲಭೂತ ಹಕ್ಕು ಅದರ ನಿಷೇಧ ಸಾಂವಿಧಾನಿಕ ಪರಿಚ್ಛೇದ 25(1) ಉಲ್ಲಂಘನೆ ಹಿಜಾಬ್ ಧರಿಸಿ ತರಗತಿಗೆ ಹಾಜರಾಗಲು ಅನುಮತಿ ನೀಡಿ ಆದೇಶಿಸಬೇಕು ಎಂದು ಕೋರಿ ಮುಸ್ಲಿಂ ವಿದ್ಯಾರ್ಥಿನಿಯರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.
- ನ್ಯಾಯಮೂರ್ತಿ ಕೃಷ್ಣದೀಕ್ಷಿತ್ ಅವರಿದ್ದ ಏಕಸದಸ್ಯಪೀಠ ಸುದೀರ್ಘ ವಾದ ಆಲಿಸಿತ್ತು. ಪ್ರಕರಣದಲ್ಲಿ ಸಾಂವಿಧಾನಿಕ ಅಂಶಗಳು ಒಳಗೊಂಡಿರುವ ಹಿನ್ನೆಲೆಯಲ್ಲಿ ವಿಸ್ತೃತ ಪೀಠದ ವಿಚಾರಣೆ ಸೂಕ್ತವೆಂದು ಅಭಿಪ್ರಾಯಪಟ್ಟಿತ್ತು. ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾಯಮೂರ್ತಿ ಜಿ.ಎಂ.ಖಾಜಿ ಅವರನ್ನು ಒಳಗೊಂಡ ಪೂರ್ಣ ಪೀಠ ರಚನೆಯಾಗಿತ್ತು.

ಆಧಾರ:–ವಿಜಯ ಕರ್ನಾಟಕ, ದಿನಾಂಕ:16.03.2022

9. ಪುರುಷನಿಗೆ ಮಹಿಳೆಯೇ ಆತ್ಮವಿಶ್ವಾಸದ ಮೂಲ

ಪ್ರಕೃತಿಯ ವಿಶೇಷ ಸೃಷ್ಟಿಯೇ ಮಹಿಳೆ. ಮಹಿಳೆ ದೇವತೆಯ ಸ್ವರೂಪಿ. ನಮಗೆಲ್ಲ ಜೀವಕೊಟ್ಟು ಪೊರೆದ ಮಹಾತಾಯಿ ಮಹಿಳೆ ಎಂಬುದು ನಮಗೆಲ್ಲ ಸದಾ ನೆನಪಿರಬೇಕಿದೆ. ಎಲ್ಲಿ ಮಹಿಳೆಯರನ್ನು ಗೌರವಿಸಲಾಗುತ್ತದೆಯೋ ಅಲ್ಲಿ ದೇವತೆ ಸದಾ ನೆಲೆಸಿರುತ್ತಾಳೆ, ಎಲ್ಲಿ ಮಹಿಳೆಗೆ ಗೌರವ ದೊರೆಯುವುದಿಲ್ಲವೋ ಅಲ್ಲಿ ಎಲ್ಲ ಪೂಜೆ, ಪ್ರಯತ್ನಗಳೂ ವ್ಯರ್ಥ ಎಂಬುದನ್ನು ನಾವೆಲ್ಲಾ ಕೇಳಿದ್ದೇವೆ. ಅದು ಮನೆಯಿರಲಿ, ಕಛೇರಿಯಿರಲಿ, ಮಹಿಳೆಗೆ ಗೌರವ ದೊರೆತರೆ ಅಲ್ಲಿ ಸದಾ ಸಮೃದ್ಧಿ, ಸಮಾಧಾನ, ಸಂತೃಪ್ತಿ ನೆಲೆಸಿರುತ್ತದೆ.

ಇಂದು ಮಹಿಳೆಯರು ತಂದೆ, ಪತಿ, ಮಕ್ಕಳನ್ನು ತಾವೇ ಸಾಕುವ ಮಟ್ಟಕ್ಕೆ ಬೆಳೆದು ನಿಂತಿದ್ದಾರೆ. ಅವರು ಪುರುಷರಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವುದು ರುಜುವಾತಾಗುತ್ತಲೇ ಇದೆ. ಆಕೆ ಮಹಿಳೆ ಸ್ವಾಭಿಮಾನಿಯೂ ಹೌದೂ. ಕೆಲಸದ ಅಚ್ಚುಕಟ್ಟುತನದಲ್ಲಿ ಮಹಿಳೆಯರು ಪುರುಷರಿಗಿಂತ ಒಂದು ಕೈ ಮೇಲೆಯೇ ಇದ್ದಾರೆಂದರೆ ತಪ್ಪಾಗಲಾರದು. ತಮಗೆ ವಹಿಸಿದ ಕೆಲಸವನ್ನು ಮಹಿಳೆಯರು ನಿಗದಿತ ಸಮಯದಲ್ಲಿ ಮಾಡಿ ಮುಗಿಸುವುದಕ್ಕೆ ಹೆಸರಾಗಿದ್ದಾರೆ. ಶಾಲಾ ಫಲಿತಾಂಶದಲ್ಲೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸುತ್ತಿದ್ದಾರೆ. ಮಹಿಳೆಯರಲ್ಲಿ ಏಕಾಗ್ರತೆ, ಧೈರ್ಯ, ಆತ್ಮವಿಶ್ವಾಸ, ಬದ್ಧತೆ ಪುರುಷರಿಗಿಂತ ಹೆಚ್ಚು ಆ ಹಿನ್ನೆಲೆಯೇ ಮಹಿಳೆಯರು ಎಂತಹ ಕಷ್ಟ ಬಂದರೂ ಎದುರಿಸಿ ಧೈರ್ಯದಿಂದ ಬದುಕನ್ನು ಸಾಧಿಸಿ ತೋರಿಸಿದ್ದಾರೆ. ಜೊತೆಯಲ್ಲಿ ಮಹಿಳೆಯಿಲ್ಲದಿದ್ದರೆ ಪುರುಷನಿಗೆ ಧೈರ್ಯವೇ ಇರದು. ಪುರುಷನಿಗೆ ಮಹಿಳೆಯೇ ಆತ್ಮವಿಶ್ವಾಸ.

ಕೊರೋನದಂತಹ ವಿಷಮ ಕಾಲಘಟ್ಟದಲ್ಲಿ ಇಡೀ ವಿಶ್ವದಲ್ಲಿ ವೈದ್ಯೆಯರು, ಶುಶ್ರೂಷಕಿಯರು ಸೇರಿದಂತೆ ಆರೋಗ್ಯ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಇಡೀ ಲೋಕವೇ ಮೆಚ್ಚುವ ಹಾಗೆ ಕೆಲಸ ಮಾಡಿ ತಮ್ಮ ಸಾಮರ್ಥ್ಯ ಪ್ರಸ್ತುತ ಪಡಿಸಿದರು. ಕೊರೋನಾ ಸೋಂಕು ಹರಡಿದ್ದ ಕಂಟೈನ್ ಮೆಂಟ್ ವಲಯಗಳಲ್ಲೂ ನಮ್ಮ 'ಆಶಾ ಕಾರ್ಯಕರ್ತೆ'ಯರು ಮನೆಮನೆಗೆ ಹೋಗಿ ಅಂಕಿಅಂಶ ಸಂಗ್ರಹಿಸಿ ತಮ್ಮ ಮುಂದಾಳತ್ವವನ್ನು ಪ್ರದರ್ಶಿಸಿದರು. ಗ್ರಾಮ ಪಂಚಾಯಿತಿಗಳಿಗೆ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿದ್ದಾರೆ. ಅಷ್ಟೇ ಸಂಖ್ಯೆಯಲ್ಲಿ ಪಂಚಾಯಿತಿಗಳ ಅಧ್ಯಕ್ಷ ಉಪಾಧ್ಯಕ್ಷರೂ ಆಗಿ ಗ್ರಾಮೀಣ ಜನರ ನಾಯಕತ್ವ ವಹಿಸಿಕೊಂಡಿದ್ದಾರೆ.

ತಾಯಿಯಾಗಿ, ಸಹೋದರಿಯಾಗಿ, ಪತ್ನಿಯಾಗಿ ಸದಾ ಮಾರ್ಗದರ್ಶಕಳಾಗಿರುವ ಮಹಿಳೆಯನ್ನು ಗೌರವಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳೆಯರ ವಿವಾಹದ ಕನಿಷ್ಠ ವಯಸ್ಸನ್ನು 21 ವರ್ಷಕ್ಕೆ ಹೆಚ್ಚಿಸಲು ನಿರ್ಧರಿಸಿತು. ಇದು ನಿಜಕ್ಕೂ ಸ್ವಾಗತರ್ಹ ವಿಷಯ. ಇದು ಮಹಿಳೆಯನ್ನು ಸಬಲೀಕರಣಗೊಳಿಸುವ ಕ್ರಮವೇ. ಇದು ಒಂದು ರೀತಿಯಲ್ಲಿ ಮಹಿಳೆಯ ಬೌದ್ಧಿಕತೆಯನ್ನು ಗೌರವಿಸುವ ವಿಚಾರ. ಒಂದು ನಿರ್ಧಾರವನ್ನು ಗಟ್ಟಿಯಾಗಿ ತೆಗೆದುಕೊಳ್ಳುವಲ್ಲಿ ಮನಸ್ಸನ್ನು ಪಕ್ವಗೊಳಿಸುವಂತಹದು. ಇಂತಹ ನಿರ್ಧಾರಗಳು ಮುಂದಿನ ದಿನಗಳಲ್ಲಿ ಕ್ರಾಂತಿಯನ್ನೇ ಉಂಟು ಮಾಡಲಿವೆ ಎಂಬುದರಲ್ಲಿ ಸಂದೇಹವಿಲ್ಲ.

ಕೇಂದ್ರದ ಬಿಜೆಪಿ ಸರ್ಕಾರ ಮುಸ್ಲಿಮರಲಿದ್ದ ತ್ರಿವಳಿ ತಲಾಕ್ ಪದ್ಧತಿಗೆ ಇತಿಶ್ರೀ ಹಾಡಿದ್ದೂ ಪ್ರಗತಿಪರ ವಿಚಾರವೇ ಹೌದು. ಇದರಿಂದ ಮಹಿಳೆಯರಿಗೆ ಒಂದು ಶಕ್ತಿಯನ್ನು ಕೊಟ್ಟಂತಾಗಿದೆ. ಮಹಿಳಾ ಸಬಲೀಕರಣ ಎಂದರೆ ಸಮಾಜವನ್ನು ಸಬಲಗೊಳಿಸುವ ಪ್ರಕ್ರಿಯೆ ಎಂಬುದು ನಮ್ಮ ಸಮಾಜದ ವಿಶ್ವಾಸ. ಇದು ಮುಸ್ಲಿಂ ಮಹಿಳೆಯರಲ್ಲಿ ಸಮಾಧಾನದೊಂದಿಗೆ ಬದುಕಿನ ಭರವಸೆ ಮೂಡಿಸಿದೆ. ಪ್ರಧಾನ ಮಂತ್ರಿಯವರ ಘೋಷಣೆಯಾದ ಭೇಟಿ ಬಚಾವೋ–ಬೇಟಿ ಪಡಾವೋ ಕಾರ್ಯಕ್ರಮವು ಈ ಸಾಲಿಗೆ ಸೇರುವಂತದ್ದು. ಹೆಣ್ಣುಮಕ್ಕಳಲ್ಲಿ ನಾವು ಸಮಾಜದಲ್ಲಿ ಸುರಕ್ಷಿತರಾಗಿದ್ದೇವೆ ಎಂಬ ಭಾವನೆ ಮೂಡುವ ಕಾರ್ಯಕ್ರಮಗಳು ಹೆಚ್ಚಾಗಿ ಜಾರಿಗೊಳ್ಳಬೇಕಿದೆ.

ಪ್ರಧಾನಿ ನರೇಂದ್ರ ಮೋದಿಯವರು ಮಹಿಳೆಯರ ಸುರಕ್ಷತೆ ಹಾಗೂ ಸಮಾಧಾನ ಕುರಿತು ಭರವಸೆ ಮೂಡಿಸುವ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಹಳ್ಳಿಗಾಡಿನ ಮಹಿಳೆಯರು ಒಲೆ ಊದಿ ಊದಿ ಹೊಗೆಯಿಂದ ರೋಗಗ್ರಸ್ತರಾಗುತ್ತಿದ್ದುದ್ದನ್ನು ಮನಗಂಡು 'ಉಜ್ವಲ' ಯೋಜನೆ ಮೂಲಕ ದೇಶದ ಎಲ್ಲ ಮನೆಗಳಿಗೂ ಅನಿಲ ಸಿಲಿಂಡರ್ ಸಮೇತ ಒಲೆ ಒದಗಿಸುವ ಕಾರ್ಯಕ್ರಮ ಜಾರಿಗೊಳಿಸಿದ್ದಾರೆ. ಗರ್ಭಿಣಿಯರು ಮತ್ತು ಬಾಣಂತಿಯರು ಕೆಲಸಕ್ಕೆ ಹೋಗದ ಸಮಯದಲ್ಲಿ ಅವರಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರ 'ಪ್ರಧಾನಿಮಂತ್ರಿ ಮಾತೃ ವಂದನಾ' ಯೋಜನೆ ಜಾರಿಗೊಳಿಸಿದೆ. ಅಪೌಷ್ಟಿಕತೆ ಕುರಿತು ಜಾಗೃತಿ ಮೂಡಿಸಿ ಅವರಿಗೆ ನೆರವಾಗಲು 'ಪೋಷಣಾ ಅಭಿಯಾನ' ಜಾರಿಗೊಳಿಸಲಾಗಿದೆ.

ಭಾರತೀಯ ಸೇನೆಯ ನೌಕಾಪಡೆಯಲ್ಲಿ ಮಹಿಳಾ ಅಧಿಕಾರಿಗಳಿಗೆ ಕಮೀಷನ್ ಹುದ್ದೆಗಳಂತಹ ಹಿರಿಯ ಸ್ಥಾನಗಳನ್ನು ಇದೇ ಮೊದಲ ಬಾರಿಗೆ ಒದಗಿಸಲು ಸರ್ಕಾರ ನೀಡಿದೆ. ಶಾರ್ಟ್ ಸರ್ವೀಸ್ ಕಮೀಷನ್–ಎಸ್‌ಎಸ್‌ಸಿಯಿಂದ ನೇಮಕಗೊಂಡ ಮಹಿಳಾ ಅಧಿಕಾರಿಗಳಿಗೆ ಭಾರತೀಯ ಸೇನೆಯ ಎಲ್ಲ 10 ಶಾಖೆಗಳಲ್ಲೂ ಕಮೀಷನ್ ಹುದ್ದೆಗಳನ್ನು ಅಲಂಕರಿಸುವ ಅವಕಾಶ ಕಲ್ಪಿಸಿದೆ. ಹಾಗೆಯೇ ಮಹಿಳೆಯರ ಬದುಕಿಗೆ ಆಸರೆಯಾಗುವ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸುವ ಮಹಿಳೆಯರ ಆರ್ಥಿಕ ಚೈತನ್ಯ ವೃದ್ಧಿ, ಸ್ವಾವಲಂಬಿ ಬದುಕಿನ ಭರವಸೆ ತುಂಬಿದ್ದಾರೆ. ನಾರಿ ಶಕ್ತಿ ಪುರಸ್ಕಾರ, ಮಹಿಳಾ ಕೈಗಾರಿಕೋದ್ಯಮಿಗಳಿಗೆ ನೆರವು ನೀಡುವ ಸ್ಟ್ಯಾಂಡ್ ಅಪ್–ಇಂಡಿಯಾ ಯೋಜನೆ, ಮಹಿಳಾ–ಇಹಾತ್ ಯೋಜನೆ, ನಿರ್ಭಯ ಫಂಡ್‌ನಿಂದ ಒನ್ ಸ್ಟ್ಯಾಂಡ್ ಸೆಂಟ್ರಿಕ್ ಸ್ಕೀಂ–ಶಕ್ತಿ ಯೋಜನೆ, ಈ–ಸಂವಾದ ಯೋಜನೆ, ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ಯೋಜನೆ ಸೇರಿದಂತೆ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ಪ್ರದೇಶದ ಸಾಧಕಿಯರಾದ ತುಳಸೀಗೌಡ, ಮಂಜಮ್ಮ ಜೋಗತಿಯಂತಹ ಮಹಿಳೆಯರನ್ನು ಗುರುತಿಸಿ ಪದ್ಮಶ್ರೀಯಂತಹ ರಾಷ್ಟ್ರದ ಅತ್ಯುನ್ನತ ನಾಗರೀಕ ಪ್ರಶಸ್ತಿಗಳನ್ನು ನೀಡಿದ ಹೆಗ್ಗಳಿಕೆ.

ಈ ವರ್ಷದ ಆಯವ್ಯಯದಲ್ಲಿ ನಮ್ಮ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರೂ ಮಹಿಳೆಯರ ಕುರಿತ ಯೋಜನೆಗಳನ್ನು ಘೋಷಿಸಿದ್ದಾರೆ. ರಾಜ್ಯದಲ್ಲಿ ನೂತನ ಕೆಎಸ್‌ಆರ್‌ಪಿ ಮಹಿಳಾ ಕಂಪನಿಯೊಂದನ್ನು ಸ್ಥಾಪಿಸಲಾಗುವುದೆಂದು ಪ್ರಕಟಿಸಿದ್ದಾರೆ. ರಾಜ್ಯ ಸರ್ಕಾರ ರಾಜ್ಯದಲ್ಲಿ ಬೃಹತ್

ಪ್ರಮಾಣದಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶ ಸೃಷ್ಟಿಸಲು ಒತ್ತು ನೀಡಿದೆ. ಈ ನಿಟ್ಟಿನಲ್ಲಿ 2022–23ನೇ ಸಾಲಿನಲ್ಲಿ ಒಟ್ಟಾರೆಯಾಗಿ ರೂ.43,188 ಕೋಟಿ ಅನುದಾನ ಒದಗಿಸಲಾಗಿದೆ. ಶಿಶುಪಾಲನಾ ಕೇಂದ್ರಗಳ ಸ್ಥಾಪನೆ, ಅಂಗನವಾಡಿ/ಆಶಾ ಕಾರ್ಯಕರ್ತೆಯರ ಸಂಭಾವನೆ ಹೆಚ್ಚಳ, ಹೆಣ್ಣು ಮಕ್ಕಳ ಅನುಪಾಲನಾ ಗೃಹಗಳನ್ನು ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ ವಸತಿ ನಿಲಯಗಳನ್ನು ಪ್ರಾರಂಭಿಸಲಾಗುವುದು.

ಹೆಣ್ಣುಮಕ್ಕಳಿಗೆ ಬಾಲ್ಯದಲ್ಲೇ ಆತ್ಮರಕ್ಷಣೆ ಕಲಿಸಲು ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸಮಾಜಕಲ್ಯಾಣ ಇಲಾಖೆಗಳ ಹಾಸ್ಟೆಲ್ ವಾಸಿ ಮೆಟ್ರಿಕ್ ನಂತರದ ಬಾಲಕಿಯರಿಗಾಗಿ 'ಓಬವ್ವ ಆತ್ಮರಕ್ಷಣಾ ಕಲೆ' ಎಂಬ ಸಮರ ಕಲೆಗಳ ತರಬೇತಿಯನ್ನೂ ನೀಡುವ ವಿನೂತನ ಕಾರ್ಯಕ್ರಮಕ್ಕೆ ನಮ್ಮ ಸರ್ಕಾರ ಚಾಲನೆ ನೀಡಿರುವುದು ಹೆಮ್ಮೆಯ ಸಂಗತಿ. ನಮ್ಮ ಶಿಕ್ಷಣ ನಮ್ಮ ಪ್ರಗತಿಗೆ ಪೂರಕವಾಗಿರಬೇಕು. ಇದು ನಮ್ಮ ಪರಂಪರೆಯಲ್ಲೂ ಅಡಕವಾಗಿರುವುದನ್ನೂ ಗಮನಿಸಬೇಕು. ಅದನ್ನು ನಾವು ಹೆಚ್ಚೆಚ್ಚು ಅಪ್ಪಿಕೊಂಡಷ್ಟೂ ನಮ್ಮ ಸಾಮಾಜಿಕ ಕೆಡುಕುಗಳನ್ನು ಕಡಿಮೆ ಮಾಡಬಹುದು. ಸ್ವಾವಲಂಬನೆಗೆ, ಮನೋಸಶಕ್ತತೆಗೆ ವೇದಿಕೆಗಳು ದೊರೆಯಬೇಕು. ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯನ್ಮೋಖವಾಗಿದೆ.

ನಮ್ಮ ಮಹಿಳಾ ಆಯೋಗ, ಮಹಿಳಾ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಮಹಿಳೆಯರ ಆರ್ಥಿಕ ಪ್ರಗತಿಗೆ ತಮ್ಮ ಯೋಜನೆಗಳ ಮೂಲಕ ನೇರವಾಗಿ ಸಬಲೀಕರಣಗೊಳಿಸುವುದರೊಂದಿಗೆ ಮಹಿಳೆಯರಲ್ಲಿ ಸುರಕ್ಷಿತ ಭಾವ ಮೂಡಿಸುತ್ತಿವೆ. ಹೆಣ್ಣುಮಕ್ಕಳಲ್ಲಿ ನಾವು ಸುರಕ್ಷಿತ ಎಂಬ ಭಾವನೆ ಮೂಡಿಸಲು ಸರ್ಕಾರಗಳು ಹೆಚ್ಚೆಚ್ಚು ಕ್ರಮಗಳನ್ನು ಕೈಗೊಳ್ಳಬೇಕಿದೆ. ಸ್ವಾತಂತ್ರ್ಯಾನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಆ ನಿಟ್ಟಿನಲ್ಲಿ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದು, ಅವು ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ.

ಈ ಸಂಬಂಧದಲ್ಲಿ ಸರ್ಕಾರಗಳು ಕ್ರಮ ಕೈಗೊಂಡಿಲ್ಲವೆಂದು ಹೇಳುವುದಕ್ಕಿಂತ ಸಮಾಜ ಸಂಘಟಿತವಾಗಿ ಏನು ಮಾಡಬೇಕಿದೆ ಎಂಬುದನ್ನು ವಿಶ್ಲೇಷಿಸಬೇಕು. ಹೆಣ್ಣುಮಕ್ಕಳು ನಮ್ಮ ಸುರಕ್ಷತೆ, ಸಮಾಜದ ಸುರಕ್ಷತೆಯ ಬಗ್ಗೆ ಚಿಂತಿಸುವುದು ನಮ್ಮ ಹೊಣೆಗಾರಿಕೆಯೂ ಹೌದು. ಸ್ತ್ರೀಯರಿಗೆ ಸುರಕ್ಷಿತ ಭಾವ ಮೂಡಿಸುವಲ್ಲಿ ನಾವು ಸಮಾಜದಲ್ಲಿ ಅರಿವು, ವಿವೇಕ ಮೂಡಿಸಬೇಕಾದ ಅಗತ್ಯವಿದೆ. ಇದು ಇಂದಿನ ಸಮಾಜದ ತುರ್ತು ಸಹ. ಇದು ನಮ್ಮ ಸರ್ಕಾರಗಳ, ನಮ್ಮ ಸಮಾಜದ ಹೊಣೆಗಾರಿಕೆಯೂ ಆಗಿದೆ.

ಆಧಾರ: ವಿಜಯ ಕರ್ನಾಟಕ. ದಿನಾಂಕ:18.03.2022.

10.ಸಾಂವಿಧಾನಿಕ ಹಕ್ಕುಗಳಿಗಾಗಿ ಸಂವಿಧಾನದ ವಿರುದ್ಧವೇ ಹೋದರೆ ಹೇಗೆ

ಈಗ ಸಿನಿಮಾ ಪ್ರಿಯರ ನಡುವೆ ಎಲ್ಲೆಲ್ಲೂ 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾದ್ದೇ ಚರ್ಚೆ, ಮಾತುಕತೆ. ಕಳೆದ ಶುಕ್ರವಾರ, ಅಂದರೆ ಇಂದಿಗೆ ಒಂಭತ್ತು ದಿನದ ಹಿಂದೆ ತೆರೆ ಕಂಡ ಈ ಚಲನಚಿತ್ರವನ್ನು ಜಗತ್ತಿನ ಮೂಲೆ ಮೂಲೆಯಲ್ಲಿರುವ ಭಾರತೀಯರು ವೀಕ್ಷಿಸಿದ್ದಾರೆ. ತೊಂಭತ್ತರ ದಶಕದಲ್ಲಿ ಕಾಶ್ಮೀರದಲ್ಲಿ ನಡೆದ ಭೀಭತ್ಸ ಸರಣಿ ಹತ್ಯೆಗಳ ದಾಖಲೆ ಅದು. 1947ರಲ್ಲಿ ದೇಶ ವಿಭಜನೆ ವೇಳೆ ಪಾಕಿಸ್ತಾನದಲ್ಲಿದ್ದ ಹಿಂದೂಗಳ ಮಾರಣಹೋಮದ ಕಥೆಯನ್ನು ನಾವೆಲ್ಲರೂ ಕೇಳಿದ್ದೆವು. ಭಾರತದೆಡೆಗೆ ಆಸೆಗಣ್ಣಿನಿಂದ ಹೊರಟ ನೂರಾರು ಜನರ ಮೃತದೇಹಗಳು ರೈಲು ಬೋಗಿಗಳಲ್ಲಿ ದಿಲ್ಲಿ, ಕೊಲ್ಕತ್ತಾಗಳಿಗೆ ಬಂದಿಳಿದಿದ್ದ ದುರಂತ ವ್ಯಥೆಗೆ ಕಿವಿಯಾಗಿದ್ದೆವು. ಆದರೆ, ಕೇವಲ ಮೂರು ದಶಕದ ಹಿಂದೆ, ನಮ್ಮದೇ ನೆಲದಲ್ಲಿ ನಡೆದ ಭಯಾನಕ ಹತ್ಯಾಕಾಂಡದ ಕುರಿತು ಬಹಳಷ್ಟು ದೇಶವಾಸಿಗಳಿಗೆ ಅರಿವೇ ಇರಲಿಲ್ಲ. ಕಾಶ್ಮೀರಕ್ಕೆ ಸಾಂವಿಧಾನಿಕವಾಗಿ ನೀಡಿದ್ದ ವಿಶೇಷ ಸ್ಥಾನ–ಮಾನ ರದ್ದು ಪಡಿಸಲು ಹೋರಾಟ ನಡೆಸುತ್ತಿದ್ದ ಸಂಘ–ಪರಿವಾರದ ಮುಖಂಡರು, ರಾಜಕೀಯ ಕಾರ್ಯಕರ್ತರಿಗೆ ಪ್ರಕ್ಷುಬ್ಧ

ಕಾಶ್ಮೀರದ ಕುರಿತು ಒಂದಿಷ್ಟು ಅರಿವು ಇತ್ತಾದರೂ, ಅದರ ಭೀಕರತೆಯ ಪ್ರಮಾಣ ಅವರಿಗೂ ಗೊತ್ತಿರಲಿಲ್ಲವೇನೋ?

ಸಿನಿಮಾ ವೀಕ್ಷಿಸಿದ ಭಾರತಿಯರಲ್ಲಿ ಇಂಥದ್ದೊಂದು ಅನುಮಾನವನ್ನೇ ದಿ ಕಾಶ್ಮೀರ್ ಫೈಲ್ಸ್ ಹುಟ್ಟುಹಾಕಿದೆ.

1989ರ ಶರತ್ ಋತುವಿನಲ್ಲಿ ಕಾಶ್ಮಿರದ ತುಂಬೆಲ್ಲಾ ಪ್ರವಾಸಿಗರೋ ಪ್ರವಾಸಿಗರು. ಆ ವರ್ಷದ ಡಿಸೆಂಬರ್‌ನಲ್ಲಿ ವಿ.ಪಿ.ಸಿಂಗ್ ಸರ್ಕಾರ ಅಧಿಕಾರಕ್ಕೆ ಬಂದು ಮುಫ್ತಿ ಮೊಹ್ಮಮದ್ ಸಯೀದ್ ಗೃಹಮಂತ್ರಿಯಾದರು. ಅಲ್ಲಿಯವರೆಗೂ ನಿಷ್ಕ್ರಿಯರಾಗಿದ್ದ ಉಗ್ರಗಾಮಿಗಳು ಒಮ್ಮೆಲೆ ಮತ್ತೆ ಚಟುವಟಿಕೆ ಆರಂಭಿಸಿದರು. ಇದು ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಫೈಲ್ಸ್ ಸಿನಿಮಾ ಆರಂಭವಾಗುವುದು, ಇಲ್ಲಿಂದ ಮುಂದಕ್ಕೆ. ಅಂದರೆ, ಕಾಶ್ಮೀರದ ಪ್ರಭಾವಿ ನಾಯಕರಾಗಿದ್ದ ಟೀಕಾಲಾಲ್ ಟಪ್ಲೂ ಅವರ ಹತ್ಯೆ ನಡೆದ ಬಳಿಕ, ಬೆನ್ನಲ್ಲಿಯೇ ಕಾಶ್ಮೀರಿ ಪಂಡಿತರ ಹತ್ಯಾಕಾಂಡವೂ! ಎಲ್ಲ ಹಿಂದುಗಳೂ ಕಣಿವೆಯನ್ನು ತೊರೆಯುವಂತೆ ಕರೆ ನೀಡಲಾಯಿತು. ಯಾರೊ ಪಾಕಿಸ್ತಾನ ಪ್ರೇರಿತ ಭಯೋತ್ಪದಕರೇ ಕಾಶ್ಮೀರದ ಪ್ರಕ್ಷುಬದ್ಧತೆಗೆ ಕಾರಣ ಎಂದು ಕೊಳ್ಳುವಷ್ಟರಲ್ಲಿ, ಗೊತ್ತಾದ ಸಂಗತಿ–ಸ್ಥಳೀಯರೂ ಈ ಎಲ್ಲ ಕೃತ್ಯದ ಹಿಂದಿದ್ದರು ಅಥವಾ ಅವರು ಬೆನ್ನಿಗಿದ್ದರು!

ರಲೀವ್, ಗಲೀವ್, ತಲ್ಸೀವ್ (ಮತಾಂತರವಾಗಿ, ಹತ್ಯೆಗೀಡಾಗಿ ಅಥವಾ ಇಲ್ಲಿಂದ ಓಡಿಹೋಗಿ) ಎಂದು ಸ್ಥಳಿಯರೇ ಧ್ವನಿವರ್ಧಕಗಳ ಮೂಲಕ ಘೋಷಣೆ ಹಾಕಲಾರಂಭಿಸಿದರು. "ಹಿಂದೂ ಗಂಡಸರೇ ನೀವು ಕಾಶ್ಮೀರ ತೊರೆಯಿರಿ. ನಿಮ್ಮ ಹೆಂಗಸರು ಬೇಕಾದರೆ ನಮ್ಮೊಂದಿಗೆ ಇರಲಿ," ಎಂಬ ಸ್ತ್ರೀ ದೌರ್ಜ್ಯನದ ರಣಕೇಕೆಯೂ ಕೇಳಿಬರಲಾರಂಭಿಸಿತು.

ಇದೆಲ್ಲವೂ ಕೇವಲ 1990 ಎಂಬ ಒಂದೇ ಒಂದು ವರ್ಷದಲ್ಲಿ ನಡೆದುಹೋಯಿತು. ಕಾಶ್ಮೀರದ ಹಿಂದೂಗಳ ಪಾಲಿಗೆ ಕರಾಳವಾಗಿ ಪರಿಣಮಿಸಿತು. ಮುಂದೆ ಕಾಶ್ಮೀರದ ಬದುಕು ಭಯೋತ್ಪಾದಕರ ಭೀತಿಯ ನಡುವೆಯೇ ಸಾಗುತ್ತದೆ. 2003ರಲ್ಲಿ ಪುಲ್ವಾಮ ಸಮೀಪದ ನಂದಿಮಾರ್ಗ ಎಂಬ ಗ್ರಾಮದಲ್ಲಿ 24 ಹಿಂದುಗಳನ್ನು ಹತ್ಯೆಮಾಡಿದ ದುರ್ಘಟನೆವರೆಗೆ ಸಿನಿಮಾ ಬಂದು ನಿಲ್ಲುತ್ತದೆ. ಭಾರತೀಯ ಸೇನೆಯ ವೇಷಧಾರಿಗಳಾಗಿ ಬಂದ ಲಷ್ಕರ್–ಇ–ತೈಬಾ ಭಯೋತ್ಪಾದಕರು, 24 ಜನರನ್ನು ಸಾಲಾಗಿ ನಿಲ್ಲಿಸಿ ಹಣೆಯಲ್ಲಿ ತಿಲಕ ಇಡುವ ಸ್ಥಳಕ್ಕೆ ಪಾಯಿಂಟ್ ಬ್ಲಾಂಕ್ ರೇಂಜ್‌ನಿಂದ ಗುಂಡಿಟ್ಟು ಕೊಲ್ಲುವ ಭೀಭತ್ಸ ಕೃತ್ಯವನ್ನು ಯಥಾವತ್ತಾಗಿ ಫೈಲ್ಸ್ ಸಿನಿಮಾ ದಾಖಲಿಸಿದೆ.

ಭಯೋತ್ಪಾದಕರು ಹೀಗೆ ಕೊಂದವರಲ್ಲಿ ಎರಡು ವರ್ಷದ ಮಗುವೂ, 65 ವರ್ಷದ ಹಿರಿಯ ನಾಗರಿಕರೂ 11 ಜನ ಮಹಿಳೆಯರೂ ಇದ್ದರು. ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಬರುವ ಈ ದೃಶ್ಯ ತೀರಾ ಹಿಂಸಾತ್ಮಕ ಎನ್ನಿಸಿದರೂ, ಅಂದು ಈ ಘಟನೆ ಪ್ರತ್ಯಕ್ಷವಾಗಿ ಹಾಗೂ ಕೊನೆಯ ಬಾರಿ ಸಾಕ್ಷಿಯಾದವರ ಮನಃ ಸ್ಥಿತಿಯನ್ನು ನೆನಪಿಸಿಕೊಂಡರೆ, ವಿಷಾದ ಉಕ್ಕುತ್ತದೆ. ನೂರು ಕೋಟಿಗೂ ಹೆಚ್ಚು ಭಾರತೀಯರಿದ್ದ ಭಾರತ ಕಾಶ್ಮೀರಿ ಪಂಡಿತರ ರಕ್ಷಣೆಗೆ ಏನು ಮಾಡಲಿಲ್ಲವೇಕೆ? ಅಷ್ಟೊಂದು ಅಸಹಾಯಕತೆ ಯಾಕಾಗಿ ಎಂಬ ನೋವು ಕಾಡುತ್ತದೆ.

ಮುಂದೆ ಎಂಥ ದಿನಗಳು ಕಾದಿವೆಯೋ, ನಮ್ಮೆಲ್ಲರನ್ನೂ ಸಾಯಿಸಿಬಿಟ್ಟರೆ ಎಂಬ ಆತಂಕದಲ್ಲಿ ಎಲ್ಲ ಕಾಶ್ಮೀರಿ ಪಂಡಿತರೂ ಜೀವವನ್ನು ಅಂಗೈಯಲ್ಲಿಟ್ಟುಕೊಂಡು ವಲಸೆ ಆರಂಭಿಸಿದರು. ತಮ್ಮ ನೆಲದಲ್ಲಿ ಪರಕೀಯರಾಗುವ, ತಾವೇ ಅನಾಥರಾಗುವ ದಾರುಣ ಸ್ಥಿತಿ ಅದು. ಇಂಥ ಸಂಗತಿಯನ್ನು ಚಿತ್ರ ತೆರೆದಿಟ್ಟಿದೆ. ಆದರೂ ಕೆಲವರ ಬೇರೆ ರೀತಿಯ, ಅಪ್ರಬುದ್ಧ ವಾದಗಳನ್ನು ಮುಂದಿಡುತ್ತಿದ್ದಾರೆ. ಇಷ್ಟೆಲ್ಲಾ ನಡೆದಿಲ್ಲ. ಭಯೋತ್ಪಾದಕರ ಕ್ರೌರ್ಯಕ್ಕೆ ಬಲಿಯಾದವರು ನಾಲ್ಕಂಕಿಯಲ್ಲ, ಮೂರಂಕಿ ಪಂಡಿತರಷ್ಟೆ

ಇಂಥವೆಲ್ಲಾ ನಡೆಯುತ್ತಲೇ ಇರುತ್ತವೆ. ಹತ್ಯಾಕಾಂಡ ನಡೆದೇ ಇಲ್ಲ, ಅವೆಲ್ಲವೂ ಬರಿ ಕೊಲೆ–ಸುಲಿಗೆಯಷ್ಟೆ ಹೆಚ್ಚೆಂದರೆ, ಅಲ್ಲಿ ನಡೆದಿದ್ದು ಹಿಂದುಗಳ ವಲಸೆಯಷ್ಟೇ ಎಂದು ತಿಪ್ಪೆ ಸಾರಿಸುತ್ತಿದ್ದಾರೆ.

ಕೆಲವರಂತೂ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ, 1990ರಲ್ಲಿ ಜಮ್ಮು ಕಾಶ್ಮೀರದ ರಾಜ್ಯಪಾಲರಾಗಿದ್ದ ಜಗಮೋಹನ್ ಅವರು ಎಲ್ಲರಿಗೂ ಪ್ರಯಾಣ ವ್ಯವಸ್ಥೆ ಮಾಡಿದ್ದರಿಂದ ವಲಸೆಯೂ ಅನುಕೂಲಕರವಾಗಿತ್ತು ಎಂದು ಅಮಾನವೀಯವಾಗಿ ಮಾತನಾಡುತ್ತಿದ್ದಾರೆ. 'ಕಾಶ್ಮೀರ್ ಫೈಲ್ಸ್' ತೆರೆಕಂಡ ನಂತರವೂ ಒಂದು ಬೌದ್ಧಿಕ ವರ್ಗದವರು ಈ ರೀತಿಯ ಮಾತುಗಳನ್ನು ಹೆಚ್ಚಾಗಿಯೇ ಆಡಲಾರಂಭಿಸಿದದ್ದಾರೆ.

ಏಕೆ ಹೀಗೆ? ಎಂದು ಆಲೋಚಿಸಿದರೆ, ಅಂತಿಮವಾಗಿ ಇದು ತುಷ್ಟೀಕರಣ ಹಾಗೂ ಅದು ಹುಟ್ಟುಹಾಕುವ ಪ್ರತ್ಯೇಕತೆ ಎಂಬ ಮಹಾದ್ರೋಹದೆಡೆಗೆ ಬಂದು ನಿಲ್ಲುತ್ತೆ. ಕಾಶ್ಮೀರದಲ್ಲಿ ನಡೆದ ಹತ್ಯಾಕಾಂಡ ಕುರಿತು, ಮುಸ್ಲಿಮರನ್ನು ಓಲೈಸುವ ಜನರಿಗೆ ಸತ್ಯ ಬೇಕಿಲ್ಲ. ಅಂಥ ಓಲೈಕೆಯೇ ಅಸಂಬದ್ಧವಾದಗಳಿಗೆ ಕಾರಣವಾಗಿದೆ. ಹಾಗೆ ನೋಡಿದರೆ, ಹಿಂದೂ, ಮುಸ್ಲಿಮರ ನಡುವೆ ಓಲೈಸುವಿಕೆ ಅಸ್ತ್ರ ಪ್ರಯೋಗಿಸಿ, ಒಡೆದು ಆಳುವ ಅನೀತಿಯನ್ನು ಬಿತ್ತಿದವರು ಬ್ರಿಟಿಷರು. ಭಾರತದಲ್ಲಿ ಆಳ್ವಿಕೆ ನಡೆಸಬೇಕಾದರೆ ಹಿಂದೂ ಹಾಗೂ ಮುಸ್ಲಿಮರನ್ನು ಒಡೆಯಬೇಕು ಎಂದೇ ಅವರು ಭಾವಿಸಿದ್ದರು. 1857ರ ಮೊದಲ ಸ್ವಾತಂತ್ರ ಸಂಗ್ರಾಮಕ್ಕೂ ಮುನ್ನವೇ, ಮದ್ದು ಗುಂಡುಗಳಿಗೆ ಹಂದಿ ಹಾಗೂ ದನದ ಕೊಬ್ಬನ್ನು ಸವರಿ ನೀಡಿದರು. ಹಿಂದೂ, ಮುಸ್ಲಿಂ ಯೋಧರು ಪರಸ್ಪರ ಕಚ್ಚಾಡಲಿ ಎಂಬುದು ಅವರ ಹುನ್ನಾರವಾಗಿತ್ತು. ಆದರೂ ಹಿಂದೂ ಹಾಗೂ ಮುಸ್ಲಿಂ ರಾಜರೂ ಒಟ್ಟಾಗಿ ಸೆಣೆಸಿದರು. ಆದರೆ, 1905ರಲ್ಲಿ ಬಂಗಾಳ ವಿಭಜನೆ ವೇಳೆಗೆ ಒಡೆದು ಆಳುವ ಅನೀತಿ ಫಲ ನೀಡಿತ್ತು. ಬ್ರಿಟಿಷರ ಈ ವಿಭಜನೆಕಾರಿ ನೀತಿಯ ರುಚಿಯು ಕೆಲ ಮುಸ್ಲಿಂ ನಾಯಕರಿಗೆ ಹತ್ತಿತು. ಅಲ್ಲಿಂದಲೇ ಪ್ರತ್ಯೇಕತೆಯ ಬೀಜ ಮೊಳೆಯಿತು. ಅನೇಕ ವರ್ಷಗಳಿಂದ ಪ್ರತ್ಯೇಕವಾಗಲು ಬಯಸಿ, ಅದೇ ದಾರಿಯಲ್ಲಿ ಸಾಗುತ್ತಿದ್ದ ಆಲ್ ಇಂಡಿಯಾ ಮುಸ್ಲಿಂ ಲೀಗ್ 1952ರ ಅಲಿಘಡ ಅಧಿವೇಶನದಲ್ಲಿ ಅಧಿಕೃತವಾಗಿ ದ್ವಿರಾಷ್ಟ್ರ ಸಿದ್ಧಾಂತವನ್ನು ಘೋಷಿಸಿತು.

ಇಂಥದ್ದೆಲ್ಲಾ ನಡೆಯುವಾಗಲೇ. ಇತಿಹಾಸಕಾರ ಎಸ್.ಎಂ.ಇಕ್ರಾಂ ಎಂಬವರು ದ್ವಿರಾಷ್ಟ್ರಕ್ಕೆ ಪೂರಕವಾಗಿ ಹೊಸ ಥಿಯರಿಯೊಂದನ್ನು ಹರಿಯಬಿಟ್ಟರು. ಭಾರತ ವಿಭಜನೆವರೆಗೂ ಅಖಿಲ ಭಾರತ ಸೇವೆಯಲ್ಲಿದ್ದು, ನಂತರ ಪಾಕಿಸ್ತಾನವನ್ನು ಆಯ್ಕೆ ಮಾಡಿಕೊಂಡಿದ್ದ ಇಕ್ರಾಂ ಹೇಳಿದ ಮಾತುಗಳು ಹೀಗಿವೆ:

"ಹಿಂದೂ ಹಾಗೂ ಮುಸ್ಲಿಂ ಧರ್ಮೀಯರು, ಕ್ರೈಸ್ತರಲ್ಲಿನ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ರೀತಿ ಎರಡು ಮತೀಯ ವಿಭಾಗಗಳಲ್ಲ. ಜೀವನದ ಕುರಿತು ಅವರ ಮನೋಭಾವ, ಸಂಸ್ಕೃತಿ, ನಾಗರೀಕತೆ, ಸಾಮಾಜಿಕ ನಡವಳಿಕೆಗಳು ಸೇರಿದಂತೆ ಎಲ್ಲ ರೀತಿಯಲ್ಲೂ ಭಿನ್ನತೆ ಹೊಂದಿದ್ದಾರೆ. ಹಾಗಾಗಿ, ಮುಂದೆ ಇದು ಸಾವಿರ ವರ್ಷ ಜತೆಗಿದ್ದರೂ ಉಭಯರ ನಡುವೆ ಹೊಂದಾಣಿಕೆ ಆಗುತ್ತಿಲ್ಲ. ಭಾರತೀಯ ಮುಸ್ಲಿಮರು ಆಫಘಾನಿಸ್ತಾನ, ಪರ್ಷಿಯಾ, ಮಧ್ಯ ಏಷ್ಯಾ, ಅರಬ್ ಸೇರಿ ಯಾವುದೇ ಪ್ರದೇಶಕ್ಕೆ ತೆರಳಿದರೂ ಅವರಿಗೆ ಅದು ತಮ್ಮ ಮನೆಯಲ್ಲೇ ಸಂಚರಿಸಿದಂತೆ ಆಗುತ್ತದೆ. ಆದರೆ ಹಿಂದು ಧರ್ಮೀಯರು ಹೆಚ್ಚಿರುವ ಭಾರತದ ರಸ್ತೆಗಳಲ್ಲಿ ಸಂಚರಿಸಿದಾಗ ನಾವು ಹೊರಗಿನವರು ಎಂಬ ಭಾವನೆ ಅವರಲ್ಲಿ ಮೂಡುತ್ತದೆ."

ಎಸ್.ಎಂ.ಇಕ್ರಾಂ ಅವರಂಥವರು ಹರಿಯಬಿಟ್ಟ ಪ್ರತ್ಯೇಕತೆಯ ಭಾವನೆಯನ್ನು ಹೋಗಲಾಡಿಸಲು ಆಗಲೂ ದೊಡ್ಡಮಟ್ಟದ ಪ್ರಯತ್ನ ನಡೆಯಲಿಲ್ಲ. ಬದಲಿಗೆ ಓಲೈಕೆ ಮುಂದುವರಿಯಿತು. ದ್ವಿರಾಷ್ಟ್ರ ಸಿದ್ಧಾಂತದಿಂದ ಶ್ರೀಮಂತ ಮುಸ್ಲಿಮರಿಗಷ್ಟೇ ಲಾಭ, ಬಡ ಮುಸ್ಲಿಮರು ಇದರಿಂದ ನೋವು ಅನುಭವಿಸಬೇಕಾಗುತ್ತದೆ ಎಂದು ಮಿಯಾ ಫಯಾಜುದ್ದೀನ್‌ರಂಥ ಕಾಂಗ್ರೆಸ್ ಮುಖಂಡರು ಹೇಳಿದರೂ, ಇಂಥ ಧ್ವನಿ ಕ್ಷೀಣವಾಗಿತ್ತು. ಇದೇ ಪ್ರತ್ಯೇಕತೆಯ ಭಾವ ಹಾಗೂ ಓಲೈಕೆಯ ತಂತ್ರಗಾರಿಕೆ ದೇಶ ವಿಭಜನೆ

ನಂತರವೂ ಮುಂದುವರಿಯಿತು. ನಗುನಗುತ್ತ ಪಾಕಿಸ್ತಾನ ಪಡೆದಿದ್ದೇವೆ, ಗುದ್ದಾಡಿ ಹಿಂದೂಸ್ತಾನವನ್ನೇ ಪಡೆಯುತ್ತೇವೆ ಎನ್ನುವಂತಹ ಘೋಷಣೆಗಳು ಆರಂಭದಲ್ಲೇ ಕೇಳಿಬಂದವು. ಇದರ ಫಲಿತಾಂಶವೇ ಕಾಶ್ಮೀರದಲ್ಲಾದ ಹಿಂದೂಗಳ ಮಾರಣ ಹೋಮ.

ಇಷ್ಟಕ್ಕೆಲ್ಲ ಕಾರಣ, ಭಾರತದಲ್ಲಿ ನಿರಂತರವಾಗಿ ಅನುಸರಿಸುತ್ತ ಬಂದಿರುವ ಮುಸ್ಲಿಂ ತುಷ್ಟೀಕರಣ ಎಂಬ ಮಾತನ್ನು ಇತಿಹಾಸಕಾರ ಸೀತಾರಾಂ ಗೋಯೆಲ್ ಸೇರಿ ಅನೇಕರು ಹೇಳಿದ್ದಾರೆ. ಅದು ಬೇರೊಂದು ವಿಸ್ತೃತ ಚರ್ಚೆಯೆಡೆಗೆ ನಮ್ಮನ್ನು ಕೊಂಡೊಯ್ಯತ್ತದೆ. ತುಷ್ಟೀಕರಣ ಎಂಬುದು ಏನೆಲ್ಲಾ ಅನಾಹುತಕ್ಕೆ ತಳ್ಳುತ್ತದೆ, ಪ್ರತ್ಯೇಕತೆಯ ವಿಷ ಬೀಜವನ್ನು ಹೇಗೆ ಬಿತ್ತುತ್ತದೆ ಎಂಬುದಕ್ಕೆ ಇಷ್ಟೆಲ್ಲಾ ವಿಸ್ತರಿಸಬೇಕಾಯಿತು. ಕರ್ನಾಟಕದಲ್ಲಿ ಸದ್ದು ಮಾಡುತ್ತಿರುವ ಹಿಜಾಬ್ ಸಂಘರ್ಷವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿಯೂ ಪ್ರತ್ಯೇಕತೆಯ ವಿಷ ಬೀಜವನ್ನು ಹೇಗೆ ಬಿತ್ತುತ್ತದೆ ಎಂಬುದಕ್ಕೆ ಇಷ್ಟೆಲ್ಲಾ ವಿಸ್ತರಿಸಬೇಕಾಯಿತು. ಕರ್ನಾಟಕದಲ್ಲಿ ಸದ್ದು ಮಾಡುತ್ತಿರುವ ಹಿಜಾಬ್ ಸಂಘರ್ಷವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿಯೂ ಪ್ರತ್ಯೇಕತೆಯ ವಿಷ ಬೀಜ ಕಾಣಿಸದೇ ಇರದು.

ಸುಧೀರ್ಘ ವಿಚಾರಣೆ ನಂತರ ಇತ್ತೀಚೆಗಷ್ಟೇ ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ ತ್ರಿಸದಸ್ಯ ಪೀಠವೂ ರಾಜ್ಯದ ಶಾಲಾ ಕಾಲೇಜುಗಳಲ್ಲಿ ಮುಸ್ಲಿಂ ಹೆಣ್ಣು ಮಕ್ಕಳು ಹಾಗೂ ಯುವತಿಯರು ಹಿಜಾಬ್ ಧರಿಸುವಂತಿಲ್ಲ ಎಂಬ ರಾಜ್ಯ ಸರ್ಕಾರದ ಆದೇಶವನ್ನು ಎತ್ತಿಹಿಡಿದಿದೆ. ಅದರ ಜೊತೆಗೆ, ಹಿಜಾಬ್ ಧಾರಣೆಯು ಇಸ್ಲಾಂ ಸಂಪ್ರದಾಯದ ಅವಿಭಾಜ್ಯ ಆಚರಣೆ ಅಲ್ಲ ಎಂದು ಹೇಳಿದೆ. ಈ ತೀರ್ಪಿನ ವಿರುದ್ಧ ಅನೇಕರು ವಾದ ಮಂಡಿಸುತ್ತಿದ್ದಾರೆ. ಹಿಜಾಬ್ ಇಸ್ಲಾಂ ಅಂಗವಲ್ಲದಿದ್ದರೂ ಮುಸ್ಲಿಂ ಯುವತಿಯರು ತಮ್ಮ ಇಚ್ಛೆಯನುಸಾರ ಅದನ್ನು ಧರಿಸುತ್ತಿದ್ದರು. ಯಾವುದೇ ವೈಯುಕ್ತಿಕ ನಂಬಿಕೆಗಳು ಸಾಮಾಜಿಕ ಸ್ವಾಸ್ಥ್ಯಕ್ಕೆ ಧಕ್ಕೆ ಆಗದಿದ್ದರೆ ಅದನ್ನು ತಡೆಯಬಾರದು ಎಂದು ಸಂವಿಧಾನವೇ ನೀಡಿರುವ ಹಕ್ಕನ್ನು ಈ ಆದೇಶ ಉಲ್ಲಂಘಿಸಿದೆ ಎಂಬ ವಾದವನ್ನು ಮುಂದಿಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಮುಸ್ಲಿಂ ಮಹಿಳೆಯರು ಕುರಿತು 'ಪಾಕಿಸ್ತಾನ ಅಥವಾ ಭಾರತ ವಿಭಜನೆ' ಎಂಬ ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. " ಬುರ್ಖಾ ಧರಿಸಿದ ಈ ಮಹಿಳೆಯರು ರಸ್ತೆಯಲ್ಲಿ ನಡೆದು ಹೋಗುತ್ತಿರುವುದನ್ನು ನೋಡುವುದು ಮುದ ನೀಡುವ ವಿಚಾರವಲ್ಲ, ಹೊರ ಪ್ರಪಂಚದಿಂದ ಸಂಪೂರ್ಣ ಪ್ರತ್ಯೇಕವಾಗುವ ಮುಸ್ಲಿಂ ಮಹಿಳೆಯರು ಮನೆಯಲ್ಲಿ ಸಣ್ಣಪುಟ್ಟ ವಿಚಾರಗಳಲ್ಲಿ ಜಗಳವಾಡುತ್ತ ತಮ್ಮ ಆಲೋಚನೆಗಳನ್ನು ಸಂಕುಚಿತಗೊಳಿಸಿಕೊಳ್ಳುತ್ತಾರೆ. ಅವರಲ್ಲಿ ಗುಲಾಮಿತನದ ಮನಃಸ್ಥಿತಿ ಹಾಗೂ ಕೀಳರಿಮೆ ಮೂಡುತ್ತದೆ. ಮುಂದೆ ಅವರು ಸಹಾಯಕರಾಗುತ್ತಾರೆ" ಹೀಗೆ ಅತ್ಯಂತ ಸ್ಪಷ್ಟ ಹಾಗೂ ಕಠಿಣ ಪದಗಳನ್ನು ಅಂಬೇಡ್ಕರ್ ಬರೆದಿದ್ದಾರೆ. ಇಷ್ಟರ ನಂತರವೂ, ಹಿಜಾಬ್ ಧರಿಸುವುದು ಸಂವಿಧಾನದ ಆಶಯಕ್ಕೆ ಅನುಗುಣವಾಗಿಯೇ ಇದೆ ಎಂದೇ ಇಟ್ಟುಕೊಳ್ಳೋಣ. ಹಾಗಾಗಿಯೇ, ಹೈಕೋರ್ಟ್‌ನ ತ್ರಿಸದಸ್ಯ ಪೀಠ ನೀಡಿರುವ ತೀರ್ಪನ್ನು ಪ್ರಶ್ನಿಸಿ ಕಕ್ಷಿದಾರರು ಈಗಾಗಲೇ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಕೆಲವೇ ದಿನದಲ್ಲಿ ಅಲ್ಲಿಯೂ ವಿಚಾರಣೆ ಆರಂಭವಾಗುತ್ತದೆ. ಅಲ್ಲಿ ವಕೀಲರು ಮಂಡಿಸುವ ವಾದಗಳು, ಅದನ್ನು ಸಾಂವಿಧಾನಿಕ ಚೌಕಟ್ಟಿನಲ್ಲಿಟ್ಟು ನ್ಯಾಯಮೂರ್ತಿಗಳು ವಿಶ್ಲೇಷಣೆ ಮಾಡಿದಾಗ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿಯಲೂಬಹುದು ಅಥವಾ ವಿಭಿನ್ನ ತೀರ್ಪು ನೀಡಲೂಬಹುದು. ಈ ಅವಕಾಶವನ್ನು ಸ್ವತಃ ಸಂವಿಧಾನವೇ ನೀಡಿದೆ, ಈ ಕುರಿತು ಯಾರ ಆಕ್ಷೇಪಣೆಯೂ ಇಲ್ಲ. ಆದರೆ ಇದೆಲ್ಲದರ ನಡುವೆ, ಹೈಕೋರ್ಟ್ ತೀರ್ಪನ್ನು ವಿರೋಧಿಸಿ (ಪ್ರಶ್ನಿಸಿ ಅಲ್ಲ) ಮುಸ್ಲಿಂ ಸಂಘಟನೆಗಳು ಬಂದ್‌ಗೆ ಕರೆ ನೀಡಿದ್ದವು. ಅರೆ, ಸ್ವತಃ ಸಂವಿಧಾನ ನೀಡಿರುವ ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಆಚರಣೆಯ ಸ್ವಾತಂತ್ರ್ಯದ ಆಧಾರದಲ್ಲಿ ನ್ಯಾಯ ಕೇಳುತ್ತಿರುವವರೇ ಇತ್ತ ಸಾಂವಿಧಾನಿಕ ಆದೇಶವೊಂದನ್ನು ವಿರೋಧಿಸಿ ಬಂದ್‌ಗೆ ಕರೆ ನೀಡಿದ್ದಾರೆ ಎಂದರೆ ಏನು? ಹಿಜಾಬ್ ಧರಿಸಿ ಶಾಲೆಗೆ ತೆರಳಲು ಅವಕಾಶ ನೀಡಿ ಎಂಬ ಕೋರಿಕೆಯನ್ನು

ಹೈಕೋರ್ಟ್ ತನ್ನ ಮಧ್ಯಂತರ ಆದೇಶದ ಸಂದರ್ಭದಲ್ಲೂ ನಿರಾಕರಿಸಿತ್ತು. ಆಗಲೂ ಹೈಕೋರ್ಟ್ ನಿರ್ದೇಶನವನ್ನು ಧಿಕ್ಕರಿಸಿ ಅನೇಕ ಯುವತಿಯರನ್ನು ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಿಸುವಂತೆ ಪ್ರೇರೇಪಿಸಲಾಯಿತು. ಅದೆಲ್ಲದರ ನಂತರ ಅಂತಿಮ ಆದೇಶ ಹೊರಬಂದಾಗಲಾದರೂ ಪಾಲಿಸುವ ಬದಲಿಗೆ ಬಂದ್‌ಗೆ ಕರೆ ನೀಡಲಾಯಿತು. ಕೆಲವು ಹೆಣ್ಣುಮಕ್ಕಳು ಮಾತ್ರ ಶಿಕ್ಷಣದ ಮಹತ್ವವನ್ನು ಅರಿತು ಹಿಜಾಬ್ ಇಲ್ಲದೆಯೇ ತರಗತಿ ಪ್ರವೇಶಿಸಿ ಪಾಠ, ಪರೀಕ್ಷೆಯಲ್ಲಿ ಭಾಗವಹಿಸಿದ್ದಾರೆ. ಅನೇಕರು ಶಾಲೆಗೆ ಆಗಮಿಸದೇ ಮನೆಯಲ್ಲೆ ಉಳಿದಿದ್ದಾರೆ. ಇನ್ನು ಕೆಲವರು ಮತ್ತೆ ಶಾಲೆಗಳ ಬಳಿ ಬಂದು ಗದ್ದಲ ಎಬ್ಬಿಸಿದ್ದಾರೆ. ನಮಗೆ ಎಲ್ಲಕ್ಕಿಂತ ಧರ್ಮವೇ ಮುಖ್ಯ ಎನ್ನುವ ಕೆಲ ವಿದ್ಯಾರ್ಥಿನಿಯರು ಹಾಗೂ ಕೆಲ ಮುಸ್ಲಿಂ ಮುಖಂಡರ ಮಾತನ್ನು ಕೇಳುತ್ತಿದ್ದರೆ. ಈ ಲೇಖನದ ಪ್ರಾರಂಭದಲ್ಲಿ ಪ್ರಸ್ತಾಪಿಸಿದ ಪ್ರತ್ಯೇಕತಾವಾದದ ಕಡೆಗೇ ಚಿತ್ತ ಹೊರಳುತ್ತದೆ.

ಮತ್ತೆ ದೇಶದಲ್ಲಿ ಈ ಪ್ರತ್ಯೇಕತಾವಾದದ ಚಟುವಟಿಕೆ ಆರಂಭವಾಗಿದೆಯೇ ಎಂಬ ಅನುಮಾನ ಮೂಡಲಾರಂಭಿಸುತ್ತದೆ ಈಗಾಗಲೇ ಹೇಳಿದಂತೆ, ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಹೋಗಲು ಅವಕಾಶ ಇದೆಯಾದರೂ, ತಮಗೆ ಸಂವಿಧಾನಕ್ಕಿಂತಲೂ ಕುರಾನೇ ಮೇಲು ಎಂದು ಹೇಳುತ್ತಿರುವ ಮೂಲಭೂತವಾದಿಗಳ ಮಾತು ಸುತಾರಾಂ ಸರಿಯಲ್ಲ, ಈ ದೇಶದ ಸಂವಿಧಾನ, ಸಾಂವಿಧಾನಿಕ ಸಂಸ್ಥೆಗಳನ್ನು ಮಾನ್ಯ ಮಾಡದವರನ್ನು ಈ ದೇಶದ ಪ್ರಜೆಗಳೆಂದು ಹೇಳಲು ಹೇಗೆ ಸಾಧ್ಯ? ವ್ಯಕ್ತಿ ಹಿತಕ್ಕಿಂತ ರಾಷ್ಟ್ರ ಹಿತ, ಸಂಸ್ಥೆಗಳ ಹಿತ ಮುಖ್ಯವಾದವರಷ್ಟೇ ದೇಶಕ್ಕೆ ಭವಿಷ್ಯ ಭದ್ರವಾಗುತ್ತದೆ.

ಇಲ್ಲಿ ಮಸ್ಲಿಂ ಸಮುದಾಯದ ಮುಖಂಡರನಷ್ಟೇ ದೂರಿದರೆ ಸಾಲದು. ಬಹುತ್ವ ಸೆಕ್ಯುಲೆರಿಸಂ ಹೆಸರಿನಲ್ಲಿ ಮುಸ್ಲಿಂ ತುಷ್ಟೀಕರಣ ವಾದವನ್ನು ಬೆಂಬಲಿಸುತ್ತಿರುವ ರಾಜಕೀಯ ಪಕ್ಷಗಳು, ಬುದ್ಧಿಜೀವಿಗಳೆನಿಸಿಕೊಂಡವರ ದೊಡ್ಡ ಪಡೆಯೇ ಈ ದೇಶದಲ್ಲಿರುವುದು ದುರಂತ. ಯಾವುದೇ ಕೃತ್ಯಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸದೆ, ಮುಸ್ಲಿಮರ ಪರವಾಗಿಯೇ ಮಾತನಾಡಬೇಕೆಂಬ ಈ ಗ್ಯಾಂಗ್, ಪರೋಕ್ಷವಾಗಿ ಮೂಲಭೂತವಾದವನ್ನು ಬೆಂಬಲಿಸುತ್ತಿದೆ. ಅಂತಿಮವಾಗಿ ಇದರ ಕಳಂಕವನ್ನು ಮುಸ್ಲಿಂ ಸಮುದಾಯವೇ ಅನುಭವಿಸುತ್ತದೆ. ಇಂಥವರನ್ನೆಲ್ಲ ಸಮಾಜ ಧಿಕ್ಕರಿಸಬೇಕಿದೆ. ರಾಜಕೀಯ, ಅಧಿಕಾರ, ಮತಗಳಿಕೆಗೋಸ್ಕರ ಸತ್ಯವನ್ನು ಮರೆಮಾಚುವವರಿಂದ ಏನೂ ಪ್ರಯೋಜನವಿಲ್ಲ.

ಇತಿಹಾಸವನ್ನು ಗಮನಿಸುವುದಾದರೆ, ಸುಧಾರಣೆಗೆ ಒಗ್ಗಿಕೊಂಡ ಮತಧರ್ಮಗಳು ಮಾತ್ರ ಉಳಿದಿವೆ, ಬೆಳೆದಿವೆ. ಹೈಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿರುವಂತೆ, ಪರ್ದಾ ಧಾರಣೆ ಕುರಿತು ಅನೇಕ ಚರ್ಚೆಗಳಿಗೆ ಆಸ್ಪದವಿದೆ. ಈ ಸಂಪ್ರದಾಯಗಳು ಸ್ತ್ರೀ ಸ್ವಾತಂತ್ರ್ಯಕ್ಕೆ, ವಿಶೇಷವಾಗಿ ಮುಸ್ಲಿಂ ಮಹಿಳೆಯರ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿವೆ. ಇದು, ಸಂವಿಧಾನವು ನೀಡಿರುವ 'ಸಮಾನ ಅವಕಾಶ' ' ಸಾರ್ವಜನಿಕ ಭಾಗವಹಿಸುವಿಕೆ'ಯ ಆಶಯಕ್ಕೆ ವಿರುದ್ಧವಾಗಿದೆ ಎಂದು ತಿಳಿಸಿದೆ. ಈ ಹಿಂದೆಯೂ ಮುಸ್ಲಿಂ ಮಹಿಳೆಯರ ಪರ, ಪುರುಷರ ವಿರುದ್ಧ ಎನ್ನುವುದಕ್ಕಿಂತಲೂ, ಸಂವಿಧಾನದ ಪರ, ಅಭಿವೃದ್ಧಿ ಪರ ಎಂದು ಹೇಳುವುದು ಸರಿ.

ಈ ಹಿಂದೆ ತ್ರಿವಳಿ ತಲಾಕ್ ವಿಷಯವೂ ಸೇರಿ ಇದೀಗ ಹಿಜಾಬ್ ವಿಚಾರವನ್ನೂ ಒಟ್ಟಾಗಿಸಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮ ಪೂರ್ವಜರು ದೇಶವನ್ನು ಆಳಿದ್ದರು, ಅದನ್ನು ಬ್ರಿಟಿಷರು ಹಿಂದೂಗಳ ಕೈಗೆ ಕೊಟ್ಟುಬಿಟ್ಟಿದ್ದಾರೆ, ಆ ಭೂಮಿಯನ್ನು ಮತ್ತೆ ಪಡೆಯುತ್ತೇವೆ ಎನ್ನುವಂತಹ ಉದ್ಧಟತನದ ಹಾಗೂ ಸಂವಿಧಾನ ವಿರೋಧಿ ಮಾತು ಮತ್ತು ಆಲೋಚನೆಗಳನ್ನು ಈಗಲಾದರೂ ಬಿಡಬೇಕು. ಮುಸ್ಲಿಂ ಸಮುದಾಯವು ತನ್ನ ಒಳಿತಿಗಾಗಿ ಮಾತನಾಡುತ್ತಿರುವವರಾರು, ತಮ್ಮನ್ನು ಎತ್ತಿಕಟ್ಟಿ ಕಳಂಕಿತರನ್ನಾಗಿಸುತ್ತಿರುವವರು ಯಾರು ಎಂದು ಸರಿಯಾಗಿ ಗುರುತಿಸಬೇಕು. ವಿಶೇಷವಾಗಿ, ಢೋಂಗಿ ಬುದ್ಧಿ ಜೀವಿಗಳನ್ನು ದೂರವಿರಿಸಬೇಕು.

ನಮ್ಮೆಲ್ಲ ಮತ ಧರ್ಮಗಳೂ, ಧರ್ಮ ಗ್ರಂಥಗಳೂ ಉತ್ತಮ ದಾರಿಯಲ್ಲಿ ಸಾಗಲು ನಮಗೆ ಪ್ರೇರೇಪಣೆ ನೀಡಲಿ. ಆದರೆ ಸಾಮಾಜಿಕ ಸ್ವಾಸ್ಥ್ಯ ಎಂಬ ವಿಚಾರ ಬಂದಾಗ ಸಂವಿಧಾನವೇ ನಮಗೆಲ್ಲ ಅತ್ಯುನ್ನತ ಧರ್ಮಗ್ರಂಥ. ಈ ನಿಟ್ಟಿನಲ್ಲಿ ಆಲೋಚನೆಗಳು ನಡೆಯಲಿ, ಭಾರತವು ಗತಕಾಲದ ಕೋಮುದಳ್ಳುರಿಗೆ ಸಿಲುಕದೆ ಭವಿಷ್ಯದ ಕಡೆಗೆ ಆಲೋಚಿಸುವಂತಾಗಲಿ.

ಲೇಖಕರು: ಹರಿಪ್ರಕಾಶ್ ಕೋಣೆಮನೆ.
ಆಧಾರ: ವಿಜಯಕರ್ನಾಟಕ, ದಿನಾಂಕ:18.03.2022.

11. ಮಾತಿನ ಮಂಥನದ ಮನೆಯಲ್ಲಿ ಶಾಸಕರ ನಿರಾಸಕ್ತಿ

ಗೃಹಸಚಿವ ಆರಗ ಜ್ಞಾನೇಂದ್ರ ಅವರು ಮೊನ್ನೆ ವಿಧಾನಸಭೆಯಲ್ಲಿ ಕುದುರೆ ವಿಚಾರ ಪ್ರಸ್ತಾಪಿಸಿದರು. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಕುದುರೆ ಸವಾರಿ ಮಾಡಿದರು. ಅಲ್ಲಿ ಸಿದ್ದರಾಮಯ್ಯ ಅವರ ಕುದುರೆ ಲಯಬದ್ಧವಾಗಿ ಓಡಿತು ಆದರೆ, ಗೃಹ ಸಚಿವರ ಕುದುರೆ ಹೆಜ್ಜೆ ಕೀಳಲೇ ಇಲ್ಲ ಸಿದ್ದರಾಮಯ್ಯ ತಮ್ಮೂರು ಸಿದ್ಧರಾಮನಹುಂಡಿಯ ಜಾತ್ರೆಯಲ್ಲಿ ಹೆಜ್ಜೆ ಹಾಕಿ ಕುಣಿದರಲ್ಲ ಅದಕ್ಕೆ ಒಂದು ದಿನ ಮೊದಲು ವಿಧಾನಸಭೆಯಲ್ಲಿ ಕಾನೂನು ಸುವ್ಯವಸ್ಥೆ ವೈಫಲ್ಯದ ಬಗ್ಗೆ ಮಾತನಾಡಿದರು. ಸಿದ್ದರಾಮಯ್ಯ ಹಳೇ ಹುಲಿ. ಅವರು ಮಾತಿಗೆ ನಿಂತರೆ ಮುಗೀತು ಬಗೆ ಬಗೆಯ ವಾಗ್ಬಾಣಗಳಿಂದ ಎದುರಾಳಿಗಳನ್ನು ಕಟ್ಟಿ ಹಾಕುವುದರಲ್ಲಿ ಮುಂದು, ಕಳೆದ ವಾರ ವಿಧಾನಸಭೆಯಲ್ಲೂ ಹಾಗೇ ಆಯ್ತು. ಕಾನೂನು ಸುವ್ಯವಸ್ಥೆ ಬಗ್ಗೆ ಸರ್ಕಾರದ ವಿರುದ್ಧ ಚಾಟಿ ಬೀಸುತ್ತಿದ್ದ ಸಿದ್ದರಾಮಯ್ಯ ಗೃಹ ಸಚಿವರನ್ನು ಸಾಕಷ್ಟು ಗೋಳು ಹೂಯ್ದುಕೊಳ್ಳಕೊಂಡರು. ಹಾಗೆ ನೋಡಿದರೆ ಅವತ್ತು ಸಿದ್ದರಾಮಯ್ಯ ಅಷ್ಟೊಂದು ಅಗ್ರೆಸಿವ್ ಮೂಡ್‌ನಲ್ಲಿ ಇರಲಿಲ್ಲ. ಒಂದು ಹದದಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಗೃಹ ಸಚಿವರು ಕುದುರೆ ಎಂದಿದ್ದೇ ಬಂತು. ಸಿದ್ದರಾಮಯ್ಯ ಅವರು ಕುದುರೆ ಭಾಷೆಯಲ್ಲೇ ಟಾಂಗ್ ಕೊಟ್ಟರು. ಹೇಳಿಕೇಳಿ ಆರಗ ಜ್ಞಾನೇಂದ್ರ ಮೃದು ಸ್ವಭಾವದವರು, ಸಜ್ಜನರಲ್ಲೇ ಸಜ್ಜನ ಎಂಬ ಬಿರುದಾವಳಿ ಅವರಿಗೇ ಮೀಸಲು, ಹಾಗಾಗಿ ಸಿದ್ದರಾಮಯ್ಯ ಅವರಂತಹ ಮಾತಿನ ಮಲ್ಲರ ಮುಂದೆ ಜ್ಞಾನೇಂದ್ರ ಅವರಂಥ ಮಿತಭಾಷಿಯಿಂದ ಅಷ್ಟೇ ಪ್ರಖರ ಪ್ರತಿದಾಳಿ ನಿರೀಕ್ಷಿಸುವುದು ತಪ್ಪಾಗುತ್ತದೆ. ಆದರೆ, ಆಡಳಿತ ಪಕ್ಷದ ಇತರರಿಂದಲೂ ಜ್ಞಾನೇಂದ್ರರಿಗೆ ಸಮರ್ಥ ಬೆಂಬಲ ಸಿಗಲಿಲ್ಲ. ಯಕೆಂದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಆಗ ವಿಧಾನ ಪರಿಷತ್‌ನಲ್ಲಿದ್ದರು. ಇದರಿಂದ ಗೃಹ ಸಚಿವರು ಬಹುತೇಕ ಏಕಾಂಗಿಯಾಗುವಂತಾಯಿತು.

ಸಿದ್ದರಾಮಯ್ಯ ಆತ್ಯಂತ ಪ್ರಮುಖವಾದ ಕಾನೂನು ಸುವ್ಯವಸ್ಥೆ ವಿಚಾರ ಕೈಗೆತ್ತಿಕೊಂಡಿದ್ದರು. ಅದರಿಂದ ತಮ್ಮದೇ ಪಕ್ಷದ ಸರ್ಕಾರಕ್ಕೆ ಮುಜುಗರ ಎಂಬ ಪರಿಜ್ಞಾನ ಅಲ್ಲಿದ್ದ ಬಿಜೆಪಿ ಶಾಸಕರಿಗೆ ಇದ್ದಂತೆ ಕಾಣಲಿಲ್ಲ. ಈ ಚರ್ಚೆಯ ಒಂದು ಹಂತದಲ್ಲಿ ಕೆಲವರು ಹೊನ್ನಾವರದ ಪರೇಶ್ ಮೇಸ್ತ ಕೊಲೆ ಪ್ರಕರಣದ ಬಗ್ಗೆ ಪ್ರಸ್ತಾಪಿಸಿ ಸಿದ್ದರಾಮಯ್ಯ ಮಾತಿಗೆ ಓಫ ತುಂಡರಿಸಲು ಯತ್ನಿಸಿದರು. ಇದರ ಹೊರತಾಗಿ ಅಲ್ಲಿದ್ದ ಇತರ ಮಂತ್ರಿಗಳು, ಆಡಳಿತ ಪಕ್ಷದ ಶಾಸಕರು ಕಾನೂನು ಸುವ್ಯವಸ್ಥೆ ಕಾಪಾಡುವುದರಲ್ಲಿ ನಮ್ಮ ಸರ್ಕಾರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇದರಲ್ಲಿ ರಾಜೀ ಪ್ರಶ್ನೆಯಿಲ್ಲವೆಂದು ಅಂಕಿ, ಅಂಶ ಮತ್ತು ಉದಾಹರಣೆಗಳ ಸಹಿತ ಸಮರ್ಥನೆಗಿಳಿಯಲೇ ಇಲ್ಲ. ಇದರಿಂದ ಅರ್ಥವಾಗುವುದೇನೆಂದರೆ, ಒಂದೋ ಈ ಶಾಸಕರಿಗೆ ಇಂಥದರಲ್ಲಿ ಆಸಕ್ತಿಯೇ ಇಲ್ಲ. ಹೀಗೇ ಚರ್ಚಿಸುವುದರಿಂದ ಪ್ರಯೋಜನವೇನು ಎಂಬ ಉದಾಸೀನ ಭಾವವೂ ಇರಬಹುದು. ಆದರೆ, ಪ್ರತಿಪಕ್ಷದ ಸಾಲಿನಲ್ಲಿ ಈ ಸ್ಥಿತಿ ಇಲ್ಲ. ಸಿದ್ದರಾಮಯ್ಯ ಅವರಿರಲಿ ಅಥವಾ ಶಿವಾನಂದ್ ಪಾಟೀಲ್ ಆಗಿರಲಿ. ಕಾಂಗ್ರೆಸ್‌ನಿಂದ ಯಾರೇ ಚರ್ಚೆಯಲ್ಲಿ ಭಾಗಿಯಾದರೂ ಇತರ ಸದಸ್ಯರು ಅವರ ಬೆಂಬಲಕ್ಕೆ ನಿಲ್ಲುತ್ತಾರೆ. ಸದನದಲ್ಲಿ ಮಾತನಾಡುವವರಲ್ಲಿ ಎರಡು ವಿಧದವರು ಇರುತ್ತಾರೆ. ಇವರಲ್ಲಿ ಯಾರ ಆಸರೆಯ ಗೊಡವೆಯಿಲ್ಲದೇ ಘೋಡಾ ಹೈ. ಮೈದಾನ್ ಹೈ ಎಂದುಕೊಂಡು ಮುನ್ನುಗ್ಗುವವರದ್ದು ಒಂದು ಬಗೆ.

ಪಕ್ಕವಾದ್ಯ ನುಡಿಸುವವರಿದ್ದರೆ ಮಾತ್ರ ಸ್ವರ ಮಾಧುರ್ಯ ಹೊರಹೊಮ್ಮಿಸುವವರದ್ದು ಇನ್ನೊಂದು ಬಗೆ. ಇಲ್ಲದಿದ್ದರೆ ಇಂಥವರ ಗಂಟಲ ಪಸೆ ಆರಿ ಹೋಗುತ್ತದೆ. ಇದರ ಹೊರತಾಗಿ ಮೂರನೇ ಆಯಾಮಾದವರೂ ಇರುತ್ತಾರೆ. ಇವರಿಗೆ ಆಕಾಶ ಕಳಚಿ ಬೀಳುತ್ತಿದ್ದರೂ ಏನು ಅನ್ನಿಸುವುದಿಲ್ಲ. ಸದನಕ್ಕೆ ಯಾಕೆ ಬರುತ್ತಾರೆ ಎನ್ನುವುದು ಅವರಿಗೇ ಗೊತ್ತಿರುವುದಿಲ್ಲ. ಇಂಥವರು ಅನ್ಯಗ್ರಹ ಜೀವಿಗಳಾಗಿರಲು ಲಾಯಕ್ಕಾದವರು.

ಸಂಸದೀಯ ಪಟುವಾಗಲು ಅವಕಾಶ: ಸದ್ಯ ನಡೆಯುತ್ತಿರುವುದು ಬಜೆಟ್ ಅಧಿವೇಶನ ಹಾಲಿ ವಿಧಾನಸಭೆ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಇಲಾಖಾವಾರು ಬೇಡಿಕೆಗಳ ಮೇಲಿನ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ. ಶಾಸಕರಿಗೆ ತಮ್ಮ ಪ್ರತಿಭಾ ಪ್ರದರ್ಶನ ಮಾಡಲು ಇದೊಂದು ಸುವರ್ಣಾವಕಾಶ. ಈ ವೇದಿಕೆಯನ್ನು ಸಮರ್ಪಕವಾಗಿ ಬೆಳೆಸಿಕೊಂಡರೆ ಉತ್ತಮ ಸಂಸದೀಯ ಪಟುವಾಗಬಹುದು. ಬೇರೆ ಸಂದರ್ಭದಲ್ಲಿ ಮಾತಿಗೆ ಅವಕಾಶ ಸಿಗುವುದಿಲ್ಲವೆಂದು ಶಾಸಕರು ಗೊಣಗುತ್ತಾರೆ. ಬೇಡಿಕೆ ಮೇಲಿನ ಚರ್ಚೆಯಲ್ಲಿ ಕೊತ್ತಂಬರಿ ಸೊಪ್ಪಿನಿಂದ ಆರ್ಥಿಕತೆಯವರೆಗೆ ಮಾತನಾಡಬಹುದು. ಇಂಥ ಸದವಕಾಶವನ್ನು ಯಾರಾದರೂ ಹಾಳು ಮಾಡಿಕೊಳ್ತಾರಾ, ಆದರೆ, ಹೆಚ್ಚಿನವರಿಗೆ ಔಧಾಸೀನ್ಯ. ಸರ್ಕಾರಕ್ಕೆ ಇರಿಸುಮುರಿಸು ಆಗುತ್ತಿದ್ದರೂ ಎದ್ದು ನಿಂತು ಮಾತನಾಡಲಾರದಷ್ಟು ಜಡಭರಿತ ಸ್ಥಿತಿಯಲ್ಲಿ ಶಾಸಕರಿದ್ದಾರೆ. ಆಡಳಿತ ಪಕ್ಷದವರು ಇಷ್ಟೊಂದು ಕಂಫರ್ಟ್ ಆಗಿ ಕುಳಿತುಕೊಂಡಾಗ ವಿರೋಧ ಪಕ್ಷ ಕೈ ಮೇಲುಗೈ ಸಹಜ. ಆದರೆ, ಜನಪರ ವಿಚಾರದ ಮೇಲೆ ಆರೋಗ್ಯಕರ ಚರ್ಚೆ ನಡೆಯದಿದ್ದರೆ ಅಧಿವೇಶನದ ಫಲಶೃತಿ ಬಗ್ಗೆಯೇ ಕೇಳಬೇಕಾಗಿ ಬರುತ್ತದೆ. ಗೃಹ ಇಲಾಖೆಯಲ್ಲಿ ಏನಾದರೂ ವ್ಯತ್ಯಾಸವಾದರೆ ಅದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು. ಸದನದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಚರ್ಚೆಯಾಗುವಾಗ ಅದಕ್ಕೆ ಉತ್ತರಿಸುವ ಉತ್ತರದಾಯಿತ್ವ ಇಡೀ ಸರ್ಕಾರದ್ದು, ಗೃಹ ಸಚಿವರು ಸರ್ಕಾರದ ಮುಖವಾಣಿಯಾಗಿ ಉತ್ತರ ನೀಡಬಹುದು. ಅವರ ಬೆಂಬಲಕ್ಕೆ ನಿಲ್ಲಲು ಸಂಪುಟದ ಇತರರು ಸಜ್ಜಾಗಿರಬೇಕಾಗುತ್ತದೆ. ಅಂತಹ ಸಕಾರಾತ್ಮಕ ಮನೋಭಾವ ಮೊನ್ನೆ ಸದನದಲ್ಲಿ ಕಾಣಿಸಲಿಲ್ಲ. ಹಾಗಾಗಿ ಎಂದಿನಂತೆ ಸಿದ್ದರಾಮಯ್ಯ ಅವರೇ ಮ್ಯಾನ್ ಆಫ್ ದಿಮ್ಯಾಚ್ ಪುರಸ್ಕಾರಕ್ಕೆ ಭಾಜನರಾದರು. ಗೃಹ ಸಚಿವ ಆರಗ ಜ್ಞಾನೇಂದ್ರ ಸಮಾಜವಾದಿ ಚಳುವಳಿಯ ತವರು ಶಿವಮೊಗ್ಗ ಜಿಲ್ಲೆಯವರು. ಜೆ.ಹೆಚ್.ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ಆಡಳಿತ ಯಂತ್ರದ ಬಗ್ಗೆ ವಿಡಂಬಿಸಲು ಹಳೆ ಕುದುರೆಯ ಕಥೆ ಹೇಳಿದ್ದರು. ಸಿದ್ದರಾಮಯ್ಯ ಅವರು ಗೃಹ ಇಲಾಖೆ ವೈಫಲ್ಯದ ಪಟ್ಟಿ ಮಾಡುತ್ತಿದ್ದಾಗ ಜೆ. ಎಚ್. ಪಟೇಲರು ಹೇಳಿದ್ದ ಹಳೆ ಕುದುರೆಯ ಕಥೆ ನೆನಪಿಸಲು ಆರಗ ಜ್ಞಾನೇಂದ್ರ ಮುಂದಾದರು. ಆದರೆ, ಕೊಟ್ಟ ಕುದುರೆಯನ್ನು ಏರಲರಿಯದವನು ವೀರನೂ ಅಲ್ಲ ಧೀರನೂ ಅಲ್ಲ ಎಂಬ ಅಲ್ಲಮ ಪ್ರಭುವಿನ ವಚನ ಹೇಳುವ ಮೂಲಕ ಸಿದ್ದರಾಮಯ್ಯ ಸಿಕ್ಸರ್ ಬಾರಿಸಿದರು. ಈ ಸಂದರ್ಭದಲ್ಲಿ ವಿರೋಧ ಪಕ್ಷದವರ ತಿವಿತದ ಮಾತು, ಗಲಾಟೆ ನಡುವೆ ಗೃಹ ಸಚಿವರು ಹೇಳಿದ್ದು ಏನೆಂದು ಸರಿಯಾಗಿ ಕೇಳಿಸಲೇ ಇಲ್ಲ. ಅದೇ ಕಾಲಕ್ಕೆ ಅಲ್ಲಮನ ವಚನದ ಸಾಲುಗಳನ್ನು ಸಿದ್ದರಾಮಯ್ಯ ವಾಚಿಸಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಮೈಕ್ ಹಾಕಿಕೊಂಡು ರಾಗಬದ್ಧವಾಗಿ ಹಾಡ್ತಾರಲ್ಲ. ಅಷ್ಟು ಸ್ಫುಟವಾಗಿ ಕೇಳಿಸಿತು. ಯಾಕೆಂದರೆ ಸಿದ್ದರಾಮಯ್ಯ ಮಾತನಾಡುವಾಗ ಅವರ ಪಕ್ಷದವರು ಕಿವಿಯರಳಿಸಿ ಕೇಳಿಸಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಆಡಳಿತ ಪಕ್ಷದವರಿಗೆ ನಿದ್ರಾಂಗನೆಯ ಆಲಿಂಗನವಾದಂತಿತ್ತು. ಹಾಗಾಗಿ ಸಿದ್ದರಾಮಯ್ಯ ಮಾತು ಸದನದಲ್ಲಿ ಅಚ್ಚೊತ್ತಿತ್ತು. ಇದೊಂದು ಘಟನೆ ಮುಂದಿಟ್ಟುಕೊಂಡು ಇಷ್ಟು ಸುದೀರ್ಘವಾಗಿ ಹೇಳಲು ಸಕಾರಣವಿದೆ. ಸರ್ಕಾರಕ್ಕೆ ವರ್ಚಸ್ಸು ತರುವುದರಲ್ಲಿ ಶಾಸಕರ ನಡವಳಿಕೆಯೂ ಮುಖ್ಯವಾದುದು. ಅಧಿವೇಶನ ನಡೆಯುವಾಗ ಆಡಳಿತ ಪಕ್ಷದವರು ಹೆಚ್ಚು ಜಾಗ್ರತರಾಗಿರಬೇಕು. ಮಾವನ ಮನೆಗೆ ಬಂದು ಹೋದಂತೆ ಸದನದಲ್ಲಿ ಕುಳಿತು ಎದ್ದು ಹೋಗುವುದಲ್ಲ.

ಕಲಿಯಬೇಕಷ್ಟೇ: ವಾಟಾಳ್ ನಾಗರಾಜ್ ಯಾವತ್ತೂ ಸದನಕ್ಕೆ ಲೇಟಾಗಿ ಬರುತ್ತಿರಲಿಲ್ಲವಂತೆ, ಕಡೆಯವರೆಗೂ ಕುಳಿತಿರುತ್ತಿದ್ದರು. ವಾಟಾಳ್ ಮಂತ್ರಿಯಾದವರಲ್ಲ. ಅವರ ಪಕ್ಷದಲ್ಲಿ ಅವರೊಬ್ಬರೇ

ಆಯ್ಕೆಯಾಗಿ ಶಾಸನಸಭೆಗೆ ಬರುತ್ತಿದ್ದರು. ಯಾವುದಾದರೂ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿ ಸಂಪುಟ ಸೇರಬಹುದಿತ್ತು. ಅಂತಹ ಅವಕಾಶ ಬಂದಾಗಲೂ ವಾಟಾಳ್ ಮನಸ್ಸು ಮಾಡಲಿಲ್ಲ ಎಂಬ ವರ್ತಮಾನವಿದೆ ಆದೇನೇ ಇರಲಿ. ಸದನದಲ್ಲಿ ಮಾತ್ರ ಅವರು ವಿಧೇಯ ವಿದ್ಯಾರ್ಥಿಯಂತೆ ಹಾಜರಿರುತ್ತಿದ್ದರು.

ಇಲ್ಲಿ ಉಲ್ಲೇಖಿಸಲೇ ಬೇಕಾದ ಒಂದು ಸಂಗತಿ ಇದೆ. ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸದನ ಶ್ರದ್ಧೆ. ಅವರು ಈಗಲೂ ದಿನಪೂರ್ತಿ ವಿಧಾನಸಭೆಯಲ್ಲಿ ಕುಳಿತಿರುತ್ತಾರೆ. ವಿಧಾನಸಭೆ ಅಧಿವೇಶನ ಅಂತಲೇ ಅಲ್ಲ. ಅವರ ಸಾರ್ವಜನಿಕ ಜೀವನದ ಉದ್ದಕ್ಕೂ ಸಮಯ ಪಾಲನೆಯನ್ನು ವ್ರತದಂತೆ ಮಾಡಿದರು. ಅವರ ಸಮಯಪಾಲನೆ ಶಿಸ್ತಿಗೆ ಹಿರಿಯ ಅದಿಕಾರಿಗಳೇ ಬೇಸ್ತುಬೀಳುತ್ತಾರೆ. ಹಾಗಂತ ಅವರೇನು ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಅಥವಾ ಬೇರಾವುದೇ ಸ್ಥಾನಮಾನದ ಆಕಾಂಕ್ಷೆ ಇಟ್ಟುಕೊಂಡಿಲ್ಲ. ಆದರೆ, ವಿಧಾನಮಂಡಲ ಕಲಾಪದಲ್ಲಿ ಅವರಿಗೆ ಆಷ್ಟೊಂದು ಶ್ರದ್ಧೆ ಮತ್ತು ಆಸಕ್ತಿ. ಸದನದಲ್ಲಿ ನಡೆಯುವ ಚರ್ಚೆಯನ್ನು ಆಲಿಸುವ ಬಿಎಸ್‌ವೈ ಅದರ ಟಿಪ್ಪಣಿಯನ್ನು ಮಾಡಿಕೊಳ್ಳುತ್ತಾರೆ. ಅಗತ್ಯ ಕಂಡಾಗ ಸಲಹೆಯನ್ನು ಕೊಡುತ್ತಾರೆ. ಬಿಎಸ್‌ವೈ ಅವರ ಈ ಲವಲವಿಕೆ, ಆಸಕ್ತಿ ಇಡೀ ಭಾಜಪಾ ಪಾಳಯದ ಎಲ್ಲ ಶಾಸಕರಿಗೆ ಮಾದರಿ ಅವರ ಈ ನಡವಳಿಕೆ ನೋಡಿಯಾದರೂ ಶಾಸನಸಭೆಯ ಮಹತ್ವವನ್ನು ಬಿಜೆಪಿ ಶಾಸಕರು ಅರಿತುಕೊಳ್ಳಬೇಕಲ್ಲವೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿಯವರು ಅವರ ಸರತಿಯಾಗಿ ಕಾಯ್ದು ಚೀಲಗಟ್ಟಲೆ ಕಾಗದಪತ್ರ ಹರವಿಟ್ಟುಕೊಂಡು ಮಾತನಾಡುತ್ತಾರೆ. ಇನ್ನು ಕರ್ನಾಟಕ ವಿಧಾನಸಭೆಯ ಅತ್ಯಂತ ಮೇಧಾವಿಯೆಂದರೆ ಮಾಜಿ ಸ್ಪೀಕರ್ ಕೆ. ಆರ್. ರಮೇಶ್ ಕುಮಾರ್ ಅವರು ಮಾತಿಗೆ ನಿಂತರೆ ಅದೊಂದು ವಾಗ್ಝರಿ. ಈ ಹಿಂದೆ ವಿಧಾನ ಪರಿಷತ್‌ನಲ್ಲೂ ಎಂ.ಸಿ. ನಾಣಯ್ಯ ಅವರಂತಹ ಪ್ರಬುದ್ಧರಿದ್ದರು. ನಿಜವಾಗಿ ರಮೇಶ್ ಕುಮಾರ್, ನಾಣಯ್ಯ ಮೊದಲಾದವರು ರಾಜ್ಯಸಭೆಗೆ ಹೋಗಲು ಅವಕಾಶವಾಗಿದ್ದರೆ ಕರ್ನಾಟಕಕ್ಕೆ ಆದೊಂದು ಹೆಚ್ಚುಗಾರಿಕೆಯಾಗುತ್ತಿತ್ತು. ಮಾಜಿ ಸಭಾಪತಿಗಳಾದ ಬಿ.ಎಲ್. ಶಂಕರ್, ವಿ.ಆರ್. ಸುದರ್ಶನ್ ಅವರು ಸದನದ ಸಭ್ಯ ನಡವಳಿಕೆಯನ್ನು ಎತ್ತಿ ಹಿಡಿದವರು. ಹಾಗೆಯೇ ಹಾಲಿ ಸಭಾಪತಿ ಬಸವರಾಜ ಹೊರಟ್ಟಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೂ ಉತ್ತಮ ರೀತಿಯಲ್ಲಿ ಅಧಿವೇಶನ ನಡೆಸಲು ಪರಿಶ್ರಮ ವಹಿಸುತ್ತಿದ್ದಾರೆ. ಸಚಿವ ಮಾಧುಸ್ವಾಮಿ ಮತ್ತು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ನಡುವಿನ ವಾದ–ಪ್ರತಿವಾದ ಹಾಲಿ ವಿಧಾನಸಭೆಯ ಪ್ರಮುಖ ಝಲಕ್‌ಗಳಲ್ಲೊಂದು. ಹಾಗಾಗಿ ಶಾಸಕರು ಕಲಿತುಕೊಳ್ಳಲು ಸಾಕಷ್ಟು ಮಾದರಿಯಿದೆ. ಆದರೆ, ಕಲಿತುಕೊಳ್ಳಬೇಕಷ್ಟೇ.

ಭರವಸೆಯೂ ಇದೆ: ಕಾಂಗ್ರೆಸ್‌ನ ಎರಡನೇ ಹಂತದ ನಾಯಕರಲ್ಲಿ ಕೃಷ್ಣ ಬೈರೇಗೌಡರು ಅಧ್ಯಯನಶೀಲರು, ಸಿದ್ದರಾಮಯ್ಯ ಅವಧಿಯಲ್ಲಿ ಕೃಷಿ ಸಚಿವರಾಗಿದ್ದ ಅವರು ಇಲಾಖಾವಾರು ಬೇಡಿಕೆಗಳ ಮೇಲಿನ ಚರ್ಚೆಗೆ ಅತ್ಯುತ್ತಮ ಎನ್ನಬಹುದಾದ ಉತ್ತರ ನೀಡಿದ್ದರು. ಬಿಜೆಪಿಯಲ್ಲಿ ಹೊಸಬರಲ್ಲಿ ಕುಡಚಿ ಶಾಸಕ ಪಿ. ರಾಜೀವ್ ಅವರಲ್ಲಿ ಉತ್ತಮ ಸಂಸದೀಯ ಪಟುವಾಗುವ ಎಲ್ಲ ಲಕ್ಷಣವಿದೆ. ಗಲಾಟೆ ಗದ್ದಲವಾಗುವಾಗ ಹತ್ತರ ಜೊತೆಗೆ ಹನ್ನೊಂದರಂತೆ ಕೂಗಾಡುವವರು ಸಾಕಷ್ಟು ಮಂದಿಯಿದ್ದಾರೆ. ಆದರೆ, ಆವರಣದ ಮಹತ್ವವರಿತು ತಯಾರಿ ಮಾಡಿಕೊಂಡು ಬಂದು ಮಾತನಾಡುವವರು ಬೆರೆಳೆಣಿಕೆಯ ಜನ. ಮೊದಲ ಬಾರಿಗೆ ಆಯ್ಕೆಯಾಗಿ ಬಂದವರಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್, ಡಾ.ಅಂಜಲಿ ನಿಂಬಾಳ್ಕರ್ ಗಮನ ಸೆಳೆದಿದ್ದಾರೆ. ತಾವು ಅರ್ಥಶಾಸ್ತ್ರದ ವಿದ್ಯಾರ್ಥಿ ಎಂದು ಹೇಳುತ್ತಲೇ ಬಜೆಟ್‌ನಿಂದ ಹಿಡಿದು ಎಲ್ಲ ವಿಷಯದ ಬಗ್ಗೆ ಗ್ರಾಮೀಣ ಸೊಗಡಿನಲ್ಲಿ ಮಾತನಾಡುವ ಶಿವಲಿಂಗೇಗೌಡರನ್ನು ಮರೆಯಲಾಗದು. ಎಸ್. ಸುರೇಶ್ ಕುಮಾರ್. ಎ.ಟಿ. ರಾಮಸ್ವಾಮಿ, ಹೆಚ್. ಕೆ. ಕುಮಾರಸ್ವಾಮಿ ಮುಂತಾದ ಹಿರಿಯರು ಸದನದ ಘನತೆ ಹೆಚ್ಚಿಸಬಲ್ಲವರು. ಪ್ರತ್ಯುತ್ಪನ್ನಮತಿಗಳಲ್ಲಿ ಸಿ.ಟಿ.ರವಿ ಅವರನ್ನು ಮೀರಿಸುವವರಿಲ್ಲ. ಈ ದೃಷ್ಟಿಯಿಂದ ಕರ್ನಾಟಕ ವಿಧಾನಮಂಡಲವನ್ನು ದೇಶಕ್ಕೆ ಮಾದರಿಯೆಂದು ನಿಸ್ಸಂಶಯವಾಗಿ ಹೇಳಬಹುದು. ಯಾರೋ ಕೆಲವು ಶಾಸಕರ ಬೇಜಬಾಬ್ದಾರಿತನದಿಂದ

ಇಡೀ ಸದನವನ್ನು ದೂಷಣೆಗೆ ಒಳಪಡಿಸಲಾಗದು ಈ ಸೂಕ್ಷ್ಮವನ್ನು ಇಂತಹ ಸದಸ್ಯರು ಅರ್ಥ ಮಾಡಿಕೊಂಡರೆ ಸಾಕು.

ಲೇಖಕರು:ಶಶಿಧರ ಹೆಗಡೆ,

ಆಧಾರ:ವಿಜಯ ಕರ್ನಾಟಕ, ದಿನಾಂಕ: 27.03.2022.

12.ನಾಕಕಿಂತ ಸುಂದರವಾದ ಕಾಶ್ಮೀರದ ನೆನಪುಗಳು

ನಮ್ಮ ಕಾಶ್ಮೀರಿ ಪಂಡಿತರ ಕುಟುಂಬ ಅನನ್ಯವಾಗಿತ್ತು. ಅದು ಹಿಂದೂ ಶೈವ, ಬ್ರಾಹ್ಮಣ ಸಮುದಾಯ ಎಂಬುದರಲ್ಲಿ ಸಂದೇಹವಿಲ್ಲ. ಆದರೆ, ಅದು ತುಂಬಾ ಮಾನವೀಯವಾದುದು. ಇತರ ಸಂಸ್ಕೃತಿಗಳು ಮತ್ತು ಸಮುದಾಯಗಳನ್ನು ನಾವೂ ಗೌರವಿಸಿದ್ದೇವೆ. ಸ್ವೀಕರಿಸಿದ್ದೇವೆ. ಹಿಂದೂ, ಸಿಖ್, ಜೈನ, ಮುಸ್ಲಿಂ ಅಥವಾ ಕ್ರಿಶ್ಚಿಯನ್ ಎಂಬ ಭೇದವಿರಲಿಲ್ಲ. ಸಾಮಾಜಿಕ ವರ್ಗ, ಜಾತಿ ಅಥವಾ ಜನಾಂಗದ ಮಾನದಂಡಗಳನ್ನು ಮೀರಿ ಬದುಕಿದ್ದೇವೆ. ಇತರರು ತಮ್ಮ ಆಧ್ಯಾತ್ಮಿಕ ಪ್ರಗತಿಗಾಗಿ ಮಾಡಿದ್ದನ್ನು ಗೌರವಿಸುತ್ತೇವೆ. ನಮ್ಮ ಮುಸ್ಲಿಂ ಸ್ನೇಹಿತರ ಮನೆಯಲ್ಲಿ ಆಹಾರ ಸೇವಿಸದಂತೆ ನಮ್ಮ ನಂಬಿಕೆಗಳು ನಮ್ಮನ್ನು ತಡೆಯಲಿಲ್ಲ. ಮಸೀದಿ ಮತ್ತು ಗುರುದ್ವಾರಗಳಿಗೆ ಭೇಟಿ ನೀಡುವುದನ್ನು ಅದು ತಡೆಯಲಿಲ್ಲ. ದಾರಿಹೋಕರು, ವ್ಯಾಪಾರಿಗಳು, ಪುರಸಭೆಯ ಕೆಲಸಗಾರರು, ಜೆಪ್ಸಿಗಳು, ಫಕೀರ್‌ಗಳು, ಸಾಧುಗಳು ಮತ್ತು ಮಂತ್ರವಾದಿಗಳು ಸೇರಿದಂತೆ ಎಲ್ಲರಿಗೂ ಪೂರ್ಣ ಹೃದಯದ ಆತಿಥ್ಯ ಕೊಟ್ಟಿದ್ದೆವು. ನಮ್ಮನ್ನು ಇಷ್ಟು ಉದಾರವಾಗಿಸಿದ್ದು ಯಾವುದು ಅದಕ್ಕೆ ಕಾರಣ ಕಾಶ್ಮೀರಿ ಪಂಡಿತರ ಜೀವನ ವಿಧಾನ, ಕಾಶ್ಮೀರ ಶೈವಧರ್ಮ ಬಹುಮಟ್ಟಿಗೆ ಮರೆತುಹೋಗಿರುವ ತತ್ವಗಳನ್ನು ಆಧರಿಸಿದ ವಿಶಿಷ್ಟ ಜೀವನಧರ್ಮ. ಇಂದು ಈ ಸಮುದಾಯ ತನ್ನ ಆಧ್ಯಾತ್ಮಿಕ ಮತ್ತು ತಾತ್ವಿಕ ಅಸ್ತಿತ್ವದ ನೆಲೆಯಿಂದ ಕಿತ್ತು ಹಾಕಲ್ಪಟ್ಟಾಗ, ಐದು ಸಾವಿರ ವರ್ಷಗಳಷ್ಟು ಹಳೆಯದಾದ ಈ ಶ್ರೇಷ್ಠ ಸಾಂಸ್ಕೃತಿಕ ಪರಂಪರೆಯನ್ನು ನೆನಪಿಸಿಕೊಳ್ಳುವುದು ಉಳಿಸಿಕೊಳ್ಳುವುದು ಅತ್ಯಗತ್ಯ. ಪ್ರಾಯಶ: ಇದು ಜಗತ್ತಿನ ಅತ್ಯಂತ ಹಳೆಯ ಜೀವನ ಸಂಸ್ಕೃತಿ ಮತ್ತು ತತ್ವಶಾಸ್ತ್ರ ಅನೇಕ ಪ್ರಕ್ಷುಬ್ಧ ಅವಧಿಗಳ ಮೂಲಕ ಹಾದುಬಂದಿದೆ, ಮುಂದಿನ ದಾರಿಯನ್ನು ತೋರಿಸಿದೆ. ಜಗತ್ತನ್ನು ಇನ್ನಷ್ಟು ಉತ್ತಮ ತಾಣವಾಗಿಸುವಂತೆ ಅವರನ್ನು ಪ್ರೇರೇಪಿಸಿದೆ.

ಕಾಶ್ಮೀರ ಕನಸಿನ ಭೂಮಿ, ಪ್ರಾಚೀನ ಕವಿ ಮತ್ತು ನಾಟಕಕಾರ ಕಾಳಿದಾಸ ಕಾಶ್ಮೀರದ ಬಗ್ಗೆ, "ಈ ಸ್ಥಳವು ಸ್ವರ್ಗಕ್ಕಿಂತ ಸುಂದರವಾಗಿದೆ. ಪರಮ ಆನಂದ ಮತ್ತು ಸಂತೋಷವನ್ನು ನೀಡುತ್ತದೆ. ನಾನು ಇಲ್ಲಿನ ಮಕರಂದದ ಸರೋವರದಲ್ಲಿ ಸ್ನಾನ ಮಾಡುತ್ತಿದ್ದೇನೆ" ಎಂದು ನನಗೆ ತೋರುತ್ತದೆ ಎಂದಿದ್ದ. ಪ್ರಾಚೀನ ಇತಿಹಾಸಕಾರ ಕಲ್ಹಣ ಇದು ಋಷಿ ಕಶ್ಯಪರ ತಪಸ್ಸಿದ್ಧಿಗಾಗಿ ಸೌಮ್ಯವಾಗಿ ಸೂರ್ಯ ಬೆಳಗುವ ತಾಣ. ದೊಡ್ಡ ಮತ್ತು ಎತ್ತರದ ಮನೆಗಳು, ಜ್ಞಾನ, ಕೇಸರಿ, ಮಂಜುಗಡ್ಡೆಯ ತಂಪಾದ ನೀರು ಮತ್ತು ಸ್ವರ್ಗದಲ್ಲೂ ಇಲ್ಲದ ಅಪರೂಪದ ದ್ರಾಕ್ಷಿ ಇಲ್ಲಿ ಹೇರಳ. ತ್ರಿಲೋಕಗಳಲ್ಲಿ ಕೈಲಾಸ ಅತ್ಯುತ್ತಮವಾಗಿರುವಂತೆ, ಹಿಮಾಲಯದಲ್ಲಿ ಕಾಶ್ಮೀರ ಅತ್ಯುತ್ತಮ ಎನ್ನುತ್ತಾನೆ. ಬ್ರಿಟಿಷ್ ಅಧಿಕಾರಿ ಸರ್ ವಾಲ್ಟರ್ ಲಾರೆನ್ಸ್ ಹೇಳುತ್ತಾರೆ. ಕಾಶ್ಮೀರ ಕಣಿವೆಯು ಪಚ್ಚೆ ಮರಕತದ ನೆಲ, ಸರೋವರಗಳು, ತಿಳಿಯಾದ ತೊರೆಗಳು, ಹಸಿರು ಹುಲ್ಲುಗಾವಲು ಭವ್ಯವಾದ ಮರಗಳು, ಗಾಳಿ ಬೀಸುವ ಪ್ರಬಲ ಪರ್ವತಗಳ ನಾಡು. ಇಲ್ಲಿನ ನೀರು ತಂಪು ಮತ್ತು ಸಿಹಿ. ಇಲ್ಲಿನ ಪುರುಷರು ಬಲಶಾಲಿಗಳು ಮತ್ತು ಮಹಿಳೆಯರು ಸುಂದರಿಯರು. ಜೀವನವನ್ನು ಆನಂದದಾಯಕವಾಗಿಸುವ ಎಲ್ಲವನ್ನು ಕಣಿವೆ ಒಳಗೊಂಡಿದೆ. ಇಲ್ಲಿನ ಕ್ರೀಡೆಯು ವೈವಿಧ್ಯಮಯ ಕಲಾವಿದರಿಗೆ ಸೌಂದರ್ಯಮಯ, ಪರ್ವತಾರೋಹಿಗಳಿಗೆ ಪರ್ವತಮಯ, ಸಸ್ಯಶಾಸ್ತ್ರಜ್ಞರಿಗೆ ಮೂಲಿಕಾಮಯ, ಭೂವಿಜ್ಞಾನಿಗಳಿಗೆ ವಿಶಾಲವಾದ ಕ್ಷೇತ್ರ ಮತ್ತು ಪುರಾತತ್ತ್ವ ಶಾಸ್ತ್ರಜ್ಞರಿಗೆ ಭವ್ಯವಾದ ಅವಶೇಷಗಳಿವೆ.

ಚಕ್ರವರ್ತಿ ಜಹಾಂಗೀರ್ ಕಾಶ್ಮೀರದಲ್ಲಿ ಹದಿಮೂರು ಬೇಸಿಗೆಗಳನ್ನು ಕಳೆದ. ಅದನ್ನು ತನ್ನ ಬೇಸಿಗೆಯ ರಾಜಧಾನಿಯನ್ನಾಗಿ ಮಾಡಿಕೊಂಡ ಅವನ್ನು ತನ್ನ ಪ್ರೀತಿಯ ಪತ್ನಿ ನೂರ್‌ಜಹಾನ್‌ಗಾಗಿ ಶಾಲಿಮಾರ್ ಉದ್ಯಾನವನ್ನು ನಿರ್ಮಿಸಿದ. ಅವನು ದಿಲ್ಲಿಯಿಂದ ಕಾಶ್ಮೀರಕ್ಕೆ ತನ್ನ ಜನಾನಾ ಜೊತೆಗೆ, ಆನೆಯ ಬೆನ್ನಿನ ಮೇಲೆ ಕುಳಿತು ಪೀರ್‌ಪಂಜಾಲ್ ಪರ್ವತ ಶ್ರೇಣಿಯನ್ನು ದಾಟಿ, ಕಾಶ್ಮೀರದಲ್ಲಿನ ತನ್ನ ಮನೆಯಾದ ಶಾಲಿಮಾರ್ ಗಾರ್ಡನ್ ತಲುಪಿ ಅಲ್ಲಿಂದ ತನ್ನ ಭಾರತೀಯ ಸಾಮ್ರಾಜ್ಯವನ್ನು ಆಳುತ್ತಿದ್ದ. ಆತ ಶಾಲಿಮಾರ್ ಗಾರ್ಡನ್‌ನಲ್ಲಿ ಈ ಕೆಳಗಿನ ಪದ್ಯಗಳನ್ನು ಕೆತ್ತಿಸಿದ್ದ. ಅಗರ್ ಫಿರ್ದೋಸ್ ಬಾರ್ ರೋ ಜಮೀನ್ ಆಸ್ತಮಿನ್ ಅಸ್ತಮಿನ್ ಅಸ್ತಮಿನಾಸ್ತ್ ಅರ್ಥಾತ್, ಭೂಮಿಯ ಮೇಲೆ ಸ್ವರ್ಗವಿದ್ದರೆ ಅದು ಇಲ್ಲೇ ಇದೆ ಇಲ್ಲೇ ಇದೆ ಇಲ್ಲೇ ಇದೆ. ಅವನು ಮರಣಾಸನ್ನನಾಗಿದ್ದಾಗ ಅವನ ಕೊನೆಯ ಆಸೆಯನ್ನು ಕೇಳಿದಾಗ ಕಾಶ್ಮೀರ ಉಳಿದದ್ದೆಲ್ಲವೂ ನಿಷ್ಪ್ರಯೋಜಕ ಎಂದಿದ್ದ. ಜಹಾಂಗೀರ್‌ನಂತೆಯೇ ಐದು ಸಾವಿರ ವರ್ಷಗಳ ಕಾಲ ಅಲ್ಲಿ ಬಾಳಿದ್ದ ಮತ್ತು ಅಲ್ಲಿಂದ ಹೊರಹಾಕಲ್ಪಟ್ಟ ಕಾಶ್ಮೀರಿ ಪಂಡಿತರ ಕೊನೆಯ ಆಸೆಯೂ ಅದೇ. ಕಾಶ್ಮೀರದಲ್ಲಿ ಬದುಕುವ ಮತ್ತು ಸಾಯುವ ಹಂಬಲ. ಅವರು ತಮ್ಮ ಸ್ವರ್ಗವನ್ನು ಮರಳಿ ಪಡೆಯಬಹುದೇ, ಭೂಮಿಯ ಮೇಲಿನ ಸ್ವರ್ಗವಾದ ಕಾಶ್ಮೀರವು ಪಂಡಿತರಿಗೆ ಮಾತ್ರವಲ್ಲ. ಮಾನವಕುಲಕ್ಕೆ ದೇವರ ಕೊಡುಗೆ. ಆದರೆ ಇಡೀ ಮನುಕುಲದ ಸ್ವರ್ಗವನ್ನು ನಾವು ಕಳೆದುಕೊಂಡಿದ್ದೇವೆ.

ನಾನು ಸಣ್ಣವಳಾಗಿದ್ದಾಗ, ನನ್ನ ಅಜ್ಜಿ ತಾರಾ, ಕಾಶ್ಮೀರದ "ಸತಿಸರದ" ಕತೆಯನ್ನು ಹೇಳಿದ್ದಳು ಅವಳ ಪ್ರಕಾರ ಇದು ಮಹಾಶಿವ ಹಾಗೂ ಆತನ ಮಡದಿ ಪಾರ್ವತಿಯ ನೆಲೆಯಾಗಿತ್ತು. ಸತಿಸರ ಎಂಬುದೊಂದು ಸರೋವರ ಸತಿ (ಪಾರ್ವತಿ)ಯ ತಂದೆ ದಕ್ಷ ತನ್ನ ಅಳಿಯ ಶಿವನನ್ನು ಅವಮಾನಿಸಲು ಒಂದು ಯಾಗವನ್ನು ಮಾಡುತ್ತಾನೆ. ಅವಮಾನಿತಳಾದ ಸತಿ ಆ ಯಜ್ಞದ ಬೆಂಕಿಗೆ ಹಾರಿ ತನ್ನನ್ನೇ ತ್ಯಾಗ ಮಾಡಿಕೊಳ್ಳುತ್ತಾಳೆ. ಕ್ರೋಧಗೊಂಡ ಶಿವ ದಕ್ಷನನ್ನು ವೀರಭದ್ರನಿಂದ ಕೊಲ್ಲಿಸಿ, ಸಿಟ್ಟು ತೀರದೆ ಸತಿಯ ದೇಹವನ್ನು ಹೊತ್ತುಕೊಂಡು ತಾಂಡವನಾಟ್ಯವನ್ನು ಆಡುತ್ತಾನೆ. ಆಗ ಆಕೆಯ ದೇಹದ ಕೆಲವು ಭಾಗಗಳು ಇಲ್ಲಿ ಬಿದ್ದು, ಸತಿಸರ ಸರೋವರ ಸೃಷ್ಟಿಯಾಗುತ್ತದೆ. ಸತಿಯ ದೇಹದ ಭಾಗಗಳು ಬಿದ್ದ ಜಾಗದಲ್ಲಿ ಶಕ್ತಿಪೀಠಗಳೆನಿಸುತ್ತವೆ. ಮುಂದೆ ಬ್ರಹ್ಮನ ಮಗ ಕಶ್ಯಪ ಋಷಿ ಇಲ್ಲಿಗೆ ಆಗಮಿಸಿ ಇಡೀ ಸರೋವರವನ್ನು ಬತ್ತಿಸಿ, ಸುಂದರ ಕಣಿವೆಯನ್ನಾಗಿ ಮಾರ್ಪಡಿಸುತ್ತಾನೆ. ನಂತರ ಇಲ್ಲಿಗೆ ಜನರನ್ನು ಕರೆತಂದು ಇಲ್ಲಿ ನೆಲೆಗೊಳಿಸುತ್ತಾನೆ. ಅವನೇಕೆ ಸರೋವರವನ್ನು ಬತ್ತಿಸಿದ ಯಾಕೆಂದರೆ ಜಲೋದ್ಭವ ಎಂಬ ರಾಕ್ಷಸನೊಬ್ಬ ಅದರಲ್ಲಿ ವಾಸಿಸಿರುತ್ತಾನೆ. ನೀರಿನಿಂದ ಹೊರಬಂದ ಜನರನ್ನು ತಿಂದು ಮತ್ತೆ ನೀರಿನಲ್ಲಿ ಅಡಗುತ್ತಾನೆ. ಅವನು ನೀರಿನೊಳಗೆ ಇದ್ದಷ್ಟು ಕಾಲ ಯಾರೂ ಅವನನ್ನು ಕೊಲ್ಲಲು ಸಾಧ್ಯವಿಲ್ಲ. ಹೀಗಾಗಿ ನೀರನ್ನು ಕಶ್ಯಪ ಬತ್ತಿಸುತ್ತಾನೆ. ನಂತರ ವಿಷ್ಣು ಹಾಗೂ ಬ್ರಹ್ಮರು ಸೇರಿ ಜಲೋದ್ಭವನ ಜೊತೆಗೆ ಹೋರಾಡಿ, ಕೊನೆಗೆ ದೇವಿಯೇ ಆತನನ್ನು ಕೊಲ್ಲುತ್ತಾಳೆ. ನೀರನ್ನು ಬತ್ತಿಸಿದ ನಂತರ ಹೊರಬಂದ ಬೆಟ್ಟಗಳ, ದೋಣಿ ಕಟ್ಟು ಜಾಗಗಳ ಗುರುತುಗಳು ಇಂದೂ ಕಣಿವೆಯಲ್ಲಿ ಕಾಣಿಸುತ್ತವೆ ಎನ್ನುತ್ತಾರೆ. ಕಶ್ಯಪ ಕರೆತಂದು ಇಲ್ಲಿ ನೆಲೆಗೊಳಿಸಿದ ಜ್ಞಾನಿಗಳೇ ಕಾಶ್ಮೀರಿ ಪಂಡಿತರಾದರಂತೆ.

ನನ್ನ ಬಾಲ್ಯದಲ್ಲಿ 65 ವರ್ಷಗಳ ಹಿಂದೆ ಇಲ್ಲಿ ಹಾದುಹೋಗುವ ಅಲೆಮಾರಿ ಬುಡಕಟ್ಟುಗಳನ್ನು ನೋಡುತ್ತಿದ್ದೆ. ಅವರು ತಜಿಕಿಸ್ತಾನ್ ಮುಂತಾದ ಮಧ್ಯ ಏಷ್ಯಾ ದೇಶಗಳ ಅಲೆಮಾರಿಗಳಾಗಿದ್ದರು. ತಮ್ಮ ದೇಶದ ಭೀಕರ ಹವಾಮಾನದಿಂದ ತಪ್ಪಿಸಿಕೊಳ್ಳಲು ಕಾಶ್ಮೀರಕ್ಕೆ ಬರುತ್ತಿದ್ದರು. ರಸ್ತೆಯ ಬದಿಗಳಲ್ಲಿ ಬಿಡಾರ ಹೂಡುತ್ತಿದ್ದ ಇವರನ್ನು ಬನಿಹಾಲ್ ಪಾಸ್‌ನಲ್ಲಿ ದಾಟಿಕೊಂಡು ನಾವು ಹೋಗುತ್ತಿದ್ದೆವು. ಕುದುರೆ ಮೇಲೇರಿಕೊಂಡು ಬರುತ್ತಿದ್ದ ಅವರ ಚಂದದ ಕರೆಯುವ ಪದವೇ "ತಜಕ್‌ತೀರ್" ಎಂದಿತ್ತು. ಅಂದರೆ ತಜಕಿಸ್ತಾನ್ ಬಾಣಗಳು ಎಂದು ತಮ್ಮ ಕೌದಿ, ಕುರಿಯ ದುಪ್ಪಟಗಳನ್ನು ಆಹಾರಪದಾರ್ಥ ಹಾಗೂ ಬಟ್ಟೆಗಳಿಗೆ ವಿನಿಮಯ ಮಾಡಿಕೊಂಡು ಅವರು ಹಿಂದಿರುಗುತ್ತಿದ್ದರು. ಹೀಗೆ ಅವರು ಸಾವಿರಾರು ವರ್ಷಗಳಿಂದ ಬಂದುಹೋಗುತ್ತಿದ್ದರಬೇಕು. ನಂತರದ ವರ್ಷಗಳಲ್ಲಿ ಅವರನ್ನು ನಾನು ನೋಡಲೇ ಇಲ್ಲ.

ಆಧುನಿಕ ಗಡಿ, ಪಾಸ್‌ಪೋರ್ಟ್ ವ್ಯವಸ್ಥೆ ಇವರ ಪ್ರಯಾಣಗಳನ್ನೆಲ್ಲ ಬಂದ್ ಮಾಡಿದೆ. ಕಾಶ್ಮೀರವನ್ನು ಮಧ್ಯ ಏಷ್ಯಾದ ಜೊತೆಗೆ ಸಂಪರ್ಕಿಸುತ್ತಿದ್ದ ಎಲ್ಲ ಮಾರ್ಗಗಳು ಇಂದು ಮುಚ್ಚಿವೆ.

ಪುರಾತನ ಕಾಲದಿಂದಲೂ ಕಾಶ್ಮೀರದ ಇತಿಹಾಸ ಇಲ್ಲಿನ ವಿದ್ವಾಂಸರ ಕಾವ್ಯಗಳಲ್ಲಿ ಅಡಕವಾಗಿದೆ. 5000 ವರ್ಷಗಳಿಗೆ ಹಿಂದಿನ ಇತಿಹಾಸ ದಾಖಲಾಗಿರುವ ತಾಣ ಜಗತ್ತಿನಲ್ಲಿ ಇದೊಂದೇ ಆಗಿರಬಹುದು. ಅದೆಲ್ಲಾ ನಂಬಲರ್ಹ ಕೃತಿಗಳಲ್ಲಿ ದಾಖಲಾಗಿ ಇವೆ. 1910ರಲ್ಲಿ ಮುನ್ಷಿ ಮುಹಮ್ಮದ್ ದಿನ್ ಫೌಕ್ ಅವರು ಇವನ್ನೆಲ್ಲ ಒಂದು ಕಡೆ ಒಟ್ಟುಗೂಡಿಸಿ ಮಹದುಪಕಾರ ಮಾಡಿದರು. ಕಾಶ್ಮೀರದ ಅತ್ಯಂತ ಪುರಾತನ ಇತಿಹಾಸ ನೀಲಮತ ಪುರಾಣದಲ್ಲಿದೆ. ಇದು ಕ್ರಿಸ್ತಶಕ 6ನೇ ಶತಮಾನಕ್ಕೆ ಸೇರಿದ್ದು ಎನ್ನಲಾಗಿದೆ. ಕ್ರಿಸ್ತಶಕ 1148–49ರಲ್ಲಿ ಕಾಶ್ಮೀರಿ ಇತಿಹಾಸಕಾರ ಕಲ್ಹಣ ರಚಿಸಿದ "ರಾಜತರಂಗಿಣಿ" ಚಾರಿತ್ರಿಕವಾಗಿ ಭವ್ಯ ಕೃತಿ. ಇವನು ನೀಲಮತ ಪುರಾಣವನ್ನು ನೀತಿಸಂಹಿತೆ ಎನ್ನುತ್ತಾನೆ. ಇದನ್ನು ಬರೆದವನು ನಾಗಗಳ ದೊರೆ ನೀಲ. ಇಲ್ಲಿ ಬಂದು ನೆಲೆಸಿದವರು ಇಲ್ಲಿನ ಮೂಲನಿವಾಸಿಗಳಾದ ನಾಗರು, ಪಿಶಾಚರು ರಾಕ್ಷಸರ ಹಕ್ಕುಗಳನ್ನು ಗೌರವಿಸಿ ಅವರೊಂದಿಗೆ ಬದುಕುವಂತೆ ಶಾಸನ ಮಾಡುತ್ತಾನೆ ಈತ. ಕಾಶ್ಮೀರದ ಪುರಾಣಗಳು ಇಲ್ಲಿನ ಜನರನ್ನು ಗೌರವಿಸಬೇಕಾದ ತಾಣಗಳು ಹಾಗೂ ಆಚರಣೆಗಳು ಈ ಕೃತಿಯಲ್ಲಿವೆ. ರಾಜತರಂಗಿಣಿಯನ್ನು ಇಂಗ್ಲಿಷ್‌ಗೆ ಅನುವಾದಿಸಿದ ಸರ್ ಮಾರ್ಕ್ ಆರೆಲ್ ಸ್ಟೀನ್ ಕೂಡ ನೀಲಮತ ಪುರಾಣದ ವಿಸ್ತೃತ ವಿವರ ನೀಡುತ್ತಾರೆ.

ಕಾಶ್ಮೀರವನ್ನು ಕ್ರಿಸ್ತಶಕ 1422–72ರ ನಡುವೆ ಆಳಿದ ದೊರೆ ಜೈನುಲ್ ಅಬಿದಿನ್, ಜೋನರಾಜ ಹಾಗೂ ಶ್ರೀವರ ಎಂಬ ಇಬ್ಬರು ಕಾಶ್ಮೀರಿ ಪಂಡಿತರನ್ನು ಗೌರವಿಸುತ್ತಾನೆ. ಅವರು ಜೈನ್ ರಾಜಾವಳಿ ಹಾಗೂ ಜೈನ್ ರಾಜತರಂಗಿಣಿ ಎಂಬ ಕೃತಿಗಳನ್ನು ಸಂಸ್ಕೃತದಲ್ಲಿ ಬರೆಯುತ್ತಾರೆ. ನಂತರ ಪ್ರಜ್ಞಾಭಟ್ಟನೆಂಬವನು ರಾಜಾವಳಿ ಪಾಠಕವನ್ನು ಬರೆದ. ಇಲ್ಲಿ ಸಂಸ್ಕೃತದಲ್ಲಿ ಬರೆದ ಕೊನೆಯ ಇತಿಹಾಸಕಾರ ಶುಕಪಂಡಿತ ಜೈನುಲ್ ಅಬಿದಿನದನ ನಂತರ, ಸಂಸ್ಕೃತ ವಿದ್ವಾಂಸರಿಗೆ ದೊರೆಯುತ್ತಿದ್ದ ಗೌರವ ನಿಂತು ಹೋಯಿತು. ಇಲ್ಲಿನ ಶೈವ ಸಂಸ್ಕೃತ ಮತ್ತು ಬೌದ್ಧ ಪಂಡಿತರ ಕೊಡುಗೆಗಳು ಮುಂದೆ ದೇಶದಾಚೆಗೂ ವೈದಿಕ–ಧರ್ಮಗಳ ವಿಸ್ತರಣೆಗೆ ಮಹಾನ್ ಕೊಡುಗೆಗಳಾಗಿ ಪರಿಣಮಿಸಿದವು. ಕೆನಡಾದ ಖ್ಯಾತ ಅಧ್ಯಯನಕಾರ ನೇಹಾ ಮುನ್ಷಿ ಪ್ರಕಾರ ಇದು ಹಿಂದೂ ಮತ್ತು ಬೌದ್ಧ ಕಲಿಕೆಯ ತಾಣವಾಗಿತ್ತು. ಎರಡೂ ತತ್ವಜ್ಞಾನಗಳ ಬೆಳವಣಿಗೆಗೆ ಕಾಶ್ಮೀರದ ಪಂಡಿತರು ಗಣನೀಯ ಕೊಡುಗೆ ಕೊಟ್ಟಿದ್ದಾರೆ. ಅಶೋಕ ಚಕ್ರವರ್ತಿಯ ಕಾಲದಲ್ಲಿ ಕಾಶ್ಮೀರಕ್ಕೆ ಬೌದ್ಧಮತ ಕಾಲಿಟ್ಟಿತು. ಕುಶಾನರ ಕಾಲದಲ್ಲಿ ಬೆಳೆಯಿತು. ಚೀನಾದ ಯಾತ್ರಿಕರಾದ ಫಾಹಿಯಾನ್ ಮತ್ತು ಹ್ಯುಯೆನ್ ತ್ಸಾಂಗರು ಕ್ರಮವಾಗಿ ನಾಲ್ಕು ಮತ್ತು ಏಳನೇ ಶತಮಾನದಲ್ಲಿ ಬೌದ್ಧ ಧರ್ಮವನ್ನು ಅಧ್ಯಯನ ಮಾಡಲು ಕಾಶ್ಮೀರಕ್ಕೆ ಬಂದು ಹೋದರು.

ಲೇಖಕರು:ಡಾ:ಸಿ.ಕೆ. ಗಿರಿಯಾಲಿ

ಆಧಾರ: ವಿಜಯ ಕರ್ನಾಟಕ, ದಿನಾಂಕ:27.03.2022.

13. ಹಿಂದುಗಳೇ ಅಲ್ಪಸಂಖ್ಯಾತರು

ಭಾರತದ ಹತ್ತು ರಾಜ್ಯಗಳಲ್ಲಿ ಹಿಂದುಗಳು ಕೂಡ ಅಲ್ಪ ಸಂಖ್ಯಾತರು ಎಂದು ಕೇಂದ್ರ ಸರ್ಕಾರ ಸುಪ್ರಿಂಕೋರ್ಟ್‌ನಲ್ಲಿ ಒಪ್ಪಿಕೊಂಡಿದ್ದೆ. ಎಲ್ಲೆಲ್ಲಿ ಯಾರು ಬಹು ಸಂಖ್ಯಾತರು, ಇದನ್ನು ಯಾರು ಘೋಷಿಸಬಹುದು ಎಂಬ ವಿವರ ಇಲ್ಲಿದೆ.

ಕೇಂದ್ರ ಏನೆಂದಿತು:– ಭಾರತದ ೧೦ ರಾಜ್ಯಗಳಲ್ಲಿ ಹಿಂದೂಗಳು ಕೂಡ ಅಲ್ಪಸಂಖ್ಯಾತರು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಒಪ್ಪಿಕೊಂಡಿದೆ. ಎಲ್ಲೆಲ್ಲಿ ಯಾರು ಅಲ್ಪ ಸಮಖ್ತಾತರರಾಜ್ಯ, ಇದನ್ನು ಯಾರು ಘೋಷಿಸಬಹುದು? ಇಲ್ಲಿದೆ.

ಸರ್ಕಾರಗಳು ಕೂಡ ತಮ್ಮಲ್ಲಿ ಇರುವ ಅಲ್ಪಸಂಖ್ಯಾತರ ಜನಸಂಖ್ಯೆಯನ್ನು ಗುರುತಿಸಿ ಅವರಿಗೆ ಅಲ್ಪಸಂಖ್ಯಾತರ ಸಮುದಾಯದ ಸ್ಥಾನಮಾನವನ್ನು ನೀಡಬಹುದು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ನೀಡಿರುವ ಅಫಿಡವಿಟ್‌ನಲ್ಲಿ ತಿಳಿಸಿದೆ. ಒಂದು ರಾಜ್ಯದಲ್ಲಿ ಯಾವುದೇ ಸಮುದಾಯ ಧರ್ಮ ಅಥವಾ ಭಾಷೆಯ ಆಧಾರದ ಮೇಲೆ ಅಲ್ಪಸಂಖ್ಯಾತರಾಗಿದ್ದರೆ, ಅದಕ್ಕೆ ಅಲ್ಪಸಂಖ್ಯಾತರ ಸ್ಥಾನಮಾನ ನೀಡಬಹುದು ಎಂದಿದೆ. ಆದರೆ, ಯಾವುದೇ ಸಮುದಾಯಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ರಾಜ್ಯ ಸರ್ಕಾರಗಳಿಗೆ ಮಾತ್ರವೇ ಅಧಿಕಾರ ನೀಡಬಾರದು. ಹಾಗೆ ಮಾಡುವುದರಿಂದ ಸುಪ್ರಿಂ ಕೋರ್ಟ್‌ನ ಅನೇಕ ನಿರ್ಧಾರಗಳ ಮೇಲೆ ಪರಿಣಾಮ ಬೀರುತ್ತದೆ. ಜೊತೆಗೆ ಇದು ಸಾಂವಿಧಾನಿಕ ನಿಬಂಧನೆಗಳನ್ನೂ ಉಲ್ಲಂಘಿಸುತ್ತದೆ. ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗದ ಕಾಯಿದೆ–1992ರನ್ನು ಸಂವಿಧಾನದ 246ನೇ ವಿಧಿಯ ಅಡಿಯಲ್ಲಿ ಸಂಸತ್ತು ಜಾರಿಗೊಳಿಸಿದೆ. ಅಲ್ಪಸಂಖ್ಯಾತರ ವಿಷಯಗಳ ಬಗ್ಗೆ ಕಾನೂನು ಮಾಡುವ ಹಕ್ಕು ರಾಜ್ಯಗಳಿಗೆ ಮಾತ್ರ ಇದೆ ಎಂದು ಒಪ್ಪಿಕೊಂಡರೆ, ಆಗ ಸಂಸತ್ತು ಸಂವಿಧಾನಕ್ಕೆ ವಿರುದ್ಧವಾಗಿ ಆ ಬಗ್ಗೆ ಕಾನೂನು ಮಾಡಿದಂತಾಗುತ್ತದೆ ಎಂದಿದೆ.

ಯಾಕೆ ಈ ಅಫಿಡವಿಟ್: ಈ ಅಫಿಡವಿಟ್‌ಗೆ ಮೂಲ, ಬಿಜೆಪಿ ನಾಯಕ ಅಶ್ವಿನಿ ಉಪಾಧ್ಯಾಯ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಒಂದು ಅರ್ಜಿ. ಅದರಲ್ಲಿ ಅವರು, ದೇಶದ 10 ರಾಜ್ಯಗಳಲ್ಲಿ ಹಿಂದೂಗಳು ಅಲ್ಪಸಂಖ್ಯಾತರಾಗಿದ್ದಾರೆ, ಆದರೆ ಹಿಂದೂಗಳ ಬದಲಿಗೆ ಸ್ಥಳೀಯ ಬಹುಸಂಖ್ಯಾತ ಸಮುದಾಯಗಳಿಗೆ ಅಲ್ಪಸಂಖ್ಯಾತ ಸ್ನೇಹಿ ಯೋಜನೆಗಳ ಲಾಭವನ್ನು ನೀಡಲಾಗುತ್ತಿದೆ ಎಂದು ಆಕ್ಷೇಪಿಸಿದ್ದರು.

ಅರ್ಜಿದಾರರು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ರಾಷ್ಟ್ರೀಯ ಆಯೋಗದ ಕಾಯ್ದೆ 2004ರ ಸೆಕ್ಷನ್ 2(ಎಫ್)ನ ಸಿಂಧುತ್ವವನ್ನು ಪ್ರಶ್ನಿಸಿದ್ದು, ಇದು ಕೇಂದ್ರಕ್ಕೆ ಅಪಾರ, ಅನಿಯಂತ್ರಿತ, ತರ್ಕರಹಿತ ಮತ್ತು ಹಾನಿಕಾರಕ ಅಧಿಕಾರವನ್ನು ನೀಡುತ್ತದೆ ಎಂದು ವಾದಿಸಿದ್ದಾರೆ. ಆದರೆ ಪ್ರಸ್ತುತ ಈ ಸ್ಥಳಗಳಲ್ಲಿ ಆಯಾ ಬಹುಸಂಖ್ಯಾತ ಸಮುದಾಯಗಳು ಅನುಭವಿಸುತ್ತಿರುವ ಅಲ್ಪಸಂಖ್ಯಾತ ಪ್ರಯೋಜನೆಗಳನ್ನು ನಿರಾಕರಿಸಲಾಗಿದೆ. ಲಡಾಖ್, ಮಿಜೋರಾಂ, ಲಕ್ಷದ್ವೀಪ, ಕಾಶ್ಮೀರ, ನಾಗಲ್ಯಾಂಡ್, ಮೇಘಾಲಯ, ಅರುಣಾಚಲ ಪ್ರದೇಶ, ಪಂಜಾಬ್ ಮತ್ತು ಮಣಿಪುರದಲ್ಲಿ ನೆಲೆಸಿರುವ ಹಿಂದೂ, ಯಹೂದಿ, ಬಹಾಯಿ ಧರ್ಮದ ಅನುಯಾಯಿಗಳೂ ಅಲ್ಪಸಂಖ್ಯಾತರಾಗಿದ್ದಾರೆ. ಆದರೆ ಅಲ್ಪಸಂಖ್ಯಾತರಿಗಾಗಿ ಮಾಡಿದ ಯೋಜನೆಗಳ ಲಾಭ ಪಡೆಯಲು ಅವರಿಗೆ ಸಾಧ್ಯವಾಗುತ್ತಿಲ್ಲ. ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಹಕ್ಕಿನ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ.

ಸಂವಿಧಾನ ಏನೆನ್ನುತ್ತದೆ? :ಸಂವಿಧಾನ ಕೂಡ 'ಅಲ್ಪಸಂಖ್ಯಾತರೆಂದರೆ ಯಾರು' ಎಂದು ವ್ಯಾಖ್ಯಾನಿಸಿಲ್ಲ. ಸಂವಿಧಾನದ 29ನೇ ವಿಧಿಯ "ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆಯ ಬಗ್ಗೆ ಉಲ್ಲೇಖಿಸುತ್ತದೆ. ಭಾರತದ ಭೂಪ್ರದೇಶದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ವಾಸಿಸುವ

ನಾಗರೀಕರ ಯಾವುದೇ ವಿಭಾಗವು ತನ್ನದೇ ಆದ ವಿಶಿಷ್ಟ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿರುವ, ಅದನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತದೆ. ಯಾವುದೇ ನಾಗರಿಕನಿಗೆ ಸರ್ಕಾರ ನಿರ್ವಹಿಸುವ ಅಥವಾ ಸರ್ಕಾರದಿಂದ ಧನಸಹಾಯ ಪಡೆಯುವ ಯಾವುದೇ ಶಿಕ್ಷಣ ಸಂಸ್ಥೆ ಕೇವಲ ಧರ್ಮ, ಜನಾಂಗ, ಜಾತಿ, ಭಾಷೆ ಅಥವಾ ಅವುಗಳಲ್ಲಿ ಯಾವುದಾದರೊಂದು ಆಧಾರದ ಮೇಲೆ ಪ್ರವೇಶವನ್ನು ನಿರಾಕರಿಸುವಂತಿಲ್ಲ. ಸಂವಿಧಾನದ 30ನೇ ವಿಧಿಯ ಪ್ರಕಾರ ಧರ್ಮ ಅಥವಾ ಭಾಷೆಯ ಆಧಾರದ ಮೇಲೆ ಎಲ್ಲಾ ಅಲ್ಪಸಂಖ್ಯಾತರು ತಮ್ಮ ಆಯ್ಕೆಯ ಶಿಕ್ಷಣ ಸಂಸ್ಥೆಗಳಿಗೆ ಸಹಾಯವನ್ನು ನೀಡುವಲ್ಲಿ ಯಾವುದೇ ಶಿಕ್ಷಣ ಸಂಸ್ಥೆಯನ್ನು ಅಲ್ಪಸಂಖ್ಯಾತರ ನಿರ್ವಹಣೆಗೆ ಒಳಪಟ್ಟಿದೆ ಎಂಬ ಆಧಾರದ ಮೇಲೆ ತಾರತಮ್ಯ ಮಾಡಬಾರದು. ಸಂವಿಧಾನದ ಪರಿಚ್ಛೇದ 350(ಎ) ಹೇಳುವಂತೆ ಭಾಷಾ ಅಲ್ಪಸಂಖ್ಯಾತರಿಗೆ ರಾಷ್ಟ್ರಪತಿಗಳು ವಿಶೇಷ ಅಧಿಕಾರಿಯ ನೇಮಕ ಮಾಡಬೇಕು.

ಅಲ್ಪ ಸಂಖ್ಯಾತರು ಯಾರು: ಭಾರತೀಯ ಕಾನೂನಿನಲ್ಲಿ ಅಲ್ಪಸಂಖ್ಯಾತರು ಯಾರು ಎಂದು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿಲ್ಲ. ಪ್ರಸ್ತುತ, ಕೇಂದ್ರ ಸರ್ಕಾರವು ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಕಾಯಿದೆ 1992ರ ಸೆಕ್ಷನ್ 2(ಸಿ) ಅಡಿಯಲ್ಲಿ ಅಧಿಸೂಚಿಸಲಾಗದ ಸಮುದಾಯಗಳನ್ನು ಮಾತ್ರ ಅಲ್ಪಸಂಖ್ಯಾತರೆಂದು ಪರಿಗಣಿಸಲಾಗಿದೆ. ಕೇಂದ್ರವು ಅಕ್ಟೋಬರ್ 23, 1993 ರಂದು ಐದು ಸಮುದಾಯಗಳನ್ನು–ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು, ಬೌದ್ಧರು ಮತ್ತು ಪಾರ್ಸಿಗಳು–'ಅಲ್ಪಸಂಖ್ಯಾತ' ಸಮುದಾಯಗಳೆಂದು ಸೂಚಿಸಿತು. ಜನವರಿ 2014ರಲ್ಲಿ ಜೈನರನ್ನು ಈ ಪಟ್ಟಿಗೆ ಸೇರಿಸಲಾಯಿತು.

ಕೇಂದ್ರವೋ ರಾಜ್ಯವೋ? ಕೇಂದ್ರ ಸರ್ಕಾರ ಸಲ್ಲಿಸಿದ ಅಫಿಡವಿಟ್ ಪ್ರಕಾರ, ರಾಜ್ಯಗಳೂ ತಮ್ಮಲ್ಲಿ ಯಾರು ಅಲ್ಪಸಂಖ್ಯಾತರು ಎಂದು ಘೋಷಿಸುವುದಕ್ಕೆ ಸ್ವತಂತ್ರರು. ಆದರೆ ಕೇಂದ್ರ ಸರ್ಕಾರ ಕೂಡ ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳಬಹುದು, ಕಾಯಿದೆ ರಚಿಸಬಹುದು. ಯಾಕೆಂದರೆ, ಈ ವಿಚಾರ ಸಂವಿಧಾನದ ಸಮರ್ತಿ ಪಟ್ಟಿಯಲ್ಲಿದೆ. ಹೀಗಾಗಿ ಕೇಂದ್ರ–ರಾಜ್ಯಗಳೆರಡೂ ಈ ವಿಚಾರದಲ್ಲಿ ಕಾಯಿದೆ ಮಾಡಬಹುದು. ಮಹಾರಾಷ್ಟ್ರ ಸರ್ಕಾರವು ರಾಜ್ಯದೊಳಗೆ ಯಹೂದಿಗಳು ಅಲ್ಪಸಂಖ್ಯಾತ ಸಮುದಾಯ ಎಂದು ಸೂಚಿಸಿದೆ. ಕರ್ನಾಟಕ ಸರ್ಕಾರ ಉರ್ದು, ತೆಲುಗು, ತಮಿಳು, ಮಲಯಾಳಂ, ಮರಾಠಿ, ತುಳು, ಲಂಬಾಣಿ, ಹಿಂದಿ, ಕೊಂಕಣಿ ಮತ್ತು ಗುಜರಾತಿ ಭಾಷೆಗಳನ್ನು ಅಲ್ಪ ಸಂಖ್ಯಾತ ಭಾಷೆಗಳಾಗಿ ಗುರುತಿಸಿದೆ ಎಂದು ಕೇಂದ್ರ ಹೇಳಿದೆ. ದೇಶವ್ಯಾಪಿ ಬಹುಸಂಖ್ಯಾತರಾಗಿರುವ ಹಿಂದೂಗಳು ಹತ್ತು ರಾಜ್ಯಗಳಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ; ಪಂಜಾಬ್‌ನಲ್ಲಿ ಬಹುಸಂಖ್ಯಾತರಾದ ಸಿಖ್ಖರು ಇತರ ಎಲ್ಲ ರಾಜ್ಯಗಳಲ್ಲೂ ಅಲ್ಪಸಂಖ್ಯಾತರು. ಹೀಗಾಗಿ ಒಂದೇ ನಿಯಮಾವಳಿ ಎಲ್ಲ ಕಡೆಯೂ ಅನ್ವಯವಾಗಬೇಕು ಅನ್ನುವುದು ಅಸಮಂಜಸ. ಆದರೆ ರಾಜ್ಯ ಮಾತ್ರವೇ ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು ಎನ್ನುವುದನ್ನು ಕೇಂದ್ರ ಒಪ್ಪಿಲ್ಲ.

ಕೋರ್ಟ್ ಕೈಯಲ್ಲಿ ನಿರ್ಣಯ

2002ರಲ್ಲಿ ನಡೆದ ಟಿಎಂಎ ಪೈ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡುವಾಗ, ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಹಕ್ಕುಗಳಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಸ್ಥಾನಮಾನವನ್ನು ರಾಜ್ಯವಾರು ಲೆಕ್ಕ ಹಾಕಬೇಕು ಎಂದು ಹೇಳಿತ್ತು. 2019ರಲ್ಲಿ ಅಶ್ವಿನಿ ಉಪಾಧ್ಯಾಯ 'ಅಲ್ಪಸಂಖ್ಯಾತ ಸ್ಥಾನಮಾನ ರಾಜ್ಯವಾರು ನಿರ್ಣಯವಾಗಬೇಕು' ಎಂದು ಅರ್ಜಿ ಸಲ್ಲಿಸಿದಾಗ, ಹಾಗೆ ಮಾಡಲಾಗುವುದಿಲ್ಲ ಎಂದು ಹೇಳಿತ್ತು. 2020ರಲ್ಲಿ ಮತ್ತೆ ಅರ್ಜಿ ಸಲ್ಲಿಸಿದ್ದ ಅಶ್ವಿನಿ ಉಪಾಧ್ಯಾಯ, ಟಿಎಂಎ ಪೈ ಪ್ರಕರಣದಂತೆಯೇ ಅಲ್ಪಸಂಖ್ಯಾತ ಸ್ಥಾನಮಾನ ನಿರ್ಣಯಿಸುವ ಅಧಿಕಾರವನ್ನು ರಾಜ್ಯಗಳಿಗೆ ಕೊಡಬೇಕು ಎಂದಿದ್ದರು. ಅಫಿಡವಿಟ್‌ನಲ್ಲಿ ಕೇಂದ್ರ ಸರ್ಕಾರ, "ಅರ್ಜಿದಾರರು ಕೋರಿದ ಪರಿಹಾರಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಹೊಂದಿಲ್ಲ," ಎಂದಿದೆ. ಚೆಂಡು ಈಗ ಕೋರ್ಟ್‌ನಲ್ಲಿದೆ.

ಎಲ್ಲಿ ಎಷ್ಟು? (2011ರ ಜನಗಣತಿಯ ಪ್ರಕಾರ ಶೇಕಡವಾರು)				
ರಾಜ್ಯ	ಹಿಂದೂ	ಮುಸ್ಲಿಂ	ಕ್ರೈಸ್ತ	ಇತರ
ಅ.ಪ್ರದೇಶ	29	2	30	39
ಮಣಿಪುರ	40	8	41	11
ಮೇಘಾಲಯ	11	4	75	10
ನಾಗಾಲ್ಯಾಂಡ್	9	2	88	1
ಪಂಜಾಬ್	38	2	1	59
ಜಮ್ಮುಕಾಶ್ಮೀರ	28	68	0.5	3.5
ಲಕ್ಷದ್ವೀಪ	3	96	0.5	0.5
ಲಡಾಕ್	12	46	0.5	41.5
ಮಿಜೋರಾಂ	3.5	1	87	8.5

ಆಧಾರ :ವಿಜಯ ಕರ್ನಾಟಕ.ದಿನಾಂಕ::29.03.2022

14.ಚುನಾವಣಾ ಸುಧಾರಣಾ ಚರ್ಚೆ: ಹೊಸ ಹೊಳಪು ಮೂಡಲಿ

ಚುನಾವಣೆಗಳಲ್ಲಿ ಭ್ರಷ್ಟಾಚಾರ ರಹಿತ, ಸಚ್ಚಾರಿತ್ರ್ಯ ಉಳ್ಳವರೇ ಆಯ್ಕೆಯಾಗಲಿ, ಪಕ್ಷಾಂತರ ನಿಲ್ಲಲಿ, ಚುನಾವಣೆ ಪ್ರಚಾರಕ್ಕಾಗಿ ಮಾಡಲಾಗುತ್ತಿರುವ ಖರ್ಚು ವೆಚ್ಚಗಳು ನಿಲ್ಲಲಿ, ಯಾವುದೇ ಕಾರಣಕ್ಕೂ ಚುನಾವಣೆಗಳಲ್ಲಿ ಮದ್ಯದ ಹಾವಳಿ ನುಸುಳದಂತಿರಲಿ, ಅಭ್ಯರ್ಥಿಗಳು ಪಾರದರ್ಶಕವಾಗಿರಲಿ, ಮತಕ್ಕಾಗಿ ನೋಟು ನೀಡುವ ಸಂಪ್ರದಾಯಗಳು ಕೊನೆಗೊಳ್ಳಲಿ ಎಂಬಿತ್ಯಾದಿ ವಿಚಾರಗಳು ಬಹು ಹಿಂದಿನಿಂದಲೂ ಕೇಳಿಬರುತ್ತಿದ್ದು, ಇಲ್ಲಿಯವರೆಗೆ ಇದಕ್ಕೊಂದು ತಾರ್ಕಿಕ ಅಂತ್ಯ ಸಿಕ್ಕಿಲ್ಲ.

ಈಗಲೂ ಚುನಾವಣೆಗಳಲ್ಲಿ ಹಣ ಮತ್ತು ಮದ್ಯದ ಬಲ ತುಸು ಹೆಚ್ಚಾಗಿಯೇ ಕಂಡು ಬರುತ್ತಿದ್ದು ಇದಕ್ಕೆ ಕಡಿವಾಣ ಹಾಕುವಲ್ಲಿ ನಾವೆಲ್ಲರು ಸೋತಿದ್ದೇವೆ ಎಂಬುದು ನಿಜಕ್ಕೂ ಬೇಸರದ ವಿಚಾರವೇ ಈಗ ಕರ್ನಾಟಕ ವಿಧಾನಮಂಡಲದಲ್ಲಿ ಚುನಾವಣೆ ಸುಧಾರಣೆಗಾಗಿ ವಿಶೇಷ ಚರ್ಚೆ ಆರಂಭವಾಗಿದ್ದು, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕೆಲವೊಂದು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ವಿಧಾನಸಭೆಯಲ್ಲಿ ಕಾಗೇರಿ ಅವರು ಪ್ರಸ್ತಾಪಿಸಿರುವ ಅಂಶಗಳು ಈಗಿನ ಕಾಲಘಟ್ಟಕ್ಕೆ ಉಚಿತವೇ ಆಗಿವೆ. ಈ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳು ಗಮನಹರಿಸಬೇಕು ಎಂಬುದು ಎಲ್ಲರ ಕಳಕಳಿ. ಇಂಥದ್ದೊಂದು ಗಂಭೀರ ಹಾಗೂ ಅಗತ್ಯ ವಿಚಾರದ ಬಗ್ಗೆ ಚರ್ಚೆಗೆ ನಾಂದಿ ಹಾಡಿರುವುದು ಸ್ವಾಗತಾರ್ಹ.

ಇತ್ತೀಚಿನ ದಿನಗಳಲ್ಲಿ ಚುನಾವಣೆಗಳೆಂದರೆ, ಅವು ದುಡ್ಡು ಮಾಡಿಕೊಳ್ಳುವ, ಹಂಚುವ ಮತ್ತು ಹಿಂಸಾಚಾರಕ್ಕೆ ಕಾರಣವಾಗುವ ಸಂಗತಿಗಳಾಗಿವೆ. ದೇಶದ ಕೆಲವು ರಾಜ್ಯಗಳಲ್ಲಿ ಹಿಂಸಾಚಾರವಿಲ್ಲದೆ ಚುನಾವಣೆ ನಡೆಯುವುದಿಲ್ಲ ಅನ್ನುವಷ್ಟರ ಮಟ್ಟಿಗೆ ಇವು ಹಾಸುಹೊಕ್ಕಾಗಿವೆ. ಚುನಾವಣೆಯಲ್ಲಿ ಒಂದು ಪಕ್ಷವನ್ನು ಬಿಟ್ಟು ಬೇರೊಂದು ಪಕ್ಷಕ್ಕೆ ಬೆಂಬಲ ನೀಡಿದರೆ, ಅವರನ್ನು ಕೊಲ್ಲುವುದು, ಅವರ ಮೇಲೆ ದಾಳಿ ಮಾಡುವಂತ ಘಟನೆಗಳು ನಡೆಯುತ್ತಲೇ ಇವೆ. ಹೀಗಾಗಿ, ಕೇಂದ್ರ ಚುನವಣಾ ಆಯೋಗಕ್ಕೆ ಶಾಂತ ರೀತಿಯಲ್ಲಿ ಚುನವಣೆಗಳನ್ನು ಮಾಡಿ ಮುಗಿಸುವುದೇ ದೊಡ್ಡ ತ್ರಾಸದಾಯಕ ಕೆಲಸವಾಗಿ ಬಿಟ್ಟಿದೆ. 50 ವರ್ಷಗಳ ಹಿಂದಿನ ವಾತಾವರಣಕ್ಕೂ ಈಗಿನ ವಾತಾವರಣಕ್ಕೂ ಅಜಗಜಾಂತರವಿದೆ. ಆಗ ದೇಶದಲ್ಲಿ

ಕಲಿಕೆ ಇಲ್ಲದವರೇ ಹೆಚ್ಚಾಗಿದ್ದರು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ದೇಶದಲ್ಲಿ ಅನಕ್ಷರಸ್ಥರಿಗಿಂತ ಅಕ್ಷರಸ್ಥರೇ ಹೆಚ್ಚಾಗಿದ್ದಾರೆ. ಯಾರಿಗೆ ಮತ ಹಾಕಬೇಕು, ಯಾರಿಗೆ ಹಾಕುವುದು ಬೇಡ ಎಂಬ ಜ್ಞಾನವೂ ಜನರಲ್ಲಿ ಹೆಚ್ಚಾಗಿದೆ. ಉತ್ತಮ ಆಡಳಿತ ಕೊಡುವವರಿಗೆ ಮತ ಹಾಕಬೇಕು ಎಂಬ ಅರಿವೂ ಹೆಚ್ಚಾಗಿದೆ. ಇಷ್ಟೆಲ್ಲಾ ಆದರೂ, ಇನ್ನೂ ಚುನಾವಣೆಗಳೆಂದರೆ, ಕಾಸು ಮಾಡಿಕೊಳ್ಳುವ ಅವಕಾಶಗಳು ಎಂಬ ಅಭಿಪ್ರಾಯ ಜನರಲ್ಲಿ ಇರುವುದು ದುರದೃಷ್ಟಕರ. ಇಂಥ ಸಂದರ್ಭದಲ್ಲಿ ಇಡೀ ಚುನಾವಣೆ ವ್ಯವಸ್ಥೆಗೆ ತಕ್ಕ ಮಾರ್ಪಾಡು ಮಾಡಬೇಕಾಗಿರುವುದು ಅನಿವಾರ್ಯವೇ ಆಗಿದೆ. ಚುನಾವಣೆಗಳು ಧನಾದೇಶಗಳಾಗದೇ, ಜನಾದೇಶಗಳಾಗಬೇಕು. ಅಭ್ಯರ್ಥಿಗಳು ಕೋಟಿ ಕೋಟಿಗಳ ಲೆಕ್ಕಾಚಾರದಲ್ಲಿ ಹಣ ವೆಚ್ಚ ಮಾಡದೇ ಚುನಾವಣೆ ಎದುರಿಸುವ ವಾತವರಣ ಸೃಷ್ಟಿಯಾಗಬೇಕು. ಚುನಾವಣಾ ವಿಧಾನ ಮತ್ತು ಅಭ್ಯರ್ಥಿಗಳ ಎಲ್ಲಾ ವಿವರಗಳು ಪಾರದರ್ಶಕವಾಗಿ ಜನರಿಗೆ ಸಿಗುವಂತಿರಬೇಕು. ಚುನವಣಾ ವೆಚ್ಚಮಿತಿ ವಿಚಾರದಲ್ಲಿ ಅಭ್ಯರ್ಥಿಗಳು ಬದಲಿ ಮಾರ್ಗ ಹಿಡಿಯದಂತೆ ನೋಡಿಕೊಳ್ಳುವ ದೃಢ ಕಾನೂನುಗಳು ಜಾರಿಗೆ ಬರಬೇಕು. ಈ ನಿಟ್ಟಿನಲ್ಲಿ ವಿಧಾನಸಭೆಯಲ್ಲಿ ನಡೆಯುತ್ತಿರುವ ಚರ್ಚೆ ಹೊಸ ಹೊಳಹುಗಳನ್ನು ನೀಡಿ, ಸುಧಾರಣಾ ಕ್ರಮದಲ್ಲಿ ಇಡೀ ದೇಶಕ್ಕೆ ಅನುಕೂಲವಾಗುವ ಮಾರ್ಗದರ್ಶನವನ್ನು ಸದನ ನೀಡಲಿ ಎನ್ನುವುದು ಎಲ್ಲರ ಆಶಯ.

ಆಧಾರ: ಉದಯವಾಣಿ, ದಿನಾಂಕ:30.03.2022.

* * * * *

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾಸೂ – 206 – 500 ಪ್ರತಿಗಳು (ಪಿ1)